ಭಾರತದ ವ್ಯಾವಹಾರಿಕ ಕಾನೂನುಗಳ ಪರಿಚಯ



ಶ್ರೀಮತಿ ಎನ್. ಶಶಿರೇಖಾ
ಹಾಗೂ
ಪ್ರೊ|| ವೆಂಕಟಕೃಷ್ಣಪ್ಪ

ಮೂಲಭೂತ
ಶೈಕ್ಷಣಿಕ
ಪುಸ್ತಕ ಮಾಲೆ

ಮೂಲ ಭೂತ ಶೈಕ್ಷಣಿಕ ಪುಸ್ತಕ ಮಾಲೆ

ಭಾರತದ ವ್ಯಾವಹಾರಿಕ ಕಾನೂನುಗಳ ಪರಿಚಯ

ಎನ್. ಶಶಿರೇಖಾ:

ಶ್ರೀಮತಿ ಎನ್. ಶಶಿರೇಖಾರವರು ಬೆಂಗಳೂರಿನಲ್ಲಿ ವಕೀಲ ವೃತ್ತಿಯಲ್ಲಿದ್ದಾರೆ. ಇವರು ತುಮಕೂರಿನ ಶ್ರೀ ಸಿದ್ಧಗಂಗಾ ಕಾಲೇಜಿನಲ್ಲಿ ಬಿ. ಎ. ಮುಗಿಸಿ, ಬೆಂಗಳೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ತುಮಕೂರಿನ ವಿದ್ಯೋದಯಾ ಕಾನೂನು ಕಾಲೇಜು ಮತ್ತು ಬೆಂಗಳೂರಿನ ಬಿ. ಎಂ. ಎಸ್. ಕಾಲೇಜಿನಿಂದ ಕಾನೂನು ಪದವಿ, ಕರಾರು ಕಾನೂನಿನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಕಾನೂನು ಪುಸ್ತಕವನ್ನು ಬರೆಯಬೇಕೆಂಬ ಹಂಬಲದ ಇವರ ಅನೇಕ ಲೇಖನಗಳು ಕನ್ನಡ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಬಿ. ವೆಂಕಟಕೃಷ್ಣಪ್ಪ:

ಪ್ರೊ. ಬಿ. ವೆಂಕಟಕೃಷ್ಣಪ್ಪನವರು ಬೆಂಗಳೂರಿನ ಬಿ. ಎಂ. ಎಸ್. ಕಾಲೇಜಿನಲ್ಲಿ ೧೯೬೩ ರಿಂದಲೂ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದಲ್ಲಿ ಡೀನ್ ಆಗಿಯೂ, ಬೆಂಗಳೂರು ವಿ. ವಿ. ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರೂ ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಇವರ ಲೇಖನಗಳು ನ್ಯಾಷನಲ್ ಲಾ ಸ್ಕೂಲ್‌ನ ಆನ್ಯುಯಲ್ ಸರ್ವೆ ಆಫ್ ಲಾ ಮತ್ತು ಆಲ್ ಇಂಡಿಯಾ ರಿಪೋರ್ಟರ್‌ನಲ್ಲಿ ಪ್ರಕಟಗೊಂಡಿವೆ. ಇವರು 'ಇಂಡಿಯನ್ ಲೀಗಲ್ ಮತ್ತು ಕಾನ್ಸಿಟ್ಯೂಷನಲ್ ಹಿಸ್ಟರಿ' ಎಂಬ ಪುಸ್ತಕವನ್ನು ಬರೆದಿದ್ದಾರೆ.

ಭಾರತದ ವ್ಯಾವಹಾರಿಕ ಕಾನೂನುಗಳ ಪರಿಚಯ

(ಸ್ವರೂಪ, ವ್ಯಾಪ್ತಿ, ಲಕ್ಷಣಗಳು)

ಲೇಖಕರು

ಎನ್. ಶಶಿರೇಖ

ಮತ್ತು

ಪ್ರೊ। ಬಿ. ವೆಂಕಟಕೃಷ್ಣಪ್ಪ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

BHARATHADA VYAVAHARIKA KANOONUGALA PARICHAYA, a Book on law by **Smt. N. Shashirekha** and **Prof. B. Venkatakrishnappa** published by Kannada Pusthaka Pradhikara (Kannada Book Authority) pampa mahakavi road, Chamarajapet, **Bangalore-560 018**

Pages : 254+VIII

Price : Rs. **46-00**

ಪ್ರಥಮ ಮುದ್ರಣ : 1998

ಅಕ್ಷರ ಜೋಡಣೆ ಮತ್ತು ಮುದ್ರಣ:
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, **ಗದಗ-೫೮೨ ೧೦೧.**
☎ : **25509, 27555 (O), 26578 (R)**

ಅಧ್ಯಕ್ಷರ ಮಾತು

"ಭಾರತೀಯ ಶಾಲಾ ಬಾಲಕನ ಬುದ್ಧಿ, ದೇಹ ಮನಸ್ಸುಗಳನ್ನು ಇಂಗ್ಲೀಷಿನ ಅಮಾನುಷ ಹೊರೆಯಿಂದ ರಕ್ಷಿಸಬೇಕಾಗಿದೆ" ಎಂದು ಡಾ । ರಾಮಮನೋಹರ ಲೋಹಿಯಾ ಅವರು ಹೇಳಿದ್ದಾರೆ. ಕರ್ನಾಟಕ ಸರ್ಕಾರ ಕನ್ನಡವನ್ನು ಆಡಳಿತ ಭಾಷೆ ಮಾಡಿರುವುದರ ಜೊತೆಗೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡ ಮಾಧ್ಯಮದಲ್ಲಿ ಬೋಧಿಸಬೇಕೆಂಬ ಧ್ಯೇಯವನ್ನು ಹೊಂದಿದೆ. ಕನ್ನಡ ನಾಡಿನ ವಿದ್ಯಾರ್ಥಿಗಳು ಅದರಲ್ಲೂ ಗ್ರಾಮೀಣ ಪ್ರದೇಶದಿಂದ ಬಂದವರು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡುವುದರಿಂದ ಜ್ಞಾನಾರ್ಜನೆಯ ಜೊತೆಗೆ ಚಿಂತನ ಶಕ್ತಿಯ ವಿಕಸನವೂ ಆಗುತ್ತದೆ. ಈಗಾಗಲೇ ಮಾನವಿಕ ಹಾಗೂ ವೈಜ್ಞಾನಿಕ ವಿಷಯಗಳಲ್ಲಿ ಅನೇಕ ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಕಲೆ ಹಾಗೂ ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆ ಮೂಲಭೂತ ಶಿಕ್ಷಣಕ್ಕೆ ಒತ್ತು ಕೊಡುವ ದೃಷ್ಟಿಯಿಂದ ಮೂಲಭೂತ ಶಿಕ್ಷಣ ಮಾಲೆಯನ್ನು ಪ್ರಾಧಿಕಾರ ಆರಂಭಿಸಿದೆ. ಕನ್ನಡದಲ್ಲಿ ದೊರೆಯುವ ಪಠ್ಯ ಪುಸ್ತಕಗಳಿಗೆ ಪೂರಕವಾಗಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಹೆಚ್ಚಿನ ಓದು ಸಾಮಗ್ರಿಗಳನ್ನು ಒದಗಿಸಲು ಈ ಮಾಲೆಯು ನೆರವಾಗುತ್ತದೆ. ಈ ಮಾಲೆಯ ಕೃತಿಗಳು ಪಠ್ಯ ಪುಸ್ತಕಗಳಲ್ಲದಿದ್ದರೂ ಆ ವಿಷಯಗಳ ಆಳ ಹರವುಗಳ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತದೆ; ಕನ್ನಡದಲ್ಲಿ ಆಕರ ಗ್ರಂಥಗಳ ಕೊರತೆಯನ್ನು ನಿವಾರಿಸುವುದೇ ಈ ಮಾಲೆಯ ಉದ್ದೇಶ.

ಈ ಮಾಲೆಯಲ್ಲಿ ಈಗಾಗಲೇ ಅನೇಕ ಕೃತಿಗಳು ಪ್ರಕಟವಾಗಿದ್ದು ಅವು ಸಾರ್ವತ್ರಿಕವಾಗಿ ಮನ್ನಣೆಗಳಿಸಿವೆ. ಈ ಕಾರ್ಯಕ್ರಮದಂತೆ **'ಭಾರತದ ವ್ಯಾವಹಾರಿಕ ಕಾನೂನುಗಳ ಪರಿಚಯ'** ಎಂಬ ಪುಸ್ತಕವನ್ನು **ಶ್ರೀಮತಿ ಎನ್. ಶಶಿರೇಖ** ಮತ್ತು **ಪ್ರೊ । ಬಿ. ವೆಂಕಟಕೃಷ್ಣಪ್ಪ** ಅವರು ಪ್ರೀತಿಯಿಂದ ಬರೆದುಕೊಟ್ಟಿದ್ದಾರೆ. ಮೆ॥ ತ್ವರಿತ ಮುದ್ರಣ, ಗದಗ ಅವರು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ಪ್ರಾಧಿಕಾರದ ಪರವಾಗಿ ಧನ್ಯವಾದಗಳು.

ಈ ಮಾಲೆಯ ನಿರ್ವಹಣೆಯ ಕಾರ್ಯದಲ್ಲಿ ಸಹಕರಿಸುತ್ತಿರುವ ಮೂಲಭೂತ ಶಿಕ್ಷಣ ಮಾಲೆಯ ಉಪಸಮಿತಿಯ ಸದಸ್ಯರಿಗೂ ಪ್ರಾಧಿಕಾರದ ಸದಸ್ಯರಿಗೂ ಕೃತಜ್ಞತೆಗಳು. ಈ ಮಾಲೆಯ ಬಗ್ಗೆ ಸಹೃದಯ ಕನ್ನಡ ಬಂಧುಗಳ ಸಲಹೆ, ವಿಮರ್ಶೆಗಳಿಗೆ ಸದಾ ಸ್ವಾಗತ.

ನೆಲಮನೆ ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಲೇಖಕರ ಮಾತು

ಕಾನೂನುಗಳ ಸೂಕ್ಷ್ಮ ಪರಿಚಯ ಪ್ರತಿಯೊಬ್ಬ ಪ್ರಜೆಗೂ ಅತ್ಯಗತ್ಯ. ಕಾನೂನನ್ನು ಎಲ್ಲರೂ ತಿಳಿದಿರಬೇಕೆಂಬುದೇ ಕಾನೂನಿನ ಮೊದಲನೇ ನಿಯಮ. ಈ ಪುಸ್ತಕದಲ್ಲಿ ಸಾರ್ವಜನಿಕರ ದೈನಂದಿನ ವ್ಯವಹಾರಗಳಿಗೆ ಅನುಕೂಲವಾಗುವಂತೆ ಕಾನೂನಿನ ಸ್ವಭಾವ, ಲಕ್ಷಣ, ಅರ್ಥ ವಿವರಣೆ, ವರ್ಗೀಕರಣ, ಉತ್ತರಾಧಿಕಾರ, ಕರಾರುಗಳು, ಗ್ರಾಹಕ ಸಮಸ್ಯೆಗಳು ಮುಂತಾದ ವಿಷಯಗಳನ್ನು ಜನತೆಗೆ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಕಾನೂನಿನ ಅನೇಕ ಪದಗಳಿಗೆ ಕನ್ನಡದಲ್ಲಿ ಹತ್ತಿರವಾದ ಮತ್ತು ಸಮಾನವಾದ ಅರ್ಥವನ್ನು ಕೊಡಲಾಗಿದೆ.

ಅಷ್ಟೇ ಅಲ್ಲದೆ, ಮುಖ್ಯ ವಿಷಯಗಳ ಟಿಪ್ಪಣಿ ಮತ್ತು ಮೊಕದ್ದಮೆಗಳ ಪಟ್ಟಿಯನ್ನು ಸೇರಿಸಿದೆ. ಆದರೂ ನಮ್ಮ ಗಮನಕ್ಕೆ ಬರದೇಹೋದ ಅನೇಕ ಅಂಶಗಳು ಓದುಗರ ಗಮನಕ್ಕೆ ಬರಬಹುದು. ಅವುಗಳು ಓದುಗರ ಗಮನಕ್ಕೆ ಬಂದರೆ ಅಂಥವುಗಳನ್ನು ನಮ್ಮ ಗಮನಕ್ಕೆ ತರಲು ವಿನಂತಿಸುತ್ತೇವೆ.

ಈ ಪುಸ್ತಕವನ್ನು ಪ್ರಕಟ ಮಾಡುವ ಮೂಲಕ ಪ್ರೋತ್ಸಾಹ ನೀಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನೆಲಮನೆ ದೇವೆಗೌಡರಿಗೆ ನಾವು ಕೃತಜ್ಞರು.

ಈ ಪುಸ್ತಕವನ್ನು ಪರಿಶೀಲಿಸಿ, ಉಪಯುಕ್ತ ಸಲಹೆ ನೀಡಿದ ಪ್ರೊ। ಎಚ್. ಆರ್. ದಾಸೇಗೌಡರಿಗೆ ಧನ್ಯವಾದಗಳು.

ಲೇಖಕರು

ಒಳಗೇನಿದೆ

ಪೀಠಿಕೆ

ಕಾನೂನು ಸರ್ವವ್ಯಾಪಿ. ಎಲ್ಲರನ್ನೂ ಎಲ್ಲೆಲ್ಲೂ ಸುತ್ತಿ ಬಳಸಿದ ಈ ಕಾನೂನು ಕಾಯಿದೆಗಳು, ಸಮಾಜ ಜೀವನದಲ್ಲಿ ನಾಗರೀಕತೆಯ ಬದುಕಿಗೆ ಆವಶ್ಯಕ, ಅಗತ್ಯ. ಈ ನಾಗರೀಕತೆ ಮತ್ತು ಕಾನೂನು ಒಂದನ್ನೊಂದು ಅವಲಂಬಿಸಿ ಒಂದಕ್ಕೊಂದು ಪೂರಕವಾಗಿ ಒಟ್ಟಿಗೆ ಬೆಳೆಯುತ್ತ ಬಂದಿವೆ. ನಮ್ಮ ದೇಶದಲ್ಲಿ ಕಾನೂನು ವ್ಯವಸ್ಥೆಯ ಪ್ರಭುತ್ವವನ್ನು ಅನೇಕ ಶತಮಾನಗಳಿಂದ ಅಂಗೀಕರಿಸಿ ರೂಢಿಸಿಕೊಂಡು ಬಂದಿದ್ದೇವೆ. ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಪಾಲನೆಯೇ ಈ ವ್ಯವಸ್ಥೆಯ ತಳಹದಿ. ಹಿಂದೆ ಪ್ರಜೆಯ ಕರ್ತವ್ಯವನ್ನು 'ಧರ್ಮ' ಎನ್ನುತ್ತಿದ್ದರು. ಈ 'ಧರ್ಮ' ಎಂಬ ಪದದ ವ್ಯಾಪ್ತಿಯಲ್ಲಿ ಜಾತಿ, ಕುಲಗಳ ವಾಸನೆ ಇರಲಿಲ್ಲ. ಇದು ಗಮನಾರ್ಹವಾದ ವಿಷಯ. ಪ್ರಜೆಗಳು ತಮ್ಮ ಜೀವನದ ವಿವಿಧ ಹಂತಗಳಲ್ಲಿ ತಮ್ಮ ಕರ್ತವ್ಯಗಳನ್ನು ತಾವೇ ಅರಿತು ಅದರಂತೆ ತಮ್ಮ ನಡತೆ, ನಡವಳಿಕೆಗಳನ್ನು ಅಳವಡಿಸಿಕೊಳ್ಳುತ್ತಿದ್ದರು.

ಈ ಧರ್ಮವ್ಯವಸ್ಥೆ ಪ್ರಜೆಗಳಿಗೂ ಅವರ ದೊರೆಗಳಿಗೂ ಸರಿಸಮನಾಗಿ ಅನ್ವಯಿಸುತ್ತಿತ್ತು. ಯಾವ ರಾಜನಿಗೂ ಧರ್ಮವನ್ನು ಮೀರಿ ನಡೆಯುವ ಹಕ್ಕಿರಲಿಲ್ಲ. ಈ ಧರ್ಮವ್ಯವಸ್ಥೆಯ ವಿಷಯವನ್ನು ಉಪನಿಷತ್ತುಗಳಲ್ಲಿ ಕೂಡ ಉಲ್ಲೇಖಿಸಲಾಗಿದೆ.

ನಮ್ಮ ದೇಶಕ್ಕೆ ಬ್ರಿಟೀಷರ ಆಳ್ವಿಕೆ ಬಂದಿದ್ದು ಈಸ್ಟ್ ಇಂಡಿಯಾ ಕಂಪನಿಯವರ ಮೂಲಕ. ಆಗ ಕಾಯಿದೆ ವ್ಯವಸ್ಥೆಗೆ ವಿಶೇಷ ಮಹತ್ವ ಬಂದಿತು. ನ್ಯಾಯ ವಿತರಣೆಯಲ್ಲಿ ಸುವ್ಯವಸ್ಥೆ ಬಂದಿತು. ಕ್ರಿ. ಶ. ೧೭೨೬ರಲ್ಲೇ ಭಾರತದ ಪ್ರಜೆಗೆ ಇಲ್ಲಿನ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಬ್ರಿಟೀಷ್ ರಾಜರ ಆಪ್ತ ನ್ಯಾಯ ಮಂಡಲಿಗೆ (Privy Council) ಮನವಿ ಮಾಡುವ ಸೌಲಭ್ಯವನ್ನು ಒದಗಿಸಿದ್ದರು. ಈ ತಳಹದಿಯಿಂದ ಬೆಳೆದ ಕಾನೂನು ಕಟ್ಟಳೆಗಳ ವ್ಯವಸ್ಥೆ ಇಂದಿಗೂ ಅಸ್ತಿತ್ವದಲ್ಲಿದೆ. ನಮ್ಮ ದೇಶ ಸ್ವತಂತ್ರವಾಗಿ ಐದು ದಶಕಗಳಾಗಿವೆ. ಈ ಅವಧಿಯಲ್ಲಿ ನಮ್ಮದೇ ಆದ ಹೊಸ ಸಂವಿಧಾನ ಏರ್ಪಟ್ಟು, ಅದಕ್ಕೆ ಅನೇಕ ತಿದ್ದುಪಡಿಗಳಾಗಿ ಇತ್ತೀಚೆಗೆ ಶ್ರೀ ಸಾಮಾನ್ಯರಿಗೂ ಈ ಕಾಯಿದೆಗಳ ವ್ಯವಸ್ಥೆಯ ಬಗ್ಗೆ ಅರಿವುಂಟಾಗಿದೆ.

೧೯೭೬ರಲ್ಲಿ ನಮ್ಮ ಸಂವಿಧಾನಕ್ಕೆ ತಿದ್ದುಪಡಿ ಮಾಡಿದಾಗ, ನಮ್ಮ ದೇಶಕ್ಕೆ 'ಸಮಾಜವಾದೀ ಗಣರಾಜ್ಯ' (Socialist Republic) ಎಂಬ ಅಂಕಿತವನ್ನು ಕೊಡಲಾಯಿತು. ಇದರಿಂದ ನಮ್ಮ ಸರ್ಕಾರಕ್ಕೆ ಸಮಾಜದಲ್ಲಿ ಎಲ್ಲ ಬಗೆಯ

ಸಮಾನತೆ, ಆದರಲ್ಲೂ ಮುಖ್ಯವಾಗಿ ಆರ್ಥಿಕ ಸಮಾನತೆಗಾಗಿ ಸೂಕ್ತ ವ್ಯವಸ್ಥೆ, ವಿಶೇಷ ಜವಾಬ್ದಾರಿ ಬಂದಿತು. ಇದರ ನಿರ್ವಹಣೆ ಹಲವು ವಿಧ. ಸಮಾಜದಲ್ಲಿರುವ ಭಿನ್ನತೆ, ಅಂತರಗಳನ್ನು ಕಡಿಮೆ ಮಾಡಲು ತೆರಿಗೆ ಒಂದು ಆಯುಧ. ಇದು ಆರ್ಥಿಕ ಪ್ರಪಂಚಕ್ಕೆ ಸೇರಿದುದು. ಜನರು ಕರ್ತವ್ಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಒಪ್ಪಂದಕ್ಕೆ ಬರುವಾಗ ಅವರಲ್ಲಿ ಆರ್ಥಿಕ ಮತ್ತು ಇತರ ವಿಧಗಳಲ್ಲಿ ಸಮಾನತೆ ಇರುವಂತೆ ನೋಡಿಕೊಳ್ಳುವುದು ಇನ್ನೊಂದು ವಿಧಾನ. ಇದಕ್ಕೆ ಕೆಳಮಟ್ಟದಲ್ಲಿರುವವರನ್ನು ಮೇಲಕ್ಕೆ ಎತ್ತುವ ಪ್ರಯತ್ನ ಮಾಡಲೇಬೇಕು. ಇದನ್ನು ನೆರವೇರಿಸಲು ಬಾಡಿಗೆ ನಿಯಂತ್ರಣ ಕಾನೂನು, ಕೂಲಿಕಾರರ ಬಗ್ಗೆ ಹಲವಾರು ಮಸೂದೆಗಳು, ಋಣ ವಿಮೋಚನೆಯ ಬಗ್ಗೆ ಕಾನೂನುಗಳು ಈ ರೀತಿಯ ವಿಶೇಷ ಕಾಯಿದೆಗಳು ಶಾಸಕಾಂಗದಿಂದ ಹೊರಬರುತ್ತಿವೆ. ಇವುಗಳ ಮಹತ್ವ ಮತ್ತು ಪ್ರಯೋಜನಗಳನ್ನು ಎಲ್ಲರೂ ತಿಳಿಯಬೇಕು. ಈಗ ಇರುವ, ಬೆಳೆಯುತ್ತಿರುವ ಮುಖ್ಯ ಮಸೂದೆಗಳ ತಳಹದಿ ಮತ್ತು ಅವುಗಳ ಪರಿಚಯವನ್ನು ಮಾಡಿಕೊಡಲು ಈ ಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ.

ಕಾನೂನು ಮತ್ತು ಅದರ ವ್ಯವಸ್ಥೆಯನ್ನು ಪೂರ್ಣವಾಗಿ ಪರಿಚಯ ಮಾಡಿಕೊಳ್ಳಲು ಪ್ರಯತ್ನ ಮಾಡಿದಾಗ ಪ್ರಥಮವಾಗಿ ನಮಗೆ ಗೋಚರ ವಾಗುವುದು ಅದರಲ್ಲಿ ಬಳಸುವ ವಿಶಿಷ್ಟ ಪದಗಳು, ಅಂಶಗಳು ಮತ್ತು ಅವುಗಳ ವ್ಯಾಪ್ತಿ. ಹಕ್ಕು, ಕರ್ತವ್ಯ, ಮಾಲೀಕತ್ವ ಇತ್ಯಾದಿ ಅನೇಕ ಅಂಶಗಳ ಆಧಾರದ ಮೇಲೆ ಕಾನೂನಿನ ಕಟ್ಟಡ ನಿರ್ಮಿಸಲಾಗಿದೆ. ಇವುಗಳ ಪರಿಚಯ ಇಲ್ಲದಿದ್ದರೆ, ಕೇವಲ ಕೆಲವೇ ಕಾನೂನುಗಳನ್ನು ಓದಿದರೆ ಅವುಗಳ ವ್ಯಾಪ್ತಿ ಮತ್ತು ಇತಿ ಮಿತಿಗಳು ಸಾಮಾನ್ಯವಾಗಿ ಅರ್ಥವಾಗುವುದಿಲ್ಲ. ಇದಕ್ಕಾಗಿ ಅಡಿಪಾಯದಿಂದ ನಾವು ವಿಶ್ಲೇಷಿಸಿ, ಪರಿಚಯ ಮಾಡಿಕೊಂಡು ಮುಂದುವರಿಯುವುದು ಅಗತ್ಯ.

ಇದಕ್ಕಾಗಿ ಮೊದಲನೆಯ ಹಂತದಲ್ಲಿ ಕಾನೂನು ಯಾರ ಬಳಕೆಗಾಗಿ ಮತ್ತು ಯಾವ ಒಳಿತಿಗಾಗಿ ಎಂಬ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ನಂತರ ಕಾನೂನಿನಲ್ಲಿ ಮಾನವ ಎಂಬ ಕಲ್ಪನೆಯ ಬಗ್ಗೆ ಕಾನೂನಿನ ದೃಷ್ಟಿಯಲ್ಲಿ ಒಂದು ವಿಶಿಷ್ಟವಾದ ಸಿದ್ಧಾಂತವನ್ನೇ ರೂಪಿಸಲಾಗಿದೆ. ಇದರಿಂದಾಗಿ ಕಂಪನಿಗಳ ಮಸೂದೆ ಮತ್ತು ಇತರ ಶಾಸನಗಳಲ್ಲಿ ಅವುಗಳಿಗೆ ಸಂಬಂಧಿಸಿದಂತೆ ವಿಶೇಷ ಸೌಲಭ್ಯಗಳನ್ನು ಅಳವಡಿಸಲು ಸಾಧ್ಯವಾಯಿತು. ನೈಜ ಮಾನವನಂತೆಯೇ ಅನೇಕ ಸಂಸ್ಥೆ ಅಥವಾ ಕಂಪನಿ ಇತ್ಯಾದಿ ಕಾಲ್ಪನಿಕ ಮಾನವರಿಗೆ ಹಕ್ಕು, ಬಾಧ್ಯತೆ, ಕರ್ತವ್ಯ ಇವುಗಳ ಉಡಿಗೆಯನ್ನು ತೊಡಿಸಿ, ಅವುಗಳನ್ನು ನೈಜ ಮಾನವನಂತೆ ಕರ್ತವ್ಯ ಲೋಪಗಳಿಗೆ ಗುರಿ ಮಾಡಲಾಗಿದೆ. ಈಗಿನ ಸಮಾಜದ ವ್ಯವಸ್ಥೆಯಲ್ಲಿ ಈ ಸಂಸ್ಥೆಗಳ ಪಾತ್ರ

ಹಿರಿದಾದ್ದರಿಂದ ಹಿಂದಿನ ಶತಮಾನಗಳ ಕಾನೂನಿನ ವ್ಯವಸ್ಥೆಯನ್ನೇ ಮಾರ್ಪಾಟು ಮಾಡಿ ವ್ಯಕ್ತಿಗೆ ಕೊಡುತ್ತಿದ್ದ ಆದ್ಯತೆಯನ್ನು ಕೊಡಲಾಗಿದೆ.

ಡೀನ್ ರಾಸ್ಕೋ ಪೌಂಡ್ ಎಂಬ ಅಮೇರಿಕದ ನ್ಯಾಯಶಾಸ್ತ್ರಜ್ಞ (Jurist) "ಕಾನೂನಿನ ಸ್ವರೂಪ ಮತ್ತು ನ್ಯಾಯ ವಿತರಣೆಯಲ್ಲಿ ಕಾನೂನಿನ ಪಾತ್ರವನ್ನು ಸರಿಯಾಗಿ ಅರಿಯಬೇಕಾದರೆ ಕೆಲವು ಮೂಲಭೂತ ಅಂಶಗಳನ್ನು (Jural Postulates) ನಾವು ಅರಿಯಲೇಬೇಕು ಮತ್ತು ಅವುಗಳನ್ನು ಸರಿಯಾಗಿ ಗುರುತಿಸಿ ಅದರ ಮೇರೆಗಳನ್ನು ರೂಪಿಸಿದಲ್ಲಿ ವೈಜ್ಞಾನಿಕವಾಗಿ ಕಾನೂನು ಮತ್ತು ನ್ಯಾಯದ ಸಂಬಂಧವನ್ನು ತಿಳಿಯಬಹುದು" ಎಂದು ಹೇಳಿದ್ದಾರೆ. ಈ ತರಹದ ವೈಚಾರಿಕತೆಯಿಂದ ಹೊರಹೊಮ್ಮುವ ಅಂಶವೇನೆಂದರೆ, ಒಬ್ಬ ವ್ಯಕ್ತಿಗೆ ಕಾನೂನಿನಲ್ಲಿ ಎಷ್ಟು ಸ್ಥಾನವಿದೆಯೋ ಅಷ್ಟೇ ಪ್ರಾಮುಖ್ಯವನ್ನು ಸಮಾಜದ ಅಂಗಗಳಾಗಿರುವ ವಿವಿಧ ಸಂಸ್ಥೆಗಳಿಗೂ ಕೊಡಲಾಗಿದೆ. ಇನ್ನೂ ಹೇಳಬೇಕಾದರೆ ವಸ್ತುವಿನ ಮಾಲೀಕತ್ವ ಇತ್ಯಾದಿ ಅಂಶಗಳೂ ಕೂಡ ಒಂದು ಸಂಸ್ಥೆಗೆ ಅಥವಾ ಬಹು ಜನರಿಗಾಗಿ ಮಾರ್ಪಾಟಾಗಿ ಕಾನೂನಿನ ಸ್ವರೂಪದ ಹೊಂದಾಣಿಕೆಗೆ ಅತ್ಯುಪಕಾರಿಯಾಗಿದೆ. ಆದ್ದರಿಂದಲೇ ಒಂದು ಕಂಪನಿ ಅಥವಾ ಪಾಲುಗಾರಿಕೆಯ ರಚನೆಗೆ ನಾವು ಮಹತ್ವವನ್ನು ಕೊಟ್ಟು ಅವುಗಳಿಗೂ ಒಬ್ಬ ವ್ಯಕ್ತಿಗೂ ಇರಬಹುದಾದ ಭಿನ್ನತೆಯನ್ನು ಗುರುತಿಸಲೇಬೇಕು. ಇದರಿಂದ ಸ್ಪಷ್ಟವಾಗುವ ಅಂಶ ಏನೆಂದರೆ, ಇತ್ತೀಚಿನ ಬೆಳವಣಿಗೆಯಲ್ಲಿ ಬಹು ಜನರು ಸಾಮಾಜಿಕ ಅಥವಾ ಆರ್ಥಿಕ ಸಂಸ್ಥೆಯನ್ನು ತಮ್ಮ ಪ್ರಯೋಜನಕ್ಕಾಗಿ ಮಾಡಿಕೊಂಡಿರುವುದು ಸರ್ವೇಸಾಮಾನ್ಯವಾಗಿದೆ. ಆರ್ಥಿಕ ವ್ಯವಹಾರಗಳು ಈಗ ಒಬ್ಬ ಸಾಮಾನ್ಯ ವ್ಯಕ್ತಿಗೆ ಎಟುಕಲಾರವು. ಏಕೆಂದರೆ, ಅದಕ್ಕೆ ಹೆಚ್ಚಿನ ಬಂಡವಾಳ ಬೇಕೇಬೇಕು. ಬಂಡವಾಳದ ಹೂಡಿಕೆ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಕಾನೂನುಗಳ ಸೂಕ್ಷ್ಮ ಪರಿಚಯ ಪ್ರತಿಯೊಬ್ಬ ಪ್ರಜೆಗೂ ಅತ್ಯಗತ್ಯ. ಇದೂ ಅಲ್ಲದೆ ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಕಾನೂನನ್ನು ತಿಳಿದೇ ಇರಬೇಕೆಂಬುದು ಕಾನೂನಿನ ಮೊದಲನೆಯ ನಿಯಮ (Ignorance of law is no excuse). ಇದರಿಂದಾಗಿ ಸಾಮಾನ್ಯವಾಗಿ ಇಬ್ಬರು ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳುವಾಗ ಅನ್ವಯಿತವಾಗುವ ಭಾರತದ ಕರಾರಿನ ಅಧಿನಿಯಮ ೧೮೭೨ ರಿಂದ ನಮ್ಮ ಪರಿಚಯವನ್ನು ಪ್ರಾರಂಭಿಸಬೇಕು. ಈ ಮಸೂದೆಯಾದ ಅರ್ಧ ಶತಮಾನದ ಮೇಲೆ, ಇದರಲ್ಲಿದ್ದ ಪಾಲುಗಾರಿಕೆಗೆ ಸಂಬಂಧಪಟ್ಟ ಅಂಶಗಳನ್ನು ವಿಸ್ಕೃತ (ವಿಸ್ತಾರ)ಗೊಳಿಸಿ ಪ್ರತ್ಯೇಕವಾಗಿ ಭಾರತದ ಪಾಲುಗಾರಿಕೆ ಮಸೂದೆಯನ್ನು ತರಲಾಯಿತು. ಕರಾರು

ಅಧಿನಿಯಮವನ್ನು ಅಭ್ಯಸಿಸುವ ಮುನ್ನ ಕಾನೂನಿನ ಸ್ವಭಾವ ಹಾಗೂ ಲಕ್ಷಣಗಳನ್ನು ತಿಳಿದುಕೊಳ್ಳೋಣ.

ಆದರೆ ಭಾರತವು ಸ್ವಾತಂತ್ರ್ಯವನ್ನು ಪಡೆದ ಮೇಲೆ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ವಿಶೇಷ ಮಸೂದೆಗಳನ್ನು ತರಲಾಯಿತು. ಅವುಗಳಲ್ಲಿಯ ಮುಖ್ಯವಾದ ಹಲವು ಕಾನೂನುಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಇಲ್ಲಿ ನಾವು ಕಾಣಬಹುದಾದ ಅಂಶವೇನೆಂದರೆ, ಈ ಬಗೆಯ ಮಸೂದೆಗಳ ಪ್ರಾಂತ್ಯವೇ ಅಗಾಧ ವಾದದ್ದು. ಆದ್ದರಿಂದ ಕೆಲವೇ ಕಾನೂನುಗಳ ಪರಿಚಯವನ್ನು ಮಾಡಿಕೊಡಲು ಸಾಧ್ಯವಾಗಿದೆ. ಆದರೂ ಬಳಕೆಯಲ್ಲಿ ಅಥವಾ ನಿತ್ಯ ವ್ಯವಹಾರದಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ, ಮುಖ್ಯವಾಗಿ ಕಾನೂನಿನ ಮೂಲಭೂತ ಸ್ವರೂಪವನ್ನು ನಾವು ಪರಿಚಯ ಮಾಡಿಕೊಳ್ಳುವುದರಿಂದ ಆಗುವ ಮಹತ್ತರ ಪರಿಣಾಮ, ಯಾವ ಸಂದರ್ಭಕ್ಕೂ ಅನುಗುಣವಾಗುವಂತಹ ಕಾನೂನನ್ನು ಗುರುತಿಸುವ ಸಾಮರ್ಥ್ಯ ಉಂಟಾಗುತ್ತದೆ. ಉದಾ: ಒಬ್ಬ ಕಾನೂನಿನ ವಿದ್ಯಾರ್ಥಿಯು ಮೂರು-ಐದು ವರ್ಷಗಳ ವ್ಯಾಸಂಗದ ಅವಧಿಯಲ್ಲಿ ಅನೇಕ ರೀತಿಯ ಕಾನೂನುಗಳನ್ನು ಅರಿಯುತ್ತಾನೆ. ಆದರೂ ಸಮುದ್ರದಲ್ಲಿ ತೇಲಿ ಬರುವ ಮಂಜಿನ ಗಡ್ಡೆಯಂತೆ ಈ ವಿದ್ಯಾರ್ಥಿಗೆ ತಿಳಿಯದ ಭಾಗ ತಿಳಿದದ್ದಕ್ಕಿಂತ ನಾಲ್ಕು ಪಟ್ಟಾಗಿರುತ್ತದೆ. ಆದರೂ ಅವನು ತನ್ನ ಜ್ಞಾನಾರ್ಜನೆಗೆ ಸರಿಯಾದ ದಾರಿಯನ್ನು ರೂಪಿಸಲು ಸಾಧ್ಯವಾಗಿರುವುದರಿಂದ ಮುಂದಿನ ಅನ್ವೇಷಣೆ ಸುಗಮ. ಇಲ್ಲಿ ಶ್ರೀಸಾಮಾನ್ಯನ ಸಾಧಾರಣ ಆರ್ಥಿಕ ವ್ಯವಹಾರಗಳಿಗಾಗಿ ನಿರ್ಮಾಣವಾಗಿರುವ ಕೆಲವು ಕಾನೂನುಗಳ ಪರಿಚಯ ಮಾಡಲಾಗಿದೆ. ಇವು ಸಾಮಾನ್ಯ ಮನುಷ್ಯನ ಮುಂದಿನ ಅನ್ವೇಷಣೆಗೆ ಸುಗಮವಾಗಿರಲೆಂದು ಹಾರೈಸಲಾಗಿದೆ.

****

ಭಾಗ - ೨

ಕಾನೂನಿನ ಸ್ವಭಾವ : ಲಕ್ಷಣಗಳು

ನಮ್ಮ ದೇಶದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಕಾನೂನು, ಕಾಯಿದೆಗಳನ್ನು ಅಭ್ಯಸಿಸುವ ಮುನ್ನ ಈ ಶಾಸನಗಳ ಮೂಲ, ಸ್ವಾಭಾವಿಕ ಕರ್ತವ್ಯ, ಕ್ರಿಯೆ ಮತ್ತು ವ್ಯಾಪ್ತಿಯನ್ನು ತಿಳಿಯಬೇಕು. ಈ ಶಾಸನಗಳನ್ನು ರಚಿಸುವವರು ನಮ್ಮ ರಾಷ್ಟ್ರದ ಕೇಂದ್ರ ಇಲ್ಲವೇ ರಾಜ್ಯಗಳ ಶಾಸಕರು. ಈ ಶಾಸನದ ರಚನೆ ಮತ್ತು ಪರಿನಿಯಮಗಳನ್ನು ಸೇರಿಸಿ, ಇದನ್ನೇ ಕಾನೂನಿನ ಮೂಲ ಎಂದು ತಿಳಿಯಬಾರದು. ಇದರಷ್ಟೇ ಮುಖ್ಯವಾದ ಇನ್ನೂ ಕೆಲವು ಮೂಲಗಳನ್ನು ನಾವು ಇಲ್ಲಿ ಗಮನಿಸೋಣ. ಈ ಮೂಲಗಳನ್ನು ನ್ಯಾಯಾಲಯಗಳಲ್ಲಿ ದಿನಂಪ್ರತಿ ಅನ್ವಯಿಸಿ ಉಪಯೋಗಿಸಲಾಗುತ್ತಿದೆ.

ಹೀಗೆ ಕಾನೂನಿನ ವ್ಯವಸ್ಥೆ, ಪ್ರಕೃತಿ, ವ್ಯಾಪ್ತಿ ಮತ್ತು ಸ್ಥಾನಗಳನ್ನು ತಿಳಿಸುವ ವಿಷಯಸಂಗ್ರಹಕ್ಕೆ ನ್ಯಾಯಶಾಸ್ತ್ರ ಇಲ್ಲವೇ ವಿಧಿಶಾಸ್ತ್ರ (Jurisprudence) ಎನ್ನುತ್ತಾರೆ. ಇದು ಒಂದು ಬಗೆಯ ವಿಜ್ಞಾನವೆಂದೇ ತಿಳಿಯಬಹುದು. ಇದು ಸಿದ್ಧಾಂತವೂ ಹೌದು. ಇದರಿಂದ ಕಾನೂನು ತಿಳಿಯಪಡಿಸುವ , ಅಸ್ತಿತ್ವ (Legal Entity), ಒಡೆತನ (Ownership), ಸ್ವಾಧೀನ (Posession), ಆಸ್ತಿ (Property), ಹಕ್ಕು (Rights) ಮತ್ತು ಕರ್ತವ್ಯ ಅಥವಾ ಬಾಧ್ಯತೆ (Duties) ಇಂತಹ ಮೂಲ ಅಂಶಗಳ ಪರಿಚಯವಾಗುತ್ತದೆ. ಈ ಅಂಶಗಳು ಶಾಸನದಲ್ಲಿ ಮಿಳಿತಗೊಂಡಾಗ ಅವುಗಳ ವಿಸ್ತಾರ ಹಾಗೂ ಪರಿಮಿತಿಗಳ ಅರಿವು ನಮಗಾಗುತ್ತದೆ. ಈ ನ್ಯಾಯಶಾಸ್ತ್ರವು, ಕಾನೂನಿನ ಬಗ್ಗೆ ದಾರ್ಶನಿಕ ಸಿದ್ಧಾಂತವೂ ಹೌದು ಎಂದು ಕಾನೂನಿನ ಮೂಲವನ್ನು ಗುರುತಿಸಲು ಮತ್ತು ತಿಳಿದುಕೊಳ್ಳಲು ಹೋದಾಗ, ಅದು ನಮಗೆ ಗೋಚರ ವಾಗುತ್ತದೆ. ಈಗ ಕಾನೂನಿನ ಸ್ವಭಾವದ ಮೇರೆ ವಿಸ್ತಾರವಾಗುತ್ತಿದ್ದು, ಅದರಲ್ಲಿ ಸಮಾಜ ಸಮತಾವಾದದ ಛಾಯೆಯನ್ನು ಕಾಣಬಹುದು. ನಮ್ಮ ಸಂವಿಧಾನ ಪೀಠಿಕೆಯಲ್ಲಿ ಈ ತತ್ವವನ್ನು ೧೯೭೬ರಲ್ಲಿ ಅಳವಡಿಸಲಾಯಿತು. ಕೆಲವರ ಪ್ರಕಾರ ಕಾನೂನು ಪ್ರಕೃತಿಯಲ್ಲಿ ಆಗಲೇ ಅಸ್ತಿತ್ವದಲ್ಲಿ ಇತ್ತು, ಮನುಷ್ಯನು ತನ್ನಲ್ಲಿರುವ ವಿವೇಚನಾ ಶಕ್ತಿಯಿಂದ ಕಾನೂನಿನ ಮೂಲತತ್ವಗಳನ್ನು ಪ್ರಕೃತಿಯಿಂದಲೇ ಕಂಡುಹಿಡಿದು, ಅದನ್ನು ರೂಪಿಸಲು ಸಮರ್ಥನಾಗಿದ್ದಾನೆ ಎಂದು. ಇವರ ಸಿದ್ಧಾಂತದಂತೆ ಕಾನೂನು, ಯಾವಾಗಲೂ ಮಾನವ ನಿರ್ಮಿತವಲ್ಲವೆಂಬ ಅರಿವು ನಮಗೆ ಗೋಚರವಾಗುವುದು.

ಆದರೆ, ಕೆಲವು ಪ್ರಕೃತಿ ನ್ಯಾಯ ಆಧಾರಿತ, ಉಚ್ಚನ್ಯಾಯಾಲಯಗಳ

ತೀರ್ಪುಗಳನ್ನು ಓದಿದಾಗ, ಸಾವಿಜ್ನಿ (Savigny) ಅಂತಹ ವಿದ್ವಾಂಸರು ಹೇಳಿದಂತೆ "ಕಾನೂನು ರಾಜಶಾಸನವಲ್ಲ, ಇದು ಸಮಾಜದಲ್ಲಿ ಬಳಸುತ್ತಿರುವ ಸಂಪ್ರದಾಯ ಮತ್ತು ಆಚರಣೆಯಿಂದ ಜನಿಸಿದ ಶಾಸ್ತ್ರ ಮತ್ತು ಇದೇ ನಿಜವಾದ ಕಾನೂನು" ಎಂಬುದು ತಿಳಿದುಬರುತ್ತದೆ.

ಮತ್ತೆ ಕೆಲವು ತಜ್ಞರು ಇನ್ನೊಂದು ತುದಿ ಮುಟ್ಟಿ, ಕಾನೂನು ಪರಮಾಧಿಕಾರ ದಿಂದಲೇ ಉತ್ಪನ್ನವಾಗುತ್ತದೆ; ಇತರ ಮೂಲಗಳು ಅದಕ್ಕೆ ಅಧೀನವಾದದ್ದು ಎಂದು ಹೇಳುತ್ತಾರೆ. ಅದೇ ಸಮಾಜವಾದಿ ಗುಂಪಿನವರನ್ನು ಕೇಳಿದರೆ, ಇದು ತಪ್ಪು, ಈಗಿನ ಸಮಾಜವೇ ಕಾನೂನಿನ ರೂಪರೇಖೆಗಳನ್ನು ನಿರ್ಮಿಸುತ್ತದೆ ಮತ್ತು ಸಮಾಜ ಸಂಬಂಧವನ್ನು ಅಳವಡಿಸಲು ಬೇಕಾದ ಅಗತ್ಯ ವಸ್ತು ಕಾನೂನು ಎಂದು ಹೇಳುತ್ತಾರೆ (ಇದು ಜನಗಳ ಅವಶ್ಯಕತೆಯ ಸೂಚನೆ). ಡೀನ್ ರಾಸ್ಕೋಪೌಂಡ್ ಎಂಬ ಕಾನೂನು ವಿಜ್ಞಾನಿಯ ಮಾತಿನಲ್ಲಿ ಹೇಳುವುದಾದರೆ, • "ಕಾನೂನು ಸಮಾಜತಂತ್ರದ ಒಂದು ರೂಪ" (Law is a form of Social Engineering). ಈ ವಿಭಿನ್ನ ದೃಷ್ಟಿಕೋನಗಳಿಂದ ವ್ಯಕ್ತವಾಗುವ ಅಂಶವೇನೆಂದರೆ, ಮಾನವನ ಪ್ರವೃತ್ತಿಗೆ ಕಡಿವಾಣವನ್ನು ಹಾಕುವ ಸೂತ್ರವೇ ಕಾನೂನು. ಆದ್ದರಿಂದ ಇದರ ಮೂಲದ ಬಗ್ಗೆ ಆಳವಾದ ಅಧ್ಯಯನ ಅಗತ್ಯ ಮತ್ತು ಇಂದಿಗೂ, ಎಂದಿಗೂ ಚರ್ಚಾಸ್ಪದವಾದ ವಸ್ತು ಎಂಬುದನ್ನು ಕಾಣಬಹುದು.

ಕಾನೂನಿನ ಮೂಲಗಳು

ಈಗ ಕಾನೂನಿನ ಮೂಲಗಳನ್ನು ಪರಿಶೀಲಿಸೋಣ. ಶಾಸನ ರಚನೆಯು ಕಾನೂನಿನ (ಅದರ) ನಾನಾ ಸ್ವರೂಪಗಳಲ್ಲಿ ಕೇವಲ ಒಂದು ಮಾತ್ರ. ಇಬ್ಬರು ವ್ಯಕ್ತಿಗಳು ಮಾಡಿಕೊಳ್ಳುವ ಒಂದು ಕರಾರು ಕೂಡ ಅವರಿಗೆ ಸಂಬಂಧಿಸಿದ ಕಾನೂನಿನ ಮೂಲವೇ ಆಗುತ್ತದೆ. ಆ ಕರಾರಿನ ಅಂಶಗಳು ಒಂದು ಕಾನೂನಿನಂತೆಯೇ ಅವರ ನಡುವೆ ಜಾರಿಯಲ್ಲಿರುತ್ತದೆ. ಈಗ ಒಬ್ಬ ವ್ಯಕ್ತಿಯು ತನ್ನ ಸ್ವತ್ತನ್ನು ಒಂದು ನಿರ್ದಿಷ್ಟ ಸಮಯದೊಳಗೆ, ಒಂದು ನಿರ್ದಿಷ್ಟ ಬೆಲೆಗೆ ಮಾರಲು ಒಪ್ಪಂದ ಮಾಡಿಕೊಂಡರೆ ಅದು ಕಾನೂನಿನಲ್ಲಿ ಮಾನ್ಯವಾದ ಹಕ್ಕು-ಕರ್ತವ್ಯಗಳನ್ನು ತಕ್ಷಣ ಜಾರಿಗೆ ತರುತ್ತದೆ. ಇದು ಕರಾರು ಅಧಿನಿಯಮಕ್ಕೆ (೧೮೭೨) ಅನುಗುಣವಾಗಿದ್ದರೆ ಸಾಕು. ದಿನನಿತ್ಯ ನಡೆಯುವ ಅಸಂಖ್ಯಾತ ವ್ಯವಹಾರಗಳನ್ನು ಕಾಯಿದೆಗಳ ಮೂಲಕ ನಿಯಂತ್ರಿಸುವುದು ಮತ್ತು ನಡೆಸುವುದು ಅಸಾಧ್ಯ. ಆದುದರಿಂದ ಇಂತಹ ಕರಾರುಗಳ ಬಗ್ಗೆ ಶಾಸನದ ಮೂಲ ನಿಯಮಗಳನ್ನು ಮುಂದಿಟ್ಟು, ಜನರು ತಮಗೆ ಬೇಕಾದಂತೆ ವ್ಯವಹಾರ ನಡೆಸಲು ವ್ಯಕ್ತಿಗಳಿಗೆ ಸ್ವಾತಂತ್ರ್ಯ ಕೊಡಲಾಗುತ್ತದೆ.

ಮೊಟ್ಟಮೊದಲು ಕಾನೂನನ್ನು ರೂಪಿಸಲು ನೆರವಾದದ್ದು "ಸಂಪ್ರದಾಯ", "ಸದಾಚಾರ" ಮತ್ತು "ನಡವಳಿಕೆಯ ಸೂಚನೆ". ಸರ್ವ ಬಗೆಯ ಪ್ರಗತಿಯನ್ನು ಹೊಂದಿರುವ ದೇಶಗಳಲ್ಲಿಯೂ ಕೂಡ ಕಾನೂನು ಬಹಳಮಟ್ಟಿಗೆ ಹಿಂದಿನ ನಡವಳಿಕೆಗಳನ್ನೇ ಪ್ರತಿಬಿಂಬಿಸುತ್ತದೆ. ನಮ್ಮ ಭಾರತದಲ್ಲಿಯೂ ಇದೇ ರೀತಿ ಇದೆ. ಉದಾಹರಣೆಗೆ, ನಮ್ಮ ಹಿಂದೂ ಕಾನೂನು ೧೯೫೬ರ ವರೆಗೆ ಸಂಪೂರ್ಣವಾಗಿ ಸಂಪ್ರದಾಯಬದ್ಧವಾಗಿತ್ತು. ಅದರ ದೃಷ್ಟಿಯಲ್ಲಿ ಕಾನೂನಿನ ಮೂಲ "ಶೃತಿ, ಸ್ಮೃತಿ ಮತ್ತು ಸದಾಚಾರ". ಈಗಲೂ "ಅವಿಭಾಜ್ಯ ಕುಟುಂಬ" ಮುಂತಾದ ಅನೇಕ ಪದ್ಧತಿಗಳು ಸಂಪ್ರದಾಯವಾಗಿಯೇ ಉಳಿದಿವೆ.

ಬಳಕೆಯ ಆಚಾರ, ಸಂಪ್ರದಾಯ ವ್ಯವಹಾರಗಳು ಕಾನೂನಿಗೆ ಸಮವೇ ?

ಸಂಪ್ರದಾಯ ವ್ಯವಹಾರವೆಂದರೇನು ? ಇದನ್ನು ರೂಢೀಕರಿಸಿರುವ ಬಗೆ ಹೇಗೆ ಎಂಬುದನ್ನು ನೋಡೋಣ. ಕೆಲವು ಸಂಪ್ರದಾಯಗಳನ್ನು ಇಡೀ ಭಾರತ ದೇಶ ದಲ್ಲಿ ಆಚರಿಸಲಾಗುತ್ತಿರುತ್ತದೆ. ಈ ಬಗೆಯ ಸಂಪ್ರದಾಯವನ್ನು ನ್ಯಾಯಾಲಯವು ಅಂಗೀಕರಿಸುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಎರಡನೆಯ ತರಹ ಸಂಪ್ರದಾಯಗಳು ಕೇವಲ ಪರಿಮಿತ ಗುಂಪಿಗೆ ಇಲ್ಲವೇ ಪರಿಮಿತ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ಇಂತಹ ಆಚಾರಗಳನ್ನು ನ್ಯಾಯಾಲಯಗಳು ಒಪ್ಪಬೇಕಾದರೆ ಅವು ಅನಾದಿಕಾಲದಿಂದಲೂ ಬಂದಿರಬೇಕು, ಈಗಲೂ ಆಚರಿಸಲ್ಪಡುತ್ತಿರಬೇಕು, ಯುಕ್ತವಾಗಿರಬೇಕು ಮತ್ತು ಈಗಿರುವ ಶಾಸನಗಳಿಗೆ ವಿರುದ್ಧವಾಗಿರಬಾರದು. ಇದರಲ್ಲಿ ನಾವು ಮುಖ್ಯವಾಗಿ ನೋಡುವುದು, ಜನಾಂಗವು ಈ ಪದ್ಧತಿಗಳನ್ನು ತಾವಾಗಿಯೇ ಒಪ್ಪಿ ಬಹಳ ಕಾಲದಿಂದ ಆಚರಿಸುತ್ತಿರುವುದೇ ಎಂದು. ಆಗ ನ್ಯಾಯಾಲಯವು ಅದನ್ನು ಒಪ್ಪುತ್ತದೆ ಮತ್ತು ಮಾನ್ಯ ಮಾಡುತ್ತದೆ. ಮೂರನೆಯ ಬಗೆಯ ಸಂಪ್ರದಾಯವು ವ್ಯವಹಾರಕ್ಕೆ ಸಂಬಂಧಪಟ್ಟದ್ದು. ಯಾವುದಾದರೂ ಕರಾರಿನ ಬಗ್ಗೆ ವಿವಾದ ಬಂದರೆ ನ್ಯಾಯಾಲಯವು ಅದಕ್ಕೆ ಸಂಬಂಧಪಟ್ಟ ವ್ಯವಹಾರಗಳ ಆಚರಣೆಯನ್ನು ನೋಡುತ್ತದೆ. ರೂಢಿಯಲ್ಲಿರುವ ಆಚರಣೆಯನ್ನು ಅನುಸರಿಸಿ ಮೌನವಾಗಿರುವ ಅಥವಾ ವಿವಾದಕ್ಕೆ ಆಸ್ಪದ ಕೊಟ್ಟಿರುವ ಅಂಶಗಳನ್ನು ನಿರ್ಣಯಿಸುತ್ತದೆ. ಇದು ಕೈಗಾರಿಕಾ ಸಂಬಂಧವೇ ಆಗಿರಬಹುದು ಅಥವಾ ಸಾಮಾನ್ಯ ವ್ಯವಹಾರಕ್ಕೆ ಸಂಬಂಧಿಸಿರಬಹುದು. ಇದಕ್ಕೆ ಉದಾಹರಣೆಯಾಗಿ ಒಂದು ಒಪ್ಪಂದದ ಕರಾರಿನ ನಿರ್ವಹಣೆಗೆ ಯುಕ್ತ ಕಾಲವನ್ನು ನಿಯಮಿಸದಿ ರುವುದು. ಇದರಿಂದ ಉಂಟಾಗುವ ವಿವಾದವನ್ನು ನಿತ್ಯ "ಮಾಮೂಲೀ" ವ್ಯವಹಾರದಲ್ಲಿ ಹೇಗೆ ಬಗೆಹರಿಸಲಾಗುವುದೋ ಅದರಂತೆಯೇ ನಿರ್ಣಯಿಸಲಾಗುತ್ತದೆ.

ನ್ಯಾಯವಿಧಿಗಳ ಕಾನೂನು ಮತ್ತು ಅದರ ಮಹತ್ವಭಾವ (ತೀರ್ಪುಜನ್ಯ ಕಾನೂನು ಮತ್ತು ಅದರ ಸರ್ವಶಕ್ತತೆ)

(Case law and its Omnipotence)

ಶಾಸನ ರಚನೆ ಮತ್ತು ಅದರ ಇಂಗಿತಗಳನ್ನು ಪರೀಕ್ಷಿಸುವ ಮುನ್ನ ತೀರ್ಪುಜನ್ಯ ಕಾನೂನು ಎಂಬ ವಿಶೇಷ ಮಾನ್ಯತೆ ಪಡೆದ, ವಿಷಯವನ್ನು ತಿಳಿಯುವುದು ಅವಶ್ಯಕವಾಗಿದೆ. ಇದನ್ನು ದೃಷ್ಟಾಂತ (ಪೂರ್ವ ನಿದರ್ಶನ) (Precedent) ಎಂದು ಕರೆಯುತ್ತಾರೆ. ಇದು ಒಂದು ಪಾರಿಭಾಷಿಕ ಪದ (Technical term). ವರಿಷ್ಠ ನ್ಯಾಯಾಲಯವು ಒಂದು ತೀರ್ಪಿನಲ್ಲಿ ಒಂದು ಕಾನೂನಿನ ಅಂಶ ಅಥವಾ ಸೂತ್ರವನ್ನು ಅವಲಂಬಿಸಿದರೆ, ಆ ಮೇಲೆ ಬರುವ ಮೊಕದ್ದಮೆಗಳಲ್ಲಿ ಅದೇ ಪ್ರಶ್ನೆ ಎದ್ದಾಗ ನ್ಯಾಯಾಲಯವು ಅದೇ ತೀರ್ಪನ್ನು ಅನುಸರಿಸಬೇಕು. ಈ ನಿಯಮವನ್ನು "ಪೂರ್ವ ನಿರ್ಣಯಾನುಸಾರ" (Stare decisis) ಎನ್ನಬಹುದು. ಶಾಸನಗಳ ವ್ಯಾಖ್ಯಾನದ ಬಗ್ಗೆ ಏಕರೂಪತೆಯನ್ನು ಗಮನಿಸಬೇಕಾದರೆ ಮತ್ತು ಸಿದ್ಧಾಂತವನ್ನು ರೂಪಿಸಬೇಕಾದರೆ ಇದು ಬಹಳ ಉಪಯುಕ್ತವಾದ ಸಾಧನ. ಇದು ನಮಗೆ ಆಂಗ್ಲರ ಕೊಡುಗೆಯಾದರೂ, ನಮ್ಮಲ್ಲಿ "ಪೂರ್ವನ್ಯಾಯ"ದ ಔಚಿತ್ಯದ ಬಗ್ಗೆ ಹಿಂದೆಯೇ ಅರಿವಿತ್ತು. ನ್ಯಾಯಾಲಯದ ಮುಂದೆ ಬರುವ ನಾನಾ ಮೊಕದ್ದಮೆಗಳಿಗೆ ಅನ್ವಯಿಸುವಂತೆ ನ್ಯಾಯಾಂಗ ರಚನೆಯಾಗಿರುವುದು ನಿಜ. ಆದರೂ ಅನೇಕ ಸಂದರ್ಭಗಳಿಗೆ ಅನ್ವಯಿಸುವಂತಹ ಶಾಸನಗಳು ಸಿಕ್ಕದೆ, ಶೂನ್ಯ (Vacuum) ಪರಿಸ್ಥಿತಿಯಲ್ಲಿ ನ್ಯಾಯಾಲಯಗಳೇ ಶಾಸನವನ್ನು ರಚಿಸಿ ಅಳವಡಿಸ ಬೇಕಾಗುತ್ತದೆ. ಕಳೆದ ಮುನ್ನೂರು ವರ್ಷಗಳಲ್ಲಿ ಆಂಗ್ಲ ನ್ಯಾಯಾಲಯಗಳು ತೀರ್ಪುಜನ್ಯ ಕಾನೂನಿನ ಮೇಲೆ ಒಂದು ನ್ಯಾಯಿಕ ನವೀನತೆಯ ಉನ್ನತ ಕಟ್ಟಡವನ್ನೇ ಕಟ್ಟಿವೆ.

ನ್ಯಾಯಾಲಯಗಳು ಒಂದು ಶಾಸನದ ಭಾಗಗಳ ಅರ್ಥವಿವರಣೆ ಮಾಡಬೇಕಾದಾಗ, ಇಲ್ಲವೇ ಕಾನೂನು ಅಧಿನಿಯಮಗಳಲ್ಲಿ ಉಪಯೋಗಿಸಿದ ಯಾವುದೇ ಮಾತಿನ ಕಾನೂನುಬದ್ಧ ಅರ್ಥವನ್ನು ಕೊಡುವಾಗ ಪೂರ್ವನ್ಯಾಯ ರೂಪುಗೊಳ್ಳುತ್ತದೆ. ಶಾಸನಗಳ ರಚನೆ ಅತೀ ನಿಧಾನವಾದ ಕ್ರಮ. ಆದ್ದರಿಂದ ಕಾನೂನನ್ನು ವರ್ತಮಾನ ಕಾಲಕ್ಕೆ ಅನ್ವಯಿಸುವುದರ ಅವಶ್ಯಕತೆ ಸ್ಪಷ್ಟವೇ ಆಗಿದೆ. ಹತ್ತೊಂಬತ್ತನೇ ಶತಮಾನದಲ್ಲಿ ಉದಯಿಸಿದ ಒಂದು ಶಾಸನವನ್ನು ಇಪ್ಪತ್ತನೇ ಶತಮಾನದಲ್ಲಿ ನ್ಯಾಯಾಲಯಗಳು ಪರಿಗಣಿಸಬೇಕಾದರೆ ಅವರು ಕೊಡುವ ಅರ್ಥವಿವರಣೆ ಇಪ್ಪತ್ತನೇ ಶತಮಾನಕ್ಕೆ ಅನುಗುಣವಾಗಿರಬೇಕಲ್ಲವೇ ? ಇದಕ್ಕೆ

ಒಂದು ಉದಾಹರಣೆ "ವಾಹನ" ಎಂಬ ಮಾತಿನ ವಿಶ್ಲೇಷಣೆ. ೧೯ನೇ ಶತಮಾನದಲ್ಲಿಲ್ಲದ ನವೀನ ವಾಹನಗಳು ೨೦ನೇ ಶತಮಾನದಲ್ಲಿ ಬಂದಿದೆ. ಈ ಸತ್ಯವನ್ನು ಅಂಗೀಕರಿಸುವುದು ನ್ಯಾಯಾಲಯಗಳ ಕರ್ತವ್ಯ. ಇದು ನ್ಯಾಯಾಲಯಗಳು ಹೊತ್ತಿರುವ ಅಮೂಲ್ಯ ಜವಾಬ್ದಾರಿ. "ತರಕಾರಿ" ಎಂಬ ಸಾಧಾರಣ ಮಾತನ್ನು ತೆಗೆದುಕೊಳ್ಳೋಣ. ಶಾಸನದಲ್ಲಿ ಉಪಯೋಗಿಸಿರುವ ಒಂದು ಸಾಮಾನ್ಯ ಶಬ್ದಕ್ಕೆ ಅರ್ಥವನ್ನು ವಿವರಿಸಲು ನ್ಯಾಯಾಲಯಗಳು ಪ್ರಯತ್ನಿಸಿವೆ. ಇದಕ್ಕೆ ಒಂದು ಉದಾಹರಣೆ ಸರ್ವೋಚ್ಚ ನ್ಯಾಯಾಲಯವು ಕೊಟ್ಟಿರುವ "ತರಕಾರಿ"ಎಂಬ ಪದದ ಅರ್ಥ. ಶಾಸನದಲ್ಲಿ ತರಕಾರಿಯ ಮೇಲೆ ಮಾರಾಟ ಕರವಿಲ್ಲ ಎಂದು ಹೇಳಿದೆ. ಇದಕ್ಕೆ ಕಾರಣ ಏನೆಂದರೆ, ತರಕಾರಿಯು ಬೇಗ ಕೆಡುತ್ತದೆ.

ಭಾರತದ ಸರ್ವೋಚ್ಚ ನ್ಯಾಯಾಲಯವು, ವೀಳ್ಯದ ಎಲೆಯು ತರಕಾರಿಯೇ? ಎಂಬುದಕ್ಕೆ, ಅಲ್ಲ ಎಂದೂ (Ram Avtar Vs. Asst. STO AIR 1961 SC), ನಿಂಬೆಹಣ್ಣು ಮತ್ತು ಮೆಣಸಿನಕಾಯಿ ತರಕಾರಿಯೇ ? ಎಂಬುದಕ್ಕೆ ಹೌದು ಎಂದೂ (SC Mangulu Saheb Vs. STO AIR 1974 SC 390) ಮತ್ತು ತೆಂಗಿನಕಾಯಿ ತರಕಾರಿಯೇ ? ಎಂಬುದಕ್ಕೆ ಅಲ್ಲ (AIR (1985) SC 1644, Chidambaram Vs. Asst. Commr. Madras) ಎಂಬುದನ್ನು ನಿರ್ಧರಿಸಬೇಕಾಯಿತು. ಇದರಿಂದ ನ್ಯಾಯಾಲಯಗಳು, ಹೇಗೆ ಶಾಸನಗಳ ಮುಂದೆ ಬರುವ ಶಬ್ದಗಳ ಅರ್ಥವನ್ನು ವಿವರಿಸುತ್ತವೆ ಎಂದು ನಮಗೆ ತಿಳಿಯುತ್ತದೆ. ಹೀಗೆ ನ್ಯಾಯಾಲಯಗಳ ಮುಂದೆ ಬರುವ ಅನಿಶ್ಚಿತ ಪ್ರಶ್ನೆಗಳನ್ನು ಬಗೆಹರಿಸಲು ಪೂರ್ವ ನಿದರ್ಶನ ಸಿದ್ಧಾಂತ ಬಹುವಾಗಿ ಸಹಾಯಕವಾಗುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯಗಳ ತೀರ್ಪು ಮತ್ತು ಇತರ ಉಚ್ಚ ನ್ಯಾಯಾಲಯಗಳ ತೀರ್ಪು ಆಯಾ ನ್ಯಾಯಾಲಯದ ತೀರ್ಪು ವ್ಯಾಪ್ತಿಯಲ್ಲಿರುವ ಮಿಕ್ಕ ನ್ಯಾಯಾಲಯಗಳೆಲ್ಲವನ್ನೂ ಬದ್ಧಗೊಳಿಸುತ್ತವೆ. ಇದರಿಂದ ಬೇರೆ ಬೇರೆ ನ್ಯಾಯಾಲಯಗಳು ಹಾಕುವ ಸಿದ್ಧಾಂತಗಳಲ್ಲಿ ಒಂದು 'ಏಕರೂಪತೆ' ಇರುತ್ತದೆ. ನ್ಯಾಯಾಲಯಗಳು ಒಂದು ಮೊಕದ್ದಮೆಯ ತೀರ್ಪಿಗಾಗಿ ಶಾಸನಾತ್ಮಕ ಕಾನೂನಿನ ಒಂದು ತತ್ವವನ್ನು ಮುಂದಿಟ್ಟರೆ, ಅದೇ ತತ್ವವು ಪೂರ್ವನ್ಯಾಯವಾಗಿ ಪರಿಣಮಿಸಿ ನಂತರ ಬರುವ ಮೊಕದ್ದಮೆಗಳನ್ನು ನಿರ್ಧರಿಸಲು ಸಹಾಯಕವಾಗುತ್ತದೆ. ಇಂತಹ ಒಂದು ಪೂರ್ವನಿದರ್ಶನವು ತಪ್ಪಾಗಿ ಕಂಡು ಬಂದರೆ ಆಗ ವರಿಷ್ಠ ನ್ಯಾಯಾಲಯಗಳಿಗೆ ಮಾತ್ರ ಅದನ್ನು ಬದಲಿಸುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಶಾಸನ ರಚನೆಯಲ್ಲಿ ನಾವು ಕಾಣುವುದು ನಿರ್ದಿಷ್ಟ ಪಕ್ಷಗಳಿಗೆ ಅನ್ವಯಿಸುವ ತತ್ವಗಳನ್ನಲ್ಲ. ಇವು ಎಲ್ಲ ಪಕ್ಷಗಳಿಗೂ ಅನ್ವಯಿಸಿ ನ್ಯಾಯ ದೊರಕುವಂತೆ ಮಾಡುವ ನಿಯಮಗಳನ್ನು. ಆದುದರಿಂದಲೇ

ಶಾಸನವನ್ನು ಬರೀ ಒಂದು ಅಸ್ಥಿಪಂಜರವೆನ್ನುತ್ತಾರೆ. ಇದಕ್ಕೆ ಜೀವವನ್ನು ತುಂಬುವ ಜವಾಬ್ದಾರಿ ನ್ಯಾಯಾಲಯಗಳಿಗೆ ಸೇರಿದೆ.

ನ್ಯಾಯಾಲಯಗಳು ತಮ್ಮ ಮುಂದಿರುವ ಪಕ್ಷಗಳಿಗೆ ನ್ಯಾಯ ದೊರಕಿಸಲು ಕೆಲವು ಗೂಢ ನಿಯಮಗಳನ್ನು ಇಟ್ಟುಕೊಂಡು ತಮ್ಮ ಮುಂದೆ ಬಂದ ಮೊಕದ್ದಮೆಗಳ ವಿಶಿಷ್ಟ ವಿವರಗಳನ್ನು ಕಂಡುಕೊಂಡು ಅವಕ್ಕೆ ಅನ್ವಯ ಮಾಡುತ್ತವೆ. ಒಟ್ಟಿನಲ್ಲಿ ನಮ್ಮ ಇಂದಿನ ಕಾನೂನು ಪದ್ಧತಿಯು ಸಮಾಜದ ಬೆಳವಣಿಗೆಗೆ ಅನುಗುಣವಾಗಿ ತ್ವರೆಯಿಂದ ಬದಲಾಯಿಸುತ್ತಿಲ್ಲ. ಈ ಪೂರ್ವನ್ಯಾಯದ ಸಂಪೂರ್ಣ ಪ್ರಯೋಜನವನ್ನು ನಾವು ಪಡೆಯಬೇಕಾದರೆ ಉಚ್ಚ ನ್ಯಾಯಾಲಯಗಳು ಕೊಡುತ್ತಿರುವ ನಾನಾ ತೀರ್ಪುಗಳು, ರೂಪಿಸುತ್ತಿರುವ ತತ್ವಗಳು ಇವುಗಳನ್ನು ಎಲ್ಲರಿಗೂ ತಿಳಿಯುವಂತೆ ಪ್ರಕಟಿಸುತ್ತಿರಬೇಕು. ಇದೇ ಕೆಲಸವನ್ನು ಮಾಡಲು ಹಲವು ಅಧಿಕೃತ ಮತ್ತು ಅನಧಿಕೃತ ಪತ್ರಿಕೆಗಳು ಹೊರಬರುತ್ತಿವೆ.

ಮೇಲೆ ನೋಡಿದಂತೆ ನ್ಯಾಯಾಲಯಗಳಿಗೆ ಕಾನೂನನ್ನು ರೂಪಿಸುವ ವಿಶೇಷ ಅಧಿಕಾರವು ಹಿಂದಿನಿಂದ ಬಂದಿದ್ದರೂ ಅದರ ತೀರ್ಪುಗಳನ್ನು ತೆರವು ಮಾಡುವಂತೆ ಕಾನೂನನ್ನು ರಚಿಸುವ ಹಕ್ಕು ಶಾಸಕಾಂಗಕ್ಕೆ ಇದ್ದೇ ಇರುತ್ತದೆ. ಏಕೆಂದರೆ ಒಂದು ರಾಷ್ಟ್ರದಲ್ಲಿ ಅದರ ಶಾಸಕಾಂಗವು ಸಾರ್ವಭೌಮತ್ವದ ಪ್ರತೀಕವಾಗಿದ್ದು, ನ್ಯಾಯಾಲಯಗಳ ಮುಖ್ಯ ಕರ್ತವ್ಯ, ಶಾಸಕಾಂಗದಿಂದ ಹೊರಹೊಮ್ಮಿದ ಕಾನೂನುಗಳನ್ನು ಜಾರಿಗೊಳಿಸುವುದು. ಮಹಮ್ಮದ್ ಅಹಮದ್ ಖಾನ್ ವಿರುದ್ಧ ಶಾ ಬಾನೂ ಬೇಗಂ (Mohammad Ahamad Khan Vs. Sha Banu Begum (1985) 2 SCC 556) ಇದರಲ್ಲಿ ಸರ್ವೋಚ್ಚ ನ್ಯಾಯಾಲಯವು ವಿವಾಹ ವಿಚ್ಛೇದನವಾದ ನಂತರವೂ ತನ್ನ ಗಂಡನಿಂದ ಜೀವನಾಂಶ ಪಡೆಯುವ ಹಕ್ಕು ಭಾರತದಲ್ಲಿ ಮುಸ್ಲಿಂ ಮಹಿಳೆಯರಿಗೆ ಇದೆ ಎಂದು ಒತ್ತಿ ಹೇಳಿತು.

ಆದರೆ ಕೂಡಲೇ ಭಾರತ ಸರ್ಕಾರವು ತ್ವರಿತವಾಗಿ ಒಂದು ಕಾನೂನನ್ನು ಸಿದ್ಧಪಡಿಸಿ ಈ ಮೊಕದ್ದಮೆಯ ತೀರ್ಪಿನ ಅಂಶವು ಬದಲಾಗುವಂತೆ ಮಾಡಿತು. ಇದರಿಂದ ನಾವು ಕಾಣುವುದೇನೆಂದರೆ, ಕಾನೂನು, ಒಂದು ವಿವಾದಕ್ಕೆ ಸಂಬಂಧಪಟ್ಟಂತೆ ನೇರವಾಗಿಲ್ಲದಿದ್ದರೆ ಅಥವಾ ಇದ್ದರೂ ಅದು ಸ್ಪಷ್ಟ ಮತ್ತು ವ್ಯಕ್ತವಾಗಿರದಿದ್ದರೆ ಆ ಮೊಕದ್ದಮೆಗೆ ಸಂಬಂಧಪಟ್ಟಂತೆ ಕಾನೂನನ್ನು ರೂಪಿಸುವ ವಿಶೇಷ ಅಧಿಕಾರವನ್ನು ನ್ಯಾಯಾಲಯಗಳು ಪಡೆದಿವೆ.

ಈ ಬಗ್ಗೆ ಮತ್ತೊಂದು ವಿಶೇಷಾಂಶವನ್ನು ನಾವು ಕಾಣಲೇಬೇಕು. ಶಾಸಕಾಂಗಗಳಿಗೂ ಪರಿಮಿತಿ ಇರಲೇಬೇಕಲ್ಲವೇ ? ಅವುಗಳ ವ್ಯಾಪ್ತಿಗೆ ಒಳಪಡದ

ಅಂಶಗಳ ಮೇಲೆ ಕಾನೂನನ್ನು ಹೊರಡಿಸುವ ಪ್ರಯತ್ನ ಮಾಡಿದರೆ ಅಂತಹ ಕಾನೂನನ್ನೇ ನಿರ್ಜೀವಗೊಳಿಸುವ ಹಕ್ಕು ಶ್ರೇಷ್ಠ ನ್ಯಾಯಾಲಯಗಳಿಗಿದೆ.

ಇದನ್ನು ಆಂಗ್ಲ ಭಾಷೆಯಲ್ಲಿ "ಜುಡಿಷಿಯಲ್ ರೆವ್ಯೂವ್" (Judicial Review) ಎಂದು ಕರೆಯುತ್ತಾರೆ. ನಮ್ಮ ದೇಶದಲ್ಲಿ ಭಾರತದ ಸಂಸತ್ತಿನಿಂದ ಹೊರಬಿದ್ದ ಅನೇಕ ಶಾಸನಗಳು ಅಸಿಂಧು ಎಂದು ತೀರ್ಮಾನಿಸಲಾಗಿದೆ. ಇವುಗಳ ಪಟ್ಟಿಯಲ್ಲಿ ರಾಜ್ಯಾಂಗದ ಬದಲಾವಣೆಗೆ ಪ್ರಯತ್ನಿಸಿದ ಸಂವಿಧಾನದ ಕಾನೂನುಗಳೂ ಸೇರಿವೆ. ಉದಾ : ೪೨ನೇ ತಿದ್ದುಪಡಿ.

ಶಾಸನಾತ್ಮಕ ಕಾನೂನು

ಎಲ್ಲರಿಗೂ ತಿಳಿದಿರುವಂತೆ ಕಾನೂನು ಶಾಸಕಾಂಗದಿಂದ ಜನಿಸುತ್ತದೆ. ಸಂಸತ್ತು ಮತ್ತು ವಿಧಾನಮಂಡಲಗಳು ಈ ಶಾಸನಗಳನ್ನು ರಚಿಸಿ, ಅದರಲ್ಲುಂಟಾಗಬಹುದಾದ ಅಡಚಣೆಗಳನ್ನು ನಿವಾರಿಸಲು ನ್ಯಾಯಾಲಯಗಳಿಗೆ ಒಪ್ಪಿಸುತ್ತವೆ. ಈ ಸಭೆಗಳ ಸದಸ್ಯರುಗಳನ್ನು ಜನತೆಯೇ ಚುನಾಯಿಸುತ್ತದೆ. ಆದುದರಿಂದ ಜನರಿಗೆ ಬೇಕಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಮಾಡುವ ಶಕ್ತಿಯುತ ಕಾನೂನುಗಳನ್ನು ಮುಂದೆ ತರುವ ಆಸಕ್ತಿ ಈ ಸಭೆಗಳಿಗೆ ಇರುತ್ತದೆ. ಸಂಸತ್ತಿಗೆ ಈ ಕಾನೂನು ಸಂಬಂಧವಾದ ವಿಷಯಗಳಿಗೆ ಪೂರ್ಣ ಗಮನ ಕೊಡುವುದಕ್ಕೆ ಹೆಚ್ಚು ಕಾಲಾವಕಾಶವಿರುವುದಿಲ್ಲ. ಆದುದರಿಂದ ಈ ಶಾಸನಗಳು ಬಲು ನಿಧಾನವಾಗಿ ಉದ್ಭವಿಸುವುದನ್ನು ನೋಡುತ್ತೇವೆ. ಅನೇಕ ವೇಳೆ ಇವು ಎಲ್ಲಾ ವಿಧಗಳಲ್ಲೂ ತೃಪ್ತಿಕರವಾಗಿರುವುದಿಲ್ಲ. ಇದಕ್ಕೆ ಕೇವಲ ಒಂದು ನಿದರ್ಶನ ಸಾಕು: ೧೯೬೨ರಲ್ಲಿ ಒಬ್ಬ ಮನುಷ್ಯನು ತನ್ನಿಂದ ಸರ್ಕಾರವು ಕಾನೂನುಬಾಹಿರವಾಗಿ ವಶಪಡಿಸಿಕೊಂಡಿದ್ದ ಚಿನ್ನವನ್ನು ಹಿಂದಕ್ಕೆ ಪಡೆಯಲು ಸರ್ವೋಚ್ಚ ನ್ಯಾಯಾಲಯದ ಮೊರೆಹೊಕ್ಕನು. (Kasturilal Vs. U.P. Govt. AIR 1965 SC 1039) ಸರಕಾರವು ಸಾರ್ವಭೌಮ ಅಧಿಕಾರ ಚಲಾಯಿಸಿ ಚಿನ್ನವನ್ನು ವಶಪಡಿಸಿಕೊಂಡಿತು. ಆದರೆ ಚಿನ್ನವನ್ನು ಹಿಂದಕ್ಕೆ ಕೊಡಲಾಗಲಿಲ್ಲ. ಸರ್ಕಾರವು ಸಾರ್ವಭೌಮ ಅಧಿಕಾರ ಚಲಾಯಿಸಿತ್ತು. ಇದರಿಂದ ವಾದಿಗೆ ಬಹಳ ಅನ್ಯಾಯ ಆದರೂ ನ್ಯಾಯಾಲಯಕ್ಕೆ ಅವನಿಗೆ ಸಹಾಯಮಾಡುವ ಹಕ್ಕು ಇರಲಿಲ್ಲ. ಈ ತೀರ್ಪನ್ನು ಆಂಗ್ಲ ಕಾನೂನು ಅನುಸರಿಸಿಕೊಡಲಾಗಿತ್ತು. ಮುಖ್ಯ ನ್ಯಾಯಾಧೀಶರಾದ ಗಜೇಂದ್ರಗಡಕರ್ ಅವರು ನ್ಯಾಯಾಲಯಕ್ಕೆ ಈ ತರಹದ ಹಕ್ಕನ್ನು ಕೊಡುವ ಶಾಸನವನ್ನು ಸಂಸತ್ತು ಜಾರಿಗೆ ತರಬೇಕು ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಇಲ್ಲಿಯವರೆಗೂ ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಯಾವ ಬಗೆಯ ಪ್ರಯತ್ನವನ್ನೂ ಮಾಡಿಲ್ಲ.

ಆದರೆ ಎನ್. ನಾಗೇಂದ್ರರಾವ್ ವಿರುದ್ಧ ಸ್ಟೇಟ್ ಆಫ್ ಎ. ಪಿ. [N.Nagendra Rao Vs. State of A.P. (1994) 6 SCC 205] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ರೀತಿ ಅಭಿಪ್ರಾಯಪಟ್ಟಿತು. ಕಸ್ತೂರಿಲಾಲ್ ಮೊಕದ್ದಮೆಯಲ್ಲಿ ಅನುಸರಿಸಿದ ತತ್ವವನ್ನು ಯಾವಾಗಲೂ ಅನುಸರಿಸಬೇಕಾಗಿಲ್ಲ. ಬಹಳಷ್ಟು ಮೊಕದ್ದಮೆಗಳಲ್ಲಿ ಸರ್ಕಾರವು ಪೋಲೀಸರ ಅಧಿಕಾರ, ಕ್ರಿಮಿನಲ್ ಪ್ರಕ್ರಿಯೆ ಸಂಹಿತೆಯ ಕೆಲವು ವರ್ಗಗಳನ್ನು ಬಿಟ್ಟು ಇತರ ಯಾವುದೇ ಅಧಿಕಾರಕ್ಕೆ ಈ ತತ್ವವು ಅನ್ವಯವಾಗುವುದಿಲ್ಲ ಎಂದು ಹೇಳಿತು.

ಶಾಸನ : ಇದರ ಅರ್ಥ ವಿವರಣೆ
(Interpretation)

ಶಾಸನಗಳನ್ನು ಅರ್ಥ ಮಾಡಿಕೊಳ್ಳಲು ಅವುಗಳ ಇಂಗಿತ ಮತ್ತು ತಾತ್ಪರ್ಯಗಳನ್ನು ಅರಿಯಬೇಕು. ಶಾಸನದ ಉದ್ದೇಶವನ್ನು ಶಾಸನ ಬಳಸಿರುವ ಪದಗಳಿಂದ ಸಂಗ್ರಹಿಸಬೇಕು. ಆಗ ಮೊಕದ್ದಮೆಗಳಲ್ಲಿ ಅದನ್ನು ಅನ್ವಯಿಸಬಹುದು. ಇಂತಹ ವಿಷಯಗಳಲ್ಲಿ ನ್ಯಾಯಾಲಯಗಳು ಶಾಸನ ಕ್ರಮದ ಕೊರತೆ ಅಥವಾ ಲೋಪಗಳ ವಿಚಾರದಲ್ಲಿ ಮರುಗುತ್ತವೆ ಮತ್ತು ಸಾಕಷ್ಟು ಅಂಶ ವಿಚಾರಗಳನ್ನು ನೀಡಲಾಗಿರದ ಶಾಸನಕ್ಕೆ ತಕ್ಕ ರೂಪವನ್ನು ಕೊಡಲು ಅನೇಕ ಬಾರಿ ಅಸಮರ್ಥವಾಗಿರುತ್ತದೆ. ಆದರೆ ಶಾಸನಸಭೆಗಳಿಗೆ ಅರ್ಥಬದ್ಧವಾದ ಮಾತುಗಳನ್ನು ಉಪಯೋಗಿಸಿ ಶಾಸನಗಳನ್ನು ರಚಿಸಲು ಬೇಕಾದಷ್ಟು ಕಾಲಾವಕಾಶವಿರುವುದಿಲ್ಲ ಮತ್ತು ಅದಕ್ಕೆ ಬೇಕಾದಷ್ಟು ಗಮನವನ್ನೂ ಕೊಟ್ಟಿರುವುದಿಲ್ಲ ಎಂಬ ಕೊರತೆ ನ್ಯಾಯಾಲಯಗಳಿಗಿದೆ. ಈ ಕೊರತೆಯ ಬಗ್ಗೆ ನ್ಯಾಯಾಲಯಗಳು ತಮ್ಮ ಆತಂಕವನ್ನು ಅನೇಕ ಬಾರಿ ವ್ಯಕ್ತಪಡಿಸಿವೆ.

ಶಾಸನದಲ್ಲಿ ಉಪಯೋಗಿಸಿರುವ ಮಾತುಗಳಿಂದ ಸಂಪೂರ್ಣ ಅರ್ಥ ವಿವರಣೆ ದೊರಕದಿದ್ದರೆ ಅದರ ತತ್ವವನ್ನು ಕಂಡುಹಿಡಿಯಲು ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಮೇಲೆ ಹೇಳಿದಂತೆ ಮೊದಲನೆಯದು ಶಬ್ದಗಳ ಅರ್ಥ ಸ್ವಯಂವೇದ್ಯವಾಗಿದೆಯೇ ಎಂದು ನೋಡುವುದು. ಈ ಅರ್ಥದಲ್ಲಿ ಯಾವ ವಿಧವಾದ ಸಂದೇಹವೂ ಇಲ್ಲದಿದ್ದರೆ ಆ ನಿಯಮವು ಎಷ್ಟೇ ಅಸಮರ್ಪಕವಾಗಿದ್ದರೂ ಅದನ್ನು ಅನ್ವಯಿಸಲೇಬೇಕು. ಈ ಸೂತ್ರವನ್ನು ಅನುಸರಿಸಿರುವ ಹಲವಾರು ಮೊಕದ್ದಮೆಗಳಲ್ಲಿ ನಾರಾಯಣಸ್ವಾಮಿ ಮತ್ತು ಪನ್ನೀರಸೆಲ್ವಂ ಇವರ ನಡುವಿನ ವಿವಾದವೂ ಒಂದಾಗಿದೆ (Narayana Swamy Vs. Panneerselvam AIR 1973 SC 569). ತಮಿಳುನಾಡಿನಲ್ಲಿ ವಿಧಾನಸಭೆಯ ಪದವೀಧರ ಮತ ಕ್ಷೇತ್ರಕ್ಕೆ ಒಬ್ಬ ಮೆಟ್ರಿಕ್ ವಿದ್ಯಾರ್ಥಿಯನ್ನು

ಚುನಾಯಿಸಿದರು. ಇದು ಸರಿಯಲ್ಲವೆಂದು ನಿರ್ಧರಿಸ(ಲು)ಬೇಕೆಂದು ಕೆಲವು ಮತದಾರರು ಶ್ರೇಷ್ಠ ನ್ಯಾಯಾಲಯದ ಮುಂದೆ ದಾವೆ ಹೂಡಿದರು. ಆಗ ನ್ಯಾಯಾಲಯವು ಶಾಸನದಲ್ಲಿ ಇರುವ ಶಬ್ದಗಳನ್ನು ಗಮನಿಸಿತು. ಇದರಲ್ಲಿ ಕಾನೂನು ಮತದಾರರ ಅರ್ಹತೆಯನ್ನು ಗೊತ್ತುಪಡಿಸಿದೆಯೇ ಹೊರತು ಉಮೇದುವಾರರದ್ದಲ್ಲ. ಆದುದರಿಂದ ಆ ಮೆಟ್ರಿಕ್ ವಿದ್ಯಾರ್ಥಿಯ ಚುನಾವಣೆಯನ್ನು ಸರಿಯಲ್ಲ ಎನ್ನುವ ಅರ್ಹತೆ ಯಾವ ನ್ಯಾಯಾಲಯಕ್ಕೂ ಇಲ್ಲ ಎಂದು ನಿರ್ಧರಿಸಿತು (Literal Interpretation).

ಆದರೆ ಕೇಶವ್‌ಜೀ ರಾವ್‌ಜೀ ವಿರುದ್ಧ ಸಿ.ಐ.ಟಿ. ೧ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ ಈ ರೀತಿ ಹೇಳಿದೆ (Keshavji Raoji Vs. CIT (1990)2 SCC 231). ಶಾಸನದ ಉದ್ದೇಶ ತಿಳಿದುಕೊಂಡು ಅದು ಸ್ಪಷ್ಟ ಮತ್ತು ಸರಿಯಾದ ರೀತಿಯಲ್ಲಿದ್ದರೆ ಅದನ್ನೇ ಅನುಸರಿಸಬೇಕು, ಕೃತಕ ಅರ್ಥಾನ್ವಯ ನಿಯಮಕ್ಕೆ ಅರ್ಥ ವಿವರಣೆಯಷ್ಟು ಪ್ರಾಮುಖ್ಯತೆಯನ್ನು ಕೊಡಬಾರದು ಎಂದು ಹೇಳಿದ್ದಾರೆ.

ಶಾಸನದ ಪದಗಳು ಅಸ್ಪಷ್ಟವಾಗಿದ್ದು ಒಂದಕ್ಕಿಂತ ಹೆಚ್ಚು ಅರ್ಥ ಅಥವಾ ಅಭಿಪ್ರಾಯ ಕೊಡುವಂತಿದ್ದರೆ ನ್ಯಾಯಾಲಯಗಳು ಒಂದು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಆಗ ಎರಡನೇ ನಿಯಮವನ್ನು ಅನುಸರಿಸುತ್ತಾರೆ. ಇಂತಹ ಸಂದರ್ಭದಲ್ಲಿ ನ್ಯಾಯಾಲಯಗಳು ಕೊಡುವ ತೀರ್ಪು ತರ್ಕಬದ್ಧವಾಗಿರಬೇಕು ಮತ್ತು ಶಾಸನದ ಚರಿತ್ರೆಗೆ ಅನುಗುಣವಾಗಿರಬೇಕು. ನ್ಯಾಯಾಲಯವು ಅನುಸರಿಸಬಹುದಾದ ಒಂದು ನಿಯಮ "ತೊಡಕು ಅಥವಾ ಬಾಧೆ ಪರಿಹಾರ ನಿಯಮ" (Mischief Rule). ಇದು ಶಾಸಕರು ಒಂದು ಕಾನೂನನ್ನು ಯಾವ ಕಾರಣಕ್ಕೋಸ್ಕರ ರಚಿಸಿದರು, ಯಾರ ಹಿತವನ್ನು ರಕ್ಷಿಸಲು ರಚಿಸಿದರು, ಅಂತಹವರು ಪಡುತ್ತಿದ್ದ ಕಷ್ಟಗಳೇನು ಎಂಬುದನ್ನು ಪರಿಗಣಿಸುತ್ತದೆ. ಉದಾಹರಣೆಗೆ ಬಾಡಿಗೆದಾರರು, ನೌಕರರು ಇಲ್ಲವೇ ಸಾಲಗಾರರು, ಇವರ ಹಿತಕ್ಕಾಗಿ ಮತ್ತು ಅವರ ಹಕ್ಕು ಬಾಧ್ಯತೆಗಳನ್ನು ಕಾದಿಡಲು ಶಾಸನಗಳಿವೆ. ಇಂತಹ ಶಾಸನಗಳನ್ನು ಅನ್ವಯಿಸುವಾಗ ಜನರು ಪಡುತ್ತಿದ್ದ ಕಷ್ಟಗಳೇನು ? ಅದನ್ನು ನಿವಾರಿಸಲು ಶಾಸಕಾಂಗಗಳು ಚಲಾಯಿಸುವ ಕಾನೂನಿನ ಇಂಗಿತವೇನು ? ಇದನ್ನೆಲ್ಲವನ್ನು ಪರಿಗಣಿಸಿ, ಕಾನೂನಿಗೆ ಅರ್ಥ ಕಲ್ಪಿಸುತ್ತಾರೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ನ್ಯಾಯಾಲಯಗಳು ಕೊಡುವ ಅರ್ಥ, ತೊಡಕುಗಳ ನಿವಾರಣೆಗೆ ಪೂರಕವಾಗಿರುತ್ತದೆ.

ಇದೇ ರೀತಿ "ಸುವರ್ಣ ನಿಯಮ" (Golden Rule)ವನ್ನು ಗಮನಿಸೋಣ. ಇದನ್ನು ನ್ಯಾಯಾಲಯಗಳಲ್ಲಿ ಬಹಳ ಸಲ ಉಪಯೋಗಿಸುತ್ತಾರೆ. ಇದರ ಪ್ರಕಾರ ಶಾಸನದ ಅಸ್ತಿತ್ವ ಮತ್ತು ಉಪಬಂಧಗಳು ಈ ನಿಯಮಗಳೊಡನೆ ಹೊಂದಿಕೆಯಾಗುವಂತೆ ಮಾಡುತ್ತಾರೆ. ಉದಾಹರಣೆಗೆ ಒಂದು ಶಾಸನವು ಮೃತನ ಮಕ್ಕಳಿಗೆ ಪ್ರಯೋಜನವಾಗುವಂತೆ ರಚಿತವಾಗಿದ್ದರೆ ನ್ಯಾಯಾಲಯಗಳು ಇದರಲ್ಲಿ ಬರುವ ಮಕ್ಕಳು ಎಂಬ ಮಾತಿಗೆ ಕೇವಲ "ಔರಸ"ಮಕ್ಕಳು ಎಂದು ಅರ್ಥ ಕೊಟ್ಟಿದೆ. ಇದಕ್ಕೆ ಕಾರಣ, ಸಮಾಜದಲ್ಲಿ ಹಿಂದಿನಿಂದಲೂ ವೈವಾಹಿಕ ಜೀವನಕ್ಕೆ ಕೊಟ್ಟಿರುವ ಪ್ರಾಮುಖ್ಯತೆ.

ನ್ಯಾಯಾಲಯಗಳು ಆರ್ಥಿಕ ಶಾಸನಗಳನ್ನು ಪರಿಗಣಿಸುವ ದೃಷ್ಟಿಯೇ ಬೇರೆ. ಅದರಲ್ಲಿ ಬರುವ ಮಾತುಗಳಿಗೆ ಅರ್ಥ ವಿವರಣೆಯನ್ನು ಬಹು ಖಚಿತವಾಗಿ ಕೊಡುವುದು. ಈ ಅರ್ಥ ವಿವರಣೆಯನ್ನು ಕೊಡುವಾಗ ಪ್ರಜೆಗಳಿಗೇ ಹೆಚ್ಚು ಪ್ರಯೋಜನವು ಲಭಿಸುವಂತೆ ಇರುತ್ತದೆ. ಇಂತಹ ಮೊಕದ್ದಮೆಗಳಲ್ಲಿ ನ್ಯಾಯಾಲಯಗಳು ಅನುಸರಿಸುತ್ತಿರುವ ಮುಖ್ಯ ಸೂತ್ರವೆಂದರೆ ತಮ್ಮ ತೀರ್ಪು, ನಿಯಮ, ಅಧಿನಿಯಮಗಳ ಇಂಗಿತಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುವುದು.

ಪ್ರಕೃತಿದತ್ತವಾದ ಕಾನೂನು

(Natural Law)

ಕಾನೂನಿನ ಮೂಲಗಳಲ್ಲಿ ಕೊನೆಯದೆಂದರೆ ಪ್ರಾಕೃತಿಕ ಕಾನೂನು. ಹಿಂದಿನ ಕೆಲವು ನ್ಯಾಯಶಾಸ್ತ್ರ ಪುಸ್ತಕಗಳು ಇದಕ್ಕೆ ಪ್ರಾಧಾನ್ಯ ಕೊಟ್ಟಿಲ್ಲ. ಇದಕ್ಕೆ ಉದಾಹರಣೆಯಾಗಿ ಒಂದು ಮೊಕದ್ದಮೆಯ ನಿದರ್ಶನವನ್ನು ಕೊಡಬಹುದು. ನ್ಯಾಷನಲ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ವಿರುದ್ಧ ರಾಮಕೃಷ್ಣ (National Textile Workers Union Vs. Ramakrishan AIR 1983 SC 75). ಒಂದು ಕಂಪನಿ ತನ್ನ ವ್ಯವಹಾರವನ್ನು ನಿಲ್ಲಿಸುವ ಬಗ್ಗೆ ಮೊಕದ್ದಮೆಯೊಂದನ್ನು ನ್ಯಾಯಾಲಯದ ಮುಂದೆ ತಂದಿತು. ಆಗ ಆ ಕಂಪನಿಗಳ ಕೆಲಸಗಾರರ ಸಂಘವು ನ್ಯಾಯಾಲಯ, ಇಂತಹ ಸಂದರ್ಭದಲ್ಲಿ ಕೆಲಸಗಾರರ ಅಹವಾಲನ್ನು ಕೇಳಿ ತಿಳಿದುಕೊಳ್ಳಬೇಕೆಂದು ಒತ್ತಾಯ ಮಾಡಿ, ಸರ್ವೋಚ್ಚ ನ್ಯಾಯಾಲಯದ ಮೊರೆ ಹೊಕ್ಕಿತು. ಕೆಲಸಗಾರರಿಗೆ ಈ ಹೇಳಿಕೆ ಕೊಡುವ ಹಕ್ಕಿದೆಯೇ ಎಂಬ ಪ್ರಶ್ನೆ ಎದ್ದಿತು. ಭಾರತದ ಕಂಪನಿಯ ಅಧಿನಿಯಮ ಬಹಳ ವಿಸ್ತಾರವಾಗಿದ್ದರೂ ಸಹ ಅದರಲ್ಲಿ ಈ ಬಗ್ಗೆ ಯಾವ ಉಪಬಂಧವಾಗಲೀ, ಸೂಚನೆಯಾಗಲೀ ಇಲ್ಲ. ಈ ಬೃಹತ್ ಕಾಯಿದೆಯಲ್ಲಿ ೬೫೦ಕ್ಕೂ ಮಿಗಿಲಾದ ವರ್ಗಗಳಿವೆ. ಆಗ ಸರ್ವೋಚ್ಚ

ನ್ಯಾಯಾಲಯದ ಸಹಾಯಕ್ಕೆ ಪ್ರಾಕೃತಿಕ ಕಾನೂನು ಮತ್ತು ಪ್ರಾಕೃತಿಕ ತತ್ವ ಇವುಗಳು ಬಂದವು. ಇವುಗಳನ್ನು ಅವಲಂಬಿಸಿ ನ್ಯಾಯಾಲಯವು ಕೆಲಸಗಾರರ ಅಹವಾಲನ್ನು ಕೇಳಬಹುದು ಎಂಬ ಹಕ್ಕನ್ನು ಅವರಿಗೆ ಕೊಟ್ಟಿತು. ಇದರ ಮೂಲ "ಪ್ರತಿಪಕ್ಷವನ್ನು ವಿಚಾರಿಸತಕ್ಕದ್ದು ಅಂದರೆ ವಿರುದ್ಧ ಪಕ್ಷವನ್ನು ವಿಚಾರಿಸಬೇಕು" (Audi alteram partem) ಎಂಬ ತತ್ವ. ಪ್ರಾಕೃತಿಕ ಕಾನೂನಿನ ಅತಿ ಮುಖ್ಯ ಪಾತ್ರವನ್ನು ಈ ಮೊಕದ್ದಮೆಯು ತಿಳಿಸುತ್ತದೆ. ಪ್ರತಿಯೊಂದು ಸನ್ನಿವೇಶದಲ್ಲಿಯೂ ಪ್ರಾಕೃತಿಕ ಕಾನೂನಿನ ಚಲಾವಣೆಯ ಅಗತ್ಯವನ್ನು ನ್ಯಾಯಾಲಯಗಳು ಕಂಡುಕೊಳ್ಳಲು ಈಚೆಗೆ ಪ್ರಯತ್ನಿಸುತ್ತಿವೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಅವರು ಕ್ರೈಪಾಕ್ ವಿರುದ್ಧ ಯೂನಿಯನ್ (Kraipak Vs. Union AIR 1970 SC 150)ಮೊಕದ್ದಮೆಯಲ್ಲಿ ಪ್ರಾಕೃತಿಕ ಕಾನೂನಿನ ತತ್ವಗಳು ದೇಶದ ಸಾಮಾನ್ಯ ಕಾನೂನಿಗೆ ಒತ್ತಾಸೆ ಕೊಡುತ್ತದೆಯೇ ಹೊರತು ಬದಿಗೊತ್ತುವುದಿಲ್ಲ ಎಂದು ಹೇಳಿದ್ದಾರೆ. ಅಂದಿನಿಂದ ಇಂದಿನವರೆಗೆ ನ್ಯಾಯಾಲಯಗಳು ಈ ತತ್ವವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿವೆ. ಇದು ಮೇನಕಾಗಾಂಧಿ ಮತ್ತು ಇತರ ಮೊಕದ್ದಮೆಗಳಲ್ಲಿ (Maneka Gandhi Vs. Union of India (1978)1 SCC 248) ಕಾಣಬರುತ್ತದೆ. ಈ ತತ್ವಗಳು ಪ್ರಾಕೃತಿಕ ಕಾನೂನಿನಿಂದ ಉತ್ಪನ್ನವಾಗಿವೆ. ಇದು ಗ್ರೀಸ್ ದೇಶದ ದಾರ್ಶನಿಕ ಜೀನೋನಸ್ಟಾಯಿಕ್ ತತ್ವ ಮತ್ತು ಸೆಂಟ್ ಅಗಸ್ತನೀಸ್, ಸೆಂಟ್ ತಾಮಸ್ ಅಕ್ವಿನಾಸ್ ಮತ್ತು ಇನ್ನಿತರ ಮಧ್ಯಕಾಲದ ವಿದ್ವಾಂಸರುಗಳ ತತ್ವಗಳು ಈ ಪ್ರಕೃತಿದತ್ತ ಕಾನೂನಿಗೆ ಮೂಲ. ಇಂಗ್ಲೀಷ್ ದೇಶೀಯ ಪದ್ಧತಿಯು ಬಹಳ ಹಿಂದಿನಿಂದ ಈ ತತ್ವವನ್ನು ಅನುಸರಿಸುತ್ತಿದೆ ಎಂದು ಆಂಗ್ಲರು ಹೆಮ್ಮೆಪಡುತ್ತಾರೆ. ಬಹಳ ಹಿಂದೆ ಅಂದರೆ ಕ್ರಿ. ಶ. ೧೬೧೦ ರಲ್ಲಿ ಡಾ.ಬೊನ್‌ಹಾಮ್ಸ್‌ನ (Dr. Bonham's Case) ಮೊಕದ್ದಮೆಯಲ್ಲಿ ಪಕ್ಷಪಾತ ವಿರುದ್ಧ ಕಾನೂನನ್ನು ಉಪಯೋಗಿಸಿದ್ದರು. ಮುಖ್ಯ ನ್ಯಾಯಾಧೀಶ ಕೋಕ್ ಹೀಗೆ ಹೇಳಿದರು: ಒಂದು ಸಮುದಾಯ ಕೊಟ್ಟ ತೀರ್ಪನ್ನು ಬದಿಗೊತ್ತಿ ಪಕ್ಷಪಾತವು ಶೂನ್ಯ ಎಂದು ಪರಿಗಣಿಸಿದರು. ಯಾಕೆಂದರೆ ಈ ಮೊಕದ್ದಮೆಯಲ್ಲಿ ಸಮುದಾಯವು ಫಿರ್ಯಾದಿದಾರನಂತೆ ವರ್ತಿಸಿತ್ತು.

ರೆಕ್ಸ್ ವಿರುದ್ಧ ಕೇಂಬ್ರಿಡ್ಜ್ ಯೂನಿವರ್ಸಿಟಿ (Rex Vs. Cambridge University Exparte Bentley) ಈ ಮೊಕದ್ದಮೆಯಲ್ಲಿ ಬೆಂಟ್ಲಿ ಎಂಬಾತನಿಗೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು ನೀಡಿದ್ದ ಪದವಿಯನ್ನು ಏಕಪಕ್ಷೀಯವಾಗಿ ಹಿಂತೆಗೆದುಕೊಂಡಿತು. ಆತನು ನ್ಯಾಯಾಲಯದ ಮೊರೆ ಹೊಕ್ಕ. ಅದರಲ್ಲಿನ ತೀರ್ಪಿನ ಸಾರಾಂಶವೇನೆಂದರೆ, ಪ್ರತಿಯೊಂದು ಕಾರ್ಯದಲ್ಲಿಯೂ ಒಬ್ಬ

ಮನುಷ್ಯನ "ವಿರುದ್ಧ" ಏನಾದರೂ ಮಾಡಲು ಹೊರಟಲ್ಲಿ ಅವನಿಗೆ ಪೂರ್ವಭಾವಿಯಾಗಿ ತಿಳಿವಳಿಕೆ ಕೊಟ್ಟು, ಅವನಿಗೆ ಪೂರ್ಣ ವಿವರಣೆ ನೀಡುವ ಅವಕಾಶವನ್ನು ಕೊಡಲೇಬೇಕು. ಇಲ್ಲದಿದ್ದರೆ ಆ ಕಾರ್ಯವೆಲ್ಲವೂ ಅಸಿಂಧು ಆಗುತ್ತದೆ. ಕಾನೂನುಗಳ ಅರ್ಥ, ಕೇವಲ ಶಾಸನಗಳ ಮಾತುಗಳನ್ನೇ ಅವಲಂಬಿಸಿಲ್ಲ. ಇದರ ಸಂಬಂಧದಲ್ಲಿ ಪೂರ್ವ ನಿದರ್ಶನಗಳನ್ನು ಮನಸ್ಸಿನಲ್ಲಿಡಬೇಕು. ಕೆಲವು ವೇಳೆ ಸಂಪ್ರದಾಯ ಮತ್ತು ರೂಢಿಗಳು ನಮಗೆ ಮಾರ್ಗದರ್ಶನವಾಗಿರುತ್ತವೆ. ಮತ್ತೆ ಕೆಲವು ಸಲ ಸ್ವಾಭಾವಿಕ ಕಾನೂನಿನ ಸಹಾಯದಿಂದ ಕಠಿಣ ವಿವರಗಳನ್ನು ಬಗೆಹರಿಸಬಹುದು. ಕಾನೂನಿನಿಂದ ಆವಿರ್ಭವಿಸುವ ಗೊಂದಲಗಳನ್ನು ಬಗೆಹರಿಸಲು ಶಾಸನಗಳ ಇಚ್ಛೆ, ಅದನ್ನು ತರುವ ಕಾನೂನು ಮತ್ತು ಅದರ ಹಿನ್ನೆಲೆ, ಚರಿತ್ರೆ ಇವುಗಳು ಬಹಳ ಸಹಾಯಕವಾಗುತ್ತವೆ.

ಎಸ್. ಎನ್. ಮುಖರ್ಜಿ ವಿರುದ್ಧ ಯೂನಿಯನ್ ಆಫ್ ಇಂಡಿಯಾ (S.N.Mukherji Vs. Union of India AIR 1990 SC 1984) ಒಬ್ಬ ಆಡಳಿತ ಅಧಿಕಾರಿಯು ನ್ಯಾಯಬದ್ಧವಾದ ಕಲಸವನ್ನು ಮಾಡಲು ಅವನು ಸ್ವಭಾವಸಿದ್ಧ ಕಾನೂನನ್ನು ಅನುಸರಿಸಬೇಕು. ಅಂದರೆ ಬಾಧಿತ ಪಕ್ಷಕ್ಕೆ ಅವರ ತೊಂದರೆ ಹೇಳಿಕೊಳ್ಳಲು ಯುಕ್ತ ಅವಕಾಶ ಮಾಡಿಕೊಡಬೇಕು. ಯಾವುದೇ ಪಕ್ಷಪಾತ ಅಥವಾ ದುರ್ಭಾವನೆ ಇರಬಾರದು. ಅಧಿಕಾರಿಯ ತೀರ್ಮಾನವು ಸ್ಪಷ್ಟವಾಗಿರಬೇಕು. ಅವನು ಅದನ್ನು ದಾಖಲು ಮಾಡಿಕೊಂಡಿರಬೇಕು. ಅಂದರೆ ಪ್ರಕೃತಿದತ್ತ ಕಾನೂನಿನ ತತ್ವವನ್ನು ಆಡಳಿತ ಅಧಿಕಾರಿಯು ಮಾಡುವ ತೀರ್ಮಾನಗಳಿಗೂ ವಿಸ್ತರಿಸಲಾಗಿದೆ.

****

ಭಾಗ - ೩

ಕಾನೂನು ಸಮ್ಮತ ಅಸ್ತಿತ್ವ

(Legal Entities)

ಕಾನೂನಿನ ಮುಖ್ಯ ಉದ್ದೇಶವೆಂದರೆ, ಸಮಾಜದಲ್ಲಿ, ಜನರ ಬಾಳುವಿಕೆಯಲ್ಲಿ ನೀತಿ ನಿಯಮಗಳು ಇರಬೇಕು; ಶಾಂತಿ ಸೌಹಾರ್ದಗಳಿರಬೇಕು; ಒಮ್ಮತ ಸಮ್ಮತಗಳಿರಬೇಕು ಎಂಬುದು. ಆದುದರಿಂದ ಶಾಸನಗಳ ರಚನೆ ಜನಗಳಿಗೋಸ್ಕರ ಇಲ್ಲವೇ ಮಾನವರಿಗೆ ಸಮವೆಂದು ಪರಿಗಣಿಸಲ್ಪಡುವ, ಇತರ ಅಸ್ತಿತ್ವಗಳಿಗೋಸ್ಕರ. ಕಾನೂನು ಮಾನವರಿಗೆ ಹಕ್ಕುಗಳನ್ನು ಕೊಡುವುದರ ಜೊತೆಗೆ ಕರ್ತವ್ಯಗಳನ್ನೂ ನಿಯಮಿಸುತ್ತದೆ. ಕಾನೂನು ನಿಗದಿ ಮಾಡಿರುವ ಕರ್ತವ್ಯಪಾಲನೆಗೆ ಧಕ್ಕೆ ಬಂದಿತೆಂದರೆ ಅರ್ಜಿದಾರನ ಕೋರಿಕೆಯ ಮೇರೆಗೆ ನ್ಯಾಯಾಲಯಗಳು ಕಾನೂನು ಸಮ್ಮತ ಕರ್ತವ್ಯಗಳನ್ನು ಜಾರಿಗೆ ತರಬೇಕಾಗುತ್ತದೆ. ಎಲ್ಲಿ ನ್ಯಾಯಾಲಯಗಳು ವಾದಿಯ ಅರಿಕೆ ಹೇಳಿಕೆಗಳ ಸತ್ಯತೆಯನ್ನು ತಾವೇ ತನಿಖೆ ಮಾಡುವುದಿಲ್ಲವೋ ಆ ವ್ಯಾಜ್ಯಗಳ ಗೆಲುವು ಅಥವಾ ಸೋಲು ಆಯಾ ಮೊಕದ್ದಮೆಗಳಲ್ಲಿ ಪಕ್ಷಗಳು ಒದಗಿಸಿದ ಸಾಕ್ಷ್ಯದ (ಆಧಾರದ)ಮೇಲೆ ಅವಲಂಬಿತವಾಗಿರುತ್ತದೋ ಅಂತಹ ವ್ಯಾಜ್ಯ ವ್ಯವಹಾರ ಪದ್ಧತಿಯನ್ನು "ಪ್ರತಿವಾದ ಪದ್ಧತಿ" ಎಂದು ಕರೆಯುತ್ತಾರೆ. ಇದು ನಮ್ಮ ದೇಶದಲ್ಲಿ ಸಮ್ಮತ. ಒಬ್ಬ ವ್ಯಕ್ತಿಯು ಒಂದು ಪ್ರಾಣಿಯ ಮೇಲೆ ಹಲ್ಲೆ ಮಾಡಿದರೆ ಅಥವಾ ಅತ್ಯಧಿಕ ಹಾನಿ ಉಂಟುಮಾಡಿದರೆ, ಈಗ ಅದು ಕಾನೂನಿನ ಮೇರೆಗೆ ದಂಡನೀಯ ಅಪರಾಧ (Offence Punishable by law : ವರ್ಗ ೪೨೮, ೪೨೯, ಐ.ಪಿ.ಸಿ.) ಆದರೆ ಅದನ್ನು ಪ್ರಾಣಿಯ ಯಾವುದೇ ಹಕ್ಕಿನ ಉಲ್ಲಂಘನೆ ಎಂದು ಪರಿಗಣಿಸಲಾಗುವುದಿಲ್ಲ. ಇದು ಮಾನವೀಯ ಯೋಗ್ಯ ನಡವಳಿಕೆಯ ಮೇಲೆ ಹಲ್ಲೆ. ಏಕೆಂದರೆ ಕಾನೂನಿನ ದೃಷ್ಟಿಯಲ್ಲಿ ಪ್ರಾಣಿಗಳಿಗೆ ಯಾವುದೇ ಹಕ್ಕು ಅಥವಾ ಕರ್ತವ್ಯಗಳಿಲ್ಲ. ಅವು ಕಾನೂನಿನ ವಸ್ತುಗಳಲ್ಲ. ಆದರೆ ಕಾನೂನು ಪ್ರಾಣಿಗಳನ್ನು ರಕ್ಷಿಸುತ್ತದೆ. ಪ್ರಾಚೀನ ಸ್ಮಾರಕಗಳೂ ಕಾನೂನಿನ ರಕ್ಷಣೆಗೆ ಒಳಪಟ್ಟಿವೆ.

ಕಾನೂನಿನ ನಿಜವಾದ ವಸ್ತು- ವಿಷಯ, "ವ್ಯಕ್ತಿಗಳು" ಮತ್ತು ಅದರಲ್ಲಿಯೂ ಸ್ವಾಭಾವಿಕ ವ್ಯಕ್ತಿ. ಈ ಸಂದರ್ಭದಲ್ಲಿ ಒಂದು ಮುಖ್ಯವಾದ ವಿಷಯವನ್ನು ನಾವು ಗಮನಿಸಬೇಕು. ಕಾನೂನಿನ ದೃಷ್ಟಿಯಲ್ಲಿ ಒಂದು ಮಗು ದೈಹಿಕವಾಗಿ ಹುಟ್ಟುವುದಕ್ಕೆ ಮುಂಚೆಯೇ ಕಾನೂನು ಅದರ ಅಸ್ತಿತ್ವವನ್ನು ಒಪ್ಪುತ್ತದೆ. ಕಾನೂನು ಹೇಳುವುದೇನೆಂದರೆ, ತಾಯಿಯ ಗರ್ಭದಲ್ಲಿರುವಾಗಲೇ ಮಗುವನ್ನು ವ್ಯಕ್ತಿಯೆಂದು

ಭಾವಿಸಬೇಕು. ಮಗು ಜೀವಂತವಾಗಿ ಹುಟ್ಟಿದರೆ ಮನೆತನದ ಸ್ವತ್ತಿನಲ್ಲಿ ಭಾಗಿಯಾಗಿರುತ್ತದೆ. ಇದರಿಂದ ಸಲ್ಲಬಹುದಾದ ಎಲ್ಲಾ ಹಕ್ಕುಗಳಿಗೂ ಅದು ಬಾಧ್ಯಸ್ತವಾಗುತ್ತದೆ. ಶಿಶುವು ಜನಿಸುವ ಮುಂಚೆ ತಂದೆಯು ಮರಣ ಹೊಂದಿದರೆ ಅದರ ತಂದೆಯ ಆಸ್ತಿಯಲ್ಲಿ ಆ ಮಗುವಿಗೂ ಭಾಗ ಉಂಟು. ಮಗು ಹುಟ್ಟಿದ ಕೆಲವೇ ಕ್ಷಣದಲ್ಲೇ ಮರಣ ಹೊಂದಿದರೆ ಹುಟ್ಟಿದ ಸಮಯದಲ್ಲಿ ಅದರ ಪಾಲು ಅದಕ್ಕೆ ನಿಹಿತಗೊಳ್ಳುತ್ತದೆ. ನಂತರ ಆ ಭಾಗ ಆ ಮಗುವಿನ ವಾರಸುದಾರರಿಗೆ ಸೇರುತ್ತದೆ.

ಈ ಕಾನೂನುಸಮ್ಮತ ವ್ಯಕ್ತಿತ್ವ ವ್ಯಕ್ತಿಯು ಬದುಕಿರುವವರೆಗೆ ಮಾತ್ರ ಇರುತ್ತದೆ. ವ್ಯಕ್ತಿಗಳು ಕಾಲವಾದ ಘಳಿಗೆಯಿಂದಲೇ ತಮ್ಮ ಕಾನೂನುಸಮ್ಮತ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾರೆ. "ಶವವು ಆಸ್ತಿಯಲ್ಲ ಮತ್ತು ಶವಕ್ಕೆ ಆಸ್ತಿಯೂ ಇರುವುದಿಲ್ಲ". ಸಾಯುವ ಸಮಯದಲ್ಲಿ ವ್ಯಕ್ತಿ ಹೊಂದಿದ್ದ ಹಕ್ಕು ಮತ್ತು ಆಸ್ತಿಗಳು ಸತ್ತ ಘಳಿಗೆಯಿಂದ ಅದರ ವಾರಸುದಾರರಿಗೆ ಯಾವುದೇ ಕಾನೂನು ಆದೇಶವಿಲ್ಲದೇ ವರ್ಗಾಯಿಸಲ್ಪಡುತ್ತದೆ. ಕಾನೂನು ಒಡೆತನವಿಲ್ಲದ ಸ್ವತ್ತುಗಳು ಇರುವುದನ್ನು ಒಪ್ಪುವುದಿಲ್ಲ. ಆದ್ದರಿಂದ ಒಂದು ಸ್ವತ್ತಿನ ಮಾಲೀಕನು ಮರಣ ಹೊಂದಿದ ತಕ್ಷಣ ಆ ಸ್ವತ್ತಿಗೆ ಬೇರೆ ವಾರಸುದಾರರು ಒಡೆತನ ಹೊಂದುತ್ತಾರೆ. ಇದು ಆಯಾ ದೇಶದ ಉತ್ತರಾಧಿಕಾರ ಕಾನೂನುಗಳ ಪ್ರಕಾರ ವಾರಸುದಾರರಿಗೆ ತನ್ನಷ್ಟಕ್ಕೆ ತಾನೇ ಸೇರುತ್ತದೆ. ಆದುದರಿಂದಲೇ ಸ್ಥಿರಸ್ವತ್ತು ವಾರಸುದಾರರಿಗೆ ಸೇರಲು ಉತ್ತರಾಧಿಕಾರ ಪ್ರಮಾಣಪತ್ರದ ಅವಶ್ಯಕತೆ ಇರುವುದಿಲ್ಲ. ಆದರೆ ಸ್ವತ್ತು ಸಾಲದ ರೂಪದಲ್ಲಿದ್ದರೆ ಉತ್ತರಾಧಿಕಾರ ಪ್ರಮಾಣಪತ್ರವು ಸಾಲಗಾರನ ಬೆಂಬಲಕ್ಕಾಗಿ ಬೇಕಾಗುತ್ತದೆ.

ಪಾಶ್ಚಿಮಾತ್ಯ ಕಾನೂನು ಪದ್ಧತಿಗಳಲ್ಲಿ ಒಬ್ಬ ವ್ಯಕ್ತಿಯು ತನ್ನ ಸ್ವತ್ತುಗಳ ಬಗ್ಗೆ ಉಯಿಲು ಮಾಡಲು ಹಿಂದಿನಿಂದಲೂ ಅವಕಾಶವಿದೆ. ಅಂತಹ ಉಯಿಲು ಕಾನೂನು ಸಮ್ಮತ ನಮೂನೆಯಲ್ಲಿರಬೇಕು ಎಂದು ಹೇಳಲಾಗಿದೆ. ಅದನ್ನು ಅವನ ಮರಣದ ನಂತರ ಕಾರ್ಯರೂಪಕ್ಕೆ ತರಲು ಸುಲಭವಾಗುತ್ತದೆ. ಈ ಪರಿಕಲ್ಪನೆ ಹಿಂದೂ ಕಾನೂನಿನಲ್ಲಿ ಕೇವಲ ಒಂದು ಶತಮಾನದಿಂದೀಚೆಗೆ ಬಂದಿದೆ. ಆದರೂ ಹಿಂದೆ ನಮ್ಮ ಹಿಂದೂ ಕಾನೂನಿನಲ್ಲಿ ಅವಿಭಾಜ್ಯ ಕುಟುಂಬದ ಸ್ವತ್ತಿನ ಪಾಲನ್ನು ಉಯಿಲು ಮಾಡಲು ಅವಕಾಶವಿರಲಿಲ್ಲ. ಈಗ ಈ ಹಕ್ಕನ್ನು ಹಿಂದೂಗಳಿಗೆ ೧೯೫೬ರಿಂದ ಕೊಡಲಾಗಿದೆ.

ಮೇಲೆ ಹೇಳಿರುವಂತೆ ಕಾನೂನುಸಮ್ಮತ ವ್ಯಕ್ತಿ ಎಂದರೆ ಹಕ್ಕು ಮತ್ತು ಕರ್ತವ್ಯಗಳನ್ನು ಹೊತ್ತಿರುವ ಒಂದು ಅಸ್ತಿತ್ವ. ನಿಜವಾಗಿ ಕಾನೂನು ಇಂತಹವರಿಗೇ ಸಂಬಂಧಪಟ್ಟದ್ದು. ಆದರೆ ಕಾನೂನು ಇನ್ನೂ ಯಾವ ಗುಂಪುಗಳಿಗೇ ಆಗಲಿ

ಸಂಸ್ಥೆಗಳಿಗೇ ಆಗಲಿ ವ್ಯಕ್ತಿತ್ವವನ್ನು ಕೊಡಬಹುದು. ಇವೂ ಕೂಡ ಕಾನೂನು ಬದ್ಧ ವ್ಯಕ್ತಿಗಳಾಗಿ ಪರಿಗಣಿಸಲ್ಪಡುತ್ತವೆ. ಇವುಗಳನ್ನು ನಾವು ಅಸ್ತಿತ್ವ ಪಡೆದ ವ್ಯಕ್ತಿಗಳು ಎಂದು ಕರೆಯಬಹುದು: ಕಂಪನಿಗಳ ಶಾಸನದ ಪ್ರಕಾರ ನೋಂದಣಿ ಹೊಂದಿದ ಒಂದು ನಿಗಮವು ತನ್ನದೇ ಆದ ಒಂದು ಅಸ್ತಿತ್ವವನ್ನು ಪಡೆಯುತ್ತದೆ. ಕಾನೂನಿನ ಪ್ರಕಾರ ಈ ನಿಗಮವೇ ಬೇರೆ, ಅದರಲ್ಲಿರುವ ಸದಸ್ಯರೇ ಬೇರೆ. ಉದಾಹರಣೆಗೆ ಕಂಪನಿ ಅಧಿನಿಯಮದ ಪ್ರಕಾರ ನೋಂದಾಯಿಸಿದ ಕಂಪನಿ, ನಿಗಮಗೊಳಿಸಿದ ಮೇಲೆ ಕಂಪನಿಯು ಕಾನೂನು ಸಮ್ಮತ ಅಸ್ತಿತ್ವಕ್ಕೆ ಬರುತ್ತದೆ ಮತ್ತು ಸದಸ್ಯರುಗಳಿಂದ ವಿಭಿನ್ನ ಮತ್ತು ಪ್ರತ್ಯೇಕವಾಗಿರುತ್ತದೆ. ಕಂಪನಿಯ ಆಸ್ತಿಗಳು ಮತ್ತು ಹೊಣೆಗಳು ಸದಸ್ಯರ ಆಸ್ತಿ ಮತ್ತು ಹೊಣೆಗಳಲ್ಲ. (ಸಾಲೋಮನ್ ಮತ್ತು ಸಾಲೋಮನ್ ಮೊಕದ್ದಮೆ).

ಈ ಕಾನೂನು ಸಮ್ಮತ ಅಸ್ತಿತ್ವವು ತನ್ನದೇ ಆದ ಆಸ್ತಿ ಹೊಣೆಗಳನ್ನು ಹೊಂದಿರುವ ಶಕ್ತಿಯುಳ್ಳದ್ದಾಗಿರುತ್ತದೆ. ಇಂತಹ ವ್ಯಕ್ತಿತ್ವದ ಸೃಷ್ಟಿಗೆ ಐರೋಪ್ಯ ನ್ಯಾಯಶಾಸ್ತ್ರವೇ ಕಾರಣ ಎಂದು ಹೇಳಬಹುದು. ಯಾವುದಾದರೂ ಒಂದು ಸ್ಥಿರ ಸ್ವತ್ತು ನಾಲ್ಕು ಮಂದಿಗೆ ಸೇರಿದ್ದರೆ ಕ್ರಮೇಣ ಒಬ್ಬರ ನಂತರ ಬರುವ ವಾರಸುದಾರರನ್ನು ಸೇರಿಸುತ್ತಾ ಹೋದರೆ ಇಂತಹ ಸ್ವತ್ತು ಅಸಂಖ್ಯಾತ ಮಂದಿಗೆ ಸೇರಬೇಕಾಗುತ್ತದೆ. ಇಂತಹ ಸಂದಿಗ್ಧತೆಯನ್ನು ತಪ್ಪಿಸಲು ಈ ನಿಗಮಗಳ ಸೃಷ್ಟಿಯಾಯಿತು. ಈ ನಿಗಮಕ್ಕೆ ಒಡೆಯರ ಗುಂಪಿನಲ್ಲಿ ಎಷ್ಟೇ ಜನರಿದ್ದು ಅವರು ಬದಲಿಸುತ್ತಿದ್ದರೂ ಸಹ ಈ ನಿಗಮದ ಅಸ್ತಿತ್ವವು ಬದಲಾಯಿಸುವುದಿಲ್ಲ. ಇಂತಹ ನಿಗಮಗಳಿಗೆ ನಿಗಮಿತ ಹೊಣೆ, ಚಿರಕಾಲ ಬಾಳುವಿಕೆ ಇತ್ಯಾದಿ ಸೌಲಭ್ಯಗಳನ್ನು ಕಾನೂನು ಒದಗಿಸಿದೆ. ಪಾಲುಗಾರಿಕೆ ಫರ್ಮುಗಳಿಗೋಸ್ಕರ ಮಾಡಿರುವ ಕಾನೂನು "ಭಾರತದ ಪಾಲುಗಾರಿಕಾ ಕಾನೂನು" (Indian Partnership Act). ಈ ಕಾನೂನು ಪಾಲುದಾರ (ಭಾಗೀದಾರ)ಫರ್ಮುಗಳಿಗೆ ಯಾವ ಅಸ್ತಿತ್ವವನ್ನು ಇದುವರೆಗೂ ಕೊಟ್ಟಿಲ್ಲ. ಆದುದರಿಂದ ಈಗಲೂ ಅದನ್ನು ಜನಗಳ "ಗುಂಪು" ಎಂದೇ ಪರಿಗಣಿಸಲಾಗುತ್ತದೆ. ಆದರೆ ಮತ್ತಿತರ ಜನಗಳ ಗುಂಪುಗಳು ತನ್ನದೇ ಆದ ಒಂದು ಅಸ್ತಿತ್ವವನ್ನು ಪಡೆದಿವೆ. ಇವು ಕ್ಲಬ್ಬುಗಳು ಇಲ್ಲವೇ ಸಂಘಗಳು. ಇವುಗಳಿಗೆ ಆಸ್ತಿಯನ್ನು ಇಟ್ಟುಕೊಳ್ಳುವ ಹಕ್ಕನ್ನು ಕಾನೂನು ಕೊಟ್ಟಿದೆ. ಸಂಘಗಳ ನೋಂದಣೀ ಅಧಿನಿಯಮದ (Societies Registration Act) ಪ್ರಕಾರ ಲಾಭ ಇಲ್ಲದೇ ಕೆಲಸಗಳನ್ನು ಮಾಡುತ್ತಿರುವ ಸಂಘಗಳಿಗೆ ಒಂದು ಅಸ್ತಿತ್ವವನ್ನು ಕೊಡಲಾಗಿದೆ.

ಹಿಂದೂ ನ್ಯಾಯಶಾಸ್ತ್ರದಲ್ಲಿ ಪೂಜಿಸುವ ವಿಗ್ರಹಗಳನ್ನು ಕಾನೂನು

ದೃಷ್ಟಿಯಲ್ಲಿ ವ್ಯಕ್ತಿಗಳೆಂದು ಪರಿಗಣಿಸುತ್ತೇವೆ. ವಿಗ್ರಹಗಳು ಸ್ವತ್ತನ್ನು ಹೊಂದಲೂ ಅರ್ಹವಾಗಿವೆ. ಆದರೆ ವಿಗ್ರಹಗಳ ಪರವಾಗಿ ವ್ಯವಹಾರ ಮಾಡಬೇಕಾದರೆ ಹೇಗೆ ಮಾಡುವುದು ? ಇದಕ್ಕೆ ಉತ್ತರ ಅಪ್ರಾಪ್ತ ವಯಸ್ಕರು ವ್ಯವಹಾರ ಮಾಡಲು ಹೇಗೆ ಬೇರೆ ಜನರ ಸಹಾಯವನ್ನು ಕೋರುವರೋ ಹಾಗೆಯೇ ನಡೆಸಬಹುದು. (ಪಾಲಕನ ಮೂಲಕ ಅಥವಾ ಮುಖಾಂತರ : (Pramathanatha Mallick P.C. Vs. Pradyumna Mallick (1925) 52 IA 245).

ಈ ಅಸ್ತಿತ್ವದ ಕಲ್ಪನೆಯು ಹೇಗಿದೆ ಎಂದರೆ, ಸಾಧಾರಣ ವ್ಯಕ್ತಿಗಳಿಗೆ ಯಾವ ಯಾವ ಕಾನೂನುಗಳು ಯಾವ ಯಾವ ರೀತಿಯಲ್ಲಿ ಅನ್ವಯಿಸುತ್ತವೆಯೋ ಅದೇ ತರಹ ಈ ಅಸ್ತಿತ್ವಗಳಿಗೂ ಅನ್ವಯಿಸಬೇಕು. ಯಾವುದಾದರೂ ನೌಕರನು ಕಂಪನಿಯ ಕರ್ತವ್ಯಗಳ ನಿರ್ವಹಣೆಯಲ್ಲಿ ಮಾಡುವ ತಪ್ಪು ನೆಪ್ಪುಗಳಿಗೆ ಕಂಪನಿಯೇ ಹೊಣೆಯಾಗಿರುತ್ತದೆ ಮತ್ತು ಶಿಕ್ಷಾರ್ಹವಾಗುತ್ತದೆ. ಈಗ ಕ್ರಿಮಿನಲ್ ಅಪರಾಧಿಕ ಹೊಣೆಗಾರಿಕೆಯ ವಿಷಯವನ್ನು ಗಮನಿಸೋಣ : ಲ್ಯಾಟಿನ್ ಸೂತ್ರ ದಲ್ಲಿ ಹೇಳಿರುವ "Actus-Non-Facit Reum-NISI-MENS SIT REA" "ಅಪರಾಧಿಕ ಮನೋಭಾವವಿರದ ಯಾವ ಕಾರ್ಯವೂ ಅಪರಾಧ ಎನಿಸುವುದಿಲ್ಲ" ಅಂದರೆ ಅಪರಾಧ ಮಾಡುವ ಉದ್ದೇಶದಿಂದ ಮಾಡದ ಹೊರತು ಯಾವ ಕಾರ್ಯವೂ ಅಪರಾಧ ಎನಿಸುವುದಿಲ್ಲ ಎಂದು ಹೇಳಬಹುದು. ಬರೀ ಕಾರ್ಯವೇ ಕ್ರಿಮಿನಲ್ ಅಥವಾ ದುಷ್ಟ ಎನಿಸಿಕೊಳ್ಳುವುದಿಲ್ಲ. ಇದಕ್ಕೂ ಒಂದು ತಪ್ಪಿತ ಮನಸ್ಸು (Mens Rea) ಹಿನ್ನೆಲೆಯಾಗಿರಬೇಕು. ಒಂದು ನಿಗಮವು ವಿವೇಚಿಸುವ ಶಕ್ತಿಯುಳ್ಳ ವ್ಯಕ್ತಿ ಆಗದೆ ಇರುವುದರಿಂದ ಅದರ ಮನಸ್ಸಿನ ಬಗ್ಗೆ ಪ್ರಶ್ನೆಯೇ ಏಳುವುದಿಲ್ಲ. ಆದುದರಿಂದ ಒಂದು ನಿಗಮವು ಅದರ ಸಂಸ್ಥಾಪನಾ ಪತ್ರದಲ್ಲಿರುವ ವರ್ಗಗಳಿಗೆ ಅನುಗುಣವಾಗಿ ನಡೆಯಬೇಕೇ ಹೊರತು ಕಾನೂನುಬಾಹಿರವಾಗಿ ನಡೆಯಲು ಸಾಧ್ಯವೇ ಇಲ್ಲ. ಆದ್ದರಿಂದ ಅದು ದೋಷಕೃತ್ಯವನ್ನು ಮಾಡಲು ಇಂಗ್ಲೀಷ್ ಸೂತ್ರ "ರಾಜನು ತಪ್ಪನ್ನು ಮಾಡಲಾರನು" (King can do no wrong) ಎಂಬ ಸ್ವಾಮ್ಯದ ಮೇಲೆ ವಾಸ್ತವಿಕವಾಗಿ ತಪ್ಪು ಮಾಡಲು ಅಸಮರ್ಥವಾಗಿದೆ. ಹೀಗಿರುವಾಗ ಒಂದು ನಿಗಮ ದುಷ್ಟ ಕಾರ್ಯಗಳನ್ನು ಮಾಡಲು ಹೇಗೆ ಸಾಧ್ಯ ? ಇದಕ್ಕೆ ಉತ್ತರವಾಗಿ ಒಬ್ಬರ ತಪ್ಪಿಗೆ ಇನ್ನೊಬ್ಬರು ಹೊಣೆಯಾಗುವ ದೃಷ್ಟಾಂತಗಳನ್ನು ಕೊಡಬಹುದು. ಒಬ್ಬ ಯಜಮಾನನು ತನ್ನ ಕೆಲಸಗಾರರ ತಪ್ಪಿಗೆ ಹೊಣೆಯಾಗುತ್ತಾನೆ. ಇದೇ "ಬದಲಿ ಹೊಣೆಗಾರಿಕೆ" (Vicarious Liability) ಎಂಬ ತತ್ವ. ಅಂದರೆ ಸೇವಕ ಅಥವಾ ನೌಕರ ಮಾಡಿದ ಎಲ್ಲಾ ದೋಷಕಾರ್ಯಗಳಿಗೂ ಮೂಲಕರ್ತ ಅಥವಾ ಯಜಮಾನನೇ ಜವಾಬ್ದಾರಿ.

ಬೋಲ್ಟನ್ ವಿರುದ್ಧ ಗ್ರಹಾಂ (Bolten Vs. Graham) (1956)3 AU ER 624 ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಡೆನ್ನಿಂಗರು ಈ ರೀತಿ ಹೇಳಿದ್ದಾರೆ : ಒಂದು ಕಂಪನಿಯನ್ನು ಒಂದು ವ್ಯಕ್ತಿಯಂತೆಯೂ, ನೌಕರರನ್ನು ಅವನ ಕೈಗಳಿಗೂ ಮತ್ತು ಆಡಳಿತಾಧಿಕಾರಿಗಳನ್ನು ಮೆದುಳಿಗೂ ಹೋಲಿಸಿದರೆ, ಆಗ ಇಂತಹ ನೌಕರರ ತಪ್ಪುನೆಪ್ಪುಗಳಿಗೆ ಕಂಪನಿಯೇ ಜವಾಬ್ದಾರಿ ಎಂದು ಹೇಳಿ ಕಂಪನಿಯನ್ನು ಶಿಕ್ಷೆಗೆ ಗುರಿಮಾಡಬಹುದು.

ಕಂಪನಿಯ ನೌಕರರು ಕಂಪನಿಯ ಮೆದುಳು ಎಂದು ಕರೆಯಲ್ಪಟ್ಟಿರುವ ವ್ಯಕ್ತಿಗಳ ತಿಳಿವಳಿಕೆ ಮತ್ತು ಸಮ್ಮತಿಯಿಂದ ದೋಷಕಾರ್ಯ ಮಾಡಿದ್ದರೆ ಆಗ ಕಂಪನಿಯೇ ಆರೋಪಿಯಾಗುತ್ತದೆ. ಈ ತತ್ವವನ್ನು ಹೌಸ್ ಆಫ್ ಲಾರ್ಡ್ಸ್‌ನ ಟೆಸ್ಕೊ ಸೂಪರ್ ಮಾರ್ಕೆಟ್ಸ್ ವಿರುದ್ಧ ನಟ್ರಾಸ್ (Tesco Super Markets Vs. Nattrass 1971 2 AER) ಮೊಕದ್ದಮೆಯ ನಂತರ ಸ್ಥಿರೀಕರಿಸಲಾಯಿತು. (General Sales Pvt. Ltd., Vs. Gopal Mukherjee (1987) 166 ITR 87 SC).

ಇದು, ಕಂಪನಿಯು ದಂಡನೆಯ ಕಾನೂನು ಉಲ್ಲಂಘನೆ ಮಾಡದಂತೆ ಕಾಯುತ್ತದೆ. ಪಾಶ್ಚಿಮಾತ್ಯ ಕಾನೂನು ಪದ್ಧತಿಯು ಒಂದು ಕ್ರೈಸ್ತ ದೇವಾಲಯ ಇಲ್ಲವೇ ಒಂದು ನಿಧಿಯನ್ನು ಕೂಡ ಸುಸ್ಪಷ್ಟ ಕಾನೂನು ಸಮ್ಮತ ಅಸ್ತಿತ್ವವೆಂದು ಪರಿಗಣಿಸುತ್ತದೆ. ಆದರೆ ಶಾಸಕಾಂಗಕ್ಕೆ ಅಪರಾಧವೆಂದು ಪರಿಗಣಿಸಬಲ್ಲ ಅಪರಾಧಗಳನ್ನು ನಮೂದು ಮಾಡುವ ಹಕ್ಕಿದೆ. ಅವುಗಳನ್ನು ನಿರುಪಾಧಿಕ ಅಪರಾಧ (Absolute Offences) ಎಂದು ಕರೆಯುತ್ತಾರೆ.

****

ಭಾಗ - ೪

ಕಾನೂನು ವರ್ಗೀಕರಣ

(Classification of Laws)

ಒಂದು ದೇಶದ ಮೂಲಭೂತ ಕಾನೂನು ಸಂವಿಧಾನ. ನಮ್ಮ ದೇಶದ ಸಂವಿಧಾನವು ಲಿಖಿತರೂಪದಲ್ಲಿದೆ. ಇದು ಮಿಕ್ಕೆಲ್ಲ ದೇಶಗಳ ಸಂವಿಧಾನಕ್ಕಿಂತ ಅತ್ಯಂತ ದೀರ್ಘವಾಗಿದೆ. ಇದು ಒಂದು ಸಂಯುಕ್ತ ಸಂವಿಧಾನ ಎಂದು ಪರಿಗಣಿಸಿದರೂ ಇದನ್ನು ಅಧ್ಯಯನ ಮಾಡಿದ ವಕೀಲರು ಇದು "ಅರೆ-ಸಂಯುಕ್ತ" ಎಂದು ಹೇಳುತ್ತಾರೆ. ಸಂಪೂರ್ಣ ಸಂಯುಕ್ತ ಸಂವಿಧಾನವೆಂದು ಹೆಸರು ಪಡೆದ ಅಮೇರಿಕಾದ ಸಂವಿಧಾನಕ್ಕೆ ಹೋಲಿಸಿದರೆ ನಮ್ಮ ಸಂವಿಧಾನದಲ್ಲಿ ಸಂಯುಕ್ತತೆಯ ಅಂಶಗಳನ್ನು ಪೂರ್ಣವಾಗಿ ನಿರೂಪಿಸಿಲ್ಲದಿರುವುದು ಕಂಡು ಬರುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅಧಿಕಾರವನ್ನು ವಿಭಜನೆ ಮಾಡಲಾಗಿದೆ. ನಮ್ಮ ಸಂವಿಧಾನದ ಏಳನೆಯ ಅನುಸೂಚಿಯಲ್ಲಿ ಸಂಸತ್ತು ಇಲ್ಲವೇ ವಿಧಾನ ಮಂಡಲಗಳು ರಚಿಸಬಹುದಾದ ಶಾಸನಗಳು ಯಾವುವೆಂಬುದನ್ನು ತಿಳಿಸಿದೆ. ಇದರಿಂದಲೇ ಶಾಸನವನ್ನು ಮಾಡಬಲ್ಲ ಸಾರ್ವಭೌಮತ್ವದ ಸಾಮರ್ಥ್ಯವನ್ನು ಕೇಂದ್ರಕ್ಕೂ, ರಾಜ್ಯಗಳಿಗೂ ಕೊಡಲಾಗಿದೆ. ಈ ಏಳನೆಯ ಅನುಸೂಚಿಯಲ್ಲಿ ಮೂರು ಪಟ್ಟಿಗಳನ್ನು ನಮೂದಿಸಲಾಗಿದೆ. ಮೊದಲನೆಯದು ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವ ಸಾಮರ್ಥ್ಯ. ಈ ವಿಷಯಗಳ ಬಗ್ಗೆ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಸಂಪೂರ್ಣ ಅಧಿಕಾರವಿದೆ. ಇದರಲ್ಲಿ ೯೭ ಅಂಶಗಳಿದ್ದು ಹಣಕಾಸು, ಭೂ, ವಿಮಾನ ಮತ್ತು ನೌಕಾಬಲಗಳು, ವಿದೇಶಿ ವ್ಯವಹಾರ, ಯುದ್ಧ ಇಂತಹವುಗಳನ್ನು ಒಳಗೊಂಡಿದೆ. ಎರಡನೆಯ ಪಟ್ಟಿಯಲ್ಲಿರುವ ಅಂಶಗಳ ಬಗ್ಗೆ ಕಾನೂನುಗಳನ್ನು ಮಾಡಲು ರಾಜ್ಯ ವಿಧಾನ ಮಂಡಲಗಳಿಗೆ ಮಾತ್ರ ಸಾಧ್ಯ. ಇದರಲ್ಲಿ ೬೬ ಅಂಶಗಳಿದ್ದು ಸಾರ್ವಜನಿಕ ಸುವ್ಯವಸ್ಥೆ ಮತ್ತು ಆರೋಗ್ಯ, ರಸ್ತೆಗಳು, ಸೇತುವೆಗಳು, ಕೃಷಿ, ಶಿಕ್ಷಣ ಇತ್ಯಾದಿಗಳನ್ನೊಳಗೊಂಡಿದೆ.

ಮೂರನೇ ಪಟ್ಟಿ ಒಂದು ಸಮವರ್ತಿ ಪಟ್ಟಿಯಾಗಿದ್ದು ೪೭ ಅಂಶಗಳನ್ನು ಒಳಗೊಂಡಿದೆ. ಇದರಲ್ಲಿ ಸೂಚಿಸಿರುವ ಅಂಶಗಳ ಬಗ್ಗೆ ಕಾಯಿದೆಗಳನ್ನು ಮಾಡಲು ಕೇಂದ್ರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಸಮ ಅಧಿಕಾರವಿರುತ್ತದೆ. ಇದರಲ್ಲಿ ದಂಡಪ್ರಕ್ರಿಯಾ ಸಂಹಿತೆ, ವಿವಾಹ ಮತ್ತು ವಿಚ್ಛೇದ, ನ್ಯಾಸ ಮತ್ತು ನ್ಯಾಸಧಾರಿಗಳು ಇವೆಲ್ಲವೂ ಸೇರಿವೆ. ಸಂಸತ್ತೇ ಆಗಲಿ, ವಿಧಾನ ಮಂಡಲಗಳೇ ಆಗಲಿ, ರಚಿಸಿದ

ಶಾಸನವು ಮೇಲೆ ಹೇಳಿದ ಪಟ್ಟಿಗಳಿಗೆ ಅನುಗುಣವಾಗಿಪೆಯೇ ಇಲ್ಲವೇ ತಮಗೆ ಅಧಿಕಾರವಿಲ್ಲದ ಅಂಶಗಳನ್ನು ಕುರಿತು ಯಾವುದಾದರೂ ಶಾಸನಗಳನ್ನು ಚಲಾಯಿಸಿರುವವೇ ಎಂದು ನೋಡುವವರು ಯಾರು ? ಈ ಕಾರ್ಯವನ್ನು ಮಾಡಲು ನಮ್ಮ ಸಂವಿಧಾನವು ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಿದೆ. ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲವು ತಮ್ಮ ಅಧಿಕಾರವನ್ನು ಮೀರಿ ನಡೆದಾಗ ಅಂತಹ ಕಾನೂನು "**ಅಧಿಕಾರಾತೀತ**" (Ultra-Vires) ಎಂದು ಘೋಷಿಸುವ ಅಧಿಕಾರ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಿಗಿದೆ. ಇದಕ್ಕೆ "**ನ್ಯಾಯ ಪುನರಾವಲೋಕನ**" (Judicial Review) ಎನ್ನಬಹುದು. ಈ ಸಿದ್ಧಾಂತವನ್ನು ಯುನೈಟೆಡ್ ಸ್ಟೇಟ್ಸ್‌ನ ಉಚ್ಚತಮ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಮಾರ್ಶಲ್ ಅವರು ಮೊದಲು ರೂಪಿಸಿದರು. (As pronounced in Marbury Vs. Madison as Judicial Review) ನ್ಯಾಯಾಲಯದ ಸಿವಿಲ್ ಮತ್ತು ಕ್ರಿಮಿನಲ್ ಅಪೀಲಿನ ವಿಷಯಗಳ ಕೊನೆಯ ನಿರ್ಧಾರ ಈ ನ್ಯಾಯಾಲಯದ್ದೇ ಆಗಿದೆ.

ಸಂವಿಧಾನವನ್ನುಳಿದು ಮಿಕ್ಕೆಲ್ಲಾ ಕಾನೂನುಗಳು ಸಹಾಯಕ ಕಾನೂನುಗಳಾಗಿವೆ. ಇವುಗಳನ್ನು ಕ್ರಿಮಿನಲ್ ಮತ್ತು ಸಿವಿಲ್ ಕಾನೂನುಗಳೆಂದು ಭಾಗ ಮಾಡಬಹುದು. ಇವುಗಳನ್ನು ಚಲಾಯಿಸಲು ತಮ್ಮದೇ ಆದ ಸ್ವಂತ ಪ್ರಕ್ರಿಯಾ ಸಂಹಿತೆಗಳನ್ನು ಹೊಂದಿವೆ. ಒಬ್ಬ ವ್ಯಕ್ತಿಯು ತನ್ನ ಸ್ಥಾಪಿತ ಹಕ್ಕುಗಳ ಉಲ್ಲಂಘನೆಯಾದರೆ ಸಿವಿಲ್ ದಾವೆಯನ್ನು ಹೂಡಬಹುದು. ನೊಂದ ವ್ಯಕ್ತಿಯು ತಾನೇ ಮೊಕದ್ದಮೆಯನ್ನು ಹೂಡಿ ನ್ಯಾಯ ಪಡೆಯಬೇಕು. ಅದೇ ಕ್ರಿಮಿನಲ್ ಕಾನೂನಿನ ಉಲ್ಲಂಘನೆಯಾದರೆ ರಾಜ್ಯವೇ ಮೊಕದ್ದಮೆಯಲ್ಲಿ ಭಾಗವಹಿಸಿ ತಪ್ಪಿತಸ್ಥನನ್ನು ತಾನೇ ದಂಡನೆಗೆ ಗುರಿ ಮಾಡುವ ಹೊಣೆಯನ್ನು ಹೊತ್ತಿರುತ್ತದೆ. ಈ ಸಂದರ್ಭದಲ್ಲಿ ಉಚ್ಚನ್ಯಾಯಾಲಯಗಳಿಗಿರುವ ಒಂದು ವಿಶೇಷ ಅಧಿಕಾರವನ್ನು ತಿಳಿಯಬೇಕು. ಅದೇ ರಿಟ್ ಆಜ್ಞೆ ಕೊಡುವ ಅಧಿಕಾರ. ಇಂತಹ "**ಆಜ್ಞೆ**" ಯನ್ನು ಉಚ್ಚನ್ಯಾಯಾಲಯಗಳಿಂದ ಪಡೆಯುವುದು ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳಿಗಿಂತ ಹೆಚ್ಚು ಸರಳ. ಆದುದರಿಂದ ಈಚೆಗೆ ಈ ಆಜ್ಞಾ ಕೇಳಿಕೆಯು ಅತಿಯಾಗಿ ಬೆಳೆದಿದೆ. ಇಂತಹ ಆಜ್ಞೆಗಳನ್ನು ನ್ಯಾಯಾಲಯವು ರಾಜ್ಯದ ನಾನಾ ಇಲಾಖೆಗಳಿಗೆ ಮತ್ತು ರಾಜ್ಯವೇ ಸಂಪೂರ್ಣವಾಗಿ ಭಾಗವಹಿಸಿರುವ ನಿಗಮಗಳ ಅಧಿಕಾರಗಳ ವಿರುದ್ಧ ಮಾತ್ರ ಸಲ್ಲುತ್ತದೆ. ಖಾಸಗಿ ವ್ಯಕ್ತಿಗಳಾಗಲೀ, ಮಿಕ್ಕ ನಿಗಮಗಳ ಅಧಿಕಾರಿಗಳಾಗಲೀ ಇಂತಹ ಆಜ್ಞೆಗೆ ಒಳಪಡುವುದಿಲ್ಲ.

ಆಡಳಿತದ ಕಾನೂನು (Administrative Law) ಎಂಬುದು ಈ ರಿಟ್ ಆಜ್ಞೆಗಳ ಬಗ್ಗೆ ಉಲ್ಲೇಖಿಸುತ್ತದೆ. ಸಾಧಾರಣವಾಗಿ ಆಡಳಿತಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಒಬ್ಬ ಅಧಿಕಾರಿಯಾಗಲೀ ಅಥವಾ ಮಂತ್ರಿಯಾಗಲಿ ಹೊರಡಿಸುವ ಆಜ್ಞೆಗಳು ಅವರ ವ್ಯಾಪ್ತಿಗೆ ಮೀರಿದ್ದರೆ ಆಗ ರಿಟ್ ಮೊಕದ್ದಮೆಯಲ್ಲಿ ಪ್ರಶ್ನಿಸಬಹುದು. ಆದರೆ ಈ ರಿಟ್‌ಗಳು ಉಚ್ಚನ್ಯಾಯಾಲಯಗಳ ವ್ಯಾಪ್ತಿಗೆ ಮಾತ್ರ ಸೀಮಿತ. ಇದರ ಪ್ರಕಾರ ಪ್ರಕರಣವು ಮೇಲ್ನೋಟಕ್ಕೆ ಅಧಿಕಾರಬಾಹಿರವಾಗಿದ್ದಾಗ ಅಥವಾ ದುರುದ್ದೇಶಪೂರಿತವಾದ ಆಜ್ಞೆಗಳನ್ನು ಅಸಿಂಧುವೆಂದು ಸಾರುತ್ತವೆ. ಆದರೆ ಅವು ಅಲ್ಲಿ ಸಂಬಂಧಪಟ್ಟ ವಿಷಯಗಳ ವಾಸ್ತವಿಕತೆ ಮತ್ತು ಸತ್ಯಾಸತ್ಯತೆಯ ನಿರ್ಣಯ ಮಾಡಲು ಅಶಕ್ತವಾಗಿವೆ. ಆದ್ದರಿಂದಲೇ ಈಗ **"ಆಡಳಿತ ನ್ಯಾಯಾಧಿಕರಣ"** (Administrative tribunals)ಗಳು ಸ್ಥಾಪಿತಗೊಂಡಿವೆ.

ನ್ಯಾಯಿಕ : ನ್ಯಾಯದ ವ್ಯವಹಾರಗಳ ಸ್ವಭಾವ
(Nature of Judicial Proceedings)

ಈಗ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳ ವೈಶಿಷ್ಟ್ಯವನ್ನು ಗಮನಿಸಬೇಕು. ಒಬ್ಬ ವ್ಯಕ್ತಿಯು ಬೇರೊಬ್ಬ ವ್ಯಕ್ತಿಗೆ ಹಾನಿ ಅಥವಾ ಮಾನನಷ್ಟ ಮಾಡಿದ್ದರೆ ಆಗ ಕ್ರಿಮಿನಲ್ ಕಾನೂನಿನ ಪ್ರಕಾರ ಅಪರಾಧಿಯ ಮೇಲೆ ಮೊಕದ್ದಮೆ ಹೂಡಬಹುದು. ಇಂತಹ ಹಕ್ಕು, ನೊಂದ ವ್ಯಕ್ತಿಗೆ ಇರುವುದರ ಜೊತೆಗೆ ರಾಜ್ಯವು ಕೂಡ ಅಪರಾಧಿಯನ್ನು ಶಿಕ್ಷಿಸುವುದಕ್ಕೋಸ್ಕರ ನ್ಯಾಯಾಲಯಕ್ಕೆ ಹೋಗುವ ವಿಶಿಷ್ಟ ಅಧಿಕಾರವನ್ನು ಹೊಂದಿರುತ್ತದೆ. ಇದಕ್ಕೆ ಕಾರಣವೇನೆಂದರೆ ಇಂತಹ ತಪ್ಪು ನಡವಳಿಕೆಗಳು ಕೇವಲ ಖಾಸಗಿ ಮನುಷ್ಯರ ಮಧ್ಯದಲ್ಲಿ ನಡೆದಿದ್ದರೂ ಅದು ಸಮಾಜದ ಮೇಲೆ ಪರಿಣಾಮ ಬೀರುತ್ತಿದೆ ಎಂದೇ ರಾಜ್ಯವು ಭಾವಿಸುತ್ತದೆ. ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ನೋಡಿಕೊಳ್ಳುವುದು ರಾಜ್ಯದ ಮೂಲ ಕಾರ್ಯ. ಆದುದರಿಂದ ರಾಜ್ಯವು ಇಂತಹ ಮೊಕದ್ದಮೆಗಳನ್ನು ತಾನು ನಡೆಸುವ ಹಕ್ಕನ್ನು ಪಡೆಯುವುದು ಅನಿವಾರ್ಯ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ೧೯೭೩ ಇದರ ೨೦೦ನೇ ವರ್ಗದ ಪ್ರಕಾರ, ಒಬ್ಬ ನಾಗರೀಕನು ತನಗಾದ ಹಾನಿ ಅಥವಾ ಮಾನನಷ್ಟದ ಬಗ್ಗೆ ನ್ಯಾಯಾಲಯವನ್ನು ಮೊರೆ ಹೋಗಬಹುದಾದರೂ ರಾಜ್ಯವೂ ಇದರಲ್ಲಿ ಪಾಲುಗೊಳ್ಳುವುದು. ಇಂತಹ ಮೊಕದ್ದಮೆಗಳಲ್ಲಿ ರಾಜ್ಯವೇ ಫಿರ್ಯಾದಿ ಮಾಡಿದ ಪಕ್ಷವಾಗಿರುವುದರಿಂದ ಮೊಕದ್ದಮೆಯನ್ನು ಪ್ರಾರಂಭಿಸಲು ಕಾಲ ಪರಿಮಿತಿಯ ಅಡಚಣೆಯೇ ಇರಲಿಲ್ಲ. ಆದರೆ ೧೯೭೩ರಲ್ಲಿ ಈ ಸಂಹಿತೆಯನ್ನು ಪುನರ್ರಚಿಸಿದಾಗ ಒಂದು ಕಾಲಮಿತಿ ಇರಬೇಕು ಎಂದು ಯೋಚಿಸಿ, ಕಾಲಪರಿಮಿತಿಯ ವರ್ಗವನ್ನು ಸೇರಿಸಿದರು. ಕಾಲಮಿತಿಯೇ ಇಲ್ಲದಿದ್ದರೆ ಇಂತಹ

ನ್ಯಾಯವ್ಯವಹಾರ ಕ್ರಮಗಳನ್ನು ದುರುಪಯೋಗ ಮಾಡಿಕೊಳ್ಳಲು ಸಾಧ್ಯ. ಒಬ್ಬ ವ್ಯಕ್ತಿಯ ವಿರೋಧಿಗಳು ಮನಸ್ಸು ಬಂದಾಗ ಅವನು ಆಪಾದಿತನೆಂದು ಕರೆದು ಸುಳ್ಳು ದೂರುಗಳನ್ನು ಕೊಡಬಹುದು. ಇದರಿಂದ ನಿಷ್ಕಲಂಕ ಜನರಿಗೂ ನ್ಯಾಯಾಲಯ ಮೊಕದ್ದಮೆ ಎಂಬ ಪ್ರಕ್ರಿಯೆಯಿಂದ ಅನಾನುಕೂಲ ತೊಂದರೆಗಳನ್ನೊಡ್ಡಬಹುದು. ನ್ಯಾಯಾಲಯವು ವಿಚಾರಣೆಯಾದ ಮೇಲೆ ಮೊಕದ್ದಮೆಯನ್ನು ತಳ್ಳಿ ಹಾಕಿದರೂ ಆ ವ್ಯಕ್ತಿಯು ಬಹಳ ತೊಂದರೆ ಮತ್ತು ಅನಾನುಕೂಲತೆಗಳನ್ನು ಅನುಭವಿಸಿರುತ್ತಾನೆ. ಆದರೆ, ಒಬ್ಬ ನಿಜವಾದ ಅಪರಾಧಿಯು ಕಾನೂನಿನ ಬಲೆಯಿಂದ ಬಹಳ ದಿವಸಗಳ ಕಾಲ ತಪ್ಪಿಸಿಕೊಂಡಿದ್ದ ಮಾತ್ರಕ್ಕೆ ಕಾಲಪರಿಮಿತಿಯ ವರ್ಗವನ್ನುಪಯೋಗಿಸಿ, ಆ ಸಮಾಜ ಶತ್ರುಗಳನ್ನು ಬಿಡುವುದೂ ಸರಿಯಲ್ಲ. ಆದುದರಿಂದ ಈ ಕಾಲಪರಿಮಿತಿಯ ವರ್ಗದಲ್ಲಿ ಸಾಮಾನ್ಯ ಅಪರಾಧಿಗಳಿಗೆ ಕಾಲಪರಿಮಿತಿ ಇದ್ದು ಎಂತಹ ತಪ್ಪಿಗೆ ಮೂರು ವರ್ಷಕ್ಕಿಂತ ಹೆಚ್ಚು ಜೈಲು ವಾಸದ ಶಿಕ್ಷೆಯನ್ನು ಗೊತ್ತು ಮಾಡಿರುವರೋ ಅಂತಹ ಅಪರಾಧವನ್ನೆಸಗಿದವರ ಮೇಲೆ ಮೊಕದ್ದಮೆ ಹೂಡಲು ಯಾವ ಕಾಲಪರಿಮಿತಿಯೂ ಇಲ್ಲ ಎಂದು ಹೇಳಿದೆ.

ಒಂದು ಹಲ್ಲೆಯನ್ನು ಅಥವಾ ದುರ್ನಡತೆಯನ್ನು ಅಪರಾಧವೆಂದು ಪರಿಗಣಿಸಬೇಕಾದರೆ ಆ ಕೆಲಸವನ್ನು ಮಾಡಿದವನ ಮನಸ್ಸು ಹೇಗಿತ್ತೆಂಬುದನ್ನು ಪರಿಗಣಿಸಬೇಕು. ಈ ಕಾರ್ಯವನ್ನು ಅವನು ಮಾಡಿದ್ದಕ್ಕೆ ಪೂರ್ವಸಿದ್ಧತೆ ಮತ್ತು ದ್ವೇಷ ಇತ್ತೇ ಎಂಬುದನ್ನು ಗಮನಿಸಬೇಕು. ಆದುದರಿಂದ ಈ ದಂಡನೆಯ ಕಾನೂನಿನ ಪ್ರಧಾನತತ್ವ ಎಂದರೆ, ದೋಷಚಿತ್ತವನ್ನು ಗಮನಿಸಿ ಆ ಮೇಲೆ ದಂಡನೆಯನ್ನು ವಿಧಿಸಬೇಕು. ಆದರೂ ರಾಜ್ಯವು ಅನೇಕ ನಿರುಪಾಧಿಕ ಅಪರಾಧಗಳನ್ನು ಸೃಷ್ಟಿಸಿ, ಇವುಗಳಲ್ಲಿ ಆಪಾದಿತನ ಮನಸ್ಸು ಮತ್ತು ಉದ್ದೇಶಗಳ ಪ್ರಶ್ನೆಯನ್ನು ಕೈಬಿಟ್ಟಿದೆ. ಇಂತಹ ಅಪರಾಧಗಳು ಸ್ವತಃ ಶಿಕ್ಷಾರ್ಹ. ಉದಾಹರಣೆಗೆ ಆದಾಯ ತೆರಿಗೆ, ಸೀಮಾ ಸುಂಕ, ಉತ್ಪಾದನಾ ಸುಂಕ ಇತ್ಯಾದಿ ಕಾನೂನುಗಳು. ಅಪರಾಧಿಯ ಮನಸ್ಸು ಮತ್ತು ಉದ್ದೇಶಗಳೇನೇ ಇದ್ದರೂ ಮಾಡಿದ ತಪ್ಪು ಶಿಕ್ಷಾರ್ಹವಾಗುತ್ತದೆ.

ಈ ದಂಡನೆಯ ಕಾನೂನಿಗೆ ತನ್ನದೇ ಆದ ಒಂದು ಪ್ರಮುಖ ಸಿದ್ಧಾಂತವಿದೆ. ಅದೇನೆಂದರೆ: ಒಬ್ಬ ಮನುಷ್ಯನನ್ನು ಅಪರಾಧಿ ಎಂದು ನಿರ್ಣಯಿಸಬೇಕಾದರೆ, ಅವನು ಮಾಡಿದನೆಂದು ಹೇಳಿದ ತಪ್ಪನ್ನು ಸಂದೇಹಕ್ಕೆ ಎಡೆಯಿಲ್ಲದೆ ಸಮಂಜಸವಾಗಿ ರುಜುವಾತು ಮಾಡಿದ ಮೇಲೆ ಮಾತ್ರ ಸಾಧ್ಯ (No person can be convicted unless his guilt is proved beyond reasonable doubt): ಕಾಲಿರಾಂ ವಿರುದ್ಧ ಸ್ಟೇಟ್ ಆಫ್ ಹಿಮಾಚಲ್ ಪ್ರದೇಶ್ (Kaliram Vs. State

of Himachal Pradesh. 1973 SC. 2773. Khanna.J). ಒಂದು ಮೊಕದ್ದಮೆಯಲ್ಲಿ ಯಾವ ವ್ಯಕ್ತಿಯು ಹಲ್ಲೆ ಹಾನಿಗಳಿಗೊಳಗಾಗಿರುತ್ತಾನೋ ಅವನೇನಾದರೂ ಮರಣ ಹೊಂದಿದರೆ ಅವನ ವಾರಸುದಾರರಿಗೆ ಆ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಇಲ್ಲವೆ ಸಮಾಧಾನವಾಗಿ ಬಗೆಹರಿಸಿ ಕೊಳ್ಳುವ ಹಕ್ಕು ಇರುವುದಿಲ್ಲ. ಈ ಮೊಕದ್ದಮೆಗಳಲ್ಲಿ ಹಂತಹಂತದಲ್ಲೂ ರಾಜ್ಯದ ಕೈವಾಡವಿದ್ದು ಅದರ ಆಸಕ್ತಿಯು ತೀವ್ರವಾಗಿರುತ್ತದೆ. ಇದೇ ಸಂಹಿತೆಯಲ್ಲಿ ಸಣ್ಣ ಅಪರಾಧಗಳನ್ನು ರಾಜಿಯಿಂದ ಮುಕ್ತಾಯ ಮಾಡಿಕೊಳ್ಳಲು ಅನುಮತಿ ಕೊಡಲಾಗಿದೆ.

ಸಿವಿಲ್ ವ್ಯವಹಾರದಲ್ಲಿ ಯಾವ ವ್ಯಕ್ತಿಯು ನ್ಯಾಯ ಬೇಕೆನ್ನುವನೋ ಆ ವ್ಯಕ್ತಿಯೇ ಮೊಕದ್ದಮೆಯನ್ನು ಹೂಡಬೇಕು. ಅವನು ಕೇಳುವ ಪರಿಹಾರದ ಮೇಲೆ ಶುಲ್ಕವನ್ನು ಕಟ್ಟಬೇಕು. ಈ ಶುಲ್ಕವನ್ನು ವ್ಯಾಜ್ಯದ ವಸ್ತು ವಿಷಯದ ಮೌಲ್ಯದ ಮೇಲೆ ನಿಗದಿಮಾಡಲಾಗುತ್ತದೆ. ಈ ತರಹದ ಮೊಕದ್ದಮೆಯನ್ನು ಹೂಡಲು ಕಾಲ ಪರಿಮಿತಿಯೂ ಇದೆ. ಒಂದು ಟ್ರಸ್ಟಿಯ ವಿರುದ್ಧ ಟ್ರಸ್ಟಿನ ಸ್ವತ್ತಿಗೆ ಸಂಬಂಧಪಟ್ಟ ದಾವೆಯನ್ನು ಬಿಟ್ಟರೆ ಮಿಕ್ಕೆಲ್ಲಾ ದಾವೆಗಳಿಗೂ ಇಂಡಿಯನ್ ಲಿಮಿಟೇಷನ್ ಆ್ಯಕ್ಟ್ ಪ್ರಕಾರ **ಕಾಲಪರಿಮಿತಿ** ಇದೆ (Sec 10, Indian Limitation Act). ಸರ್ಕಾರಕ್ಕೆ ಸಲ್ಲಿಸಬೇಕಾದ ಹಣಕ್ಕೂ ಒಂದು ಕಾಲಾವಧಿ ಇದೆ. ಕಾಲಪರಿಮಿತಿ ಕಾಯಿದೆಯ ವರ್ಗ ೧೧೨ ರ ಪ್ರಕಾರ ಸರ್ಕಾರವೂ ಕೂಡ ೩೦ವರ್ಷದ ನಂತರ ಹಣವನ್ನು ವಸೂಲಿ ಮಾಡಲು ಸಾಧ್ಯವಿಲ್ಲ. ಇಂತಹ ಸಿವಿಲ್ ವ್ಯವಹಾರದಲ್ಲಿ ಒಬ್ಬ ವ್ಯಕ್ತಿಯು ತನ್ನ ಹಕ್ಕನ್ನು ಬಿಟ್ಟುಕೊಟ್ಟು ವ್ಯಾಜ್ಯವನ್ನು ರಾಜಿ ಮಾಡಿಕೊಳ್ಳಬಹುದು. ನ್ಯಾಯಾಲಯವು ಎರಡೂ ಪಕ್ಷಗಳಿಗೂ ಸಾಕಷ್ಟು ಅವಕಾಶ ಕೊಟ್ಟು ಪ್ರತೀ ಹೆಜ್ಜೆಯಲ್ಲೂ ಪಕ್ಷಗಳು ತಮ್ಮ ನಿಲುವನ್ನು ಸ್ಥಿರಪಡಿಸುವ ಅವಕಾಶಗಳನ್ನು ಕೊಡಬೇಕು.

ಕ್ರಿಮಿನಲ್ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಾಗ ಆಪಾದಿತ ವ್ಯಕ್ತಿಯನ್ನು ಸಾಕ್ಷಿಯ ಕಟಕಟೆಯಲ್ಲಿ ನಿಲ್ಲಿಸಿ, ಸಾಕ್ಷ್ಯ ಹೇಳಿಕೆಗಳನ್ನು ಕೊಡುವುದಕ್ಕೇ ಆಗಲೀ, ತನ್ನ ವಾದಪತ್ರವನ್ನು ನ್ಯಾಯಾಧೀಶರಿಗೆ ಕೊಡುವುದಕ್ಕೇ ಆಗಲೀ ಒತ್ತಾಯಿಸುವುದಿಲ್ಲ. ಸಿವಿಲ್ ವ್ಯವಹಾರದಲ್ಲಿ ತಮ್ಮ ಕಡೇ ತೀರ್ಪು ಪಡೆದು ಡಿಕ್ರಿಯನ್ನು ಪಡೆದ ಮೇಲೆ ಅದನ್ನು ಕಾರ್ಯಗತಗೊಳಿಸಲು ಸಾಲಗಾರನ (ಋಣಿಯ) ಸ್ವತ್ತಿನ ವಿರುದ್ಧ ಪ್ರತ್ಯೇಕ ದಾವೆಯನ್ನು ಹೂಡಬೇಕು. ಇದಕ್ಕೆ ಹನ್ನೆರಡು ವರ್ಷಗಳ ಕಾಲಾವಕಾಶವಿದೆ. ಇಂತಹ ಡಿಕ್ರಿಗಳನ್ನು ಭಾರತದ ಎಲ್ಲಾ ಭಾಗಗಳಲ್ಲಿಯೂ ಕಾರ್ಯಗತಗೊಳಿಸಬಹುದು. ನಮ್ಮ ಸಿವಿಲ್ ಪ್ರಕ್ರಿಯಾ

ಸಂಹಿತೆಯ ೪೪ನೇ ವರ್ಗದ ಪ್ರಕಾರ, ಭಾರತವು ಯಾವ ಹೊರದೇಶಗಳ ನಡುವೆ ಸಂಧಿಯನ್ನು ಮಾಡಿಕೊಂಡಿದೆಯೋ ಅಂತಹ ದೇಶಗಳಲ್ಲಿ ಕೂಡ ಇಂತಹ ಡಿಕ್ರಿಯನ್ನು ಕಾರ್ಯಗತಗೊಳಿಸುವ ಸೌಲಭ್ಯವಿದೆ. ಇದಕ್ಕೆ ನ್ಯಾಯಾಲಯ ಹೊರಡಿಸಿದ ಡಿಕ್ರಿಯನ್ನು ಬೇರೆ ಪ್ರದೇಶಕ್ಕೆ ವರ್ಗಮಾಡಿಸಿಕೊಳ್ಳಬಹುದು. ಇದೇ ತರಹ ಸಂಬಂಧವು ನಮ್ಮ ಭಾರತಕ್ಕೂ ಮತ್ತು ಹಲವು ಹೊರದೇಶಗಳಿಗೂ ಇರುವುದನ್ನು ಗಮನಿಸಬಹುದು. ಅದೇನೆಂದರೆ ಭಾರತದಲ್ಲಿ ವಿಚಾರಣೆಗೆ ಗುರಿಮಾಡಲ್ಪಡಬೇಕಾಗಿರುವ ಒಬ್ಬ ಅಪರಾಧಿಯು ಬೇರೆ ದೇಶದಲ್ಲಿದ್ದರೆ ಅಂತಹ ವ್ಯಕ್ತಿಯನ್ನು ಪರದೇಶದ ಒಪ್ಪಿಗೆಯ ಮೇಲೆ ನಮ್ಮ ದೇಶಕ್ಕೆ ಕರೆತರಬಹುದು. ಪ್ರತ್ಯರ್ಪಣ (Extradition).

ಅಂತೆಯೇ ಸಿವಿಲ್ ಮೊಕದ್ದಮೆಗಳ ಡಿಕ್ರಿಯನ್ನು ಬೇರೆ ದೇಶಗಳಲ್ಲಿ ಜಾರಿಗೊಳಿಸಬಹುದು. ಇದನ್ನು ವರ್ಗ ೪೪ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ (C.P.C) ನಿರೂಪಿಸಲಾಗಿದೆ ಮತ್ತು ಇದಕ್ಕೆ ಉಭಯ ದೇಶಗಳ ಒಪ್ಪಂದ ಅನಿವಾರ್ಯ (Reciprocating territory).

ಒಂದು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೂ ಕೂಡ ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆಗಳಲ್ಲಿ ವಿಭಿನ್ನವಾಗಿರಬಹುದು. ಕ್ರಿಮಿನಲ್ ಮೊಕದ್ದಮೆಯು ಘಟನೆ ಸಂಭವಿಸಿದ ಸ್ಥಳದ ಮೇಲೆ ಅವಲಂಬಿತವಾಗಿರುತ್ತದೆ. ಸಿವಿಲ್ ಮೊಕದ್ದಮೆಯಲ್ಲಿ ಯಾವ ವಸ್ತು ವಿಷಯವು ಒಂದು ದಾವೆಗೆ ಕಾರಣವಾಗುತ್ತದೆಯೋ ಅದು ಇರುವ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯವು ಆ ಮೊಕದ್ದಮೆಯನ್ನು ವಿಚಾರಿಸುವ ಹಕ್ಕುಳ್ಳದ್ದಾಗಿರುತ್ತದೆ. ಎಲ್ಲಿ ಪ್ರತಿವಾದಿಯು ಸಾಧಾರಣವಾಗಿ ವಾಸಿಸುತ್ತಾನೋ ಅಥವಾ ಖುದ್ದಾಗಿ ಕೆಲಸ ಮಾಡುವನೋ ಅಥವಾ ವ್ಯವಹಾರವನ್ನು ನಡೆಸುವನೋ ಅಲ್ಲಿ ದಾವೆಯನ್ನು ಹೂಡಬಹುದು (ಸಿವಿಲ್ ಪ್ರಕ್ರಿಯಾ ಸಂಹಿತೆ ವರ್ಗ ೨೦).

ಭಾರತದ ಕಾನೂನುಗಳನ್ನು ಭಾರತದ ನ್ಯಾಯಾಲಯಗಳಲ್ಲೇ ಜಾರಿಗೆ ತರಬೇಕಾಗುತ್ತದೆ. ಆದುದರಿಂದ ಭಾರತದ ಹೊರಭಾಗದಲ್ಲಿ ಉಂಟಾದ ವ್ಯಾಜ್ಯಕ್ಕೆ ವಿದೇಶೀಯರು ಭಾರತಕ್ಕೆ ಸಂಬಂಧಪಟ್ಟ ಜನರಲ್ಲಿ ಪರಿಹಾರ ಕೇಳುವ ಸಮಯ ಬಂದಾಗ ಭಾರತದ ನ್ಯಾಯಾಲಯಗಳು ಆ ವ್ಯಾಜ್ಯವನ್ನು ಬಗೆಹರಿಸಬೇಕಾಗುತ್ತದೆ. ಉದಾಹರಣೆಗೆ ವಿವಾಹ ವಿಚ್ಛೇದನ, ಶಿಶುವಿನ ಔರಸತ್ವ, ವಿವಾಹದ ಮಾನ್ಯತೆ ಇವುಗಳನ್ನು ಒಳಗೊಂಡಿರುತ್ತದೆ. ಇದನ್ನು "**ಕಾನೂನು ಸಂಘರ್ಷಣೆ**" (Conflict of laws) ಅಥವಾ ಖಾಸಗಿ ಅಂತರಾಷ್ಟ್ರೀಯ ಕಾನೂನು (Private International law) ಎಂದು ಕರೆಯಬಹುದು. ಇಲ್ಲಿ ಕಾನೂನಿನ ಪ್ರಾದೇಶಿಕತ್ವದಲ್ಲಿ

ಒಂದು ವಿನಾಯಿತಿಯನ್ನು ಕಾಣಬಹುದು. ನ್ಯಾಯಾಲಯವು ಆ ವಿಷಯದಲ್ಲಿ ಜಾರಿಗೆ ತರಬಹುದಾದ ತೀರ್ಪನ್ನು ನೀಡುವ ಸಾಮರ್ಥ್ಯವಿದೆ ಎಂದು ತಿಳಿದಿದ್ದರೆ ಮಾತ್ರ ಆ ಮೊಕದ್ದಮೆಯನ್ನು ಪುರಸ್ಕರಿಸುವುದು. ನ್ಯಾಯಾಲಯವು ಒಂದು ಮೊಕದ್ದಮೆಯನ್ನು ವಿಚಾರಿಸುವುದಕ್ಕೆ ಮೊದಲು ಆ ವ್ಯವಹಾರದ ಮಾನ್ಯತೆ ಮತ್ತು ಉಪಯೋಗಿಸಬೇಕಾದ ಕಾನೂನು ಇವನ್ನು ನಿಶ್ಚಯಿಸಿಕೊಂಡು ಅದು ಅವರ ಅಧಿಕಾರ ವ್ಯಾಪ್ತಿಯಲ್ಲಿ ಇದ್ದರೆ ಮಾತ್ರ ಅಂತಹ ಮೊಕದ್ದಮೆಗಳನ್ನು ಪುರಸ್ಕರಿಸುತ್ತದೆ. ಹಾಗೆಯೇ ಒಂದು ವ್ಯವಹಾರವು ನ್ಯಾಯಾಲಯ ಬಾಹಿರವೆಂದು ಪರಿಗಣಿಸಿದರೆ ಅದನ್ನು ನ್ಯಾಯಾಲಯವು ಮೊದಲ ಹಂತದಲ್ಲೇ ತಳ್ಳಿಹಾಕುತ್ತದೆ. ಇಂತಹ ಮೊಕದ್ದಮೆಗಳಲ್ಲಿ ಯಾವ ಕಾನೂನಿನ ಮೇಲೆ ತೀರ್ಮಾನ ಅವಲಂಬಿಸಿದೆ ಎಂದು ತೀರ್ಪು ಕೊಡುವ ಸಾಧನೆಯಲ್ಲಿ, ಮೊದಲನೆಯದಾಗಿ ಎರಡೂ ಪಕ್ಷಗಳ ಉದ್ದೇಶವನ್ನು ತಿಳಿಯಬೇಕು. ಅಂದರೆ ಎರಡೂ ಪಕ್ಷಗಳು ಸೇರಿ ಯಾವ ಕಾನೂನು ಅನ್ವಯಿಕವಾಗಿರಬಹುದೆಂದು ಸಮ್ಮತಿಸಿರುತ್ತಾರೋ ಆ ಕಾನೂನನ್ನು ಈ ವ್ಯಾಜ್ಯಕ್ಕೆ ಅನ್ವಯಿಸಬೇಕು. ಪಕ್ಷಗಳ ಉದ್ದೇಶವು ಅಸ್ಪಷ್ಟವಾಗಿದ್ದರೆ ಆಗ ಕರಾರನ್ನು ನೆರವೇರಿಸಿದ ಸ್ಥಳದಲ್ಲಿ ವಿವಾದವನ್ನು ಜಾರಿಗೊಳಿಸಬಹುದು. (Lex Solutionis) ಕರಾರಿನ ನೆರವೇರಿಕೆಯ ಸ್ಥಳದ ಬಗ್ಗೆಯೂ ಸ್ಪಷ್ಟತೆ ಇಲ್ಲದಿದ್ದರೆ, (Lex Fori) ಎಲ್ಲಿ ವಿವಾದವು ಇತ್ಯರ್ಥದಲ್ಲಿರುವುದೋ ಆ ನ್ಯಾಯಾಧಿಕರಣದ ಕಾನೂನನ್ನು ಅನ್ವಯಿಸಬೇಕು.

ಬಹಳಷ್ಟು ತೆರಿಗೆ ಕಾನೂನುಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿಯು ಕರ್ತವ್ಯ ಲೋಪ ಅಥವಾ ಬಚ್ಚಿಡುವುದರಿಂದ ಮಾಡುವ ಅಪರಾಧಗಳ ಪಟ್ಟಿಯು ಇರುತ್ತದೆ. ಇವುಗಳನ್ನು ತೊಡೆದು ಹಾಕಲು ಆರ್ಥಿಕ ಶಾಸನಗಳ ಮೂಲಕ ಪ್ರಯತ್ನಿಸಿರುತ್ತಾರೆ. ಇದೇ ಶಾಸನಗಳನ್ನು ಸಮಾಜ ಪರಿವರ್ತನೆ ಮಾಡುವುದಕ್ಕೂ ಉಪಯೋಗಿಸುತ್ತಿದ್ದಾರೆ. ಸಮಾಜದ ಹಿತವನ್ನರಿಯದೆ ಕಾನೂನುಭಂಗ ಮಾಡುವವರನ್ನು ಶಿಕ್ಷಿಸಲು ಕೂಡ ತಮ್ಮದೆ ಆದ ದಂಡನಾಕ್ರಮದ ಭಾಗಗಳು ಇಂತಹ ಕಾನೂನು ಕ್ರಮದಲ್ಲಿ ಇರುತ್ತವೆ. ಉದಾ: ಆದಾಯ ತೆರಿಗೆ ಅಧಿನಿಯಮ, ಸಂಪತ್ತು ತೆರಿಗೆ ಅಧಿನಿಯಮ, ಇತ್ಯಾದಿಗಳನ್ನು ನೋಡಬಹುದು.

****

ಭಾಗ-೫

ಕಾನೂನುಸಮ್ಮತ ಹಕ್ಕುಗಳು ಮತ್ತು ಸ್ವತ್ತು

(Legal Rights and Property)

ಕಾನೂನಿನ ನಿಜವಾದ ವಸ್ತು-ವಿಷಯ "ವ್ಯಕ್ತಿ" ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಏಕೆಂದರೆ ಹಕ್ಕುಗಳು ಮತ್ತು ಕರ್ತವ್ಯಗಳು ವ್ಯಕ್ತಿಗಳಿಗೋಸ್ಕರವೇ ಇದೆ. ಆದುದರಿಂದ ಕಾನೂನಿನ ಅಸ್ತಿತ್ವದಲ್ಲಿರುವ ಹಕ್ಕು ಮತ್ತು ಕರ್ತವ್ಯಗಳ ಸ್ವಭಾವದ ವಿವರಣೆಯನ್ನು ಗಮನಿಸಬೇಕು.

ಎಲ್ಲಾ ವ್ಯಕ್ತಿಗಳಿಗೂ ಜೀವನದಲ್ಲಿ ನಾನಾ ತರಹದ ಹಿತಾಸಕ್ತಿಗಳಿರುತ್ತವೆ. ಇವು ತಮ್ಮ ಖಾಸಗಿ ಸ್ವಾತಂತ್ರ್ಯ ಅಥವಾ ಸ್ವತ್ತಿನ ವಿಷಯವಾಗಿರಬಹುದು, ಇಲ್ಲವೇ ಗೃಹಕೃತ್ಯಕ್ಕೆ ಸಂಬಂಧಪಟ್ಟ ಅಥವಾ ಅವರು ಮಾಡಿಕೊಂಡಿರುವ ಕರಾರು ಸಂಬಂಧಗಳ ವಿಷಯಗಳು ಆಗಿರಬಹುದು. ಈ ಎಲ್ಲಾ ಹಿತಾಸಕ್ತಿಗಳನ್ನೂ ಕಾನೂನುಗಳು ಮನ್ನಿಸಿವೆ, ಇಲ್ಲವೇ ಸಂರಕ್ಷಿಸಿವೆ ಎಂದು ಹೇಳಲಾಗುವುದಿಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿ ತಾನು ನಡೆಸುತ್ತಿರುವ ವ್ಯವಹಾರದ ಬಗ್ಗೆ ಬೇರೆಯವರಿಂದ ಅನುಚಿತ ಸ್ಪರ್ಧೆ ಇಲ್ಲದಿರಲೆಂದು ಆಶಿಸುತ್ತಾನೆ. ಪರಿಶೋಧಕರು ತಮ್ಮ ಕೆಲಸಗಳನ್ನು ಗುಟ್ಟಾಗಿಡಲು ಪ್ರಯತ್ನಿಸುತ್ತಾರೆ. ಈ ಹಿತಾಸಕ್ತಿಗಳನ್ನು ಕಾಪಾಡಲು ಕಾನೂನುಗಳು ಇಲ್ಲ. ಆದುದರಿಂದ ನಾವು ಹಕ್ಕುಗಳು ಎಂದರೇನೆಂದು ಅರ್ಥ ಮಾಡಿಕೊಳ್ಳ ಬಯಸಿದರೆ, ಇವು ಕಾನೂನು ಮನ್ನಣೆ ಕೊಟ್ಟು ಸಂರಕ್ಷಿಸುವ ಹಿತಾಸಕ್ತಿ ಮಾತ್ರ ಎಂಬುದನ್ನು ಮನಗಾಣಬಹುದು.

ಈ ಹಕ್ಕುಗಳ ಮೂಲಗಳು ಮೊದಲಿನಿಂದಲೂ ರೂಢಿಗತ, ಶಾಸನಬದ್ಧ ಅಥವಾ ಜಾತಿಮತ ಸಂಬಂಧ ಕಾನೂನಿನಿಂದ ಬಂದಿರಬಹುದು ಅಥವಾ ಬೇರೊಬ್ಬ ವ್ಯಕ್ತಿಯೊಂದಿಗೆ ಮಾಡಿಕೊಂಡ ಕರಾರು ಇದಕ್ಕೆ ಮೂಲವಾಗಿರಬಹುದು. ಆದ್ದರಿಂದ ಹಕ್ಕು ಎಂಬ ವಿಷಯದ ಬಗ್ಗೆ ವಿಶ್ಲೇಷಣೆ ಮಾಡುವುದು ಅವಶ್ಯಕ.

ಪ್ರಥಮವಾಗಿ, ಒಂದು ಹಕ್ಕು ಯಾವಾಗಲೂ ಒಬ್ಬ ವ್ಯಕ್ತಿಯಲ್ಲಿ ನಿಹಿತವಾಗಿದೆ. ನಿರ್ಜೀವ ವಸ್ತುವಿನಲ್ಲಿಯಾಗಲೀ, ಪ್ರಾಣಿಗಳಲ್ಲಿ ಆಗಲೀ ಅಥವಾ ಮರಣಹೊಂದಿದ ವ್ಯಕ್ತಿಗಳಲ್ಲಿ ಆಗಲೀ ಹಕ್ಕು ನಿಹಿತವಾಗಿಲ್ಲ. ಎರಡನೆಯದಾಗಿ, ಹಕ್ಕು ಇರುವಲ್ಲಿ ಅದರೊಡನೆ ಕರ್ತವ್ಯವೂ ಇದ್ದು ಎರಡೂ ಮಿಳಿತವಾಗಿರುತ್ತವೆ. ಆದುದರಿಂದ ಹಕ್ಕು ಎಂದೊಡನೆಯೇ ಹಕ್ಕು ಹೊಂದಿರುವ ವ್ಯಕ್ತಿ, ನಡೆಸಿ ಕೊಡುವ ಕರ್ತವ್ಯ ಇವೆರಡೂ ಎದ್ದು ನಿಲ್ಲುತ್ತವೆ.

ಮೂರನೆಯ ಮುಖ್ಯ ಅಂಶವೆಂದರೆ ಈ ಹಕ್ಕು ಒಬ್ಬ ಮನುಷ್ಯ, ಸ್ವತ್ತು, ಸ್ಥಳ ಅಥವಾ ಒಂದು ವಸ್ತು ಇವುಗಳನ್ನು ಕುರಿತದ್ದಾಗಿರಬಹುದು. ಹಕ್ಕುಗಳಲ್ಲಿ ಇನ್ನೆರಡು ವೈಶಿಷ್ಟ್ಯಗಳಿವೆ. ಒಂದು ಹಕ್ಕಿನ ಸ್ವಭಾವ ಅಥವಾ ಕರ್ತವ್ಯ. ಒಬ್ಬ ವ್ಯಕ್ತಿಯು ಯಾವುದಾದರೂ ಕೆಲಸವನ್ನು ಮಾಡಲೇಬೇಕು ಎಂದು ಮಾಡಿರುವ ನಿಗದಿ. ಇದು ಯಾವ ರೂಪದಲ್ಲಿ ಬೇಕಾದರೂ ಇರಬಹುದು. ಉದಾಹರಣೆಗೆ ಮನೆ ಕಟ್ಟಿಕೊಡುವುದು, ಯಾವುದಾದರೂ ಕೆಲಸ ಮಾಡಿಕೊಡಲು ಒಪ್ಪುವದು ಮುಂತಾದವು. ಇನ್ನೊಂದು ರೂಪದಲ್ಲಿ ಅಂದರೆ ಒಂದು ಕೆಲಸವನ್ನು ಮಾಡದೆ ಇರುವ ರೂಪವನ್ನು ಪಡೆಯಬಹುದು. ಉದಾ : ಒಬ್ಬರ ಮನೆಯೊಳಗೆ ಬರದೆ ಇರುವುದಕ್ಕೆ ಒಪ್ಪುವದು, ಒಬ್ಬರು ನಡೆಸುತ್ತಿರುವ ಉದ್ಯೋಗದಲ್ಲಿ ಸ್ಪರ್ಧಿಸುವುದಿಲ್ಲವೆಂದು ಭರವಸೆ ಕೊಡುವುದು.

ಕೊನೆಯದಾಗಿ, ಇಂತಹ ಹಕ್ಕು ಹೇಗೆ ಉದ್ಭವವಾಗಿದೆ ? ಇದರ ಮೂಲವೇನು ? ಎಂದು ತಿಳಿಯುವುದು. ಇದು ಇನ್ನೊಬ್ಬ ವ್ಯಕ್ತಿಯೊಡನೆ ಕರಾರು ಮಾಡಿಕೊಂಡಿದ್ದರಿಂದ ಬಂದಿರಬಹುದು. ರೂಢಿಗತ ಆಚರಣೆ ಮತ್ತು ಅಭ್ಯಾಸಗಳು ಅಥವಾ ಮಾನವೀಯ ಹಕ್ಕುಗಳ ವಿಷಯದಲ್ಲಿದ್ದಂತೆ ಸ್ವಾಭಾವಿಕ ಕಾನೂನು ಕೂಡ ಹಕ್ಕುಗಳಿಗೆ ಮೂಲವಾಗುವ ಸಾಧ್ಯತೆ ಇದೆ. ಮಾನವೀಯ ಹಕ್ಕುಗಳ ಬಗ್ಗೆ ಅಂತರರಾಷ್ಟ್ರೀಯವಾಗಿ ಮನ್ನಣೆ ಕೊಟ್ಟಿರುವ "ಮಾನವೀಯ ಹಕ್ಕುಗಳ ಘೋಷಣೆ" (Declaration of Human rights). ಇದು ಬಹಳ ಮುಖ್ಯವಾದುದು. ಇದು ಪ್ರಪಂಚದ ಜನರಿಗೆಲ್ಲಾ ಅಂತರ್ನಿಹಿತ ಹಕ್ಕುಗಳನ್ನು ಕೊಟ್ಟಿದೆ. ಎಲ್ಲ ರಾಷ್ಟ್ರಗಳ ಒಪ್ಪಿಗೆಯೂ ಇದಕ್ಕಿದೆ. ಯಾವ ರಾಜ್ಯವೂ ಈ ಹಕ್ಕನ್ನು ಮೊಟಕು ಮಾಡಲಾಗುವುದಿಲ್ಲ.

ಹಕ್ಕುಗಳು ಮೇಲೆ ಹೇಳಿದ ಹಾಗೆ ಐದು ವೈಶಿಷ್ಟ್ಯವನ್ನು ಹೊಂದಿವೆ:

ಈ ಹಕ್ಕುಗಳಲ್ಲಿ ಎರಡು ಮುಖ್ಯವಾದ ವರ್ಗಗಳಿವೆ. ಹಕ್ಕುಗಳು ವೈಯಕ್ತಿಕ ಅಥವಾ ಮಾಲೀಕತ್ವವಾಗಿ ಇರಬಹುದು. ಹಕ್ಕುಗಳು ವೈಯಕ್ತಿಕವಾಗಿದ್ದರೆ ಅಂದರೆ ಉದಾಹರಣೆಗೆ ಪಾಲಕತ್ವ ಅಥವಾ ವೈವಾಹಿಕ ಹಕ್ಕುಗಳು. ಇವುಗಳನ್ನು ಮತ್ತೊಬ್ಬರಿಗೆ ವರ್ಗಾವಣೆ ಮಾಡಲಾಗುವುದಿಲ್ಲ. ಇದು ಪರಂಪರಾಗತವೂ ಅಲ್ಲ. ಅವುಗಳು ಕಾನೂನಿನ ದೃಷ್ಟಿಯಲ್ಲಿ ಒಂದು ವ್ಯಕ್ತಿಯ ಸಮಾಜದಲ್ಲಿಯ ಸ್ಥಾನಮಾನ ಅಂತಸ್ತುಗಳನ್ನು ಸೂಚಿಸುತ್ತದೆ. ಮಾಲೀಕತ್ವದ ಹಕ್ಕುಗಳನ್ನು ವರ್ಗಾಯಿಸ ಬಹುದು. ಈ ಹಕ್ಕುಗಳನ್ನು ವಂಶಪಾರಂಪರ್ಯವಾಗಿ ಕೂಡ ಬದಲಿಸಬಹುದು. ಅದಕ್ಕೆ ಬೆಲೆಯನ್ನು ಕಟ್ಟಬಹುದು. ಒಟ್ಟಿನಲ್ಲಿ ಮಾಲೀಕತ್ವದ ಹಕ್ಕುಗಳನ್ನು ಒಂದು ಸ್ವತ್ತು ಎನ್ನಬಹುದು.

ಎರಡನೆಯ ವರ್ಗದ ಹಕ್ಕುಗಳು ಸರ್ವಬಂಧಕ ಹಕ್ಕುಗಳು (Rights in Rem) ಮತ್ತು ಪ್ರತಿಬಂಧಕ ಹಕ್ಕುಗಳಿಗೆ (Rights in Personam) ಸಂಬಂಧಿಸಿರುತ್ತದೆ. ಪ್ರತಿಬಂಧಕ ಹಕ್ಕುಗಳು ಸಾಮಾನ್ಯವಾಗಿ ನಿರ್ಧರಿತ, ತಿಳಿದ ಅಥವಾ ಖಚಿತಪಡಿಸಿಕೊಳ್ಳಬಹುದಾದ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಇರುತ್ತದೆ ಮತ್ತು ಚಲಾಯಿಸಬಹುದಾಗಿರುತ್ತದೆ. ಋಣಿಯ ವಿರುದ್ಧ, ಅವನು ಮರಣ ಹೊಂದಿದ್ದರೆ ಅವನ ವಾರಸುದಾರರ ವಿರುದ್ಧ ಆ ಹಕ್ಕನ್ನು ಜಾರಿಗೊಳಿಸಬಹುದು. ಆದರೆ ನಾವು ಸ್ವತ್ತಿನ ಒಡೆತನದ ಹಕ್ಕನ್ನು ವಿಚಾರಿಸಿ ನೋಡಿದರೆ ಆ ಸ್ವತ್ತಿನ ಒಡೆಯನು ತನ್ನಲ್ಲಿ ಇನ್ನೊಬ್ಬ ನಿರ್ದಿಷ್ಟಪಡಿಸಿದ ವ್ಯಕ್ತಿಯ ವಿರುದ್ಧ ಈ ಹಕ್ಕು ಅಥವಾ ಆ ಹಕ್ಕು ಇದೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಈ ಹಕ್ಕುಗಳನ್ನು ಬೇರೊಬ್ಬ ಮನುಷ್ಯನು ಆ ಸ್ವತ್ತಿನ ಅಪಹಾರಕ್ಕೆ ಅಥವಾ ಅದಕ್ಕೆ ಹಾನಿ ಮಾಡಲು ಬಂದರೆ ಒಡೆತನದ ಹಕ್ಕನ್ನು ಚಲಾಯಿಸಬಹುದು. ಈ ಬೇರೊಬ್ಬ ಮನುಷ್ಯನು ಯಾರಾದರೂ ಸರಿ, ಅವನ ವಿರುದ್ಧ ಒಡೆತನದ ಹಕ್ಕನ್ನೂ ಕಾಪಾಡಬಹುದು. ಅಂದರೆ ಸರ್ವಬಂಧಕ ಹಕ್ಕುಗಳ ಸಂಬಂಧದಲ್ಲಿ ಮಾಡಿದ ಹಕ್ಕುಗಳು ಸಾಧಾರಣ ವಾಗಿ ನಕಾರಾತ್ಮಕ (Negative) ನಿಷೇಧ, ಅಂದರೆ ಅತಿಕ್ರಮಣ ಮಾಡಕೂಡದು, ಇತರರ ಸ್ವತ್ತನ್ನು ನುಂಗಬಾರದು ಇವೇ ಮೊದಲಾದವು. ಈ ರೀತಿ ವಿಂಗಡನೆ ಕಾನೂನಿನ ದೃಷ್ಟಿಯಿಂದ ಅಗತ್ಯ. ಒಂದು ಸ್ವತ್ತಿನ ಮಾಲೀಕತ್ವ ಅಥವಾ ಒಡೆತನವಲ್ಲದೆ ಅದರ ಮೇಲೆ ಮೇಲ್ಕಂಡಂತಹ ಅಮೂಲ್ಯ ಹಕ್ಕುಗಳನ್ನು ಬೇರೊಬ್ಬನು ಪಡೆಯಲು ಸಾಧ್ಯ. ಇದನ್ನು ಸ್ವತ್ತಿನ ಹಕ್ಕುಗಳು (Property Rights) ಎನ್ನುತ್ತಾರೆ.

ಕೆಲವು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಗೆ ಯಾವುದಾದರೂ ಕಾರ್ಯ ಮಾಡಲು ಮಾಲೀಕನು ನಿಯಮಿತ ಅಪ್ಪಣೆ ಅಥವಾ ಸ್ವಾತಂತ್ರ್ಯವನ್ನು ಕೊಡಬಹುದು. ಇದನ್ನು ನಿಯಮಿತ ಸ್ವಾತಂತ್ರ್ಯ ಅಥವಾ ವಿಶಿಷ್ಟ ವಿಶೇಷಾಧಿಕಾರ (Liberty or Privilege) ಎಂದು ಕರೆಯಬಹುದು. ಇವು ಪೂರ ಹಕ್ಕುಗಳಲ್ಲ. ಈ ನಿಯಮಿತ ಸ್ವಾತಂತ್ರ್ಯ ಅಥವಾ ವಿಶಿಷ್ಟಾಧಿಕಾರಕ್ಕೆ ಹಕ್ಕಿಗಿರುವಂತೆ ಕರ್ತವ್ಯಗಳಿಲ್ಲ. ವಿದೇಶೀಯರಿಗೆ ಭಾರತದ ಪ್ರಜೆಗಳಂತೆ ಹಕ್ಕುಗಳು ಸಲ್ಲುವುದಿಲ್ಲ. ಆದರೆ ಭಾರತವನ್ನು ಪ್ರವೇಶಿಸುವ ನಿಯಮಿತ ಸ್ವಾತಂತ್ರ್ಯ ಅವರಿಗೆ ಕೊಟ್ಟಿದೆ. ಒಬ್ಬ ವಿದ್ಯಾರ್ಥಿಗೆ ವಿದ್ಯಾರ್ಥಿನಿಲಯದಲ್ಲಿರಲು ವಿಶೇಷಾಧಿಕಾರ ಅಥವಾ ಹಕ್ಕು ಇಲ್ಲ. ಎ.ಕೆ.ಜಾ ವಿರುದ್ಧ ಜೆ.ಎನ್. ಯೂನಿವರ್ಸಿಟಿ (A.K.Jha Vs. University AIR (1983) SC 1128) ಮೊಕದ್ದಮೆಯಲ್ಲಿ ಈ ವಿಷಯವನ್ನು ನಿಶ್ಚಯ ಮಾಡಿದ್ದಾರೆ. ಅಧಿಕಾರ ಎನ್ನುವುದು ಹಕ್ಕಿಗಿಂತ ಭಿನ್ನ. ಇದರಲ್ಲಿಯೂ ಕರ್ತವ್ಯದ ಪ್ರಶ್ನೆ

ಬರುವುದಿಲ್ಲ. ಅದು ಕಾನೂನು ಸಮ್ಮತ ಹಕ್ಕುಗಳಿಗೆ ಸಮನಾದದ್ದಲ್ಲದಿದ್ದರೂ ಸ್ವಾತಂತ್ರ್ಯಕ್ಕಿರುವ ಮೌಲ್ಯಕ್ಕಿಂತ ಹೆಚ್ಚಿನ ಶ್ರೇಣಿಯಲ್ಲಿದೆ. ಒಬ್ಬನಲ್ಲಿ ಒಂದು ಹಕ್ಕಿದ್ದೆ ಎಂದಾದರೆ, ಬೇರೊಬ್ಬನಲ್ಲಿ ಕರ್ತವ್ಯವು ಜನಿತವಾಗುತ್ತದೆ. ಆದರೆ ಮೇಲ್ಕಂಡಂತೆ, ನಿಯಮಿತ ಸ್ವಾತಂತ್ರ್ಯ ಅಥವಾ ಅಧಿಕಾರ ಎಂಬ ಕಾನೂನಿನ ಪದಗಳ ವ್ಯಾಪ್ತಿಯಲ್ಲಿ ಕರ್ತವ್ಯ ಮತ್ತು ಅದನ್ನು ಸಲ್ಲಿಸುವವನು ಇವುಗಳ ಪ್ರಶ್ನೆಯೇ ಏಳುವುದಿಲ್ಲ.

****

ಭಾಗ - ೬

ಆಸ್ತಿ ಅಥವಾ ಸ್ವತ್ತು

(Property)

ಸಾಮಾನ್ಯ ಜನರ ದೃಷ್ಟಿಯಲ್ಲಿ "ಸ್ವತ್ತು"ಎಂಬ ಮಾತಿಗೆ ಚರ ಮತ್ತು ಸ್ಥಿರ ಆಸ್ತಿಗಳು ಎಂದಿರುತ್ತವೆ. ಆದರೆ ಕಾನೂನಿನಲ್ಲಿ ಸ್ವತ್ತು ಎಂಬ ಮಾತಿಗೆ ವಿಶಾಲವಾದ ಅರ್ಥವಿದೆ. ಅದನ್ನು ಈಗ ತಿಳಿಯುವುದು ಅವಶ್ಯಕ. ಒಬ್ಬ ಗ್ರಂಥಕರ್ತನು ಬರೆದು ಪ್ರಕಟಿಸಿದ ಗ್ರಂಥಗಳು ಒಡೆತನದ ಹಕ್ಕಿಗಿಂತ ಅದನ್ನು ಪ್ರಕಟಿಸುವ ಅಥವಾ ತನ್ನ ಅಪ್ಪಣೆಯಿಂದ ಬೇರೆಯವರು ಪ್ರಕಟಿಸುವ ಅವಕಾಶ ಕೊಡುವ ಹಕ್ಕು ಮೂಲಭೂತ ಮತ್ತು ಅತೀ ಮುಖ್ಯ. ಇದೇ ರೀತಿ ಒಬ್ಬನು ಕಂಡುಹಿಡಿದ ನಿರ್ದಿಷ್ಟ ವಸ್ತುಗಳನ್ನು ತಯಾರಿಸುವ ಹಕ್ಕಿನ ಒಡೆತನ ಕೂಡ ಅಮೂಲ್ಯವಾದದ್ದು ಕಾನೂನಿನ ಪ್ರಕಾರ ಇವೂ ಸ್ವತ್ತುಗಳೇ. ವ್ಯಾಪಾರ ಚಿಹ್ನೆ (Trade Mark) ಇದು ಒಂದು ಬೌದ್ಧಿಕ ಸ್ವತ್ತು. ಒಬ್ಬ ಸಂಗೀತ ವಿದ್ವಾಂಸನು ರಚಿಸಿದ ಸಂಗೀತ ಕೃತಿ ಮತ್ತು ಸಾಹಿತ್ಯ ಕಲಾತ್ಮಕ ಕೃತಿಗಳು, ಇವೆಲ್ಲವುಗಳ ಸ್ವಾಮ್ಯ ಆ ಕೃತಿಗಳ ಕರ್ತೃಗಳಿಗೆ ಸೇರಿರುವ ಸ್ವತ್ತು. ಆದುದರಿಂದ ಒಡೆತನದ ನಿಜವಾದ ವಸ್ತು- ವಿಷಯ ಪದಾರ್ಥಗಳೇ ಅಲ್ಲ. ಆದರೆ ಅದರಲ್ಲಿ ಅಮೂರ್ತವಾಗಿರುವ ಹಕ್ಕೂ (Incorporeal Rights) ಆಗಿರಬಹುದು. ಕಾನೂನಿನಲ್ಲಿ ವಸ್ತು ಎಂಬ ಪದವನ್ನು ಉಪಯೋಗಿಸುವಾಗ ಅದು ನಿರ್ದಿಷ್ಟ ವಸ್ತುಗಳನ್ನು ಕುರಿತದ್ದಾಗಿರದೆ ಸರ್ವವ್ಯಾಪಿಯಾಗಿರಬೇಕು. ಸ್ವಾಮ್ಯ ಹಕ್ಕನ್ನು ವರ್ಗಾವಣೆ ಮಾಡಲು ಸಾಧ್ಯ ಮತ್ತು ಅದು ವಾರಸತ್ವಕ್ಕೆ ಅರ್ಹ. ಇವು ಉಪಯುಕ್ತ ಮತ್ತು ಅಮೂಲ್ಯವಾದ ಸ್ವತ್ತು ಆಗಿರಬಹುದು. ಆದರೆ ಈ ಹಕ್ಕು ಕೇವಲ ಕೆಲವೇ ವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದರೆ ಅದು ಬಾಧ್ಯತೆಯ ವಲಯಕ್ಕೆ ಸೇರುತ್ತದೆ. ಅದೇ ಮಾಲೀಕತ್ವ ಹಕ್ಕುಗಳು, ಸರ್ವಬಂಧಕ ಹಕ್ಕುಗಳಾಗಿದ್ದರೆ ಆಗ ಈ ಹಕ್ಕುಗಳನ್ನೂ ಕಾನೂನಿನಲ್ಲಿ ಸ್ವತ್ತು ಎಂದು ಕರೆಯಲ್ಪಡುತ್ತದೆ. ಯಾವುದೇ ವಸ್ತು-ವಿಷಯವು ಸ್ವತ್ತು ಎನ್ನಿಸಿಕೊಳ್ಳ ಬೇಕಾದರೆ ಅದು ಸಂಪೂರ್ಣವಾಗಿ (ಸರ್ವಬಂಧಿಯಾಗಿ) ಪ್ರಪಂಚವೆಲ್ಲಾ ಮಾಲೀಕತ್ವವನ್ನು ಒಪ್ಪುವಂತಿರಬೇಕು. ಈ ಸಂಬಂಧದಲ್ಲಿ ಸ್ವತ್ತಿನಲ್ಲಿ ಮೂರು ವರ್ಗಗಳನ್ನು ಗಮನಿಸಬಹುದು. ಒಬ್ಬ ಬಾಡಿಗೆದಾರನು ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡರೆ ಅವನು ಪಡೆದ ಹಕ್ಕನ್ನು ಕಾನೂನಿನ ಪ್ರಕಾರ ಬರೀ ವೈಯಕ್ತಿಕ ಹಕ್ಕು ಎಂದು ಪರಿಗಣಿಸುವುದಿಲ್ಲ. ಒಪ್ಪಿತ ಅವಧಿಯ ಕಾಲದ ಒಳಗೆ ಬಾಡಿಗೆದಾರನಿಗೆ ವಿಶೇಷ ಮತ್ತು ವಿಶಿಷ್ಟ ಹಕ್ಕೇ ದೊರಕುತ್ತದೆ. ಈ ಬಾಡಿಗೆಯ

ಹಕ್ಕು ಸಾಮಾನ್ಯವಾಗಿ ಒಪ್ಪಂದದಲ್ಲಿ ನಿಷೇಧವಿಲ್ಲದಿದ್ದರೆ ಮಾತ್ರ ವರ್ಗಾಯಿಸಬಹುದು. ಅದು ಅನುವಂಶೀಯವೂ ಹೌದು. ಬಾಡಿಗೆಗೆ ಪಡೆದ ಅವಧಿಯಲ್ಲಿ ಬರೀ ಮನೆಯ ಮಾಲೀಕನ ವಿರುದ್ಧ ಮಾತ್ರವಲ್ಲ, ಇಡೀ ಪ್ರಪಂಚದ ವಿರುದ್ಧ ಈ ಹಕ್ಕನ್ನು ಸಂರಕ್ಷಿಸಿಕೊಳ್ಳಬಹುದು. ಯಾರಾದರೂ ಅಂದರೆ ಸರ್ಕಾರ, ಅಡಮಾನ, ಹರಾಜು, ಮಾರಾಟ ಕಾನೂನಿಗೆ ಅನುಗುಣವಾಗಿ ಆ ಮನೆಯನ್ನೇನಾದರೂ ಸ್ವಾಧೀನಪಡಿಸಿಕೊಂಡರೆ ಮಾಲೀಕನಿಗೆ ಕೊಡಬೇಕಾದ ನಷ್ಟ ಪರಿಹಾರದಲ್ಲಿ ಒಂದು ಭಾಗದ ಹಕ್ಕು ಬಾಡಿಗೆದಾರನಿಗೂ ಇರುತ್ತದೆ. ಅದಕ್ಕೆ ವಿಶೇಷ ಕಾನೂನು ಅಂದರೆ ಬಾಡಿಗೆ ನಿಯಂತ್ರಣ ಕಾನೂನಿನಲ್ಲಿ ಈ ವರ್ಗಾವಣೆಯನ್ನು ನಿಷೇಧಿಸಿದೆ. ಈ ರೀತಿ ಕಾನೂನುಗಳ ಅಥವಾ ಒಪ್ಪಂದದ ನಿಷೇಧವಿಲ್ಲದಿದ್ದರೆ ಗೇಣಿ ಅಥವಾ ಬಾಡಿಗೆದಾರ ಹಕ್ಕು ವರ್ಗಾಯಿಸಬಹುದು.

ಈಗ ಅಡಮಾನದ ವಿಷಯವನ್ನು ಪರಿಶೀಲಿಸೋಣ. ಸಾಲ ಕೊಟ್ಟು ಒಂದು ವಸ್ತುವನ್ನು ಅಡಮಾನ ಮಾಡಿಕೊಂಡರೆ ಸಾಲ ಕೊಟ್ಟವನಿಗೆ ಆ ವಸ್ತು-ವಿಷಯದಲ್ಲಿ ಬರೀ ವೈಯಕ್ತಿಕ ಹಿತಾಸಕ್ತಿ ಮಾತ್ರ ಇರುವುದಿಲ್ಲ. ಸಾಲಕೊಟ್ಟವನಿಗೆ ಬರುವ ಹಕ್ಕು ಅನುವಂಶೀಯ ಮತ್ತು ವರ್ಗಾವಣೀಯ. ಈ ಸ್ವತ್ತನ್ನು ಸಾಲ ಕೊಟ್ಟವನು ಸಂಪೂರ್ಣ ಪ್ರಪಂಚದ ವಿರುದ್ಧ ಸಂರಕ್ಷಿಸಿಕೊಳ್ಳಲು ಶಕ್ತವಾಗಿರುತ್ತಾನೆ.

ಇದೇ ತರಹ ಅನೇಕ ವಿಧದ ವಂಶಪಾರಂಪರ್ಯವಾಗಿ ಬರುವ ಹಕ್ಕುಗಳನ್ನು ನಾವು ಕಾಣಬಹುದು. ಉದಾರಣೆಗೆ ಒಂದು ದೇವಾಲಯದ ನಿರ್ವಹಣೆ.

ಸ್ವತ್ತಿನ ಬಗ್ಗೆ ಅಥವಾ ಆಸ್ತಿಯ ಬಗ್ಗೆ ಹಕ್ಕುಗಳಿಗೆ ಕಾನೂನಿನಲ್ಲಿ ವಿಶೇಷ ಮರ್ಯಾದೆ ಹಿಂದಿನಿಂದ ನಡೆದು ಬಂದಿತ್ತು. ಹಕ್ಕುಗಳ ಪಟ್ಟಿಯಲ್ಲಿ ಅದು ಅತ್ಯುನ್ನತ ಸ್ಥಾನವನ್ನು ಪಡೆದುಕೊಂಡಿತ್ತು. ನಮ್ಮ ಸಂವಿಧಾನವು ಅನುಚ್ಛೇದ ೧೯ ಮತ್ತು ೩೧ ರಲ್ಲಿ ಈ ಸ್ವತ್ತಿನ ಒಡೆತನದ ಹಕ್ಕು ಅತ್ಯಮೂಲ್ಯವಾದ ಮತ್ತು ಮೂಲಭೂತವಾದ ಹಕ್ಕೆಂದು ಸಾರಿದ್ದರಿಂದ, ಸಾಮಾಜಿಕ ಪರಿವರ್ತನೆಗೆ ಮಾಡಿದಂತಹ ಅನೇಕ ಕಾನೂನುಗಳು ಅಸಿಂಧುವಾದವು.

ಆದರೆ ೧೯೭೮ರಲ್ಲಿ ಆದ ಸಂವಿಧಾನದ ೪೪ನೇ ತಿದ್ದುಪಡಿಯಿಂದ ಈ ತತ್ವವನ್ನು ಕೈಬಿಡಲಾಯಿತು ಮತ್ತು ಸಂವಿಧಾನದಿಂದ ಈ ಎರಡು ಉಪಬಂಧಗಳನ್ನು ಕೈಬಿಡಲಾಯಿತು. ಈಗ ಆಸ್ತಿಯ ಬಗ್ಗೆ ಹಕ್ಕುಗಳು ಮುಖ್ಯವಾದರೂ ಮೂಲಭೂತವಲ್ಲ.

ಈ ಸ್ವತ್ತು ಎಂಬ ಮಾತಿನ ಅರ್ಥವನ್ನು ಸರಿಯಾಗಿ ತಿಳಿದುಕೊಂಡರೆ ಸ್ವತ್ತಿನ ಮೇಲಿನ ತೆರಿಗೆಗಳು, ಬಂಡವಾಳದ ಆದಾಯದ ಮೇಲಿನ ತೆರಿಗೆ ಇದರಲ್ಲಿ ಏಳುವ

ಪ್ರಶ್ನೆಗಳನ್ನು ಬಗೆಹರಿಸಬಹುದು. ಇಲ್ಲಿ ನಾವು ಗಮನಿಸಬೇಕಾದದ್ದು ಏನೆಂದರೆ ಮಾಲೀಕತ್ವ ಎಂಬ ಅಂಶ. ಅಂದರೆ ವಸ್ತುವಿನಲ್ಲಿ ಒಂದು ಪೂರ್ಣ ಮತ್ತು ಮುಖ್ಯ ಹಕ್ಕು. ಮಾಲೀಕನು ಅದೇ ವಸ್ತುವಿನಲ್ಲಿ ಬೇರೊಬ್ಬನಿಗೆ ವರ್ಗಾಯಿಸಬಲ್ಲ ಮತ್ತು ಆನುವಂಶೀಯ ಹಕ್ಕನ್ನು ಸೃಷ್ಟಿಸಿ ಕೊಟ್ಟರೆ, ಅಂದರೆ ಗೇಣಿ ಅಥವಾ ಅಡುವಿಟ್ಟರೆ, ಗೇಣಿದಾರನು ಅಥವಾ ಅಡುವಿಟ್ಟುಕೊಂಡವನು ಆ ವಸ್ತುವೂ ನನ್ನ ಸ್ವತ್ತಿಗೆ ಒಳಪಟ್ಟಿದೆ ಎಂದು ಹೇಳಬಹುದು.

ಮಾನವನು ತನ್ನ ಬುದ್ಧಿಯ ವಿಕಾಸವಾದಂತೆ ನಿಸರ್ಗದಲ್ಲಿ ಇಲ್ಲದೇ ಇರುವ ಅನೇಕ ವಸ್ತುಗಳನ್ನು ಸೃಷ್ಟಿಸಲು ಹೊರಟಿದ್ದಾನೆ. ಈ ಸೃಷ್ಟಿಯಲ್ಲಿ ಅಥವಾ ಸಂಶೋಧನೆಯಲ್ಲಿ ಅವನಿಗೆ ಒಡೆತನ, ಕಾನೂನಿನ ಪ್ರಕಾರ ಖಚಿತ. ಆದರೆ ಭೌತಿಕವಲ್ಲದ ಅಥವಾ ಅಮೂರ್ತವಾದ ಮತ್ತು ಒಡೆತನಕ್ಕೆ ಸೇರ್ಪಡಬಲ್ಲ ವಸ್ತುಗಳೂ ಸೇರಿವೆ. ಮೊದಲು ಸಾಹಿತ್ಯ ಸೃಷ್ಟಿ ಈ ವರ್ಗಕ್ಕೆ ಸೇರಿತ್ತು. ಸಾಹಿತ್ಯ ಅಥವಾ ಸಂಗೀತದಲ್ಲಿ ರಾಗ ಸಂಯೋಜನೆ ಅಥವಾ ಒಂದು ಕಲಾತ್ಮಕ ಕೃತಿ ಇವುಗಳ ಕೃತಿಸ್ವಾಮ್ಯ ಅದರ ಸೃಷ್ಟಿಕರ್ತನಿಗೇ ಸೇರಬೇಕು. ಅದರಿಂದ ಅವನು ಅದರ ಉಪಯೋಗದ ಹಕ್ಕನ್ನು ಬಿಟ್ಟುಕೊಟ್ಟು, ಹಣ ಗಳಿಸಲು ಸಾಧ್ಯತೆ ಇದೆ. ಆದರೆ ಇದು ನಿರಂತರವೇ ಅಥವಾ ಮಾನವನ ಜೀವನವೇ ಸೀಮಿತವಾದ್ದರಿಂದ ಎಷ್ಟು ವರ್ಷಗಳವರೆಗೆ ಅದರ ಸೃಷ್ಟಿಕರ್ತನಾಗಲೀ ಅಥವಾ ವಾರಸುದಾರರಾಗಲೀ ಉಪಯೋಗ ಪಡೆಯಬಹುದು, ಎಂಬುದರ ಬಗ್ಗೆ ತೀವ್ರ ಜಿಜ್ಞಾಸೆ ಈಗ ಹುಟ್ಟಿಕೊಂಡಿದೆ. ಇದಲ್ಲದೇ ಯಂತ್ರಗಳ ಸೃಷ್ಟಿ, ಅದರಲ್ಲಿ ವಿನೂತನ ಮಾದರಿಗಳ ಉಪಯೋಗ, ವ್ಯಾಪಾರಿ ಚಿನ್ಹೆ ಅಥವಾ ಲಾಂಛನ ಇವುಗಳೂ ಈ ಗುಂಪಿಗೇ ಸೇರತಕ್ಕದ್ದು. ಒಂದು ವಸ್ತುವಿನ ನಿರ್ಮಾಣಕ್ಕಿಂತ ಅದರ ಬಗ್ಗೆ ಪ್ರಚಾರ ಮತ್ತು ಅದರಿಂದ ಗಳಿಕೆ ಇವು ವ್ಯಾಪಾರೀ ದೃಷ್ಟಿಯಲ್ಲಿ ಮುಖ್ಯವಾದ್ದರಿಂದ ಇಲ್ಲಿ ಉಪಯೋಗಿಸಬಹುದಾದ ವ್ಯಾಪಾರೀ ತಂತ್ರ, ಲಾಂಛನ, ಹೆಸರು ಇವುಗಳು ವಿಶೇಷ ಮೌಲ್ಯಗಳನ್ನು ಹೊಂದಿವೆ. ಆದ್ದರಿಂದ ಇದರ ರಕ್ಷಣೆಯೂ ಕಾನೂನಿನ ಭಾರ.

ಈಗ ವಿಜ್ಞಾನದಲ್ಲಿ ಬಹಳ ಮುಂದುವರಿಕೆಯಾಗಿ ಜೀವಾಣುಗಳ ಬಗ್ಗೆ ಸಂಶೋಧನೆ ನಡೆಸಿ, ಕೃತಕ ಜೀವಾಣುಗಳು ಮತ್ತು ಕೃಷಿಯಲ್ಲಿ ಉಪಯೋಗವಾಗತಕ್ಕಂತಹ ಹೊಸ ತಳಿ ಬೀಜಗಳು ಮತ್ತು ಹೊಸ ತಳಿ ಪ್ರಾಣಿವರ್ಗಕ್ಕೆ ಸೇರಿದ ಕೆಲವು ಗುಂಪಿಗೆ ಈ ಕೃತಿಸ್ವಾಮ್ಯ ಅನ್ವಯ ಮಾಡಲಾಗಿದೆ. ಇದರಿಂದ ಪ್ರಪಂಚದ ಮುನ್ನಡೆಯಾಗುವ ಬದಲು ವಿಜ್ಞಾನದ ಕೊಡುಗೆ ಕೇವಲ ಕೆಲವರ ಸ್ವಾಮ್ಯವಾಗಿ ಮಾನವನಿಗೆ ಹಾನಿಕಾರಕವಾದ ಪ್ರಸಂಗ ಒದಗಿದೆ. ಇದರಲ್ಲಿ ಸಂಶೋಧನೆ ನಿರ್ಮಾಣ ಮಾಡಿದವನ ಒಡೆತನ ಎಷ್ಟರ ಮಟ್ಟಿಗೆ ಮಾನವ ಹಿತದೃಷ್ಟಿಯಿಂದ

ಒಪ್ಪಬೇಕೇ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿವೇಚನೆ ಅಗತ್ಯ. ಈ ರೀತಿ ಸಂಶೋಧನೆ (ನಿರ್ಮಾಣ) ಮಾಡಿದ ವಸ್ತುವಿನ ಗುಂಪಿನಲ್ಲಿ ಅಗತ್ಯ ಔಷಧಿಗಳೂ ಸೇರಲ್ಪಡುತ್ತವೆ. ಇವುಗಳ ಒಡೆತನವನ್ನು ಕಾನೂನು ರಕ್ಷಣೆ ಮಾಡಲು ಹೊರಟರೆ ಮಾನವ ಕುಲಕ್ಕೆ ಅಪಚಾರ ಮಾಡಿದಂತೆ.

ಈ ಕೃತಿಸ್ವಾಮ್ಯ ಅದರ ಒಡೆಯನ ಮರಣದ ನಂತರ ಅರವತ್ತು ವರ್ಷಗಳವರೆಗೆ ರಕ್ಷಣೆ ಮಾಡಲಾಗಿದೆ. (Act 13 of 1992) ಇದರ ಉಪಯೋಗ ಅಥವಾ ಪ್ರಯೋಜನದ ಒಡೆತನ ಅವನ ವಾರಸುದಾರರಿಗೆ ಸೇರಿದ್ದು. ಕೃತಿಚೌರ್ಯ ಇತ್ತೀಚೆಗೆ ವಿಶೇಷವಾಗಿ ಕಂಡುಬರುತ್ತಿದೆ. ಇದು ಶಿಕ್ಷಾರ್ಹ ಅಪರಾಧ. ಆರು ತಿಂಗಳಿಗೆ ಕಡಿಮೆ ಇಲ್ಲದಂತೆ ಮೂರು ವರ್ಷಗಳವರೆಗೂ ಕಾರಾಗೃಹವಾಸವನ್ನು ವಿಧಿಸಬಹುದು. ಹೀಗೆ ಒಂದು ಅಮೂರ್ತ ವಸ್ತುವಿನ ಒಡೆತನ ಕಾನೂನಿನಲ್ಲಿ ಮಾನ್ಯತೆ ಪಡೆದು ಮತ್ತು ರಕ್ಷಣೆ ಪಡೆದಿದ್ದರೂ ಕೆಲವು ಸಂದರ್ಭಗಳಲ್ಲಿ ಅದನ್ನು ಉಪಯೋಗಿಸಬಹುದಾದ ವಿನಾಯಿತಿ ಹೀಗಿದೆ:

(೧) ಸಂಶೋಧನೆಗಾಗಿ

(೨) ಯುಕ್ತವಾದ ಟೀಕೆ ಅಥವಾ ವಿಮರ್ಶೆ

(೩) ಸಾಹಿತ್ಯ, ನಾಟಕ ಮತ್ತು ಸಂಗೀತಕ್ಕೆ ಸಂಬಂಧಪಟ್ಟ ವಸ್ತುವಾದರೆ ಹಣ ಗಳಿಸುವ ಇಚ್ಛೆಯಿಲ್ಲದೆ ಕೇವಲ ಜನರಂಜನೆಗಾಗಿ

(೪) ಕೇವಲ ಖಾಸಗಿರಂಜನೆಗಾಗಿ ಉಪಯೋಗಿಸುವುದಕ್ಕೆ ಅವಕಾಶ.

ಇದನ್ನು ಕೃತಿಸ್ವಾಮ್ಯ ಕಾನೂನಿನಲ್ಲಿ ಒದಗಿಸಲಾಗಿದೆ. 1970ರಲ್ಲಿ ಒಂದು ನವ ವಸ್ತುವಿನ ನಿರ್ಮಾಣಕ್ಕೆ ಸಂಬಂಧಿಸಿದ ಇಂಡಿಯನ್ ಪೇಟೆಂಟ್ಸ್ ಆ್ಯಕ್ಟ್ (Indian Patents Act 1970) ಎಂಬ ಕಾನೂನನ್ನು ಜಾರಿಗೆ ತರಲಾಗಿದೆ.

ಒಂದು ವಸ್ತುವಿನ ನಿರ್ಮಾಣದ ಬಗ್ಗೆ ಅದರ ಸ್ವಾಮ್ಯ ಬೇಕಾದಲ್ಲಿ ಅದು ಒಂದು ಆಹಾರ ಪದಾರ್ಥ ಅಥವಾ ಔಷಧಿ ಅಥವಾ ರಾಸಾಯನಿಕ ವಸ್ತುವಾಗಲೀ ಏಳು ವರ್ಷಗಳವರೆಗೆ ರಕ್ಷಿಸಲಾಗುತ್ತದೆ ಮತ್ತು ಇತರ ವಸ್ತುಗಳ ನಿರ್ಮಾಣದ ವಿಧಾನಕ್ಕೆ ೧೪ ವರ್ಷಗಳವರೆಗೆ ರಕ್ಷಣೆ ಇರುತ್ತದೆ.

****

ಭಾಗ -೭

ಒಡೆತನ ಮತ್ತು ಸ್ವಾಧೀನತೆ

(Ownership and Possession)

ಕಾನೂನಿನಲ್ಲಿ ಅತ್ಯಂತ ಹಿರಿದಾದ ಕಲ್ಪನೆ ಎಂದರೆ ಒಡೆತನ. ಆಂಗ್ಲ ಕಾನೂನು ಪಂಡಿತ ಜಾನ್ ಅಸ್ಟಿನ್ನನು ಒಡೆತನದ ವಿಷಯದಲ್ಲಿ "ಒಡೆತನದ ಹಕ್ಕುಗಳಿಗೆ ಕಾಲದ ವಿಷಯದಲ್ಲಿ ಮಿತಿಯಿಲ್ಲ, ವಿಲೇವಾರಿ ಮಾಡುವ ಪ್ರಶ್ನೆಯಲ್ಲಿ ನಿರ್ಬಂಧವಿಲ್ಲ ಮತ್ತು ಬಳಸಲು ಅನಿರ್ದಿಷ್ಟ ಹಕ್ಕು ಇದೆ" ಎಂದು ಹೇಳಿದ್ದಾನೆ. (Right unlimited in point of duration, unrestricted in point of disposition and indefinite in point of the user).

ಹಿಂದಿನ ಶತಮಾನದಲ್ಲಿ ವಸ್ತುಗಳ ಮಾಲೀಕನಿಗೆ ತನ್ನ ಸ್ವಂತ ಆಸ್ತಿಯನ್ನು ಏನು ಬೇಕಾದರೂ ಮಾಡುವ ಅನಿರ್ಬಂಧಿತ ಸ್ವಾತಂತ್ರ್ಯವಿತ್ತು. ಈಗ ಅವುಗಳ ಉಪಯೋಗ, ಅನಿರ್ಬಂಧಿತ ವಿಲೇವಾರಿ ಇವು ಶಾಸನದ ಹಿಡಿತಕ್ಕೆ ಸಿಕ್ಕಿವೆ. ಉದಾ: ಬೇಸಾಯದ ನೆಲಹೊಲಗಳನ್ನು ಬೇಸಾಯಗಾರನಲ್ಲದವನಿಗೆ ಮಾರುವುದನ್ನು ಕಾನೂನು ನಿಷೇಧಿಸಿದೆ (Crops Levy). ಕಾನೂನಿಗನುಗುಣವಾಗಿ ಒಡೆತನ ಎಂಬ ಶಬ್ದದ ಕಲ್ಪನೆಯನ್ನು ಮಾಡಲು ಕಲ್ಪನೆಯು ಬರೀ ವಸ್ತು ವಿಷಯಕ್ಕೆ ಸೇರುವಂತೆ ಮಾಡಲಾಗುವುದಿಲ್ಲ. ಏಕೆಂದರೆ ನಾವು ಮೊದಲೇ ಗಮನಿಸಿರುವ ಹಾಗೆ ವಸ್ತು ಎಂಬ ಮಾತಿಗೆ ಮೂರ್ತ ಮತ್ತು ಅಮೂರ್ತ ಆಸ್ತಿಗಳು, ಕೃತಿಸ್ವಾಮ್ಯ, ವ್ಯಾಪಾರ ಚಿಹ್ನೆ, ಇತರ ಬೌದ್ಧಿಕ ಸ್ವತ್ತುಗಳು ಇಂತಹವುಗಳೆಲ್ಲಾ ಸೇರುತ್ತವೆ. ಒಡೆತನದ ಕಾನೂನು ಇಂತಹ ಹಕ್ಕುಗಳಿಗೆಲ್ಲಾ ಅನ್ವಯಿಸುತ್ತದೆ. ಆದ್ದರಿಂದ ಒಡೆತನ ಎಂಬ ಮಾತಿನ ಕಲ್ಪನೆಯನ್ನು ಎಲ್ಲಾ ವಸ್ತು ವಿಷಯಕ್ಕೂ ಸೂಕ್ತವಾಗುವಂತೆ ಹೆಣೆಯಲ್ಪಟ್ಟಿದೆ. ಈ ಒಡೆತನವನ್ನು ಹಕ್ಕುಗಳ ಒಂದು ಗಂಟು (Ownership is a bundle of rights) ಎಂದು ವಿವರಿಸಬಹುದು. ಇದರ ಕೆಲವು ಲಕ್ಷಣಗಳು ಅನಿರ್ದಿಷ್ಟ, ಅವಧಿಯ ಉಪಯೋಗ: ಅನುವಂಶೀಯತೆ ಮತ್ತು ವರ್ಗಾವಣೆ ಮಾಡುವ ವೈಶಿಷ್ಟ್ಯಗಳು. ಒಬ್ಬ ವ್ಯಕ್ತಿಯನ್ನು ಒಡೆಯನೆಂದು ಕರೆದರೆ ಅವನಿಗೆ ಆ ವಸ್ತು ವಿಷಯದ ಮೇಲೆ, ಮೇಲೆ ಹೇಳಿದ ವಿಶಿಷ್ಟ ಹಕ್ಕುಗಳೆಲ್ಲಾ ಅದರಲ್ಲಿ ಕೇಂದ್ರೀಕೃತವಾಗಿರುತ್ತವೆ.

ಈ ಒಡೆತನ ಎಂಬ ಕಲ್ಪನೆಯನ್ನು ಕಾನೂನು, ಶೂನ್ಯ ಅಥವಾ ಮಾಯವಾಗುವುದಕ್ಕೆ ಬಿಡುವುದಿಲ್ಲ. ಒಬ್ಬ ವ್ಯಕ್ತಿಯು ಮರಣ ಹೊಂದಿದರೆ ಆ ತಕ್ಷಣ ಅವನ ಆಸ್ತಿಯ ಒಡೆತನ ಅವನ ವಾರಸುದಾರರಿಗೆ ಸೇರುತ್ತದೆ. ಒಡೆತನ• ಶೂನ್ಯ ಅಥವಾ ಅಂತ್ಯವಾಗುವುದಿಲ್ಲ.

ಕೆಲವು ವೇಳೆ ಈ ಕಲ್ಪನೆಗೆ ಕಾನೂನು ಬದಲಾವಣೆಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿ ಮರಣ ಹೊಂದಿದ ಮೇಲೆ ಅವನ ವಾರಸುದಾರರಿಗೆ ಆಸ್ತಿಗಳು ತಕ್ಷಣ ಹಂಚಿಹೋಗದಿದ್ದರೆ **"ಜಂಟಿ ಒಡೆತನ"** ಎಂಬ ಕಲ್ಪನೆಯನ್ನು ತಂದು ತದನಂತರ ಹಂಚುವ ಕಾರ್ಯವನ್ನು ಮಾಡಲು ಆಸ್ಪದವಿದೆ. ಈ ತರಹ ಜಂಟಿ ಒಡೆತನ ಎಂಬ ಪದವು ಹಿಂದೂ ಅವಿಭಾಜ್ಯ ಕುಟುಂಬ ದಾಯಾದಿತ್ವ ಮತ್ತು ಇಂಗ್ಲೀಷ್ ಕಾನುನುಗಳಿಗೆ ಅನ್ವಯಿಸುತ್ತದೆ. ಇದೇ ರೀತಿ ನ್ಯಾಸ (Trust) ಮತ್ತು ಲಾಭದ ಒಡೆತನ (Beneficial Ownership) ಇವುಗಳ ನಡುವಿನ ವಿಭಿನ್ನತೆಯನ್ನು ಗುರುತಿಸಬಹುದು. ನ್ಯಾಸ ಒಡೆತನದಲ್ಲಿ ಒಂದು ವಸ್ತುವಿನ ಯಜಮಾನನು ಬೇರೆ ನಿರ್ದಿಷ್ಟ ವ್ಯಕ್ತಿಗಳ ಪ್ರಯೋಜನಕ್ಕಾಗಿ ಅದನ್ನು ಬಿಟ್ಟು ಕೊಡುತ್ತಾನೆ ಅಥವಾ ತಾನೇ ಆ ವಸ್ತುವನ್ನು ಇಟ್ಟುಕೊಂಡು, ಅದನ್ನು ಬೇರೆ ವ್ಯಕ್ತಿಗಳಿಗಾಗಿ ಉಪಯೋಗಿಸುತ್ತಾನೆ. ಇದು ಆ ವ್ಯಕ್ತಿಯ ಒಡೆತನಕ್ಕೇ ಹೊಂದಿಕೊಂಡಿರುವ ಬಾಧ್ಯತೆಯ ವಿಷಯ. ಹಿಂದೆ ಕಾನೂನಿನಲ್ಲಿ ಒಡೆತನವನ್ನು ಸೂಚಿಸಿದರು. ಇದರ ಪ್ರಕಾರ ಒಬ್ಬ ವ್ಯಕ್ತಿಯು ತನ್ನದೇ ಆದ ಆಸ್ತಿಯನ್ನು ಬೇರೊಬ್ಬನ ಹೆಸರಿನಲ್ಲಿ ಇಟ್ಟಿರುವುದು. ಇಂತಹ ಬೆನಾಮಿ ಒಡೆತನವನ್ನು ಕಾನೂನು ಒಪ್ಪಿ ಹೊರ ತೋರಿಕೆಯ ಒಡೆಯನು ನಿಜವಾದ ಒಡೆಯನಲ್ಲ ಎಂದು ವಾದಿಸಲು ಅವಕಾಶ ಮಾಡಿತ್ತು. ಆದಾಯಕರ ಕಾನೂನಿನಲ್ಲಿ ಈ ತರಹ ಬೆನಾಮಿ ಒಡೆತನವನ್ನು ಸಿವಿಲ್ ನ್ಯಾಯಾಲಯದಲ್ಲಿ ಮನ್ನಣೆ ಕೇಳಲು ಪ್ರಯತ್ನಿಸಿದರೆ ನ್ಯಾಯಾಲಯವು ತನ್ನ ಆದಾಯಕರ ಅಧಿಕಾರಿಯ ಮುಂದೆ ಈ ವ್ಯವಹಾರವನ್ನು ಒಪ್ಪಿಕೊಂಡಿದ್ದರೆ ಮಾತ್ರ ಸಾಧ್ಯ ಎಂದು ಹೇಳಲಾಗಿತ್ತು. ಇತ್ತೀಚೆಗೆ ಭಾರತ ಸರ್ಕಾರವು ಒಂದು ಕಾಯಿದೆ ಯನ್ನು ಜಾರಿಗೆ ತಂದು ಬೆನಾಮಿ ವ್ಯವಹಾರಗಳು ಮಾನ್ಯವಲ್ಲವೆಂದು ಹೇಳಿದೆ. ಇದು ಏಕೆಂದರೆ ಭಾರತದಲ್ಲಿ ಈ ತರಹ ವ್ಯವಹಾರಗಳು ಬಹಳ ಹೆಚ್ಚಾಗಿದ್ದವು.

ಸ್ವಾಧೀನತೆ (Possession)

ಕಾನೂನಿನಲ್ಲಿ ಕೇವಲ ಸ್ವಾಧೀನತೆಗೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಇಂತಹ ಸ್ವಾಧೀನತೆಗೆ ವಸ್ತುವಿನ ಒಡೆತನವೂ ಇರಬೇಕೆಂದಿಲ್ಲ. ಸಮಾಜದಲ್ಲಿ ಜನರಲ್ಲಿರುವ ಒಡೆತನವನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ. ಇದಕ್ಕೋಸ್ಕರ ಯಾವ ವ್ಯಕ್ತಿಯು ಒಂದು ವಸ್ತುವಿನ ಸ್ವಾಧೀನವನ್ನು ಹೊಂದಿರುವನೋ ಅವನ ಹಕ್ಕನ್ನು ಕಾಪಾಡುವುದಕ್ಕೆ ಕಾನೂನು ಸಹಾಯ ಮಾಡುತ್ತದೆ. ಅಂತಹ ಸಮಯದಲ್ಲಿ ಆ ಸ್ವಾಮ್ಯವು ಸರಿಯೇ ಅಥವಾ ತಪ್ಪೋ ಎಂದು ನೋಡುವುದಿಲ್ಲ. ಈಗ ನಿರ್ದಿಷ್ಟ ಪರಿಹಾರ ಅಧಿನಿಯಮದಲ್ಲಿ (Specific Relief Act) ಹೇಳಿರುವ ಒಂದು ವಿಷಯವನ್ನು ನಾವು ಇಲ್ಲಿ ಗಮನಿಸಬೇಕು. ಒಂದು

ವಸ್ತುವಿನ ಯಜಮಾನರು ಆ ವಸ್ತುವು ಇನ್ನೊಬ್ಬನ ಬಳಕೆಯಲ್ಲಿದ್ದಾಗ ಬಳಸುತ್ತಿರುವವನ ಒಪ್ಪಿಗೆಯಿಲ್ಲದೆ ತೆಗೆದುಕೊಳ್ಳುವ ಹಾಗಿಲ್ಲ. ಹಾಗೇನಾದರೂ ಮಾಡಿದರೆ ಈ ಅಧಿನಿಯಮದ ಪ್ರಕಾರ ಬಳಕೆದಾರನು ಆ ವಸ್ತುವನ್ನು ತನಗೆ ಹೊಂದಿರುವ ಹಕ್ಕು ಇದೆ ಎಂದು ಸರಿಯಾದ ಸಾಕ್ಷಿ ಸಮೇತ ತೋರಿಸಲು ಅಸಮರ್ಥನಾದರೂ ಕೂಡ, ಹಿಂದಕ್ಕೆ ಪಡೆಯಬಹುದು. ಒಬ್ಬ ಅತಿಕ್ರಮಣಕಾರನು ಒಡೆಯನ ನಿರ್ಲಕ್ಷ್ಯದಿಂದ ಒಂದು ವಸ್ತುವನ್ನು ಉಪಯೋಗಿಸುತ್ತಿದ್ದರೆ ಇಂತಹ ಸ್ವಾಧೀನತೆಯನ್ನು ಮಾಲೀಕನು ಬಹಳ ಕಾಲ ನಿರ್ಲಕ್ಷ್ಯ ಮಾಡಿದ್ದರೆ ಕಾನೂನು ಅತಿಕ್ರಮಣಕಾರನನ್ನು ಪುರಸ್ಕರಿಸುತ್ತದೆ. (Puran Singh Vs. Punjab (1975) 4 SCC 518). ಒಡೆಯನಿಲ್ಲದ ಒಂದು ಸ್ವತ್ತಿಗೆ ಅದರ ಸ್ವಾಧೀನ ಉಳ್ಳವನೇ ಒಡೆಯನಾಗುತ್ತಾನೆ. ಆದುದರಿಂದ ಈ ಸ್ವಾಧೀನತೆ ಎಂಬ ಹಕ್ಕು ಅತೀ ಮುಖ್ಯವಾದುದು. ಒಬ್ಬ ವ್ಯಕ್ತಿಯು ಒಂದು ಸ್ವತ್ತಿನ ದೀರ್ಘ ವಿಶಿಷ್ಟ ಸ್ವಾಧೀನದಲ್ಲಿದ್ದರೆ (೧೨ವರ್ಷ) ಪ್ರತಿಕೂಲ ಸ್ವಾಧೀನತೆಯಿಂದ ತಾನೇ ಒಡೆಯನಾಗುತ್ತಾನೆ ಮತ್ತು ನಿಜವಾದ ಒಡೆಯನ ಹಕ್ಕುಗಳು ನಾಶವಾಗುತ್ತವೆ. (Limitation Act Sec. 27 & Article 65) ಇನ್ನೊಂದು ಕಾನೂನಿನ ಮುಖ್ಯ ತತ್ವ ಎಂದರೆ ವ್ಯಕ್ತಿಯು "ತನ್ನ ಒಂದು ವಸ್ತುವಿನಲ್ಲಿ ತನಗಿರುವ ಹಕ್ಕಿಗಿಂತ ಹೆಚ್ಚು ಉತ್ತಮ ಹಕ್ಕನ್ನು ಮತ್ತೊಬ್ಬನಿಗೆ ವರ್ಗ ಮಾಡಲು ಸಾಧ್ಯವಿಲ್ಲ" (No one can convey a better title than what he himself possess) ಇದಕ್ಕೆ ಒಂದು ವಿನಾಯಿತಿ ಎಂದರೆ ಒಬ್ಬ ವಾಣಿಜ್ಯ ಏಜೆಂಟ್. ಕಾನೂನು ಇವನಿಗೆ ಒಂದು ಚರ ವಸ್ತುವಿನಲ್ಲಿ ತನಗಿರುವ ಸ್ವಾಮ್ಯಕ್ಕಿಂತ ಉತ್ತಮ ಒಡೆತನವನ್ನು ಹಸ್ತಾಂತರಿಸಬಲ್ಲ ಹಕ್ಕನ್ನು ನೀಡಿದೆ. ಈ ಏಜೆಂಟನು ತನ್ನ ವಶದಲ್ಲಿರುವ ಚರಸ್ವತ್ತುಗಳನ್ನು ಅವುಗಳ ಯಜಮಾನನ ಒಪ್ಪಿಗೆ ಪಡೆದಿದ್ದರೆ ತನಗಿಲ್ಲದ ಸ್ವಂತ ಸ್ವಾಮ್ಯವನ್ನು ಬೇರೊಬ್ಬರಿಗೆ ಕೊಡಬಲ್ಲನು. (Sec. 27, Sale of Goods Act). ಈ ಸ್ವಾಧೀನತೆಯು ತನ್ನಲ್ಲಿರುವ ಸ್ವಾಮ್ಯವನ್ನು ಕಾಯುವ ಬರೀ ರಕ್ಷಣಾ ಆಯುಧವಲ್ಲ. ತನ್ನಿಂದ ಅಗಲಿದ ಸ್ವಾಮ್ಯವನ್ನು ಹಿಂದಕ್ಕೆ ಪಡೆಯುವುದನ್ನು ಸಹ ಸಮರ್ಥಿಸುತ್ತದೆ. ಆದರೆ ಬಾಡಿಗೆದಾರನಂತೆ ಮಾಲೀಕನ ಒಪ್ಪಿಗೆಯನ್ನು ಪಡೆದ ಸ್ಥಿರಾಸ್ತಿಯ ದೀರ್ಘ ಸ್ವಾಧೀನವು ಪ್ರತಿಕೂಲ ಸ್ವಾಧೀನವೆಂದೆನಿಸುವುದಿಲ್ಲ; (Adverse Possession) ಒಡೆಯನ ಮಾಲೀಕತ್ವದ ಸ್ಪಷ್ಟ ಸಲಕರಣೆಯ ನಂತರವೇ ಸ್ವಾಧೀನವು ಪ್ರತಿಕೂಲ ಸ್ವಾಧೀನವಾಗಬಲ್ಲದು.

ಒಟ್ಟಿನಲ್ಲಿ ವಾಸ್ತವಿಕ ಸ್ವಾಮ್ಯ ಮತ್ತು ಕಾನೂನು ಒಪ್ಪಿರುವ ಸ್ವಾಮ್ಯ ಇವುಗಳ ಅರ್ಥವನ್ನು ಗಮನಿಸಬೇಕು. ಒಂದು ವಸ್ತುವಿನ ಸ್ವಾಮ್ಯವನ್ನು ತನ್ನ

ಕೈವಶದಲ್ಲಿಟ್ಟುಕೊಂಡಿದ್ದರೆ ಅದನ್ನು ವಾಸ್ತವಿಕ ಸ್ವಾಧೀನ ಎನ್ನಬಹುದು. ಇದು ಕಾನೂನಿನಲ್ಲಿಯೂ ಒಡೆತನವಾಗುತ್ತದೆ. ಇದೇ ತರಹ ತನ್ನ ವಶದಲ್ಲಿದ್ದ ವಸ್ತುಗಳ ಸ್ವಾಮ್ಯವೂ ಇರುವ ಸಾಧ್ಯತೆ ಇದೆ. ಉದಾಹರಣೆಗೆ ಬಾಡಿಗೆದಾರನ ಸ್ವಾಧೀನಕ್ಕೆ ಕೊಟ್ಟ ಒಂದು ಮನೆಯ ಸ್ವಾಮ್ಯ ಅಥವಾ ಅಡಮಾನಕ್ಕೆ ಕೊಟ್ಟಿರುವ ಒಂದು ವಸ್ತುವಿನ ಸ್ವಾಮ್ಯ. ಒಬ್ಬ ವ್ಯಕ್ತಿಯು ಭೂ ಮಾಲೀಕನಾಗಿದ್ದ ಪಕ್ಷದಲ್ಲಿ ಆ ಭೂಮಿಗೆ ಸೇರಿರುವ ಅಥವಾ ಆ ಭೂಮಿಯ ಒಳಗಿರುವ ಎಲ್ಲಾ ಚರ ಸ್ವತ್ತಿಗೂ ಅವನಿಗೆ ಗೊತ್ತಿರಲೀ ಗೊತ್ತಿಲ್ಲದಿರಲೀ ಮಾಲೀಕನಾಗುತ್ತಾನೆ. ಇಲ್ಲಿ ಒಂದು ಅಪವಾದವನ್ನು ಗಮನಿಸಬಹುದು. ಒಬ್ಬ ನೌಕರನೇ ಆಗಲಿ, ಏಜೆಂಟನೇ ಆಗಲಿ ವಸ್ತುವಿನ ಸ್ವಾಧೀನವನ್ನು ಹೊಂದಿದ್ದರೆ ಅವನಿಗೆ ಸ್ವಾಮ್ಯದ ಹಕ್ಕು ಇರುವುದಿಲ್ಲ. ಇಂಥವರಿಗೆ ಸ್ವತ್ತುಗಳನ್ನು ಕೊಟ್ಟಿರುವುದು ಕೇವಲ ಉಸ್ತುವಾರಿಗೆ ಮಾತ್ರ (See above 1977 SC Puran Singh Vs. Punjab).

ವರ್ಗಾವಣೆ, ಹಸ್ತಾಂತರಣ ಮತ್ತು ವರ್ಗಪತ್ರ ಬರೆಯುವುದು
(Transfer, Assignment and Conveyancing)

ಆಧುನಿಕ ಸಮಾಜದ ವೈಶಿಷ್ಟ್ಯವೇನೆಂದರೆ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಹಕ್ಕುಗಳ ಅಥವಾ ಸ್ವತ್ತುಗಳ ವರ್ಗಾವಣೆಯು ನಡೆಯುತ್ತಲೇ ಇರುತ್ತದೆ. ಇದು ಮಾರಾಟ (ವರ್ಗ) ಪತ್ರ (Sale deed, Transfer deed) ಬರೆಯುವುದನ್ನು ಒಳಗೊಂಡಿದೆ. ಆದ್ದರಿಂದ ಮಾರಾಟ ಪತ್ರವನ್ನು ಕಾನೂನಿಗೆ ಅನುಸಾರವಾಗಿ ಯಾವುದೇ ಸ್ವತ್ತಿನ ಹಕ್ಕು ಅಥವಾ ಸ್ವತ್ತುಗಳನ್ನು ವರ್ಗಾವಣೆ ಮಾಡುವ ಕ್ರಮ ಎಂಬುದಾಗಿ ವಿವರಿಸಲಾಗಿದೆ ಮತ್ತು ಇದು ಇಲ್ಲಿ ನೀಡಿರುವ ಕ್ರಮಗಳನ್ನು ಒಳಗೊಂಡಿದೆ:

ಅ) ವರ್ಗಾವಣೆಕಾರನ ಸ್ವಾಮ್ಯವನ್ನು ಖಚಿತಪಡಿಸಿಕೊಳ್ಳುವುದು.

ಆ) ಪಕ್ಷಗಳ ಉದ್ದೇಶವನ್ನು ಖಚಿತಪಡಿಸಿಕೊಳ್ಳುವುದು.

ಇ) ವರ್ಗಾವಣೆಯ ವಿಧಾನವನ್ನು ಆಯ್ಕೆ ಮಾಡುವುದು.

ಈ) ಅಗತ್ಯವಾದ ಪತ್ರದ ತಯಾರಿಕೆ.

ಉ) ದಸ್ತಾವೇಜಿಗೆ ನೋಂದಣಿ, ಅನುಪ್ರಮಾಣದ ಮತ್ತು ಸ್ಟಾಂಪು ಸುಂಕದ ಅಗತ್ಯವಿದೆಯೇ ಎಂಬುದನ್ನು ಸೂಚಿಸುವುದು.

ಈ ಕ್ರಮವನ್ನು ನಿಯಂತ್ರಿಸುವ ಮುಖ್ಯ ಅಧಿನಿಯಮಿತಿಗಳು ಭಾರತದ ನೋಂದಣಿ ಅಧಿನಿಯಮ (Indian Registration Act 1908) ಮತ್ತು ಸ್ವತ್ತಿನ ವರ್ಗಾವಣೆ ಅಧಿನಿಯಮ (Transfer of Property Act 1882) ಈ ಎರಡೂ

ಅಧಿನಿಯಮಿತಿಗಳ ಸಂಯೋಜನೆಯ ಕಾರ್ಯಚರಣೆಯು ಪಕ್ಷಗಳಿಗೆ ಕಾನೂನಿನ ಮೂಲಕ ನಿಯಮಿಸಲಾದ ವಿಧಾನಕ್ಕೆ ಖಚಿತವಾದ ಅನುಸರಣೆಯನ್ನು ಬಿಟ್ಟು ಯಾವುದೇ ಆಯ್ಕೆಯನ್ನು ಕೊಟ್ಟಿಲ್ಲ. ಆದ್ದರಿಂದ ಖರೀದಿದಾರನನ್ನು ಭೂಮಿಯ ಒಡೆಯನೆಂದು ಮಾರಾಟಗಾರನು ಕರೆದರೂ ಮತ್ತು ಮಾರಾಟಗಾರನು ಖರೀದಿದಾರನಿಂದ ಪೂರ್ಣ ಪ್ರತಿಫಲದ ಸ್ವೀಕಾರವನ್ನು ಪಡೆದಿದ್ದರೂ ಸಹ, ಕಾನೂನಿನ ದೃಷ್ಟಿಯಲ್ಲಿ ಖರೀದಿಕಾರನಿಗೆ ಸ್ವಾಮ್ಯವನ್ನು ಕೊಡಲಾಗುವುದಿಲ್ಲ.

ಚರ ಆಸ್ತಿಗಳ ವರ್ಗಾವಣೆಯು ಭಾರತದ ನೋಂದಣಿ ಅಧಿನಿಯಮದ ಉಪಬಂಧಗಳನ್ನು ಆಕರ್ಷಿಸುವುದಿಲ್ಲ ಮತ್ತು ಸ್ವಾಮ್ಯವನ್ನು ಕೊಡಲು ನೋಂದಣಿ ಪತ್ರದ ಅಗತ್ಯವು ಇರುವುದಿಲ್ಲ. ಆದರೆ ಕಾನೂನಿನ ಪ್ರಕಾರ ಈ ಪತ್ರಕ್ಕೆ ಶುಲ್ಕದ ಅಗತ್ಯ ಇರುತ್ತದೆ. ಆದ್ದರಿಂದ ರಾಜ್ಯದ ಅಧಿನಿಯಮಗಳು ಉದಾಹಣೆಗೆ, ಕರ್ನಾಟಕ ಸ್ಟಾಂಪು ಆ್ಯಕ್ಟ್ ೧೯೫೭ (Karnataka Stamp Act 1957) ಮತ್ತು ಭಾರತದ ಬೇರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ಇತರ ಅಂತಹದೇ ಅಧಿನಿಯಮಿತಿಗಳನ್ನು ಗಮನಿಸಬೇಕು. ಭಾರತದ ಸ್ಟಾಂಪು ಅಧಿನಿಯಮದಲ್ಲಿ, ವ್ಯವಹಾರಗಳಿಗೆ, ವಿನಿಯಮ ಪತ್ರಕ್ಕೆ (Bill of Exchange, Pronote Etc.) ಭಾರತದ ಸ್ಟಾಂಪು ಅಧಿನಿಯಮ ಗೊತ್ತುಪಡಿಸಿದ ದರಗಳನ್ನು ಬಿಟ್ಟು, ಬೇರೆ ಅನ್ವಯಿಕವಾಗುವುದಿಲ್ಲ. ಕಾರಣ ಸ್ಪಷ್ಟ ವಿನಿಮಯ ಪತ್ರವು ಭಾರತದಲ್ಲೆಲ್ಲಾ ಸಮಂಜಸವಾಗಿದೆ. ಏಕೆಂದರೆ ಅದು ಅಂತಹ "ಸ್ಥಳ ಬದಲಿಕೆ"ಯನ್ನು ಗಣನೆಗೆ ತೆಗೆದುಕೊಳ್ಳದೆ ಕೈಗಳನ್ನು ಬದಲಾಯಿಸುವಿಕೆಯ ದಸ್ತಾವೇಜು ಆಗಿದೆ.

ಒಂದು ಪತ್ರವು ಅವಶ್ಯಕವಾದ ಸ್ಟಾಂಪು ಸುಂಕವನ್ನು ಒಳಗೊಂಡಿಲ್ಲದಿದ್ದರೆ, ಅದರ ಬಗ್ಗೆ ವ್ಯವಹಾರದ ಸಾಕ್ಷ್ಯದಲ್ಲಿ ಖೋತಾ ಇರುವ ಸ್ಟಾಂಪು ಸುಂಕ ಸಂದಾಯ ಮಾಡಿದ ಮೇಲೆ ಮತ್ತು ದಂಡವನ್ನು ಸಂದಾಯ ಮಾಡಿದ ಮೇಲೆ ಪಡೆಯ ಬಹುದು. ಸರ್ಕಾರದ ಎಲ್ಲಾ ಅಧಿಕಾರಿಗಳೂ ಸಾಕಷ್ಟು ಸ್ಟಾಂಪು ಹಚ್ಚದಿರುವ ಎಲ್ಲಾ ಪತ್ರಗಳನ್ನು ವಶಪಡಿಸಿಕೊಳ್ಳುವುದಕ್ಕೆ ಅಧಿಕಾರ ಹೊಂದಿರುತ್ತಾರೆ. ವಿಧಿಸುವ ದಂಡವು ಸಾಮಾನ್ಯವಾಗಿ ಖೋತಾದ ಹತ್ತರಷ್ಟಿರುತ್ತದೆ. ಹೊರದೇಶದಲ್ಲಿ ಕಾರ್ಯಗತಗೊಳಿಸಿದ ಸುಂಕ ಹೊರಿಸಬಹುದಾದ ಎಲ್ಲಾ ಪತ್ರಗಳನ್ನೂ ಭಾರತದ ಯಾವುದೇ ರಾಜ್ಯಕ್ಕೆ ತಲುಪಿದ ಮೂರು ತಿಂಗಳೊಳಗೆ ಸ್ಟಾಂಪು ಮಾಡಬಹುದು. ಈ ಸ್ಟಾಂಪುಗಳನ್ನು ಸಾಮಾನ್ಯವಾಗಿ ನ್ಯಾಯಿಕವಲ್ಲದ (Non-Judical) ಸ್ಟಾಂಪುಗಳು ಎಂದು ಕರೆಯಲಾಗಿದೆ. ರಾಜ್ಯಕ್ಕೆ ಇದು ಆದಾಯದ ಬಹಳ ಮುಖ್ಯವಾದ ಮೂಲವಾಗುತ್ತದೆ. ವರ್ಗಾವಣೆಯ ವಸ್ತು ವಿಷಯವು ಚರ ಆಸ್ತಿಗಳಾಗಿದ್ದರೆ ನೋಂದಾಯಿತ ಪತ್ರವಿಲ್ಲದೇ ವರ್ಗಾವಣೆ ಮಾಡಬಹುದು

ಎಂಬುದನ್ನು ತಿಳಿದುಕೊಳ್ಳಬೇಕು. ಅಂದರೆ ಅಂತಹ ಪತ್ರಗಳಿಗೂ ಸಹ ಕಾನೂನಿನ ಉದ್ದೇಶಗಳಿಗಾಗಿ ಮೌಲ್ಯಾನುಸಾರ ಸ್ಟಾಂಪು ಹಚ್ಚಬೇಕಾಗುತ್ತದೆ. ವರ್ಗಾವಣೆ ಲಿಖಿತ ಪತ್ರಕ್ಕೆ ಸ್ಟಾಂಪು ಸುಂಕ ಕಡಿಮೆ ಕಟ್ಟಿದ್ದರೆ ಅದನ್ನು ಯಾವುದೇ ಸಾಕ್ಷಿಗಾಗಿ ಉಪಯೋಗಿಸಿಕೊಳ್ಳಲಾಗುವುದಿಲ್ಲ. ಆದರೆ, ಅದಕ್ಕೆ ದಂಡ ಕಟ್ಟಿದರೆ ಆಗ ಮಾತ್ರ ಆ ಪತ್ರವನ್ನು ಸಾಕ್ಷಿಗೆ ಉಪಯೋಗಿಸಿಕೊಳ್ಳಬಹುದು.

ಏಜೆಂಟ್‌ನಿಂದ ವರ್ಗಾವಣೆ

ಕಾನೂನಿನ ಪ್ರಕಾರ ಮನುಷ್ಯನು ಏನೇನು ಕಾರ್ಯಗಳನ್ನು ಮಾಡಬಹುದೋ ಅಷ್ಟೇ ಪರಿಣಾಮಕಾರಿಯಾಗಿ ಕ್ರಮಬದ್ಧವಾಗಿ ನೇಮಿತ ಏಜೆಂಟ್‌ನಿಂದಲೂ ಮಾಡಿಸಬಹುದಾಗಿದೆ. ಏಜೆಂಟನನ್ನು ನೇಮಕ ಮಾಡುವ ಪತ್ರವನ್ನು ಸಾಮಾನ್ಯ ವಾಗಿ ಮುಖ್ತ್ಯಾರು ನಾಮೆ (Power of Attorney) ಎಂದು ಕರೆಯಲಾಗಿದೆ. ಸಮಾನ್ಯ ಬಳಕೆಯಲ್ಲಿ ಈ ಪದ ನ್ಯಾಯವಾದಿಯ ಅಥವಾ ವಕೀಲನ ನೇಮಕಾತಿಯನ್ನು ಸೂಚಿಸುತ್ತದೆ. ಆದರೆ ಏಜೆಂಟನನ್ನು ಸಹ ನೇಮಕ ಮಾಡಬಹುದು. ಈ ಜಟಿಲ ಸಮಾಜದಲ್ಲಿ ವ್ಯವಹಾರಸ್ಥರಿಂದ ದಿನನಿತ್ಯವೂ ಮಾಡಿಕೊಂಡ ವ್ಯವಹರಣೆಗಳಲ್ಲಿ ಸ್ವಲ್ಪಮಟ್ಟಿಗೆ ಅಧಿಕಾರವನ್ನು ವಹಿಸಿ ಕೊಡುವುದು ಅನಿವಾರ್ಯವಾಗಿದೆ. ಆದ್ದರಿಂದ ನ್ಯಾಯಾಲಯದ ಮುಂದೆ ಬರುವ ವ್ಯವಹಾರಗಳಲ್ಲಿ ಒಬ್ಬ ಮನುಷ್ಯನನ್ನು ಪ್ರತಿನಿಧಿಸುವ ಅಧಿಕಾರವನ್ನು ಕೊಡಲು ನಿಗದಿತ ಸ್ಟಾಂಪು ಸುಂಕವನ್ನು ಹೊಂದಿರುವ ಒಂದು ಪತ್ರದಲ್ಲಿ ಬರೆದು ಕೊಡಬೇಕು ಮತ್ತು ಅದರ ಯುಕ್ತ ನಿರ್ವಹಣೆಯನ್ನು ಸೂಚಿಸಬೇಕು. ಅಂದರೆ ಅದನ್ನು ಸಾಮಾನ್ಯವಾಗಿ ನೋಟರೀಸ್ ಆ್ಯಕ್ಟ್‌ನ ಪ್ರಕಾರ ವಕೀಲ ಪದವಿಯಿದ್ದು, ನೇಮಕವಾದ ನೋಟರೀ ಪಬ್ಲಿಕ್ ಅಥವಾ ಮ್ಯಾಜಿಸ್ಟ್ರೇಟನಿಂದ ಸಾಕ್ಷಿ ಹಾಕಿಸಬೇಕು. ವರ್ಗಾವಣೇಯ ಪತ್ರದಲ್ಲಿ ಸಾಕ್ಷಿ ಹಾಕಲು ಅವನು ನೋಟರೀ ಆ್ಯಕ್ಟ್‌ನಲ್ಲಿ ನೋಟರೀ ಕೆಲಸಗಳನ್ನು ನೆರವೇರಿಸುವ ಅಧಿಕಾರವನ್ನು ಹೊಂದಿರಬೇಕು. ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ ಅರ್ಥದಲ್ಲಿ ಮುಖ್ತ್ಯಾರು ನಾಮೆ ಇದ್ದರೆ ಮಾತ್ರ ಒಂದು ಪಕ್ಷದ ಹಾಜರಾತಿಯನ್ನು ಮನ್ನಣೆ ಪಡೆದ ಏಜೆಂಟು ಪ್ರತಿನಿಧಿಸುವುದಕ್ಕೆ ಅವಕಾಶ ಮಾಡುತ್ತದೆ.

ಇಲ್ಲಿಯವರೆಗೆ ಬಹಳ ಮುಖ್ಯವಾದ ಮೊಕದ್ದಮೆಗಳಲ್ಲಿ ಏಜೆಂಟನಿಗೆ ಕೊಟ್ಟ ಅಧಿಕಾರವೇನೆಂದರೆ ದಸ್ತಾವೇಜನ್ನು ನೋಂದಣಿಗಾಗಿ ಸಲ್ಲಿಸುವುದು ಮತ್ತು ಪತ್ರ ಬರೆದು ಕೊಟ್ಟವನು ವೈಯಕ್ತಿಕವಾಗಿ ಹಾಜರಾಗಲು ಅಶಕ್ತನಾದಾಗ ನೋಂದಣಿ ಅಧಿಕಾರಿಗಳ ಮುಂದೆ ಅಂತಹ ಪತ್ರದ ಯುಕ್ತ ನಿರ್ವಹಣೆಯನ್ನು ನೆರವೇರಿಸುವುದು ಭಾರತದ ನೋಂದಣಿ ಅಧಿನಿಯಮದ ವರ್ಗ ೩೩ ಪ್ರಕಾರ,

ಅಂತಹ ಮುಖ್ತ್ಯಾರು ನಾಮೆಯನ್ನು ಯಜಮಾನನು ತಾನು ವಾಸ ಮಾಡುವ ಜಿಲ್ಲೆಯೊಳಗಿರುವ ನೋಂದಣಿಕಾರ ಅಥವಾ ಉಪನೋಂದಣಿಕಾರನ ಮುಂದೆ ಮಾತ್ರ ಮಾಡಿದರೆ ಅದು ಮನ್ನಣೆ ಪಡೆಯುತ್ತದೆ ಮತ್ತು ಅಂತಹ ನೋಂದಣಿಕಾರನಿಂದ ಆ ಪತ್ರವು ಅಧಿಪ್ರಮಾಣಿತವಾಗಿರಬೇಕು. ಕುತೂಹಲಕಾರಿ ಯಾಗಿ ಯಜಮಾನನು ನಿರ್ವಹಿಸಿದ ಮುಖ್ತ್ಯಾರು ನಾಮೆಯು ಮತ್ತು ಹಲವಾರು ಪ್ರಕಾರ್ಯಗಳನ್ನು ನೆರವೇರಿಸಲು ಒಂದು ಸಾಮಾನ್ಯ ಏಜೆಂಟನನ್ನು ನೇಮಕ ಮಾಡುವುದು ಮತ್ತು ಯಜಮಾನನ ಸ್ವತ್ತನ್ನು ಮಾರುವುದಕ್ಕೂ ಸಹ ಅವನಿಗೆ ಸಮರ್ಥಗೊಳಿಸುವುದು ಇಂತಹುದಕ್ಕೆ ನೋಂದಣಿಯ ಅಗತ್ಯ ಇರುವುದಿಲ್ಲ. ಭಾರತದ ಸರ್ವೋಚ್ಚ ನ್ಯಾಯಾಲಯವು ಸಯದ್ ಅಬ್ದುಲ್ ಖಾದರ್ ವಿರುದ್ಧ ರಾಮಾರೆಡ್ಡಿ (Syed Abdul Khadar Vs. Rama Reddy AIR 1979 SC 553)ನಲ್ಲಿ ಒಂದು ಸಾಮಾನ್ಯ ಮುಖ್ತ್ಯಾರು ನಾಮೆಗೆ (General Power of Attorney) ನೋಂದಣಿಯ ಅಥವಾ ಅಧಿಪ್ರಮಾಣಿಸುವಿಕೆಯ ಅಗತ್ಯವಿಲ್ಲ ಎಂದು ಹೇಳಿದೆ. ಮುಖ್ತ್ಯಾರುನಾಮೆ ಹೊಂದಿರುವವನು ಒಡೆಯನ ಪರವಾಗಿ ಮಾರಾಟ ಮಾಡಿದರೆ ಒಂದು ಪತ್ರವನ್ನು ತಯಾರು ಮಾಡಿ ಅದಕ್ಕೆ ತನ್ನ ಹೆಸರಿನದೇ ಸಹಿ ಮಾಡುತ್ತಾನೆ ಮತ್ತು ಖರೀದಿಕಾರನು ಅಂತಹ ಪತ್ರದಲ್ಲಿ ಏಜೆಂಟನು ಮಾಡಿದ ಪ್ರತಿನಿತ್ಯದ ಕಾರ್ಯದ ವಿಶ್ವಾಸಾರ್ಹತೆಯ ಮೇಲೆ ಭರವಸೆ ಇಡಬೇಕೆಂಬುದು ಸ್ಪಷ್ಟವಾಗಿದೆ. ಅಧಿಪ್ರಮಾಣದ ಅಗತ್ಯತೆಯಿರುವ ಇನ್ನೊಂದು ಸಂದರ್ಭದಲ್ಲಿ ಏಜೆಂಟನು ಒಡೆಯನ ಹಸ್ತಾಕ್ಷರವನ್ನು ಮಾತ್ರ ಒಪ್ಪಿಕೊಳ್ಳುತ್ತಾನೆ ಮತ್ತು ದಸ್ತಾವೇಜಿನ ಯುಕ್ತ ನಿರ್ವಹಣೆಯನ್ನು ಮಾತ್ರ ಯಜಮಾನನು ಮಾಡುತ್ತಾನೆ. ಒಂದು ಮುಖ್ತ್ಯಾರು ನಾಮೆಯಲ್ಲಿ ಒಂದೇ ವ್ಯವಹಾರಕ್ಕೆ ಸಂಬಂಧಿಸಿದ ಒಂದು ಅಥವಾ ಹೆಚ್ಚು ದಸ್ತಾವೇಜುಗಳ ನೋಂದಣಿ ದೊರಕಿಸುವ ಅಧಿಕಾರಕ್ಕೆ ಸ್ಟಾಂಪು ಸುಂಕವನ್ನು ಹೊಂದಿರುವ ಪತ್ರದಲ್ಲಿ ಜಾರಿಗೊಳಿಸುಬೇಕು. ಒಂದು ಮುಖ್ತ್ಯಾರು ನಾಮೆಯಲ್ಲಿ, ಒಂದು ವ್ಯವಹಾರಕ್ಕಿಂತ ಹೆಚ್ಚು ವ್ಯವಹಾರಗಳನ್ನು ಸೇರಿಸಿ, ಐದು ವ್ಯಕ್ತಿಗಳಿಗೆ ಜೊತೆಯಾಗಿ ಆಗಲಿ ಅಥವಾ ಬೇರೆ ಬೇರೆಯಾಗಿ ಆಗಲಿ ಕಾರ್ಯನಿರ್ವಹಿಸಲು ಅಧಿಕಾರ ಕೊಡಬೇಕಾದರೆ ಸಾಮಾನ್ಯವಾಗಿ ಹೆಚ್ಚು ಮೊತ್ತದ ಸ್ಟಾಂಪು ಕಾಗದದ ಮೇಲೆ ಮುಖ್ತ್ಯಾರು ನಾಮೆ ಮಾಡಬೇಕಾದ ಅಗತ್ಯತೆ ಇರುತ್ತದೆ. ಒಂದು ಮುಖ್ತ್ಯಾರು ನಾಮೆಯಲ್ಲಿ ಹತ್ತು ಜನರನ್ನು ನೇಮಿಸಿದರೆ, ಸ್ಟಾಂಪು ಸುಂಕವು ಇನ್ನೂ ಹೆಚ್ಚಾಗುತ್ತದೆ. ಒಟ್ಟು ಮುಖ್ತ್ಯಾರು ನಾಮೆಯನ್ನು ಮ್ಯಾಜಿಸ್ಟ್ರೇಟ್ ಅಥವಾ ನೋಟರಿ ಪಬ್ಲಿಕ್‌ನ ಮುಂದೆ ನಿರ್ವಹಿಸಬೇಕು. ಏಕೆಂದರೆ, ಅದಕ್ಕೆ ಸರಿಯಾದ ಅನುಪ್ರಮಾಣಿಕೆಯ ಅಗತ್ಯವಿದೆ.

ಸ್ಥಿರ ಆಸ್ತಿಗಳನ್ನೊಳಗೊಂಡ ಹಸ್ತಾಂತರಣ
(Conveyance involving Immovable Property)

ಸಾಮಾನ್ಯವಾಗಿ ಹಸ್ತಾಂತರಣ ಪತ್ರವು ಮಾರಾಟ ಪತ್ರ, ದಾನಪತ್ರ ಅಥವಾ ಇತ್ಯರ್ಥ. ಪತ್ರಗಳ ತರಹ ಸ್ವತ್ತಿನ ಚಾಲ್ತಿ ಮಾರುಕಟ್ಟೆ ಮೌಲ್ಯದ ಮೇಲೆ ಮೌಲ್ಯಾನುಸಾರ ಸ್ಟಾಂಪು ಸುಂಕವನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ, ಹಸ್ತಾಂತರಣದ ವಸ್ತುವಿಷಯವಾದ ಸ್ವತ್ತು ಎಲ್ಲಿ ಇರುವುದೋ, ಅಂತಹ ಪ್ರದೇಶದ ಸ್ಥಳೀಯ ಸಮುದಾಯಗಳು ಶೇಕಡಾವಾರು ಅಧಿಭಾರವನ್ನು ವಿಧಿಸುವ ಹಕ್ಕನ್ನು ಪಡೆದಿರುತ್ತಾರೆ ಮತ್ತು ಅಂತಹ ವಸೂಲಾತಿಯನ್ನು ಭೋಗ್ಯದ ಅಡಮಾನಗಳ ವಿಷಯದಲ್ಲೂ ಸಹ ಮಾಡಬಹುದು. ಭಾರತದ ನೋಂದಣಿ ಅಧಿನಿಯಮದ ವರ್ಗ ೧೭ರ (ಸೆಕ್ಷನ್ ೧೭ರ), ಪ್ರಕಾರ, ಸ್ಥಿರ ಆಸ್ತಿಗಳ ವರ್ಗಾವಣೆಯ ಹಿತಾಸಕ್ತಿ ತೋರಿ ಬರುವ ಯಾವುದೇ ಪತ್ರವಾಗಿದ್ದರೂ, ಅಂತಹ ಪತ್ರಗಳನ್ನು, ಕಡ್ಡಾಯವಾಗಿ ನೋಂದಾಯಿಸಬೇಕೆಂದು ಆಗತ್ಯಪಡಿಸುತ್ತದೆ. ಆದರೆ ಮರಣಶಾಸನ ಪತ್ರವನ್ನು (ಉಯಿಲು) ಇಚ್ಛಾನುಸಾರವಾಗಿ ನೋಂದಾಯಿಸಬಹುದು. ಬಹಳ ಜನ ಉಯಿಲು ದಾರರು ಅವರ ಉಯಿಲಿನ ಯುಕ್ತ ನಿರ್ವಹಣೆಯ ವಿಶ್ವಾಸಾರ್ಹತೆಯು ಪ್ರಮಾಣಿತ ವಾಗುವುದನ್ನು ಇಚ್ಛಿಸುತ್ತಾರೆ. ಆದ್ದರಿಂದ ಉಯಿಲನ್ನು ನೋಂದಾಯಿಸಲು ಬಯಸುತ್ತಾರೆ. ವರ್ಗ ೪೦ರ ಪ್ರಕಾರ, ಉಯಿಲುದಾರ ಅಥವಾ ಅವನ ಮರಣದ ನಂತರ ಕಾರ್ಯ ನಿರ್ವಾಹಕ ಎಂದು ಕ್ಲೇಮು ಮಾಡುವ ಯಾವುದೇ ವ್ಯಕ್ತಿ ಅಥವಾ ಉಯಿಲಿನ ಆಧಾರದ ಮೇಲೆ ಬೇರೆ ರೀತಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಯು ಅಂತಹ ಉಯಿಲನ್ನು ನೋಂದಣಿ ಮಾಡುವುದಕ್ಕೆ ಸಲ್ಲಿಸಬೇಕು. ಅಂತಹ, ನಿರ್ವಹಣೆಯ ರುಜುವಾತಿನ ಮೇಲೆ ಆದನ್ನು ನೋಂದಾಯಿಬಹುದು. ಇದನ್ನು ನೋಂದಣಿ ಅಧಿಕಾರಿಯು ೩ನೇ ನಂಬರಿನ ಪುಸ್ತಕದಲ್ಲಿ ನೋಂದಾಯಿಸಿದ್ದು, ಇದರ ಮಹತ್ವವನ್ನು ವರ್ಗ ೫೭ರ ಉಪಖಂಡ (೨) ದಲ್ಲಿ ವಿವರಿಸಲಾಗಿದೆ. ಈ ವರ್ಗವು ಕಾರ್ಯನಿರ್ವಾಹಕನಿಗೆ ಮಾತ್ರ ಪ್ರತಿಯನ್ನು ಕೊಡಲಾಗುತ್ತದೆ ಮತ್ತು ಕಾರ್ಯನಿರ್ವಾಹಕನು ಮರಣಿಸದ ಹೊರತು ಬೇರೆಯವರಿಗೆ ಆದರ ಪ್ರತಿಯನ್ನು ಕೊಡಲಾಗುವುದಿಲ್ಲ, ಎಂದು ಹೇಳುತ್ತದೆ. ಯಾವ ಉಯಿಲುದಾರನು ಉಯಿಲನ್ನು ರಹಸ್ಯವಾಗಿಡಲು ಸಂಕಲ್ಪಿಸುತ್ತಾನೋ ಅವನು ತನ್ನ ಉಯಿಲನ್ನು ವರ್ಗ ೪೩ರ ಪ್ರಕಾರ ಯಾವುದೇ ನೋಂದಣಿಕಾರನ ಹತ್ತಿರ ಒಂದು ಮೊಹರು ಮಾಡಿದ ಲಕೋಟಿಯಲ್ಲಿ ನಿಕ್ಷೇಪಿಸಬಹುದು. ಆದ್ದರಿಂದ ಉಯಿಲಿನ ಒಳಾಂಶಗಳು ಉಯಿಲುದಾರನ ಮರಣದ ನಂತರವೇ ತಿಳಿಯುತ್ತದೆ. ಆಗ ಉಯಿಲಿನ ಒಳಾಂಶಗಳನ್ನು ೩ನೇ ನಂಬರಿನ ಪುಸ್ತಕಕ್ಕೆ ವರ್ಗಾಯಿಸಲಾಗುತ್ತದೆ ಮತ್ತು

ಅರ್ಜಿದಾರರಿಗೆ ಪ್ರತಿಗಳನ್ನು ಬಿಡುಗಡೆ ಮಾಡಲಾಗುವುದು. ಅದರಲ್ಲಿ ಇನ್ನೂ ಹೆಚ್ಚಿನ ಅನುಕೂಲತೆ ಇದೆ. ನೋಂದಣಿಯ ಉದ್ದೇಶಕ್ಕಾಗಿ, ಉಯಿಲಿನ ನೋಂದಣಿಯ ವೆಚ್ಚವನ್ನು ಲೆಕ್ಕ ಹಾಕಲು, ಉಯಿಲಿನ ಮೇಲೆ ಸ್ಟಾಂಪು ಸುಂಕದ ವಸೂಲಾತಿಯು ಇಲ್ಲದಿದ್ದರೂ ಸಹ, ಉಯಿಲಿನಲ್ಲಿರುವ ಸಂಪದದ ಮೌಲ್ಯವನ್ನು ನಮೂದಿಸಬೇಕು.

****

ಭಾಗ - ೮

ವಿಭಜನೆಗಳು

ಸಹ ಒಡೆಯರುಗಳ ನಡುವೆ ಉಂಟಾದ ಸ್ಥಿರ ಸ್ವತ್ತುಗಳ ವಿಭಜನೆಯನ್ನು ವರ್ಗಾವಣೆ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಅದು ಸ್ವಾಧೀನದ ಹೊಂದಾಣಿಕೆಯ ಒಂದು ವಿಧಾನವಾಗಿದೆ. ಆದ್ದರಿಂದ ಇದನ್ನು ಪತ್ರದಿಂದ ಸಾಕ್ಷಿಪಡಿಸುವ ಅಗತ್ಯತೆ ಇರುವುದಿಲ್ಲ. ವಿಭಜನೆಯಲ್ಲಿ ಹಂಚಿಕೊಂಡ ಸ್ವತ್ತುಗಳ ಒಂದು ಪಟ್ಟಿಯನ್ನು ಇಟ್ಟುಕೊಂಡಿದ್ದರೆ, ಅದು ವಿಭಜನಾ ಪತ್ರವಾಗುವುದಿಲ್ಲ ಮತ್ತು ಆಗ ನೋಂದಣಿಯ ಅಗತ್ಯತೆಯೂ ಇರುವುದಿಲ್ಲ. ಕ್ಷೇತ್ರ ಮೋಹನ ವಿರುದ್ಧ, ತುಫಾನಿ (Kshethra Mohan Vs. Tufani AIR 1933 Cal 474), ಅಬ್ದುಲ್ ಹಕ್ ವಿರುದ್ಧ ಮೊಹಮ್ಮದ ಕಾಸಿಂ (Abdul Haq Vs. Mohammed Kashim AIR 1945 All 921), ವೇಲುಸ್ವಾಮಿ ವಿರುದ್ಧ ವೇಲುಸ್ವಾಮಿ (Veluswamy Vs. Veluswamy AIR 1962 Mad 153), ಮುನ್ನಾಲಾಲ್ ವಿರುದ್ಧ ಸೂರಜಬಾನ್ (Munnalal Vs. Suraj Bhan AIR 1975 SC. 1119), ನಾನಿಬಾಯಿ ವಿರುದ್ಧ ಗೀತಾಬಾಯಿ (Nani Bai Vs. Geeta Bai (1958) SC. J. 925). ಇದು ಪದೇ ಪದೇ ಉದ್ಭವಿಸುವ ಪ್ರಶ್ನೆಯಾದ್ದರಿಂದ ಅನೇಕ ತೀರ್ಪುಗಳ ಉದಾಹರಣೆ ಕೊಡಲಾಗಿದೆ.

ವರ್ಗಾವಣೆ ಉಂಟುಮಾಡುವ ಒಂದು ಪತ್ರವನ್ನು ಕಡ್ಡಾಯವಾಗಿ ನೋಂದಾಯಿಸಬೇಕು. ಏಕೆಂದರೆ, ಅದು ಸ್ಥಿರಸ್ವತ್ತಿನ ಹಿತಾಸಕ್ತಿಯನ್ನು "ಘೋಷಿಸುತ್ತದೆ". ಆದ್ದರಿಂದ ಸಾಮಾನ್ಯವಾಗಿ ಪಕ್ಷಗಳು ಬಾಯಿಮಾತಿನ ವಿಭಜನೆಯನ್ನು ಮಾಡಿಕೊಳ್ಳುತ್ತವೆ. ಮತ್ತು ವಿಭಜನೆಯ ಮನ್ನಣೆಯನ್ನು ಶಪಥಪತ್ರವನ್ನು ದಾಖಲು ಮಾಡುವುದರಿಂದ ಅಥವಾ ವಿಭಜನೆಯ ಪಟ್ಟಿಯನ್ನು ಹಾಜರುಪಡಿಸುವುದರಿಂದ, ಪೂರ್ವ ವಿಭಜನೆಯ ಸಾಕ್ಷ್ಯವನ್ನು ಮಾತ್ರ ತೋರಿಸಬಹುದು. ವಿಭಜನೆಗೆ ಸಂದಾಯ ಮಾಡಬೇಕಾದ ಸ್ಟಾಂಪು ಸುಂಕವು ಪತ್ರದ ಮುಖಾಂತರವಾದರೆ ಬೇರೆ ಭಾಗಗಳ ಒಟ್ಟು ಮೌಲ್ಯವನ್ನು ಮೌಲ್ಯಾನುಸಾರ ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯದ ಮೇಲೆ ಲೆಕ್ಕ ಹಾಕಲಾಗುತ್ತದೆ. ಇವು ಅಸಮ ಭಾಗಗಳನ್ನೊಳಗೊಂಡ ವಿಭಜನೆಯ ಸಾಧ್ಯತೆಯುಳ್ಳ ಸಂದರ್ಭವಾಗಿರ ಬಹುದು. ಸ್ಪಷ್ಟವಾಗಿ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳುವಾಗ ಒಂದು ಅಂಶದ ಮೌಲ್ಯವನ್ನು ಬಿಟ್ಟುಬಿಟ್ಟರೆ, ಆಗ ದೊಡ್ಡದಾದ ಭಾಗದಲ್ಲಿ ಒಂದು ಭಾಗದ ಮೌಲ್ಯವನ್ನು ಬಿಟ್ಟುಬಿಡಬಹುದೇ ? ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಇದನ್ನು

ಸ್ಟಾಂಪು ಅಧಿನಿಯಮದ ಅನುಸೂಚಿಯ ೪೫ನೆಯ ನಮೂನೆಯಲ್ಲಿ ವಿವರಿಸಲಾಗಿದೆ. ಇದನ್ನು ವಿಭಜನೆಯಾದ ನಂತರ ಉಳಿದಿರುವ ದೊಡ್ಡ ಭಾಗವನ್ನು, ಆದರಿಂದ ಬೇರೆ ಭಾಗಗಳಿಂದ ಪ್ರತ್ಯೇಕಿಸಲಾಗಿದೆ ಎಂದು ಭಾವಿಸಬೇಕು. ಆದ್ದರಿಂದ ಚಿಕ್ಕ ಭಾಗಗಳ ಮೊತ್ತದ ಮೌಲ್ಯವನ್ನು ಲೆಕ್ಕ ಹಾಕಬಹುದು ಮತ್ತು ಅದರ ಮೇಲೆ ವಿಭಜನೆಯ ಪತ್ರಕ್ಕೆ ಬೇಕಾಗುವ ಸ್ಟಾಂಪು ಸುಂಕವನ್ನೂ ಸಂದಾಯ ಮಾಡಬಹುದು.

ಸಾಲಗಳು

ಸಾಲದ ವ್ಯವಹಾರಗಳು ಬಾಯಿಮಾತಿನದಾದರೂ ಸಹ ಪೂರ್ಣವಾಗಿ ಸಮಂಜಸವಾಗಿರುತ್ತದೆ. ಆದರೆ ಬರವಣಿಗೆ ಮಾಡಿದರೆ ಅದು ಪರಕ್ರಾಮ್ಯ ಪತ್ರವಾಗುತ್ತದೆ. ಅಂತಹ ಸಂದರ್ಭದಲ್ಲಿ ಪ್ರಾಮಿಸರಿ ನೋಟು ಮಾಡಿದಾಗ ನಾಮಕಾವಸ್ತೆ ಸ್ಟಾಂಪು ಸುಂಕ ಇರುತ್ತದೆ. ಒಪ್ಪಂದದ ಅವಧಿಯ ನಂತರ ಮರುಸಂದಾಯ ಮಾಡಬೇಕಾದ ಪ್ರಾಮಿಸರಿ ನೋಟನ್ನು ಸ್ವಲ್ಪ ವಿಭಿನ್ನವಾಗಿ ಅಂದರೆ ಸ್ವಲ್ಪ ಹೆಚ್ಚು ಸುಂಕದಿಂದ ಪರಿಗಣಿಸಿದರೆ, ಇದನ್ನು ಯಾವುದೇ ವಿಧದಲ್ಲಿಯೂ ಬಂಧಪತ್ರಕ್ಕೆ ಹೋಲಿಸಲಾಗುವುದಿಲ್ಲ. ಬಂಧಪತ್ರವು (BOND) ಸಾಲದ ವ್ಯವಹಾರದ ಹೊಣೆಯನ್ನು ಸತ್ಯವೆಂದು ಒಪ್ಪುವ ಒಂದು 'ಕ್ರಮಬದ್ಧ' ಉಪಕರಣವಾಗಿದೆ. ಮರುಸಂದಾಯಕ್ಕೆ ಕಂತುಗಳನ್ನು ಕಟ್ಟಲು ಅವಕಾಶ ಮಾಡಿಕೊಡುವುದು ಅಥವಾ ಬೇರೆ ಇನ್ನಾವುದಾದರೂ ಷರತ್ತುಗಳಿಗೆ ಒಳಪಟ್ಟಿರುವ ಒಪ್ಪಂದದಿಂದ ಮಾಡಿಕೊಂಡಿರಬಹುದು. ಇದು ಪ್ರೊನೋಟಿನಲ್ಲಿ ಸಲ್ಲದು. ಅದರಲ್ಲಿ ಸಂದಾಯ ಮಾಡಲು ಷರತ್ತಿಲ್ಲದ ವಚನ ಬಂಧದ ಅಗತ್ಯತೆ ಇರುತ್ತದೆ. ಸಾಲದ ಮರುಸಂದಾಯವನ್ನು ಅದೇ ಪತ್ರದಲ್ಲಿ ಬರೆದಿದ್ದು, ಅದು ಸ್ಥಿರ ಆಸ್ತಿಗಳ ಮೇಲೆ ಭಾರ ಹೊರಿಸುವುದರ ಮೂಲಕವಾದರೆ ಅದು ಸರಳ ಅಡಮಾನ ಅಥವಾ ಆಧಾರದಂತೆ ಆಗುತ್ತದೆ ಮತ್ತು ಸ್ಟಾಂಪು ಸುಂಕವು ಬಂಧಪತ್ರದಷ್ಟೇ ಆಗುತ್ತದೆ. ಪತ್ರವನ್ನು ಕಡ್ಡಾಯವಾಗಿ ನೋಂದಾಯಿಸಬೇಕು. ಲೇಣೇದಾರನಿಗೆ ಸ್ವಾಧೀನವನ್ನು ಕೊಟ್ಟಿದ್ದರೆ, ಅದು ಭೋಗ್ಯದ ಅಡಮಾನವಾಗುತ್ತದೆ. ಅಂತಹ ಸಂದರ್ಭದಲ್ಲಿ ಸ್ವಾಧೀನದ ವರ್ಗಾವಣೆಯು ಹಸ್ತಾಂತರಣ ಮಾಡುತ್ತದೆ ಮತ್ತು ಸ್ಟಾಂಪು ಅಧಿನಿಯಮದ ಅನುಸೂಚಿ ೩೪ರ ನಮೂನೆಯಲ್ಲಿ ಸ್ಟಾಂಪು ಸುಂಕವನ್ನು ಹಸ್ತಾಂತರಣ ಪಡೆದ ಮೊತ್ತಕ್ಕೆ ಅಂದರೆ ಮಾರಾಟ ಮುಂತಾದವುಗಳಂತೆ ಸಂದಾಯ ಮಾಡಬೇಕಾಗುತ್ತದೆ.

ನೋಂದಣಿಯ ಮತ್ತು ಸ್ಟಾಂಪು ಸುಂಕದ ಅಗತ್ಯತೆಯಿಂದ ಉಂಟಾದ ಸ್ಪಷ್ಟ ಅನಾನುಕೂಲತೆಯನ್ನು "ಸ್ವಾಮ್ಯ ಪತ್ರಗಳ ಠೇವಣಿ" (deposit of title deeds) ಎಂಬ ಅಡಮಾನ ಅವಲಂಬಿಸುವುದರಿಂದ ತಪ್ಪಿಸಬಹುದು. ಇದನ್ನು ಬರೀ

ಸ್ವಾಮ್ಯಪತ್ರಗಳ ಠೇವಣಿಯಿಂದ ಸಮಂಜಸವಾಗಿ, ಪೂರ್ಣವಾಗಿ ಪರಿಣಾಮ ಮಾಡಬಹುದು ಮತ್ತು ಅಂತಹ ಠೇವಣಿಯನ್ನು ಲಗತ್ತು ಮಾಡಿದ ಒಂದು ಕಾಗದವನ್ನು ಅದು ವ್ಯವಹಾರದ ನಿಬಂಧನೆಯೊಳಗೆ ನಿಗದಿತಗೊಳಿಸದೇ ಇದ್ದರೆ ನೋಂದಾಯಿಸುವ ಅಗತ್ಯತೆ ಇರುವುದಿಲ್ಲ. ಸ್ವತ್ತಿನ ವರ್ಗಾವಣೆ ಅಧಿನಿಯಮದ ವರ್ಗ ೫೮ ಮತ್ತು ೫೯ರಲ್ಲಿ ಅಂತಹ ಅಡಮಾನವನ್ನು ಅಧಿಸೂಚಿತ ಸ್ಥಳಗಳಲ್ಲಿ ಮಾತ್ರ ಮಾಡಬಹುದು. ಭಾರತದ ಸರ್ವೋಚ್ಚ ನ್ಯಾಯಾಲಯವು ಅಡಮಾನದ ವಿಷಯದಲ್ಲಿ ವ್ಯಾಪಾರದ ನಿಬಂಧನೆಗಳು ಯಾವುದೇ ಪತ್ರದಲ್ಲಿ ಒಳಗೊಂಡಿದ್ದರೆ ಅದು ಅಡಮಾನ ಪತ್ರದ ತರಹ ಪ್ರವರ್ತಿಸುತ್ತದೆ ಮತ್ತು ಅದಕ್ಕೆ ನೋಂದಾಣಿಕೆಯ ಅಗತ್ಯತೆ ಇದೆ ಎಂದು ಆದೇಶಿಸಿತು. ರಾಚ್‌ಪಾಲ್ ಮಹಾರಾಜ್ ವಿರುದ್ಧ ಭಗವಾನ್‌ದಾಸ್ (Rachpal Maharaj.Vs. Bhagwandas AIR 1950 SC. 272) ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ವಿರುದ್ಧ ಲೇಖಾರಾಂ ಸೋನಾರಾಂ ಆ್ಯಂಡ್ ಕಂಪನಿ (United Bank of India Vs. Lekharam Sonaram and Company AIR 1965 SC. 1591)

ಸಂಕೀರ್ಣ ಉಪಬಂಧಗಳು
(Miscellaneous Provisions)

ಘೋಷಣೆ ಅಥವಾ **ಶಪಥ ಪತ್ರವು** (Affidavit) ಮೇಲಿಂದ ಮೇಲೆ ಉಪಯೋಗಿಸುವ ಒಂದು ರೀತಿಯ ದಸ್ತಾವೇಜಾಗಿದ್ದು ಅದನ್ನು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಸಕ್ಷಮ ಪ್ರಾಧಿಕಾರ ಅಧಿಕಾರಿಯ ಮುಂದೆ ಪ್ರಮಾಣ ಮಾಡಿದ ನಂತರ ಜಾರಿಗೊಳ್ಳುತ್ತದೆ. ಈ ಶಪಥಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ಮೊಕದ್ದಮೆಗಾಗಿ ದಾಖಲು ಮಾಡಬೇಕಾದರೆ ಸ್ಟಾಂಪು ಸುಂಕವನ್ನು ವಿಧಿಸಲಾಗುವುದಿಲ್ಲ. ಆದರೆ ಅದೇ ಆಡಳಿತಾತ್ಮಕ ಉದ್ದೇಶಕ್ಕೆ ಅವಶ್ಯಕವಾದರೆ ಆಗ ಸ್ಟಾಂಪು ಅಧಿನಿಯಮದ ಅನುಸೂಚಿಯ ನಮೂದನೆ ೪ರ ಪ್ರಕಾರ, ಹದಿನೈದು (೧೫-೦೦) ರೂಪಾಯಿಗಳ ಸ್ಟಾಂಪು ಸುಂಕ ವಿಧಿಸಲಾಗುತ್ತದೆ.

ಒಬ್ಬ ವ್ಯಕ್ತಿಯು ಯಾವುದೇ ಪತ್ರದ ಮೂಲಕ ಒಂದು ಸಂವರ್ಗ ಅಥವಾ ನ್ಯಾಸಧಾರಿಗಳ ಮಂಡಲಿಗೆ (Trust) ಸ್ವತ್ತುಗಳ ವರ್ಗಾವಣೆ ಮಾಡಿದರೆ ಅದು ಹಸ್ತಾಂತರಣ ಪತ್ರದ ತರಹ ಪ್ರವರ್ತಿಸುತ್ತದೆ ಮತ್ತು ಸ್ಟಾಂಪು ಸುಂಕವನ್ನು ಮೌಲ್ಯಾನುಸಾರ ಸಂದಾಯ ಮಾಡಬೇಕಾಗುತ್ತದೆ. ಆದರೆ ಅಂತಹ ಸ್ವತ್ತಿನ ಒಡೆಯನು, ಸ್ವತ್ತುಗಳನ್ನು ತಾನು ನ್ಯಾಸಕ್ಕಾಗಿ ಇಟ್ಟುಕೊಂಡಿರುವುದಾಗಿ ಘೋಷಿಸಿದರೆ, ಆ ಸ್ವತ್ತಿನ ಮೌಲ್ಯದ ಮೇಲೆಯೂ ಸ್ಟಾಂಪು ಸುಂಕ ಇರುತ್ತದೆ. ರಿಯಾಯಿತಿ ದರವನ್ನು ಸ್ಪಷ್ಟವಾಗಿ ಕೊಟ್ಟಿರುವುದು ಏಕೆಂದರೆ, ಇದರಲ್ಲಿ ಸ್ವತ್ತು

ಹಸ್ತಾಂತರಣವನ್ನು ಒಳಗೊಂಡಿಲ್ಲ. ಆದರೆ ಒಡಂಬಡಿಕೆಯ ಸ್ವಭಾವದಲ್ಲಿ ಬದಲಾವಣೆ ಇರುತ್ತದೆ ಎಂದು.

ಸ್ಥಿರ ಸ್ವತ್ತುಗಳ ಒಂದು ವರ್ಷ ಅಥವಾ ಅದಕ್ಕೂ ಹೆಚ್ಚಿನ ಗೇಣಿಯನ್ನು ನೋಂದಣೀ ಪತ್ರದಿಂದ ಮಾತ್ರ ಜಾರಿಗೊಳಿಸಬಹುದು ಮತ್ತು ಜನಗಳು ಪತ್ರವನ್ನು ನೋಂದಾಯಿಸುವ ಅವಶ್ಯಕತೆಯಿಂದ ಉಂಟಾಗುವ ಅನಾನುಕೂಲತೆಯನ್ನು ನಿವಾರಿಸುವುದಕ್ಕೋಸ್ಕರ ಬರೀ ಹನ್ನೊಂದು ತಿಂಗಳು ಗೇಣಿಯನ್ನೊಳಗೊಂಡ ದಸ್ತಾವೇಜುಗಳನ್ನು ಸೃಷ್ಟಿಸುವುದಕ್ಕೆ ಇಚ್ಛಿಸುತ್ತಾರೆ. ದೀರ್ಘ ಅವಧಿಯ ಗೇಣಿಗಳು ಸ್ಥಿರ ಸ್ವತ್ತುಗಳ ಹಿತಾಸಕ್ತಿಯ ವರ್ಗಾವಣೆಯಾಗಿ ಪ್ರವರ್ತಿಸುವುದು ಸ್ಪಷ್ಟವಾಗಿದೆ. ಖರೀದಿಯ ಸಮಯದಲ್ಲಿ ಮಾರಾಟ ಮಾಡುವವನಿಂದ ಇಪ್ಪತ್ತು ವರ್ಷಗಳ ಸಮಂಜಸ ಗೇಣಿಯನ್ನು ಮಾಡಲ್ಪಟ್ಟಿದ್ದರೆ, ಖರೀದಿದಾರನಿಗೆ ಇಪ್ಪತ್ತು ವರ್ಷಗಳ ಕಾಲ ಸ್ವಾಧೀನ ತಪ್ಪಿಸಬಹುದು. ಗೇಣಿಯ ಪತ್ರಕ್ಕೆ ಬಂಧಪತ್ರದ ಸ್ಟಾಂಪು ಸುಂಕದ ತರಹ ಸ್ಟಾಂಪು ಹಾಕಿರಬೇಕು. ಒಂದು ವರ್ಷದ ಗೇಣಿಗೆ ಸಂದಾಯ ಮಾಡುವ ಸಂಕವು ಐದು ವರ್ಷಗಳ ಅವಧಿಯವರೆಗೆ ಸಿಗುತ್ತದೆ ಎಂಬುದನ್ನೂ ಗಮನಿಸಬೇಕು. ಆದರೆ ನಂತರ ವಸೂಲು ಮಾಡುವ ಸ್ವಭಾವವು ಬದಲಾಯಿಸುತ್ತದೆ. ಗೇಣಿಯು ಐದು ವರ್ಷಕ್ಕಿಂತ ಹೆಚ್ಚು ಮತ್ತು ಹತ್ತು ವರ್ಷಕ್ಕೆ ಮೀರದೆ ಇದ್ದರೆ, ಅಂತಹ ಪತ್ರದ ಮೇಲಿನ ಸುಂಕವು ಮಾರುಕಟ್ಟೆಯ "ಮೌಲ್ಯಕ್ಕೆ" ಕಾಯ್ದಿಡಲಾದ ಸರಾಸರಿ ವಾರ್ಷಿಕ ಬಾಡಿಗೆಗೆ ಸಮನಾದ ಹಸ್ತಾಂತರಣವಾಗಿ, ನಂತರ ಮುಂದಿನ ಹತ್ತು ವರ್ಷಗಳಿಗೆ, ಅದು ಸರಾಸರಿ ವಾರ್ಷಿಕ ಬಾಡಿಗೆಯ ಮೊತ್ತದ ಎರಡರಷ್ಟಾಗುತ್ತದೆ ಮತ್ತು ಅದು ನಿಯಮಿಸಿದ ಸ್ಟಾಂಪು ಸುಂಕ ವಸೂಲಾತಿಗೆ ಸೇರುತ್ತದೆ. ನೂರು ವರ್ಷಗಳ ಗೇಣಿಯು ಹಸ್ತಾಂತರಣ ಪತ್ರದಲ್ಲಿ ಕಾಯ್ದಿಡಲಾದ ಸರಾಸರಿ ವಾರ್ಷಿಕ ಬಾಡಿಗೆಯ ಮೊತ್ತದ ನಾಲ್ಕರಷ್ಟು ಮಾರುಕಟ್ಟೆ ಮೌಲ್ಯದ ಸಮವಾದ ಸ್ಟಾಂಪು ಸುಂಕವನ್ನು ಒಯ್ಯುವ ಶಾಶ್ವತತೆಯ ಗೇಣಿಯು, ಗೇಣಿಯ ಮೊದಲ ಐವತ್ತು ವರ್ಷಗಳ ಬಾಡಿಗೆ ಕೊಡಬಹುದಾದ ಸಂಪೂರ್ಣ ಮೊತ್ತದ ೧:೬ಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಸ್ಟಾಂಪು ಸುಂಕವನ್ನು ಹಾಕಬೇಕಾಗುತ್ತದೆ. ಹಸ್ತಾಂತರಣ ಪತ್ರದಲ್ಲಿ ಅಂತಹ ಮೇಲ್ಕೊಡುಗೆ ಅಥವಾ ಮುಂಗಡದ ಮೌಲ್ಯಕ್ಕೆ (Premium) ಸಮನಾದ ರೀತಿಯಲ್ಲಿ ಭೂ ಮಾಲೀಕನಿಗೆ ಕೊಡಲಾದ ಮೇಲ್ಕೊಡುಗೆ ಅಥವಾ ಮುಂಗಡವನ್ನು ಸಹ ಸ್ಟಾಂಪು ಸುಂಕದ ಉದ್ದೇಶಗಳಿಗಾಗಿ ಪರಿಗಣಿಸಲಾಗುತ್ತದೆ. ಆ ಕಾರಣದಿಂದಾಗಿ ವ್ಯಕ್ತಿಗಳು ಅಂತಹ ಮೇಲ್ಕೊಡುಗೆ ಅಥವಾ ಮುಂಗಡಕ್ಕೆ ಬೇರೆ ರಸೀದಿಯನ್ನು ಕೊಡುವ ಉಪಾಯವನ್ನು ಆಶ್ರಯಿಸುತ್ತಾರೆ ಮತ್ತು ಅದನ್ನು ಗೇಣಿ ಪತ್ರದ ಒಂದು ಭಾಗವಾಗಿ

ಮಾಡುವುದಿಲ್ಲ. ಅಂತಹ ಸಂದರ್ಭದಲ್ಲಿ ಒಂದು ರೂಪಾಯಿ ಸ್ಟಾಂಪಿನ ಬರೀ ರಸೀತಿ ಅಂಗೀಕಾರವು ಸಾಕು.

ಚರ ಸ್ವತ್ತುಗಳ ಮಾರಾಟದ ಒಪ್ಪಂದದಲ್ಲಿ ವಾಸ್ತವಿಕವಾಗಿ ಚರಸ್ವತ್ತುಗಳ ಹಿತಾಸಕ್ತಿಯ ವರ್ಗಾವಣೆ ಮಾಡುವದಿಲ್ಲ ಮತ್ತು ನೋಂದಣಿಯ ಅಗತ್ಯತೆ ಇರುವುದಿಲ್ಲ. ಅದು ಪರಿಪೂರ್ಣವಾಗಿ ಬಾಯಿಮಾತಿನದಾಗಿರಬಹುದು. ಆದಾಗ್ಯೂ, ಬರಹಕ್ಕಿಳಿಸಿದರೆ, ಪ್ರತಿಫಲದ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ನಾಮಕಾವಸ್ತೆ ಸ್ಟಾಂಪು ಸುಂಕವನ್ನು ಹಾಕಬೇಕಾಗುತ್ತದೆ. ಷೇರು, ಮೂಲ ಪತ್ರ, ನಿಧಿಪತ್ರ, ಬಂಧಪತ್ರ, ಡಿಬೆಂಚರ್ ಸ್ಟಾಕ್ ಅಥವಾ ಇತರ ಯಾವುದೇ ಮಾರಬಹುದಾದ ಪತ್ರಗಳ ಮಾರಾಟ ಅಥವಾ ಖರೀದಿಗೆ ಸಂಬಂಧಿಸಿದ ಒಪ್ಪಂದಕ್ಕೆ, ನಿಗದಿತ ಸ್ಟಾಂಪು ಸುಂಕವನ್ನು ಸಂದಾಯ ಮಾಡಬೇಕು. ಅಂತಹ ಒಪ್ಪಂದವು ಒಬ್ಬ ವ್ಯಕ್ತಿಯೊಡನೆ ಅಥವಾ ಅವನ ಮುಖಾಂತರ ಅಥವಾ ಸ್ಟಾಕು ಎಕ್ಸ್‌ಚೇಂಜ್ ಸದಸ್ಯರ ನಡುವೆ ಇದ್ದರೆ, ಸೆಕ್ಯೂರಿಟೀಸ್ ಕಾಂಟ್ರಾಕ್ಟ್ (ರೆಗುಲೇಷನ್) ಅಧಿನಿಯಮದ ಮನ್ನಣೆ ಪಡೆದಿರುತ್ತದೆ. ಮಧ್ಯಸ್ಥನ ಐತೀರ್ಪು (Arbitration Award) ಬಂಧಪತ್ರದಷ್ಟೇ ಸ್ಟಾಂಪು ಸುಂಕ ಒಯ್ಯುತ್ತದೆ. ವಿಮೋಚನೆಯು ಈ ರೀತಿ ಇದೆ. ಇದರಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಮೇಲೆ ಅಥವಾ ಬೇರೆ ನಿರ್ದಿಷ್ಟ ಸ್ವತ್ತಿನ ವಿರುದ್ಧ ಕ್ಲೇಮನ್ನು ಬಿಟ್ಟುಬಿಡುತ್ತಾನೆ (ಪರಿತ್ಯಜಿಸುತ್ತಾನೆ). ಒಂದು ನಿರ್ದಿಷ್ಟ ಸ್ವತ್ತಿನ ಬಗ್ಗೆ ಪ್ರತಿಫಲಕ್ಕಾಗಿ ಎಲ್ಲಿ ಪರಿತ್ಯಜಿಸಲಾಗುತ್ತದೋ ಅದನ್ನು ನ್ಯಾಯಾಲಯಗಳು ವಿಭಜನೆ ಎಂದು ನಿರ್ಧರಿಸಿ ಅದಕ್ಕೆ ಬಂಧಪತ್ರದಷ್ಟು ಅಂದರೆ ತ್ಯಜಿಸಿದವನ ತ್ಯಜಿಸಿದ ಸ್ವತ್ತಿನ ಮೌಲ್ಯದ ಮೇಲೆ ಶೇಕಡಾವಾರು ಸ್ಟಾಂಪು ಸುಂಕವನ್ನು ಸಂದಾಯ ಮಾಡಬೇಕಾಗುತ್ತದೆಂದು ತೀರ್ಮಾನಿಸಿದೆ (Nanjunda Shetty vs. Government of Mysore AIR (1964) MYS 124).

ನೋಂದಣಿಯಾಗದಿರುವ ಮತ್ತು ಅನುಪ್ರಮಾಣಿತವಾಗದಿರುವ ದಸ್ತಾವೇಜುಗಳ ಪರಿಣಾಮಗಳು

ನಾವು ಈಗಾಗಲೇ ನೋಂದಣಿ ಕಾನೂನಿನಲ್ಲಿ ಗಮನಿಸಿರುವಂತೆ, ಯಾವುದೇ ಪತ್ರವನ್ನು ಈಗಾಗಲೀ ಅಥವಾ ಮುಂದಾಗಲಿ ಸೃಷ್ಟಿಸಲು, ಘೋಷಿಸಲು, ಹಸ್ತಾಂತರಿಸಲು, ಪರಿಮಿತಿ ಅಥವಾ ಅಂತ್ಯಗೊಳಿಸಲು ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಕಾರ್ಯಗತ ಮಾಡಲು ಅಥವಾ ಪ್ರವರ್ತಿಸಲು ಇಂಡಿಯನ್ ರಿಜಿಸ್ಟ್ರೇಷನ್ ಅಧಿನಿಯಮದ ವರ್ಗ ೧೭ರಲ್ಲಿ ನಿರೂಪಿಸಿದಂತೆ ನೋಂದಣಿಯ ಅಗತ್ಯತೆ ಇರುತ್ತದೆ. ನೋಂದಾಯಿಸದೆ ಇರುವ ಪರಿಣಾಮಗಳನ್ನು

ವರ್ಗ ೪೯ರಲ್ಲಿ ನಿರೂಪಿಸಿದ್ದು, ಅವರಲ್ಲಿ ಯಾವ ಪತ್ರಕ್ಕೆ ರಿಜಿಸ್ಟ್ರೇಷನ್ ಅಧಿನಿಯಮದ ಅಥವಾ ಸ್ವತ್ತಿನ ವರ್ಗಾವಣೆ ಅಧಿನಿಯಮದ ಪ್ರಕಾರ ನೋಂದಣಿ ಅಗತ್ಯತೆ ಇರುವುದೋ ಅದನ್ನು ನೋಂದಾಯಿಸದಿದ್ದರೆ, ಅಂತಹ ಸ್ವತ್ತುಗಳನ್ನು ಬಾಧಿಸುವ ಯಾವುದೇ ವ್ಯವಹಾರವನ್ನು ಸಹ ಸಾಕ್ಷ್ಯವಾಗಿ ಸ್ವೀಕರಿಸಲಾಗುವುದಿಲ್ಲ. ನೋಂದಾಯಿಸಲೇಬೇಕಾದ ಒಂದು ದಸ್ತಾವೇಜನ್ನು ನೋಂದಾಯಿಸದಿದ್ದರೆ ಅದು ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಹೊಂದಿರುವುದಿಲ್ಲ. ಮೇಡಮ್ ದೇವಿಕಾರಾಣಿ ರೋರಿಚ್ ವಿರುದ್ಧ ಕೆ.ಟಿ. ಪ್ಲಾಂಟೇಶನ್ಸ್ (Madam Davika Rani Roerich Vs. M/s. K.T. Plantations (1994) 44 ILR 103 (Kar).

ಇನ್ನೂ ಹೆಚ್ಚಿಗೆ ಹೇಳಬೇಕಾದರೆ, ನೋಂದಣಿ ಕಾನೂನನ್ನು ಅನುಬಂಧಿಸಲು ಭಾರತದ ಸಾಕ್ಷ್ಯ ಅಧಿನಿಯಮದಲ್ಲಿ ಕಠಿಣ ನಿಯಮಗಳನ್ನು ಕಂಡುಹಿಡಿಯ ಬೇಕಾಗಿದೆ. ಸಾಕ್ಷ್ಯ ಅಧಿನಿಯಮದ ವರ್ಗ ೯೧ ಮತ್ತು ೯೨ ರ ಪ್ರಕಾರ, ಯಾವಾಗ ಕರಾರಿನ ನಿಬಂಧನೆಗಳು ಸ್ವತ್ತಿನ ಅನುದಾನ ಅಥವಾ ವಿಲೇವಾರಿಯನ್ನು ಬರಹಕ್ಕಿಳಿಸಲ್ಪಟ್ಟಿದ್ದರೆ ಆಗ ದಸ್ತಾವೇಜಿನ ಒಳಾಂಶವನ್ನು ರುಜುವಾತುಪಡಿಸಲು, ಬಾಯಿಮಾತಿನ ಸಾಕ್ಷ್ಯದಿಂದ ವಿರೋಧಿಸಲು, ವ್ಯವಸ್ಥೆಗೊಳಿಸಲು ಅಥವಾ ಲಿಖಿತ ದಸ್ತಾವೇಜಿನ ನಿಬಂಧನೆಗಳಿಗೆ ಸೇರಿಸಲು ಅಂಗೀಕಾರ ಮಾಡಲಾಗುವುದಿಲ್ಲ. ಆದ್ದರಿಂದ ಒಂದು ದಸ್ತಾವೇಜು ನೋಂದಾಯಿತವಲ್ಲದಿದ್ದರೆ, ಆ ವ್ಯವಹಾರವನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸಲಾಗುವುದಿಲ್ಲ. ಇದರಿಂದ ಹೊರಬರುವ ಕಾನೂನಿನ ತತ್ವವೇನೆಂದರೆ ನುಣುಚಿಕೊಳ್ಳುವುದಕ್ಕೆ ಅವಕಾಶವಿರಲೇಬಾರದು ಮತ್ತು ದಸ್ತಾವೇಜು ವ್ಯವಹಾರದ ಸಾಕ್ಷ್ಯ, ಅನೇಕ ಸಂದರ್ಭದಲ್ಲಿ ಪಕ್ಷಗಳ ಸಾಮಾನ್ಯ ಸ್ವಭಾವವೇನೆಂದರೆ ವಿವಾದಗಳು ಉದ್ಭವಿಸದೇ ಇರಬಹುದೆಂಬ ಭರವಸೆಯಿಂದ ನೋಂದಣಿಯನ್ನು ತಪ್ಪಿಸುತ್ತಾರೆ. ಆದರೆ ಎಲ್ಲಿ ವಿವಾದ ಹೊರಬರುತ್ತದೋ, ಆಗ ಅವರು ಬಾಡಿಗೆಯ ದರವನ್ನು ರುಜುವಾತುಪಡಿಸಲು, ಗೇಣಿಯ ಅವಧಿ ಮತ್ತು ಇನ್ನಿತರ ಅತ್ಯಾವಶ್ಯಕ ನಿಬಂಧನೆಗಳನ್ನು ಊರ್ಜಿತ ಪಡಿಸಲು ಅನೇಕ ತೊಂದರೆಗಳನ್ನು ಎದುರಿಸುತ್ತಾರೆ.

ಸ್ಥಿರ ಸ್ವತ್ತಿನ ಕಾನೂನು, ಸ್ವತ್ತಿನ ವರ್ಗಾವಣೆ ಕಾಯಿದೆ ಪ್ರಕಾರ (TPACT 1882) ಎಲ್ಲಾ ಅಡಮಾನ ಪತ್ರಗಳು, ದಾನಪತ್ರಗಳು ಮತ್ತು ಮರಣಶಾಸನಗಳಿಗೆ ಕನಿಷ್ಠ ಎರಡು ಸಾಕ್ಷಿಗಳು ಸಾಕ್ಷಿ ಹಾಕಬೇಕೆಂದು ಹೇಳುತ್ತದೆ ಮತ್ತು ಪ್ರತಿಯೊಬ್ಬ ನಿರ್ವಹಣಾಕಾರನು ದಸ್ತಾವೇಜನ್ನು ಸಹಿ ಮಾಡುವುದು ನೋಡಬೇಕು ಅಥವಾ ಅವನಿಂದ ಯುಕ್ತ ನಿರ್ವಹಣೆಯ "ವೈಯಕ್ತಿಕ" ಒಪ್ಪಿಗೆಯನ್ನು ಪಡೆದುಕೊಂಡಿರಬೇಕು.

ಅಂದರೆ ದಾಖಲೆ ಪತ್ರದ (ದಸ್ತಾವೇಜಿನ) ಸಾಕ್ಷಿಗಳು ವಾಸ್ತವಿಕ ನಿರ್ವಹಣೆಗೆ ಸಾಕ್ಷಿಗಳಾಗಿರಬೇಕಾಗಿಲ್ಲ; ಅಂದರೆ ವಿರುದ್ಧ ತತ್ವವು ಸಮಂಜಸವಾಗಿರುವುದಿಲ್ಲ. ಸಾಕ್ಷಿದಾರರು ಅವರುಗಳ ಸಹಿಗಳನ್ನು ಯಾವಾಗಲೂ ದಾಖಲೆ ಪತ್ರದ (ದಸ್ತಾವೇಜಿನ) ನಿರ್ವಹಣಕಾರನ ಸಮ್ಮುಖದಲ್ಲಿ ಮಾಡಬೇಕು. ಸರಿಯಾದ ಸಹಿ ಇಲ್ಲದಿದ್ದರೆ, ಕಾನೂನಿನ ಪ್ರಕಾರ ದಾಖಲೆ ಪತ್ರ (ದಸ್ತಾವೇಜು) ಸಮಂಜಸ ವಾಗುವುದಿಲ್ಲ. ಅಲ್ಲದೆ ನಿರ್ವಹಣೆಕಾರನು ಒಂದು ದಾಖಲೆ ಪತ್ರವನ್ನು (ದಸ್ತಾವೇಜನ್ನು) ವಿವಾದಿಸಿದರೆ, ಸಾಕ್ಷ್ಯ ಅಧಿನಿಯಮದ ಪ್ರಕಾರ ದಾಖಲೆ ಪತ್ರವನ್ನು ರುಜುವಾತುಪಡಿಸಲು ಒಬ್ಬ ಸಾಕ್ಷಿಯನ್ನಾದರೂ, ಅವರು ಜೀವಂತವಾಗಿದ್ದರೆ, ಬಾಯಿಮಾತಿನ ಸಾಕ್ಷಿಯನ್ನು ನೀಡಲು ಕರೆಯಬೇಕಾಗುತ್ತದೆ. ದಾಖಲೆಪತ್ರ (ದಸ್ತಾವೇಜು) ನೋಂದಾಯಿಸಲಾಗಿದ್ದು, ಸಾಕ್ಷಿಗಳ ಬಗ್ಗೆ ಕೊರತೆ ಉಂಟಾಗಿರುವಂತಹ ಅಂದರೆ ಇಬ್ಬರು ಸಾಕ್ಷಿಗಳ ಸಹಿ ಇಲ್ಲದಿರುವುದು ಅಂತಹ ಜಟಿಲ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ನೋಂದಾಯಿಸುವ ಅಧಿಕಾರಿಯು ದಾಖಲೆ ಪತ್ರದ (ದಸ್ತಾವೇಜಿನ) ಯುಕ್ತ ನಿರ್ವಹಣೆಯ ಬಗ್ಗೆ ದಾಖಲೆ ಮಾಡಿದವನನ್ನು (ನಿರ್ವಾಹಕನನ್ನು) ವಿಚಾರಣೆ ಮಾಡಿದ್ದು, ಆದ್ದರಿಂದ ಅವನು ಸಾಕ್ಷಿಯಾಗಬಲ್ಲನು ಎಂಬ ವಾದವನ್ನು ಸರ್ವೋಚ್ಚ ನ್ಯಾಯಾಲಯವು ಅಬ್ದುಲ್ ಜಬ್ಬಾರ್ ವಿರುದ್ಧ ವೆಂಕಟಶಾಸ್ತ್ರಿ (Abdul Jabbar Vs. Venkata Shastry AIR 1969 SC 1147) ಮೊಕದ್ದಮೆಯಲ್ಲಿ ನಿರಾಕರಿಸಿ ಅಧಿಕಾರಿಯು ತನ್ನ ಶಾಸನಾತ್ಮಕ ಕರ್ತವ್ಯವನ್ನು ಪಾಲಿಸುತ್ತಾನೆ ಮತ್ತು ಸಾಮಾನ್ಯವಾಗಿ ನಿರ್ವಹಣೆಯನ್ನು ಅನುಪ್ರಮಾಣಿಸಲೇಬೇಕೆಂದು ಮಾಡಿದ ಹೊರತು ಅವನಿಗೆ ಇತರ ಉದ್ದೇಶ ಇರುವುದಿಲ್ಲ ಎಂಬ ಆಧಾರದ ಮೇಲೆ ತಳ್ಳಿ ಹಾಕಿತು.

ಆದ್ದರಿಂದ, ದಸ್ತಾವೇಜಿನ ಪ್ರಧಾನ ಅಗತ್ಯತೆಗಳು ಏನೆಂದರೆ, ಅವು ಸಮುಚಿತ ಸ್ಟಾಂಪು ಸುಂಕವನ್ನು ಹೊಂದಿರಬೇಕು ಮತ್ತು ಎಲ್ಲೆಲ್ಲಿ ಎರಡು ಸಾಕ್ಷಿಗಳ ಅಗತ್ಯವಿದೆಯೋ ಮತ್ತು ನೋಂದಾಯಿಸಬೇಕೆಂದು ನಿಯಮಿಸಿದೆಯೋ ಅಲ್ಲೆಲ್ಲಾ ಆ ರೀತಿ ಮಾಡಲೇಬೇಕು. ಮುಸ್ಲೀಮರು ನಿರ್ವಹಿಸಿದ್ದ ಉಯಿಲುಗಳು ಮತ್ತು ದಾನಪತ್ರಗಳು ಈ ಉಪಬಂಧಗಳಿಂದ ವಿನಾಯಿತಿ ಹೊಂದಿವೆ. ಏಕೆಂದರೆ, ಷರಿಯಾತ್ (Shariat Act) ಕಾನೂನಿನ ಪ್ರಕಾರ ಅವು ಬಾಯಿಮಾತಿನದೂ ಆಗಿರಬಹುದು.

ಕಾನೂನು ಒದಗಿಸಬಲ್ಲ ಪರಿಹಾರೋಪಾಯ ಮತ್ತು ಪ್ರಕ್ರಿಯೆ

ಪರಿಹಾರೋಪಾಯದ ಬಗೆಗಿನ ಕಾನೂನಿನ ತತ್ವವನ್ನು "ಹಕ್ಕಿರುವಲ್ಲಿ ಕ್ರಮೋಪಾಯ ಉಂಟು" (UBI JUS IBI REMEDIUM) ಎಂಬ ಸೂತ್ರವು ತಿಳಿಯಪಡಿಸಿದೆ. ಅದರ ಅರ್ಥವೇನೆಂದರೆ, ಎಲ್ಲೆಲ್ಲಿ ಹಕ್ಕುಗಳು ಇವೆಯೋ ಅಲ್ಲಿ ಕಾನೂನಿನ ಪರಿಹಾರೋಪಾಯವಿರಲೇಬೇಕು. ಇದು ಅತಿಕ್ರಮಣ ಮತ್ತು ಕರಾರು

ಉಲ್ಲಂಘನೆಯ ಸಂದರ್ಭಗಳಲ್ಲಿ, ವಾಸ್ತವಿಕವಾಗಿ ನಷ್ಟ ಅಥವಾ ಹಾನಿ ಉಂಟಾಗಿರದಿದ್ದರೂ ಸಹ ಬಾಧಿತ ಪಕ್ಷವು ಅಲ್ಪವಾದರೂ ನಾಮಕಾವಸ್ಥೆ ಹಾನಿ ಪರಿಹಾರವನ್ನು, ನಿಂದನೆಯ ಚಿನ್ಹೆಯಾಗಿ ಕಾನೂನಿನ ಪ್ರಕಾರ ಪಡೆಯಬೇಕು ಎಂಬುದನ್ನು ಅರ್ಥ ಮಾಡಿಕೊಡುತ್ತದೆ. ಸಾಮಾನ್ಯವಾಗಿ ಪಕ್ಷವು ಹಕ್ಕುಗಳ ಸಂರಕ್ಷಣೆಗಾಗಿ ಮತ್ತು ಬೇರೆಯವರಿಂದ ಆಕ್ರಮಿತವಾದ ಅಥವಾ ಹೊಂದಿರುವ ಸ್ವತ್ತು ಅಥವಾ ಅವನಿಗೆ ಕೊಡಬೇಕಾದ ಹಣವನ್ನು ವಸೂಲಿ ಮಾಡಿಕೊಡ ಬೇಕೆಂದು ಇತ್ಯಾದಿ ಕೋರಿಕೆಗಳನ್ನು ಮುಂದಿಟ್ಟು ನ್ಯಾಯಾಲಯದಲ್ಲಿ ದಾವೆ ಹೂಡಬಹುದು.

ಪರಿಹಾರೋಪಾಯಗಳ ವ್ಯಾಪ್ತಿಯನ್ನು ಸ್ಪಷ್ಟವಾಗಿ ವಿವೇಚಿಸಲು ಉದಾಹರಣೆಗಾಗಿ ಸ್ಥಿರ ಸ್ವತ್ತುಗಳ ಮಾರಾಟದ ಕರಾರನ್ನು ವೀಕ್ಷಿಸುವುದು ಅವಶ್ಯಕವಾಗಿದೆ. ಅದರಲ್ಲಿ ಸ್ವತ್ತನ್ನು ಮಾರುವವನು ಮುಂಗಡ ಹಣವನ್ನು ಪಡೆದುಕೊಂಡಿರಬಹುದು ಅಥವಾ ನಿಜವಾಗಿ ಉದ್ದೇಶಿಸದೇ ಮಾರಾಟ ಮಾಡಲು ಮೇಲ್ನೋಟಕ್ಕೆ ಒಪ್ಪಿಕೊಂಡಿರಬಹುದು. ಈ ಒಪ್ಪಂದವು ಒಂದು ಸಾಲವನ್ನು ಪಡೆಯುವ ಉಪಾಯವಾಗಿರಲೂಬಹುದು ಮತ್ತು ಅವನು ಆ ಹಾನಿಯಿಂದ ಬಡ್ಡಿಯ ಸಮೇತ ಹಣವನ್ನು ಹಿಂತಿರುಗಿಸುವ ಆಶೆಯನ್ನು ಹೊಂದಿರಲೂ ಬಹುದು. ಅಂತಹ ಸನ್ನಿವೇಶದಲ್ಲಿ ಇನ್ನೊಂದು ಪಕ್ಷವು ತನ್ನ ಆಯ್ಕೆಯ ಪ್ರಕಾರ ಮಾರಾಟದ ಕರಾರನ್ನು ಜಾರಿಗೊಳಿಸುವಂತೆ ದಾವೆ ಹೂಡಬಹುದು ಮತ್ತು ನಿರ್ದಿಷ್ಟ ಪಾಲನೆಯ ಜೊತೆಗೆ ಹಾನಿಪರಿಹಾರವನ್ನು ಸಹ ಕೇಳಬಹುದು ಅಥವಾ ಬದಲಿಯಾಗಿ ಇನ್ನೇನಾದರೂ ಕೇಳಬಹುದು. ಮಾರಾಟಗಾರನಿಂದ ಮೊದಲನೇ ಮಾರಾಟ ಕರಾರಿನಲ್ಲಿ ಆಗಲೇ ಸ್ವತ್ತು ಬೇರೆಯವರಿಗೆ ವಹಿಸಿಕೊಟ್ಟಿದ್ದರೆ(ಪರಭಾರೆ ಮಾಡಲ್ಪಟ್ಟಿದ್ದರೆ) ಆಗ ನಿಬಂಧನೆಗಳನ್ನು, ತರುವಾಯದ ಖರೀದಿದಾರನು ಮೂಲ ವ್ಯವಹಾರದ ಬಗ್ಗೆ ಸೂಚನೆ ಇಲ್ಲದಿದ್ದರೆ ಮಾತ್ರ ಒತ್ತಾಯಿಸಬಹುದು ಮತ್ತು ಆದ್ದರಿಂದ ಸ್ಥಿರ ಸ್ವತ್ತುಗಳ ಮಾರಾಟದ ಒಪ್ಪಂದಕ್ಕೆ ನೋಂದಣಿಯ ಅಗತ್ಯತೆ ಇಲ್ಲದಿದ್ದರೂ ಸಹ, ತರುವಾಯದ ಖರೀದಿದಾರನನ್ನು ಬದ್ಧಗೊಳಿಸಲು, ನೋಂದಾಯಿಸುವುದು ಸುಪ್ರಸಿದ್ಧವಾಗಿ ಅಪೇಕ್ಷಣೀಯ ಮತ್ತು ಸ್ವತ್ತಿನ ವರ್ಗಾವಣೆ ಅಧಿನಿಯಮದ ಪ್ರಕಾರ ನೋಂದಣಿಕೆಯೇ ಎಲ್ಲರಿಗೂ ಸೂಚನೆ.

ಮಾರಾಟದ ಕರಾರಿನ ನಿಬಂಧನೆಯ ಪ್ರಕಾರ, ಒಂದು ನಿರಾಶೆಗೊಂಡ ಪಕ್ಷವು ನಿರ್ದಿಷ್ಟ ಪಾಲನೆಗಾಗಿ ದಾವೆ ಹೂಡಬಹುದು ಮತ್ತು ಇನ್ನೊಂದು ಪಕ್ಷವು ಸ್ವತ್ತನ್ನು ವಿಲೇವಾರಿ ಮಾಡುವುದನ್ನು ನಿಗ್ರಹಿಸುವ ನಿರ್ಬಂಧಕಾ- ಆದೇಶವನ್ನು (Injunction) ಪಡೆದುಕೊಳ್ಳಬಹುದು. ಅವನು ಇನ್ನೂ ಹೆಚ್ಚಾಗಿ ನಷ್ಟ ಪರಿಹಾರಕ್ಕೆ ಇನ್ನೊಂದು ಪಕ್ಷದವರ ಸ್ವತ್ತುಗಳ ಜಪ್ತಿಯನ್ನು ಕೇಳಬಹುದು. ಇದರಿಂದ ಇನ್ನೊಂದು ಪಕ್ಷವು

ಇನ್ನೊಬ್ಬರಿಗೆ ಕೊಡು (ಪರಭಾರೆ) ವುದನ್ನು ತಡೆಗಟ್ಟಿ, ಅವನ ಸ್ವತ್ತುಗಳ ವಿರುದ್ಧ ಮುಂದುವರಿದು ಹಾನಿ ಪರಿಹಾರವನ್ನು ವಸೂಲು ಮಾಡಲು ಮತ್ತು ಆ ಸ್ವತ್ತುಗಳನ್ನು ಮಾರಾಟಕ್ಕೆ ತರಲು ಶಕ್ತನಾಗಿರಬೇಕು. ಇದು ನಿರ್ದಿಷ್ಟ ಪರಿಹಾರ ಅಧಿನಿಯಮ (Specific Relief Act 1963) ಎಂಬ ವಿಶೇಷ ಕಾನೂನು ಆಗಿದೆ ಮತ್ತು ಅದು ಎಲ್ಲಾ ಪರಿಹಾರೋಪಾಯಗಳನ್ನು ಸೂಚಿಸುತ್ತದೆ. ಒಂದು ಪಕ್ಷವನ್ನು ಕರಾರು ನಿಬಂಧನೆಯನ್ನು ನೆರವೇರಿಸಲು ಒತ್ತಾಯಿಸಬಹುದು. ಆದ್ದರಿಂದ ಅವನು ಸ್ವಾಧೀನದಲ್ಲಿರುವ ಇನ್ನೊಂದು ಪಕ್ಷವನ್ನು ಮಾರಾಟ ಪತ್ರವನ್ನು ಜಾರಿಗೊಳಿಸು ವಂತೆ ಒತ್ತಾಯ ಮಾಡಬಹುದು. ಸಾಮಾನ್ಯವಾಗಿ ಕರಾರಿನ ಉಲ್ಲಂಘನೆಗಾಗಿ ಹಾನಿ ಪರಿಹಾರವು ಸಾಕಷ್ಟು ತುಂಬಿಕೊಡುವಂತಹದಾದರೆ ನ್ಯಾಯಾಲಯವು ಕರಾರಿನ ನಿರ್ದಿಷ್ಟ ನಿಬಂಧನೆಗಳನ್ನು ಜಾರಿಗೊಳಿಸಲು ಅಥವಾ ಜಾರಿಗೊಳಿಸದೆ ಇರುವ ವಿವೇಚನೆ ಹೊಂದಿದೆ ಮತ್ತು ಮೇಲೆ ಹೇಳಿದ ಅಧಿನಿಯಮದ ವರ್ಗ ೨೦ ರಂತೆ ನಿರ್ದಿಷ್ಟ ಪಾಲನೆಯ ಡಿಕ್ರಿಗೆ ಅಧಿಕಾರ ವ್ಯಾಪ್ತಿಯು ಯಾವಾಗಲೂ ವಿವೇಚನೀಯ (always discretionary) ಮತ್ತು ನ್ಯಾಯಾಲಯವು ಕರಾರಿನ ನಿಬಂಧನೆಗಳು ಕಾನೂನು ಸಮ್ಮತವಾಗಿದ್ದರೂ ಸಹ ಬದ್ಧಗೊಂಡಿರುವುದಿಲ್ಲ.

ಕಾನೂನಿನಲ್ಲಿ ಪುರಸ್ಕರಿಸಲಾಗುವಂತಹ ಪರಿಹಾರೋಪಾಯಗಳನ್ನು ನ್ಯಾಯಾಲಯಗಳಿಂದ ಪಡೆದುಕೊಳ್ಳಬಹುದು ಮತ್ತು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಹಲವು ಅಧಿನಿಯಮಿತಿಗಳಲ್ಲಿ ನಿರೂಪಿಸಲಾಗಿದೆ. ಒಂದು ಪಕ್ಷವು ಒಪ್ಪಂದದ ವಹಿವಾಟನ್ನು ಹೊರಪಡಿಸಿ, ರಾಜ್ಯದ ಆಡಳಿತಾತ್ಮಕ ಆದೇಶದಿಂದ ಬಾಧಿತವಾಗಿದ್ದರೆ ಅಥವಾ ರಾಜ್ಯದ ಬೇರೆ ಯಾವುದಾದರೂ ಅಧಿಕಾರಿ ಅಥವಾ ಏಜೆನ್ಸಿಯಿಂದ ಬಾಧಿತವಾಗಿದ್ದರೆ, ಸಾಮಾನ್ಯ ಪರಿಹಾರವು ಉಚ್ಚನ್ಯಾಯಾಲಯ ದಲ್ಲಿ ಆದೇಶವನ್ನು ರದ್ದುಗೊಳಿಸುವಂತೆ ರಿಟ್ ಅರ್ಜಿಯನ್ನು ದಾಖಲು ಮಾಡುವುದು. ರಿಟ್ ವ್ಯವಹರಣೆಯು ಒಂದು ವಿಶೇಷವಾಗಿದ್ದು ಕಾಲಪರಿಮಿತಿ ಕಾನೂನು ನಿಯಮ, ನ್ಯಾಯಾಲಯ ಫೀಜು ಮತ್ತು ಇನ್ನಿತರ ಸಂದರ್ಭಗಳಲ್ಲಿ ನಿಯಮಿಸಲಾದ ಪ್ರತಿಕ್ರಿಯೆಗಳ ಅನ್ವಯಿಕತೆಯನ್ನು ಒಳಗೊಂಡಿಲ್ಲ. ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿಯನ್ನು ಬಿಟ್ಟು ಬೇರೆ ರಿಟ್‌ಗಳಿಗೆ ೧೦೦ ರೂ.ಗಳ ನಿಗದಿತ ಫೀಜನ್ನು ವಿಧಿಸಲಾಗುತ್ತದೆ ಮತ್ತು ಇವು ಉಚ್ಚ ನ್ಯಾಯಾಲಯಗಳಿಗೆ ಮಾತ್ರ ಸೀಮಿತ.

ಸಿವಿಲ್ ವ್ಯವಹರಣೆಯು ಯಾವಾಗಲೂ ಅಧೀನ ನ್ಯಾಯಾಲಯದಲ್ಲಿ ಪ್ರಾರಂಭವಾಗುತ್ತದೆ ಮತ್ತು ಸಿವಿಲ್ ನ್ಯಾಯಾಲಯಗಳ ಕ್ರಮಬದ್ಧ ಶ್ರೇಣಿಯ ಬಗ್ಗೆ ಮತ್ತು ಅವುಗಳ ಅನುಕ್ರಮ ಅಧಿಕಾರ ವ್ಯಾಪ್ತಿಗಳ ಬಗ್ಗೆ ಸ್ವಲ್ಪ ವಿಚಾರ ಮಾಡುವುದು

ಅವಶ್ಯಕವಾಗಿದೆ. ಸ್ವತ್ತು ಅಥವಾ ಹಣದ ವಸೂಲಾತಿಯ ಮೊಕದ್ದಮೆಗಳಲ್ಲಿ ವಿವಾದದ ಮೌಲ್ಯ ನಿರ್ಣಯವು ಸಾಧಾರಣವಾಗಿರುತ್ತದೆ. ಅಂದರೆ ನ್ಯಾಸ, ಘೋಷಣೆ ಮುಂತಾದುವಕ್ಕೆ ಸಂಬಂಧಿಸಿದ ಬೇರೆ ಬಹಳ ಇತರ ಮೊಕದ್ದಮೆಗಳಲ್ಲಿ ಅದು ಜಟಿಲವಾಗಿರುತ್ತದೆ. ಪ್ರಧಾನ ಅಧೀನ ನ್ಯಾಯಾಲಯವು ಜಿಲ್ಲಾ ನ್ಯಾಯಾಲಯವಾಗಿದ್ದು, ಅದು ಕೊಲೆ, ವಿಚಾರಣೆ ಮುಂತಾದವುಗಳನ್ನು ನಡೆಸುವ ಸೆಶನ್ಸ್ ನ್ಯಾಯಾಲಯವೂ ಸಹ ಆಗಿದೆ. ಅದು ಪ್ರೋಬೇಟನ್ನು ಕೊಡುವುದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವ್ಯವಹರಿಸುತ್ತದೆ ಮತ್ತು ಮೋಟಾರು ವಾಹನಗಳನ್ನೊಳಗೊಂಡ ಅಪಘಾತದಿಂದ ಉಂಟಾಗುವ ಕ್ಲೇಮುಗಳಿಗೆ ಹಾನಿ ಪರಿಹಾರವನ್ನು ಕೊಡುವ ಮೊಕದ್ದಮೆಗಳು ಮುನ್ಸಿಫ್ ನ್ಯಾಯಾಲಯ ಅಥವಾ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳಲ್ಲಿ ಮಾತ್ರ ವ್ಯವಹರಿಸಲಾಗುತ್ತದೆ. ಮುನ್ಸೀಫ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಮೌಲ್ಯಾಧಾರಿತ ಪರಿಮಿತಿ ೫೦,೦೦೦ ರೂಪಾಯಿಗಳವರೆಗೆ ವ್ಯಾಪ್ತಿಯಾಗುತ್ತದೆ. ಮತ್ತು ಇದರ ಮೇಲೆ ಎಲ್ಲಾ ಕ್ಲೇಮುಗಳನ್ನೂ ಅಪರಿಮಿತ ಅಧಿಕಾರ ವ್ಯಾಪ್ತಿ ಹೊಂದಿರುವ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ದಾಖಲು ಮಾಡಬೇಕು. ಮುನ್ಸೀಫಿನ ತೀರ್ಪಿನಿಂದ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಅಪೀಲು ಅನುಮತಿ ಇರುತ್ತದೆ ಮತ್ತು ಗಣನೀಯ ಕಾನೂನು ಪ್ರಶ್ನೆಯ ಮೇಲೆ ಮಾತ್ರ ಉಚ್ಚ ನ್ಯಾಯಾಲಯಕ್ಕೆ ಎರಡನೇ ಅಪೀಲು ಇರುತ್ತದೆ. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ತೀರ್ಪಿನ ಬಗ್ಗೆ ಉಚ್ಚನ್ಯಾಯಾಲಯಕ್ಕೆ ಅಪೀಲು ಹಾಕಲು ಸಾಧ್ಯತೆ ಇರುತ್ತದೆ ಮತ್ತು ಕ್ಲೇಮು ಕಡಿಮೆಯಾದಲ್ಲಿ ಜಿಲ್ಲಾ ನ್ಯಾಯಾಲಯವು ಅಪೀಲನ್ನು ಕೇಳುತ್ತದೆ. ಇದು ಭಾರತದಾದ್ಯಂತ ನ್ಯಾಯಾಲಯಗಳ ಶ್ರೇಣಿಯ ನಮೂನೆಯಾಗಿದ್ದು, ಸಾಮಾನ್ಯವಾಗಿ ರಾಜ್ಯ ಸರ್ಕಾರಗಳಿಂದ ರೂಪಿಸಲಾಗಿದ್ದು, ಅವು ಸಂವಿಧಾನದ ಏಳನೇ ಅನುಸೂಚಿ (ನಮೂದನೆ ಸಂಖ್ಯೆ ೩) ಎರಡನೇ ಸೂಚಿಯಿಂದ ಅಧಿಕಾರವನ್ನು ಹೊಂದುತ್ತದೆ. ಮಹಾನಗರ ಪ್ರದೇಶಗಳಲ್ಲಿ ನ್ಯಾಯಾಲಯಗಳ ಅನೇಕತೆಯನ್ನು ನಿವಾರಿಸಲು ಪ್ರಯತ್ನ ಮಾಡಿದ್ದು, ಅದರಿಂದ ನ್ಯಾಯಾಲಯಗಳ ಒಂದೇ ಒಂದು ಸಂವರ್ಗ, ನಗರ ಸಿವಿಲ್ ನ್ಯಾಯಾಲಯವು ಅಸ್ತಿತ್ವದಲ್ಲಿರುತ್ತದೆ ಮತ್ತು ಅದಕ್ಕೆ ಯಾವುದೇ ಹೆಚ್ಚು ಅಥವಾ ಕಡಿಮೆ ಮೌಲ್ಯಾಧಾರಿತ ಪರಿಮಿತಿ ಇರುವುದಿಲ್ಲ. ಇದರ ಜೊತೆಗೆ ಅಪೀಲಿನ ಸಂಖ್ಯೆಗಳನ್ನು ತಾನೇ ತಾನಾಗಿ ನಿರ್ಬಂಧಿಸಲಾಗಿದೆ. ಏಕೆಂದರೆ ನಗರ ಸಿವಿಲ್ ನ್ಯಾಯಾಲಯದ ಡಿಕ್ರಿ ಅಥವಾ ತೀರ್ಪಿನಿಂದ ಉಚ್ಚನ್ಯಾಯಾಲಯಕ್ಕೆ ನೇರವಾಗಿ ಅಪೀಲನ್ನು ದಾಖಲು ಮಾಡಬಹುದು.

ಇನ್ನೊಂದು ನ್ಯಾಯಾಲಯಗಳ ವರ್ಗ ಇದೆ. ಅದನ್ನು ಲಘು ವಿವಾದ

ನ್ಯಾಯಾಲಯ ಎಂದು ಕರೆಯಲಾಗಿದ್ದು, ಅದು ವಿವಾಹ ಹಣಕ್ಕೆ ಸಂಬಂಧಿಸಿದ್ದು, ಸರಳವಾಗಿದ್ದರೆ ಅಥವಾ ಸ್ಥಿರಸ್ವತ್ತುಗಳ ಬಗ್ಗೆ ವಿವಾದವನ್ನೊಳಗೊಂಡಿದ್ದರೆ ಅಥವಾ ಹಣದ ಅಗತ್ಯ ಪರಿಮಾಣದ ಬಗ್ಗೆಯೂ, ಹಾನಿ ಪರಿಹಾರಕ್ಕೆ ಮೊತ್ತವನ್ನು ಖಚಿತ ಪಡಿಸದೇ ಇರುವಂತಹ ವಿವಾಹದ ಮೊಕದ್ದಮೆಗಳಲ್ಲದೇ ಬೇರೆ ಮೊಕದ್ದಮೆಗಳಿಗೆ ಮೌಲ್ಯಾಧಾರಿತ ಪರಿಮಿತಿ ಹೊಂದಿರುತ್ತದೆ. ಮುಖ್ಯ ಅನುಕೂಲತೆ ಎಂದರೆ ಬೇರೆ ಯಾವುದೇ ದಾವೆಗೆ ಹೋಲಿಸಿದರೆ ಪ್ರಕ್ರಿಯೆಯು ಸಂಪೂರ್ಣವಾಗಿ ಸಂಕ್ಷಿಪ್ತ ಮತ್ತು ಸಾಕ್ಷ್ಯವನ್ನು ಕೇಳುವುದು (ಅಭಿಲೇಖಿಸು) ಮತ್ತು ತೀರ್ಪು ನೀಡುವುದೂ ಸಹ ಮೊಟಕಾಗಿರುತ್ತದೆ. ಅಂತಹ ತೀರ್ಪಿನ ವಿರುದ್ಧ ಅಪೀಲನ್ನು ಒದಗಿಸಿಲ್ಲ. ಆದರೆ ಅದರ ಕಾನೂನು ಸಮ್ಮತತೆಯನ್ನು ಉಚ್ಚ ನ್ಯಾಯಾಲಯದಲ್ಲಿ ಪುನರೀಕ್ಷಣಾ ಅರ್ಜಿಯಿಂದ ಪುನರಾವಲೋಕನ ಮಾಡಬಹುದು.

ಸಿವಿಲ್ ದಾವೆಯ ವೈಶಿಷ್ಟ್ಯಗಳು ಏನೆಂದರೆ ವಾದಿ ಮತ್ತು ಪ್ರತಿವಾದಿ ಇಬ್ಬರಿಂದಲೂ ಲಿಖಿತವಾದ ಪ್ರತಿವಾದ ಪತ್ರಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಈ ವಾದ ವಿವಾದ ಪತ್ರಗಳನ್ನು ಹಿಂತೆಗೆದುಕೊಳ್ಳಲು ಅಥವಾ ಬದಲಿಸಲಾಗುವುದಿಲ್ಲ ಮತ್ತು ವಿಶೇಷ ಕಾರಣಗಳಿಗಾಗಿ ಮಾತ್ರ "ತಿದ್ದುಪಡಿ" ಮಾಡಬಹುದು. ಆದ್ದರಿಂದ ಪಕ್ಷಗಳು ಸಾಮಾನ್ಯವಾಗಿ ಮೊದಲೇ ಹೇಳಿದಂತೆ ಕಟ್ಟುಹಾಕಲ್ಪಟ್ಟಿವೆ. ಅದರ ಉದ್ದೇಶವು ವಿಭಿನ್ನತೆಯನ್ನು ಕನಿಷ್ಠಗೊಳಿಸುವುದು, ಸುಧಾರಣೆ ಮತ್ತು ಅನಾವಶ್ಯಕ ವಿವಾದದ ಬೆಳವಣಿಗೆಯ ವಿರೋಧ ಇವೇ ಆಗಿವೆ.

ಪಕ್ಷಗಳ ವಾದ ಪ್ರತಿವಾದ ಪತ್ರಗಳು ಪೂರ್ಣಗೊಂಡ ನಂತರ, ನ್ಯಾಯಾಧೀಶರು ಅದನ್ನು ಓದಿ ಅದರ ಭಿನ್ನತೆಯ ಅಂಶಗಳನ್ನು ಗುರುತಿಸುತ್ತಾರೆ. ಪಕ್ಷಗಳ ನಡುವೆ ಮುಖ್ಯ ವಾದಗಳ ಅಂಶಗಳನ್ನು ಅಂದರೆ "ವಿವಾದಾಂಶ"ಗಳನ್ನು (Issues) ರೂಪಿಸುತ್ತದೆ ಮತ್ತು ಅದು ಅನುಕ್ರಮ ಸಂದರ್ಭಗಳನ್ನು ರುಜುವಾತು ಮಾಡಲು ಅಗತ್ಯತೆಯನ್ನು ಸೂಚಿಸುತ್ತದೆ. ವಿವಾದಾಂಶಗಳು ಸಂಗತಿ ಅಥವಾ ಕಾನೂನಿನ ಅಂಶವಾಗಿರಬಹುದು. ಸಾಕ್ಷ್ಯ ಅಧಿನಿಯಮದ ಪ್ರಕಾರ ಬರೀ ಸುಸಂಬದ್ಧ ಸಾಕ್ಷ್ಯಗಳನ್ನು ಮಾತ್ರ ಕೊಡಬಹುದು. ಇದನ್ನು ಒಂದು ಮೊಕದ್ದಮೆ ಯಲ್ಲಿ ಉಂಟಾಗುವ ವಿವಾದಾಂಶಗಳಿಗೆ ಸಂಬಂಧಿಸಿದ ಉಲ್ಲೇಖನದ ಜೊತೆ ಮಾತ್ರ ಖಚಿತಪಡಿಸಿಕೊಳ್ಳಬಹುದು. ಸಾಕ್ಷ್ಯವನ್ನು ಸಂಪೂರ್ಣವಾಗಿ ದಾಖಲೆ ಮಾಡಿದ ನಂತರ ನ್ಯಾಯಾಧೀಶನು ತೀರ್ಪನ್ನು ಕೊಡಲು ಮುಂದುವರಿಯಬಹುದು ಮತ್ತು ಅದು ಸ್ವಯಂ ವಿವರಣಾತ್ಮಕವೆಂದು ನಿರೀಕ್ಷಿಸಬಹುದು. ಅದರ ಅರ್ಥವು ಏನೆಂದರೆ ಅವನು ಸಂಗತಿಗಳನ್ನು ಮತ್ತು ಅದರ ಮೌಲ್ಯದ ಮೌಲ್ಯ ನಿರ್ಣಯದ ಜೊತೆಗೆ ದೊರೆಯುವ ಸಾಕ್ಷ್ಯಗಳನ್ನೂ ನಿರೂಪಿಸುವ ಅಗತ್ಯತೆ ಇದೆ, ಅದರಿಂದ ಮುಂಚಿನ ನಿರೂಪಣೆಯ

ತರ್ಕಬದ್ಧ ನಿರ್ಣಯ ಪಡೆಯಲು ಅನುಕೂಲವಾಗುತ್ತದೆ. ಇವೆಲ್ಲವನ್ನೂ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಒದಗಿಸಲಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ ಉಚ್ಚನ್ಯಾಯಾಲಯಗಳಿಗೆ ಪ್ರಥಮ ಅಫೀಲನ್ನು ದಾಖಲು ಮಾಡುವ ಹಕ್ಕು ಯಾವಾಗಲೂ ಮೂಲ ಮತ್ತು ಮಹತ್ವದ ಹಕ್ಕು ಮತ್ತು ಕಾನೂನಿನ ಗಮನಾರ್ಹ ಪ್ರಶ್ನೆಗಳನ್ನು ಒಳಗೊಂಡಿದ್ದರೆ, ಎರಡನೇ ಅಪೀಲು ಅಥವಾ ಅದು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯವನ್ನೊಳಗೊಂಡಿದ್ದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಮೂರನೇ ಅಪೀಲಿಗೂ ಸಹ ಕೆಲ ಸಂದರ್ಭಗಳಲ್ಲಿ ಅವಕಾಶವಿದೆ.

ಸಿವಿಲ್ ನ್ಯಾಯಾಲಯದ ಸಮ್ಮುಖದಲ್ಲಿ ಎಲ್ಲಾ ವಿವಾದಗಳೂ ಭಾರತದ ಕಾಲಪರಿಮಿತಿ ಅಧಿನಿಯಮದ ಪ್ರಕಾರ ಸರ್ಕಾರದ ಕ್ಲೇಮುಗಳನ್ನೂ ಸಹ ಒಳಗೊಂಡು, ನಿರೂಪಿಸಿದ ಕಾಲಪರಿಮಿತಿ ಅವಧಿಯ ನಂತರ ಪ್ರತಿಷೇಧಿತಗೊಳ್ಳುತ್ತದೆ. ಒಂದೇ ಒಂದು ಬಗೆಯ ವಿನಾಯಿತಿ ಮೊಕದ್ದಮೆಯೆಂದರೆ ನ್ಯಾಸ ಧಾರಿಯ ವಿರುದ್ಧ ಮಾತ್ರ ಮೊದಲೇ ಗಮನಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ, ೩೩ ರ ಪ್ರಕಾರ ದಿವಾಳಿಯಾದ (ನಿರ್ಧನಿಕನಾದ, Pauper. INDIGENT) ವ್ಯಕ್ತಿಯ ಹೊರತು, ಪ್ರತಿಯೊಬ್ಬರೂ ಮೌಲ್ಯಾನುಸಾರ ಶೇಕಡ ೧೦ ರಷ್ಟು ವಿವಾದದ ಮೌಲ್ಯದ ದರದ ಮೇಲೆ ಅಥವಾ ಸ್ವತ್ತಿನ ಚಾಲ್ತಿ ಮಾರುಕಟ್ಟೆ ಮೌಲ್ಯದ ಮೇಲೆ ನ್ಯಾಯಾಲಯದ ಫೀಜನ್ನು ಕೊಡಬೇಕಾಗುತ್ತದೆ. ವ್ಯವಸಾಯದ ಭೂಮಿಯು ರಿಯಾಯ್ತಿ ಹೊಂದಿದೆ. ಏಕೆಂದರೆ ಅದರ ಮಾರುಕಟ್ಟೆ ಮೌಲ್ಯವನ್ನು ವಾರ್ಷಿಕ ಆದಾಯ ಮೌಲ್ಯಮಾಪನದ ಗುಣಕ ಎಂದು ಭಾವಿಸಲಾಗಿದೆ. ನ್ಯಾಯಾಲಯ ಶುಲ್ಕದಿಂದ ಪಡೆದ ಆದಾಯವು ಗಣನೀಯ ಮತ್ತು ಅದು ರಾಜ್ಯಕೋಶಕ್ಕೆ ಹೋಗುತ್ತದೆ. ಪ್ರತೀ ರಾಜ್ಯವೂ ಸಿವಿಲ್ ನ್ಯಾಯಾಲಯ ಅಧಿನಿಯಮದ ಜೊತೆಗೆ ತನ್ನದೇ ಆದ ನ್ಯಾಯಾಲಯ ಫೀಜು ಮತ್ತು ದಾವೆ ಮೌಲ್ಯ ನಿರ್ಣಯ ಕಾಯಿದೆಯನ್ನು ಹೊಂದಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯು ಭಾರತಕ್ಕೆಲ್ಲಾ ಅನ್ವಯವಾಗುತ್ತದೆ ಮತ್ತು ಇದು ಮಾತ್ರ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ನಿರ್ಧರಿಸುತ್ತದೆ. ಆ ಸಂಹಿತೆಯ ವರ್ಗ ೧೫ ರಿಂದ ೨೦ ಸ್ಥಿರ ಆಸ್ತಿಗಳನ್ನು ಸಂಬಂಧಿಸಿದ ಬಗ್ಗೆ ಸ್ವತ್ತು ಯಾವ ಅಧಿಕಾರ ವ್ಯಾಪ್ತಿಯಲ್ಲಿ ಇರುವುದೋ ಆ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬೇಕು ಎಂದು ನಿರ್ಧರಿಸುತ್ತದೆ. ಇಲ್ಲದಿದ್ದರೆ ನ್ಯಾಯಾಲಯವು ತೀರ್ಪನ್ನು ಕೊಟ್ಟರೆ, ಆ ತೀರ್ಪು ಶೂನ್ಯವಾಗುತ್ತದೆ. (Nullity) ಮತ್ತು ಅದು ಯಾರ ಮೇಲೆಯೂ ಬದ್ಧವಾಗಿರುವುದಿಲ್ಲ (ಬಂಧನಕಾರಿಯಾಗಿರುವುದಿಲ್ಲ). ದಾವೆಯು ಬೇರೆ ಬೇರೆ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯಲ್ಲಿ ಇರುವ ಬಾಬ್ತುಗಳ ವಿಭಜನೆಗಾಗಿ ಆದರೆ ಮತ್ತು ಅದು ಬೇರೆ ಬೇರೆ ರಾಜ್ಯಗಳೂ ಅಂದರೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ

ದಾವೆಯನ್ನು ಯಾವುದಾದರೂ ಒಂದು ರಾಜ್ಯದಲ್ಲಿ ಮತ್ತು ಒಂದು ಸ್ಥಳದಲ್ಲಿ ಹೂಡಬಹುದು ಎಂಬುದಕ್ಕೆ ಅವಕಾಶ ಕೊಡುತ್ತದೆ. ಸಾಮಾನ್ಯವಾಗಿ ಸಂಹಿತೆಯ ವರ್ಗ ೨೦ ರ ಪ್ರಕಾರ ಹಣ ವಸೂಲಿ, ಇತ್ಯಾದಿಗಾಗಿ ದಾವೆಯನ್ನು ಎಲ್ಲಿ ಪ್ರತಿವಾದಿಯು ವಾಸ್ತವಿಕವಾಗಿ ವಾಸಿಸುತ್ತಾನೆಯೋ ಅಥವಾ ಗಳಿಕೆಗಾಗಿ ಕೆಲಸ ಮಾಡುತ್ತಾನೋ ಆ ಭಾಗದಲ್ಲಿ ದಾಖಲು ಮಾಡಬೇಕು ಮತ್ತು ವಾದಿಗೆ ತನ್ನದೇ ಆದ ಸ್ವಂತ ನ್ಯಾಯಾಧಿಕರಣವನ್ನು ಆಯ್ಕೆ ಮಾಡಲು ಸ್ವಾತಂತ್ರ್ಯ ಇರುವುದಿಲ್ಲ. ಸ್ವಲ್ಪ ಮಟ್ಟಿಗೆ ಈ ಕಷ್ಟವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ವರ್ಗ ೨೦ ರ ಉಪಖಂಡ 'ಸಿ'ಯಿಂದ ಉಪಶಮನ ಮಾಡಲಾಗಿದೆ. ಅದು ಎಲ್ಲಿ ವ್ಯಾಜ್ಯಕಾರಣವು ಪೂರ್ಣವಾಗಿ ಅಥವಾ "ಭಾಗಶಃ" ಉಂಟಾಗುತ್ತದೆಯೋ ಆ ಸ್ಥಳದಲ್ಲಿ ದಾವೆಯನ್ನು ಹೂಡಬಹುದು ಎಂದು ನಿರೂಪಿಸುತ್ತದೆ. ಆದ್ದರಿಂದ ಪ್ರತಿವಾದಿಯ ಸ್ಥಳವಲ್ಲದೆ ಎಲ್ಲಿ ವ್ಯವಹಾರವು ಸಂಭವಿಸುತ್ತದೆಯೋ ಅಥವಾ ಕರಾರಿನ ಸಂಬಂಧದಲ್ಲಿ ಎಲ್ಲಿ ಕರಾರು ನೆರವೇರಿಸಬೇಕಾಗುತ್ತದೋ ಅಥವಾ ಎಲ್ಲಿ ಹಣ ಪಾವತಿ ಮಾಡಬಹುದೋ ಅಲ್ಲಿಯೂ ಸಹ ದಾವೆಯನ್ನು ದಾಖಲ್ಮಾಡ ಬಹುದು.

ಕ್ವಾನೂನು ಒಂದು ವ್ಯವಹಾರ ಅಥವಾ ವ್ಯಾಜ್ಯವು ಬೇಗನೆ ಅಂತ್ಯವಾಗು ವುದನ್ನು ಪುರಸ್ಕರಿಸುತ್ತದೆ. ಆದ್ದರಿಂದ ವ್ಯಾಜ್ಯಕಾರಣದ ಯಾವುದೇ ಭಾಗವನ್ನೂ ಸಹ ಬಿಡಲಾಗುವುದಿಲ್ಲ. ಮತ್ತು ಒಬ್ಬ ವ್ಯಕ್ತಿಯು ಎಲ್ಲಾ ಕ್ರಮೋ ಪಾಯಗಳಿಗೂ ದಾವೆ ಹೂಡಲು ಹೊಣೆಯಾಗಿರುತ್ತಾನೆ ಅಥವಾ ಅವನಿಗೆ ಬಾಕಿ ಇರುವ ಎಲ್ಲಾ ಹಣವನ್ನೂ ವಸೂಲು ಮಾಡಲು ದಾವೆ ಹೂಡಬಹುದು. ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಯಮ ೨ ಆದೇಶ ೨ ರ ಪ್ರಕಾರ ಎರಡನೆಯ ದಾವೆಯು ಪ್ರಾಮುಖ್ಯತೆ ಹೊಂದಿದೆ. ವಿಷಯವು ಅಂತಿಮವಾಗಿ ನ್ಯಾಯ ನಿರ್ಣಯ ಹೊಂದಿದ್ದರೆ ಅದರಲ್ಲಿನ ಯಾವುದೇ ವಿವಾದಾಂಶವನ್ನು ಯಾವುದೇ ಮುಂದಿನ ವ್ಯವಹರಣೆಯಲ್ಲಿಯೂ ಸಹ ಸಿವಿಲ್ ಪ್ರಕ್ರಿಯಾ ಸಂಹಿತೆಯ ವರ್ಗ ೧೧ ರಲ್ಲಿ ನಿಗಮಿತವಾದ "**ಪೂರ್ವನ್ಯಾಯ**" (Res-Judicata) ದ ಸಿದ್ಧಾಂತದ ಕಾರಣದಿಂದಾಗಿ ಪುನಃ ಆರಂಭಿಸಲಾಗುವುದಿಲ್ಲ. ನ್ಯಾಯಾಲಯ ಯಾವುದೇ ಪಕ್ಷವು ಯಾವುದೇ ಕೆಲಸವನ್ನು ಮಾಡುವುದನ್ನು ಪ್ರತಿಷೇಧಿಸಲು ಅಥವಾ ನಿರ್ದೇಶಿಸಲು ಮಧ್ಯಕಾಲೀನ ಆದೇಶವನ್ನು ಮಾಡಲು ವಿಶಾಲವಾದ ಅಂತರ್ನಿಹಿತ ಅಧಿಕಾರವನ್ನು ಹೊಂದಿದೆ ಅಂದರೆ ಸ್ವೀಕರ್ತರುಗಳು, ಕಮಿಷನರ್‌ಗಳನ್ನು ನೇಮಕ ಮಾಡುವುದು ಮುಂತಾದವು, ವಿವಾದದಲ್ಲಿ ಇರುವ ಸ್ವತ್ತಿನ ಸ್ವಾಧೀನತ್ವ ಮತ್ತು ಅದನ್ನು ವಹಿವಾಟು ಮಾಡುವ ಇನ್ನೂ ಹೆಚ್ಚು ಅಧಿಕಾರವನ್ನು ಸಹ ಹೊಂದಿದೆ.

ನ್ಯಾಯಾಲಯಗಳು ಮಾಡಿದ ಡಿಕ್ರಿಗಳನ್ನು ವ್ಯಕ್ತಿಯ ವ್ಯವಹರಣೆಯಿಂದ

ಅಥವಾ ಸ್ವತ್ತಿನ ಅಥವಾ ತೀರ್ಪು ಋಣಿಯ ವಿರುದ್ಧ ಪ್ರತ್ಯೇಕ ನಿರ್ವಹಣಾ ವ್ಯವಹರಣೆಯನ್ನು ಅವನು ಎಲ್ಲಿಯಾದರೂ ಇರಲಿ ಅಥವಾ ಸ್ವತ್ತು ಎಲ್ಲಾದರೂ ಇರಲಿ, ಕಾರ್ಯಗತಗೊಳಿಸಬಹುದು. ಭಾರತದ ಯಾವುದೇ ನ್ಯಾಯಾಲಯವು ನೀಡಿದ ಡಿಕ್ರಿಯನ್ನು ಕಾರ್ಯಗತಗೊಳಿಸುವುದಕ್ಕೋಸ್ಕರ ಭಾರತದಲ್ಲೇ ಬೇರೆ ಯಾವ ನ್ಯಾಯಾಲಯಕ್ಕೆ ಬೇಕಾದರೂ ವರ್ಗಾವಣೆ ಮಾಡಿಕೊಳ್ಳಬಹುದು. ಡಿಕ್ರಿಗೆ ಒಳಪಟ್ಟ ಸಾಲಗಾರನ (ಋಣಿಯ) ದಸ್ತಗಿರಿಯನ್ನೂ ಸಹ ಮಾಡಬಹುದು ಮತ್ತು ಸಾಲ (ಋಣ)ವನ್ನು ಸಂದಾಯ ಮಾಡುವಂತೆ ಬಲಾತ್ಕರಿಸಲು ಸಿವಿಲ್ ಬಂದೀಖಾನೆಯಲ್ಲೂ ಇಡಬಹುದು. ಅವನ ಚರ ಮತ್ತು ಸ್ಥಿರ ವಸ್ತುಗಳನ್ನು ಜಪ್ತಿ ಮಾಡಬಹುದು ಆದರೆ ಅವನು ಆಸ್ತಿಯನ್ನು ಮಾರುವ (ಪರಭಾರೆ ಮಾಡುವ) ಸ್ವಾತಂತ್ರ್ಯವನ್ನು ಹೊಂದಿರುವದಿಲ್ಲ ಮತ್ತು ಅಂತಹಾ ಜಪ್ತಿಯು ಋಣಿಯಿಂದ ಅರಿಯದೆ ಖರೀದಿ ಮಾಡುವವನನ್ನೂ ಸಹ ಬದ್ಧಗೊಳಿಸುತ್ತದೆ. (ಬಂಧನಕಾರಿ ಯಾಗಿ ಮಾಡುತ್ತದೆ.) ಏಕೆಂದರೆ ಅಂತಹ ಜಪ್ತಿಯು ನೋಂದಣಿಯಾಗಿರು ರುವುದಿಲ್ಲ ಮತ್ತು ನೋಂದಣಿ ಅಧಿಕಾರಿಯಿಂದ ಪಡೆದ ಯಾವುದೇ ಪೂರ್ವಾಧಿ ಪ್ರಮಾಣ ಪತ್ರದಲ್ಲಿ ಪ್ರತಿಬಿಂಬಿಸುವುದಿಲ್ಲ. ಸ್ವತ್ತುಗಳನ್ನು ನ್ಯಾಯಾಲಯದ ಹರಾಜಿನಲ್ಲಿ ಮಾರಾಟ ಮಾಡಲಾಗುತ್ತದೆ ಮತ್ತು ಅಂತಹಾ ಮಾರಾಟವು ಸರಿಯಾದ ಸ್ವಾಮ್ಯವನ್ನು ಹೊಂದಿರುತ್ತದೆ. ಎಂದು ನ್ಯಾಯಾಲಯಕ್ಕೆ ಯಾವುದೇ ಆಶ್ವಾಸನೆಯನ್ನು ಕೊಡಲಾಗುವುದಿಲ್ಲ.

ಪಕ್ಷಗಳು ತಮ್ಮ ವ್ಯಾಜ್ಯವನ್ನು ನ್ಯಾಯಾಲಯಕ್ಕೆ ಹೋಗದೇ ಮಧ್ಯಸ್ಥಿಕೆ ಒಪ್ಪಂದ ಮಾಡಿಕೊಂಡು ಬಗೆಹರಿಸಿಕೊಳ್ಳಬಹುದು. ಇದನ್ನು ಮಧ್ಯಸ್ಥಿಕೆ ಅಧಿನಿಯಮ ೧೯೪೦ ರಲ್ಲಿ ತಿಳಿಸಲಾಗಿದೆ. ಮಾನ್ಯವಾಗಿರುವ ಮಧ್ಯಸ್ಥಿಕೆ, ಷರತ್ತು ಇರುವ ಯಾವುದೇ ಒಪ್ಪಂದ ವಿದ್ದರೆ ಅದು ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ ಬಹಳಷ್ಟು ಒಪ್ಪಂದಗಳಲ್ಲಿ ಮಧ್ಯಸ್ಥಿಕೆ ಖಂಡವನ್ನು ಅಳವಡಿಸಿಕೊಳ್ಳುತ್ತಾರೆ. ಆದರೆ ಬಹಳಷ್ಟು ಜನರು ಅಧಿನಿಯಮದ ಉಪಬಂಧಗಳನ್ನು ಉಪಯೋಗಿಸಿಕೊಳ್ಳದೇ ಇರುವುದು ಒಂದು ದುರದೃಷ್ಟಕರ ಸಂಗತಿಯಾಗಿದೆ.

ಕ್ರಿಮಿನಲ್ ಮೊಕದ್ದಮೆಗಳು

ಅಪರಾಧವನ್ನು ರಾಜ್ಯವು ಯಾವಾಗಲೂ ಕಾನೂನಿನ ಉಲ್ಲಂಘನೆ ಎಂದು ಪರಿಗಣಿಸಲಾಗಿರುವುದರಿಂದ ಸಾಮಾನ್ಯವಾಗಿ ರಾಜ್ಯವು ಅಪರಾಧಿಯನ್ನು ಪ್ರಾಸಿಕ್ಯೂಟ್ ಮಾಡುತ್ತದೆ; ಮತ್ತು ಕೆಲವು ಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ ಪಕ್ಷವು ಮ್ಯಾಜಿಸ್ಟ್ರೇಟ್‌ನ ಮುಂದೆ ನೇರವಾಗಿ ದೂರನ್ನು ದಾಖಲು ಮಾಡುತ್ತದೆ. ಇದಕ್ಕೆ

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ (Criminal Procedure Code 1973) ವರ್ಗ ೨೦೦ ರ ಕೆಳಗೆ ಉಪಬಂಧವನ್ನು ಮಾಡಲಾಗಿದೆ. ಅಧಿಕಾರ ವ್ಯಾಪ್ತಿಯ ತೊಂದರೆಗಳು ಮತ್ತು ನ್ಯಾಯಾಲಯ ಶುಲ್ಕ ಇವು ಸಾಮಾನ್ಯವಾಗಿ ಸಿವಿಲ್ ನ್ಯಾಯಾಲಯದಲ್ಲಿ ಕಾಣಬರುತ್ತದೆ. ಆದರೆ ಅವು ಕ್ರಿಮಿನಲ್ ನ್ಯಾಯಾಲಯದಲ್ಲಿ ಇರುವುದಿಲ್ಲ. ಏಕೆಂದರೆ ನ್ಯಾಯಾಲಯ ಶುಲ್ಕ ವಿಧಿಸಲಾಗುವುದಿಲ್ಲ ಮತ್ತು ನ್ಯಾಯಾಲಯ ಅಧಿಕಾರ ವ್ಯಾಪ್ತಿಯನ್ನು ಘಟನೆ ನಡೆದ ಸ್ಥಳದಿಂದ ನಿರ್ಧರಿಸಲಾಗುತ್ತದೆ. ಪ್ರಾಸಿಕ್ಯೂಷನ್‌ಗೆ ಕಾಲಪರಿಮಿತಿಯ ಬಗ್ಗೆಯೂ ಸಹ ಕಾನೂನಿನ ಸಾಮಾನ್ಯ ತತ್ವವನ್ನು "ನಲ್ಲಂ ಟೆಂಪಸ್ ಅಕುರಿಟ್ ರೇಗಿಸ್" (Nullum Tempus Occurrit Regis) ಎಂಬ ಸೂತ್ರದಲ್ಲಿ ವ್ಯಕ್ತಪಡಿಸಿದೆ. ಅದರ ಮೂಲ ಅರ್ಥವೇನೆಂದರೆ, ಸಾರ್ವಭೌಮ ಅಥವಾ ರಾಜ್ಯಕ್ಕೆ ಸಮಯವು ಪ್ರತಿಷೇಧವಾಗುವುದಿಲ್ಲ. ಕ್ಷುಲ್ಲಕ ದೂರುಗಳಿಂದ ಉಂಟಾಗ ಬಹುದಾದ ತೊಂದರೆಗಳನ್ನು ನಿವಾರಿಸುವುದಕ್ಕೋಸ್ಕರ, ಕಾಲಪರಿಮಿತಿ ಎಂಬ ಪರಿಕಲ್ಪನೆಯನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ೧೯೭೩ ನಲ್ಲಿ ಮಂಡಿಸಲಾಗಿದೆ. ಜುಲ್ಮಾನೆ ಹಾಕಬಹುದಾದ ಅಪರಾಧಗಳಿಗೆ ಮಾತ್ರ ಕ್ರಮ ಜರುಗಿಸಬಹುದು ಅಂದರೆ ದೂರನ್ನು ಘಟನೆ ಸಂಭವಿಸಿದ ತಾರೀಖಿನಿಂದ ಒಂದು ವರ್ಷದೊಳಗೆ ಮಾಡಬೇಕು ಮತ್ತು ಮೂರು ವರ್ಷ ದಂಡನೆಯನ್ನೊಳಗೊಂಡ ಅಪರಾಧಿಗಳಿಗೆ ದೂರನ್ನು ಮೂರು ವರ್ಷದ ಅವಧಿಯೊಳಗೆ ದಾಖಲು ಮಾಡಬೇಕು. ಆದ್ದರಿಂದ ಮೂರು ವರ್ಷ ಮೀರಿ ದಂಡನೆಯನ್ನು ಗೊತ್ತುಪಡಿಸಿದ ಎಲ್ಲಾ ಅಪರಾಧಗಳೂ ಕಾಲಪರಿಮಿತಿಯ ಪ್ರತಿಷೇಧಕ ವ್ಯಾಪ್ತಿಯೊಳಗೆ ಬರುವುದಿಲ್ಲ ಮತ್ತು ಯಾವ ಸಮಯದಲ್ಲಿ ಬೇಕಾದರೂ ಪ್ರಾಸಿಕ್ಯೂಷನ್ ನಡೆಸಬಹುದು.

ಕ್ರಿಮಿನಲ್ ನ್ಯಾಯಾಲಯಗಳ ಕ್ರಮಬದ್ಧ ಶ್ರೇಣಿಯನ್ನು ಕೇಂದ್ರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಪ್ರಕಾರ ನಿರ್ಧರಿಸಲಾಗುತ್ತದೆ. ಮಹಾನಗರ ಪ್ರದೇಶದಲ್ಲಿ ಅಪೀಲುಗಳ ಬಹುವಿಧತೆಯನ್ನು ನಿವಾರಿಸಲು, ನಗರ ಸಿವಿಲ್ ನ್ಯಾಯಾಲಯದ ಸಾದೃಶ್ಯದ ಮೇರೆಗೆ, ನಾವು ಮಹಾನಗರ ಮ್ಯಾಜಿಸ್ಟ್ರೇಟ್‌ಗಳನ್ನು ಹೊಂದಿದ್ದೇವೆ ಮತ್ತು ಅವರುಗಳೆಲ್ಲ ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ಗಳು. ಸಿವಿಲ್ ವಿವಾದಗಳ ಸಂದರ್ಭದಂತೆ ವಿಶಾಲವಾಗಿ ಲಿಖಿತ, ದಾವೆ, ಹೇಳಿಕೆ, ವಾದ ಪ್ರತಿವಾದ ಮಾಡಲು ಅವಕಾಶವಿರುವುದಿಲ್ಲ ಮತ್ತು ಒಬ್ಬ ಆಪಾದಿತ ವ್ಯಕ್ತಿಯು ಸಾಕ್ಷಿಯ ಕಟಕಟೆಯೊಳಗೆ ಕಾಲಿರಿಸುವ ಅವಶ್ಯಕತೆ ಇಲ್ಲ. ಇಷ್ಟವಿದ್ದರೆ ಮಾತ್ರ ಮಾಡಬಹುದು. ಏಕೆಂದರೆ ಕಾನೂನಿನ ಸಾಮಾನ್ಯ ತತ್ವವು ಏನೆಂದರೆ ಆಪಾದಿತ ವ್ಯಕ್ತಿಯು ದೋಷಯುಕ್ತನೆಂದು ಸಂಶಯ ಮೀರಿ ರುಜುವಾತು ಮಾಡುವುದು ಪ್ರಾಸಿಕ್ಯೂಷನ್‌ನ ಕರ್ತವ್ಯವಾಗಿದೆ ಮತ್ತು ಸಂಶಯದ ನಿವಾರಣೆಯ ಹೊಣೆಯನ್ನು ಯಾವಾಗಲೂ ಆಪಾದಿತ ವ್ಯಕ್ತಿಗೆ

ಕೊಡಬೇಕು. ಆದರೂ ಹಾನಿ ಅಥವಾ ಹಲ್ಲೆ ಗೊಳಪಟ್ಟ ವ್ಯಕ್ತಿ ಆಪಾದಿತನೊಡನೆ ರಾಜಿ ಮಾಡಿಕೊಳ್ಳುವ ಹಕ್ಕು ಕೇವಲ ಕೆಲವೇ ಮತ್ತು ಸಣ್ಣ ಪ್ರಮಾಣದ ಅಪರಾಧಗಳಿಗೆ ಮಾತ್ರ ಸೀಮಿತವಾಗಿದೆ.

ಕಾನೂನು ಮತ್ತು ಅದರ ವ್ಯವಸ್ಥೆಯನ್ನು ಪೂರ್ಣವಾಗಿ ಪರಿಚಯ ಮಾಡಿಕೊಳ್ಳಲು ಪ್ರಯತ್ನ ಮಾಡಿದಾಗ ಪ್ರಥಮವಾಗಿ ನಮಗೆ ಗೋಚರ ವಾಗುವುದು ಅದನ್ನು ಬಳಸುವ ವಿಶಿಷ್ಟ ಪದಗಳು, ಅಂಶಗಳು ಮತ್ತು ಅವುಗಳ ವ್ಯಾಪ್ತಿ. ಹಕ್ಕು, ಕರ್ತವ್ಯ, ಮಾಲೀಕತ್ವ ಇತ್ಯಾದಿ ಅನೇಕ ಅಂಶಗಳ ಆಧಾರದ ಮೇಲೆ ಕಾನೂನು ನಿರ್ಮಿತವಾಗಿದೆ. ಇವುಗಳ ಪರಿಚಯ ಇಲ್ಲದಿದ್ದರೆ, ಕೇವಲ ಕೆಲವೇ ಕಾನೂನುಗಳನ್ನು ಓದಿದರೆ ಅವುಗಳ ವ್ಯಾಪ್ತಿ ಮತ್ತು ಇತಿಮಿತಿಗಳು ಸಾಮಾನ್ಯವಾಗಿ ಅರ್ಥವಾಗುವುದಿಲ್ಲ. ಇದಕ್ಕಾಗಿ ಅಡಿಪಾಯದಿಂದ ನಾವು ವಿಶ್ಲೇಷಿಸಿ ಪರಿಚಯ ಮಾಡಿಕೊಂಡು ಮುಂದುವರಿಯುವುದು ಅಗತ್ಯ.

ಇದಕ್ಕಾಗಿ ಮೊದಲನೆಯ ಹಂತದಲ್ಲಿ ಕಾನೂನು ಯಾವ ಬಳಕೆಗಾಗಿ ಮತ್ತು ಯಾರ ಬಳಕೆಗಾಗಿ ಎಂಬ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ನಂತರ ಕಾನೂನಿನಲ್ಲಿ ಮಾನವ ಎಂಬ ಕಲ್ಪನೆಯ ಬಗ್ಗೆ ಕಾನೂನಿನ ದೃಷ್ಟಿಯಲ್ಲಿ ಒಂದು ವಿಶಿಷ್ಟವಾದ ಸಿದ್ಧಾಂತವನ್ನೇ ರೂಪಿಸಲಾಗಿದೆ. ಇದರಿಂದಾಗಿ ಕಂಪನಿಗಳ ಮಸೂದೆ ಮತ್ತು ಇತರ ಶಾಸನಗಳಲ್ಲಿ ಅವುಗಳಿಗೆ ಸಂಬಂಧಿಸಿದ ವಿಶೇಷ ಸೌಲಭ್ಯಗಳನ್ನು ಅಳವಡಿಸಲು ಸಾಧ್ಯವಾಯಿತು. ನೈಜ ಮಾನವನಂತೆಯೇ ಅನೇಕ ಸಂಸ್ಥೆ ಅಥವಾ ಕಂಪನಿ ಇತ್ಯಾದಿ ಕಾಲ್ಪನಿಕ ಗುಂಪುಗಳಿಗೆ ಹಕ್ಕು, ಬಾಧ್ಯತೆ, ಕರ್ತವ್ಯ ಇವುಗಳ ಉಡಿಗೆಯನ್ನು ತೊಡಿಸಿ ಅವುಗಳನ್ನು ನೈಜ ಮಾನವನಂತೆ ಕರ್ತವ್ಯ ಲೋಪಗಳಿಗೆ ಗುರಿ ಮಾಡಲಾಗಿದೆ. ಈಗಿನ ಸಮಾಜದ ವ್ಯವಸ್ಥೆಯಲ್ಲಿ ಈ ಸಂಸ್ಥೆಗಳ ಪಾತ್ರ ಹಿರಿದಾದ್ದರಿಂದ ಹಿಂದಿನ ಶತಮಾನಗಳ ಕಾನೂನಿನ ವ್ಯವಸ್ಥೆಯೇ ಮಾರ್ಪಾಟು ಗೊಂಡು ವ್ಯಕ್ತಿಗೆ ಕೊಡುತ್ತಿದ್ದ ಆದ್ಯತೆ ಬದಲಾವಣೆಗೊಂಡಿದೆ.

ಡೀನ್ ರಾಸ್ಕೋ ಪೌಂಡ್ ಎಂಬ ಅಮೇರಿಕಾದ ನ್ಯಾಯಶಾಸ್ತ್ರಜ್ಞ (Jurist) ವಿಶ್ಲೇಷಿಸಿದಂತೆ ಕಾನೂನಿನ ಸ್ವರೂಪ ಮತ್ತು ನ್ಯಾಯ ವಿತರಣೆಯಲ್ಲಿ ಅದರ ಪಾತ್ರವನ್ನು ಸರಿಯಾಗಿ ಅರಿಯಬೇಕಾದರೆ ಕೆಲವು ಮೂಲಭೂತ ಅಂಶಗಳನ್ನು (Jural Postualates) ನಾವು ಅರಿಯಲೇಬೇಕು ಮತ್ತು ಅವುಗಳನ್ನು ಸರಿಯಾಗಿ ಗುರುತಿಸಿ, ಅದರ ಮೇರೆಗಳನ್ನುರೂಪಿಸಿದಲ್ಲಿ ವೈಜ್ಞಾನಿಕವಾಗಿ ಕಾನೂನು ಮತ್ತು ನ್ಯಾಯದ ಸಂಬಂಧವನ್ನು ತಿಳಿಯಬಹುದು ಎಂದು ಹೇಳಿದ್ದಾರೆ. ಈ ತರಹದ ವೈಚಾರಿಕತೆಯಿಂದ ಹೊರಹೊಮ್ಮುವ ಅಂಶವೇನೆಂದರೆ, ಒಬ್ಬ ವ್ಯಕ್ತಿಗೆ ಕಾನೂನಿನಲ್ಲಿ ಎಷ್ಟು ಸ್ಥಾನವಿದೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಸಮಾಜದ ಅಂಗಗಳಾದ ವಿವಿಧ

ಸಂಸ್ಥೆಗಳಿಗೂ ಕೊಟ್ಟಿದೆ. ಇನ್ನೂ ಹೇಳಬೇಕಾದರೆ ವಸ್ತುವಿನ ಮಾಲೀಕತ್ವ ಇತ್ಯಾದಿ ಅಂಶಗಳೂ ಕೂಡ ಒಂದು ಸಂಸ್ಥೆಯ ಅಥವಾ ಬಹುಜನರಿಗಾಗಿ ಮಾರ್ಪಾಟಾಗಿ ಕಾನೂನಿನ ಸ್ವರೂಪದ ಹೊಂದಾಣಿಕೆಗೆ ಅತ್ಯುಪಕಾರಿಯಾಗಿದೆ. ಆದ್ದರಿಂದಲೇ ಒಂದು ಕಂಪನಿ ಅಥವಾ ಪಾಲುಗಾರಿಕೆಯ ರಚನೆಗೆ ನಾವು ಮಹತ್ವವನ್ನು ಕೊಟ್ಟು ಅವುಗಳಿಗೂ ಒಬ್ಬ ವ್ಯಕ್ತಿಗೂ ಇರಬಹುದಾದ ಭಿನ್ನತೆಯನ್ನು ನಾವು ಗುರುತಿಸಬಹುದು. ಇದರಿಂದ ಒಂದು ಸ್ಪಷ್ಟವಾದ ಅಂಶ ಏನೆಂದರೆ, ಇತ್ತೀಚಿನ ಬೆಳವಣಿಗೆಯಲ್ಲಿ ಬಹುಜನರು ಸಾಮಾಜಿಕ ಅಥವಾ ಆರ್ಥಿಕ ಸಂಸ್ಥೆಯನ್ನು ತಮ್ಮ ಪ್ರಯೋಜನಕ್ಕಾಗಿ ಮಾಡುತ್ತಿರುವುದು ಸರ್ವೇ ಸಾಮಾನ್ಯ. ಆರ್ಥಿಕ ವ್ಯವಹಾರಗಳು ಈಗ ಒಬ್ಬ ಸಾಮಾನ್ಯ ವ್ಯಕ್ತಿಗೆ ಎಟುಕಲಾರವು. ಏಕೆಂದರೆ ಅದಕ್ಕೆ ಹೆಚ್ಚಿನ ಬಂಡವಾಳ ಬೇಕೆಬೇಕು. ಬಂಡವಾಳದ ಹೂಡಿಕೆ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಕಾನೂನುಗಳ ಸೂಕ್ಷ್ಮ ಪರಿಚಯ ಪ್ರತಿಯೊಬ್ಬ ಪ್ರಜೆಗೂ ಅತ್ಯಗತ್ಯ. ಇದೂ ಅಲ್ಲದೆ ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಪ್ರತಿಯೊಂದು ಕಾನೂನನ್ನು ತಿಳಿದೇ ಇರಬೇಕೆಂಬ ನಿಲುವು ಕಾನೂನಿನ ಮೊದಲನೆಯ ನಿಯಮ (Ignorance of Law is no execuse). ಇದರಿಂದಾಗಿ ಸಾಮಾನ್ಯವಾಗಿ ಇಬ್ಬರು ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳುವಾಗ ಅನ್ವಯಿಕವಾಗುವ ೧೮೭೨ ನೇ ಇಸವಿಯ ಭಾರತದ ಕರಾರಿನ ಅಧಿನಿಯಮದಿಂದ ನಮ್ಮ ಪರಿಚಯವನ್ನು ಪ್ರಾರಂಭಿಸಬೇಕು. ಈ ಮಸೂದೆಯಾದ ಅರ್ಧ ಶತಮಾನದ ಮೇಲೆ ಇದರಲ್ಲಿದ್ದ ಪಾಲುಗಾರಿಕೆಗೆ ಸಂಬಂಧಪಟ್ಟ ಅಂಶಗಳನ್ನು ವಿಶ್ರುತ (ವಿಸ್ತಾರ)ಗೊಳಿಸಿ, ಪ್ರತ್ಯೇಕವಾಗಿ ಭಾರತದ ಪಾಲುಗಾರಿಕೆ ಮಸೂದೆಯನ್ನು ತರಲಾಯಿತು.

****

ಭಾಗ - ೬

ಉತ್ತರಾಧಿಕಾರ ಹಾಗೂ ವಾರಸುತನದ ಸಾಮಾನ್ಯ ತತ್ವಗಳು

(General Principles of Succession and Inheritance)

ಸಾಮಾನ್ಯವಾಗಿ ಸ್ಥಿರ ಸ್ವತ್ತುಗಳು ಮತ್ತು ಚರ ಆಸ್ತಿಗಳಾದ ಷೇರುಪತ್ರಗಳು ಮುಂತಾದವುಗಳನ್ನು ಹೊಂದಿರುವ ವ್ಯಕ್ತಿಯು ಮರಣ ಹೊಂದಿದರೆ, ಅಂತಹಾ ಆಸ್ತಿಗಳನ್ನು ಉತ್ತರಾಧಿಕಾರಿಗಳಿಗೆ ವಿಲೇವಾರಿ ಮಾಡಬೇಕಾದ ಸಂದರ್ಭದಲ್ಲಿ ಹಲವಾರು ತೊಂದರೆಗಳು ಉದ್ಭವಿಸುತ್ತವೆ. ಉತ್ತರಾಧಿಕಾರಿ ಯಾರು ? ಈ ಪ್ರಶ್ನೆಯು ಭಾರತದಂತಹಾ ದೇಶದಲ್ಲಿ ಬಹಳ ಸಮಸ್ಯೆಯನ್ನುಂಟುಮಾಡುತ್ತದೆ. ಏಕೆಂದರೆ ಭಾರತದಲ್ಲಿ ಅನೇಕ ರೀತಿಯ ಜಾತಿಮತಗಳಿವೆ. ಪ್ರತಿಯೊಬ್ಬರೂ ಬೇರೆ ಬೇರೆ ಕಾಯಿದೆಗಳನ್ನು ಅನುಸರಿಸುತ್ತಾರೆ. ಹಿಂದೂ ಕಾನೂನು ಮತ್ತು ಮುಸಲ್ಮಾನರ ಕಾನೂನುಗಳಲ್ಲಿ ಅವರದೇ ಆದ ಮೊದಲನೇ ದರ್ಜೆ ಅಥವಾ ಮೊದಲನೇ ವರ್ಗದ ವಾರಸುದಾರರನ್ನು ನೇಮಿಸಲಾಗಿದೆ. ಆದರೆ ಭಾರತದ ಉತ್ತರಾಧಿಕಾರದ ಕಾಯಿದೆಯಿಂದ ಆಳಲ್ಪಡುವ ಯುರೋಪಿಯನ್ನರು, ಭಾರತದ ಕ್ರೈಸ್ತರು, ಆಂಗ್ಲೋ ಇಂಡಿಯನ್ಸ್, ಸಿರಿಯಾದ ಕ್ರೈಸ್ತರು ಮತ್ತು ಪಾರ್ಸಿಗಳು ಇವರಿಗೆ ಬೇರೆ ತತ್ವಗಳೇ ಅನ್ವಯವಾಗುತ್ತವೆ. ಬ್ಯಾಂಕಿನ ಠೇವಣಿ, ಕಂಪನಿಯ ಷೇರು ಇಂತಹವುಗಳ ವರ್ಗಾವಣೆಯಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಸ್ಥಿರ ಸ್ವತ್ತುಗಳ ವಿಷಯದಲ್ಲೂ ಸಹ ವಾರಸತ್ವದ ವಿಷಯವನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಸ್ಥಿರ ಸ್ವತ್ತುಗಳ ವಿಷಯದಲ್ಲಿ ವ್ಯಕ್ತಿಯು ಮರಣ ಹೊಂದಿದ ತಕ್ಷಣ ಅವನ ಸ್ವತ್ತುಗಳು ವಾರಸುದಾರರಿಗೆ ತಾನೇ ತಾನಾಗಿ ವರ್ಗಾಯಿಸಲ್ಪಡುತ್ತವೆ ಮತ್ತು ಅದಕ್ಕೆ ವಾರಸುದಾರರೇ ಒಡೆಯರಾಗುತ್ತಾರೆ. ಈ ವಾರಸುದಾರರು ಯಾರು ? ಎಂಬುದನ್ನು ಮೃತ ವ್ಯಕ್ತಿಯು ಅನುಸರಿಸುತ್ತಿದ್ದ ಕಾನೂನು ತಿಳಿಯಪಡಿಸುತ್ತದೆ. ಒಂದು ಉದಾಹರಣೆ ಎಂದರೆ, ಒಬ್ಬ ಹಿಂದೂ ಪುರುಷನು ಮರಣ ಹೊಂದಿದರೆ ಆಗ ಅವನ ತಾಯಿಯು ಮೊದಲನೇ ವರ್ಗದ ವಾರಸುದಾರಳಾಗುತ್ತಾಳೆ (Class I heir). ಹಿಂದೂ ಉತ್ತರಾಧಿಕಾರದ ಕಾಯಿದೆಯ ಪ್ರಕಾರ ತಂದೆಯನ್ನು ಬಿಡಲಾಗಿದೆ. ಆದರೆ ಮುಸ್ಲಿಂ ಕಾನೂನಿನಲ್ಲಿ ತಂದೆ ಮತ್ತು ತಾಯಿ ಇಬ್ಬರೂ ಉತ್ತರಾಧಿಕಾರಿಗಳಾಗಬಹುದು. ಭಾರತದ ಉತ್ತರಾಧಿಕಾರದ ಕಾಯಿದೆಯ ಕೆಳಗೆ ಆಳಲ್ಪಡುವ ವ್ಯಕ್ತಿಗಳಿಗೆ ಉದಾ : ಕ್ರಿಶ್ಚಿಯನ್

ಮೃತನ ತಂದೆಯು ವಾರಸುದಾರನಾಗಬಹುದು. ಆದರೆ ಮೃತನಿಗೆ ತಂದೆಯ ಮೂಲಕ ಯಾವುದೇ ವಂಶಜರಿರಬಾರದು. ಆದರೆ ಮೃತನ ತಾಯಿಯನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ.

ಸಾಮಾನ್ಯವಾಗಿ ಹಿಂದೂ ಕಾನೂನಿನ ಪ್ರಕಾರ, ಸ್ವತ್ತುಗಳನ್ನು ವಾರಸುದಾರರಿಗೆ ಸಮವಾಗಿ ಹಂಚಲಾಗುತ್ತದೆ. ಆದರೆ ಮುಸ್ಲಿಂ ಕಾನೂನಿನಲ್ಲಿ ಭಾಗಗಳನ್ನು ನಿಗದಿಪಡಿಸಲಾಗಿದ್ದು, ಅವು ಅಸಮವಾಗಿವೆ.

ಸಾಂಪ್ರದಾಯಿಕ ಹಿಂದೂ ಕಾನೂನಿನಲ್ಲಿ ಒಬ್ಬ ವಿಧವೆಗೆ ಬರೀ ಆಜೀವ ಹಿತಾಸಕ್ತಿಯನ್ನು ಕೊಡಲಾಗುತ್ತಿತ್ತು. ಈಗ ಅವಳಿಗೆ ಪೂರ್ತಿ ಸಂಪದವನ್ನು ಕೊಡಲಾಗುತ್ತದೆ. ಈ ಸಂಪದವನ್ನು ವಿಲೇವಾರಿ ಮಾಡಲು ಅವಳಿಗೆ ಪೂರ್ತಿ ಹಕ್ಕು ಇರುತ್ತದೆ ಮತ್ತು ಆ ವಿಧವೆಯು ತನ್ನ ಮಕ್ಕಳ ಜೊತೆ ಸಮಭಾಗವನ್ನು ಹೊಂದಬಹುದು. ಭಾರತದ ಉತ್ತರಾಧಿಕಾರ ಅಧಿನಿಯಮದ ಪ್ರಕಾರ, ಒಬ್ಬ ಗಂಡ ಹೆಂಡತಿ ಪಿತೃವಂಶೀಯರಿದ್ದರೆ ಬರೀ ಮೂರನೇ ಒಂದು ಭಾಗ ಸಂಪದವನ್ನು ಮಾತ್ರ ಪಡೆಯುತ್ತಾರೆ. ಆದರೆ ಪಿತೃವಂಶೀಯರಿಲ್ಲದಿದ್ದರೆ ಆ ಭಾಗವು ಅರ್ಧವಾಗುತ್ತದೆ. ಅರ್ಧಕ್ಕಿಂತ ಹೆಚ್ಚು ಕೊಡಲಾಗುವುದೇ ಇಲ್ಲ. ಮುಸಲ್ಮಾನರ ಕಾನೂನಿನಲ್ಲಿ ಪತಿಯ ಭಾಗವು ಅರ್ಧವಾಗಿದ್ದು, ಅವರಿಗೆ ಮಕ್ಕಳಿದ್ದರೆ ಅದು ೧/೪ ಭಾಗವಾಗುತ್ತದೆ. ಪತ್ನಿಯ ಭಾಗವು ಮೇಲೆ ಹೇಳಿದ್ದರಲ್ಲಿ ೧/೨ ಅಂದರೆ ೧/೪ ಅಥವಾ ೧/೮ ನೇ ಭಾಗ. ಹಿಂದಿನ ತಲೆಮಾರಿನ ಕಾನೂನಿನ ಧೋರಣೆಯನ್ನು ನಾವು ಇಲ್ಲಿ ಗಮನಿಸಬೇಕು. ಆ ಕಾನೂನು ಹೆಂಡತಿಯು ಬರೀ ಗಳಿಸಿದ ಸಂಬಂಧ ಎಂದು ತಿಳಿಸುತ್ತದೆ.

ಉತ್ತರಾಧಿಕಾರದ ಸಂಬಂಧದಲ್ಲಿ ಮಗುವಿನ ಔರಸತ್ವ ಮತ್ತು ವಿವಾಹದ ಮಾನ್ಯತೆಯ ವಿಷಯವು ಅತೀ ಮುಖ್ಯವಾದದ್ದು. ಇಂಗ್ಲೆಂಡಿನ ಫ್ಯಾಮಿಲಿ ಲಾ ಕಾಯಿದೆ ೧೯೬೯ ಪ್ರಕಾರ, ಅನೌರಸ ಮಕ್ಕಳೂ ಔರಸ ಪುತ್ರರಂತೆಯೇ ಉತ್ತರಾಧಿಕಾರಿಯಾಗಬಹುದು. ಆಂಗ್ಲದೇಶದಲ್ಲಿ ಅನೌರಸ ಮಗುವಿಗೆ ತಂದೆ ತಾಯಿಗಳೂ ಸಹ ಅಂತಹಾ ಮಗುವಿನ ಉತ್ತರಾಧಿಕಾರಿಗಳಾಗಬಹುದು. ಆದರೆ ಬಹಳಷ್ಟು ರಾಷ್ಟ್ರಗಳು ಈ ಕಾನೂನಿಗೆ ಮನ್ನಣೆ ಕೊಟ್ಟಿಲ್ಲ. ಆದರೆ, ಭಾರತದಂತಹ ದೇಶದಲ್ಲಿ ವಿವಾಹವು ಬಹಳ ಪಾವಿತ್ರ್ಯತೆಯನ್ನು ಹೊಂದಿದೆ ಮತ್ತು ವಿವಾಹಕ್ಕೆ ಮುಖ್ಯವಾದ ಸ್ಥಾನವನ್ನು ಕೊಡಲಾಗಿರುವುದರಿಂದ ಈ ತರಹದ ಕಾಯಿದೆಗೆ ಮನ್ನಣೆ ಕೊಟ್ಟಿಲ್ಲ.

ಉತ್ತರಾಧಿಕಾರದ ಕಾನೂನುಗಳು ಬೇರೆ ಬೇರೆ ಕಾನೂನಿನಲ್ಲಿ ಬರುವ ವ್ಯಕ್ತಿಗಳಿಗೆ ಬೇರೆ ಬೇರೆ ತರಹ ಇದೆ. ಸಾಮಾನ್ಯವಾಗಿ ಉತ್ತರವರ್ತನೆಯು ಸ್ವಯಾರ್ಜಿತ ಆಸ್ತಿಗಳಿಗೆ ಅನ್ವಯಿಸುವುದಿಲ್ಲ. ಸ್ವಯಾರ್ಜಿತ ಸ್ವತ್ತುಗಳ ವಿಷಯ ದಲ್ಲಿ ಸಾಮಾನ್ಯವಾಗಿ ವ್ಯಕ್ತಿಗಳು

ಉಯಿಲನ್ನು ಮಾಡಲು ಇಚ್ಛಿಸುತ್ತಾರೆ. ಉಯಿಲನ್ನು ನೋಂದಾಯಿಸುವ ಅಗತ್ಯ ಇರುವುದಿಲ್ಲ. ಉಯಿಲು ಪತ್ರದ ಮೇಲೆ ಸ್ಟಾಂಪು ಸುಂಕವೂ ಇಲ್ಲ. ನೋಂದಣಿಯು ಅವರವರ ಇಷ್ಟ. ಅದನ್ನು ಗುಪ್ತವಾಗಿಡ ಬೇಕಾದರೆ ಭಾರತದ ನೋಂದಣಿ ಕಾಯಿದೆಯ ಪ್ರಕಾರ ಉಯಿಲನ್ನು ಒಂದು ಲಕೋಟೆಯಲ್ಲಿಟ್ಟು, ಅಂಟಿಸಿ ಅದನ್ನು ನೋಂದಣಿ ಅಧಿಕಾರಿಗಳಿಗೆ ಕೊಡಬೇಕು. ಇದಕ್ಕೆ ನಾಮಕಾವಾಸ್ತೆ ಸ್ವಲ್ಪ ಹಣವನ್ನು ಕೊಟ್ಟಾಗ ಇದು ನೋಂದಾಯಿಸಿದಂತೆಯೇ ಆಗುತ್ತದೆ. ಭಾರತದ ಉತ್ತರಾಧಿಕಾರ ಕಾಯಿದೆಯ ಪ್ರಕಾರ, ಒಬ್ಬ ವ್ಯಕ್ತಿಯು ಸೋದರಳಿಯ ಅಥವಾ ಇನ್ನೂ ಹತ್ತಿರದ ಸಂಬಂಧಿ ಗಳಿದ್ದರೂ ಸಹ ಅವನು ಆಸ್ತಿಯನ್ನು ಧರ್ಮಕ್ಕೆ ಕೊಡಲು ಇಚ್ಛಿಸಿದರೆ, ಇದನ್ನು ಕಾನೂನು ಸಮ್ಮತಿಸು ವುದಿಲ್ಲ. ಮುಸಲ್ಮಾನರು ತಮ್ಮ ಆಸ್ತಿಯ ಮೂರನೇ ಒಂದು ಭಾಗ ಮಾತ್ರ ಬಾಯಿ ಮಾತಿನ ಉಯಿಲನ್ನು ಮಾಡಬಹುದು. ಇವರನ್ನು ಬಿಟ್ಟು ಬೇರೆಲ್ಲರೂ ಉಯಿಲನ್ನು ಮಾಡಲು ಭಾರತದ ಉತ್ತರಾಧಿಕಾರ ಕಾಯಿದೆಯ ಉಪಬಂಧಗಳನ್ನು ಪಾಲಿಸಬೇಕು.

ಉತ್ತರಾಧಿಕಾರ ಪ್ರಮಾಣ ಪತ್ರ

(Succession Certificate)

ಸ್ಥಿರ ಸ್ವತ್ತುಗಳು ಮೃತನ ವಾರಸುದಾರರಿಗೆ ಅವನು ಮರಣ ಹೊಂದಿದ ಕ್ಷಣದಿಂದ ಸೇರುತ್ತದೆ. ಆದ್ದರಿಂದ ಚರ ವಸ್ತುಗಳಿಗೆ ಉತ್ತರಾಧಿಕಾರ ಪತ್ರವನ್ನು ಭಾರತದ ಉತ್ತರಾಧಿಕಾರ ಅಧಿನಿಯಮದ ವರ್ಗ ೩೭೦ ರಿಂದ ೩೯೮ ರ ಉಪಬಂಧಗಳಿಗೆ ಅನುಸಾರವಾಗಿ ಕೊಡಲಾಗುತ್ತದೆ.

ಉತ್ತರಾಧಿಕಾರ ಪತ್ರವನ್ನು ಸಾಲಗಳು ಅಥವಾ ಹಣಕಾಸಿಗೆ ಸಂಬಂಧಪಟ್ಟ ಸಂದರ್ಭಗಳಲ್ಲಿ ಮಾತ್ರ ಕೊಡಲಾಗುತ್ತದೆ. ಈ ಪತ್ರವನ್ನು ಸಾಲವನ್ನು ವಸೂಲಾತಿ ಮಾಡಲು ಅನುಕೂಲ ಮಾಡುವುದಕ್ಕೆ ಮತ್ತು ಸಾಲಗಾರರಿಗೆ ರಕ್ಷಣೆ ಕೊಡುವುದಕ್ಕೆ ನೀಡಲಾಗುತ್ತದೆ. ವ್ಯವಹಾರಗಳು ಸಂಕ್ಷಿಪ್ತವಾಗಿರುತ್ತವೆ ಮತ್ತು ಸ್ವಾಮ್ಯದ ಪ್ರಶ್ನೆಯನ್ನು ಅಂತಿಮವಾಗಿ ನಿರ್ಧರಿಸಲಾಗುವುದಿಲ್ಲ. ಆದ್ದರಿಂದ ಈ ತೀರ್ಪುಗಳು ಸರ್ವಬಂಧಕವಾಗಿದ್ದು ಅವನ್ನು ಸಂಪೂರ್ಣವಾಗಿ (ಸಾರ್ವತ್ರಿಕವಾಗಿ) ಮನ್ನಿಸಿ ಗೌರವಿಸಲಾಗಿದೆ. ಈ ವ್ಯವಹರಣೆಗಳನ್ನು ವರದಿ ಮಾಡಿ, ಸರ್ಕಾರೀ ರಾಜ್ಯ ಪತ್ರದಲ್ಲಿ ಮುದ್ರಿಸಲಾಗುತ್ತದೆ. ನ್ಯಾಯಾಲಯಕ್ಕೆ ಕೆಲವು ಸಂಗತಿಗಳು ಅಥವಾ ಕಾನೂನಿನ ಪ್ರಶ್ನೆಗಳು ತೊಡಕಾಗಿ ಕಂಡುಬಂದರೆ, ಆಗ ಅದು ವರ್ಗ ೩೭೩ ರ ಪ್ರಕಾರ ಯಾರು ಮೇಲ್ನೋಟಕ್ಕೆ ಸರಿಯಾದ ಸ್ವಾಮ್ಯ ಹೊಂದಿರುವರೆಂದು ಅನ್ನಿಸುತ್ತದೆಯೋ ಅಂತಹವರಿಗೆ ಪ್ರಮಾಣ ಪತ್ರವನ್ನು ಕೊಡಲು ಅವಕಾಶವಿದೆ.

ಸಾಲವನ್ನು ಅಡಮಾನ ಮಾಡಿಕೊಂಡೂ ಪಡೆದಿರಬಹುದು. ಆಗ ಸತ್ತವನಿಗೆ ಆ ಸ್ವತ್ತಿನ ಮೇಲೆ ವಿಶೇಷ ಹಕ್ಕುಗಳು ಇರುತ್ತವೆ. ಆದುದರಿಂದ ಉತ್ತರಾಧಿಕಾರ ಪತ್ರದ ಅವಶ್ಯಕತೆ ಇರುವುದಿಲ್ಲ. ಅಂತೆಯೇ ಸಾಲವು ಹಿಂದೂ ಅವಿಭಾಜ್ಯ ಕುಟುಂಬದ ಸದಸ್ಯನಿಗೆ ಬರಬೇಕಾಗಿದ್ದರೆ ಆಗ ಮರಣ ಹೊಂದಿದವನಿಗೆ ಇದ್ದ ಹಕ್ಕು ಉತ್ತರಾಧಿಕಾರಿಗಳಿಗೆ (ಉತ್ತರಜೀವಿತಾಧಿಕಾರಿಗಳಿಗೆ) ಬರುತ್ತದೆ.

ಮರಣ ಶಾಸನ ಪತ್ರ ಮತ್ತು ಪ್ರೊಬೇಟ್

ಅನೇಕ ದೇಶಗಳ ಕಾನೂನುಗಳು ಉತ್ತರಾಧಿಕಾರ ಕಾನೂನನ್ನು ಅನುಸರಿಸುತ್ತಿದ್ದು ಅದು ವಾರಸುದಾರರನ್ನು ಮತ್ತು ಅವರಿಗೆ ಬರುವ ಭಾಗವನ್ನು ಸೂಚಿಸುತ್ತದೆ. ಬಹಳ ಆಸ್ತಿಯನ್ನು ಹೊಂದಿರುವ ಮನುಷ್ಯನು ತನಗಿರುವ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ದಾನ, ಧರ್ಮ, ಸ್ನೇಹಿತರಿಗೆ ಅಥವಾ ತನಗೆ ಸಂಬಂಧವಿಲ್ಲದ ಬೇರೆ ವ್ಯಕ್ತಿಗಳಿಗೆ ಕೊಡಲು ಇಚ್ಛಿಸಬಹುದು. ಅಂತಹ ಆಸ್ತಿಯನ್ನು ಅವನು ದಾನ ಮಾಡಲು ಇಚ್ಛಿಸಿದರೆ ಅದನ್ನು ಉಯಿಲಿನ ಮುಖಾಂತರವೇ ಮಾಡಬೇಕು. ಈ ಉಯಿಲು ಎಂಬ ಶಬ್ದವು ನಮ್ಮ ದೇಶದಲ್ಲಿ ಆದಿಯಿಂದ ಇರಲಿಲ್ಲ. ಹಿಂದೂ ಕಾನೂನಿನಲ್ಲಿ ಒಬ್ಬ ವ್ಯಕ್ತಿಯು ತನ್ನ ಜನನದಿಂದಲೇ ತನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕುಳ್ಳವನಾಗಿರುತ್ತಾನೆ. ಹಿಂದೂ ಕಾನೂನಿನ ಮುಖ್ಯ ವಿಶೇಷವೆಂದರೆ ವ್ಯಕ್ತಿಯು ಜನನದಿಂದ ಪಿತ್ರಾರ್ಜಿತ ಆಸ್ತಿಯ ಭಾಗಕ್ಕೆ ಹಕ್ಕನ್ನು ಹೊಂದಿರುತ್ತಾನೆ. ಈ ಕಾರಣದಿದಲೇ ಹಿಂದೂಗಳು ಹಿಂದೂ ಉತ್ತರಾಧಿಕಾರ ಅಧಿನಿಯಮ ೧೯೫೬ ಜಾರಿಗೆ ಬರುವತನಕ ತಮ್ಮ ಪಾಲಿನ ಪಿತ್ರಾರ್ಜಿತ ಆಸ್ತಿಯನ್ನು ಉಯಿಲು ಮಾಡುವ ಅರ್ಹತೆ ಪಡೆದಿರಲಿಲ್ಲ. ಹಿಂದೂ ಪುರುಷನು ಹೊಂದಿರುವ ಪಿತ್ರಾರ್ಜಿತ ಸ್ವತ್ತು ಅವನ ಮರಣದ ನಂತರ ಅವನ ವಿಧವೆ, ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ (ವಿವಾಹವಾಗಿರಲೀ ಇಲ್ಲದೇ ಇರಲೀ) ಸಮವಾಗಿ ಸೇರುತ್ತದೆ. ಸತ್ತ ವ್ಯಕ್ತಿಯ ತಾಯಿಗೂ ಒಂದು ಭಾಗವನ್ನು ಕೊಡಲಾಗುವುದು. ಈಗ ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಸ್ವತ್ತಿನಲ್ಲಿ ಒಂದು ಭಾಗ ಕೊಡಬೇಕೆಂಬ ವಿಚಾರ ಸ್ಪಷ್ಟವಾಗುತ್ತಿದೆ. ಅಂದರೆ ಹೆಣ್ಣುಮಕ್ಕಳನ್ನೂ ಸಹ ಸಹಭಾಗಿ ಎಂದು (Co-Pancener) ಪರಿಗಣಿಸಬೇಕು. ಅವರು ಹುಟ್ಟಿದಂದಿನಿಂದಲೇ ಪಿತ್ರಾರ್ಜಿತ ಸ್ವತ್ತಿನ ಹಕ್ಕನ್ನು ಪಡೆಯಬೇಕು, ಏಕೆಂದರೆ ಹೆಣ್ಣುಮಕ್ಕಳೂ ಸಹ ತಮ್ಮ ಮೃತ ತಂದೆಯ ಆಸ್ತಿಯಲ್ಲಿ ಸಮಪಾಲನ್ನು ಹೊಂದಲು ಹಕ್ಕುಳ್ಳವರಾಗಿರುತ್ತಾರೆ ಎಂಬ ಕಲ್ಪನೆ ಈಗೀಗ ಬಲವಾಗುತ್ತಿದೆ.

ಇತ್ತೀಚೆಗೆ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಿಗಿರುವಂತೆಯೇ ಪೂರ್ಣ ಹಕ್ಕನ್ನು ಕೊಡಲಾಗಿದೆ.

ಆದರೆ, ಹೆಣ್ಣು ಮಕ್ಕಳಿಗೆ ಈ ಹಕ್ಕು ಪಡೆಯಲು ಈ ಕಾಯಿದೆ ಜಾರಿಗೆ ಬಂದ ಸಮಯದಲ್ಲಿ ಮದುವೆ ಆಗಿರಬಾರದು. ಅಂದರೆ ೧೯೯೪ ಕ್ಕೆ ಮುಂಚೆ ಮದುವೆಯಾಗಿರುವ ಹೆಣ್ಣು ಮಕ್ಕಳಿಗೆ ಈ ಕಾಯಿದೆ ಅನ್ವಯಿಸುವುದಿಲ್ಲ.

ಕಾನೂನು ಸಾಮಾನ್ಯವಾಗಿ ಉಯಿಲನ್ನು ಮಾಡಲು ಗಣನೀಯ ವಯಸ್ಸಿನವರನ್ನೇ ಮನಸ್ಸಿನಲ್ಲಿಟ್ಟುಕೊಂಡಿದೆ. ಇಂತಹಾ ಉಯಿಲನ ಜಾರಿಗೊಳಿಸುವಿಕೆ ಯನ್ನು ಬಹಳ ಸರಳವಾಗಿ ಮಾಡಲಾಗಿದೆ. ಇದನ್ನು ಒಂದು ಖಾಲಿ ಕಾಗದದ ಮೇಲೆ ಯಾವುದೇ ಸ್ಟಾಂಪು ಸುಂಕವಿಲ್ಲದೇ ಮಾಡಬಹುದು. ನೋಂದಣಿಯ ಅವಶ್ಯಕತೆಯೂ ಇಲ್ಲ. ತನ್ನ ಉಯಿಲನ್ನು ನೋಂದಾಯಿಸುವ ಇಚ್ಛೆ ಇರುವವರು ಉಯಿಲನ್ನು ನೋಂದಾಯಿಸಿಕೊಳ್ಳಬಹುದು.

ಉಯಿಲು ಕಾನೂನು ಸಮ್ಮತವಾಗಬೇಕಾದರೆ ಅದನ್ನು ಸರಿಯಾದ ರೀತಿಯಲ್ಲಿ ಅಂದರೆ ಕಾನೂನಿಗನುಣವಾದ ರೀತಿಯಲ್ಲಿ ಮಾಡಿರಬೇಕು (Indian Succession Act 1925). ಅಂದರೆ ಭಾರತದ ಉತ್ತರಾಧಿಕಾರ ಅಧಿನಿಯಮ ೧೯೨೫ ನೇ ವರ್ಗ ೬೩ ರಂತೆ ಉಯಿಲನ್ನು ಕನಿಷ್ಠ ಇಬ್ಬರಿಂದಲಾದರೂ ಸಾಕ್ಷಿ ಸಹಿ ಮಾಡಿಸಿರಬೇಕು. ಸಾಕ್ಷಿಗಳಿಗೆ ಉಯಿಲಿನ ಸಾರಾಂಶವು ತಿಳಿದಿರಬೇಕಾಗಿಲ್ಲ ಮತ್ತು ಉಯಿಲನ್ನು ಜಾರಿಗೊಳಿಸುವಿಕೆಯ ಸಮಯದಲ್ಲಿ ಅವರು ಇರಬೇಕಾಗಿಲ್ಲ. ಆದರೆ, ಇಬ್ಬರೂ ಸಾಕ್ಷಿಗಳೂ ಸಹ ಉಯಿಲನ್ನು ಮಾಡುವವನ ಸಹಿಯನ್ನು ವೀಕ್ಷಿಸಿರಬೇಕು. ಸಾಕ್ಷಿಗಳು ಉಯಿಲನ್ನು ಮಾನ್ಯ ಮಾಡಲು ಸಹಿ ಹಾಕಿದಾಗ ಆ ಸಹಿಯನ್ನು ಮರಣಶಾಸನ ಕರ್ತನ ಸಮ್ಮುಖದಲ್ಲೇ ಮಾಡಬೇಕು. ಸಾಕ್ಷಿಗಳು ಇಬ್ಬರೂ ಒಟ್ಟಿಗೆ ಇರಬೇಕೆಂಬ ನಿಬಂಧನೆ ಇಲ್ಲ. ಸಾಕ್ಷಿಯು ಸಹಿ ಮಾಡಲು ಯಾವುದೇ ರೀತಿಯ ನಿರ್ದಿಷ್ಟ ನಮೂನೆಯೂ ಇಲ್ಲ.

ಕಾನೂನು ಹೇಳಿದ ರೀತಿಯಲ್ಲಿ ಸಾಕ್ಷಿಗಳಿಲ್ಲದೇ ಅಪೂರ್ಣ ಉಯಿಲನ್ನು ನೋಂದಾಯಿಸಿದರೆ ಆ ಉಯಿಲು ಕಾನೂನು ಸಮ್ಮತವಾಗುವುದಿಲ್ಲ. ರಾಣಿ ಪೂರ್ಣಿಮ ವಿರುದ್ಧ ಕುಮಾರ ಖಗೇಂದ್ರ (Rani Poornima Vs Kumar Khagendra AIR (1962) SC 567) ಇದರಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ಈ ರೀತಿ ನಿರ್ಧರಿಸಿತು : ಮರಣಶಾಸನ ಕರ್ತನಿಗೆ ಆತನ ಮರಣ ಶಾಸನದಲ್ಲಿ ಏನಿದೆ, ಏತಕ್ಕೆ ನೋಂದಣಿ ಮಾಡಿಸುತ್ತಿದ್ದೇನೆ ಎಂಬುದು ತಿಳಿಯದೇ ನೋಂದಣಿ ಆಗಿರಬಹುದು. ಒಬ್ಬನೇ ಉಯಿಲಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದರೆ ಅದು ಒಂದು ಕೊರತೆಯೇ ಸರಿ. ಆದರೂ ಇಂತಹ ಉಯಿಲು ನೋಂದಣಿ ಆಗಿರುವ ಸಂದರ್ಭಗಳಿವೆ. ನ್ಯಾಯಲಯವು ನೋಂದಣಿ ಅಧಿಕಾರಿಯು ಮರಣ ಶಾಸನಕರ್ತನಿಂದ ಉಯಿಲಿನ ಜಾರಿಗೊಳಿಸುವಿಕೆಯನ್ನು ನಿಶ್ಚಯಪಡಿಸಿ ಕೊಂಡರೂ ಸಹ ಅವನು

ಉಯಿಲಿಗೆ ಸಾಕ್ಷಿಯಾಗಲು ಸಾಧ್ಯವಿಲ್ಲ. ಅವನು ತನ್ನ ಶಾಸನಾತ್ಮಕ ಕಾರ್ಯದಲ್ಲಿ ಮಾತ್ರ ಮಾಡುತ್ತಿರುತ್ತಾನೆ. (Abdul Jabbar Vs. Venkataswamy AIR (1969) SC 1147. Dharam Singh Vs. ASO (1990) SUPP SCC 684)

ಕರಾರು ಮಾಡಿಕೊಳ್ಳಲು ಸಾಮರ್ಥ್ಯವಿರುವ ಪ್ರಾಪ್ತವಯಸ್ಕನು, ಮಾನಸಿಕ ವಾಗಿ ಆರೋಗ್ಯವಾಗಿದ್ದು ಬುದ್ಧಿ ಸ್ಥಿಮಿತದಲ್ಲಿರುವಂಥವನು ಮಾತ್ರ ಉಯಿಲನ್ನು ಮಾಡುಬಹುದು ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಏಕೆಂದರೆ ಉಯಿಲನ್ನು ಮಾಡುವ ಕ್ರಮವು ಅರಿವು ಮತ್ತು ಬುದ್ಧಿವಂತಿಕೆಯನ್ನು ಒಳಗೊಂಡಿದೆ. ಕುರುಡರು, ಕಿವುಡರು ಮತ್ತು ಮೂಕರೂ ಸಹ ತಾವು ಉಯಿಲನ್ನು ಮಾಡುತ್ತಿದ್ದೇವೆಂಬುದನ್ನು ತಿಳಿದುಕೊಳ್ಳುವ ಸಾಮರ್ಥ್ಯವಿದ್ದರೆ, ಮಾನ್ಯತೆ ಪಡೆದ ಉಯಿಲನ್ನು ಮಾಡಬಹುದು. ಮುಸಲ್ಮಾನರು ತಮ್ಮದೇ ಆದ ಕಾನೂನನ್ನು ಹೊಂದಿದ್ದಾರೆ. ಇವರ ಉಯಿಲು ಬರೀ ಬಾಯಿಮಾತಿನದಾಗಿರಬಹುದು ಮತ್ತು ಅದನ್ನು ಅವರೇ ಹಿಂತೆಗೆದುಕೊಳ್ಳಬಹುದು. ಉಯಿಲಿನ ಮುಖ್ಯ ವಿಶೇಷಗಳೇನೆಂದರೆ ಉಯಿಲು ಮರಣಶಾಸನಕರ್ತನ ಮರಣದ ನಂತರ ಪರಿಣಾಮಕಾರಿಯಾಗುತ್ತದೆ. ಮರಣಶಾಸನಕರ್ತನು ಬಹಳಷ್ಟು ಉಯಿಲುಗಳನ್ನು ಮಾಡಿ ಅದನ್ನು ನಾಶಮಾಡಿರಬಹುದು. ಆದರೆ ಅವನ ಮರಣಕ್ಕೆ ಮುಂಚೆ ಮಾಡಿದ ಕೊನೆಯ ಉಯಿಲು ಮಾತ್ರ ಪರಿಣಾಮಕಾರಿಯಾಗಿರುತ್ತದೆ. ಮರಣಶಾಸನಕರ್ತನು ಉಯಿಲನ್ನು ಮಾಡಿದ ಮೇಲೆ ಉಯಿಲಿಗೆ ಇನ್ನೂ ಕೆಲವು ವಿಷಯಗಳನ್ನು ಸೇರಿಸಲು ಅಥವಾ ಅಳಿಸಿಹಾಕಲು ಇಚ್ಛಿಸಬಹುದು. ಅದನ್ನು **ಮರಣಶಾಸನದ ಅನುಬಂಧ** (Codicil) ಎಂಬ ಇನ್ನೊಂದು ಪತ್ರವನ್ನು ಬರೆಯುವುದರ ಮೂಲಕ ಜಾರಿಗೊಳಿಸಬಹುದು. ಇದು ಮರಣಶಾಸನ ಪತ್ರದಷ್ಟೇ ಪರಿಣಾಮ ಕಾರಿಯಾಗಿ ಇರುತ್ತದೆ; ಮತ್ತು ಅದೇ ರೀತಿ ಸಾಕ್ಷಿ, ಸಹಿ ನಿಬಂಧನೆಗಳಿಗೆ ಒಳಪಟ್ಟಿದೆ.

ಮರಣಶಾಸನ ದೃಢೀಕರಣ ಪತ್ರ ಮತ್ತು ಆಡಳಿತ ಪತ್ರಗಳು
(Probate and letters of Adiministration)

ಮರಣಶಾಸನ ದೃಢೀಕರಣ ಪತ್ರ ಮತ್ತು ಆಡಳಿತ ಪತ್ರಗಳಿಗೂ ಮತ್ತು ಉಯಿಲಿಗೂ ಬಹಳ ನಿಕಟವಾದ ಸಂಬಂಧವಿದೆ. ನ್ಯಾಯಲಯದ ಮುಂದೆ ಒಂದು ನಿರ್ದಿಷ್ಟ ಉಯಿಲನ್ನು ಮರಣ ಹೊಂದಿರುವ ವ್ಯಕ್ತಿಯೇ ಮಾಡಿರುವುದಾಗಿ ರುಜುವಾತು ಪಡಿಸಿದಾಗ, ನ್ಯಾಯಲಯವು ಪ್ರೋಬೇಟನ್ನು ಒಂದು ಪ್ರಮಾಣಿಸಿದ ಪತ್ರದ ರೂಪದಲ್ಲಿ ಕೊಡುತ್ತದೆ. ಇಂತಹ ಪ್ರಮಾಣ ಪತ್ರದ ಪರಿಣಾಮವೇನೆಂದರೆ, ಇದು ಮಾನ್ಯತೆ ಪಡೆದ ಮರಣಶಾಸನ ಪತ್ರದ ನಿರ್ಣಾಯಕ ರುಜುವಾತು (Conclusive Proof) ಆಗಿರುತ್ತದೆ. ಇದು ಮರಣಶಾಸನದ ಪತ್ರದಲ್ಲಿ ನೇಮಿಸಿರುವ

ಕಾರ್ಯನಿರ್ವಾಹಕನ ಪ್ರತಿನಿಧಿತ್ವದ ಸಾಮರ್ಥ್ಯವನ್ನು ಖಚಿತಗೊಳಿಸುತ್ತದೆ. ಸಾಮಾನ್ಯವಾಗಿ ಮರಣಶಾಸನ ನೋಂದಾಯಿತವಾಗಿರುವುದಿಲ್ಲವಾದ್ದರಿಂದಲೂ ಮತ್ತು ಬಹಳಷ್ಟು ಸವಲತ್ತುಗಳನ್ನೊಳಗೊಂಡಿರುವುದರಿಂದಲೂ ಅಧಿಕೃತ ಮೊಹರನ್ನು ಹೊಂದಿದ ಪ್ರೋಬೇಟನ್ನು ಪಡೆದುಕೊಳ್ಳುವುದು ಬಹಳ ಜಾಣತನವೇ ಆಗಿರುತ್ತದೆ. ಏಕೆಂದರೆ ಈ ಪ್ರೋಬೇಟಿನ ಮಾನ್ಯತೆಯನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ. ಈ ಪ್ರೋಬೇಟಿಗೆ ಸರ್ವ ಬಂಧಕ ತೀರ್ಪಿನ ಪರಿಣಾಮವಿರುತ್ತದೆ.

ಎಲ್ಲಾ ಉಯಿಲುಗಳಿಗೂ ಪ್ರೋಬೇಟಿನ ಅಗತ್ಯತೆ ಇದೆ ಎಂಬ ತಪ್ಪು ಕಲ್ಪನೆ ಜನರಲ್ಲಿ ಮೂಡಿದೆ. ಆದರೆ ಇದು ಸತ್ಯವಲ್ಲ. ಭಾರತದ ದೊಡ್ಡ ಸಮುದಾಯ ಗಳಾದ ಹಿಂದೂ ಮತ್ತು ಮುಸ್ಲೀಮರ ವಿಷಯದಲ್ಲಿ ಹೀಗಿದೆ. ಭಾರತದ ಉತ್ತರಾಧಿಕಾರ ಅಧಿನಿಯಮದ ವರ್ಗ ೨೧೩ ವರ್ಗ ೫೭ ರ ಜೊತೆ ಓದಿದಾಗ ಮುಸ್ಲೀಮರಿಗೆ ಪ್ರೋಬೇಟಿನ ಅವಶ್ಯಕತೆ ಇರುವುದಿಲ್ಲ. ಹಿಂದೂಗಳಿಗೆ ಮದ್ರಾಸ್, ಮುಂಬಯಿ ಮತ್ತು ಕಲ್ಕತ್ತಾ ಉಚ್ಚನ್ಯಾಯಾಲಗಳ ಸಾಮಾನ್ಯ ಸಿವಿಲ್ ಅಧಿಕಾರ ವ್ಯಾಪ್ತಿಯಲ್ಲಿರುವ "ಪ್ರದೇಶ" ಗಳಲ್ಲಿ ಉಯಿಲನ್ನು ಮಾಡಿದ್ದರೆ ಮಾತ್ರ ಮುಂದೆ ಪ್ರೊಬೇಟ್ ಬೇಕಾಗುತ್ತದೆ. ಈ ಪ್ರದೇಶಗಳು ಹಿಂದೆ ಪ್ರೆಸಿಡೆನ್ಸಿ ಪಟ್ಟಣಗಳಾಗಿದ್ದು ಆ ಸಮಯದಲ್ಲಿ ನೀಡಿದ ಚಾರ್ಟಸ್‌ನಿಂದ ಪ್ರೋಬೇಟ್‌ನ ಅವಶ್ಯಕತೆ ಇರುವ ಪ್ರದೇಶಗಳಾಗಿರುತ್ತವೆ. ಈ ಪ್ರದೇಶಗಳಲ್ಲದೆ ಬೇರೆ ಪ್ರದೇಶಗಳಲ್ಲಿ ಮಾಡಿದ ಉಯಿಲುಗಳ ವಿಷಯದಲ್ಲಿ ಅಂತಹ ಉಯಿಲಿನಲ್ಲಿರುವ ಸ್ಥಿರ ಸ್ವತ್ತುಗಳು ಈ ಮೇಲ್ಕಂಡ ಪ್ರದೇಶಗಳಲ್ಲಿ ಇದ್ದರೆ ಆಗಲೂ ಸಹ ಪ್ರೋಬೇಟಿನ ಅವಶ್ಯಕತೆ ಇರುತ್ತದೆ. ವರ್ಗ ೨೧೩ ಪ್ರೋಬೇಟಿನ ಅವಶ್ಯಕತೆಯನ್ನು ತಿಳಿಸುತ್ತದೆ. ವರ್ಗ ೫೭ ಪ್ರೋಬೇಟಿನ ಅನ್ವಯ ಸಾಧ್ಯತೆಗಳನ್ನು ತಿಳಿಸುತ್ತದೆ. ಆದ್ದರಿಂದ ಹಿಂದೂ ಮತ್ತು ಮುಸ್ಲೀಮರು ಮಾಡಿದ ಉಯಿಲುಗಳಿಗೆ ಭಾರತದ ಬಹಳಷ್ಟು ಭಾಗಗಳಲ್ಲಿ ಪ್ರೋಬೇಟಿನ ಅವಶ್ಯಕತೆ ಇರುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

ಉಯಿಲು ಮರಣಶಾಸನಕರ್ತನ ಮರಣದ ಕ್ಷಣದಿಂದ ಪರಿಣಾಮಕಾರಿ ಯಾಗುತ್ತದೆ ಮತ್ತು ಉಯಿಲಿನಲ್ಲಿ ಮರಣಶಾಸನಕರ್ತನು ಕಾರ್ಯನಿರ್ವಾಹಕ ನನ್ನು ನೇಮಿಸಿದರೆ, ಆಸ್ತಿಯು ಕಾರ್ಯನಿರ್ವಾಹಕನ ವಶದಲ್ಲೇ ಇರುತ್ತದೆ. ಪ್ರೋಬೇಟಿನ, ಆಸ್ತಿಯು ಕಾರ್ಯನಿರ್ವಾಹಕನಲ್ಲಿ ಸೇರುತ್ತದೆಂಬುದನ್ನು ದೃಢಪಡಿ ಸುತ್ತದೆ. ನ್ಯಾಯಾಲಯವು ಕಾರ್ಯನಿರ್ವಾಹಕನನ್ನು ನೇಮಿಸುವುದಿಲ್ಲ. ಉಯಿಲು ದಾರನೇ ಕಾರ್ಯನಿರ್ವಾಹಕನನ್ನು ನೇಮಿಸುವ ಒಂದು ವಿಶೇಷ ಹಕ್ಕನ್ನು ಪಡೆದಿರುತ್ತಾನೆ. ಅನೇಕ ವೇಳೆ ಉಯಿಲುದಾರನು ಯಾರಾದರೂ ಒಬ್ಬ ವ್ಯಕ್ತಿಯನ್ನು ತನ್ನ ಸ್ವತ್ತಿನ ವ್ಯವಹಾರಗಳನ್ನು ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಕೊಡಲು

ಅಶಿಸಿರಬಹುದು. ಆದರೆ ಅವನನ್ನು ಕಾರ್ಯನಿರ್ವಾಹಕ (Executor) ನೆಂದು ನೇಮಕ ಮಾಡಿಲ್ಲದೇ ಇರಬಹುದು. ಅಂತಹ ಸಮಯದಲ್ಲಿ ನ್ಯಾಯಾಲಯವು ಅವನನ್ನೇ ಕಾರ್ಯನಿರ್ವಾಹಕ ಎಂದು ಅಭಿಪ್ರಾಯಪಡಬಹುದು. ಕಾರ್ಯ ನಿರ್ವಾಹಕನು ತನಗೆ ಕೊಟ್ಟ ಜವಾಬ್ದಾರಿಯನ್ನು ಕಾರ್ಯಗತಗೊಳಿಸಲು ಅನೇಕ ಸಲ ಅಸಮರ್ಥನಾಗಿರಬಹುದು ಅಥವಾ ಅವನಿಗೆ ಇಚ್ಛೆ ಇಲ್ಲದಿರಬಹುದು. ಅಂತಹ ಸಮಯದಲ್ಲಿ ಉಯಿಲಿನಲ್ಲಿ ಹೆಸರಿಸಿದ ಫಲಾನುಭವಿಗಳು ಆಸ್ತಿಯ ವಿಷಯದಲ್ಲಿ ವ್ಯವಹರಿಸುವ ಅಧಿಕಾರ ಪಡೆಯಲು ನ್ಯಾಯಾಲಯವನ್ನು ಮೊರೆಹೋಗಬಹುದು. ಈ ಅಧಿಕಾರವನ್ನು "ಆಡಳಿತಾಧಿಕಾರ ಪತ್ರ" (Letters of Adiministration) ಎಂದು ಕರೆಯುತ್ತಾರೆ. ಅದೂ ಪ್ರೋಬೇಟಿನಷ್ಟೇ ಪರಿಣಾಮಕಾರಿಯಾಗಿರುತ್ತದೆ.

ಪ್ರೋಬೇಟ್ ಅಥವಾ ಆಡಳಿತಾಧಿಕಾರ ಪತ್ರವನ್ನು ಪಡೆಯುವ ಉದ್ದೇಶವು ಏನೆಂಬುದನ್ನು ತಿಳಿಯೋಣ. ಈ ಪತ್ರವನ್ನು ಪಡೆದವರು ಸಂಪದದ ಎಲ್ಲಾ ವ್ಯವಹಾರಗಳನ್ನು ಪ್ರತಿನಿಧಿಸುವ ಹಕ್ಕನ್ನು ಹೊಂದಿರುತ್ತಾರೆ. ಅವರು ಎಲ್ಲಾ ವ್ಯವಹಾರಗಳಲ್ಲೂ ಕಾನೂನಿನ ಪ್ರಕಾರ ವಾರಸುದಾರರ ಪತ್ರವನ್ನು ಪಡೆದು ಸಂಪದದ ವಸೂಲಿಗಾಗಿ ದಾವೆ ಹೂಡಲು ಮತ್ತು ಇತರ ವ್ಯವಹಾರಗಳನ್ನು ಮಾಡುವ ಹಕ್ಕುಳ್ಳವರಾಗಿರುತ್ತಾರೆ. ಅಂದರೆ ಉಯಿಲುದಾರನ ಆಜ್ಞೆಯನ್ನು ಕಾರ್ಯಗತಗೊಳಿಸುತ್ತಾರೆ.

ಉಯಿಲು ಸಾಮಾನ್ಯವಾಗಿ ಕಾನೂನಿನ ಪ್ರಕಾರ ಉತ್ತರಾಧಿಕಾರಿಯಲ್ಲದವರಿಗೆ, ಆಸ್ತಿಯನ್ನು ಕೊಡಲು ಮಾಡಿದ ಒಂದು ಸಾಧನ ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಉದಾ : ಅನೌರಸ ಪುತ್ರ (Illigitemate Son) ಮುಂತಾದವರು. ಉತ್ತರಾಧಿಕಾರಿಗಳಲ್ಲದವರು ಆಸ್ತಿಯನ್ನು ಪಡೆಯಲು ಇನ್ನೂ ಕೆಲವು ಅಸಮರ್ಥತೆಗಳು ಅಂದರೆ, ವಿಧವಾ ಪುನರ್ವಿವಾಹ ಮುಂತಾದವು ಇದ್ದವು. ಇವೆಲ್ಲವನ್ನೂ ಈಗ ತೆಗೆದುಹಾಕಲಾಗಿದೆ. ಈಗಿನ ಹಿಂದೂ ಉತ್ತರಾಧಿಕಾರ ಕಾಯಿದೆಯ ಪ್ರಕಾರ, ಸತ್ತವನ ಆಸ್ತಿಯನ್ನು ಪಡೆಯಲು ಅಸಮರ್ಥತೆಯನ್ನು ಹೊಂದಿದವವರು ಸೊಸೆ ಮತ್ತು ಅಣ್ಣನ ವಿಧವೆ ಮಾತ್ರ (ವರ್ಗ ೨೪) ಬೇರೆ ಮತವನ್ನು ಸೇರಿದವನ ವಿಷಯದಲ್ಲಿ ಅವನು (Caste Disabilities Removal Act 1850) ತನ್ನ ಉತ್ತರಾಧಿಕಾರ ಹಕ್ಕನ್ನು ಕಳೆದುಕೊಳ್ಳದಂತೆ ರಕ್ಷಣೆ ನೀಡಲಾಗಿದೆ. ಆದರೆ ಪರಿವರ್ತನೆಯ ನಂತರ ಅವನಿಗೆ ಹುಟ್ಟಿದ ಮಕ್ಕಳು ವಾರಸತ್ವಕ್ಕೆ ಅನರ್ಹರು.

ವಾರಸುದಾರರು ಯಾರೂ ಇಲ್ಲದೇ ಇದ್ದರೆ ಆಸ್ತಿಯು ಸರ್ಕಾರಕ್ಕೆ ಸೇರುತ್ತದೆ. ಇಂತಹ ಸ್ವತ್ತಿಗೆ ರಾಜಗಾಮಿತ್ವ ಅಥವಾ ರಾಜಗಾಮಿ ಸ್ವತ್ತು ಎಂಬ ಪದವನ್ನು ಉಪಯೋಗಿಸಲಾಗಿದೆ. ಸರಿಯಾಗಿ ಹೇಳಬೇಕಾದರೆ ಸಂಪದವು ಸ್ವಾಮಿಹೀನತ್ವ

(Bona-vacantia) ವಾಗುತ್ತದೆ, ಎಂಬುದನ್ನು ಗಮನಿಸಬಹುದು. ಸರ್ಕಾರವು ಅದನ್ನು ಬಾಕಿ ನಿಂತ ಆಸ್ತಿ ಎಂದು ತಾನೇ ತೆಗೆದುಕೊಳ್ಳುತ್ತದೆ. ರಾಜಗಾಮಿತ್ವ ಎಂಬ ಶಬ್ದವು ಮುಖ್ಯವಾಗಿ ಇಂಗ್ಲೀಷ್ ಕಾನೂನಿಗೆ ಸೇರಿದ್ದೇ ಆಗಿದೆ. ಏಕೆಂದರೆ ಸಾರ್ವಭೌಮ (Crown) ನೇ ಇಂಗ್ಲೆಂಡಿನ ಎಲ್ಲಾ ಭೂಮಿಗೂ ಒಡೆಯನು ಮತ್ತು ಸತ್ತವನಿಗೆ ವಾರಸುದಾರರಿಲ್ಲದಿದ್ದರೆ ಆ ಭೂಮಿಯು ಹಿಂದಕ್ಕೆ ರಾಜನಿಗೇ ಸೇರುತ್ತದೆ.

ಹಿಂದೂ ಕಾನೂನು ಯಾವಾಗಲೂ ಈ ತರಹ ವಾರಸುದಾರರಿಲ್ಲದೇ ಇರುವುದನ್ನು ತಡೆಗಟ್ಟಲು "ದತ್ತಕ" ಎಂಬ ಕಲ್ಪನೆಯನ್ನು ಮಾಡಿದೆ. ಇದು ೧೯೫೬ ರಿಂದ ಶಾಸನ ಬದ್ಧ ರೂಪವನ್ನು ತಾಳಿದೆ. ದತ್ತಕದ ವಿಷಯದಲ್ಲಿ ಒಂದು ಸಾಮಾನ್ಯ ಸರ್ವವ್ಯಾಪ್ತಿ ಕಾನೂನನ್ನು ಮಾಡಲು ಸಂಸತ್ತಿನ ಮುಂದೆ ಮನವಿ ಸಲ್ಲಿಸಿದ್ದು ಅದು ಫಲಿಸಲಿಲ್ಲ.

ಯುರೋಪಿಯನ್ನರು, ಭಾರತದ ಕ್ರೈಸ್ತರು ಮತ್ತು ಇತರೇ ಪಂಗಡಗಳಿಗೆ ಸಂಬಂಧಿಸಿದ ವಿಷಯಕ್ಕೆ ಮರಣಶಾಸನ ಸಂಬಂಧದಲ್ಲಿ, ಭಾರತದ ಉತ್ತರಾಧಿಕಾರ ನಿಯಮವು ಸತ್ತವನ ವಿಧವೆಯನ್ನು, ಅವಳೊಡನೆ ಮದುವೆಗೆ ಮೊದಲೇ ಮಾಡಿಕೊಂಡ ಒಪ್ಪಂದವು ಅನುಮೋದಿಸಿದರೆ, ಅವಳನ್ನು ಭಾಗಿತ್ವದಿಂದ ಬಿಟ್ಟುಬಿಡಬಹುದು ಎಂದು ಹೇಳಿದೆ.

ಮರಣಶಾಸನದ ಮೂಲಕ ಬಂದ ಸ್ವತ್ತು ಕಾರ್ಯಾಚರಣೆಗೆ ಬರುವುದಕ್ಕೆ, ಉಯಿಲುದಾರನ ಮರಣದ ನಂತರ ಸ್ವತ್ತನ್ನು ಪಡೆದವನು ಜೀವಂತವಾಗಿರಬೇಕು. ಅಂತಹ ವ್ಯಕ್ತಿಯು ಮರಣ ಹೊಂದಿದ್ದರೆ, ಆಸ್ತಿಯ ಅವನ ಭಾಗವು ಉಳಿದವರಿಗೆ ಸೇರುತ್ತದೆ. ಭಾರತದ ಉತ್ತರಾಧಿಕಾರ ಕಾಯಿದೆಯ ವರ್ಗ ೧೦೯ ರ ಪ್ರಕಾರ ಒಂದು ಮಗು ಅಥವಾ ಪಿತೃವಂಶಜರಿಗೆ ಕೊಟ್ಟ ಸ್ವತ್ತು, ಅವನು ಮರಣ ಶಾಸನಕರ್ತನ ಮರಣದ ಮುಂಚೆಯೇ ಸತ್ತಿದ್ದರೂ ಸಹ, ಸ್ವತ್ತು, ಕೈತಪ್ಪಿ ಹೋಗಕೂಡದು ಎಂಬ ಒಂದು ವಿನಾಯಿತಿಯನ್ನು ಕೊಡಲಾಗಿದೆ.

ಕಾನೂನಿನ ಮೂಲಭೂತ ತತ್ವವು ಏನೆಂದರೆ, ಜೀವಂತವಾಗಿರುವ ಯಾವುದೇ ಮನುಷ್ಯನಿಗೆ ವಾರಸುದಾರರು ಇರುವುದಿಲ್ಲ ಎಂದು. ಒಬ್ಬನ ಮಕ್ಕಳು, ಮುಂತಾದವರು ಬರೀ ಪೂರ್ವಭಾವ್ಯ ವಾರಸುದಾರರು. ಆದ್ದರಿಂದ ಅಂತಹ ಮಕ್ಕಳು ತಮಗೆ ಬರಬಹುದಾದ ಪಾಲಿನ ನಿರೀಕ್ಷಣೆಯನ್ನು ವರ್ಗಾಯಿಸಲಾಗುವುದಿಲ್ಲ. ವಾರಸತ್ವದ ಆಕಸ್ಮಿಕ ಅವಕಾಶವನ್ನು ಇಂತಹ ವಿಷಯಗಳಲ್ಲಿ "ಉತ್ತರಾಧಿಕಾರದ ಆಸೆ" (Spes Successionis) ಎಂದು ಕರೆಯಲಾಗಿದ್ದು, ಈ ಆಸೆಯನ್ನು ವರ್ಗಾಯಿಸಲು ಅಥವಾ ವಾರಸತ್ವ ಮಾಡಲು ಆಗುವುದಿಲ್ಲ.

ಆಸ್ತಿಯನ್ನು ಪಡೆದವನು ಉಯಿಲುದಾರರಿಗೆ ಉತ್ತರಜೀವಿಯಾಗಿರಬೇಕು.

ಯಾವುದೇ ಆಕಸ್ಮಿಕ ಆಪತ್ತು ಅಥವಾ ಅಪಘಾತದಿಂದ ಉಯಿಲುದಾರ ಮತ್ತು ಸ್ವತ್ತನ್ನು ಪಡೆದವರು ಇಬ್ಬರೂ ಮರಣಿಸಿದರೆ, ಕಾನೂನು ನ್ಯಾಯ ಸಮ್ಮತತೆಯ ತತ್ವವನ್ನು ಅನುಸರಿಸಿ "Commorientes" ಎಂಬ ಪದವನ್ನು ಬಳಸುತ್ತದೆ. ಈ ತತ್ವದ ಪ್ರಕಾರ ಚಿಕ್ಕವನು ಯಾವಾಗಲೂ ಉಯಿಲುದಾರನ ಮರಣದ ನಂತರ ಮರಣ ಹೊಂದಿದ್ದಾನೆ ಎಂದು ಭಾವಿಸಿ, ಚಿಕ್ಕವನ ವಾರಸುದಾರರಿಗೆ ಉತ್ತರಾಧಿಕಾರಿತ್ವಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಈ ತತ್ವವು ಹಿಂದೂ ಉತ್ತರಾಧಿಕಾರ ಕಾಯಿದೆಯಲ್ಲಿ ಶಾಸನ ಬದ್ಧ ರೂಪವನ್ನು ಪಡೆದಿದೆ.

ವಾರಸುತನದ ಬಗ್ಗೆ ವಿಚಾರ ಮಾಡಲು ಹೊರಟಾಗ ಒಂದು ಮುಖ್ಯ ಅಂಶ ಹೊರ ಬರುತ್ತದೆ. ಏನೆಂದರೆ, ಒಬ್ಬ ವ್ಯಕ್ತಿಯು ನಿಧನ ಹೊಂದಿದ ಅನೇಕ ವರ್ಷಗಳ ಮೇಲೆ ಅವನು ಅಸ್ತಿತ್ವದಲ್ಲಿ ಇದ್ದನೇ ಮತ್ತು ಯಾವ ಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದನು ಎಂಬುದನ್ನು ನಿರ್ಣಯ ಮಾಡಬೇಕಾದ ಸಂದರ್ಭ ಒದಗುತ್ತದೆ. ಕಾನೂನಿನಲ್ಲಿ ಜನನ ಮತ್ತು ಮರಣದ ನೋಂದಣಿ ಕಡ್ಡಾಯವಾಗಿದೆ. (Registration of Births and Deaths Act 1969). ಇದರಿಂದ ಬಹಳ ಉಪಯೋಗ ಆಗುತ್ತದೆ. ಏಕೆಂದರೆ ಒಬ್ಬ ವ್ಯಕ್ತಿಯ ಕೆಲಸ ಅಥವಾ ಅವನ ಆಸ್ತಿಯ ಬಗ್ಗೆ ವಿವಾದ ಉಂಟಾದಾಗಲೂ ಇನ್ನಿತರ ವಿಚಾರಗಳಿಗೂ ಜನನ ಮರಣದ ದಾಖಲೆ ಹೊಂದಿದ್ದರೆ ಅದು ಬಹಳ ಉಪಕಾರಿಯಾಗುತ್ತದೆ. ಆದರೆ ದುರದೃಷ್ಟವಶಾತ್ ನಮ್ಮ ಜನರು ಅದನ್ನು ಕಡೆಗಣಿಸಿದ್ದಾರೆ. ಈ ರೀತಿ ನೋಂದಣಿಯ ನಕಲನ್ನು ಮಾತ್ರ ನೋಂದಣಿ ಅಧಿಕಾರಿಗಳಿಂದ ಪಡೆದು ಹಾಜರು ಪಡಿಸಿದಲ್ಲಿ ಅದಕ್ಕೆ ಸಂಬಂಧಿಸಿದ ವ್ಯಕ್ತಿಯ ಜನನ, ಮರಣ ಮತ್ತು ತಂದೆ-ತಾಯಿಗಳ ಮಾಹಿತಿಯ ಬಗ್ಗೆ ಕಾನೂನು ವಿಶೇಷವಾದ ಮಾನ್ಯತೆ ಮತ್ತು ರಕ್ಷಣೆ ಕೊಟ್ಟಿದೆ.

****

ಭಾಗ - ೧೦

ಕರಾರುಗಳು

ನಮ್ಮ ನಿತ್ಯ ಜೀವನದಲ್ಲಿ ನಾನಾ ಬಗೆಯ ವ್ಯವಹಾರಗಳು ನಡೆಯುತ್ತಿ ರುತ್ತವೆ. ಮನೆಯ ಮಾರಾಟವಿರಬಹುದು, ಗೇಣಿ ವಿನಿಮಯ, ಅಡಮಾನ ಗಳಿರಬಹುದು: ಇಲ್ಲವೇ ಸಾಮಾನುಗಳ ಕೊಳ್ಳುವಿಕೆ, ಮಾರುವಿಕೆ ಇರಬಹುದು. ಹೀಗೆ ಜನಗಳ ಮಧ್ಯೆ ಸರ್ವೇಸಾಮಾನ್ಯವಾಗಿ ನಡೆಯುವ ವ್ಯವಹಾರಗಳಿಗೆ ಒಂದು ಬಗೆಯ ಕಟ್ಟುನಿಟ್ಟು ಇರಲೇಬೇಕು. ಸ್ಥಿರ ಆಸ್ತಿಗಳ ಒಡೆತನ ಬದಲಿಸಬೇಕಾದರೆ ಸ್ವತ್ತಿನ ವರ್ಗಾವಣೆಯ ಕಾನೂನಿನ ಉಪಬಂಧಗಳು ಸಹಾಯಕ್ಕೆ ಬರುತ್ತವೆ. ಸರಕುಗಳ ಮಾರಾಟ, ಲೇವಾದೇವಿ ಮುಂತಾದ ಚರ ಆಸ್ತಿಗೆ ಸಂಬಂಧಿಸಿದ ಕಾರ್ಯಗಳಿಗೆ ಬೇರೆ ಬೇರೆ ಕಾನೂನುಗಳು ಅನ್ವಯವಾಗುತ್ತವೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಕಾನೂನುಗಳೆಲ್ಲಾ ವ್ಯಕ್ತಿಗಳ ಹಕ್ಕುಗಳನ್ನು ಕಾಪಾಡಲು ಮತ್ತು ಕಾನೂನಿನ ಸಹಾಯದಿಂದ ಜಾರಿಗೊಳಿಸಲು ಸೃಷ್ಟಿಸಿರುವ ಸಾಧನಗಳು. ಈ ಎಲ್ಲಾ ಕಾನೂನುಗಳ ತಳಹದಿ ೧೮೭೨ ರಲ್ಲಿ ಜಾರಿಗೆ ತಂದ "ಭಾರತದ ಕರಾರು ಕಾಯಿದೆ"ಯಾಗಿದೆ. ಇದು ಎಷ್ಟರ ಮಟ್ಟಿಗೆ ನಮ್ಮ ರಾಷ್ಟ್ರದ ನಾಗರಿಕರು ಪರಸ್ಪರ ಮಾಡಿಕೊಂಡ ಒಪ್ಪಂದಗಳು ಮಾನ್ಯ ಮತ್ತು ನ್ಯಾಯಾಲಯಗಳಲ್ಲಿ ಊರ್ಜಿತವಾಗಬಲ್ಲವು ಎಂಬುದನ್ನು ತಿಳಿಸುತ್ತದೆ.

'ಕರಾರಿನ' ರೂಪ ರಚನೆ

'ಕರಾರು' ಮಾನ್ಯತೆ ಪಡೆಯಲು ಅದರ ರಚನೆ ಒಂದು ನಿರ್ದಿಷ್ಟ ರೀತಿಯಲ್ಲಿರಬೇಕೆಂದು ಕಾಯಿದೆಯಲ್ಲಿ ಯಾವ ಸೂಚನೆಯೂ ಇಲ್ಲ. ಈ ಕರಾರು, ಸಹಿ ಮಾಡಿದ ಲಿಖಿತ ಪತ್ರದ ರೂಪದಲ್ಲೇ ಇದ್ದು ಕರಾರುದಾರರ ಸ್ವಾಧೀನಕ್ಕೆ ಒಪ್ಪಿಸಬೇಕೆಂಬ ನಿಯಮವೂ ಇಲ್ಲ. ಬೆಲೆ ಬಾಳುವ ಸ್ಥಿರ ಆಸ್ತಿಗಳ ವರ್ಗಾವಣೆಗೆ ಸಂಬಂಧಪಟ್ಟ ಒಪ್ಪಂದಗಳು ಕೂಡ ಪೂರ್ಣವಾಗಿ ಅನೌಪಚಾರಿಕ ಮತ್ತು ಬಾಯಿ ಮಾತಿನ ಒಪ್ಪಂದವಾಗಿರಬಹುದು. ಇದಕ್ಕೆ ಕಾರಣ ಸ್ಪಷ್ಟ. ದಿನನಿತ್ಯವೂ ಜನರ ಮಧ್ಯೆ ಕರಾರುಗಳು ಅಸಂಖ್ಯಾತವಾಗಿ ನಡೆಯುತ್ತಿರುತ್ತವೆ. ಇವು ಬರಹದಲ್ಲಿರ ಬೇಕು, ನೋಂದಾಯಿಸಿರಬೇಕು ಎಂದು ಕಾಯಿದೆಯಲ್ಲಿದ್ದರೆ ಇದು ಒಂದು ಅಸಾಧ್ಯ ಪರಿಸ್ಥಿತಿ. ಜನರ ವ್ಯವಹಾರದಲ್ಲಿ ಅಸಹನೀಯ ಭಾರವಾಗಿ ಅವರ ಸ್ವಂತ ಜೀವನದಲ್ಲಿ ಅತಿಕ್ರಮ ಪ್ರವೇಶ ಮಾಡಿದಂತಾಗುತ್ತದೆ.

ಆದರೆ ಜನರ ಹಕ್ಕನ್ನು ಕಾದಿಡಲು ಸಂಬಂಧಪಟ್ಟ ಬೇರೆ ಕಾಯಿದೆಗಳು ಕೆಲವು ನಿಯಮಗಳನ್ನು ವಿಧಿಸಿವೆ. ಸ್ಥಿರ ಸ್ವತ್ತುಗಳಲ್ಲಿನ ಹಿತಾಸಕ್ತಿ, ಒಂದು ವರ್ಷ ಅಥವಾ

ಪೆಟ್ಟಿಗೆ ಗುತ್ತಿಗೆ ಕೊಡುವುದೇ ಆಗಲಿ, ಯಾವುದೇ ವ್ಯವಹಾರದಲ್ಲಿ ನಿರ್ದಿಷ್ಟ ಕಾಲಾವಧಿಯನ್ನು ನಿಯಮಿಸಿದ್ದೇ ಆಗಲಿ, ಮಾರಾಟ, ದಾನ ಮುಂತಾದ ವಿಷಯಗಳೇ ಆಗಲಿ ಅಂತಹ ಕರಾರುಗಳು ಬರಹದಲ್ಲಿರಬೇಕು ಎಂದು ಸ್ವತ್ತಿಗೆ ಸಂಬಂಧಪಟ್ಟ ಕಾನೂನು ನಿಗದಿಪಡಿಸುತ್ತದೆ. ಭಾರತದ ನೋಂದಣಿ ಕಾನೂನು ಪ್ರಕಾರ ಈ ಕರಾರುಗಳನ್ನು ನೋಂದಾಯಿಸಿರಬೇಕು. ಕರಾರು ಕಾಯಿದೆಯೂ ಕೂಡ (ವರ್ಗ ೨೫ ರಲ್ಲಿ) ಪ್ರತಿಫಲವಿಲ್ಲದ ಒಪ್ಪಂದಗಳನ್ನು, ಬರೆದು ನೋಂದಾಯಿಸಿದ ಹೊರತು ಅದಕ್ಕೆ ಬೆಲೆಯೇ ಇಲ್ಲ ಎಂದು ಹೇಳುತ್ತದೆ. ಒಂದು ಸಾಧಾರಣ ಒಪ್ಪಂದವು ಬರಹದಲ್ಲಿದ್ದರೆ, ಆ ಪತ್ರಕ್ಕೆ ಸ್ಟಾಂಪು ಶುಲ್ಕವನ್ನು ಜಮಾ ಮಾಡಲೇ ಬೇಕು. ಇದನ್ನು ಕರ್ನಾಟಕದ ಸ್ಟಾಂಪು ಕಾನೂನು ನಿಯಮಿಸಿದೆ. ನ್ಯಾಯಾಲಯಗಳು ಈ ತರಹದ ಸ್ಟಾಂಪು ಶುಲ್ಕವಿಲ್ಲದ ಪತ್ರಗಳನ್ನು ಸ್ವೀಕರಿಸುವುದಿಲ್ಲ. ಏನಾದರೂ ಸಾಕ್ಷಿಯಾಗಿ ಇವನ್ನು ಸ್ವೀಕರಿಸಲೇ ಬೇಕಾದರೆ, ನಿಗದಿ ಪಡಿಸಿದ ಸ್ಟಾಂಪು ಶುಲ್ಕದ ಹತ್ತರಷ್ಟು ತೆರಬೇಕಾಗುತ್ತದೆ. ಶುಲ್ಕವಿಲ್ಲದ ಪತ್ರಗಳನ್ನು ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯೂ ತನ್ನ ಅವಗಾಹನೆಗೆ ಬಂದಾಗ ದಂಡವನ್ನು ವಸೂಲು ಮಾಡುವ ಹಕ್ಕನ್ನು ಹೊಂದಿರುತ್ತಾನೆ ಮತ್ತು ಕಾನೂನಿನ ಪ್ರಕಾರ ಅವನು ಆ ಪತ್ರವನ್ನು ಹಿಂತಿರುಗಿಸದೆ ತಡೆ ಹಿಡಿಯಬಹುದು. ಇದೇ ರೀತಿ ನೋಂದಣಿಯ ಅಗತ್ಯವಿರುವ ಪತ್ರಗಳನ್ನು (ಭಾರತದ ನೋಂದಣಿ ಅಧಿನಿಯಮದ ಪ್ರಕಾರ) ನೋಂದಾಯಿಸ ದಿದ್ದರೆ ನ್ಯಾಯಾಲಯಗಳು ಅವನ್ನು ಅಂಗೀಕರಿಸುವುದಿಲ್ಲ. ಇದು ಒಂದು ಭಾರೀ ವಿಪತ್ತು. ಏಕೆಂದರೆ ಭಾರತದ ಸಾಕ್ಷ್ಯ ಕಾನೂನು ೯೧ ನೇ ವರ್ಗದ ಪ್ರಕಾರ ಕರಾರಿನಲ್ಲಿ ಸ್ವತ್ತುಗಳ ಅನುದಾನ ಅಥವಾ ವಿಲೇವಾರಿಗಳನ್ನು ಬರವಣಿಗೆಗೆ ಇಳಿಸದಿದ್ದರೆ, ಆಗ ನ್ಯಾಯಾಲಯವು ಅಂತಹ ಪತ್ರಗಳನ್ನು ರುಜುವಾತಿಗೋಸ್ಕರ ಸ್ವೀಕರಿಸಿ ಬಾಯಿ ಮಾತಿನ ಸಾಕ್ಷ್ಯದಿಂದ ಅದರ ಒಳಾಂಶವನ್ನು ಕಂಡು ಹಿಡಿಯಲು ಪುರಸ್ಕರಿಸುವುದಿಲ್ಲ. ಆದುದರಿಂದ ಬೇರೆ ಬೇರೆಯ ಕಾನೂನುಗಳಲ್ಲಿ ಸ್ಟಾಂಪು ಶುಲ್ಕವನ್ನು ಕೊಡಬೇಕೆಂದಾಗಲೀ ಅಥವಾ ನೋಂದಣಿಯನ್ನು ಮಾಡಬೇಕೆಂದಾಗಲೀ ತಿಳಿಸಿದ್ದರೆ, ಅವುಗಳನ್ನು ಮಾಡಲೇಬೇಕು. ಇವುಗಳಲ್ಲಿ ಮುಖ್ಯವಾದವು ಭಾರತದ ನೋಂದಣಿ ಅಧಿನಿಯಮ, ಕರ್ನಾಟಕಾ ಸ್ಟಾಂಪು ಅಧಿನಿಯಮ (Indian Registration Act, 1908, Karnataka Stamp Act. 1957).

ಕರಾರನ್ನು ಮಾಡಿಕೊಳ್ಳಲು ಅರ್ಹತೆ ಅಥವಾ ಸಾಮರ್ಥ್ಯ

ಸ್ವಾಭಾವಿಕ ವ್ಯಕ್ತಿಗಳು ಅಥವಾ ಕಾನೂನು ಸಮ್ಮತ ವ್ಯಕ್ತಿಗಳು ಮಾತ್ರ ಕರಾರನ್ನು ಮಾಡಿಕೊಳ್ಳಲು ಅರ್ಹರು. ಇಂತಹ ಕರಾರಿನ ಉಲ್ಲಂಘನೆಯಾದರೆ ನ್ಯಾಯಾಲಯವು ಪರಸ್ಪರ ಹಕ್ಕು, ಕರ್ತವ್ಯಗಳನ್ನು ಒತ್ತಾಯಿಸಬಹುದು. ಭಾರತದ ಪ್ರಾಪ್ತ ವಯಸ್ಕತೆಯ

ಕಾನೂನು (Indian Majority Act) ಪ್ರಕಾರ ಪ್ರಾಪ್ತ ವಯಸ್ಕರೆಲ್ಲಾ ಕರಾರು ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಇದೇ ಕಾನೂನು ಪ್ರಾಪ್ತ ವಯಸ್ಕನೆಂದರೆ ಹದಿನೆಂಟು ವರ್ಷಗಳು ತುಂಬಿರುವ ವ್ಯಕ್ತಿ ಎಂಬುದನ್ನು ನಿಗದಿಪಡಿಸುತ್ತದೆ. ಈ ವಯಸ್ಸನ್ನು ಮೀರದ ವಯಸ್ಸಿನವರಿಗೆ ವ್ಯವಹಾರದ ಸ್ವಭಾವವನ್ನು ತಿಳಿದುಕೊಳ್ಳುವ ಬುದ್ಧಿ ಸಾಮರ್ಥ್ಯ ಇಲ್ಲದೇ ಇರಬಹುದು, ಎಂದು ಅಂತಹವರಿಗೆ ಈ ಕಾನೂನು ಪೂರ್ಣ ಸಂರಕ್ಷಣೆಯನ್ನು ಕೊಟ್ಟಿದೆ. ಆದ್ದರಿಂದ ಅಪ್ರಾಪ್ತ ವಯಸ್ಕನ ಜೊತೆಯಲ್ಲಿ ಮಾಡಿಕೊಂಡ ಕರಾರಿಗೆ ಕಾನೂನಿನಲ್ಲಿ ಮಾನ್ಯತೆ ಇಲ್ಲ. ಅಪ್ರಾಪ್ತ ವಯಸ್ಕನು ಕರಾರು ಮಾಡಿಕೊಳ್ಳುವುದನ್ನು ಈ ಕಾನೂನು ನಿಷೇಧಿಸಿದೆ. ಇಂತಹ ಕರಾರು ಸಂಶಯ ಮತ್ತು ವಿವಾದಗಳಿಗೆ ಕಾರಣವಾಗುತ್ತದೆ. ಆದರೆ ಈ ಅಪ್ರಾಪ್ತ ವಯಸ್ಕನು ಹದಿನೆಂಟು ವರ್ಷವನ್ನು ದಾಟಿದ ಮೇಲೆ ಕೂಡ ಈ ಕರಾರನ್ನು ಸಮರ್ಥನೆ ಮಾಡಿ ಅದಕ್ಕೆ ಅನುಮೋದನೆಯನ್ನು ನೀಡುವ ಹಕ್ಕನ್ನು ಹೊಂದಿರುವುದಿಲ್ಲ. ಇದನ್ನು ಯಾವ ಶಾಸನದಲ್ಲೂ ಹೇಳಿಲ್ಲ. ಇದು ನ್ಯಾಯಾಲಯಗಳು ರೂಪಿಸಿದ ತತ್ವ. ಕ್ರಿ. ಶ. ೧೯೦೨ ರಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಕಾನೂನಿಗೆ ಅಂದು ಭಾರತದ ಎಲ್ಲಾ ಅಪೀಲಿನ ಉಚ್ಚತಮ ನ್ಯಾಯಾಲಯವಾಗಿದ್ದ ಪ್ರೀವ್ಹಿ ಕೌನ್ಸಿಲ್‌ನ ನ್ಯಾಯ ಸಮಿತಿಯು ಈ ವಿಷಯವನ್ನು ಇತ್ಯರ್ಥ ಮಾಡಿತು. ನ್ಯಾಯಾಲಯವು ಅಪ್ರಾಪ್ತ ವಯಸ್ಕನೊಡನೆ ಮಾಡಿದ ಕರಾರು ಶೂನ್ಯ (ನಾಸ್ತಿ), ಕಲ್ಪಿತ (Non-est) ಎಂದೂ, ಆದ್ದರಿಂದ ಅದು ಶೂನ್ಯವೆಂದೂ, ಅಪ್ರಾಪ್ತ ವಯಸ್ಕನು ಪ್ರಾಪ್ತ ವಯಸ್ಸನ್ನು ಮೀರಿದ ಮೇಲೂ ಅವನು ಅದನ್ನು ಅನುಮೋದನೆ ಅಥವಾ ಅನುಸಮರ್ಥನೆ ಮಾಡಲು ಅವಕಾಶವಿಲ್ಲ ಎಂದೂ, ನ್ಯಾಯಾಲಯವು ಅದನ್ನು ಯಾವುದೇ ಸಮಯದಲ್ಲಿ ಗಮನಿಸ ಲಾಗುವುದಿಲ್ಲ ಎಂದೂ ಇತ್ಯರ್ಥ ಮಾಡಿತು. ಮೊಹ್ರಿ ಬೇಬಿ ವಿರುದ್ಧ ಧರ್ಮದಾಸ್ ಘೋಷ್ (Mohori bibi Vs. Dharmodas Ghose, (1903) 30 IA 114).

ಕರಾರು ಕಾನೂನಿನ ೧೧ನೇ ಅಧಿನಿಯಮವು ಅಸ್ವಸ್ಥ ಮನಸ್ಸಿನ ವ್ಯಕ್ತಿಗೆ ಕರಾರು ಮಾಡಿಕೊಳ್ಳುವ ಸಾಮರ್ಥ್ಯವಿಲ್ಲ ಎಂದು ಸೂಚಿಸಿದೆ. ಇದೇ ತರಹ ಅನರ್ಹತೆಗಳಿರುವ ಮಿಕ್ಕ ವ್ಯಕ್ತಿಗಳು ಯಾರೆಂದರೆ, ಸಾಮಾನ್ಯವಾಗಿ ದಿವಾಳಿಯಾಗಿರುವವನು. ಆದರೆ ಅವನು "ಅವಿಮುಕ್ತ ದಿವಾಳಿ"ಯಾಗಿರಬೇಕು (Undischarged Insolvent). ಒಬ್ಬ ವ್ಯಕ್ತಿಯನ್ನು ನ್ಯಾಯಾಲಯವು ದಿವಾಳಿಯಾಗಿರುವವನು ಎಂದು ತೀರ್ಮಾನಿಸಿದರೆ ಅವನು ನ್ಯಾಯಾಲಯದಿಂದ ವಿಮೋಚನೆ ಪಡೆದ ಮೇಲೇ ಕರಾರನ್ನು ಮಾಡಿಕೊಳ್ಳಬಹುದು. ಯಾವ ಅನ್ಯದೇಶೀಯರಾದರೂ ಭಾರತದ ಪೌರರೊಡನೆ ಕರಾರನ್ನು ಮಾಡಿಕೊಳ್ಳಲು ಯಾವ ನಿಷೇಧವೂ ಇಲ್ಲ. ಆದರೆ ಆ ವಿದೇಶಿಯನು ನಮ್ಮ ದೇಶದ ಮೇಲೆ ಯುದ್ಧವನ್ನು ಘೋಷಿಸಿದ ದೇಶಕ್ಕೆ ಸೇರಿದ್ದರೆ ಅವನೊಡನೆ

ಮಾಡಿಕೊಂಡ ಕರಾರು ಜಾರಿಗೆ ಬರಲು ಅಸಮರ್ಥವಾಗುತ್ತದೆ. ಇದೇ ಭಾರತದ ಕರಾರು ಕಾಯಿದೆಯ ೨೩ನೇ ವರ್ಗ. ಇಂತಹ ಕರಾರು ಸಾರ್ವಜನಿಕ ನೀತಿಗೆ ವಿರುದ್ಧ ಎಂದು ಕರೆಯಲಾಗಿದೆ. ಇನ್ನು ವಿದೇಶಿ ಸಾರ್ವಭೌಮ ಅಥವಾ ರಾಜತಾಂತ್ರಿಕ ವಿನಾಯಿತಿಯನ್ನು ಉಪಭೋಗಿಸುತ್ತಿರುವ ವ್ಯಕ್ತಿಯ ಹಕ್ಕನ್ನು ವಿಚಾರಿಸೋಣ. ಕರಾರು ಎಲ್ಲಾ ವಿಧದಲ್ಲಿ ಸಮಂಜಸವಾಗಿರಬಹುದು, ಆದರೆ ಆ ಕರಾರಿನ ಪ್ರಕಾರ ನಡೆಯಲೇ ಬೇಕೆಂದು ಅಂತಹವರ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಲು ಆಗುವುದಿಲ್ಲ. ಅವರು ಅಂತಾರಾಷ್ಟ್ರೀಯ ಕಾಯಿದೆಯ ಮೇಲೆ ಆಧಾರವಾದ "ದಾವೆ ಹೂಡುವುದರ ವಿರುದ್ಧ ಉನ್ಮುಕ್ತಿ" (Immunity) ವಿನಾಯಿತಿ ಹೊಂದಿರುತ್ತಾರೆ.

ಒಂದಾನೊಂದು ಕಾಲದಲ್ಲಿ ಹಳೆಯ ಇಂಗ್ಲೀಷ್ ಕಾನೂನಿನ ಆಧಾರದ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಅಪರಾಧಿ ಎನಿಸಿಕೊಂಡವನು ಕರಾರು ಮಾಡಿಕೊಳ್ಳಲು ಅಸಮರ್ಥ ಎಂದೂ, ಆ ಅಪರಾಧಿಯು ಎಲ್ಲಾ ಹಕ್ಕುಗಳನ್ನೂ ಸಂಪೂರ್ಣವಾಗಿ ಕಳೆದುಕೊಂಡಿರುತ್ತಾನೆ ಎಂದು ತಿಳಿದಿದ್ದರು. ಆದರೆ ಇಂದು ಇದು ನಿಜವಲ್ಲ. ನಮ್ಮ ಸರ್ವೋಚ್ಚ ನ್ಯಾಯಾಲಯವು ಒಬ್ಬ ಮನುಷ್ಯನು ಅಪರಾಧ ಮಾಡಿದ ಮಾತ್ರಕ್ಕೆ "ಅವ್ಯಕ್ತಿ" (ಶೂನ್ಯ ವ್ಯಕ್ತಿ)ಯಾಗುವುದಿಲ್ಲ. ಅವನು ಸ್ವತಂತ್ರವಾಗಿ ಓಡಾಡುವ ಹಕ್ಕನ್ನು ಮಾತ್ರ ಕಳೆದುಕೊಳ್ಳುತ್ತಾನೆ. ಕಾರಾಗೃಹವು ಒಡ್ಡಿದ ಅಥವಾ ನಿರ್ಬಂಧಿಸಿದ ಶೃಂಖಲೆಯನ್ನು ಬಿಟ್ಟು ಬೇರೆ ವಿಷಯಗಳಲ್ಲಿ ಸಂಪೂರ್ಣ ಹಕ್ಕುಳ್ಳವನಾಗಿರುತ್ತಾನೆ. ಅಂತಹವನು ಮಾಡಿಕೊಳ್ಳುವ ಕರಾರು ಕಾಯಿದೆಗೆ ವಿರುದ್ಧವಲ್ಲ. ಸ್ಟೇಟ್ ಆಫ್ ಮಹಾರಾಷ್ಟ್ರ ವಿರುದ್ಧ ಪ್ರಭಾಕರ್ (State of Maharastra V/s. Prabhakar, AIR 1966 SC 424) ಈ ಮೊಕದ್ದಮೆಯಲ್ಲಿ "ಒಬ್ಬನು ಅಪರಾಧಿಯಾದ ಮಾತ್ರಕ್ಕೆ ಪ್ರಕಟಕಾರನ ಜೊತೆ ಕರಾರು ಮಾಡಿಕೊಳ್ಳುವ ಹಕ್ಕು ಕಳೆದುಕೊಳ್ಳುವುದಿಲ್ಲ" ಎಂದು ಸರ್ವೋಚ್ಚ ನ್ಯಾಯಾಲಯವು ದೃಢೀಕರಿಸಿತು. ಭಾರತದ ಸಂವಿಧಾನದ ೨೧ನೇ ವರ್ಗದಂತೆ, ಪ್ರತಿ ಪ್ರಜೆಯ ಪೌರ ಮತ್ತು ವೈಯಕ್ತಿಕ ಹಕ್ಕು ಬಹಳ ಮೇಲ್ಮಟ್ಟದ್ದು. ಒಬ್ಬ ಅಪ್ರಾಪ್ತ ವಯಸ್ಕನಿಗೆ ಕರಾರು ಕಾನೂನಿನ ಸಂರಕ್ಷಕ ಛತ್ರಿಯನ್ನು ಎತ್ತಿ ಹಿಡಿದಿರುವುದನ್ನು ಗಮನಿಸಿದ್ದೇವೆ. ಆದರೆ ಬಹಳ ವಯಸ್ಸಾದವರ ಸ್ಥಾನವೇನು ? ಈಗಿನ ಕಾನೂನಿನ ಪ್ರಕಾರ ಬಹಳ ವಯಸ್ಸಾದವರಿಗೂ ಮತ್ತು ಅಶಕ್ತರಿಗೂ ಯಾವ ಸಂರಕ್ಷಣೆಯೂ ಇಲ್ಲ. ಏಕೆಂದರೆ ಅವರ ಆಲೋಚನಾ ಶಕ್ತಿಗೆ ಇದು ಅಡಚಣೆ ಉಂಟು ಮಾಡುವುದಿಲ್ಲ. ಆದರೆ ಇಂತಹ ಕರಾರು ಅನುಚಿತ ಪ್ರಭಾವದಿಂದಾಗಲೀ, ಇಲ್ಲವೇ ಹೆದರಿಸಿ, ಪೀಡಿಸಿ ಮಾಡಿಕೊಂಡದ್ದೇ ಆದ ಪಕ್ಷದಲ್ಲಿ ಅದು ಮಾನ್ಯವಲ್ಲ ಮತ್ತು ನ್ಯಾಯಾಲಯದಲ್ಲಿ ಈ ಕರಾರು ಅನುಚಿತ ರೀತಿಯಲ್ಲಿ ಮಾಡಿಕೊಳ್ಳಲಾಗಿದೆ ಎಂಬ ಪೂರ್ವಭಾವನೆಯನ್ನು ಎತ್ತಬಹುದು. ಒಂದು ಕರಾರು ಒಬ್ಬರ ಅಶಕ್ತತೆಯನ್ನು

ಉಪಯೋಗಿಸಿಕೊಂಡು ದುರ್ಲಾಭ ಪಡೆದುಕೊಂಡಿದೆ ಎಂಬ ರುಜುವಾತಿನ ಮೇಲೆ ಅದರ ಜಾರಿಯನ್ನು ತಪ್ಪಿಸಬಹುದು. ಅದು ಭಾರತದ ಕರಾರು ಅಧಿನಿಯಮದ 16ನೇ ವರ್ಗದಲ್ಲಿದೆ.

ಕರಾರು ಕಾನೂನಿನ ಮುಖ್ಯ ಅಂಶಗಳು

ಸಾಮಾನ್ಯವಾಗಿ ಒಂದು ಕರಾರಿನಲ್ಲಿ ಮೂರು ಅಂಶಗಳಿರುತ್ತವೆ. ಮೊದಲು ಒಂದು ವ್ಯಕ್ತಿಯು ನೀಡುವ ಸೂಚನೆ ಅಥವಾ ಪ್ರಸ್ತಾಪ (Offer); ಎರಡನೆಯದು ಮತ್ತೊಬ್ಬ ವ್ಯಕ್ತಿಯಿಂದ ಅದರ ಅಂಗೀಕಾರ (Acceptance), ಮೂರನೆಯದಾಗಿ ಎರಡೂ ಪಕ್ಷಗಳಿಗೂ ಅನ್ವಯಿಸುವ ಫಲ, ಪ್ರತಿಫಲ ಅಥವಾ ಪ್ರಯೋಜನ (Consideration). ದಿನಗಟ್ಟಲೆ ನಡೆಯುವ ಅಸಂಖ್ಯಾತ ಬಾಯಿ ಮಾತಿನ ವ್ಯವಹಾರಗಳಲ್ಲಿ ಮತ್ತು ಇನ್ನಿತರ ಸಣ್ಣ ವ್ಯವಹಾರಗಳಲ್ಲಿ ಯಾರು ಒಪ್ಪಂದದ ಬಗ್ಗೆ ಪ್ರಸ್ತಾಪ ಮಾಡಿದರು, ಯಾರು ಅಂಗೀಕರಿಸಿದರು ಎಂಬುದನ್ನು ಗುರುತಿಸುವುದಕ್ಕಾಗುವುದಿಲ್ಲ. ಹಲವಾರು ವ್ಯವಹಾರಗಳು ಅತೀ ಬೇಗ ಮುಕ್ತಾಯವಾಗಬಹುದು. ಆದರೂ ಈ ಎಲ್ಲಾ ಕರಾರುಗಳಲ್ಲಿ ಮೇಲೆ ಹೇಳಿದ ಮೂರು ಅಂಶಗಳು ಇದ್ದೇ ಇರುತ್ತವೆಂಬುದು ಗಮನಾರ್ಹ. ಈ ಅಂಶಗಳು ಪ್ರತಿ ಕರಾರಿನಲ್ಲಿ ಅಡಕವಾಗಿದ್ದು ಅತ್ಯಾವಶ್ಯಕಗಳಾಗಿರುತ್ತವೆ. ಇಂತಹ ಕರಾರುಗಳಿಗೆ ಸಂಬಂಧಪಟ್ಟ ವಿವಾದಗಳು ಉದ್ಭವಿಸಿದಾಗ ಹಲವು ಅಂಶಗಳು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ನಿಗದಿ ಮಾಡುತ್ತವೆ ಮತ್ತು ನ್ಯಾಯಾಲಯವು ನ್ಯಾಯ ವಿತರಣೆ ಮಾಡಲು ಸಹಾಯಕವಾಗಿರುತ್ತದೆ. ಆದ್ದರಿಂದ ಈ ಅಂಶಗಳನ್ನು ಗುರುತಿಸುವುದು ಆವಶ್ಯಕ.

ಕರಾರಿನ ಮೊದಲ ಘಟಕ

ಕರಾರಿನ ಮೊದಲನೆಯ ಘಟಕವು ಒಬ್ಬರು ಇನ್ನೊಬ್ಬರಿಗೆ ಮಾಡುವ ಸೂಚನೆ ಅಥವಾ ಪ್ರಸ್ತಾಪ. ಇದರಲ್ಲಿ ಭಂಗ ಉಂಟಾದರೆ ಅದನ್ನು ಸರಿ ಮಾಡಲು ನ್ಯಾಯಾಲಯಗಳು ಪ್ರವೇಶಿಸುತ್ತವೆಯೇ ? ನ್ಯಾಯಾಲಯವು ಮೊದಲು ನೋಡುವುದು ಇಂತಹ ಉಲ್ಲಂಘನೆಯಲ್ಲಿ ಕಾನೂನು ಪರಿಣಾಮಗಳು ಮುಂಬರುತ್ತವೆಯೇ ಎಂದು. ದಿನನಿತ್ಯದಲ್ಲಿ ಬೇಕಾದಷ್ಟು ಪ್ರಸ್ತಾಪಗಳನ್ನು ಅನೇಕರು ಮಾಡುತ್ತಿರುತ್ತಾರೆ ಮತ್ತು ಅಂಗೀಕರಿಸುತ್ತಿರುತ್ತಾರೆ. ಊಟಕ್ಕೆ ಕರೆಯುವುದೂ ಒಂದು ಪ್ರಸ್ತಾಪವೇ. ಇಂತಹ ವಿಷಯಗಳನ್ನು "ನ್ಯಾಯಾಲಯ ವಿಚಾರಣಾ ಯೋಗ್ಯ"ಎಂದು ಪರಿಗಣಿಸಿದರೆ ಜನಗಳ ಜೀವನದಲ್ಲಿ ಅಸಹನೀಯ ಅತಿಕ್ರಮ ಪ್ರವೇಶವಾಗುತ್ತದೆ.

ಈ ಸಂದರ್ಭದಲ್ಲಿ ಇಂಗ್ಲೆಂಡಿನ ನ್ಯಾಯಾಲಯವು ನಿರ್ಧರಿಸಿರುವ ಒಂದು ಮೊಕದ್ದಮೆಯ ವಿಚಾರವನ್ನು ಪರಿಶೀಲಿಸೋಣ. ಬಾಲ್ಫರ್ ವಿರುದ್ಧ ಬಾಲ್ಫರ್

(Balfour V/s. Balfour (1919) 2 KB 571). ಇದರಲ್ಲಿ ಬಾಲ್ಫರ್ ಎಂಬ ಪತಿಯು ತಾತ್ಕಾಲಿಕವಾಗಿ ಬೇರೆಯಾಗಿ ವಾಸಮಾಡುತ್ತಿರುವ ತನ್ನ ಪತ್ನಿಗೆ ತಿಂಗಳಿಗೆ ಮೂವತ್ತು ಪೌಂಡು ಜೀವನಾಂಶ ಕೊಡಲು ವಾಗ್ದಾನ ಮಾಡಿದ್ದನು. ಸ್ವಲ್ಪ ಕಾಲದ ನಂತರ ಅವರು ಪ್ರತ್ಯೇಕವಾದರು. ಹಳೆಯ ಪ್ರಸ್ತಾಪದ ಪ್ರಕಾರ ಹೆಂಡತಿಯು ತನಗೆ ಬರಬೇಕಾದ ಜೀವನಾಂಶವನ್ನು ಕೇಳಿದಳು. ಆ ಹಣವು ಪಡೆಯಲಾಗಲಿಲ್ಲ ವಾದ್ದರಿಂದ ವಾಗ್ದಾನ ಉಲ್ಲಂಘನೆಯಾಗಿದೆ ಎಂದು ಆಪಾದಿಸಿ, ಹಣಕ್ಕಾಗಿ ನ್ಯಾಯಾಲಯದ ಮೊರೆಹೊಕ್ಕಳು. ನ್ಯಾಯಾಲಯ ಈ ವಾದವನ್ನು ಒಪ್ಪಲಿಲ್ಲ. ವಾಗ್ದಾನ ಮಾಡಿದ ಸಮಯದಲ್ಲಿ ಅದು ಕೇವಲ ಗೃಹಕೃತ್ಯದ ಒಪ್ಪಂದವಾಗಿದ್ದು, ಕಾನೂನು ಸಮ್ಮತ ಕರಾರು ಆಗಿರಲಿಲ್ಲ ಎಂದು ಹೇಳಿತು. ಜೀವನಾಂಶವನ್ನು ಕೇಳಬೇಕಿದ್ದರೆ ಅದಕ್ಕೆ ಹೆಂಡತಿಯು ಹಕ್ಕುಳ್ಳವಳೆಂದು ಪ್ರತ್ಯೇಕವಾಗಿ ರುಜುವಾತು ಮಾಡಬೇಕೆಂದು ಹೇಳಿತು. ಆದ್ದರಿಂದ ಎಲ್ಲಾ ಒಪ್ಪಂದಗಳ ಪ್ರಸ್ತಾಪಗಳೂ ಕಾನೂನು ದೃಷ್ಟಿಯಲ್ಲಿ ಕರಾರುಗಳಲ್ಲ ಎಂಬುದನ್ನು ಗಮನಿಸಬೇಕು. ಇದನ್ನು ಕರಾರು ಕಾನೂನಿನ ವರ್ಗ 2 (ಎಚ್)ನಲ್ಲಿ ಹೇಳಿದೆ. ಇದರ ಪ್ರಕಾರ ಕಾನೂನು ಜಾರಿಗೊಳಿಸಬೇಕಾದ ಒಪ್ಪಂದವೇ ಕರಾರು.

ಇದೇ ತತ್ವವನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಬನ್ವಾರಿಲಾಲ್ ವಿರುದ್ಧ ಶುಕದರ್ಶನ್ (Banwarilal V/s. Shukhadarshan Dayal (1973) 1 SCC 294) ಇವರ ನಡುವಿನ ಮೊಕದ್ದಮೆಯಲ್ಲಿ ಸಮರ್ಥಿಸಿತು. ಇದರ ಸಂದರ್ಭ ಹೀಗಿದೆ : ಒಂದು ಕಟ್ಟಡದ ಬಡಾವಣೆಯ ರೂಪರೇಖೆಯನ್ನು ರಚಿಸಲಾಗಿದ್ದು, ನಿವೇಶನಕ್ಕಾಗಿ ಜಾಗಗಳನ್ನು ಹರಾಜು ಹಾಕಲಾಗುತ್ತಿತ್ತು. ಖರೀದಿಕಾರರನ್ನು ಹರಾಜಿನಲ್ಲಿ ಭಾಗವಹಿಸುವಂತೆ ಮನವೊಲಿಸಲು ಮಾರಾಟ ಗಾರರು ಭೂಮಿಯ ಒಂದು ಭಾಗವನ್ನು ಧರ್ಮಶಾಲೆಗೆ ಮೀಸಲಿಡುವುದಾಗಿ ಘೋಷಿಸುತ್ತಿದ್ದರು. ಎಲ್ಲಾ ಸೈಟುಗಳು ವಿಲೇವಾರಿ ಆದ ನಂತರ ಮಾರಾಟಗಾರರು ಆ ಧರ್ಮಶಾಲೆಗೆಂದು ಹೇಳಿದ ಜಾಗವನ್ನೂ ಸಹ ಮಾರಿದರು. ಬೇರೆ ನಿವೇಶನಗಳನ್ನು ಖರೀದಿಸಿದವರು ಮಾರಾಟವನ್ನು ತಪ್ಪಿಸಲು ಬಯಸಿದರು. ಆದರೆ ಅದು ವ್ಯರ್ಥವಾಯಿತು. ಏಕೆಂದರೆ ಅದು ಬಂಧನಕಾರಿ ವಾಗ್ದಾನವಾಗಿರಲಿಲ್ಲ. ನ್ಯಾಯಮೂರ್ತಿ ಚಂದ್ರಚೂಡ್‌ರವರು, ಧರ್ಮಶಾಲೆಗೆ ಜಾಗವನ್ನು ಮೀಸಲಾಗಿಡುವೆವು ಎಂಬ ವಾಗ್ದಾನವನ್ನು ಹರಾಜು ಪ್ರೋತ್ಸಾಹಿಸಲು ಏರ್ಪಡಿಸಿದ ಧ್ವನಿವರ್ಧಕದ ಮುಂದೆ ಮಾತ್ರ ಮಾಡಲಾಗಿದೆ. "**ಧ್ವನಿವರ್ಧಕದಲ್ಲಿ ಮಾಡಲಾದ ವಾಗ್ದಾನವು ರಾಜಕೀಯದಲ್ಲಿ ಪದೇ ಪದೇ ಮಾಡಲಾದ ಹೆಗ್ಗಳಿಕೆ ಗಳಿಸುವ ಯುಕ್ತಿ**" ಎಂದು ವ್ಯಂಗ್ಯವಾಗಿ ಘೋಷಿ ಸಿದರು.

ಮುಂದಿನ ಮುಖ್ಯ ಅಂಶವೆಂದರೆ, ಪ್ರಸ್ತಾಪ ನೀಡುವಿಕೆಯು ಖಚಿತ ಅಥವಾ ನಿಶ್ಚಿತವಾಗಿರಬೇಕು. ಉದಾ : ಒಂದು ಗುತ್ತಿಗೆ ಪತ್ರದಲ್ಲಿ ಪಕ್ಷಗಳು ಅವಧಿಯ

ಅಂತ್ಯದಲ್ಲಿ ಬೇಕಾದರೆ ಗೇಣಿಯನ್ನು ಮತ್ತಷ್ಟು ಹೆಚ್ಚಿಗೆ ಅವಧಿಗೆ ವ್ಯಾಪಿಸಲಾ ಗುವುದು ಎಂಬ ಒಂದು ಖಂಡವನ್ನು ಸೇರಿಸಿದರೆ ಅದು ಅನಿರ್ದಿಷ್ಟ ಪ್ರಸ್ತಾಪದ ಉದಾಹರಣೆಯಾಗುವುದು. ಮುಂದೆ ಒಪ್ಪಂದ ಮಾಡಿಕೊಳ್ಳೋಣ ಎಂದರೂ ಅದು ಕರಾರಾಗುವುದಿಲ್ಲ.

ಯಾರು ಪ್ರಸ್ತಾಪ ಮಾಡಿದರು ? ಯಾರು ಅಂಗೀಕಾರ ಮಾಡಿದರು ? ಎಂಬ ಪ್ರಶ್ನೆಯು ಬಹಳ ಮುಖ್ಯವಾದ ವಿಷಯ. ಏಕೆಂದರೆ ಒಂದು ಕರಾರು ಅಂಗೀಕಾರ ವಾದ ಮೇಲೆ ಮಾತ್ರ ಪೂರ್ಣವಾಗುತ್ತದೆ; ಮತ್ತು ಪ್ರಸ್ತಾಪವನ್ನು ಹಿಂದಕ್ಕೆ ತೆಗೆದುಕೊಳ್ಳುವ ಹಕ್ಕು ಇದರ ಮೇಲೆ ಅವಲಂಬಿಸಿರುತ್ತದೆ. ಆದುದರಿಂದಲೇ ಬಹಳ ಜನರು ನಾವು ಪ್ರಸ್ತಾಪವನ್ನು ಯಾವಾಗಲೂ ಮಾಡಲೇ ಇಲ್ಲ, ಬರೀ ಪ್ರಸ್ತಾಪಗಳನ್ನು ಮಿಕ್ಕವರಿಂದ ಆಹ್ವಾನಿಸುತ್ತಿದ್ದೆವು ಎಂದು ಹೇಳುತ್ತಾರೆ. ಇದನ್ನು ಸ್ವತ್ತಿನ ಮಾರಾಟದ ಬಗ್ಗೆ ಮಾರಾಟಗಾರರು ವೃತ್ತಪತ್ರಿಕೆಯ ಜಾಹಿರಾತಿನಲ್ಲಿ ಉಪಯೋಗಿಸುವ ಮಾತುಗಳಲ್ಲಿ ಕಾಣಬಹುದು (ಉದಾ : Offers are invited).

ಇನ್ನೊಂದು ನಿದರ್ಶನ, ಸಾಮಾನ್ಯವಾಗಿ ಅಂಗಡಿಯಲ್ಲಿ ಪ್ರದರ್ಶನಕ್ಕಿಟ್ಟ ಸರಕುಗಳ ಸಂಬಂಧದಲ್ಲಿ ಒಂದು ಸಮಸ್ಯೆ ಉದ್ಭವಿಸುತ್ತದೆ. ವ್ಯಾಪಾರಿಯು ಆ ಸರಕುಗಳನ್ನು ಮಾರಾಟಕ್ಕೆ ಪ್ರದರ್ಶಿಸುತ್ತಿಲ್ಲವೇ ? ಒಬ್ಬ ಕೊಳ್ಳುವವನು ಒಂದು ವಸ್ತುವನ್ನು ತೋರಿಸಿ ಅದನ್ನು ತನಗೇ ಮಾರಬೇಕೆಂದು ಒತ್ತಾಯ ಮಾಡಬಹುದೇ? ಇದೇ ಈ ಸಮಸ್ಯೆ. ಇದರ ಬಗ್ಗೆ ಇಂಗ್ಲೆಂಡಿನ ಉಚ್ಚನ್ಯಾಯಾಲಯದ ಒಂದು ತೀರ್ಪು ಇದೆ. ಫಾರ್ಮಾಸ್ಯೂಟಿಕಲ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ವಿರುದ್ಧ ಬೂಟ್ಸ್ ಕ್ಯಾಷ್ ಕೆಮಿಸ್ಟ್ಸ್ ಲಿಮಿಟೆಡ್ (Pharmaceutical Society of Great Britain V/s. Boots Cash Chemists Ltd., (1953) 1 QB 401) ಈ ಮೊಕದ್ದಮೆಯಲ್ಲಿ "ಅಂತಹ ಪ್ರದರ್ಶನವು ಬರೀ ಪ್ರಸ್ತಾಪಕ್ಕೆ ಕೋರಿಕೆ (Invitation to offer). ಮಾರಾಟಗಾರನು ನಂತರ ಅಂಗೀಕಾರ ಮಾಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾನೆ. ಅವನು ಗಿರಾಕಿಗಳನ್ನು ಪ್ರಸ್ತಾಪ ಮಾಡಲು ಮಾತ್ರ ಆಹ್ವಾನಿಸುತ್ತಾನೆ. ಅಂತಹ ಪ್ರಸ್ತಾಪವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ವಿಶೇಷಾಧಿಕಾರವನ್ನು ವ್ಯಾಪಾರಿಯು ಹೊಂದಿರುವನು" ಎಂದು ನಿರ್ಧರಿಸಲಾಗಿದೆ. ರಾಜ್ಯದ ನೆರವು ಪಡೆದಿರುವ ಬ್ಯಾಂಕ್ ಆಫ್ ಟ್ರಾವಂಕೂರ್ ವಿರುದ್ಧ ಧ್ರಿಡ್ (State Aided Bank of Travancore V/s. Dhrid, AIR 1942 PC 6) ನಲ್ಲಿ ಬ್ಯಾಂಕರನು ಪ್ರದರ್ಶಿಸುವ ಶುಲ್ಕಗಳ ಪಟ್ಟಿಯು ಪ್ರಸ್ತಾಪವಲ್ಲ ಎಂದು ಪ್ರೀವಿ ಕೌನ್ಸಿಲ್ ತೀರ್ಮಾನಿಸಿತು. ಕರಾರನ್ನು ರದ್ದುಗೊಳಿಸಲು ಅಪೇಕ್ಷಿಸುವ ಪಕ್ಷಗಳು ಅವರ ಪ್ರಸ್ತಾಪವನ್ನು ಬರೀ ಕೋರಿಕೆಯ ಪ್ರಸ್ತಾಪ ಎಂದು ಹೇಳಲು ಕಾತರರಾಗಿರುತ್ತಾರೆ ಎಂಬುದು ಸ್ಪಷ್ಟವಾಗಿದೆ.

ಆದರೆ ಇದರ ಬಗ್ಗೆ ಶಾಸನಬದ್ಧವಾಗಿ ನಿರೂಪಣೆ ಇಲ್ಲದೆ ನ್ಯಾಯಾಲಯಗಳ ವ್ಯಾಖ್ಯೆ ಮಾತ್ರ ಇದೆ. ಆದುದರಿಂದ ಪ್ರಸ್ತಾಪ ಮತ್ತು ಎದುರು ಪ್ರಸ್ತಾಪದ ಬಗ್ಗೆ ವ್ಯಾಜ್ಯಕ್ಕೆ ಸಾಕಷ್ಟು ಎಡೆ ಮಾಡಿಕೊಟ್ಟಿದೆ.

ಪ್ರಸ್ತಾಪದ ವಿಷಯದಲ್ಲಿಯ ಮತ್ತೊಂದು ಮುಖ್ಯ ಅಂಶವನ್ನು ಗಮನಿಸಬೇಕು. ಸಾಮಾನ್ಯವಾಗಿ ಹೇಳುವುದಾದರೆ, ಒಂದು ಕರಾರು ಮನಸ್ಸುಗಳ ಮಿಲನ ವನ್ನು ಒಳಗೊಳ್ಳುತ್ತದೆ. ಇದನ್ನು "ಏಕರೀತಿಯ ಸಮ್ಮತಿ" (Consensus-ad-idem) ಎನ್ನಬಹುದು. ಕಾರ್ಲಿಲ್ ವಿರುದ್ಧ ಕಾರ್ಬಾಲಿಕ್ ಸ್ಮೋಕ್‌ಬಾಲ್ ಕಂಪನಿ (Carlill V/s. Carbolic Smoke ball co., (1892) 20B 484) ಮೊಕದ್ದಮೆಯಲ್ಲಿ ಒಂದು ಪ್ರಸ್ತಾಪವನ್ನು ನಿರ್ದಿಷ್ಟ ವ್ಯಕ್ತಿ ಅಥವಾ ಜನ ಸಮೂಹಕ್ಕೆ ಮಾಡಬಹುದೇ ಅಥವಾ ಇಡೀ ವಿಶ್ವಕ್ಕೆ ಪ್ರಸಾರಣ ಮಾಡಬಹುದೇ ಎಂಬ ಅಂಶವು ಉದ್ಭವಿಸಿತು. ವಿಷಮ ಶೀತಜ್ವರಕ್ಕೆ ಔಷಧಿಯನ್ನು ತಯಾರಿಸುವ ಒಂದು ಕಂಪನಿಯು ಜಾಹಿರಾತುಪಡಿಸಿದ ಔಷಧಿಯನ್ನು ಉಪಯೋಗಿಸಿದ ಯಾವುದೇ ವ್ಯಕ್ತಿ ಔಷಧಿಯನ್ನು ಉಪಯೋಗಿಸಿದ ಮೇಲೆ ಅದೇ ಖಾಯಿಲೆ ಬಂದರೆ ಅವನಿಗೆ ೧೦೦ ಪೌಂಡುಗಳನ್ನು ಕೊಡುವುದಾಗಿ ಜಾಹಿರಾತು ಮಾಡಿತು. ಆ ಜಾಹಿರಾತುಪಡಿಸಿದ ಔಷಧಿಯನ್ನು ಉಪಯೋಗಿಸಿದರೂ ಸಹ ಖಾಯಿಲೆ ಬಂದ ಒಬ್ಬ ಮಹಿಳೆಯು ಕಂಪನಿಯು ಮಾಡಿದ ಪ್ರಸ್ತಾಪದ ಮೇಲೆ ದಾವೆ ಹೂಡಿದಳು. ಆಗ ಕಂಪನಿಯು "ಯಾರ ಇರುವಿಕೆಯು ತಮಗೆ ಗೊತ್ತೇ ಇಲ್ಲವೋ, ಅಂತಹ ವಾದಿಗೆ ನಾವು ಪ್ರಸ್ತಾಪ ಮಾಡಿಯೇ ಇಲ್ಲ, ಮಾಡಲು ಸಾಧ್ಯವೂ ಇಲ್ಲ" ಎಂದು ಹೇಳಿತು. ಇದಕ್ಕೆ ನ್ಯಾಯಾಲಯದ ಉತ್ತರ : "ಪೂರ್ತಿ ಪ್ರಪಂಚಕ್ಕೆ ಒಂದು ಪ್ರಸ್ತಾಪವನ್ನು ಏಕೆ ಮಾಡಬಾರದು ? ಆ ಪ್ರಸ್ತಾಪವನ್ನು ಆಧರಿಸಿ ಯಾರು ಮುಂದೆ ಬರುತ್ತಾರೋ ಅವರಲ್ಲಿ ಅದು ಕರಾರಾಗಿ ಏಕೆ ಮಾರ್ಪಾಟಾಗಬಾರದು ? ಎನ್ನುವ ವಿಚಾರಧಾರೆಯನ್ನು ಮುಂದಿಟ್ಟುಕೊಂಡು ಷರತ್ತನ್ನು ಹಿಂತೆಗೆದುಕೊಳ್ಳುವ ಮುಂದೆ ಯಾರಾದರೊಬ್ಬರು ಪ್ರಸ್ತಾಪವನ್ನು ಪೂರ್ಣಗೊಳಿಸಿದರೆ ಅದನ್ನು ಮಾನ್ಯ ಕರಾರೆಂದು ಏಕೆ ಪರಿಗಣಿಸಬಾರದು ? ಆ ಪ್ರಸ್ತಾಪವನ್ನು ಇಡೀ ಪ್ರಪಂಚಕ್ಕೆ ಮಾಡಿದ್ದರೂ ಸಹ ಯಾವ ಜನರು ಆ ಜಾಹಿರಾತಿನ ಮೇಲೆ ವಿಶ್ವಾಸವಿಟ್ಟು ಅದರಲ್ಲಿ ಸೂಚಿಸಿರುವ ಷರತ್ತುಗಳನ್ನು ನೆರವೇರಿಸುವರೋ ಅಂತಹವರಿಗೆ ಅದು ಒಂದು ಮಾನ್ಯ ಕರಾರು ಆಗುತ್ತದೆ. ಆದ್ದರಿಂದ ಒಂದು ಸರ್ವೇ ಸಾಮಾನ್ಯ ಪ್ರಸ್ತಾಪವನ್ನು ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಮಾಡದಿದ್ದರೂ ಸಹ ಅದು ಮಾನ್ಯ ಮತ್ತು ಬಂಧನಕಾರಿ" ಎಂದು ತೀರ್ಮಾನಿಸಲಾಯಿತು.

ಇದನ್ನೇ ಅನುಸರಿಸಿ ಅಲಹಾಬಾದ್ ಉಚ್ಚನ್ಯಾಯಾಲಯವು ಕೂಡ ಹರ್‌ಭಜನ್‌ಲಾಲ್ ವಿರುದ್ಧ ಹರ್‌ಚರಣ್‌ಲಾಲ್ (Har Bhajan Lal V/s.

Harcharan Lal, AIR 1925 ALL 539) ನಲ್ಲಿ ಒಂದು ತಪ್ಪಿಸಿಕೊಂಡ ವ್ಯಕ್ತಿಯ ಪತ್ತೆ ಮಾಡಿದರೆ ಪ್ರತಿಫಲವನ್ನು ಕೊಡುವುದಾಗಿ ಕೇಳಿದ ಒಂದು ಕರಪತ್ರದ ಆಧಾರದ ಮೇಲೆ ಪ್ರತಿಫಲವನ್ನು ಕೇಳಬಹುದು ಎಂದು ತೀರ್ಮಾನಿಸಿತು.

ಒಂದು ಪ್ರಸ್ತಾಪವನ್ನು ಅಂಗೀಕಾರ ಮಾಡುವ ವಿಧಾನವು ಪ್ರಸ್ತಾಪದಲ್ಲೇ ಸೂಚಿಸಿರುವ ವರ್ತನೆ ಅಥವಾ ನೆರವೇರಿಕೆಯನ್ನು ಅವಲಂಬಿಸಿರಬಹುದು. ಇಂತಹ ಸಂದರ್ಭದಲ್ಲಿ ಅಂಗೀಕಾರವನ್ನು ತಿಳಿಯಪಡಿಸುವ ಅವಶ್ಯಕತೆಯಿಲ್ಲ.

ಪ್ರಸ್ತಾಪದ ಅಂಗೀಕಾರ

ಮೇಲ್ಕಂಡಂತೆ ಒಂದು ಕರಾರಿನ ಮುಖ್ಯ ಭಾಗಗಳು ಒಬ್ಬರು ಮಾಡುವ ಪ್ರಸ್ತಾಪ. ಎರಡನೆಯವರಿಂದ ಇದರ ಅಂಗೀಕಾರ. ಈ ಅಂಗೀಕಾರವು ಕಾನೂನಿನ ಮಾನ್ಯತೆ ಪಡೆಯುವಂತೆ ಮಾಡಲು ಕೆಲವು ಮುಖ್ಯ ಅಂಶಗಳನ್ನು ಗಮನಿಸಬೇಕು. ಪ್ರಸ್ತಾಪವನ್ನು ಅಂಗೀಕರಿಸುವಾಗ ಯಾವ ಬಗೆಯ ಎದುರು ಷರತ್ತುಗಳನ್ನೂ ಹಾಕಬಾರದು. ಕರಾರು ಕಾನೂನಿನ ೨ (ಬಿ) ಹೇಳುವಂತೆ ಈ ಅಂಗೀಕಾರವನ್ನು ತಿಳಿಸುವಾಗ ಒಂದು ಎದುರು ಪ್ರಸ್ತಾಪವನ್ನು ಇಲ್ಲವೇ ಬೇರೆ ಷರತ್ತನ್ನು ಮುಂದಿಟ್ಟರೆ ಅದು ಅಂಗೀಕಾರವಾಗುವುದಿಲ್ಲ. ಆದುದರಿಂದಲೇ ಕರಾರು ಕಾನೂನಿನ ೭ ನೇ ವರ್ಗದಂತೆ ಈ ಒಪ್ಪಿಗೆ ಪ್ರಸ್ತಾಪಕ್ಕೆ ಸಂಪೂರ್ಣ ಅನುಗುಣವಾಗಿರಬೇಕೆಂದು ನಿಗದಿಪಡಿಸುತ್ತದೆ. ಈ ಅಂಗೀಕಾರಕ್ಕೆ ಒಂದು ಕಾಲನಿಯಮವನ್ನು ನಿಗದಿ ಪಡಿಸಿದಲ್ಲಿ ಈ ಅವಧಿಯು ಮುಕ್ತಾಯವಾಗುವುದರೊಳಗೆ ಪ್ರಸ್ತಾಪವನ್ನು ಅಂಗೀಕರಿಸಿ ಅದನ್ನು ಪ್ರಸ್ತಾಪಿಸಿದವನಿಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ಕರಾರು ರದ್ದಾಗುತ್ತದೆ. ಪ್ರಸ್ತಾಪಿಸಿದವನ ಮನೋವಿಕಲತೆ, ಮರಣ ಇವುಗಳಿಗೆ ಮುಂಚೆಯೇ ಅವನಿಗೆ ಅಂಗೀಕಾರವನ್ನು ಸೂಚಿಸದಿದ್ದಲ್ಲಿ ಕರಾರು ಜಾರಿಗೆ ಬರುವುದಿಲ್ಲ. ಕರಾರಿನ ಕೆಲವು ನಿಬಂಧನೆಗಳನ್ನು ಯಾವುದೋ ಬೇರೆ ಕೆಲಸವನ್ನು ಮಾಡುವಾಗ ನೇರವೇರಿಸಿದರೆ ಅದನ್ನು ಕರಾರಿಗೆ ಸಂಬಂಧಪಟ್ಟ ಕಾರ್ಯವೆಂದು ಪರಿಗಣಿಸಬಹುದೇ ? ಇಂತಹದೇ ಒಂದು ಸಮಸ್ಯೆಯನ್ನು ಕಾರ್ಲಿಲ್ ಮೊಕದ್ದಮೆಯಲ್ಲಿ ನ್ಯಾಯಾಲಯವು ನಿರ್ಧರಿಸಿದೆ. ವಿಷಮಶೀತ ಜ್ವರ ಬಂದ ಮಹಿಳೆಯು ಜಾಹಿರಾತಿನಲ್ಲಿ ಬಂದ ಷರತ್ತನ್ನು ಒಪ್ಪಿ ಕಂಪನಿಗೆ ತಿಳಿಸಿರಲಿಲ್ಲ. ಆದರೂ ಆ ಒಂದು ಷರತ್ತನ್ನು ಆಕೆಯು ನೆರವೇರಿಸಿದ್ದರಿಂದ ಮತ್ತೆ ಬೇರೆ ಅಂಗೀಕಾರದ ಅವಶ್ಯಕತೆ ಇರಲಿಲ್ಲ. ಅಂತಹ ವಿಷಯಗಳಲ್ಲಿ ಅಂಗೀಕಾರ ಮತ್ತು ಅದರ ತಿಳಿಸುವಿಕೆ ಅನಾವಶ್ಯಕ. ಇದೇ ವಿಷಯದಲ್ಲಿ ಇನ್ನೊಂದು ಮೊಕದ್ದಮೆಯ ತೀರ್ಪನ್ನು ಅರ್ಥಮಾಡಿಕೊಳ್ಳುವುದು ಆವಶ್ಯಕ. ಇದು ಲಾಲ್‌ಮನ್ ವಿರುದ್ಧ ಗೌರೀದತ್ (Lalman Vs. Gouridutt, 1913, 11 All LJ 489) ಇವರ ನಡುವೆ ಎದ್ದ ವಿವಾದ.

ಗೌರೀದತ್ತರ ಮನೆಯಲ್ಲಿದ್ದ ಅವರ ಸೋದರಳಿಯನು ಕಾಣೆಯಾಗಿದ್ದನು. ಅವನನ್ನು ಹುಡುಕಲು ತನ್ನ ಸೇವಕನಾದ ಲಾಲ್‌ಮನ್‌ನನ್ನು ಕಳುಹಿಸಿದ್ದರು. ಲಾಲ್‌ಮನ್ ಹೊರಟುಹೋದ ಮೇಲೆ ಒಂದು ಜಾಹಿರಾತನ್ನು ಕೊಡಲಾಯಿತು. ಅದರಲ್ಲಿ ಯಾರು ಆ ಹುಡುಗನನ್ನು ಪತ್ತೆ ಹಚ್ಚಿ ತರುವರೋ ಅವರಿಗೆ ೫೦೧ ರೂಪಾಯಿಗಳ ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದರು. ಈ ಮಧ್ಯೆ ನೌಕರನು ಆ ಹುಡುಗನನ್ನು ಪತ್ತೆ ಮಾಡಿ ತಂದನು. ಅವನಿಗೆ ಸಂಭಾವನೆಯ ಪ್ರಸ್ತಾಪದ ವಿಷಯದ ಅರಿವೇ ಇರಲಿಲ್ಲ. ಆದರೂ ಆ ಸಂಭಾವನೆಯನ್ನು ತೆಗೆದುಕೊಳ್ಳಲು ನ್ಯಾಯಾಲಯದಲ್ಲಿ ದಾವೆಹೂಡಿದನು. ಇದನ್ನು ನ್ಯಾಯಾಲಯವು ತಿರಸ್ಕರಿಸಿತು. "ಇಂತಹ ಸನ್ನಿವೇಶಗಳಲ್ಲಿ ನ್ಯಾಯಬದ್ಧವಾದ ಕರಾರು ಇರಲು ಸಾಧ್ಯವೇ ಇಲ್ಲ. ಒಬ್ಬ ವ್ಯಕ್ತಿಗೆ ಪ್ರಸ್ತಾಪದ ಬಗ್ಗೆ ಅರಿವೇ ಇಲ್ಲದಾಗ ಇದರ ಅಂಗೀಕಾರ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ, ಎಂದು ಭಾವಿಸಬೇಕಾಗುತ್ತದೆ" ಎಂದು ತೀರ್ಮಾನಿಸಿತು.

ದರಖಾಸ್ತು ಮತ್ತು ಕರಾರುಗಳ ನಿಗದಿತ ನಮೂನೆ
(Tenders and Standard Form Contracts)

ಸರ್ಕಾರವೇ ಆಗಲಿ, ದೊಡ್ಡ ದೊಡ್ಡ ಕಂಪನಿಯೇ ಆಗಲಿ ಯಾವುದಾದರೂ ಕೆಲಸ ಮಾಡಿಸಬೇಕಾದಾಗ ದರಖಾಸ್ತನ್ನು ಕರೆಯುವುದು ಸರ್ವೇಸಾಧಾರಣ. ಈ ಆಹ್ವಾನವು ಒಂದು ಪ್ರಸ್ತಾಪ ಸೂಚನೆಗೆ ಸಮನಲ್ಲ. ಇವೆರಡನ್ನೂ ಒಂದೇ ಎಂದು ತಿಳಿದರೆ ಅದು ತಪ್ಪಾಗುತ್ತದೆ. ದರಖಾಸ್ತು ಕೇವಲ ಬೆಲೆಗಳ ಸೂಚೀಪಟ್ಟಿಗೆ ಆಹ್ವಾನ. ಈ ದರಖಾಸ್ತಿಗೆ ಬಂದ ಉತ್ತರವನ್ನು ಅನುಮೋದಿಸಿದರೆ ಆಗ ಅದು ಒಂದು ಒಪ್ಪಬಹುದಾದಂತಹ ಪ್ರಸ್ತಾಪವಾಗುತ್ತದೆ. ಆ ದರಖಾಸ್ತಿನ ಆಧಾರದ ಮೇಲೆ ಕೊಟ್ಟ ಆದೇಶವು ಒಂದು ಮಾನ್ಯ ಕರಾರಾಗಿ ಪರಿವರ್ತಿಸುತ್ತದೆ. ಈ ಆದೇಶವನ್ನು ಕೊಟ್ಟ ತಕ್ಷಣ ಮುಂದುವರಿಸಬಹುದಾದ ಕರಾರು ಉದ್ಭವಿಸುತ್ತದೆ. ಅಲ್ಲಿಯವರೆಗೆ ಯಾವ ಕರಾರೂ ಇರುವುದಿಲ್ಲ ಎಂದು ನಮ್ಮ ಸರ್ವೋಚ್ಚ ನ್ಯಾಯಾಲಯವು ಚತುರ್ಭುಜ ವಿಠ್ಠಲ್‌ದಾಸ್ ವಿರುದ್ಧ ಮೋರೇಶ್ವರ್ ಪರಶ್ರಾಂ, (Chatturbhuj Vithaldas Vs. Moreshwar Parashram, AIR 1954 SC 236) ಮೊಕದ್ದಮೆಯಲ್ಲಿ ಗಮನಿಸಿತು. ಪ್ರತ್ಯೇಕ ಆದೇಶ ಅಂಗೀಕಾರಗಳು ಒಂದು ದರಖಾಸ್ತು ಆಹ್ವಾನಕ್ಕೆ ಉತ್ತರವಾಗಿರುವುದರಿಂದ ಬರೀ ದರಖಾಸ್ತು ಒಂದು ಪ್ರಸ್ತಾಪವಲ್ಲವೇ ಅಲ್ಲ ಎಂದು ನಿರ್ಧರಿಸಿತು (Standing Offer).

ಈ ಆಧುನಿಕ ಪ್ರಪಂಚದಲ್ಲಿ ಅನೇಕ ಏಕಪಕ್ಷೀಯ ಕರಾರುಗಳನ್ನು ನೋಡುತ್ತಿದ್ದೇವೆ. ಇಂತಹ ಕರಾರುಗಳಲ್ಲಿ ಒಂದು ಪಕ್ಷದ ನಿಬಂಧನೆಗಳಿಗೆ ಇನ್ನೊಂದು

ಪಕ್ಷದವರು ಒಪ್ಪಲೇಬೇಕಾಗುತ್ತದೆ. ಇಂತಹ ಕರಾರುಗಳು ಮುದ್ರಿತವಾಗಿದ್ದು ಅನೇಕ ವರ್ಗಗಳನ್ನು ಹೊಂದಿರುತ್ತವೆ. ಇದಕ್ಕೆ ಉದಾಹರಣೆ ವಿಮಾ ಕರಾರು. ಈ ತರಹದ ಕರಾರುಗಳಲ್ಲಿ ಬಹುತೇಕ ಷರತ್ತುಗಳು ಇರುವುದನ್ನು ನಾವು ಕಂಡಿದ್ದೇವೆ. ಇಂತಹಾ ಕರಾರು ಪತ್ರವನ್ನು ಸಂಪೂರ್ಣವಾಗಿ ಓದಿ, ವಿಮರ್ಶಿಸಿ ಅಂಗೀಕಾರ ಮಾಡಲು ಅವಕಾಶವಿರುವುದಿಲ್ಲ. ಇದೇ ಬಗೆಯ ಕರಾರುಗಳನ್ನು ರೈಲ್ವೆ ರಸೀದಿ, ಬಸ್ ಮತ್ತು ರೈಲ್ವೆ ಟಿಕೆಟ್ಟುಗಳಲ್ಲಿ ಕಾಣಬಹುದು. ಇಂತಹ ಕರಾರು ಗಳಲ್ಲಿ ಅಂಗೀಕರಿಸುವವರು ಓದಿ ಅರ್ಥಮಾಡಿಕೊಳ್ಳುವುದು ತಾನೇ ಏನು ? ಈ ಬಗೆಯ ಕರಾರುಗಳನ್ನು ನ್ಯಾಯಾಲಯದ ಮುಂದೆ ಪ್ರಶ್ನಿಸಬೇಕಾಗಿ ಬಂದಾಗ ಎದುರು ಪಕ್ಷದವರಿಗೆ ಸಹಾಯ ಮಾಡಲು ತಮಗಿರುವ ಕಷ್ಟವನ್ನು ನ್ಯಾಯಾಲಯವು ವ್ಯಕ್ತಪಡಿಸಿದೆ. ಕರಾರನ್ನು ಒಪ್ಪಿ ಸಹಿ ಮಾಡಿರುವ ಅಕ್ಷರಸ್ಥರು ನಿಬಂಧನೆಗಳನ್ನು ಓದಿ ಅರ್ಥ ಮಾಡಿಕೊಂಡು ಸಹಿ ಮಾಡಲು ಬೇಕಾದ ಕಾಲವು ಅವರಿಗಿತ್ತೇ ಇಲ್ಲವೇ ? ಎಂಬುದು ಇಂತಹಾ ಮೊಕದ್ದಮೆಗಳಲ್ಲಿ ಮುಖ್ಯಾಂಶವಾಗಿರುವುದಿಲ್ಲ. ಇದೇ ಎಲ್. ಎಸ್ಟ್ರೇಂಜ್ ವಿರುದ್ಧ ಗ್ರೌಕಾಬ್ ಲಿಮಿಟೆಡ್. (L. Estrange Vs. Graucob Ltd., (1934) All ER Rep 16). ಮೊಕದ್ದಮೆಯಲ್ಲಿ ಕಾನೂನು ಅಸಹಾಯಕ ನಿಲುವು ತಾಳಿದ್ದರೂ ಅನೇಕ ವೇಳೆ ಇಂತಹ "ಏಕಪಕ್ಷೀಯ" ಕರಾರುಗಳ ಬಗ್ಗೆ ನ್ಯಾಯಾಲಯಗಳು ಅಸಹಾಯಕ ಪಕ್ಷಗಳಿಗೆ ಅನುಕೂಲ ವಾಗುವಂತಹಾ ನಿಲುವನ್ನು ತಾಳಿರುವುದಕ್ಕೆ ದೃಷ್ಟಾಂತಗಳಿವೆ.

(ಅ) ಹಂಡರ್‌ಸನ್ ಮತ್ತು ಸ್ಟೀವನ್‌ಸನ್ (Henderson Vs. Stevenson, 1975, 32 LT 709) ಇವರ ನಡುವಿನ ಮೊಕದ್ದಮೆಯಲ್ಲಿ ಒಂದು ಕಂಪನಿಯು ಅತೀ ಸಣ್ಣದಾಗಿ ಮುದ್ರಿಸಲ್ಪಟ್ಟ ಷರತ್ತುಗಳನ್ನು ಹಾಕಿದ ಟಿಕೆಟ್ಟನ್ನು ಕೊಟ್ಟಿದ್ದರಿಂದ ಸಾಮಾನು ಸರಂಜಾಮಿನ ನಷ್ಟದ ಹೊಣೆಯನ್ನು ತಪ್ಪಿಸಿಕೊಳ್ಳಲಾರದು ಎಂದು ಹೇಳಿ ಇಂಗ್ಲೆಂಡಿನ ಸರ್ವೋಚ್ಚನ್ಯಾಯಾಲಯ ಎಂದರೆ ಹೌಸ್ ಆಫ್ ಲಾರ್ಡ್ಸ್ ವಸ್ತುವಿನ (ಸಾಮಾನಿನ) ನಷ್ಟದ ದಾವೆಯನ್ನು ಪುರಸ್ಕರಿಸಿತು. ಕಂಪನಿಯು ಟಿಕೆಟ್ಟಿನ ಹಿಂದೆ ಮುದ್ರಿಸಿರುವುದನ್ನು ಗಿರಾಕಿಯು 'ಓದಲೇಬೇಕು' ಎಂದೇನೂ ಸೂಚಿಸಿಲ್ಲ. ಆದುದರಿಂದ ಗಿರಾಕಿಯು ಆ ಷರತ್ತುಗಳನ್ನು ಗಮನಿಸಿದ್ದಾನೆ ಎಂದು ಪರ್ಯಾಲೋಚಿಸ ಲಾಗುವುದಿಲ್ಲ ಎಂದು ಹೇಳಿತು.

ಆ) ನ್ಯಾಯಾಲಯಗಳು ಇನ್ನೊಂದು ನಿಯಮವನ್ನು ಮುಂದಿಟ್ಟಿವೆ. ಒಂದು ಕರಾರನ್ನು ಮಾಡಿಕೊಳ್ಳುವಾಗ ಅದರೊಡನೆ ಕೆಲವು ನಿಬಂಧನೆಗಳೂ ಇದ್ದ ಪಕ್ಷದಲ್ಲಿ ಅವೆರಡೂ ಸಮಕಾಲೀನವಾಗಿರಬೇಕು. ಬಲು ಕಟ್ಟುನಿಟ್ಟಾದ ಅರ್ಥ ವಿವರಣೆಯ ಪ್ರಕಾರ ಒಂದು ಕರಾರು ಮತ್ತು ನಿಬಂಧನೆಗಳು ಸಮಕಾಲೀನವಾಗಿ ಇರಲೇಬೇಕು ಎಂದು ಕಾಯಿದೆಯಲ್ಲಿ ಎಲ್ಲೂ ಹೇಳಿಲ್ಲ. ನ್ಯಾಯಾಲಯವು ಇಂತಹ

ಅರ್ಥ ವಿವರಣೆಗೆ ವಿನಾಯಿತಿ ಕೊಟ್ಟು, ಅಸಹಾಯಕ ಪಕ್ಷಕ್ಕೆ ಸಹಾಯವಾಗುವಂತೆ ತೀರ್ಮಾನಿಸಿದ್ದಾರೆ. ಆಲಿ ವಿರುದ್ಧ ಮಾರ್ಲ್ ಬರೋ ಲಿಮಿಟೆಡ್ (Olley Vs. Marlborough Court Ltd., (1949) 1 KB 532) ಮೊಕದ್ದಮೆಯು ಇದಕ್ಕೆ ಒಂದು ದೃಷ್ಟಾಂತ. ವಾದಿಯು ಒಂದು ಹೋಟೆಲಿನಲ್ಲಿ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಒಂದು ವಾರದ ಬಾಡಿಗೆಯನ್ನು ಮುಂಗಡವಾಗಿ ಪಾವತಿ ಮಾಡಿದನು. ಕೊಠಡಿಯಲ್ಲಿ ವಾಸಮಾಡುತ್ತಿರುವಾಗ ಆ ಹೋಟೆಲ್ ಸಿಬ್ಬಂದಿಗಳ ನಿರ್ಲಕ್ಷ್ಯದಿಂದ ಆತನ ಕೆಲವು ಸ್ವತ್ತು ಕಳ್ಳತನವಾಯಿತು. ಇದನ್ನು ಪಡೆಯಲು ವಾದಿಯು ದಾವೆ ಹೂಡಬೇಕಾಯಿತು. ವ್ಯವಸ್ಥಾಪಕರು ಈ ನಷ್ಟಕ್ಕೂ ತಮಗೂ ಸಂಬಂಧವಿಲ್ಲ ಎಂದು ಹೇಳಿ ಕೊಠಡಿಯಲ್ಲಿ ಪ್ರದರ್ಶಿಸಿದ್ದ ''ವ್ಯವಸ್ಥಾಪಕರು ಅಲ್ಲಿ ಆಗುವ ನಷ್ಟಕ್ಕೆ ಜವಾಬ್ದಾರರಲ್ಲ'' ಎಂಬ ನೋಟೀಸನ್ನು ನ್ಯಾಯಾಲಯದ ಗಮನಕ್ಕೆ ತಂದರು. ಈ ಸಮಯದಲ್ಲಿ ನ್ಯಾಯಾಲಯವು ನಿಬಂಧನೆಗಳ ಸೂಚನೆಯು ಕರಾರಿಗೆ ಸಮಕಾಲೀನವಾಗಿಯೇ ಇರಬೇಕು ಎಂಬುದಾಗಿ ತೀರ್ಮಾನಿಸಿತು. ಇದೇ ಸಂದರ್ಭದಲ್ಲಿ ಇನ್ನೊಂದು ಮೊಕದ್ದಮೆಯ ತೀರ್ಪನ್ನು ಇಲ್ಲಿ ನೆನೆಯಬಹುದು. ಥಾರನ್‌ಟನ್ ವಿರುದ್ಧ ಶೂಲೇನ್ ಪಾರ್ಕಿಂಗ್ ಲಿ. (Thornton Vs. Shoe Lane Parking Ltd., 1971 1 All Er 686 (CA) ಮೊಕದ್ದಮೆಯಲ್ಲಿ ಕೊಟ್ಟಿರುವ ತೀರ್ಮಾನವೇನೆಂದರೆ ಸ್ವಯಂಚಾಲಿತ ಯಂತ್ರವು ಕೊಟ್ಟ ಟಿಕೆಟ್ಟಿನಲ್ಲಿ ಇರುವ ಷರತ್ತುಗಳು ಯಾರನ್ನೂ ಬಂಧಿಸುವುದಿಲ್ಲ. ಅವನು ಹಣವನ್ನು ಯಂತ್ರದೊಳಗೆ ಹಾಕಿದ ತಕ್ಷಣ ಟಿಕೆಟ್ಟಿನಲ್ಲಿರುವ ಷರತ್ತುಗಳಿಗೆ ಬದ್ಧನಾಗಿದ್ದಾನೆ ಎಂಬುದು ನ್ಯಾಯವಲ್ಲ. ಅವನಿಗೆ ಆ ಷರತ್ತುಗಳನ್ನು ಓದಿ, ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅವಕಾಶವೇ ಇಲ್ಲ ಎಂದು ಹೇಳಿತು.

ಇ) ಈಗ ಇನ್ನು ಹಲವು ಬಗೆಯ ಕರಾರುಗಳನ್ನು ವಿಮರ್ಶಿಸಬಹುದು. ಜನರಿಗೆ ಸಹಾಯಕವಾಗಿರುವ ಅನೇಕ ತರಹ ಸೇವಾ ಸಂಸ್ಥೆಗಳಿರುತ್ತವೆ. ನಾನಾ ತರಹ ವಾಹನಗಳು, ಯಂತ್ರಗಳು ಇವನ್ನು ದುರಸ್ತಿಗೆ (repair) ಮಾಡಿ ಕೊಡುವುದು, ಇಂತಹ ಅಂಗಡಿಗಳು ಗ್ರಾಹಕರಿಗೆ, ಅವರ ವಶಕ್ಕೆ ತೆಗೆದುಕೊಂಡ ಸಾಮಾನುಗಳ ಬದಲು ರಸೀದಿ ಕೊಡುವುದು ಸರ್ವೇಸಾಧಾರಣ. ಇಂತಹ ರಸೀದಿಗಳಲ್ಲಿ ನಾನಾ ತರಹದ ಷರತ್ತುಗಳನ್ನು ಮುದ್ರಿಸಿರುವುದನ್ನು ನಾವು ನೋಡಿದ್ದೇವೆ. ಇವುಗಳಿಗೆ ಅನುಗುಣವಾಗಿ ನಡೆದುಕೊಂಡು ಹೋದರೆ ಗಿರಾಕಿಗಳಿಗೆ ನಾನಾ ತರಹದ ಕಷ್ಟ ನಷ್ಟಗಳು ಉಂಟಾಗಬಹುದು. ಇವನ್ನು ತಪ್ಪಿಸಲು ಲಾರ್ಡ್ ಡೆನ್ನಿಂಗನು ಜೆ. ಸ್ಪರ್ಲಿಂಗ್ ಲಿಮಿಟೆಡ್ ವಿರುದ್ಧ ಬ್ರಾಡ್‌ಶಾ (J. Spurling Ltd. Vs. Bradshah (1956) 1 WLR 461) ಮೊಕದ್ದಮೆಯಲ್ಲಿ "ಮೂಲಭೂತ ಉಲ್ಲಂಘನೆಯ ಸಿದ್ಧಾಂತ" (Doctrine of fundamantal Breach) ವನ್ನು ಉಲ್ಲೇಖಿಸಿದ್ದಾರೆ. ಯಾರಾದರೂ ತಾವೇ ಕಳೆದು ಹಾಕಿದ ಸಾಮಾನಿಗೆ

ಅತೀ ಕಡಿಮೆ ಬೆಲೆಯನ್ನು ಕೊಡುವೆನೆಂದು ಹಾಕಿದ ಷರತ್ತು ಬಹು ಅನುಚಿತ. ಇಂತಹ ಷರತ್ತುಗಳನ್ನು ನ್ಯಾಯಾಲಯಗಳು ಈ ಮೇಲೆ ಹೇಳಿದ್ದ ಸಿದ್ಧಾಂತದ ಪ್ರಕಾರ ಒಪ್ಪುವುದೇ ಇಲ್ಲ. ಇದರಿಂದ ಗಿರಾಕಿಗಳಿಗೆ ಪೂರ್ಣ ರಕ್ಷಣೆಯನ್ನು ನ್ಯಾಯಾಲಯವು ಕೊಟ್ಟಿದೆ.

ಬಟ್ಟೆಯನ್ನು ಶುಚಿ ಮಾಡಲು ಕೊಟ್ಟಾಗ ಬಿಲ್‌ನಲ್ಲಿ ಮಾಲು ನಷ್ಟಕ್ಕೆ ಮಾರುಕಟ್ಟೆ ದರದ ಶೇಕಡಾ ೧೫ ಹಣ ಪಾವತಿ ಎಂದು ಮೌಲ್ಯದ ನಿಗದಿ ಮಾಡಿದ್ದರೂ, ವಸ್ತುವಿನ ಮೌಲ್ಯದ ಹಣ ಕೇಳುವುದನ್ನು ಮಾನ್ಯ ಮಾಡಿದರು. (Lilly White Vs. Muniswamy AIR (1966) Mad 13. Siddalingappa. Vs. Nataraj).

ಪ್ರಸ್ತಾಪಗಳ ಮತ್ತು ಅಂಗೀಕಾರಗಳ ನಿವರ್ತತೆ

(Revocation of Offer & Acceptance)

ಕರಾರು ಭಾಗಿಗಳು ಕರಾರನ್ನು ಯಾವಾಗ, ಹೇಗೆ ರದ್ದುಗೊಳಿಸಲು ಸಾಧ್ಯವಾಗುತ್ತದೆ ಎಂಬುದನ್ನು ಕರಾರು ಕಾನೂನಿನ ೫ ನೇ ವರ್ಗದಲ್ಲಿ ಕಾಣ ಬಹುದು. ಕರಾರನ್ನು ಹಿಂದಕ್ಕೆ ತೆಗೆದುಕೊಳ್ಳುವುದನ್ನು ಕೂಡ ಕಾನೂನುಬದ್ಧವಾಗಿ ಮಾಡಲೇಬೇಕು. ಒಂದು ಪ್ರಸ್ತಾಪವನ್ನು ಮಾಡಿದವರು ಎದುರು ಪಕ್ಷವು ಅದನ್ನು ಅಂಗೀಕರಿಸುವ ಮುನ್ನ ಹಿಂತೆಗೆದುಕೊಳ್ಳಬಹುದು. ಪ್ರಸ್ತಾಪವನ್ನು ಸ್ವೀಕರಿಸಿ ಅದರ ಅಂಗೀಕಾರವನ್ನು ತಿಳಿಸಿದ ಮೇಲೆ ಅದನ್ನು ರದ್ದುಗೊಳಿಸಲು ಸಾಧ್ಯವಿಲ್ಲ. ಅಂಗೀಕಾರದ ಪತ್ರವನ್ನು ಅಂಚೆಪೆಟ್ಟಿಗೆಯೊಳಗೆ ಹಾಕಿದ ತಕ್ಷಣ ಕಾನೂನಿನ ಪ್ರಕಾರ ಕರಾರು ಪೂರ್ಣಗೊಳ್ಳುತ್ತದೆ. ಪ್ರಸ್ತಾಪವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾದರೆ ಇದಕ್ಕೆ ಮುಂಚೆಯೇ ಮಾಡಬೇಕು. ಅಂಗೀಕಾರದ ಸುದ್ದಿ ಪ್ರಸ್ತಾಪ ಮಾಡಿದವನಿಗೆ ಮುಟ್ಟುವುದರೊಳಗೆ ಬೇರೆ ಯಾವುದಾದರೂ ವಿಧಾನದಿಂದ ಅಂಗೀಕಾರವನ್ನು ಹಿಂತೆಗೆದುಕೊಳ್ಳಬಹುದು.

ಪ್ರತಿಫಲ ಮತ್ತು ಅದರ ಪ್ರಾಮುಖ್ಯತೆ

ಒಂದು ಕರಾರಿನಲ್ಲಿ ಇರಬೇಕಾದ ಮತ್ತೊಂದು ಅಂಶವೆಂದರೆ ಪ್ರತಿಫಲ. ಇದು ಕರಾರಿನ ಉಭಯಪಕ್ಷಗಳಿಗೂ ಸಲ್ಲಬೇಕು. ಇದು ಒಬ್ಬರು ಮತ್ತೊಬ್ಬರಿಗೆ ಮಾಡುವ ವಾಗ್ದಾನ ಮಾತ್ರವಲ್ಲ, ಎರಡು ಪಕ್ಷಗಳಿಗೂ ಸಲ್ಲುವ ಫಲ. ''ಫಲವು'' ಹಣಕಾಸೇ ಆಗಿರಬೇಕೆಂದಿಲ್ಲ. ಇದು ನಾನಾ ವಿಧದ ಪ್ರಯೋಜನಗಳಿಗೂ ಅನ್ವಯಿಸುತ್ತದೆ. ಫಲ - ಪ್ರತಿಫಲಗಳೇ ಇಲ್ಲದ ಕರಾರು ಶೂನ್ಯ ಕರಾರಾಗುತ್ತದೆ. ಇದನ್ನು ೨೫ ನೇ ವರ್ಗದಲ್ಲಿ ಘೋಷಿಸಲಾಗಿದೆ. ಇಲ್ಲಿ ತಿಳಿಯಬೇಕಾದ ಇನ್ನೊಂದು ಅಂಶವೇನೆಂದರೆ ನ್ಯಾಯಾಲಯಗಳು, ಪಕ್ಷಗಳಿಗೆ ಸಲ್ಲುವ ಫಲ - ಪ್ರತಿಫಲಗಳು ಸಮತೂಕ ವಾಗಿವೆಯೇ ? ಎಂಬುದನ್ನು ನೋಡುವುದಿಲ್ಲ. ಈ ವಿಷಯದ ಬಗ್ಗೆ ಒಪ್ಪಂದಕ್ಕೆ

ಮುಂಚೆಯೇ ಪಕ್ಷಗಳು ತಮ್ಮ ಹಿತರಕ್ಷಣೆ ಮಾಡಿಕೊಳ್ಳಲು ಶಕ್ತರು ಎಂಬ ನಿಲುವನ್ನು ನ್ಯಾಯಾಲಯಗಳು ತಾಳಿವೆ.

ಈ ಕರಾರುಗಳನ್ನು ಮಾಡಿಕೊಳ್ಳುವಾಗ ಫಲ - ಪ್ರತಿಫಲಗಳನ್ನು ತಮ್ಮ ಪರಿಸ್ಥಿತಿ, ಸನ್ನಿವೇಶಗಳಿಗೆ ಸರಿಯಾಗಿ ಹೊಂದಿಸಿಕೊಳ್ಳುತ್ತಾರೆ. ಅವರಲ್ಲಿ ಸೂಚಿಸುವ ಪ್ರಯೋಜನವನ್ನು ಬೆಲೆ ಕಟ್ಟಲು ಕರಾರು ಮಾಡಿಕೊಳ್ಳುವವರೇ ಉತ್ತಮ ತೀರ್ಪು ಗಾರರು. ಇಂತಹ ವ್ಯವಹಾರಗಳು ನ್ಯಾಯಾಲಯದ ಮುಂದೆ ಬಂದರೆ ಅದು ''ಪಿತೃಸಮಾನದಂತೆ''. ಆ ಪ್ರಯೋಜನಗಳನ್ನು ಸೇರಿಸಿ ನೋಡುವುದೂ ಇಲ್ಲ. ಈ ಫಲ- ಪ್ರತಿಫಲಗಳು ಎಷ್ಟೇ ಬೆಲೆಯದಾಗಿರಲಿ ಅವನ್ನು ಕರಾರಿನಲ್ಲಿ ಸೂಚಿಸಿದ್ದರೆ ಸಾಕು. ಆದರೆ ಪ್ರತಿಫಲವು ಬರೀ ನಿಜವಾದ ಮೌಲ್ಯವಿಲ್ಲದ ಭ್ರಮೆ ಅಥವಾ ಕೇವಲ ಕಾಲ್ಪನಿಕವಾಗಿರಬಾರದು.

ಈ ಫಲವನ್ನು ಒಂದು ವಿವಾದ ಅಥವಾ ಮೊಕದ್ದಮೆಯಲ್ಲಿ ಪರಿಗಣಿಸಬೇಕಾದಾಗ ಕೆಲವು ಸ್ವಾರಸ್ಯಕರವಾದ ಅಂಶಗಳು ಕಾಣಬರುತ್ತವೆ. ಒಂದು ಕರಾರಿನಲ್ಲಿ ಒಂದು ಪಕ್ಷಕ್ಕೆ ಆಗುವ ಪ್ರಯೋಜನವು ಅತಿ ಅಲ್ಪವಾಗಿದ್ದರೆ ಇದು ಆ ಪಕ್ಷವು ಸ್ವಇಚ್ಛೆಯಿಂದ ಒಪ್ಪಿರುವ ಕರಾರೇ ? ಇದರಲ್ಲಿ ಯಾವುದಾದರೂ ಅನುಚಿತ ಪ್ರಭಾವ ಅಥವಾ ಮೋಸದ ಆಧಾರಕ್ಕೆ ಎಡೆ ಇದೆಯೇ ಎಂದು ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಎರಡು ಮೊಕದ್ದಮೆಗಳ ನಿರ್ಣಯ ಗಳನ್ನು ತಿಳಿಯಬಹುದು. ಅಬ್ದುಲ್ ಅಜೀಜ್ ಮತ್ತು ಮಾಸೂಂ ಅಲಿ (Abdul Aziz Vs. Masum Ali, AIR 1914 All 22). ಮಾಸೂಂ ಅಲಿ ಎಂಬುವವರು ಒಂದು ಮಸೀದಿಯ ಪುನರ್ ನಿರ್ಮಾಣ ಕೆಲಸ ಪ್ರಾರಂಭವಾದಾಗ ೫೦೦ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದರು. ಆದರೆ ರಿಪೇರಿ ಮಾಡುವ ಇಲ್ಲವೇ ಪುನರ್ ನಿರ್ಮಿಸುವ ಯಾವ ಕೆಲಸವೂ ನಡೆಯಲಿಲ್ಲ. ಈ ಕಾರಣದಿಂದ ಮಾಸೂಂ ಅಲಿ ಅವರು ಹಣವನ್ನು ಕೊಡಲಿಲ್ಲ. ನ್ಯಾಯಾಲಯವು ಮಾಸೂಂ ಅಲಿ ಮಾಡಿದ ವಾಗ್ದಾನದಂತೆ ಯಾವ ಕಾರ್ಯವೂ ನಡೆಯಲಿಲ್ಲವಾದ್ದರಿಂದ ಮತ್ತು ಅವರಿಗೆ ಯಾವ ಸ್ವಂತ ಪ್ರತಿಫಲವೂ ಇಲ್ಲದ್ದರಿಂದ ಅವರು ಹಣ ಸಂದಾಯ ಮಾಡುವ ಹೊಣೆ ಇಲ್ಲ ಎಂದಿತು. ಕೇದಾರನಾಥ್ ವಿರುದ್ಧ ಗೋರಿ ಮೊಹಮದ್ (Kedarnath Vs. Gorie Mohammed 1886 ILR 14 Cal 64). ಆದರೆ ಈ ಮೊಕದ್ದಮೆಯಲ್ಲಿ ಚಂದಾಹಣವನ್ನು ಕೊಡುವನೆಂದು ವಾಗ್ದಾನವನ್ನು ಮಾಡಿದ್ದರೆ ಅದನ್ನು ಜಾರಿಗೆ ತರಬಹುದು ಎಂದು ಹೇಳಿದೆ. ಇದಕ್ಕೆ ಕಾರಣ ಚಂದಾ ವಾಗ್ದಾನದ ವಿಶ್ವಾಸದ ಮೇಲೆ ಪಕ್ಷಗಳು ವೆಚ್ಚಗಳನ್ನು ಮಾಡಿರುತ್ತವೆ. ಇದು ತಕ್ಕ ಪ್ರತಿಫಲ. ಆದುದರಿಂದ ಕರಾರು ಮಾನ್ಯ. ಈ ಸಂದರ್ಭದಲ್ಲಿ ಸಾಕ್ಷ್ಯ ಕಾನೂನಿನ ೧೧೫ ನೇ ವರ್ಗವನ್ನು ನೋಡ

ಬಹುದು. ವಾಗ್ದಾನ ಆಧಾರದ ಮೇಲೆ ಪಕ್ಷವು ಖರ್ಚು- ವೆಚ್ಚ ಮಾಡಿದ್ದಲ್ಲಿ ಇದು ಪ್ರತಿಫಲದ ಅಗತ್ಯತೆಯನ್ನು ನಿವಾರಿಸುತ್ತದೆ.

ಪೂರ್ವ, ಸದ್ಯದ ಮತ್ತು ಭಾವೀ ಪ್ರತಿಫಲ

ಒಂದು ಕರಾರು ಕಾನೂನು ಸಮ್ಮತವಾಗಬೇಕಾದರೆ ಪ್ರತಿಫಲವು ಇರಲೇಬೇಕು ಮತ್ತು ಅದು ಸಮಕಾಲೀನವಾಗಿರಬೇಕು. ಆದರೆ ಭಾರತದ ಕಾನೂನು ಈ ವಿಷಯದ ಬಗ್ಗೆ ಖಡಾಖಂಡಿತವಾದ ನಿಲುವನ್ನು ತಾಳಿಲ್ಲ. ಒಂದು ಸ್ವಇಚ್ಛಾ ಸೇವೆ ತರುವಾಯ ಮಾಡುವ ವಾಗ್ದಾನವನ್ನು ದೃಢೀಕರಿಸಬಹುದು. ಪೂರ್ವ ಕಾರ್ಯವೇ ಬೇರೆ, ಪೂರ್ವ ಪ್ರತಿಫಲವೇ ಬೇರೆ. ಪೂರ್ವ ಪ್ರತಿಫಲವು ಯಾವಾಗಲೂ ವಾಗ್ದಾನವಿಲ್ಲದೇ ಮಾಡಿದ ಕಾರ್ಯಕ್ಕೆ ಹೊಂದಿರುತ್ತದೆ.

ಒಂದು ಕರಾರಿನಲ್ಲಿ ಪ್ರತಿಫಲವು ಬೇರೆ ಬೇರೆ ಸಮಯಗಳಲ್ಲಿ ಒದಗಬಹುದು. ಕಾರ್ಯವನ್ನು ಮಾಡಿ ಮುಗಿಸಿದ್ದರೆ ಅದನ್ನು ''ಕಾರ್ಯಗತ ಗೊಳಿಸಿದ ಆಧಾರಿತ ಪ್ರತಿಫಲ'' ಎಂದು ಕರೆಯುತ್ತಾರೆ. ಏಕೆಂದರೆ ಪ್ರತಿಫಲದ ಹೊಣೆಯು ಒಂದು ಪಕ್ಷದ ಮೇಲೆ ಮಾತ್ರ ಬಾಕಿ ನಿಂತಿರುತ್ತದೆ. ಅನೇಕ ಸಂದರ್ಭಗಳಲ್ಲಿ ಕರಾರು ಸಮಯದಲ್ಲೇ ಪ್ರತಿಫಲವು ಹಾಜರಿಲ್ಲದಿರುವುದನ್ನು ಕಾಣದಿರಬಹುದು. ಉದಾಹರಣೆಗೆ, ಸ್ವತ್ತಿನ ಮಾರಾಟ. ಹಣವನ್ನು ಸ್ವೀಕರಿಸಿ ಸ್ವತ್ತನ್ನು ಕೆಲವು ಕಾಲದ ಮೇಲೆ ಕೊಡಬಹುದು; ಇಲ್ಲವೇ ಮಾರಾಟಗಾರನು ಸ್ವತ್ತನ್ನು ಮಾರಲು ಒಪ್ಪಬಹುದು ಮತ್ತು ಕೊಳ್ಳುವವನು ಸ್ವಲ್ಪ ಕಾಲಾನಂತರ ಸ್ವಾಧೀನವನ್ನು ಸ್ವೀಕರಿಸಲು ಒಪ್ಪಬಹುದು. ಇಲ್ಲಿ ಭಾವೀ ಪ್ರತಿಫಲ ಎರಡೂ ಪಕ್ಷಗಳಿಗೂ ಕರಾರಿನ ತರುವಾಯ ಪ್ರಾಪ್ತವಾಗುವುದು. ಇವೆಲ್ಲಾ ಕಾನೂನು ಯೋಗ್ಯವೇ ಹೌದು.

****

ಭಾಗ - ೧೧

ಕರಾರು ಮತ್ತು ಪ್ರತಿಫಲದ ಭಾಗೀದಾರರು

ಕರಾರಿನ ಮುಖ್ಯಾಂಶವೇನೆಂದರೆ, ಉಭಯಪಕ್ಷಗಳ ನಡುವೆ ಒಪ್ಪಂದ ಮತ್ತು ಪರಸ್ಪರ ಹಕ್ಕುಗಳ ವಿನಿಮಯ ಮತ್ತು ಹೊಣೆಗಾರಿಕೆ. ಆದ್ದರಿಂದ ಬೇರೊಬ್ಬನ ಪ್ರಯೋಜನಕ್ಕಾಗಿ ಕರಾರು ಮಾಡಿದ್ದರೂ ಸಹ, ಆತನು ಕರಾರಿನ ನಿಬಂಧನೆಗಳನ್ನು ಜಾರಿಗೆ ತರಿಸಲು ಅಥವಾ ತಾನೇ ಪ್ರಯೋಜನ ಮಾಡಿಕೊಳ್ಳಲು ಉಪಯೋಗಿಸಿ ಕೊಳ್ಳಲಾಗುವುದಿಲ್ಲ. ಈ ಮೂರನೇಯವನು ಸಾಮಾನ್ಯವಾಗಿ ಕರಾರಿಗೆ ಆಗಂತುಕನಾಗಿರುತ್ತಾನೆ. ಕರಾರಿಗೆ ಅವನು ಅಪರಿಚಿತ. ಕಾನೂನಿನ ಪರಿಭಾಷೆಯಲ್ಲಿ ಅವನು ಕರಾರಿನ ಭಾಗೀದಾರನಲ್ಲ. ಈ ಸಿದ್ಧಾಂತವು ಟ್ವೆಡಲ್ ಮತ್ತು ಅಟ್ಕಿನ್‌ಸನ್ (Tweddle Vs. Atkinson (1861) 23 ER 762) ನ ಇಂಗ್ಲೀಷ್ ಮೊಕದ್ದಮೆ ಯಿಂದ ಹುಟ್ಟಿ ನಂತರ ಹೌಸ್ ಆಫ್ ಲಾರ್ಡ್ಸ್‌ನ ಡನ್ಲಪ್ ನ್ಯೂಮಾಟಿಕ್ ಟೈರ್ ಕಂಪನಿ ಮತ್ತು ಸೆಲ್‌ಫ್ರಿಡ್ಜ್ (Dunlop Pnemuatic Tyre Co., Vs. Selfridge, 1915 AC 847) ಮೊಕದ್ದಮೆಯಲ್ಲಿ ದೃಢೀಕರಿಸಲ್ಪಟ್ಟಿತು. ಟಯರಿನ ತಯಾರಕರಾದ ಡನ್ಲಪ್ ಕಂಪನಿಯ ಜೊತೆ ಡ್ಯೂ ಕಂಪನಿಯವರು ಟಯರ್‌ಗಳನ್ನು ಡನ್ಲಪ್ ಕಂಪನಿಯವರು ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಬೆಲೆಗೆ ಮಾರುವುದಿಲ್ಲವೆಂದು ಒಪ್ಪಿಕೊಂಡಿದ್ದರು. ಈ ಕರಾರು ಡ್ಯೂ ಕಂಪನಿಯಿಂದ ಸಾಮಾನು ಕೊಂಡವರಿಗೂ ಅನ್ವಯಿಸುತ್ತದೆಂಬ ಷರತ್ತು ಅದರಲ್ಲಿತ್ತು. ಡ್ಯೂ ಮತ್ತು ಕಂಪನಿಯವರಿಂದ ಸರಕನ್ನು ಖರೀದಿ ಮಾಡಿದ ಸಲ್ಫ್ರಿಡ್ಜ್ ಕಂಪನಿಯು ಅದನ್ನು ಕಡಿಮೆ ಬೆಲೆಗೆ ಮಾರಿತು. ಒಪ್ಪಂದದ ಉಲ್ಲಂಘನೆ ಆಗಿದ್ದರಿಂದ ಸೆಲ್ಫ್ರಿಡ್ಜ್ ಕಂಪನಿಯ ವಿರುದ್ಧ ಹೂಡಿದ ದಾವೆಯಲ್ಲಿ ಕರಾರಿಗೆ ಭಾಗಿಯಾದವನು ಮಾತ್ರ ದಾವೆ ಹೂಡಬಹುದು, ಇವರಲ್ಲದೆ ಬೇರೆಯವರು ಅದೇ ವಿಷಯದಲ್ಲಿ ಆಸಕ್ತಿ ಹೊಂದಿದ್ದರೂ ಸಹ ದಾವೆ ಹೂಡುವುದಕ್ಕೆ ಅವಕಾಶವಿಲ್ಲ ಎಂದು ನ್ಯಾಯಮೂರ್ತಿ ಹಾಲ್ಡೇನರು ಹೇಳಿದರು. ನಾವೂ ಇದೇ ತತ್ವವನ್ನು ಅನುಸರಿಸುತ್ತಿದ್ದೇವೆ. (Stranger to a Contract cannot sue) ಒಂದು ಕರಾರಿಗೆ ಪ್ರತಿಫಲವು ವಾಗ್ದಾನ ಪಡೆದವನಿಂದಲೇ (Promisee) ಬರಬೇಕು. ಮೂರನೆಯವರು ಪ್ರತಿಫಲವನ್ನು ವಾಗ್ದಾನ ಮಾಡಿದ್ದರೆ ವಾಗ್ದಾನ ಪಡೆದವನು ಪ್ರತಿಫಲಕ್ಕೆ ಹೊರತಾಗುತ್ತಾನೆ. ಅವನು ಪ್ರತಿಫಲಕ್ಕೆ ಭಾಗಿಯಾಗುವುದಿಲ್ಲ. ಆದ್ದರಿಂದ ಕರಾರು ಕಾನೂನು ಮಾನ್ಯವಲ್ಲ. ಇದು ಆಂಗ್ಲ ಕಾನೂನಿನ ಸಿದ್ಧಾಂತ. ಕರಾರಿಗೆ ಭಾಗಿಯಾದವರು ಮಾತ್ರ ಅದರ ಬಗ್ಗೆ ದಾವೆ ಹೂಡಲು ಶಕ್ತರು ಎಂಬ ಸಿದ್ಧಾಂತವು ನಮ್ಮ ಕಾನೂನಿನಲ್ಲಿ ಸ್ವೀಕೃತವಾಗಿದೆ. ಚೌಕೋ ವಿರುದ್ಧ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ (Chacko

Vs. State Bank of Travancore AIR 1970 SC 504) ನಲ್ಲಿ ಸರ್ವೋಚ್ಚ ನ್ಯಾಯಾಲಯವು ಖಡಾಖಂಡಿತವಾಗಿ ಈ ರೀತಿ ಇತ್ಯರ್ಥಗೊಳಿಸಿ, ಯಾವ ವ್ಯಕ್ತಿಯು ಕರಾರಿಗೆ ಭಾಗಿಯಾಗಿಲ್ಲವೋ ಅಂತಹ ವ್ಯಕ್ತಿಯು ಹಕ್ಕನ್ನು ಜಾರಿಗೊಳಿಸಲಾಗುವುದಿಲ್ಲ ಎಂದು ತೀರ್ಮಾನಿಸಿತು.

ಮೂರನೆಯ ಪಕ್ಷದವರಿಗೆ ಪ್ರಯೋಜನ ಉಂಟಾಗುವ ಕರಾರಿನ ನಿಬಂಧನೆಗಳನ್ನೊಳಗೊಂಡ ಮೊಕದ್ದಮೆಗಳ ತೀರ್ಪುಗಳು ಬೇಕಾದಷ್ಟು ಇವೆ. ಉದಾಹರಣೆಗೆ, ಒಂದು ಮಾರಾಟದ ಒಪ್ಪಂದದಲ್ಲಿ ಒಬ್ಬ ಖರೀದಿದಾರನು ಖರೀದಿ ಮಾಡಿದ ಸ್ವತ್ತಿನ ಅಡಮಾನದ ಹೊಣೆಯನ್ನು ವಿಮೋಚನೆಗೊಳಿಸಲು ಒಪ್ಪಿಕೊಳ್ಳುತ್ತಾನೆ. ಅಡಮಾನ ಪಡೆದವನು ಖರೀದಿದಾರನ ಮೇಲೆ ದಾವೆ ಹೂಡಬಹುದೇ ? ಎಂಬ ಪ್ರಶ್ನೆಗೆ ಪ್ರೀವಿಕೌನ್ಸಿಲ್‌ನ ಸ್ಪಷ್ಟ ಉತ್ತರ ''ಇಲ್ಲ'' ಎಂದು. ಇದರ ಒಂದೆರಡು ಪ್ರಕರಣಗಳು (1) ಜಮುನಾದಾಸ್ ವಿರುದ್ಧ ರಾಮ್ ಅವತಾರ್ (Jamunadas Vs. Ram Autar - ILR 34 All 63) ಮತ್ತು ನನ್ಕು ಪ್ರಸಾದ್ ವಿರುದ್ಧ ಕಾಂಟಾ ಪ್ರಸಾದ್ (Nanku Prasad Sindh Vs. Kamta Prasad Singh AIR 1923 PC 54).

ಈ ಸಂದರ್ಭದಲ್ಲಿ ಒಂದು ಮುಖ್ಯ ವಿಷಯವನ್ನು ಗಮನಿಸಬೇಕು. ಕರಾರು ಭಾಗೀದಾರರಲ್ಲಿ ಪ್ರತಿಫಲ ನೀಡುವುದಕ್ಕೆ ಮೂರನೆಯವನು ಬಂದರೆ, ಅವನು ಕರಾರಿಗೆ ಹೊರತಾದರೂ ಸಹ ಅವನ ಸೇವೆಯನ್ನು ನಮ್ಮ ಕಾನೂನು ಒಪ್ಪುತ್ತದೆ. ವಾಗ್ದಾನ ಪಡೆದವನಿಂದಲೇ ಪ್ರತಿಫಲಕ್ಕೆ ಮಾತು ಬರಬೇಕು ಎಂಬ ಸಂಪ್ರದಾಯ ಬದ್ಧ ನಿಯಮವನ್ನು ಭಾರತದಲ್ಲಿ ಅನುಸರಿಸುತ್ತಿಲ್ಲ. ಕರಾರು ಕಾನೂನಿನ ವರ್ಗ 2 (ಡಿ) ಯ ಪ್ರಕಾರ ಪ್ರತಿಫಲವನ್ನು ವಾಗ್ದಾನ ಪಡೆದವ ಅಥವಾ ಬೇರೆ ಯಾವುದೇ ವ್ಯಕ್ತಿಯು ಒದಗಿಸಬಹುದು ಎಂದು ತಿಳಿಸಿದೆ (Promissee or any other person).

ಕರಾರಿಗೆ ಭಾಗಿ ಎನ್ನುವ ಕಲ್ಪನೆಯು ನ್ಯಾಯಾಲಯಗಳಿಗೂ ಸಮಾಧಾನ ತಂದಿಲ್ಲ. ಇಂಗ್ಲೆಂಡಿನ ಲಾರಿವಿಷನ್ ಕಮಿಟಿಯು ೧೯೩೭ ರಲ್ಲಿ ಕರಾರು ತನ್ನ ವ್ಯಕ್ತ ನಿಬಂಧನೆಗಳಲ್ಲಿ ಮೂರನೇ ಪಕ್ಷಕಾರರಿಗೆ ನೇರ ಪ್ರಯೋಜನ ದೊರಕಿಸಿದ್ದರೆ, ಆ ಪಕ್ಷವು ತನ್ನ ಹೆಸರಿನಲ್ಲಿ ಹಕ್ಕನ್ನು ಜಾರಿಗೆ ತರಲು ಅವಕಾಶ ಕೊಡಬೇಕು ಎಂದು ಶಿಫಾರಸ್ಸು ಮಾಡಿತು.

ಇಂದಿನ ನ್ಯಾಯ ಸೂತ್ರಗಳ ಪ್ರಕಾರವೂ ಈ ಸಿದ್ಧಾಂತಕ್ಕೆ ವಿನಾಯಿತಿಗಳು ಇವೆ. ಇದರಲ್ಲಿ ಮೊದಲನೆಯದು ನ್ಯಾಸ (ವಿಶ್ವಾಸ, Trust) ಮತ್ತು ಋಣ-ಭಾರಗಳಿಗೆ ಸಂಬಂಧಿಸಿವೆ. ಒಂದು ಕರಾರಿನ ಫಲಾನುಭವಿಯು ತನ್ನ ಪಾಲಿನ ಹಣ ಅಥವಾ ಸ್ವತ್ತನ್ನು ಆಡಳಿತ ಟ್ರಸ್ಟಿಯು ಹೊಂದಿರುತ್ತಾನೆ ಎಂದು ತೋರಿಸಿದರೆ, ಆಗ

ಅವನು ದಾವೆ ಹೂಡಲು ಹಕ್ಕುಳ್ಳವನಾಗಿರುತ್ತಾನೆ. ಇದನ್ನು ರಾಣ ಉಮಾನಾಥ ಬಕ್ಷಸಿಂಗ್ ವಿರುದ್ಧ ಜಾಂಗ್ ಬಹದ್ದೂರ್ (Rana Umanath Baksh Singh Vs. Jang Bahadur, AIR 1938 PC 245) ಮೊಕದ್ದಮೆಯಲ್ಲಿ ನೋಡಬಹುದು. ಒಬ್ಬ ತಂದೆಯು ತನ್ನ ಆಸ್ತಿಯನ್ನು ತನ್ನ ಮಗನಿಗೆ ವರ್ಗಾವಣೆ ಮಾಡಿದನು. ಮಗನು ತಂದೆಗೆ ಜೀವನಾಂಶ ಕೊಡುವುದಕ್ಕೂ, ಆಸ್ತಿಯ ಸ್ವಲ್ಪ ಭಾಗವನ್ನು ತಂದೆಯ ಅನೌರಸ ಪುತ್ರನು (illegitimate Son) ಪ್ರಾಪ್ತ ವಯಸ್ಕನಾದಾಗ ವರ್ಗಾಯಿಸುವುದಕ್ಕೂ ಕರಾರಿನಲ್ಲಿ ಒಪ್ಪಿದ್ದನು. ನ್ಯಾಯಾಲಯವು ಕರಾರಿನ ಉಪಬಂಧಗಳನ್ನು ಜಾರಿಗೆ ತರಲು ಅನೌರಸ ಪುತ್ರನಿಗೂ ಹಕ್ಕಿದೆ ಎಂದೂ ತೀರ್ಮಾನಿಸಿತು. ಇದರಂತೆಯೇ ವಿವಾಹ ಇತ್ಯರ್ಥ, ವಿಭಜನೆ ಮತ್ತು ಇನ್ನಿತರ ಕುಟುಂಬ ಏರ್ಪಾಡು ಮುಂತಾದವುಗಳಲ್ಲಿ ನ್ಯಾಯಾಲಯಗಳು ಯಾವಾಗಲೂ ವ್ಯಕ್ತಿಗಳಿಗೆ ಪ್ರಯೋಜನ ಉಂಟಾಗುವಾಗ ಅವರು ಮೂಲ ವ್ಯವಹರಣೆಯ ಪಕ್ಷಕಾರರಾಗಿಲ್ಲದಿದ್ದರೂ ಸಹ ಅವರಿಗೆ ದಾವೆ ಹೂಡಲು ಅವಕಾಶ ಕೊಟ್ಟಿವೆ.

''ಭಾಗಿ'' ಸಿದ್ಧಾಂತದ ಹೆಚ್ಚಿನ ಹೊರೆ ವಿಬಂಧದ (estoppel) ಆಧಾರದ ಮೇಲೆ ರೂಪಿಸಲಾಗಿದೆ. ಉದಾಹರಣೆಗೆ ದೇವರಾಜ ಅರಸ್ ಮತ್ತು ರಾಮಕೃಷ್ಣಯ್ಯ (Devaraja Urs Vs. Ramakrishnaiah AIR (1952) MYS 109). ಈ ಪ್ರಕರಣದಲ್ಲಿ ಮಾರಾಟದ ಷರತ್ತುಗಳ ಮೇರೆಗೆ ಖರೀದಿದಾರನು ಮಾರಾಟಗಾರನ ಸಾಲವನ್ನು ಮೂರನೆಯವರಿಗೆ ಕೊಡುವ ಜವಾಬ್ದಾರಿ ವಹಿಸಿದ್ದನು. ಆಗಮೂರನೆಯ ಪಕ್ಷಕಾರನಿಗೆ ತನ್ನ ಸಾಲವನ್ನು ಹಿಂದಕ್ಕೆ ಪಡೆಯಲು ದಾವೆ ಹೂಡುವ ಅವಕಾಶ ಕೊಡಲಾಯಿತು. ಏಕೆಂದರೆ ಭಾಗಶಃ ಹಣವನ್ನು ಸಾಲ ಗಾರನಿಗೆ ಕೊಟ್ಟಿದ್ದನು. ಮೂರನೆಯವರಿಗೆ ನ್ಯಾಯವಾಗಿ ಸಲ್ಲತಕ್ಕ ಪ್ರಯೋಜನ ವನ್ನು ಕಾನೂನು ಸಿದ್ಧಾಂತಗಳ ಪ್ರಕಾರ ದಕ್ಕದಿರುವಂತೆ ಮಾಡಿದ ಸಿದ್ಧಾಂತದ ವ್ಯಾಪ್ತಿಗಳ ಮೇಲೆ ಮತ್ತು ಅದರ ಕಾಠಿಣ್ಯತೆಯನ್ನು ಸಡಿಲಗೊಳಿಸಲು ನ್ಯಾಯಾಲಯಗಳು ಪ್ರಯತ್ನಿಸುತ್ತಲೇ ಇವೆ. ಇಲ್ಲಿ ಪಕ್ಷಗಳ ನಿಜವಾದ ಉದ್ದೇಶಕ್ಕೆ ಬೆಲೆ ಕೊಡಲಾಗುತ್ತಿದೆ.

ಪ್ರತಿಫಲದ ಅವಶ್ಯಕತೆಯ ವಿನಾಯಿತಿ ಪಡೆದ ಸಂದರ್ಭಗಳು

ಕರಾರು ಅಧಿನಿಯಮದ ವರ್ಗ ೨೫ ರ ಪ್ರಕಾರ, ಸ್ವಾಭಾವಿಕ ಪ್ರೀತಿ ಮತ್ತು ವಿಶ್ವಾಸದಿಂದ ಮಾಡಲಾದ ಕೊಡುಗೆಯ ವಾಗ್ದಾನಕ್ಕೆ ಯಾವುದೇ ಬೇರೆ ಪ್ರತಿಫಲ ಬೇಕಾಗಿಲ್ಲ. ಪ್ರೀತಿ ವಿಶ್ವಾಸಗಳೇ ಅದಕ್ಕೆ ಪ್ರತಿಫಲ. ಅದು ಬರಹದಲ್ಲಿರಬೇಕು ಮತ್ತು ಅದನ್ನು ನೋಂದಾಯಿಸಿರಬೇಕು. ಎರಡನೆಯದಾಗಿ ಒಬ್ಬ ವ್ಯಕ್ತಿಯು

ಸ್ವ ಇಚ್ಛೆಯಿಂದ ವಾಗ್ದಾನ ಪಡೆದವನಿಗೆ ಹಿಂದೆ ಏನಾದರೂ ಸ್ವಲ್ಪ ಸಹಾಯ ಮಾಡಿದ್ದರೆ ಅದಕ್ಕೆ ಈಗ ಕೊಡುವ ಪ್ರತಿಫಲ. ಮೂರನೆಯ ವಿನಾಯಿತಿಯು ಕಾಲ ಮೀರಿದ ಋಣವನ್ನು ಸಂದಾಯ ಮಾಡಲು ಮಾಡುವ ಜವಾಬ್ದಾರಿ ವಹಿಸುವಿಕೆ ಇದೂ ಬರಹದಲ್ಲಿರಬೇಕು. ಮೇಲೆ ಹೇಳಿದ ಎಲ್ಲಾ ಸಂದರ್ಭಗಳಿಂದ ತಿಳಿದು ಕೊಳ್ಳಬಹುದಾದ ಮುಖ್ಯ ಅಂಶವೆಂದರೆ, ಪ್ರತಿಫಲವು ಕರಾರಿನೊಡನೆ ಸಮಕಾಲೀನವಲ್ಲ; ಅದು ಸಂಪೂರ್ಣವಾಗಿ ಗೈರುಹಾಜರಿಯಾಗಬಹುದು ಇಲ್ಲವೇ ಪೂರ್ವ ಪ್ರತಿಫಲವಾಗಿರ ಬಹುದು. ಇವುಗಳನ್ನು ಬಿಟ್ಟು ಮಿಕ್ಕ ಪ್ರತಿಫಲವಿಲ್ಲದ ಕರಾರು ಅಥವಾ ಕೇವಲ ವಾಗ್ದಾನಗಳನ್ನು ಸಾಮಾನ್ಯವಾಗಿ "ಪ್ರತಿಫಲ ಇಲ್ಲ" (Nudum Pactum) ಎಂದು ಕರೆಯಲಾಗಿದೆ. ಇದನ್ನು ಜಾರಿಗೊಳಿಸಲಾಗುವುದಿಲ್ಲ. ಇಲ್ಲಿ ಒಂದು ಗಮನಾರ್ಹ ವಿಷಯವೆಂದರೆ, ನ್ಯಾಯಾಲಯಗಳು ನೈತಿಕ ವಾಗ್ದಾನದ ಬಗ್ಗೆ ಆಸಕ್ತಿವಹಿಸುವುದಿಲ್ಲ. ಕಾನೂನು ಸಮ್ಮತ ವಾಗ್ದಾನವು ಒಂದು ರೀತಿಯ ವ್ಯಾಪಾರೀ ಮನೋಭಾವವನ್ನು ಪ್ರತಿಬಿಂಬಿಸುತ್ತದೆ.

****

ಭಾಗ - ೧೨

ಶೂನ್ಯ ಮತ್ತು ಶೂನ್ಯಕರಣೀಯ ಕರಾರು

(Void & Voidable Contracts)

ಕರಾರುಗಳು ಕೆಲವು ಸಲ ಕಾನೂನುಬಾಹಿರವಾಗಿರುತ್ತವೆ. ಇವುಗಳಲ್ಲಿ ಎರಡು ಬಗೆಯ ಕರಾರುಗಳನ್ನು ಈಗ ಗಮನಿಸಬಹುದು. ಕರಾರುಗಳಲ್ಲಿರುವ ಕೆಲವು ದೋಷಗಳು ಕಾನೂನಿನ ದೃಷ್ಟಿಯಲ್ಲಿ ಅವನ್ನು ಪೂರ್ಣವಾಗಿ ನಾಶ ಮಾಡುತ್ತವೆ. ಇವುಗಳನ್ನು ''ಶೂನ್ಯ'' (VOID) ಕರಾರು ಎನ್ನಬಹುದು. ಮತ್ತೆ ಕೆಲವು ಕರಾರುಗಳು ನ್ಯಾಯಸಮ್ಮತವಾಗಿರುತ್ತವೆ. ಕರಾರಿಗೆ ಭಾಗಿಯಾದವರಲ್ಲಿ ಯಾರಾದರೂ ಒಬ್ಬರು ಅದನ್ನು ಕಾನೂನು ವಿರುದ್ಧವೆಂದು ತೋರಿಸಬಹುದು. ಇಂತಹ ಕರಾರುಗಳನ್ನು ''ಶೂನ್ಯಕರಣೀಯ'' (VOIDABLE) ಕರಾರು ಎನ್ನಬಹುದು. ಒಬ್ಬ ಅಪ್ರಾಪ್ತ ವಯಸ್ಕನೊಡನೆ ಮಾಡಿಕೊಂಡ ಕರಾರು ಅಥವಾ ಕಾನೂನು ನಿಷೇಧಿತವಾದ ಕರಾರುಗಳು, ಇವು ''ಶೂನ್ಯ'' ಕರಾರು. ಎಂದರೆ ಕಾನೂನಿನಲ್ಲಿ ಅಸಿಂಧುವಾದ ತಪ್ಪು ಕಲ್ಪನೆಯಿಂದ ಮಾಡಿದ, ಕಾನೂನು ಮನ್ನಣೆ ಕೊಟ್ಟಿಲ್ಲದ ಮತ್ತು ಜಾರಿಗೊಳಿಸಲಾಗದೇ ಇರುವ ಕರಾರು. ಇಂತಹ ಶೂನ್ಯ ಕರಾರನ್ನು ಸರಿಪಡಿಸಲು ಸಾಧ್ಯವಿಲ್ಲ. ಶೂನ್ಯಕರಣೀಯ ಕರಾರು ಯಾವುದೆಂದರೆ ಕರಾರಿನ ಎಲ್ಲಾ ಅಂಶಗಳೂ ಅಸ್ತಿತ್ವದಲ್ಲಿ ಕಾಣಬರುತ್ತವೆ; ಆದರೆ ವಾಗ್ದಾನದ ಲಕ್ಷಣಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ''ಲೋಪ'' ಗೋಚರವಾಗುತ್ತದೆ. ಇಂತಹ ಕರಾರುಗಳನ್ನು ನ್ಯಾಯಸಮ್ಮತ ಮಾಡಲು ಅಥವಾ ಜಾರಿಗೊಳಿಸುವುದು ಒಂದು ಪಕ್ಷವು ಲೋಪವನ್ನು ಎತ್ತಿತೋರಿ ಸುವವರೆಗೂ ಸಾಧ್ಯ. ಒಂದು ಕರಾರನ್ನು ಎರಡೂ ಪಕ್ಷದವರು ಒಂದೇ ಮನಸ್ಸಿನಿಂದ ಒಪ್ಪಿಕೊಳ್ಳಬೇಕು. ಇಬ್ಬರಿಂದಲೂ ಮುಕ್ತ ಸಮ್ಮತಿ ಇಲ್ಲದಿದ್ದರೆ ಅದು ಕಾನೂನುಬಾಹಿರವಾಗುತ್ತದೆ. ಏಕೆಂದರೆ ಭಾರತದ ಕರಾರು ಕಾಯಿದೆ ವರ್ಗ ೧೪ರ ಪ್ರಕಾರ, ಪಕ್ಷಗಳು ಒಪ್ಪಿಗೆ ಕೊಡುವಾಗ (1) ಬಲಾತ್ಕಾರ (Coercion) (2) ಅನುಚಿತ ಪ್ರಭಾವ (Undue influence) (3) ಮೋಸ (Fraud) (4) ತಪ್ಪು ನಿರೂಪಣೆ (Misrepresentation) ಮತ್ತು (5) ತಪ್ಪು ಗ್ರಹಿಕೆ (Mistake) ಇವು ಯಾವುಗಳ ಪ್ರೇರಣೆಯೂ ಇರಕೂಡದು. ಒಂದು ಕರಾರು ನ್ಯಾಯಸಮ್ಮತವಾಗಬೇಕಾದರೆ, ಈ ಐದು ಲೋಪಗಳಲ್ಲಿ ಯಾವುದೂ ಇರದಂತೆ ನೋಡಿಕೊಳ್ಳಬೇಕು. ಇವೇ ಕಾನೂನಿನ ಭದ್ರತೆಯ ಪಂಚಶೀಲ ತತ್ವ. ಈ ಐದು ಲೋಪಗಳಲ್ಲಿ ಯಾವುದೇ ಒಂದು ಕಂಡುಬಂದರೂ ಕರಾರು ಜಾರಿಯಾಗದಂತೆ ನೋಡಿಕೊಳ್ಳಬಹುದು. ಆದರೆ ಲೋಪ ಇರುವುದನ್ನು ನ್ಯಾಯಾಲಯದ ಮುಂದೆ

ರುಜುವಾತು ಪಡಿಸಬೇಕಾಗುತ್ತದೆ. ಈಗ ಈ ಐದು ಲೋಪಗಳನ್ನು ವಿವರವಾಗಿ ತಿಳಿದುಕೊಳ್ಳಬೇಕು.

ಕೆಲವು ಸಲ ನಾವು ಮಾಡಿಕೊಂಡ ಕರಾರು ಶೂನ್ಯ ಅಥವಾ ಶೂನ್ಯಕರಣೀಯವಾಗಿರುತ್ತದೆ. ಶೂನ್ಯ ಕರಾರು ಯಾವುದೆಂದರೆ (1) ಕಾನೂನಿನಲ್ಲಿ ಅಸಿಂಧುವಾದ (2) ತಪ್ಪು ಕಲ್ಪನೆಯಿಂದ ಮಾಡಿದ (ಪರ್ಯಾಲೋಚಿಸದ) (3) ಕಾನೂನು ಮನ್ನಣೆ ಕೊಟ್ಟಿಲ್ಲದ ಮತ್ತು (4) ಜಾರಿಗೊಳಿಸಲಾಗದೆ ಇರುವ ಕರಾರು. ಅಪ್ರಾಪ್ತವಯಸ್ಕನ ಜೊತೆ ಮಾಡುವ ಕರಾರು ಅಥವಾ ಕಾನೂನಿನ ಮೂಲಕ ನಿಷೇಧಿತವಾದ ಕರಾರು ಈ ವರ್ಗಕ್ಕೆ ಸೇರುತ್ತವೆ. ಶೂನ್ಯಕರಣೀಯ ಕರಾರು ಯಾವುದೆಂದರೆ, ಕರಾರಿನ ಎಲ್ಲಾ ಅಂಶಗಳು ಮೇಲ್ನೋಟಕ್ಕೆ ಸರಿಯಾಗಿ ಕಾಣಬರುತ್ತವೆ. ಆದರೆ ವಾಗ್ದಾನದ ಲಕ್ಷಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿರುವ ಲೋಪ ಗೋಚರವಾಗುತ್ತದೆ. ಕರಾರಿನ ಸಾರವು ಸಮ್ಮತಿ ಅಥವಾ ಏಕರೀತಿಯ ಸಮ್ಮತಿಯಾಗಿರಬೇಕೆಂಬುದನ್ನು ತಿಳಿದಿದ್ದೇವೆ. ಎರಡೂ ಪಕ್ಷಗಳು ಒಂದೇ ಭಾವದ ಒಂದೇ ಕಾರ್ಯವನ್ನು ಒಂದೇ ಮನಸ್ಸಿನಿಂದ ಒಪ್ಪಿಕೊಂಡಿರ ಬೇಕು. ಸಮ್ಮತಿಯಲ್ಲಿ ದೋಷವಿರಬಹುದು. ಕಾನೂನು "ಮುಕ್ತ ಸಮ್ಮತಿ"ಯನ್ನು ಅಗತ್ಯಪಡಿಸುತ್ತದೆ. ಕರಾರು ಕಾನೂನಿನ ವರ್ಗ ೧೪ ಸಮ್ಮತಿಯು ಮುಕ್ತವಲ್ಲದ ಸಂದರ್ಭಗಳನ್ನು ಸೂಚಿಸುತ್ತದೆ. ಬಲಾತ್ಕಾರ (ಒತ್ತಾಯ) (Coercion), ಅನುಚಿತ ಪ್ರಭಾವ (Undue influence), ಮೋಸ (Fraud) ತಪ್ಪು ನಿರೂಪಣೆ (Misrepresentation) ಅಥವಾ ತಪ್ಪು ಗ್ರಹಿಕೆ (Mistake) ಯಿಂದ ಮಾಡಿದ ಕರಾರು ಮುಕ್ತವಲ್ಲ ಎಂದು ಘೋಷಿಸಿದೆ. ಇವುಗಳನ್ನು ಒಪ್ಪಂದದ ಮಾನ್ಯತೆಗೋಸ್ಕರ ''ಪಂಚಶೀಲ'' ಅಗತ್ಯ ಎಂದು ಕರೆಯಬಹುದು.

ಕರಾರು ಮೇಲೆ ಹೇಳಿದ ಐದು ಸಂದರ್ಭದಲ್ಲಿ ಯಾವುದಾದರೂ ಒಂದು ಸಂದರ್ಭದಲ್ಲಿ ಒಂದು ಪಕ್ಷದವನಿಂದ ಲೋಪವಾಗಿರಬಹುದು. ಆಗ ಆ ಲೋಪದ ರುಜುವಾತಿನ ಮೇಲೆ ಇನ್ನೊಂದು ಪಕ್ಷದವನು ಕರಾರಿನ ಜಾರಿಯನ್ನು ತಪ್ಪಿಸಬಹುದು. ಇದನ್ನು ಶೂನ್ಯಕರಣೀಯ ಕರಾರು ಎನ್ನುತ್ತಾರೆ (Voidable).

ಬಲಾತ್ಕಾರ (ಒತ್ತಾಯ) (Coercion)

ಒಂದು ಕರಾರಿನ ಸಮ್ಮತಿಯನ್ನು ಶಾರೀರಿಕ ಬಲಾತ್ಕಾರ ಮಾಡುವುದರಿಂದ ಅಥವಾ ಬಲಾತ್ಕಾರ ಮಾಡುವುದಾಗಿ ಭಯಪಡಿಸುವುದರಿಂದ ಪಡೆಯಬಹುದು. ವರ್ಗ ೧೫ ಇಂತಹ ಎರಡು ಸಂದರ್ಭಗಳನ್ನು ನಿರ್ದಿಷ್ಟಪಡಿಸುತ್ತದೆ.

ಎ) ಬಲಾತ್ಕಾರ ಎಂದರೆ, ಭಾರತ ದಂಡಸಂಹಿತೆಯಿಂದ (ಇಂಡಿಯನ್ ಪೀನಲ್‌ಕೋಡ್) ನಿಷೇಧಿತವಾದ ಕೃತ್ಯವನ್ನು ಮಾಡುವುದು ಅಥವಾ ಮಾಡುವಂತೆ

ಭಯಪಡಿಸುವುದು. ಭಾರತದ ದಂಡಸಂಹಿತೆಯು ಒಂದು ಅಧಿನಿಯಮವಾಗಿದ್ದು, ಅದು ಸಾಧಾರಣ ಗಾಯದಿಂದ ಕೊಲೆಯವರೆಗೆ ಬಗೆ ಬಗೆಯ ಅಪರಾಧಗಳ ಅಂಶಗಳನ್ನು ನಿರ್ದಿಷ್ಟಪಡಿಸುತ್ತದೆ ಮತ್ತು ಅದರ ದಂಡನೆಯನ್ನು ನಿಯಮಿಸುತ್ತದೆ.

ಬಿ) ಒಂದು ಪಕ್ಷವು ಕಾನೂನುಬಾಹಿರವಾಗಿ, ಸಮ್ಮತಿ ನೀಡದೆ ಇರುವ ಪಕ್ಷದ ಯಾವುದಾದರೂ ಸ್ವತ್ತನ್ನು ಬಂಧಿಸಿಡುವುದು ಅಥವಾ ಬಂಧಿಸಿಡುವುದಾಗಿ ಭಯ ಪಡಿಸುವುದರಿಂದಲೂ ಬಲಾತ್ಕಾರವು ಸಂಭವಿಸುತ್ತದೆ. ಒಂದು ಪಕ್ಷದ ಸಮ್ಮತಿ ಯನ್ನು ಶಾರೀರಿಕ ಬಲಾತ್ಕಾರ ಮಾಡುವುದರಿಂದ ಅಥವಾ ಅವನ ಮನಸ್ಸಿಗೆ ಹೆದರಿಕೆ ಉಂಟುಮಾಡುವುದರಿಂದ ತೆಗೆದುಕೊಂಡಿರಬಹುದು. ಬಲಾತ್ಕಾರಗಳು ಯಾವ ರೀತಿ ಇರಬಹುದೆಂಬುದಕ್ಕೆ ಒಂದು ನಿದರ್ಶನ : ಚಿಕ್ಕಂ ಅಮಿರಾಜು ವಿರುದ್ಧ ಚಿಕ್ಕಂ ಶೇಷಮ್ಮ ಇವರ ನಡುವಿನ ಮೊಕದ್ದಮೆಯ ತೀರ್ಮಾನ (Chikham Amiraju Vs. Chikham Sheshamma (1912) 16 I.C. 34) ದಲ್ಲಿ ಕಾಣುವಂತೆ ಬಹುವಿಧವಾಗಿರುತ್ತದೆ. ಅದರಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿಗೆ, ಅವಳ ಸ್ವತ್ತುಗಳನ್ನು ಅವನ ತಮ್ಮನ ಪರವಾಗಿ ಬರೆದು ಕೊಡುವಂತೆಯೂ, ಅವಳು ಅದನ್ನು ಮಾಡದಿದ್ದರೆ ಅವಳನ್ನು ವಿಧವೆ ಮಾಡುವುದಾಗಿಯೂ ಅಂದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿದನು. ನ್ಯಾಯಾಲಯದ ಮುಂದೆ ಆತ್ಮಹತ್ಯೆಯು ಭಾರತದ ದಂಡ ಸಂಹಿತೆಯಿಂದ ನಿಷೇಧಿತವಾದ ಕೃತ್ಯವೇ ? ಎಂಬ ಪ್ರಶ್ನೆ ಎದ್ದಿತು. ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನವು ಕಾನೂನಿನ ಮೇರೆಗೆ ದಂಡನೀಯ. ಆದರೆ ಆತ್ಮಹತ್ಯೆಗೆ ದಂಡನೆ ಇಲ್ಲ. ಏಕೆಂದರೆ ಆ ಮನುಷ್ಯನು ವಾಸ್ತವಿಕವಾಗಿ ಈ ಕಾನೂನಿನ ವ್ಯಾಪ್ತಿಯನ್ನು ಮೀರಿರುತ್ತಾನೆ. ವಾದ-ವಿವಾದಗಳ ನಂತರ ನ್ಯಾಯಾಲಯವು ಈ ರೀತಿ ನಿರ್ಧರಿಸಿತು : ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಸುವುದೂ ಒಂದು ರೀತಿ ಬಲಾತ್ಕಾರವೇ ಆಗಿರುತ್ತದೆ. ಶೂನ್ಯಕರಣೀಯ ಕರಾರುಗಳು ''ತಾನೇತಾನಾಗಿ'' ಅಶಕ್ತವಾಗುವುದಿಲ್ಲ. ನ್ಯಾಯಾ ಲಯದಲ್ಲಿ ನಾವು ಹಿಂದೆ ಕಂಡ ಪಂಚಶೀಲಗಳಲ್ಲಿ ಒಂದನ್ನಾದರೂ ರುಜುವಾತು ಮಾಡಿದರೆ ಆಗ ಕರಾರನ್ನು ಜಾರಿಗೊಳಿಸಲಾಗುವುದಿಲ್ಲ.

ಅನುಚಿತ ಪ್ರಭಾವ (Undue influence)

ಕರಾರು ಮಾಡಿಕೊಳ್ಳುವ ಎರಡು ಪಕ್ಷಗಳ ಸಂಬಂಧವು ಅನೇಕ ವೇಳೆ ಹೇಗಿರಬಹುದೆಂದರೆ, ಒಂದು ಪಕ್ಷವು ಇನ್ನೊಂದು ಪಕ್ಷದವರ ಮನಸ್ಸಿನ ಮೇಲೆ ಪ್ರಭಾವ ಬೀರುವ ಸ್ಥಿತಿಯಲ್ಲಿರಬಹುದು. ಒಬ್ಬನಿಂದ ಅನುಚಿತ ಲಾಭವನ್ನು ಪಡೆಯಲು ಅವನ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ ಹಾಗೆ ಇರಬಹುದು. ಉದಾ : ಇಲಾಖಾ ಮುಖ್ಯಾಧಿಕಾರಿಯು ತನ್ನ ನೌಕರನಿಗೆ ನಿವೇಶನ ದೊರೆತಿದೆ ಎಂದು ತಿಳಿದುಕೊಂಡು, ಆ ನೌಕರನನ್ನು ಅದೇ ಬೆಲೆಗೆ (ಪ್ರತಿಫಲಕ್ಕೆ) ನಿವೇಶನವನ್ನು ತನಗೆ

ವರ್ಗಾವಣೆ ಮಾಡಿಕೊಡುವಂತೆ ವಿನಂತಿಸಿಕೊಳ್ಳಬಹುದು. ಇಲ್ಲಿ ಕಾಣಬರುವ ಅಂಶವೇನೆಂದರೆ, ನಿವೇಶನ ವರ್ಗಾವಣೆಗೆ ನೌಕರನು ಸ್ವಇಚ್ಛೆ ಇಲ್ಲದೆ ಮುಖ್ಯಾಧಿಕಾರಿಯು ಒತ್ತಾಯಕ್ಕೆ ಮಣಿದು ಒಪ್ಪಿಗೆ ನೀಡಿರುವುದು. ಇಲ್ಲಿ ಪ್ರತಿಫಲವಿರಬಹುದು, ಆದರೆ ಒಪ್ಪಿಗೆ ದೋಷಯುಕ್ತ ಮತ್ತು ವರ್ಗಾವಣೆ ನೌಕರನ ಸಮ್ಮತಿಯು ಇಷ್ಟವಿಲ್ಲದ್ದಾಗಿರಬಹುದು. ಆದರೆ ಇಲಾಖಾ ಮುಖ್ಯಾಧಿಕಾರಿಯು ಅವನನ್ನು ವರ್ಗಾವಣೆ ಮಾಡಬಹುದು ಅಥವಾ ಇನ್ನಿತರ ಶತೃತ್ವದ ಕೃತ್ಯವನ್ನು ಮಾಡಬಹುದು. ಅಂತಹ ಸಂದರ್ಭಗಳಲ್ಲಿ ಒಪ್ಪಂದವು ಯೋಗ್ಯ ಪ್ರತಿಫಲ ಕ್ಕಾದರೂ ಸಹ ಅವನ ಸಮ್ಮತಿಯು ಇಷ್ಟವಿಲ್ಲದ ಸಮ್ಮತಿಯಾಗಿರಬಹುದು. ಇಲ್ಲಿ ನಾವು ಉಭಯ ಪಕ್ಷಗಳ ಸ್ಥಾನವನ್ನು ನೋಡಬೇಕಾಗುತ್ತದೆ ಮತ್ತು ಒಬ್ಬರು ಪ್ರಭಾವ ಬೀರುವ ಸ್ಥಾನದಲ್ಲಿ ಅಂದರೆ ಸಾಲಗಾರ (ಋಣಿ) ಮತ್ತು ಸಾಲ ಕೊಡುವವ, ರೋಗಿ ಮತ್ತು ವೈದ್ಯ, ಕಕ್ಷಿಗಾರ ಮತ್ತು ವಕೀಲ ಮುಂತಾದವರ ನಡುವೆ ಇರುವ ಸಂಬಂಧದಂತೆ ಇದ್ದಲ್ಲಿ ಜಾಗರೂಕತೆ ವಹಿಸಬೇಕು. ಇಂತಹ ಮಾದರಿಯ ಸನ್ನಿವೇಶಗಳನ್ನು, ''ವಿಶ್ವಾಸಾವಲಂಬಿ'' ಎಂದು ಕರೆದಿದ್ದಾರೆ. ಎಲ್ಲಾ ವಿಶ್ವಾಸ ಭಾವನೆ ಮತ್ತು ನಂಬಿಕೆ ಇನ್ನೊಂದು ಪಕ್ಷದಲ್ಲಿ ಇರಿಸಿರುವುದು ವಿಶ್ವಾಸಾವಲಂಬಿ ಸಂಬಂಧವನ್ನು ಸೃಷ್ಟಿಸುತ್ತದೆ. ಅಂತಹ ಸಂಬಂಧದಲ್ಲಿ ದುರುಪಯೋಗವಿದ್ದರೆ ಕರಾರು ಶೂನ್ಯಕರಣೀಯವಾಗ ಬಹುದು.

ಒಬ್ಬ ಮನುಷ್ಯನ ವಯಸ್ಸು, ಖಾಯಿಲೆ, ಮಾನಸಿಕ ಅಥವಾ ದೈಹಿಕ, ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಅವನ ಮಾನಸಿಕ ಸಾಮರ್ಥ್ಯದ ಮೇಲೆ ಮತ್ತೊಬ್ಬನು ಪರಿಣಾಮ ಬೀರುವಂತಹ ಸ್ಥಿತಿಯಲ್ಲಿರಬಹುದು. ಈ ಪಕ್ಷಗಳ ನಡುವೆ ಕರಾರು ಆದರೆ ಕಾನೂನು ಅದು ಅನುಚಿತ ಪ್ರಭಾವದಿಂದ ಎಂದು ಭಾವಿಸುತ್ತದೆ (Sec. 11). ಒಂದು ಸಲ ವಿಶ್ವಾಸಾವಲಂಬಿ ಸಂಬಂಧವಿದೆ ಎಂದು ಸ್ಥಾಪಿತವಾದರೆ, ಪಕ್ಷದ ಮೇಲೆ ಅನುಚಿತ ಲಾಭವನ್ನು ಪಡೆದಿಲ್ಲ ಎಂದು ರುಜುವಾತು ಮಾಡುವ ಭಾರವು ಎದುರು ಪಕ್ಷದವರ ಮೇಲೆ ಬೀಳುತ್ತದೆ. ಆದ್ದರಿಂದ ಅನುಚಿತ ಪ್ರಭಾವವನ್ನು ಕೆಲವು ಸಂದರ್ಭಗಳಲ್ಲಿ ಕಾನೂನು ಗಣನೆಗೆ ತೆಗೆದುಕೊಳ್ಳುತ್ತದೆ. ಉದಾಹರಣೆಗೆ ವೃದ್ಧ ಮತ್ತು ಅನಕ್ಷರಸ್ಥ ವ್ಯಕ್ತಿಗಳಿಂದ ಮಾಡಿದ ದಸ್ತಾವೇಜು, ಪರದಾ ಪದ್ಧತಿಯನ್ನು ಪಾಲಿಸುವ ಮಹಿಳೆಯೊಡನೆ ಮಾಡುವ ಕರಾರುಗಳು ಮುಂತಾದವುಗಳು. ಇಂತಹವರೊಡನೆ ಮಾಡಿಕೊಂಡ ಕರಾರನ್ನು ಎದುರು ಪಕ್ಷವು ಇದು ನ್ಯಾಯ ಸಮ್ಮತವೆಂದು ಸಮರ್ಥಿಸ ಬೇಕಾಗುತ್ತದೆ.

ತಪ್ಪು ನಿರೂಪಣೆ ಮತ್ತು ಮೋಸ

(Misrepresentation and Fraud)

ತಪ್ಪು ನಿರೂಪಣೆ ಮತ್ತು ಮೋಸದಿಂದ ಮಾಡಿಕೊಂಡ ಕರಾರು ವಂಚನೆ

ಗೊಳಗಾದ ಪಕ್ಷದ ಇಚ್ಛಾನುಸಾರ ಶೂನ್ಯಕರಣೀಯ. ಮೋಸವು ಸತ್ಯವನ್ನು ಅಡಗಿಸಿ, ಸುಳ್ಳು ನಿರೂಪಣೆ ಮಾಡಿದ ಸಂದರ್ಭ, ಇದನ್ನು ಸಾಮಾನ್ಯವಾಗಿ ಸತ್ಯವನ್ನು ಮುಚ್ಚುವುದು, ಸುಳ್ಳನ್ನು ಸೂಚಿಸುವುದಕ್ಕೆ ಹೋಲಿಸಲಾಗಿದೆ. (Suppressio- Veri, Suggestio Falsi) ಇನ್ನೂ ಹೆಚ್ಚಿಗೆ ಮೋಸದ ಸಂದರ್ಭಗಳು ಅಂದರೆ ಪಾಲಿಸುವ ಉದ್ದೇಶವಿಲ್ಲದೆ ಮಾಡಿದ ವಾಗ್ದಾನ ಮತ್ತು ವಂಚಿಸಲು ಹೊಂಚುಹಾಕಿದ ಮಾತು. ತಪ್ಪು ನಿರೂಪಣೆಯು ಸುಳ್ಳು ನಿರೂಪಣೆ ಯನ್ನು ಒಳಗೊಂಡಿರಬಹುದು. ಆದರೆ ಅದನ್ನು ಮೂರ್ಖತನದಿಂದ ಅಥವಾ ಅತಿಶಯೋಕ್ತಿ (ಅತ್ಯೋಕ್ತಿ, ಉತ್ಪ್ರೇಕ್ಷೆ Exaggeration) ಯಿಂದಾಗಲೀ ಅಂದರೆ ಸಾಮಾನ್ಯವಾಗಿ ದುರ್ಭಾವನೆ ಇಲ್ಲದೆ ಮಾಡಿರಬಹುದು. ವರ್ಗ ೧೮ ರಲ್ಲಿ ತಪ್ಪು ನಿರೂಪಣೆಗೆ ಮೂರು ರೀತಿಯ ಸಂದರ್ಭಗಳನ್ನು ನಿರೂಪಿಸಲಾಗಿದೆ.

ಎ) **ಭರವಸೆಯಿಲ್ಲದ ಸೂಚನೆ :**

ತಳಹದಿ ಇಲ್ಲದೆ ಇರುವ ಸೂಚನೆ ಅಥವಾ ಸುಳ್ಳು ಊಹೆಯ ಮೇಲೆ ಸೂಚಿಸುವುದು. ಇಂತಹ ಸಂದರ್ಭಗಳು ಯಾವುವೆಂದರೆ, ಮನುಷ್ಯನು ಮೌಲ್ಯವನ್ನು ಅಥವಾ ಸರಕುಗಳ ಲಕ್ಷಣವನ್ನು ಅತಿಶಯೋಕ್ತಿ (ಅತ್ಯೋಕ್ತಿ) ಮಾಡುವುದು ಅಥವಾ ಸುಸಂಬದ್ಧ ಸಂಗತಿಯನ್ನು ವೈಯಕ್ತಿಕವಾಗಿ ಪರೀಕ್ಷಿಸದೆ ಇನ್ನೊಬ್ಬರ ಮಾತಿನ ಮೇಲೆ ಅವಲಂಬಿತವಾಗುವುದು ಮುಂತಾದವು. ಒಬ್ಬ ಮನುಷ್ಯನು ಮೂರ್ಖತನದಿಂದ ಒಂದು ವಸ್ತುವನ್ನು ಸತ್ಯವೆಂದು ಹೇಳುವುದು. ಅಂತಹ ವಿಷಯವನ್ನು ತಾನೂ ಸತ್ಯವೆಂದೂ ನಂಬುವುದು. ಉದಾ : ಖರೀದಿಗಿಟ್ಟ ಒಂದು ವಸ್ತುವಿನ ಗುಣದ ಬಗ್ಗೆ ಸಲ್ಲದ ಹೊಗಳಿಕೆ.

ಬಿ) ಯಾವುದೇ ಕರ್ತವ್ಯದ ಉಲ್ಲಂಘನೆ ಅಥವಾ ತನ್ನ ವಾಕ್ಯಗಳ ಮೇಲೆ ಭರವಸೆ ಇಟ್ಟುಕೊಂಡಿರುವ ಇನ್ನೊಬ್ಬ ಮನುಷ್ಯನನ್ನು ತಪ್ಪುದಾರಿಗೆ ಎಳೆಯುವುದು.

ಸಿ) ಒಪ್ಪಂದದ ಒಂದು ಪಕ್ಷಕ್ಕೆ, ವಸ್ತು ವಿಷಯದ ಬಗ್ಗೆ ಉಪಾಯದಿಂದ ತಪ್ಪು ಗ್ರಹಿಕೆ ಉಂಟುಮಾಡುವುದು, ಅಂದರೆ ಎದುರು ಪಕ್ಷದ ತೀರ್ಮಾನಕ್ಕೆ ಪರಿಣಾಮ ಬೀರಲು ಸಂಬಂಧಪಟ್ಟ ಅಂಕಿ-ಅಂಶಗಳನ್ನು ಅಡಗಿಸಿಡುವ ಸಂದರ್ಭ, ಮಾರಾಟಕ್ಕೆ ನೀಡಲಾದ ಭೂಮಿಯ ಬಗ್ಗೆ ಯಾವುದೇ ವಿಷಯ ಅಥವಾ ಆ ಭೂಮಿಯ ಸ್ವಾಧೀನ, ವ್ಯವಹರಣೆಯ ಬಗ್ಗೆ ತಿಳುವಳಿಕೆ ಕೊಡದೇ ಇರುವುದು ಇವು ಈ ಶಿರೋನಾಮೆಯಲ್ಲಿ ಬರುತ್ತವೆ.

ಮೋಸವನ್ನು ತಪ್ಪು ನಿರೂಪಣೆಯಿಂದ ವಿಭಿನ್ನಗೊಳಿಸುವ ಮುಖ್ಯವಾದ ಅಂಶಗಳಾವವು ? ಮೋಸದ ಸಂದರ್ಭದಲ್ಲಿ ನಿರೂಪಣೆಯು (representation) ತಿಳುವಳಿಕೆಯಿದ್ದೂ ಅಥವಾ ಅದರ ಸತ್ಯತೆಯಲ್ಲಿ ನಂಬಿಕೆ ಇಲ್ಲದಿದ್ದರೂ ಸುಳ್ಳು ಹೇಳುವುದು, ವ್ಯವಹರಣೆಗಳಲ್ಲಿ ಕೇವಲ ಮೌನವು ಮೋಸವಾಗುವುದಿಲ್ಲ. ಆದರೆ

ಮಾತನಾಡಬೇಕಾದ ಕರ್ತವ್ಯವಿಲ್ಲದಿದ್ದರೆ ಸ್ವಲ್ಪ ಬಚ್ಚಿಡುವಿಕೆ ಸಂಭವಿಸಬಹುದು. ಅಸ್ವಸ್ಥ ಕುದುರೆಯ ಮಾರಾಟಗಾರನು ಅದರ ಗುಣದ ಬಗ್ಗೆ ಏನನ್ನೂ ಹೇಳದಿದ್ದರೂ ಸಹ ಅದು ಮೋಸವಾಗುವುದಿಲ್ಲ. ಇದರ ಸಾಮಾನ್ಯ ತತ್ವವೇನೆಂದರೆ ''ಕೊಳ್ಳುವವನು ಎಚ್ಚರದಿಂದಿರಲಿ'' (Caveat Emptor) ಎಂದು ಅರ್ಥ. ಆದರೆ ಸಂಬಂಧ ಅಥವಾ ಬೇರೆ ವಿಶ್ವಾಸಗಳ ಕಾರಣದಿಂದಾಗಿ ಒಂದು ಪಕ್ಷವು ಇನ್ನೊಂದು ಪಕ್ಷದ ಮೇಲೆ ವಿಶ್ವಾಸವನ್ನು ಇರಿಸುತ್ತದೆ. ಅಂತಹ ಸಂದರ್ಭಗಳಲ್ಲಿ ವಿಷಯವನ್ನು ಬಹಿರಂಗ ಪಡಿಸಬೇಕಾದ ಕರ್ತವ್ಯ ಇರುತ್ತದೆ. ಉದಾ : ವಿಮಾ ಕರಾರು. ಅಂತಹ ಕರಾರನ್ನು ''ಸಂಪೂರ್ಣ ನಂಬಿಕೆ''ಯ ಪರಮವಿಶ್ವಾಸ (Ubberrimaefide) ಕರಾರು ಎಂದು ಕರೆಯಲ್ಪಟ್ಟಿದೆ. ಈ ಕರಾರುಗಳಲ್ಲಿ ಕಾನೂನು ವಿಷಯವನ್ನು ಬಹಿರಂಗಪಡಿಸ ಬೇಕಾದ ಕರ್ತವ್ಯವನ್ನು ವಿಧಿಸುತ್ತದೆ. "ಮೌನವು ಮೋಸವಲ್ಲ" (Silence is not fraud) ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ. ಆದರೆ ಕೆಲವು ಸಮಯಗಳಲ್ಲಿ ''ಮೌನವು ಘೋಷಣೆಗೆ ಸಮಾನ". ವಾಗ್ಮಿತೆ (eloquent) ಆಗಿರಬಹುದು. ಉದಾಹರಣೆಗೆ ಒಬ್ಬ ವ್ಯಕ್ತಿಯು ವಿಶೇಷ ಮಾಹಿತಿಯನ್ನು ಹೊಂದಿದ್ದರೂ ಸಹ ಅದು ಇನ್ನೊಂದು ಪಕ್ಷದ ತೀರ್ಮಾನದ ಮೇಲೆ ಪ್ರಭಾವ ಬೀರುತ್ತದೆಯೆಂದು ತಿಳಿದು ಆ ವಿಷಯವನ್ನು ಬಹಿರಂಗಪಡಿಸದೇ ಇರುವುದು.

ತಪ್ಪು ಗ್ರಹಿಕೆ (Mistake)

ಅನೇಕ ಸಲ ಒಂದು ಪಕ್ಷವು ತಾನು ತಪ್ಪುಗ್ರಹಿಕೆಯಿಂದ ಕರಾರು ಮಾಡಿಕೊಂಡಿದ್ದೇನೆ ಎನ್ನುವ ಆಧಾರದ ಮೇಲೆ ಕರಾರಿನ ನೆರವೇರಿಕೆಯನ್ನು ನಿವಾರಿಸಲು ಪ್ರಯತ್ನಿಸುತ್ತದೆ. (Unilateral mistake is not recognised) ಸಾಮಾನ್ಯವಾಗಿ ಹೇಳುವುದಾದರೆ ''ಏಕಪಕ್ಷೀಯ ತಪ್ಪುಗ್ರಹಿಕೆಯು ಮನ್ನಣೆ ಪಡೆದಿಲ್ಲ.'' ಒಪ್ಪಂದದ ಎರಡೂ ಪಕ್ಷಗಳೂ ಯಾವುದಾದರೂ ಒಪ್ಪಂದಕ್ಕೆ ಬೇಕಾದ ಅತ್ಯಾವಶ್ಯಕ ಸಂಗತಿಯ ಬಗ್ಗೆ ತಪ್ಪುಗ್ರಹಿಕೆ ಮಾಡಿಕೊಂಡಿದ್ದರೆ ಮಾತ್ರ ಕರಾರು ಕಾಯಿದೆಯ ವರ್ಗ ೨೦ ರ ಪ್ರಕಾರ, ಆ ಒಪ್ಪಂದವು ಶೂನ್ಯವಾಗುತ್ತದೆ. ಉದಾಹರಣೆಗೆ ಸ್ವತ್ತುಗಳ ಮಾರಾಟಕ್ಕೆ ಸಂಬಂಧಿಸಿದ ವಿಷಯದಲ್ಲಿ ಕರಾರು ಮಾಡಿಕೊಳ್ಳುವಾಗ ಆ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂಬುದು ಎರಡೂ ಪಕ್ಷಗಳಿಗೂ ತಿಳಿಯದೇ ಇರುವ ಸಂದರ್ಭ. ಇದನ್ನು ಈ ರೀತಿ ವಿವರಿಸಲಾಗಿದೆ : ಒಂದು ಕರಾರನ್ನು ಸೃಷ್ಟಿ ಮಾಡಲು ಎರಡೂ ಪಕ್ಷಗಳೂ ಒಂದೇ ವಿಷಯವನ್ನು ಒಂದೇ ಭಾವದಲ್ಲಿ ಒಪ್ಪಿಕೊಳ್ಳಬೇಕಾದ್ದು ಅತ್ಯಾವಶ್ಯಕ. ಆದ್ದರಿಂದ ಎರಡು ವ್ಯಕ್ತಿಗಳು, ಒಬ್ಬ ನಿರ್ದಿಷ್ಟ ವ್ಯಕ್ತಿ ಅಥವಾ ಒಂದು ನೌಕೆಗೆ ಸಂಬಂಧವಾಗಿ ಒಂದು ವ್ಯಕ್ತ ಕರಾರನ್ನು ಮಾಡಿಕೊಂಡು, ಪ್ರತಿಯೊಬ್ಬರೂ ಒಂದೇ ಹೆಸರುಗಳ ಸಾದೃಶ್ಯದಿಂದ ತಪ್ಪುದಾರಿಗೆ ಬಿದ್ದಂತಾದರೆ,

ಅಂದರೆ ಇಬ್ಬರೂ ಬೇರೆ ವ್ಯಕ್ತಿ ಅಥವಾ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ, ಅವರಿಬ್ಬರ ನಡುವೆ ಮಾಡಲ್ಪಟ್ಟ ಕರಾರು ಅಸ್ತಿತ್ವಗೊಳ್ಳುವುದಿಲ್ಲ. (Smith Vs. Hughes 1871 LR 6 QB 597).

ಕರಾರಿನ ಪ್ರತಿ ಪಕ್ಷವೂ ವಿವೇಕದಿಂದ ಕರಾರನ್ನು ಮಾಡಿಕೊಳ್ಳುವುದನ್ನು ಅಥವಾ ಅವಶ್ಯಕವಾದ ಸಲಹೆಗಳನ್ನು ಪಡೆದುಕೊಂಡ ನಂತರ ಕರಾರಿಗೆ ಒಪ್ಪಬೇಕಾದದ್ದನ್ನು ಕಾನೂನು ಸೂಚಿಸುತ್ತದೆ. ವರ್ಗ ೨೨ ರ ಪ್ರಕಾರ, ಒಬ್ಬ ವ್ಯಕ್ತಿಯು ಕರಾರಿನ ವಿಶೇಷತೆಯ ಬಗ್ಗೆ ತಪ್ಪು ಅನಿಸಿಕೆಯ ಮೇರೆಗೆ ಕರಾರನ್ನು ಮಾಡಿಕೊಂಡನೆಂದರೆ, ಅವನ ಅಹವಾಲನ್ನು ಪುರಸ್ಕರಿಸಲಾಗುವುದಿಲ್ಲ. ಅನೇಕ ಸಲ ನ್ಯಾಯಾಲಯಗಳು ಅಂತಹ ವ್ಯಕ್ತಿಗಳ ಸಹಾಯಕ್ಕೆ ಬಂದಿವೆ. ಅವು ಯಾವುವೆಂದರೆ :

ಅ) ಅನನ್ಯತೆ (ಗುರುತು)ಯ ಬಗ್ಗೆ ತಪ್ಪುಗ್ರಹಿಕೆ :

ಇದರ ಬಗ್ಗೆ ದೃಷ್ಟಾಂತ ಪ್ರಕರಣವು ಕಂಡಿ ವಿರುದ್ಧ ಲಿಂಡ್ಸೆ (Cundy Vs. Lindsay 1878 3 AC 459) ನಲ್ಲಿ ಇದೆ. ಒಬ್ಬ ವ್ಯಕ್ತಿಯು ಕೆಲವು ಸರಕುಗಳನ್ನು ಸರಬರಾಜು ಮಾಡಲು ಸೂಚನೆ ಮಾಡಿದನು. ಇನ್ನೊಂದು ಪಕ್ಷವು ಆ ಮನುಷ್ಯನ ಗುರುತನ್ನು ಅದೇ ಹೆಸರಿನ ಬೇರೆಯವರೆಂದು ತಪ್ಪಾಗಿ ಗ್ರಹಿಸಿತು. ನ್ಯಾಯಾಲಯವು ಕರಾರು ಮಾಡಿಕೊಳ್ಳುತ್ತಿರುವ ಪಕ್ಷದ ಗುರುತಿನ ವಿಷಯವಾಗಿ ಎಲ್ಲಿ ಮೂಲಭೂತ ತಪ್ಪು ಗ್ರಹಿಕೆ ಇದೆಯೋ ಆಗ ನಿಜವಾದ ಕರಾರು ನಿರ್ಮಿತವಾಗುವುದಿಲ್ಲ ಎಂದು ತೀರ್ಮಾನಿಸಿತು. ಈ ತತ್ವವು ಸಯಿದ್ ವಿರುದ್ಧ ಬಟ್ (Said Vs. Butt 1920 3 KB 497) ನಲ್ಲಿ ಹೆಚ್ಚಿಗೆ ವಿಸ್ತರಿಸಿತು. ಅದರಲ್ಲಿ ಒಬ್ಬ ಪತ್ರಕರ್ತನು ತಾನು ಟಿಕೆಟ್ ಪಡೆದುಕೊಂಡಿದ್ದರೂ ಸಹ ಅವನಿಗೆ ಪ್ರವೇಶವನ್ನು ನಿರಾಕರಿಸಿದ್ದಕ್ಕೆ ಒಂದು ರಂಗಮಂಟಪದ ವ್ಯವಸ್ಥಾಪಕನ ಹತ್ತಿರ ಹಾನಿ ಪರಿಹಾರವನ್ನು ಪಡೆಯಲು ಇಚ್ಛಿಸಿದನು. ಈ ಪತ್ರಕರ್ತನು ಒರಟಾದ ಮತ್ತು ಕಟು ವಿಮರ್ಶಕನಾಗಿದ್ದುದರಿಂದ ವ್ಯವಸ್ಥಾಪಕನು ನಾಟಕದ ಮೊದಲನೇ ಪ್ರದರ್ಶನದಲ್ಲೇ ಟೀಕೆಯನ್ನು ಪಡೆಯಲು ಇಚ್ಛಿಸಲಿಲ್ಲವಾದ್ದರಿಂದ ಅವನಿಗೆ ಟಿಕೆಟ್ಟನ್ನು ಮಾರಲು ತಿರಸ್ಕರಿಸಲಾಗಿತ್ತು. ಪತ್ರಕರ್ತನು ಅವನ ಒಬ್ಬ ಸ್ನೇಹಿತನ ಮುಖಾಂತರ ಅದು ತನಗೆ ಎಂದು ಹೇಳದೇ ಟಿಕೆಟ್ಟನ್ನು ಪಡೆದನು. ನ್ಯಾಯಾಲಯವು ಅವನಿಗೂ ರಂಗಮಂಟಪಕ್ಕೂ ನಡುವೆ ಕರಾರು ಇಲ್ಲ. ನಿಜವಾದ ಖರೀದಿಕಾರನ ವಿಷಯ ಮತ್ತು ಅವನ ಗುರುತನ್ನು ಬಹಿರಂಗ ಪಡಿಸದಿರುವುದು ಮಾನ್ಯತೆ ಪಡೆದ ಕರಾರಾಗುವುದನ್ನು ತಡೆಗಟ್ಟಿತು ಎಂದು ತೀರ್ಮಾನಿಸಿತು.

ಆ) ವಸ್ತು ವಿಷಯದ ಬಗ್ಗೆ ತಪ್ಪು ಗ್ರಹಿಕೆ :

ಇದನ್ನು ರಾಫಲ್ಸ್ ವಿರುದ್ಧ ವಿಚೆಲಾಸ್ (Raffles Vs. Wichelhaus 1864

159 ER 375) ಮೊಕದ್ದಮೆಯಲ್ಲಿ ವಿವರಿಸಿದೆ. ಅದರಲ್ಲಿ ಒಂದು ಪಕ್ಷವು ಮುಂಬಯಿಗೆ ಪೀಯರಲೆಸ್ ಎಂಬ ಹಡಗಿನಲ್ಲಿ ತರಬೇಕಾದ ಹತ್ತಿಯ ಬಗ್ಗೆ ಒಪ್ಪಂದ ಮಾಡಿಕೊಂಡಿತು. ವಾಸ್ತವಿಕವಾಗಿ ಪಿಯರ್‌ಲೆಸ್ ಎಂಬ ಹೆಸರಿನ ಎರಡು ಹಡಗುಗಳು ಇದ್ದವು. ಒಂದು ಪ್ರತಿವಾದಿಯ ಮನಸ್ಸಿನಲ್ಲಿದ್ದುದು ಅಕ್ಟೋಬರ್‌ನಲ್ಲಿ ಬರಬೇಕಾದ ಹಡಗು ಮತ್ತು ಇನ್ನೊಂದು ಪಕ್ಷದವನ ಮನಸ್ಸಿನಲ್ಲಿದ್ದುದು ಡಿಸೆಂಬರ್‌ನಲ್ಲಿ ಬರಬೇಕಾದ ಹಡಗು ''ಕರಾರಿನಲ್ಲಿ ಏಕರೀತಿಯ ಸಮ್ಮತಿ'' ಇಲ್ಲದಿದ್ದುದರಿಂದ ಕರಾರಿನ ಸಾಧ್ಯತೆಯೇ (Consensus-ad-idem) ಇಲ್ಲ ಎಂದು ತೀರ್ಮಾನಿಸಲಾಯಿತು.

೩) ವಾಗ್ದಾನದ ಲಕ್ಷಣದಲ್ಲಿ ತಪ್ಪುಗ್ರಹಿಕೆ :

ಎರಡು ಪಕ್ಷಗಳ ನಡುವಿನ ಒಪ್ಪಂದವನ್ನು ಬರಹಕ್ಕಿಳಿಸಿದಾಗ (ಬರವಣಿಗೆ ಮಾಡುವಾಗ) ವಾಗ್ದಾನದ ಲಕ್ಷಣ ಅಥವಾ ಸ್ವಭಾವವನ್ನು ಅದರಲ್ಲಿ ಕ್ರಮಬದ್ಧವಾಗಿ ಮಾಡದೇ ಇದ್ದು ತಪ್ಪು ಗ್ರಹಿಕೆ ಉಂಟಾಗಿರುವ ಸಂದರ್ಭ. ಒಂದು ಮುಖ್ತ್ಯಾರನಾಮೆಯಂತೆ ಕಾಣುವ ಪತ್ರ ದಾನಪತ್ರವಾಗಿರಬಹುದು. ಕಲ್ಕತ್ತಾ ಉಚ್ಚನ್ಯಾಯಾಲಯದ ಒಂದು ಮೊಕದ್ದಮೆಯ ತೀರ್ಪು : ನ್ಯೂ ಇಂಡಿಯಾ ರಬ್ಬರ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಓರಿಯಂಟಲ್ ಫೈರ್ ಆ್ಯಂಡ್ ಜನರಲ್ ಇನ್ಶೂರೆನ್ಸ್ ಕಂ. ಲಿ. (New India Rubber Works (Pvt.) Ltd., Vs. Oriental fire and Genral Insurance Co. Ltd., (1968) 1 Comp LJ 153 (Cal) ಒಂದು ಕಾರ್ಖಾನೆಯು ಬೆಂಕಿ, ದೊಂಬಿ ಮತ್ತು ಮುಷ್ಕರಗಳ ಬಗ್ಗೆ ಉಂಟಾಗಬಹುದಾದ ಗಂಡಾಂತರಗಳನ್ನೊಳಗೊಂಡ ವಿಮೆಯನ್ನು ಹೊಂದಿತ್ತು. ವಿಮೆಯನ್ನು ನವೀಕರಿಸುವ ಸಮಯದಲ್ಲಿ ವಿಮಾ ಕಂಪನಿಯು ಬೇರೆ ಬೇರೆ ಸಂದರ್ಭಗಳಿಗೆ ನವೀಕರಿಸಲು ಅದರ ದರಗಳ ಪಟ್ಟಿಯನ್ನೂ ಕಳುಹಿಸಿತು. ಕಾರ್ಖಾನೆಯು ಬೆಂಕಿಯಿಂದುಂಟಾಗಿರುವ ಗಂಡಾಂತರಕ್ಕೆ ಮಾತ್ರ ಹಣದ ಮೊತ್ತವನ್ನು ಕಳುಹಿಸಿತು. ಆದರೆ ಕಂಪನಿಯು ಹಳೇ ವಿಮಾ ಪತ್ರದಂತೆ ಬೆಂಕಿ, ದೊಂಬಿ ಮತ್ತು ಮುಷ್ಕರಗಳ ಬಗ್ಗೆ ಸಾಮಾನ್ಯ ನಿಬಂಧನೆಗಳನ್ನೊಳಗೊಂಡ ಹಳೇ ಪಾಲಿಸಿಯನ್ನೇ ತಪ್ಪುಗ್ರಹಿಕೆಯಿಂದ ನವೀಕರಿಸಿತು. ನಂತರ ಕಾರ್ಖಾನೆಯು ದೊಂಬಿಯಿಂದ ನಾಶಗೊಂಡಿತು. ದಾವೆ ಹೂಡಿದಾಗ ಕಂಪನಿಯು ನವೀಕರಿಸಿದ ಕರಾರು, ಒಂದೇ ಗಂಡಾಂತರದ ವಿಷಯದ ಬಗ್ಗೆ ಒಪ್ಪಂದವಾಗಿದೆ ಎಂಬ ವಾದವನ್ನು ಎತ್ತಲಾಯಿತು. ತಪ್ಪುಗ್ರಹಿಕೆಯಿಂದ ಇದು ತಿಳಿಯಲಿಲ್ಲ. ಪಾಲಿಸಿ ಕೊಟ್ಟಿದ್ದು ಏಕಪಕ್ಷೀಯ ತಪ್ಪುಗ್ರಹಿಕೆಯಾಗಿದ್ದರೂ ಸಹ ನ್ಯಾಯಾಲಯವು ವಿಮಾ ಕಂಪನಿಯ ವಾದವನ್ನು ಎತ್ತಿ ಹಿಡಿಯಿತು. ಇಲ್ಲಿ ಮೂಲ ಒಪ್ಪಂದವು ಬರಹಕಾಲದಲ್ಲಿ ವಿವರ್ತವಾದರೂ, ದೋಷವನ್ನು ಸರಿಪಡಿಸಲಾಯಿತು.

ತಪ್ಪುಗ್ರಹಿಕೆಯ ವಾದವು ಸಂಗತಿಯ ಸಂಬಂಧದಲ್ಲಿ ಮಾತ್ರ ದೊರೆಯುತ್ತದೆ.

ಕಾನೂನಿನ ತಪ್ಪುಗ್ರಹಿಕೆಯು ಮಾನ್ಯವಲ್ಲ. ಏಕೆಂದರೆ ವರ್ಗ ೨೧ ರ ಪ್ರಕಾರ ಕಾನೂನು ವಿಷಯದಲ್ಲಿ ತಪ್ಪುಗ್ರಹಿಕೆ ಸಮಂಜಸ ಕಾರಣವಲ್ಲ. ''ಕಾನೂನಿನ ವಿಷಯದಲ್ಲಿ ಅಜ್ಞಾನವನ್ನು ಕ್ಷಮಿಸಲು ಸಾಧ್ಯವಿಲ್ಲ'' ಎಂಬ ತತ್ವ. (Ignorance of law is no execuse) ಇದು ನ್ಯಾಯಶಾಸ್ತ್ರದ ಸಾಮಾನ್ಯ ತತ್ವವಾಗಿದ್ದು ಎಲ್ಲಾ ಶಾಸನ ರಚನೆಗೂ ಅನ್ವಯಿಕವಾಗುತ್ತದೆ. ಪ್ರತೀ ಪ್ರಜೆಯು ತನ್ನ ದೇಶದ ಕಾನೂನುಗಳನ್ನು ತಿಳಿದುಕೊಂಡಿರಬೇಕಾದ್ದು ಅವನ ಕರ್ತವ್ಯವಾಗಿದೆ.

****

ಭಾಗ - ೧೩

ಒಪ್ಪಂದದ ಉದ್ದೇಶ ಮತ್ತು ಪ್ರತಿಫಲ

(Legality of object and consideration)

ನಾವು ಇಲ್ಲಿಯವರೆಗೆ ಪ್ರತಿಫಲ ಎಂದರೆ ಎರಡೂ ಪಕ್ಷಗಳಿಗೂ ಉಂಟಾಗುವ ಪ್ರಯೋಜನ ಎಂಬುದನ್ನು ತಿಳಿದುಕೊಂಡಿದ್ದೇವೆ. ಈಗ ''ಪ್ರತಿಫಲ'' ಎಂಬ ವಿಷಯದ ಬಗ್ಗೆ ಇನ್ನೂ ಹೆಚ್ಚಾಗಿ ತಿಳಿದುಕೊಳ್ಳುವುದು ಉತ್ತಮ. ವರ್ಗ ೨೩ ರ ಪ್ರಕಾರ, ಒಂದು ಒಪ್ಪಂದದ ಪ್ರತಿಫಲ ಅಥವಾ ಉದ್ದೇಶ ಈ ಕೆಳಕಂಡಂತಿದ್ದರೆ ಅದು ಕಾನೂನು ಬಾಹಿರ.

ಅ) ಅದು ಕಾನೂನಿನ ಮೂಲಕ ನಿಷೇಧಿತ ಅಥವಾ

ಆ) ಅದು ಎಂತಹ ಸ್ವಭಾವದ್ದೆಂದರೆ ಅನುಮತಿ ಕೊಟ್ಟರೆ ಯಾವುದೇ ಕಾನೂನಿನ ಉಪಬಂಧಗಳನ್ನು ವಿಫಲಗೊಳಿಸುತ್ತದೆ ಅಥವಾ

ಇ) ಮೋಸವಾಗಿರುವುದು ಅಥವಾ

ಈ) ಬೇರೆ ಮನುಷ್ಯನ ಅಥವಾ ಬೇರೆಯವನ ಸ್ವತ್ತಿನ ಹಾನಿಯನ್ನು ಒಳಗೊಂಡಿರುವುದು ಅಥವಾ

ಉ) ನ್ಯಾಯಾಲಯವು ಅದನ್ನು ಅನೈತಿಕ ಅಥವಾ ಸಾರ್ವಜನಿಕ ನೀತಿಗೆ ವಿರುದ್ಧವಾದದ್ದೆಂದು ಗುರುತಿಸುವುದು.

ಈ ಮೇಲಿನ ಐದು ಅಂಶಗಳನ್ನೊಳಗೊಂಡಿಲ್ಲದಿದ್ದರೆ ಕಾನೂನಿನ ಪ್ರಕಾರ ಅದು ಮಾನ್ಯ ಕರಾರು (Valid Contract). ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನಿಗೆ ಒಂದು ನಿರ್ದಿಷ್ಟ ಕೆಲಸವನ್ನು ಮಾಡಲು ಹಣವನ್ನು ಸಂದಾಯ ಮಾಡುತ್ತಾನೆ. ಈ ಹಣವು ಇನ್ನೊಂದು ಪಕ್ಷಕ್ಕೆ ಪ್ರತಿಫಲವಾಗುತ್ತದೆ. ಮಾಡಲು ಹೇಳಿದ ಕೆಲಸವು ಒಬ್ಬ ಶತ್ರುವನ್ನು ನಾಶ ಮಾಡಲು ಇರಬಹುದು ಮತ್ತು ಅದೇ ಪ್ರತಿಫಲವಾಗಿರಬಹುದು. ಆದ್ದರಿಂದ ಕರಾರಿನಲ್ಲಿ ಪ್ರತಿಫಲ ಎಂಬ ಪದಕ್ಕೆ ಅರ್ಥ ''ಉದ್ದೇಶ'' ಎಂಬುದನ್ನು ತಿಳಿದುಕೊಳ್ಳಬೇಕು. ಯಾವಾಗ ಪ್ರತಿಫಲವು ಕಾನೂನು ಬಾಹಿರವಾಗಿರುತ್ತದೆಯೋ ಆಗ ಕರಾರು ಶೂನ್ಯ ಮತ್ತು ಜಾರಿಗೊಳಿಸಲನರ್ಹ ಎಂದು ಕಾನೂನು ಹೇಳುತ್ತದೆ.

ಹಲವಾರು ಕಾಯಿದೆಗಳು ಯಾವ ರೀತಿಯಲ್ಲಿ ಕೆಲವು ತರಹದ ವ್ಯವಹರಣೆಗಳು ಸಂಭವಿಸಬೇಕು ಎಂಬುದನ್ನು ನಿಯಮಿಸುತ್ತವೆ. ಭಾರತದ ನಗರ ಪ್ರದೇಶದಲ್ಲಿರುವ ಭೂಮಿಯನ್ನು ಆ ಕಾಯಿದೆಯ ಕಾರ್ಯನಿರ್ವಹಣೆ ಮಾಡುತ್ತಿರುವ ಸಕ್ಷಮ ಪ್ರಾಧಿಕಾರ ಅಧಿಕಾರಿಯ (Comptent Authority) ಅನುಮತಿಯಿಂದ ಮಾತ್ರ ಮಾರಬಹುದು.

ಬೇಸಾಯ (ಕೃಷಿ) ಭೂಮಿಯನ್ನು ಬೇರೊಬ್ಬ ಬೇಸಾಯಗಾರನಿಗೆ ಮಾತ್ರವಲ್ಲದೆ ಕರ್ನಾಟಕದಲ್ಲಿ ಬೇರೆ ಇನ್ಯಾರಿಗೂ ವರ್ಗಾವಣೆ ಮಾಡಬಾರದು. ಖಾಲಿ ಮನೆಗಳನ್ನು ಬಾಡಿಗೆ ನಿಯಂತ್ರಕನ (Rent Controller) ಮಂಜೂರಾತಿ ಇಲ್ಲದೆ ಬಾಡಿಗೆಗೆ ಕೊಡುವ ಹಾಗಿಲ್ಲ. ಅಬಕಾರಿ (ಸುಂಕ) ಅನುಮತಿ ಪತ್ರಗಳನ್ನು ವರ್ಗಾವಣೆ ಮಾಡಕೂಡದು. ನಿಯಂತ್ರಿತ ವಸ್ತುಗಳ ವ್ಯವಹಾರ ಮಾಡಲು ಅನುಮತಿಯು ಅತ್ಯಾವಶ್ಯಕ ಮತ್ತು ಇನ್ನೂ ಬೇರೆ ಬೇರೆ ವಸ್ತು ಅಥವಾ ವಿಷಯಗಳಲ್ಲಿ ಅಥವಾ ವಿಷಯ ವಸ್ತುಗಳಲ್ಲಿ ವ್ಯವಹಾರ ಮಾಡಲು ಅನುಮತಿ ಅವಶ್ಯಕ. ಕಾನೂನಿನ ಉಪಬಂಧವನ್ನು ಅನುಸರಿಸದೆ ಪಕ್ಷಗಳು ನೇರವಾಗಿ ವ್ಯವಹರಿಸಲು ತೊಡಗಿದರೆ ಕರಾರು ಶೂನ್ಯವಾಗುತ್ತದೆ ಮತ್ತು ಅದನ್ನು ಜಾರಿಗೊಳಿಸ ಲಾಗುವುದಿಲ್ಲ.

ಕಾನೂನು ಪತ್ರಿಕೆಗಳು ಈ ಬಗ್ಗೆ ಬಹಳಷ್ಟು ಮೊಕದ್ದಮೆಗಳನ್ನು ವರದಿ ಮಾಡಿವೆ. ಒಂದು ಮೊಕದ್ದಮೆಯನ್ನು ಇಲ್ಲಿ ಗಮನಿಸುವುದು ಅವಶ್ಯಕ. ಚಾಂಪ್ಸೆ ವಿರುದ್ಧ ಗೊರ್ಧನದಾಸ್ (Champsey Vs. Gordhandas AIR 1921 PC 137). ಎಲ್ಲಿ ಅಬಕಾರಿ ಅನುಮತಿ ಪತ್ರವು ಮಾರಾಟ, ವರ್ಗಾವಣೆ ಅಥವಾ ಒಳಗೇಣಿಯನ್ನು ನಿಷೇಧಿಸುತ್ತದೆಯೋ, ಅಂತಹ ಅನುಮತಿ ಪತ್ರ ಹೊಂದಿರುವವನಿಂದ ಸೃಷ್ಟಿಸಲ್ಪಟ್ಟ ಪಾಲುಗಾರಿಕೆಯು ಕಾನೂನು ಬಾಹಿರ. ಏಕೆಂದರೆ ಅನುಮೋದನೆ ಯಿಲ್ಲದ ವ್ಯಕ್ತಿಗಳು ಅನುಮತಿ ಪತ್ರ ಪಡೆಯುವ ಸೋಗಿನಲ್ಲಿ ಹೆಂಡದ ಮಾರಾಟ ಮುಂತಾದವನ್ನು ಮಾಡಿ ಕಾನೂನಿನ ಧೋರಣೆಯನ್ನು ವಿಫಲಗೊಳಿಸುತ್ತಾರೆ. ಒಂದು ಕಾಯಿದೆಯ ಉಪಬಂಧಗಳನ್ನು ಅಪ್ರತ್ಯಕ್ಷವಾಗಿ ವಿಫಲಗೊಳಿಸುವ ಒಪ್ಪಂದವು ಶೂನ್ಯ.

ಕೆಲವು ಸಮಯದಲ್ಲಿ ಒಂದು ಒಪ್ಪಂದದ ಪ್ರತಿಫಲವು ಪ್ರತ್ಯಕ್ಷವಾಗಿ ಕಾನೂನಿನ ಮೂಲಕ ನಿಷೇಧಿತವಲ್ಲದಿರಬಹುದು ಆದರೆ ಅಂತಹ ಒಪ್ಪಂದಕ್ಕೆ ಅನುಮತಿ ಕೊಟ್ಟರೆ ಅವು ಕಾನೂನಿನ ಉಪಬಂಧಗಳನ್ನು ವಿಫಲಗೊಳಿಸುವ ಉದ್ದೇಶ ಹೊಂದಿರುವ ಸನ್ನಿವೇಶಕ್ಕೆ ಎಡೆಮಾಡಿಕೊಡಬಹುದು. ಅನೇಕ ಸನ್ನಿವೇಶಗಳಲ್ಲಿ ನ್ಯಾಯಾಲಯಗಳು ಕೆಲವು ವ್ಯವಹಾರ ಹೊಡೆದು ಕೆಡಹುತ್ತವೆ. ಮದ್ರಾಸಿನ ಉಚ್ಚ ನ್ಯಾಯಾಲಯದ ಮುಂದೆ ಮಂಡಿಸಲ್ಪಟ್ಟ ಶ್ರೀನಿವಾಸರಾವ್ ವಿರುದ್ಧ, ಕೆ. ಆರ್. ಮೋಹನ್‌ರಾವ್ (Chandra Sreenivasa Rao Vs. K. R. Mohan Rao AIR (1952) MAD 579) ಮೊಕದ್ದಮೆಯಲ್ಲಿ ಸಾಲವನ್ನು ವಸೂಲು ಮಾಡಲು ಒಂದು ಸಾಧಾರಣವಾದ ದಾವೆಯನ್ನು ದಾಖಲ್ಮಾಡಲಾಗಿದ್ದು, ಋಣಿಯು ಹಣದ ಸ್ವೀಕಾರವನ್ನು ಒಪ್ಪಿದ್ದನು. ಆದರೆ ಮರು ಸಂದಾಯ ಮಾಡ ಬೇಕಾಯಿತು. ಆ ಮೊಕದ್ದಮೆಯಲ್ಲಿ ವಕೀಲನ ಬುದ್ಧಿ ಗಮನಾರ್ಹ ಏಕೆಂದರೆ ಶೋಧನೆಯ ನಂತರ ಆ ಹಣವನ್ನು ಋಣಿಯು ಮಗಳ ವಿವಾಹವನ್ನು ಆಚರಿಸಲು ತೆಗೆದುಕೊಂಡಿದ್ದು, ಆ ಹಣವನ್ನು ಆ ಉದ್ದೇಶಕ್ಕೆ

ಉಪಯೋಗಿಸಲ್ಪಟ್ಟಿತು ಎಂದು ಖಚಿತಪಡಿಸಲಾಯಿತು. ಇನ್ನೂ ಹೆಚ್ಚಿನ ವಿಚಾರಣೆಯ ನಂತರ ಮದುವೆಯ ಉದ್ದೇಶಕ್ಕೆ ಹಣವನ್ನು ಸಾಲಕೊಟ್ಟಿದ್ದನೆಂಬುದು ಸ್ಪಷ್ಟವಾಯಿತು. ವಿವಾಹದ ಸಮಯದಲ್ಲಿ ವಿವಾಹ ನಡೆದ ಬಾಲಕಿ "ಅಪ್ರಾಪ್ತವಯಸ್ಕ ಬಾಲೆ" ಎಂಬುದು ತಿಳಿಯಿತು. ಅದು ಬಾಲ್ಯ ವಿವಾಹ ನಿಗ್ರಹ ಅಧಿನಿಯಮದ (Child Marriage Restraint Act) ಅರ್ಥದಲ್ಲಿ ಬರುತ್ತದೆ. ಪಕ್ಷಗಳು ಕಾನೂನಿನ ಉಪಬಂಧಗಳನ್ನು ವಿಫಲಗೊಳಿಸುವ ಉದ್ದೇಶ ಹೊಂದಿರುವಂತಹ ರೀತಿಯಲ್ಲಿ ವರ್ತಿಸಿವೆ. ಆದ್ದರಿಂದ ಹಣವನ್ನು ವಸೂಲು ಮಾಡುವುದು ಅಸಾಧ್ಯ ಎಂದು ತೀರ್ಮಾನಿಸಿತು.

ಫಾತೆಸಿಂಗ್ ವಿರುದ್ಧ ಸನ್ವಾಲ್‌ಸಿಂಗ್ (Fateh singh Vs. Sanwalsingh (1878) ALL 751) ನ್ಯಾಯಾಲಯವು ಪ್ರತಿವಾದಿಯ ಹತ್ತಿರ ಠೇವಣಿ ಮಾಡಿದ ೫,೦೦೦,೦೦ ರೂಪಾಯಿ ವಸೂಲು ಮಾಡಲು ಹಾಕಿದ ದಾವೆಯನ್ನು ವಜಾ ಮಾಡಿತು. ಆ ಠೇವಣಿಯು ಕ್ರಿಮಿನಲ್ ಮೊಕದ್ದಮೆಯಲ್ಲಿ ಆಪಾದಿತನಾದ ವಾದಿಗೆ ಜಾಮೀನುದಾರನಾಗುವ ಪ್ರತಿಫಲಕ್ಕೋಸ್ಕರ ಮಾಡಲಾಗಿತ್ತು. ನ್ಯಾಯಾಲಯವು ಕ್ರಿಮಿನಲ್ ಕಾನೂನಿನ ಪ್ರಕಾರ, ಜಾಮೀನುದಾರನು ನ್ಯಾಯಾಲಯದಲ್ಲಿ ಆಪಾದಿತನ ಸರಿಯಾದ ಮತ್ತು ತ್ವರಿತ ಹಾಜರಾತಿಯನ್ನು ನೋಡಿಕೊಳ್ಳುವುದಕ್ಕೆ ಇರುವುದು. ಮೇಲೆ ಹೇಳಿದ ಒಪ್ಪಂದವು ನಿಜವಾಗಿಯೂ ಈ ಉದ್ದೇಶವನ್ನು ವಿಫಲಗೊಳಿಸಿದೆ. ಜಾಮೀನುದಾರನಿಗೆ ಅವನ ಹೊಣೆಗಾರಿಕೆಗಾಗಿ ನಷ್ಟಭರ್ತಿ ಮಾಡುವ ಕರಾರು ಕಾನೂನು ಬಾಹಿರ.

ಕರಾರಿನ ಜಾರಿಗೊಳಿಸುವಿಕೆಯನ್ನು ಅದು ಮೂರನೇ ಪಕ್ಷವನ್ನು ವಂಚಿಸುವ ಉದ್ದೇಶದಿಂದ ಮಾಡಿದ್ದರೆ ಕಾನೂನು ಅನುಮತಿ ಕೊಡುವುದಿಲ್ಲ. ಅಂದರೆ ಪಕ್ಷಗಳು ಒಬ್ಬರ ವಿರುದ್ಧ ಇನ್ನೊಬ್ಬರು ಹರಾಜು ಮಾರಾಟದಲ್ಲಿ ಆದಷ್ಟು ಕಡಿಮೆ ಬೆಲೆಗೆ ಸ್ವತ್ತನ್ನು ಹೊಡೆಯಲು ಸವಾಲು ಕೂಗಲು ಒಪ್ಪಿಸಿಕೊಳ್ಳುವಂತಹ ಪ್ರಕರಣಗಳು. ಕೇದಾರನಾಥ್ ವಿರುದ್ಧ ಪ್ರಹ್ಲಾದ್ (Kedarnath Motani Vs. Prahlad Rai AIR (1960) SC 213).

ಒಬ್ಬ ವ್ಯಕ್ತಿಯು ನೂರು ರೂಪಾಯಿಗಳ ಸಾಲ ಪಡೆದುಕೊಂಡು, ಎರಡು ವರ್ಷಗಳ ಕಾಲ ತನ್ನ ಯಜಮಾನನಿಗೆ ಸಂಬಳವಿಲ್ಲದೇ ಕೆಲಸ ಮಾಡುವುದಾಗಿ ಬಂಧಪತ್ರ (Bond) ವನ್ನು ಬರೆದುಕೊಟ್ಟನು. ಕೆಲಸ ಮಾಡಲು ತಪ್ಪಿದರೆ ಅಸಲು ಮತ್ತು ತುಂಬಾ ಹೆಚ್ಚು ಬಡ್ಡಿ ಎರಡೂ ಸೇರಿಸಿ ಒಟ್ಟಿಗೆ ಕೊಡಬೇಕೆಂದು ಒಪ್ಪಂದ ಮಾಡಿಕೊಂಡರು. ನ್ಯಾಯಾಲಯವು, ಕರಾರಿನಲ್ಲಿ ಇದ್ದ ವಿಷಯವು ಜೀತದಾಳಿಕೆಯಿಂದ ವಿಭಿನ್ನಗೊಳಿಸಲಾಗುವುದರಿಂದಲೂ ಮತ್ತು ಅದು ವ್ಯಕ್ತಿಗೆ ಹಾನಿಯಾಗುವ ತರಹ

ಇರುವುದರಿಂದ ಒಪ್ಪಂದವು ಶೂನ್ಯ ಎಂದು ಹೇಳಿತು. ರಾಮಸ್ವರೂಪ ವಿರುದ್ಧ ಬನ್ಸಿ ಮನ್ದಾರ್ (Ramaswaroop Vs. Bansi Mandar 1915 42 Calcutta 742). ಅಪರಾಧವನ್ನು ಮಾಡಲು ಅಥವಾ ಸಿವಿಲ್ ಅಕ್ರಮ ಅಥವಾ ಮೂರನೇ ಪಕ್ಷವನ್ನು ವಂಚಿಸಲು ಮಾಡಿದ ಒಪ್ಪಂದ ಇವೆಲ್ಲವನ್ನು ಈ ವರ್ಗ ಒಳಗೊಂಡಿದೆ.

ಅನೈತಿಕ ಒಪ್ಪಂದಗಳು

(Immoral Agreements)

ಕರಾರಿನ ಸಂಬಂಧದಲ್ಲಿ 'ಅನೈತಿಕತೆ' ಎಂಬ ಪದವನ್ನು ಉಪಯೋಗಿಸಿದ ಕಾನೂನು ರಚನೆಕಾರರು ಈ ಪದದ ಅರ್ಥದ ಬಗ್ಗೆ ಅಸ್ಪಷ್ಟವಾಗದಿದ್ದರೆಂಬುದರಲ್ಲಿ ಸಂದೇಹವೇ ಇಲ್ಲ. ನ್ಯಾಯಾಲಯಗಳಿಗೆ ಯಾವಾಗಲೂ ಅನೈತಿಕತೆ ಎಂಬ ಪದದ ಅರ್ಥವನ್ನು ತೀರ್ಮಾನಿಸುವುದರ ಹೊಣೆ ಬಹಳವಾಗಿದೆ. ನ್ಯಾಯಾಲಯಗಳ ಮನೋಭಾವವು, ಸಮಾಜದಲ್ಲಿ ಕುಟುಂಬವು ಅಡಿಗಲ್ಲು ಮತ್ತು ವಿವಾಹ ಅದರ ಅಂಗ. ವಿವಾಹ ಅಸ್ತಿತ್ವದಲ್ಲಿರುವಾಗ ಬೇರೆ ಸಂಬಂಧಗಳನ್ನು ಪ್ರೋತ್ಸಾಹಿಸಲು ಅವಕಾಶವಿಲ್ಲ ಎಂಬ ಪರಿಕಲ್ಪನೆಯ ಆಧಾರದ ಮೇಲೆ ಮಾಡಲಾಗಿದೆ. ಉದಾಹರಣೆಗೆ ಒಬ್ಬ ಹೆಂಗಸಿಗೆ ಅವಳು ತನ್ನ ಗಂಡನಿಂದ ವಿವಾಹ ವಿಚ್ಛೇದನ ಪಡೆದುಕೊಂಡ ಮೇಲೆ ಅಥವಾ ಅವಳ ಗಂಡನ ಮರಣದ ನಂತರ ಬೇರೊಬ್ಬನನ್ನು ಮದುವೆಯಾಗುವುದಾಗಿ ಕರಾರು ಮಾಡಿಕೊಳ್ಳುವುದು, ಇತ್ಯಾದಿ.

ಭಾರತದ ಸರ್ವೋಚ್ಚ ನ್ಯಾಯಾಲಯವು ಈ ವಿಷಯವನ್ನು ತೀರ್ಮಾನಿಸುವ ಸಂದರ್ಭ ಬಂತು. ಗೇರುಲಾಲ್ ವಿರುದ್ಧ ಎಂ. ಮಯ್ಯ (Gherulal Vs. M. Maiya (1959) 2 SCA 342). ಇದರಲ್ಲಿ ನ್ಯಾಯಮೂರ್ತಿ ಸುಬ್ಬರಾಯರು ಈ ರೀತಿ ನಿರ್ಧರಿಸಿದರು : ''ಭಾರತ ಮತ್ತು ಇಂಗ್ಲೆಂಡ್ ಇವೆರಡರಲ್ಲಿ ತೀರ್ಪುಜನ್ಯ ಕಾನೂನು ಲೈಂಗಿಕ ಅನೀತಿಯ ಸಿದ್ಧಾಂತದ ಕಾರ್ಯಾಚರಣೆಯನ್ನು ತಿಳಿಸುತ್ತದೆ''. ಕೆಲವು ಸಂದರ್ಭಗಳು ಯಾವುವೆಂದರೆ ಉಪ ಪತ್ನಿತ್ವದ ಒಡಂಬಡಿಕೆಗೆ ಪ್ರತಿಫಲ, ವೇಶ್ಯಾಗೃಹದಲ್ಲಿ ಉಪಯೋಗಿಸಿಕೊಳ್ಳುವಂತಹಾ ವಸ್ತುಗಳ ಬಾಡಿಗೆ ಅಥವಾ ಮಾರಾಟದ ಕರಾರುಗಳು ಅಥವಾ ವೇಶ್ಯೆಯಿಂದ ಅವಳ ವೃತ್ತಿಯ ಪ್ರಾಸಂಗಿಕ ಉದ್ದೇಶಕ್ಕಾಗಿ ಮಾಡಿದ ಕರಾರು, ಭಾವೀ ಅನೈತಿಕ ಸಹವಾಸಕ್ಕೆ ಹಣ ಸಂದಾಯ ಮಾಡುವ ಒಪ್ಪಂದಗಳು, ಪ್ರತಿಫಲವುಳ್ಳ ವಿವಾಹದ ಬಗ್ಗೆ ಮಾಡಿದ ವಾಗ್ದಾನಗಳು ಅಥವಾ ವಿಚ್ಛೇದನಕ್ಕೆ ಅನುಕೂಲ ಮಾಡುವ ಕರಾರುಗಳು ಇವೆಲ್ಲವೂ ಅನೈತಿಕ ಉದ್ದೇಶವಾದುದರಿಂದ ಕರಾರು ಶೂನ್ಯವಾಗುತ್ತವೆ.

ಉಚ್ಚ ನ್ಯಾಯಾಲಯದ ಇನ್ನೊಂದು ಮೊಕದ್ದಮೆಯಲ್ಲಿ ಡಿ. ನಾಗರತ್ನಾಂಬ ವಿರುದ್ಧ ಕುನುಕುರಾಮಯ್ಯ (D. Nagarathnamba Vs. Kunukuramayya

AIR (1968) SC 253). ಇದರಲ್ಲಿ ಒಂದು ಅವಿಭಾಜ್ಯ ಕುಟುಂಬದ ವ್ಯವಸ್ಥಾಪಕ ಅಥವಾ ಯಜಮಾನನು ಒಬ್ಬ ಹೆಂಗಸಿಗೆ ತನ್ನ ಕುಟುಂಬದ ಕೆಲವು ಸ್ವತ್ತುಗಳನ್ನು ಹಿಂದೆ ಅವಳೊಡನೆ ಅವನು ಇಟ್ಟುಕೊಂಡಿದ್ದ ಅನೈತಿಕ ಸಹವಾಸ ಪ್ರತಿಫಲಕ್ಕೋಸ್ಕರ ದಾನ ಮಾಡಿದನು. ಆ ವ್ಯವಹರಣೆಯನ್ನು ಪುನರಾವಲೋಕನ ಮಾಡಿದ ಮೇಲೆ ವ್ಯವಹಾರವು ಶೂನ್ಯ ಎಂದು ನ್ಯಾಯಾಲಯವು ತೀರ್ಮಾನಿಸಿತು.

ಸಾರ್ವಜನಿಕ ನೀತಿಗೆ ವಿರುದ್ಧದ ಒಪ್ಪಂದ

ಮೇಲ್ಕಂಡಂತೆ ೨೩ ನೇ ವರ್ಗದಲ್ಲಿ ಸಾರ್ವಜನಿಕ ನೀತಿಗೆ ವಿರುದ್ಧವಾದ ಒಪ್ಪಂದಗಳು ಮಾನ್ಯವಲ್ಲ ಎಂದಿದೆ. ಸಾರ್ವಜನಿಕ ನೀತಿಯು ನ್ಯಾಯಿಕ ಚಟುವಟಿಕೆಯ ವಿಶೇಷ ಕ್ಷೇತ್ರ ನ್ಯಾಯಾಲಯವು ಸಾಮಾನ್ಯ ಚಟುವಟಿಕೆಗಳನ್ನು ಕೈಗೊಂಡು ಅದು ವೇಳೆಯಿಂದ ವೇಳೆಗೆ ಹೇಗೆ ಪ್ರಶ್ನೆಗಳನ್ನು ವಿವರಿಸಲು ಮತ್ತು ತಿಳಿಸಲು ಪ್ರಯತ್ನಿಸುತ್ತಿದೆ ಎಂಬುದನ್ನು ತಿಳಿಯಲು ಯಾರಿಗಾದರೂ ಆಶ್ಚರ್ಯವಾಗಬಹುದು. ಸಾರ್ವಜನಿಕ ನೀತಿಯಂತೆ ಯಾವ ಕರಾರುಗಳು ಶೂನ್ಯ ಎಂಬುದನ್ನು ತಿಳಿಸಲು ನ್ಯಾಯಾಲಯಗಳು ಅನುಸರಿಸುತ್ತಾ ಇರುವ ಮಾರ್ಗದಿಂದ ಯಾರಾದರೂ ಸಹ ಪ್ರಭಾವಿತರಾಗುವುದರಲ್ಲಿ ಸಂಶಯವೇ ಇಲ್ಲ. ಈ ವಿಷಯದಲ್ಲಿ ನ್ಯಾಯಾಲಯಗಳ ಮುಂದೆ ಇರುವ ಕಾರ್ಯವು ಅಸೂಯಾಸ್ಪದ ವಲ್ಲ. ಏಕೆಂದರೆ, ಊಹೆಯ ಹೊರತು ಮುಂದುವರೆಯಲು ಅವರಿಗೆ ಬೇರೆ ಸಾಮಗ್ರಿಗಳಿಲ್ಲದೆ, ಕಾಲ ಕಾಲಕ್ಕೆ ಶಾಸನದ ಪ್ರವಾಹದಿಂದ ಸಾರ್ವಜನಿಕ ನೀತಿ ಎಂದರೆ ಏನಿರಬಹುದು ಎಂಬುದನ್ನು ಉಲ್ಲೇಖಿಸಿದೆ. ಸಾರ್ವಜನಿಕ ನೀತಿಯು ಅವಲಂಬಿತವಾಗಲು ಅಥವಾ ಅದರ ಮೇರೆಗೆ ಕಾರ್ಯ ನಿರ್ವಹಿಸಲು ಯಾವುದೇ ಬೇರೆ ಸಾಮಗ್ರಿ ಅಥವಾ ವಿವರಣೆ ಇಲ್ಲ. ನ್ಯಾಯಮೂರ್ತಿ ಬರೋ (Burrough) ಅವರು ರಿಚರ್ಡ್‌ಸನ್ ವಿರುದ್ಧ ಮೆಲ್ಲಿಶ್ (Richardson Vs. Mellish (1824) 171 ER 1179) ನಲ್ಲಿ ಸಾರ್ವಜನಿಕ ನೀತಿಯು ಒಂದು ಲಗಾಮಿಲ್ಲದ ಕುದುರೆ. ಮತ್ತು ಒಂದು ಸಲ ನೀವು ಅದರ ಸವಾರಿ ಮಾಡಿದರೆ, ಅದು ನಿಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತದೆ ಎಂಬುದು ನಿಮಗೆ ಗೊತ್ತಾಗುವುದೇ ಇಲ್ಲ ಎಂದಿದ್ದಾರೆ. ಲಾರ್ಡ್ ಅಟ್ಕಿನ್ನರು (Atkin) ಫೆಂಡರ್ ವಿರುದ್ಧ ಸೆಂಟ್ ಜಾನ್ ಮಿಲ್‌ಡ್ಮೆ (Fender Vs. St. John Mildmay (1938) AC 1) ಮೊಕದ್ದಮೆಯಲ್ಲಿ ಈ ಕ್ಷೇತ್ರದಲ್ಲಿ ನಿಯಂತ್ರಣ ಅವಶ್ಯಕ, ಅದಿಲ್ಲದೆ ತೀರ್ಮಾನಿಸಲು ಅನುಮತಿ ಕೊಡುವುದು ಅಪಾಯಕಾರಿ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು. ಲಾರ್ಡ್ ಹಾಲ್ಸ್‌ಬರೀ (Lord Halsbury) ಅವರು ಕರಾರನ್ನು ಅಸಿಂಧುಗೊಳಿಸಲು ಹೊಸ ಬಗೆಯ ಸಾರ್ವಜನಿಕ ನೀತಿಯ ಸಂಶೋಧನೆಯ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯಪಟ್ಟರು. ಜಾನ್ಸನ್ ವಿರುದ್ಧ ಫ್ರಿಫಾನ್‌ಟೈನ್ ಕನ್ಸಾಲಿಡೇಟೆಡ್ ಮೈನ್ಸ್

(Janson Vs. Drienfontein Consolidated Mines Ltd. 1902 AC 484) ಮೊಕದ್ದಮೆಯಲ್ಲಿ ಲಾರ್ಡ್ ದೇವಿಯವರು ಸುರಕ್ಷಿತವಲ್ಲದ ಮತ್ತು ವಿಶ್ವಾಸನೀಯವಲ್ಲದ ಆಧಾರ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸರ್ವೋಚ್ಚ ನ್ಯಾಯಾಲಯವು ಕೂಡ ಅದೇ ಅಭಿಪ್ರಾಯ ಪಟ್ಟಿದೆ.

ಸಾರ್ವಜನಿಕ ನೀತಿಯ ಕೆಲವು ಸಂದರ್ಭಗಳು

೧) ಶತ್ರುವಿನೊಂದಿಗೆ ವ್ಯಾಪಾರ :

ಅನ್ಯ ದೇಶೀಯನೊಂದಿಗೆ ಮಾನ್ಯ ಕರಾರು ಮಾಡಿಕೊಳ್ಳಲು ಕಾನೂನಿನಲ್ಲಿ ಯಾವುದೇ ನಿಷೇಧವಿಲ್ಲ ಎಂಬುದನ್ನು ನಾವು ಮೊದಲೇ ಗಮನಿಸಿದ್ದೇವೆ. ಆದರೆ ಆ ಅನ್ಯದೇಶದೊಡನೆ ಅಧಿಕೃತವಾಗಿ ಶತೃತ್ವ ಅಥವಾ ಯುದ್ಧ ಘೋಷಿಸಲ್ಪಟ್ಟಾಗ, ಕರಾರನ್ನು ನೆರವೇರಿಸಲು ಅನುಮತಿ ಕೊಡುವುದು ಅನುಚಿತ. ಏಕೆಂದರೆ, ಯುದ್ಧದ ಉದ್ದೇಶವು ಶತೃವಿಗೆ ಸಹಾಯ ಮಾಡುವುದಕ್ಕಲ್ಲವಾದ್ದರಿಂದ ಮೊದಲು ಮಾನ್ಯತೆ ಹೊಂದಿದ್ದ ಕರಾರು ನಂತರ ಶೂನ್ಯವಾಗುತ್ತದೆ.

೨) ಸರ್ಕಾರಿ ಕಛೇರಿಗಳ ದುರ್ವ್ಯಾಪಾರ :

ಸರ್ಕಾರಿ ಹುದ್ದೆಗಳು ಸಾರ್ವಜನಿಕ ಸ್ವತ್ತುಗಳು; ಅದನ್ನು ಮಾರಾಟ ಮಾಡುವುದು ಅಥವಾ ಅಲ್ಲಿ ಖಾಸಗಿ ವ್ಯವಹಾರಗಳನ್ನು ನಡೆಸುವುದು ಸಾರ್ವಜನಿಕ ನೀತಿಗೆ ವಿರುದ್ಧ. ಸರ್ಕಾರಿ ಹುದ್ದೆಗಳನ್ನು ಪ್ರತಿಫಲಕ್ಕೋಸ್ಕರ ಉಪಯೋಗಿಸಿ ಕೊಳ್ಳುವ ಒಪ್ಪಂದಗಳು ಮತ್ತು ಅಂತಹಾ ಹುದ್ದೆಗಳನ್ನು ವರ್ಗಾಯಿಸುವ ಒಪ್ಪಂದಗಳೂ ಸಹ ಶೂನ್ಯ. **ಗುಲಾಬ್‌ಚಂಡ್ ವಿರುದ್ಧ ಕುಡೈಲಾಲ್** (Gulabchand Vs. Kudailal AIR (1966) SC 1734)

೩) ನ್ಯಾಯಾಡಳಿತ ನ್ಯಾಯ ನಿರ್ವಹಣೆಯಲ್ಲಿ ಹಸ್ತಕ್ಷೇಪ :

ನ್ಯಾಯಿಕ ವ್ಯವಹಾರವನ್ನು ಬಾಧಿಸಲು ಅಥವಾ ಅದರ ಮೇಲೆ ಪ್ರಭಾವ ಬೀರುವುದಕ್ಕೆ ಮಾಡಿದ ಒಪ್ಪಂದವು ಸಿವಿಲ್ ಅಥವಾ ಕ್ರಿಮಿನಲ್ ಕಾನೂನಿಗೆ ಸಂಬಂಧಿಸಿರಬಹುದು. ನ್ಯಾಯಾಲಯದ ಕಾರ್ಯ ವಿಧಾನವನ್ನು ವಿಳಂಬ ಮಾಡುವ ಒಪ್ಪಂದಗಳು ಅಥವಾ ಸುಳ್ಳು ಸಾಕ್ಷ್ಯ ಅಥವಾ ದಸ್ತಾವೇಜು ಪಡೆಯಲು ಹಣ ಸಂದಾಯ ಮಾಡುವುದು ಅಥವಾ ಲಭ್ಯವಿರುವ ಸಾಕ್ಷ್ಯದಿಂದ ಸ್ವಾಮ್ಯವನ್ನು ಕೆಡಿಸುವುದು ಇವೆಲ್ಲಾ ಕೃತ್ಯಗಳನ್ನು ಶೂನ್ಯ ಎಂದು ಘೋಷಿಸಲಾಗಿದೆ. ಈ ಶೀರ್ಷಿಕೆಯ ಕೆಳಗೆ ಕುತೂಹಲಕಾರಿಯಾದ ಒಂದು ಮೊಕದ್ದಮೆಯು ಸತಿ ಭಗವಾನ್ ದಾಸ್ ಶಾಸ್ತ್ರೀ ವಿರುದ್ಧ ರಾಜಾರಾಂ (Sati Bhaghwanadas Shastry Vs. Rajaram AIR 1927 All 403). ಇದರಲ್ಲಿ ಒಂದು ವ್ಯಾಜ್ಯದಲ್ಲಿ ವಿಜಯ ಹೊಂದುವುದಕ್ಕಾಗಿ ಪೂಜೆ ಮಾಡಲು

ಪಂಡಿತರಿಗೆ ಹಣದ ಆಶ್ವಾಸನೆ ನೀಡಿದ್ದು ಆ ಹಣ ವಸೂಲು ಮಾಡುವಿಕೆಯನ್ನು ನ್ಯಾಯಾಲಯ ಪುರಸ್ಕರಿಸಲಿಲ್ಲ. ಏಕೆಂದರೆ ಇದು ನಿಜವಾದ ಪಕ್ಷಕ್ಕೆ ಯಶಸ್ಸು ಸಿಕ್ಕಬಾರದೆಂದು ಮಾಡಿದ ಆಶ್ವಾಸನೆ. ನ್ಯಾಯಮೂರ್ತಿಯ ಮನಸ್ಸನ್ನು ಸಾಧ್ಯವಾದಷ್ಟು ಮರಳು ಮಾಡುವ ಅಥವಾ ಬೇರೆ ಪಕ್ಷವು ಅವನ ಮೊಕದ್ದಮೆಯನ್ನು ಪರಿಣಾಮಕಾರಿಯಾಗಿ ದಾಖಲ್ಮಾಡುವುದಕ್ಕೆ ಅಸಮರ್ಥನನ್ನಾಗಿ ಮಾಡುವ ಉದ್ದೇಶದಿಂದ ಮಾಡಿರಬಹುದು. ಇವೆಲ್ಲಾ ಸಾರ್ವಜನಿಕ ದೃಷ್ಟಿಯಿಂದ ಅನೈತಿಕ.

ಕ್ರಿಮಿನಲ್ ಕಾನೂನು ಕ್ಷೇತ್ರದಲ್ಲಿ ಕೆಲವು ಮುಖ್ಯವಾದ ಮೊಕದ್ದಮೆಗಳನ್ನು ಕಾಣಬಹುದು. ಒಂದು ಅಪರಾಧದ ಕ್ರಮ ಜರುಗಿಸುವುದನ್ನು ನಿವಾರಿಸಲು ಯಾವುದೇ ಪ್ರಯತ್ನಕ್ಕೂ ಅನುಮತಿ ಕೊಡಬಾರದು ಎಂಬ ಸಂಗತಿಗೆ ಪ್ರಾಮುಖ್ಯತೆ ಕೊಟ್ಟಿದೆ. ಏಕೆಂದರೆ, ಅಂತಹ ಮೊಕದ್ದಮೆಗಳಲ್ಲಿ ಬಾಧಿತ ಪಕ್ಷವು ರಾಜ್ಯವೇ ಹೊರತು ಫಿರ್ಯಾದಿಯಲ್ಲ. ಪ್ರಿವ್ಹೀ ಕೌನ್ಸಿಲ್‌ನ ಸಮ್ಮುಖದಲ್ಲಿದ್ದ ಭೋವಾನಿಪುರ್ ಬ್ಯಾಂಕಿಂಗ್‌ಕಾರ್ಪೊರೇಷನ್ ಲಿಮಿಟೆಡ್ ವಿರುದ್ಧ ದುರ್ಗೇಶ್ ನಂದಿನಿ (Bhowanipur Banking Corporation Ltd., Vs. Durgesh Nandani AIR 1941 PC 95). ಈ ಮೊಕದ್ದಮೆಯಲ್ಲಿ ಬ್ಯಾಂಕು ಒಂದು ಹೆಂಗಸಿನ ವಿರುದ್ಧ ಅಡಮಾನದ ಆಧಾರದ ಮೇಲೆ ಹಣವನ್ನು ವಸೂಲು ಮಾಡಲು ದಾವೆ ಹೂಡಿತು. ಆದರೆ ಅವಳು ತಾನು ಸಾಲವನ್ನೇ ತೆಗೆದುಕೊಂಡಿಲ್ಲ ಎಂದು ಹೇಳಿದಳು. ಬ್ಯಾಂಕ್, ಅವಳ ಗಂಡ ಬ್ಯಾಂಕಿನ ನೌಕರನಾಗಿದ್ದಾಗ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆಂದು ದಾಖಲ್ಮಾಡಿದ ಕ್ರಿಮಿನಲ್ ವ್ಯವಹರಣೆಯನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಂಡಳು. ಆದ್ದರಿಂದ ಪ್ರತ್ಯಕ್ಷವಾಗಿ ಬ್ಯಾಂಕು ವಿಳಂಬವಾದ ಮೊಕದ್ದಮೆ ಕ್ರಮ ಜರುಗಿಸುವುದಕ್ಕಿಂತ ಅಪರಾಧಿಯ ಹೆಂಡತಿ ಯಿಂದ ಹಣ ಪಡೆಯುವುದು ವಿವೇಕ ಎಂದು ಯೋಚಿಸಿತು. ನ್ಯಾಯಾಲಯವು ಕರಾರಿನ ಉದ್ದೇಶವು ಸಾರ್ವಜನಿಕ ನೀತಿಗೆ ಸ್ಪಷ್ಟವಾಗಿ ವಿರುದ್ಧವಾಗಿದೆ. ಆದ್ದರಿಂದ ಶೂನ್ಯ ಎಂದು ಹಿಂದು ಮುಂದು ನೋಡದೆ ತೀರ್ಮಾನಿಸಿತು.

ನರಸಿಂಹರಾಜು ವಿರುದ್ಧ ಗುರುಮೂರ್ತಿ ರಾಜು ರ (V. Narasimha Raju Vs. V. Gurumurty Raju AIR 1963 SC 107). ಈ ಮೊಕದ್ದಮೆಯಲ್ಲಿ ಒಂದು ಪಾಲುಗಾರಿಕೆ ಉದ್ದಿಮೆಯ ಲೆಕ್ಕಗಳ ಬಗೆಹರಿಸುವಿಕೆ ಮತ್ತು ಪಾರಿಖತ್ತು ಸಮಯದಲ್ಲಿ ಒಬ್ಬ ಪಾಲುದಾರನು ತನ್ನ ಜೊತೆಯ ಪಾಲುದಾರರ ವಿರುದ್ಧ ಅವರು ನಕಲಿ ಪಾಲುದಾರರನ್ನು ತೆಗೆದುಕೊಂಡು ಲೆಕ್ಕಪತ್ರಗಳಲ್ಲಿ ಕೆಲವು ಬದಲಾವಣೆ ಮಾಡಿ ಮೋಸ ಮಾಡಿರುವುದಾಗಿ ಹೇಳಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದನು. ನಂತರ ಪಕ್ಷಗಳು ಮಧ್ಯಸ್ಥಿಕೆ (Arbitration) ಪಂಚಾಯತಿಯ ಮುಂದೆ ತಮ್ಮ ಕಲಹವನ್ನು ಇಡಲು

ಒಪ್ಪಂದ ಮಾಡಿಕೊಂಡರು. ಅದರಲ್ಲಿ ದಾವೆ ಹೂಡಿದವನು ಯಾವುದೇ ಸಾಕ್ಷ್ಯವನ್ನೂ ನೀಡಲಿಲ್ಲವಾದ್ದರಿಂದ ದಾವೆಯನ್ನು ತಿರಸ್ಕರಿಸಲಾಯಿತು. ಪಂಚಾಯತಿಯ ತೀರ್ಪಿನ ಜಾರಿಗೊಳಿಕೆಯ ಪ್ರಶ್ನೆಯು ಬಂದಾಗ ಪಂಚಾಯಿತಿ ಶಿಫಾರಸ್ಸು ಮಾಡಿದ ಒಪ್ಪಂದವು ಫಿರ್ಯಾದಿಯನ್ನು ಮುಚ್ಚಲು ಮಾಡಿದ ಒಂದು ಒಪ್ಪಂದ ಎಂದು ತಿಳಿಯಿತು.

ನ್ಯಾಯಮೂರ್ತಿ ಗಜೇಂದ್ರಗಡಕರ್ ಅವರು ಈ ಒಪ್ಪಂದವು ಸಾರ್ವಜನಿಕ ನೀತಿಗೆ ವಿರುದ್ಧವಾಗಿದೆ ಎಂದು ನಿರ್ಧರಿಸಿದರು. ಒಬ್ಬ ವ್ಯಕ್ತಿಯು ಬೇರೆಯವರು ಬಂದು ರಾಜಿ ಮಾಡಿಕೊಳ್ಳಲಾಗದಂತಹಾ ತಪ್ಪನ್ನು ಮಾಡಿದ್ದಾನೆಂದು ದೂರಿ ಕ್ರಿಮಿನಲ್ ಕಾನೂನಿನ ಕಾರ್ಯವನ್ನು ಆರಂಭಿಸಿ ನಂತರ ಆ ವ್ಯಕ್ತಿಯನ್ನು ಒಂದು ಒಪ್ಪಂದಕ್ಕೆ ಒಪ್ಪಿಕೊಳ್ಳುವಂತೆ ಬಲಾತ್ಕಾರ ಮಾಡಿದರೆ, ಈ ಒಪ್ಪಂದ ಪ್ರತಿಫಲವು ಸಾರ್ವಜನಿಕ ನೀತಿಗೆ ವಿರುದ್ಧವಾಗಿದೆ ಎಂಬ ಕಾರಣದಿಂದ ಬಲಹೀನ ಎಂದು ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಪ್ರೋತ್ಸಾಹ ಮತ್ತು ದುರ್ಲಾಭಕ್ಕಾಗಿ ಸಹಾಯ

''ಪ್ರೋತ್ಸಾಹ'' ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾ ಲಾರ್ಡ್ ಹಾಲ್ಡೇನರು ಹೀಗೆ ಹೇಳಿದ್ದಾರೆ : ಒಬ್ಬ ಅಪರಿಚಿತ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ, ತನಗೇ ಕಾನೂನುಸಮ್ಮತ ಹಿತಾಸಕ್ತಿ ಇಲ್ಲದಿರುವ ಒಂದು ಮೊಕದ್ದಮೆಗೆ ಹಣದ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ಉಪಕಾರ ಮಾಡುವುದು ಕಾಯಿದೆಗೆ ವಿರುದ್ಧ. ಆ ಮೂರನೇ ವ್ಯಕ್ತಿಗೆ ಆ ಮೊಕದ್ದಮೆಯ ವಿಜಯ ಅಥವಾ ಸೋಲಿನ ವಿಷಯದಲ್ಲಿ ನ್ಯಾಯಸಮ್ಮತ ಆಸಕ್ತಿ ಇರುವುದಿಲ್ಲ ಎಂದು ಹೇಳಿದ್ದಾರೆ. ಉದಾ : ದುರ್ಲಾಭಕ್ಕಾಗಿ ಒಂದು ಪಕ್ಷವು ಇನ್ನೊಂದು ಪಕ್ಷಕ್ಕೆ ಆಸ್ತಿಯನ್ನು ಪಡೆಯುವುದಕ್ಕಾಗಿ ಸಹಾಯಮಾಡಿ, ಆ ಸ್ವತ್ತಿನಲ್ಲಿ ತಾನೂ ಒಂದು ಭಾಗವನ್ನು ತೆಗೆದುಕೊಳ್ಳುವುದು. ಇದನ್ನು ದುರ್ಲಾಭಕ್ಕಾಗಿ ಸಹಾಯ (Champerty) ಎಂದು ಹೇಳಿದ್ದಾರೆ. ಆದರೆ ಒಬ್ಬ ವ್ಯಕ್ತಿಯು ತನ್ನ ಕಾನೂನು ಸಮ್ಮತ ಹಕ್ಕನ್ನು ಚಲಾಯಿಸುವಾಗ ಅವನಿಗೆ ಸಹಾಯ ಮಾಡುವ ನ್ಯಾಯವಾದ ಒಪ್ಪಂದವು ಮಾನ್ಯ. ಇದರಲ್ಲಿ ಸಹಾಯ ಮಾಡುವ ವ್ಯಕ್ತಿಗೆ ಆ ಹಕ್ಕನ್ನು ಚಲಾಯಿಸುವುದರಿಂದ ಬಂದ ಫಲದಲ್ಲಿ ತನ್ನ ಭಾಗ ಪಡೆಯುವುದಕ್ಕೆ ನಿರ್ಬಂಧಗಳಿವೆ.

ಒಬ್ಬ ವಕೀಲನು ತನ್ನ ಕಕ್ಷಿಗಾರನ ಜೊತೆ ಮೊಕದ್ದಮೆಯ ಫಲಿತಾಂಶಕ್ಕೆ ಅನುಸಾರವಾಗಿ ಹಣ ಸಂದಾಯ ಮಾಡುವಂತೆ ಮಾಡಿಕೊಂಡ ಒಪ್ಪಂದವು ಸಾರ್ವಜನಿಕ ನೀತಿಗೆ ವಿರುದ್ಧ. ತಾನು ದಾವೆ ಹೂಡಿದ ಸ್ವತ್ತಿನಲ್ಲಿ ಒಂದು ಭಾಗ ಅಥವಾ ಬೇರೆ ಯಾವುದೇ ವ್ಯಾಜ್ಯದ ಗೆಲುವಿನ ಮೇಲೆ ಅವಲಂಬಿತವಾಗಿ ತನ್ನ ಸಂಭಾವನೆ ಅಥವಾ ಪ್ರತಿಫಲವನ್ನು ಸ್ವೀಕರಿಸುವುದು ವಕೀಲನ ಉದ್ಯೋಗದ ದುರಾಚಾರವಾಗುತ್ತದೆ (Professional Misconduct).

ಇದು ಸಂಬಂಧವಿಲ್ಲದ ವ್ಯಕ್ತಿಗಳು ಒಂದು ವ್ಯಾಜ್ಯಕ್ಕೆ ಹಣ ಒದಗಿಸುವುದು ಮತ್ತು ವ್ಯಾಜ್ಯ ಮಾಡುವವನಿಗೆ ಉತ್ಪತ್ತಿಯಲ್ಲಿ ಒಂದು ಭಾಗವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಹಣವನ್ನು ಮುಂಗಡವಾಗಿ ಕೊಡುವುದು ಇಂತಹವುಗಳನ್ನು ಒಳಗೊಂಡಿದೆ. ನ್ಯಾಯಾಲಯಗಳು ಮೂರನೇ ಪಕ್ಷಕಾರನು ವ್ಯಾಜ್ಯಕ್ಕೆ ಇಳಿಯುವ ವಿಚಾರವನ್ನು ನಿಷೇಧಿಸುತ್ತವೆ. ಏಕೆಂದರೆ ಅವನು ಹೇಗಾದರೂ ಯಶಸ್ವಿಯಾಗ ಬೇಕೆಂಬ ಕಾರಣದಿಂದ ಯೋಗ್ಯ ಅಥವಾ ಮೇಲಿನ ರೀತಿಗಳನ್ನು ಅನುಸರಿಸ ಬಹುದು. ಆದ್ದರಿಂದ ನ್ಯಾಯಿಕ ವ್ಯವಹರಣೆಗಳಲ್ಲಿ ಯಶಸ್ವಿಯಾಗುವ ಕೈಚಳಕ ಅಥವಾ ಆಸಕ್ತಿ ತೋರಬಹುದು.

ವಿವಾಹ ಪ್ರೋತ್ಸಾಹ ಕರಾರುಗಳು

(Marriage Brokage Contracts)

ವಿವಾಹವನ್ನು ಹಣ ಸಂದಾಯದ ಪ್ರತಿಫಲಕ್ಕಾಗಿ ಪ್ರೋತ್ಸಾಹಿಸುವ ಒಪ್ಪಂದವು ಶೂನ್ಯ ಎಂದು ಪರಿಗಣಿಸಲಾಗಿದೆ. ಏಕೆಂದರೆ ನ್ಯಾಯಾಲಯಗಳು ಒಂದು ಪಕ್ಷದಿಂದ ವಿವಾಹದ ಸಂಬಂಧಕ್ಕೋಸ್ಕರ ಮಾಡಿದ ಆರ್ಥಿಕ ಲಾಭವು ಆಕ್ಷೇಪಾರ್ಹ ಎಂದು ಭಾವಿಸಿದೆ. ಭಾರತದಲ್ಲಿ ಹಲವಾರು ತೀರ್ಮಾನಗಳು ಅಂತಹ ಮೊಕದ್ದಮೆಗಳನ್ನೊಳಗೊಂಡಿದೆ. ಆದರೆ ಈ ರೀತಿಯ ರೂಢಿಯು ಹೆಚ್ಚು ದಿನ ಉಳಿಯುತ್ತದೆಯೇ ಎಂಬುದು ಸಂದೇಹಾಸ್ಪದವಾಗಿದೆ. ಉದಾ : ಒಂದು ವಧುವನ್ನು ವಿಕ್ರಯ ಮಾಡಿದ ಒಪ್ಪಂದ. ಹುಡುಗಿಯ ತಂದೆ-ತಾಯಿಗಳಿಗೆ ವಧುದಕ್ಷಿಣೆ ಕೊಡುವುದು ಭಾರತದಲ್ಲಿ ಸರ್ವೇಸಾಮಾನ್ಯ. ಅಪ್ರಾಪ್ತ ವಯಸ್ಕಳಾದ ಹುಡುಗಿಯನ್ನು ಮದುವೆಗೆ ಕೊಡಲು ಆ ಹುಡುಗಿಯ ತಂದೆಯನ್ನು ಪೀಡಿಸುವುದು ಮತ್ತು ಅದಕ್ಕಾಗಿ ಹಣವನ್ನು ಸಂದಾಯ ಮಾಡಲು ಮಾಡಿದ ಒಪ್ಪಂದವು ಶೂನ್ಯ. ಆದರೆ ಹಣವನ್ನು ಆಗಲೇ ಸಂದಾಯ ಮಾಡಿದ್ದು, ಮದುವೆಯು ನಡೆಯದಿದ್ದರೆ ಹಣವನ್ನು ಹಿಂತೆಗೆದುಕೊಳ್ಳಬಹುದು ಎಂದು ನಿರ್ಧರಿಸಲಾಗಿದೆ. (Gopikrishna Vs. Janack Pd. AIR (1951) Pat 519)

ವೈಯಕ್ತಿಕ ಹಕ್ಕು ವರ್ಗಾವಣೆ

ಹಕ್ಕುಗಳ ವಿಷಯದಲ್ಲಿ ವೈಯಕ್ತಿಕ ಹಕ್ಕುಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ ಎಂಬುದನ್ನು ಆಗಲೇ ಗಮನಿಸಿದ್ದೇವೆ ಮತ್ತು ಗೃಹಕೃತ್ಯದ ಹಕ್ಕುಗಳಾದ ವೈವಾಹಿಕ ಮತ್ತು ಪಾಲಕತ್ವದ ವಿಷಯದಲ್ಲಿಯೂ ಸಹ ಹಕ್ಕುಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ. ಇಂತಹ ಹಕ್ಕುಗಳನ್ನು ಹಸ್ತಾಂತರಿಸುವುದು ಸಂಪೂರ್ಣ ಅನುಚಿತ ಎಂಬುದನ್ನು ಗಮನಿಸಿದ್ದೇವೆ. ನಾರಾಯಣಯ್ಯ ವಿರುದ್ಧ ಶ್ರೀಮತಿ ಅನ್ನಿಬೆಸೆಂಟ್ (Narayaniah Vs. Mrs. Annie Besant IL. R. Mad) ಇದರಲ್ಲಿ

ನಾರಾಯಣಯ್ಯನು ತನ್ನ ಮಗನ (ಮುಂದೆ ದೊಡ್ಡ ತತ್ತ್ವ ಜ್ಞಾನಿಯಾದ ಜೆ.ಕೃಷ್ಣಮೂರ್ತಿಯ) ಪಾಲಕತ್ವದ ಹಕ್ಕುಗಳನ್ನು ಹಸ್ತಾಂತರಿಸುವುದನ್ನು ಅನೂರ್ಜಿತ ಎಂದು ನಿರ್ಧರಿಸಲಾಯಿತು.

ಕಾನೂನುಬಾಹಿರ ಮತ್ತು ಶೂನ್ಯ ಒಪ್ಪಂದಗಳ ಪರಿಣಾಮ

ಕಾನೂನುಬಾಹಿರ ಒಪ್ಪಂದವೆಂದರೆ ವಾಸ್ತವಿಕವಾಗಿ ಕಾನೂನು ಮೂಲಕ ನಿಷೇಧಿತವಾದದ್ದು. ಆದರೆ ಶೂನ್ಯ ಒಪ್ಪಂದವು ಅಪ್ರಾಪ್ತವಯಸ್ಕನೊಡನೆ ಮಾಡಿಕೊಂಡ ಕರಾರಿನಂತೆ ನಿಷೇಧಿತವಾಗಿಲ್ಲದೇ ಇರಬಹುದು ಅಥವಾ ಸರ್ವೋಚ್ಚ ನ್ಯಾಯಾಲಯವು ಫೇರೂಲಾಲ್ ಮೊಕದ್ದಮೆಯಲ್ಲಿ ಗಮನಿಸಿದಂತೆ ನಿಷೇಧಿತ ವಾಗಿಲ್ಲದಿರಬಹುದು. ಎಲ್ಲಾ ಕಾನೂನುಬಾಹಿರ ಕರಾರುಗಳು ಶೂನ್ಯ ಮತ್ತು ಜಾರಿಗೊಳಿಸಲಸಾಧ್ಯ. ಆದರೆ ಶೂನ್ಯಕರಾರು ಕಾನೂನುಬಾಹಿರವಲ್ಲದೇ ಇರಬಹುದು. ಎರಡೂ ತರಹ ಒಪ್ಪಂದಗಳೂ ಮೂಲ ಒಪ್ಪಂದದ ಬಗ್ಗೆ ಜಾರಿಗೊಳಿಸಲು ಸಾಧ್ಯ ಮತ್ತು ಏನನ್ನೂ ವಸೂಲು ಮಾಡಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ನ್ಯಾಯಸಮ್ಮತತೆಯ ಹಿತಾಸಕ್ತಿ ಮತ್ತು ಮುಗ್ಧ ಪಕ್ಷವನ್ನು ಸಂರಕ್ಷಿಸುವುದಕ್ಕೋಸ್ಕರ ನ್ಯಾಯಾಲಯಗಳು ಹಲವಾರು ಪ್ರಮುಖವಾದ ಉಪಬಂಧಗಳನ್ನು ರೂಪಿಸಿವೆ.

ಅ) ಒಂದು ಕರಾರು ಕಾನೂನುಬಾಹಿರ ಉದ್ದೇಶಕ್ಕಾಗಿ ಮಾಡಲ್ಪಟ್ಟಿದ್ದು, ಅದು ಇನ್ನೂ ಜಾರಿಗೊಳಿಸಬಹುದಾದಂತಹ ಸ್ಥಿತಿಯಲ್ಲಿದ್ದರೆ ಅಂದರೆ ಅದರ ಯಾವುದೇ ಭಾಗವನ್ನೂ ನಿರ್ವಹಿಸದೆ ಇದ್ದರೆ, ಹಣ ಮತ್ತು ಸರಕುಗಳನ್ನು ಮಾತ್ರ ಕೊಟ್ಟಿದ್ದರೆ ಕರಾರಿನ ಆದೇಶದ ಮೇಲೆ ಅದನ್ನು ವಸೂಲು ಮಾಡಲು ಅವಕಾಶವನ್ನು ಕೊಡಲಾಗಿದೆ. ಸೀತಾರಾಮ ಅಗರವಾಲ್ ವಿರುದ್ಧ ರಾಧಾಬಾಯಿ (Sitaram Agarwal Vs. Radha Bai, AIR 1968 SC 533) ನೋಡಿ. ಕಾನೂನುಬಾಹಿರ ವ್ಯವಹಾರಕ್ಕೆ ಪ್ರವೇಶಿಸುವ ಪಕ್ಷ ಪಶ್ಚಾತ್ತಾಪ ಪಡಬಹುದೆಂದು ಭಾವಿಸಿ ಒಂದು ರಿಯಾಯಿತಿಯನ್ನು ಕೊಡಲಾಗಿದ್ದು, ಅದನ್ನು "ಲೋಕಸ್ ಪೆನಿಟರ್ನಿಯಾ" (Locus Peniternia) ತತ್ವ ಎಂದು ಕರೆಯಲಾಗಿದೆ. ಅಸಲು ಕರಾರನ್ನು ಛೇದ ಮಾಡಿ ಮತ್ತು ಅದು ಇನ್ನೂ ಜಾರಿಮಾಡಲು ಯೋಗ್ಯವಾಗಿರುವಾಗಲೇ ಹಿಂದುರುಗಿಸುವಂತೆ ಕೇಳಬೇಕು. ಇದನ್ನು ಸಾಮಾನ್ಯವಾಗಿ ಗಂಭೀರ ದುರ್ನಡತೆಗೆ ಅನ್ವಯಿಸಲಾಗುವುದಿಲ್ಲ.

ಆ) ''ಸಮದೋಷ'' ದಲ್ಲಿ ಇಲ್ಲದೇ ಇರುವ ಪಕ್ಷಗಳು :

''ಸಮದೋಷ'' (Pari Delicto) ಎಂಬ ಶಬ್ದದ ಅರ್ಥವೇನೆಂದರೆ ಸಮನಾಗಿ ಭಾಗಿ ಅಥವಾ ದೋಷವುಳ್ಳವರು ಎಂದು. ಕರಾರಿನಲ್ಲಿ ಒಂದು ಪಕ್ಷಕ್ಕೆ ಕಾನೂನು

ಬಾಹಿರತೆ ಅಥವಾ ಕಾನೂನುಬಾಹಿರ ಉದ್ದೇಶದ ಅರಿವಿಲ್ಲದೇ ಇರಬಹುದು. ಅಂತಹಾ ಸನ್ನಿವೇಶಗಳಲ್ಲಿ ನ್ಯಾಯಾಲಯಗಳು ಕಡಿಮೆ ದೋಷವಿರುವ ಅಥವಾ ಮುಗ್ಧ ಪಕ್ಷಕ್ಕೆ ನೆರವು ಕೊಡುತ್ತದೆ. ಉದಾಹರಣೆಗೆ, ಬಾಡಿಗೆ ನಿಯಂತ್ರಣ ಶಾಸನದಲ್ಲಿ ಹೆಚ್ಚಿಸಲಾದ ಬಾಡಿಗೆಯನ್ನು ಸಂದಾಯ ಮಾಡುವ ಒಪ್ಪಂದಗಳು ಅಥವಾ ಸ್ವತ್ತಿನ ನೇರಗುತ್ತಿಗೆಯನ್ನು ನಿಷೇಧಿಸಲಾಗಿದೆ. ಆದರೆ ಇವು ಬಾಡಿಗೆದಾರರನ್ನು ರಕ್ಷಿಸುವ ಕ್ರಮಗಳಾಗಿವೆ. ಅಂತಹ ಕರಾರುಗಳಿಗೆ ಪಕ್ಷಗಳು, ಉಭಯ ಪಕ್ಷಕಾರರೂ ಸಮದೋಷಿಗಳಾಗಿಲ್ಲವೆಂದು ಭಾವಿಸಿದೆ. ಆದರೆ ಕಾನೂನು ದೃಷ್ಟಿಯಲ್ಲಿ ಭೂಮಾಲೀಕನು ಗೇಣಿದಾರನ ಮನಸ್ಸಿನ ಮೇಲೆ ಪ್ರಭಾವ ಬೀರುವ ಸ್ಥಿತಿಯಲ್ಲಿರುತ್ತಾನೆ ಎಂಬ ಆಧಾರದ ಮೇಲೆ ಭೂಮಾಲೀಕನನ್ನು ಮಾತ್ರ ಬದ್ಧಗೊಳಿಸುತ್ತದೆ. ಮಹಮದ್ ಸಲೀಮುದ್ದೀನ್ ವಿರುದ್ಧ ಮಿಸ್ರಿಲಾಲ್ (Muhammad Salimuddin Vs. Misrilal AIR 1986 SC 1019) ರಲ್ಲಿ ಸರ್ವೋಚ್ಚ ನ್ಯಾಯಾಲಯವು ಮುಂಚಿನ ಮೊಕದ್ದಮೆಯಾದ ರಾಹಿ ವಿರುದ್ಧ ಶ್ರೀಮತಿ ರಾಂ. ಚಂಬೇಲಿ (Rahi Vs. Srimathi Ram Chambeli (1984) 1 SCC 612) ತೀರ್ಮಾನವನ್ನು ಅನುಸರಿಸಿತು ಮತ್ತು ಸಮದೋಷ ಎಂಬ ಸಿದ್ಧಾಂತ ಎರಡೂ ಪಕ್ಷಗಳೂ ಶಾಮೀಲಾದರೂ, ಒಂದು ಪಕ್ಷವು ಹಾನಿ ಅಥವಾ ಶೋಷಣೆಗೊಳಗಾದಾಗ ಮಾತ್ರ ಅದು ಅನ್ವಯಿಸುತ್ತದೆ ಎಂಬುದನ್ನು ವೀಕ್ಷಿಸಿತು.

೩) ವಸೂಲಿಗಾಗಿ ದಾವೆ :

ಸ್ವತ್ತಿನ ಅಥವಾ ಹಣದ ಮೊತ್ತದ ವಸೂಲಿಗಾಗಿ ಹೂಡಿದ ದಾವೆಯಲ್ಲಿ ಕಾನೂನುಬಾಹಿರತೆಯನ್ನು ಅವಲಂಬಿಸದೆ ಕೋರಿಕೆಗೆ ಸಮ್ಮತಿಸಿದರೆ, ನ್ಯಾಯಾಲಯಗಳು ಸಾಮಾನ್ಯವಾಗಿ ನ್ಯಾಯಸಮ್ಮತ ದೃಷ್ಟಿಯನ್ನು ಹೊಂದುತ್ತದೆ ಮತ್ತು ಕರಾರನ್ನು ಪೂರ್ವಸ್ಥಿತಿಗೆ ತರಲು ಆದೇಶ ಮಾಡುತ್ತದೆ. ನ್ಯಾಯಾಲಯಗಳು ಅಂತಹ ವ್ಯವಹಾರಗಳು ವಿಭಜನೀಯ ಎಂಬ ಆಧಾರದ ಮೇಲೆ ಮುಂದುವರಿಯುತ್ತವೆ. ಸರ್ವೋಚ್ಚ ನ್ಯಾಯಾಲಯವು ಸುರಸೈಬಾಲಿನಿ ದೇವಿ ವಿರುದ್ಧ ಫಣೀಂದ್ರ ಮೋಹನ ಮುಜುಂದಾರ (Surasaibalini Devi Vs. Phanindra Mohan Mujumdar AIR 1965 SC 1364) ನಲ್ಲಿ ಒಬ್ಬ ಮನುಷ್ಯನು ಸುಂಕ ತಪ್ಪಿಸುವುದಕ್ಕೋಸ್ಕರ ತನ್ನ ಸಂಬಂಧಿಗೆ ವಹಿಸಿಕೊಟ್ಟ ವ್ಯವಹಾರವನ್ನು ಹಿಂದಕ್ಕೆ ಪಡೆಯಲು ಅವಕಾಶ ಕೊಟ್ಟಿತು. ಒಂದು ಕಾನೂನು ಮೂಲಕ ನಿಷೇಧಿತವಾದ ವ್ಯವಹಾರವು ಕಾನೂನುಬಾಹಿರವಾಗುತ್ತದೆ.

******

ಶೂನ್ಯ ಒಪ್ಪಂದದ ಹೆಚ್ಚಿನ ಪ್ರಕರಣಗಳು

೧. ವಿವಾಹದ ನಿಗ್ರಹ :

ವಿವಾಹ ಸಂಬಂಧದ ವಿಷಯಗಳಲ್ಲಿ ಸಾರ್ವಜನಿಕ ನೀತಿ ಪ್ರಶ್ನೆಯನ್ನು ಬಿಟ್ಟು ವರ್ಗ ೨೬ ರ ಪ್ರಕಾರ, ವಿವಾಹ ಅಡ್ಡಿಗೊಳಿಸುವ ಎಲ್ಲಾ ಒಪ್ಪಂದಗಳೂ (ಅಪ್ರಾಪ್ತ ವಯಸ್ಕನ ವಿವಾಹವನ್ನು ಬಿಟ್ಟು) ಶೂನ್ಯವಾಗುತ್ತದೆ. ಶಾಸನವು ಸಾರ್ವಜನಿಕ ನೀತಿಯನ್ನು ಸ್ಪಷ್ಟವಾಗಿ ಘೋಷಿಸಿದ ಮೇಲೆ ಹೆಚ್ಚಿಗೆ ಏನನ್ನೂ ಮಾಡಲಾಗುವುದಿಲ್ಲ. ಒಂದು ಕುತೂಹಲಕಾರಿ ಮೊಕದ್ದಮೆಯನ್ನು ನಾವು ಇಲ್ಲಿ ಗಮನಿಸಬಹುದು : ರಾವ್‌ರಾಣಿ ವಿರುದ್ಧ ಗುಲಾಬ್ ರಾಣಿ (Rao Rani Vs. Gulab Rani ILR 1942 All 810). ಇದರಲ್ಲಿ ಇಬ್ಬರೂ ಸಹ ವಿಧವೆಯರು ಒಂದು ಒಪ್ಪಂದ ಮಾಡಿಕೊಂಡಿದ್ದರು. ಆ ಒಪ್ಪಂದವು ಏನೆಂದರೆ, ಯಾರು ಮರುಮದುವೆಯಾಗುವರೋ ಅವರು ತಮ್ಮ ಮೊದಲನೇ ಗಂಡನ ಸ್ವತ್ತಿನ ಮೇಲೆ ಹಕ್ಕನ್ನು ಕಳೆದುಕೊಳ್ಳುತ್ತಾರೆ ಎಂದು. ಈ ಪರಿಬಂಧಕ ಒಪ್ಪಂದವು ಈ ವರ್ಗದ ಉಲ್ಲಂಘನೆ ಮಾಡುವುದಿಲ್ಲ ಎಂದು ನಿರ್ಧರಿಸಿತು. ಏಕೆಂದರೆ ಈ ಒಪ್ಪಂದವು ವಿವಾಹವನ್ನು ಪ್ರತಿಷೇಧಿಸಿಲ್ಲ; ಆದರೆ ವಿವಾಹ ಮಾಡಿಕೊಂಡರೆ ತನ್ನ ಹಕ್ಕುಗಳನ್ನು ಮಾತ್ರ ಕಳೆದುಕೊಳ್ಳುತ್ತಾಳೆ ಎಂಬ ಕಾರಣದಿಂದ ಮಾತ್ರ ತೀರ್ಮಾನಿಸಲಾಯಿತು. ಅದೇ ಪ್ರಕಾರ ಮರುಮದುವೆ ಮಾಡಿಕೊಂಡ ವಿಧವೆಯು ಜೀವನಾಂಶದ ಹಕ್ಕನ್ನು ಕಳೆದುಕೊಳ್ಳುತ್ತಾಳೆ ಎಂಬ ಒಪ್ಪಂದವನ್ನು ಸಮಂಜಸವೆಂದು ತೀರ್ಮಾನಿಸ ಲಾಯಿತು.

೨. ವ್ಯಾಪಾರ ನಿಷೇಧ ಅಥವಾ ನಿಗ್ರಹ :

ಭಾರತದ ಸಂವಿಧಾನದ ಅನುಚ್ಛೇದ ೧೯ ರ ಪ್ರಕಾರ ಯಾವುದೇ ವ್ಯಾಪಾರ, ವ್ಯವಹಾರ ಅಥವಾ ದತ್ತಿ ನಡೆಸುವ ಹಕ್ಕನ್ನು ನ್ಯಾಯಾಲಯಗಳು ಮೂಲಭೂತ ಹಕ್ಕುಗಳಲ್ಲಿ ನಿಯಮಿತಗೊಳಿಸುವುದಕ್ಕೆ ಮುಂಚೆಯೇ ಅಂತಹ ಹಕ್ಕನ್ನು ಸಾಮಾನ್ಯ ಕಾನೂನು ತತ್ವವೆಂದು ಅತ್ಯಭಿಮಾನದಿಂದ ರಕ್ಷಿಸಿತ್ತು. ಲೆದರ್ ಕ್ಲಾತ್ ಕಂಪನಿ ವಿರುದ್ಧ ಲೌಸಾಂಟ್ (Leather Cloth Co., Vs. Lousont 21 LT 661) ನಲ್ಲಿ ನ್ಯಾಯ ಮೂರ್ತಿ ಜೇಮ್ಸ್‌ನ ಅತಿ ಮುಖ್ಯ ವಿವರಣೆಯು ಇದೇ ರೀತಿ ಇದೆ.

''ಕಾನೂನಿನ ತತ್ವಗಳು''

ಸಾರ್ವಜನಿಕ ನೀತಿಯು ಏನೆಂದರೆ ಪ್ರತಿಯೊಬ್ಬ ಮನುಷ್ಯನೂ ತನಗೋಸ್ಕರ ಕೆಲಸ ಮಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ. ಅವನು ಯಾವುದೇ ಕರಾರನ್ನು

ಮಾಡಿಕೊಂಡರೂ ಸಹ, ತನ್ನ ಕುಶಲತೆ, ಮೇಧಾಶಕ್ತಿ, ತನ್ನ ಕೆಲಸದ ಸ್ಥಾನ ಅಥವಾ ತನ್ನತನವನ್ನು ಕಳೆದುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ.

ಈಗ ಕರಾರು ಅಧಿನಿಯಮದ ವರ್ಗ ೨೭ ರಲ್ಲಿ ಈ ತತ್ವವನ್ನು ಸೇರಿಸಲಾಗಿದೆ: ಆದರೆ ಈ ಕಟ್ಟಳೆಯು ಭಾಗಶಃ ಮತ್ತು ಸಮಂಜಸವಾದರೆ ಮಾತ್ರ ಸಮರ್ಥಿಸ ಬಹುದು ಎಂಬುದನ್ನು ತಿಳಿದುಕೊಳ್ಳಬೇಕು. ಈ ಕೆಳಕಂಡ ವಿನಾಯಿತಿಗಳನ್ನು ನಾವು ಗಮನಿಸೋಣ.

ಅ) ಸುನಾಮೆಯ ಮಾರಾಟ (Goodwill)

ಪಾಲುದಾರಿಕೆ ವ್ಯವಹಾರದ ಪುನರ್ರಚನೆ ಮತ್ತು ವಿಸರ್ಜನೆಯ ಸಮಯದಲ್ಲಿ ಪಾಲುದಾರರಲ್ಲಿ ಯಾರು ಸುನಾಮೆಯನ್ನು ಖರೀದಿ ಮಾಡಿರುತ್ತಾರೋ ಅಥವಾ ಇಟ್ಟುಕೊಂಡಿರುತ್ತಾರೋ ಅವರನ್ನು ಬಿಟ್ಟು ಬೇರೆಯವರು ಅದೇ ವ್ಯವಹಾರವನ್ನು ನಡೆಸುವುದಿಲ್ಲವೆಂದು ಒಪ್ಪಂದ ಮಾಡಿಕೊಳ್ಳಬೇಕು. ಇಲ್ಲಿ ವರ್ಗ ೨೭ ರ ಒಂದು ವಿನಾಯಿತಿ ಏನೆಂದರೆ ಅಂತಹ ಒಪ್ಪಂದವು ನ್ಯಾಯಾಲಯಕ್ಕೆ ಸಮಂಜಸ ಎಂದು ಕಂಡು ಬಂದರೆ ಮಾತ್ರ ಮಾನ್ಯತೆ ಪಡೆಯುತ್ತದೆ. ಇದು ಸಮಯ ಮತ್ತು ಸ್ಥಳ ಈ ಎರಡೂ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಬಹಳ ವರ್ಷಗಳ ಪಕ್ಕಾ ನಿಗ್ರಹವು ನಿಸ್ಸಂದೇಹವಾಗಿ ಸಮಂಜಸವಲ್ಲ. ಅದೇ ತರಹದ ವ್ಯವಹಾರವನ್ನು ಬೇರೆ ಸ್ಥಳದಲ್ಲಿ ನಿರ್ವಹಿಸಿದರೆ, ಅದು ಯಾವುದೇ ರೀತಿಯಲ್ಲಿ ಸ್ಪರ್ಧೆಯಿಲ್ಲದಂತಿರುವುದರಿಂದ ಅದಕ್ಕೆ ಯಾವುದೇ ಆಕ್ಷೇಪವಿಲ್ಲ. (objection) ಹೌಸ್ ಆಫ್ ಲಾರ್ಡ್ಸ್‌ನ ದೃಷ್ಟಾಂತ ಪ್ರಕರಣದ ನಾರ್ಡೆನ್‌ಫೆಲ್ಟ ವಿರುದ್ಧ ಮಾಕ್ಸಿಮ್ ನಾರ್ಡೆನ್ ಫೆಲ್ಟ್ (Nordenfelt Vs. Maxim Nordenfelt Gun Co., 1894 AC 535) ಮೊಕದ್ದಮೆಯಲ್ಲಿ ಒಬ್ಬ ಬಂದೂಕ ಮತ್ತು ಮದ್ದುಗುಂಡು ಸಂಶೋಧನೆ ಮತ್ತು ತಯಾರು ಮಾಡುವವನು ತನ್ನ ಸುನಾಮೆಯನ್ನು ಮಾರಾಟ ಮಾಡಿದನು ಮತ್ತು ಎರಡು ಪರಿವಚನ ಕೊಟ್ಟನು, (೧) ತಾನು ೨೫ ವರ್ಷಗಳ ಕಾಲ ಆ ಕಸುಬನ್ನು ನಡೆಸದೇ ಇರುವುದು ಮತ್ತು (೨) ಯಾವುದೇ ಇನ್ನಿತರ ಸ್ಪರ್ಧಿತ ವ್ಯವಹಾರದಲ್ಲಿ ತೊಡಗದೇ ಇರುವುದು. ಮೊದಲನೇ ವಚನವು ಸಮಂಜಸವೆಂದು ತೀರ್ಮಾನಿಸಲಾಯಿತು. ಏಕೆಂದರೆ ಸುನಾಮೆಯನ್ನು ಮಾರಾಟ ಮಾಡಲಾಗಿತ್ತು. ಆದರೆ ಎರಡನೇ ವಚನವು ಕಂಪನಿಯು ಯಾವುದೇ ರೀತಿಯ ವ್ಯವಹಾರವನ್ನು ಮಾಡಕೂಡದು ಎಂಬ ನಿಗ್ರಹವನ್ನು ಸೂಚಿಸಿದ್ದು ಅದು ಅಯುಕ್ತ ಬಹಿಷ್ಕಾರ ಎಂದು ಅದನ್ನು ಪುರಸ್ಕರಿಸಲಿಲ್ಲ.

ಆ) ವ್ಯಾಪಾರ ಒಪ್ಪಂದಗಳು :

ವ್ಯವಹಾರ ಪ್ರಪಂಚದ ವೈಶಿಷ್ಟ್ಯಪೂರ್ಣವಾದ ಅತಿಶಯವೆಂದರೆ ವ್ಯಾಪಾರಿಗಳು

ಅಥವಾ ತಯಾರಕರು ತಾವೆಲ್ಲಾ ಜೊತೆಗೂಡಿ ಸಂಘಟನೆ ಮಾಡಿಕೊಂಡು ಏಕಸ್ವಾಮ್ಯವನ್ನು ಸೃಷ್ಟಿಸುವುದು ಮತ್ತು ಪರಿಬಂಧಕ ಕ್ರಮಗಳನ್ನು ಅನುಸರಿಸುವುದು. ಇಂತಹ ಶೋಷಣೆಯಿಂದ ಜನಸಾಮಾನ್ಯರಿಗೆ ಉಂಟಾಗುವ ಬಹಳಷ್ಟು ತೊಂದರೆಗಳನ್ನು ಈಗ ಭಾರತ ಸರ್ಕಾರದ ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಕ್ರಮ ಅಧಿನಿಯಮ (Monopolies and Restrictive Trade Practices Act) ಜಾರಿಗೊಂಡು ಕಷ್ಟಗಳನ್ನು ಪರಿಹರಿಸಲಾಗಿದೆ. ಇದು ಕಾನೂನು ಮಾಡುವವರ ಮೂಲಕ ಜಾರಿಗೆ ಬರಲು ಬಹಳಷ್ಟು ಸಮಯ ತೆಗೆದುಕೊಂಡರೂ ಸಹ ಶೆರ್ಮನ್‌ನ ಅಮೇರಿಕಾದ ಅಂಟಿ ಟ್ರಸ್ಟ್ ಅಧಿನಿಯಮದಿಂದ ಸ್ಫೂರ್ತಿ ಪಡೆದುಕೊಂಡಿತು. ಹೌಸ್ ಆಫ್ ಲಾರ್ಡ್ಸ್‌ನ ದೃಷ್ಟಾಂತ ಪ್ರಕರಣವು ಎಸ್ಸೋ ಪೆಟ್ರೋಲಿಯಂ ಕಂಪನಿ ವಿರುದ್ಧ ಹಾರ್ಪರ್ಸ್ ಗ್ಯಾರೇಜ್ (ಸ್ಟಾರ್ ಪೋರ್ಟ್) ಲಿಮಿಟೆಡ್ (Esso Petroleum Co., Ltd. Vs. Harpers Garage (Stourport) Ltd., 1968 AC 269). ಇದರಲ್ಲಿ ಪೆಟ್ರೋಲ್ ಕಂಪನಿಯು ಎರಡು ಮೋಟಾರು ಸರಕುಗಳ ಉಗ್ರಾಣವನ್ನು ಅನುಮತಿಸಿತ್ತು ಮತ್ತು ಅವನ್ನು ೨೧ ವರ್ಷಗಳು ಅನನ್ಯವಾಗಿ ಅದರ ಸಂಪೂರ್ಣ ಅಗತ್ಯತೆಯನ್ನು ಎಸ್ಸೋ ಕಂಪನಿಯಿಂದಲೇ ಕೊಳ್ಳಬೇಕು ಎಂಬ ನಿಬಂಧನೆಯಿಂದ ಅವರನ್ನು ಕಟ್ಟಿಹಾಕ ಲಾಗಿತ್ತು. ನ್ಯಾಯಾಲಯವು ಈ ರೀತಿ ೨೧ ವರ್ಷ ಅವರನ್ನು ಕಟ್ಟಿಡುವುದು ಅನುಚಿತವಾಗಿ ತಪ್ಪು ಮತ್ತು ಶೂನ್ಯ ಎಂದು ನಿರ್ಧರಿಸಿತು. ಅದೇ ಸಮಯದಲ್ಲಿ ಇದು ಸಾಧ್ಯ ವ್ಯಾಪಾರ ಸಂಬಂಧಗಳ ಅಂದರೆ ಏಕೈಕ ಎಜೆನ್ಸಿ (Sole Agency System) ಪದ್ಧತಿ ವ್ಯವಹಾರದಲ್ಲಿ ಸಾಧಾರಣ ಮತ್ತು ಅವಶ್ಯಕ ಎಂದು ತಿಳಿದಿದ್ದನ್ನು ನಿರೂಪಿಸಲು ಮತ್ತು ವಿಭಿನ್ನಗೊಳಿಸುವ ಅವಕಾಶ ಪಡೆಯಿತು.

ಇ) ನೌಕರರ ಮೇಲೆ ನಿಗ್ರಹ ನಿರ್ಬಂಧ :

ಕೆಲಸದ ಒಪ್ಪಂದಗಳು ಅನೇಕ ಸಲ ಕಾರ್ಮಿಕರನ್ನು (ಕೆಲಸ ಮಾಡುವವರು) ಬೇರೆ ಕಡೆ ಕೆಲಸ ತೆಗೆದುಕೊಳ್ಳದಂತೆ ಕಟ್ಟಿಹಾಕುತ್ತವೆ. ಏಕೆಂದರೆ ಕೆಲಸ ಕೊಟ್ಟಿದ್ದವರು ಅವರಿಗೆ ವ್ಯಾಪಾರ ರಹಸ್ಯಗಳನ್ನು ತಿಳಿಸಿಕೊಟ್ಟಿರುತ್ತಾರೆ. ನೌಕರರು ವ್ಯಾಪಾರ ಅಥವಾ ತಾಂತ್ರಿಕ ತಿಳುವಳಿಕೆ ಜ್ಞಾನವನ್ನು ಪಡೆದುಕೊಂಡ ನಂತರ ತಮ್ಮದೇ ವ್ಯವಹಾರವನ್ನು ಪ್ರಾರಂಭಿಸಿ ಯಜಮಾನನ ವ್ಯಾಪಾರವನ್ನು ಸ್ಪರ್ಧಿಸ ಬಹುದು.

ಇಂತಹಾ ನಕಾರಾತ್ಮಕ ಒಡಂಬಡಿಕೆಗಳ (Negative Covenants) ಜಾರಿಗೊಳಿಸುವಿಕೆಯ ಪ್ರಶ್ನೆಯು ಬಹಳಷ್ಟು ಮೊಕದ್ದಮೆಗಳಲ್ಲಿ ಉದ್ಭವಿಸಿದೆ. ನಿಯೋಜನೆ ಅವಧಿಯಲ್ಲಿ ಒಬ್ಬ ಮನುಷ್ಯನನ್ನು ಬೇರೆ ಕಡೆ ಕೆಲಸ ಮಾಡುವ ಅಥವಾ ಆ ತರಹ ಮಾಡಲು ಆಸೆಪಡುವುದನ್ನು ಒಂದು ನಿರ್ಬಂಧಕಾಜ್ಞೆಯಿಂದ ತಡೆಗಟ್ಟಬಹುದು. ಭಾರತದಲ್ಲಿ ಬಹಳಷ್ಟು ಹಿಂದಿನ ಮೊಕದ್ದಮೆಗಳಲ್ಲಿ [illegible] ಮತ್ತು

ಭಾರತದ ಉಚ್ಚತಮ ನ್ಯಾಯಾಲಯದಲ್ಲಿ ಮೊದಲನೇ ಮುಖ್ಯ ನ್ಯಾಯಮೂರ್ತಿಯಾದ ಹೆಚ್. ಜಿ. ಖಾನಿಯಾ ಅವರು ಮುಂಬಯಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಮೂರ್ತಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ತೀರ್ಮಾನಿಸಿದ ವಿ. ಬಿ. ದೇಶಪಾಂಡೆ ವಿರುದ್ಧ ಅರವಿಂದ್ ಮಿಲ್ಸ್ ಲಿಮಿಟೆಡ್ (V. B. Deshpande Vs. Arvind Mills Ltd. AIR 1946 BOM 423). ಮೊಕದ್ದಮೆಯನ್ನು ಪರಿಶೀಲಿಸೋಣ. ಈ ಮೊಕದ್ದಮೆಯಲ್ಲಿ ಒಂದು ಗಿರಣಿಯ ಕಾರ್ಮಿಕನು ಒಪ್ಪಂದ ಮಾಡಿಕೊಂಡ ಮೂರು ವರ್ಷದೊಳಗೆ ಬೇರೆ ಕಡೆ ಕೆಲಸಕ್ಕೆ ಸೇರುವುದನ್ನು ನಿಗ್ರಹಪಡಿಸುವ ನಿರ್ಬಂಧಕಾಜ್ಞೆಯನ್ನು ಜಾರಿಗೊಳಿಸಿದರು.

ಇನ್ನೊಂದು ದೃಷ್ಟಾಂತ ಪ್ರಕರಣವು ನಿರಂಜನ್ ಶಂಕರ್ ಗೋಲಿಕಾರಿ ವಿರುದ್ಧ ಸೆಂಚುರಿ ಸ್ಪಿನ್ನಿಂಗ್ ಆಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ (Niranjan Shankar Golikari Vs. Century Spinning & Manufacturing Co. Ltd., AIR 1967 SC 1098) ಈ ಮೊಕದ್ದಮೆಯಲ್ಲಿ ಒಬ್ಬ ನೌಕರನು ಐದು ವರ್ಷಗಳ ಕಾಲ ನಿಯೋಜನ ಕರಾರು ಮಾಡಿಕೊಂಡಿದ್ದನು. ಈ ಅವಧಿಯಲ್ಲಿ ಅವನು ಈ ಕೆಲಸ ಬಿಟ್ಟರೂ ಸಹ ಬೇರೆ ಕಡೆ ಕೆಲಸ ಮಾಡಬಾರದು ಎಂದು ಕರಾರು ಮಾಡಿಕೊಳ್ಳಲಾಗಿತ್ತು. ಏಕೆಂದರೆ ಅವನಿಗೆ ಆ ಕೆಲಸದ ತಾಂತ್ರಿಕ ಮಾಹಿತಿಯ ಬಗ್ಗೆ ವಿಶೇಷ ಮಾಹಿತಿ ತಿಳಿದಿತ್ತು. ಆ ನೌಕರನು ಹೆಚ್ಚಿಗೆ ಸಂಬಳ ಕೊಡುವ ನೌಕರಿ ತೆಗೆದುಕೊಂಡನು. ಈ ಮುಂಚಿನ ಯಜಮಾನನು ನ್ಯಾಯಾಲಯದ ಮೊರೆ ಹೊಕ್ಕನು. ನ್ಯಾಯಾಲಯವು ಅವನು ಇನ್ನೊಂದು ಕೆಲಸಕ್ಕೆ ಸೇರುವುದಿಲ್ಲವೆಂದು ಮಾಡಿದ ನಕಾರಾತ್ಮಕ ಒಡಂಬಡಿಕೆಯು ಪೂರ್ಣವಾಗಿ ಸಮಂಜಸ. ಏಕೆಂದರೆ ಅದು ''ಬಹಳ ವ್ಯಾಪಕ'' (Too Wide) ಅಥವಾ ಅನುಚಿತ ಅಥವಾ ಅನಾವಶ್ಯಕ ವಾದದ್ದಲ್ಲ ಎಂಬುದನ್ನು ಘೋಷಿಸಲು ಹಿಂದು ಮುಂದು ನೋಡಲೇ ಇಲ್ಲ. ಇದನ್ನು ಮಾಡುವಾಗ ಸರ್ವೋಚ್ಚ ನ್ಯಾಯಾಲಯವು ಕಲ್ಕತ್ತೆ ಉಚ್ಚ ನ್ಯಾಯಾಲಯವು ಗೋಪಾಲ್ ಪೇಪರ್ ಮಿಲ್ಸ್ ವಿರುದ್ಧ ಎಸ್. ಜಿ. ಮಲ್‌ಹೋತ್ರ (Gopal Paper Mills Vs. S. G. Malhotra AIR 1962 Cal 61) ಮೋಕದ್ದಮೆಯ ತೀರ್ಮಾನವನ್ನು ಗಮನಿಸಿತು. ಅದರಲ್ಲಿ ಒಬ್ಬ ನೌಕರನನ್ನು ೨೦ ವರ್ಷಗಳ ಕಾಲ ಬದ್ಧಗೊಳಿಸುವ ಒಪ್ಪಂದವನ್ನು ''ಅತಿ ವ್ಯಾಪಕ ಮತ್ತು ಅನುಚಿತ'' ಎಂದು ತೀರ್ಮಾನಿಸಲಾಗಿತ್ತು.

ಭಾರತದ ನ್ಯಾಯಾಲಯಗಳ ಮನೋಭಾವವು ಏನೆಂದರೆ ನಿಯೋಜನೆಯ ಅವಧಿಯಲ್ಲಿ ಮಾತ್ರ ನಿರ್ಬಂಧಕ ಒಪ್ಪಂದವನ್ನು ಅಂಕೆಯಲ್ಲಿಡುತ್ತದೆ. ಅದರಲ್ಲೂ ಯಜಮಾನನ ರಕ್ಷಣೆ ಎಂದು ಪರಿಗಣಿಸಿದಾಗ ಮಾತ್ರ ನಿರ್ಬಂಧಗೊಳಿಸುತ್ತದೆ.

[illegible]

೩. **ಕಾನೂನು ವ್ಯವಹರಣೆಗಳ ನಿಗ್ರಹ :**

ನಾವು ಸಾರ್ವಜನಿಕ ನೀತಿಗೆ ವಿರುದ್ಧವಾದ ಒಪ್ಪಂದಗಳನ್ನು ಗಮನಿಸುತ್ತಿದ್ದೇವೆ. ಎಲ್ಲಾ ವ್ಯಕ್ತಿಗಳಿಗೂ ಪ್ರವೇಶಾವಕಾಶವು ಮೂಲ ಹಕ್ಕು ಎಂಬುದನ್ನು ತಿಳಿಯಬೇಕು. ನ್ಯಾಯಿಕ ವ್ಯವಹರಣೆಯಲ್ಲಿ ಹಸ್ತಕ್ಷೇಪ ಇರಕೂಡದು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇದನ್ನು ವರ್ಗ ೨೮ ಇನ್ನೂ ವಿಸ್ತರಿಸಿ ಈ ರೀತಿ ಹೇಳುತ್ತದೆ. ಇದರ ಪ್ರಕಾರ ಒಂದು ಪಕ್ಷವು ಸಾಮಾನ್ಯ ನ್ಯಾಯ ವ್ಯವಹರಣೆಯಲ್ಲಿ ತನ್ನ ಹಕ್ಕು ಜಾರಿಗೊಳಿಸುವುದನ್ನು ತಡೆಗಟ್ಟುವುದು ಅಥವಾ ತನ್ನ ಹಕ್ಕನ್ನು ಜಾರಿಗೊಳಿಸಬೇಕಾದ ಸಮಯವನ್ನು ನಿಯಂತ್ರಿಸುವುದು, ಇವೆಲ್ಲಾ ಶೂನ್ಯ. ಯಾವ ಒಪ್ಪಂದದ ಒಂದು ಖಂಡದಲ್ಲಿ ಕಾಲಪರಿಮಿತಿಯ ಅವಧಿಯನ್ನು ನಿಯಮಿಸಿ, ಕಾಲಪರಿಮಿತಿ ಅವಧಿ ಮುಗಿದ ನಂತರ ಪಕ್ಷಗಳು ನ್ಯಾಯಾಲಯಕ್ಕೆ ಹೋಗುವುದನ್ನು ಅಸಮರ್ಥನನ್ನಾಗಿ ಮಾಡುತ್ತದೋ ಅಂತಹ ಒಪ್ಪಂದಗಳು ಶೂನ್ಯ. ಕಾಲ ಪರಿಮಿತಿ ಕಾನೂನು ಎಲ್ಲಾ ವ್ಯಾಜ್ಯಕ್ಕೂ ಕಾಲ ಪರಿಮಿತಿಯನ್ನು ನಿಯಮಿಸುತ್ತದೆ ಮತ್ತು ಇಂತಹಾ ಅವಧಿಯನ್ನು ನಿರ್ಬಂಧಿಸುವ ಒಪ್ಪಂದಗಳು ಮಾನ್ಯವಲ್ಲ.

ವರ್ಗ ೨೮ ನ್ನು ಎರಡು ಬಗೆಯ ಒಪ್ಪಂದಗಳು ಉಲ್ಲಂಘಿಸುವುದಿಲ್ಲ ಎಂದು ತೀರ್ಮಾನಿಸಲಾಗಿದೆ. ಮೊದಲನೆಯದಾಗಿ, ಒಂದು ಒಪ್ಪಂದದಲ್ಲಿ ಪಕ್ಷವನ್ನು ನಿರ್ದಿಷ್ಟ ಅವಧಿಯೊಳಗೆ ಕಾರ್ಯಗತಗೊಳಿಸಲು ಬಲಾತ್ಕರಿಸುವುದನ್ನು ಕೆಲ ಸನ್ನಿವೇಶದಲ್ಲಿ ಎತ್ತಿಹಿಡಿಯಲಾಗಿದೆ. ನಷ್ಟ ಅಥವಾ ಹಾನಿಯನ್ನು ಸಾಕ್ಷ್ಯ ಅಥವಾ ವಿಷಯಗಳು ಇನ್ನೂ ಹೊಸದಾಗಿರುವಾಗಲೇ ಮತ್ತು ಅವಧಿ ಮೀರಿಲ್ಲದೇ ಇರುವಾಗಲೇ ನಿರ್ದಿಷ್ಟವಾಗಿ ಕಂಡು ಹಿಡಿಯುವುದು ಸುಲಭ.

ಎರಡನೆಯದಾಗಿ, ಕೆಲವು ಸನ್ನಿವೇಶಗಳಲ್ಲಿ ಕರಾರಿನ ಹಕ್ಕುಗಳು ಹಲವು ಕಾರಣಗಳಿಂದ ನಿರ್ಮೂಲಗೊಂಡಿರಬಹುದು. ಅಂತಹ ಪರಿಸ್ಥಿಯಲ್ಲಿ ಹಕ್ಕನ್ನು ಜಾರಿಗೊಳಿಸಲು ಸಮಯದ ಪ್ರಶ್ನೆಯೇ ಬರುವುದಿಲ್ಲ. ಆದುದರಿಂದ ಕರಾರು ಕಾಯಿದೆಯ ವರ್ಗ ೨೮ ಅನ್ವಯಿಕವಾಗುವುದಿಲ್ಲ.

ಉದಾಹರಣೆಗೆ ಒಂದು ಸರ್ಕಾರಿ ಕರಾರಿನಲ್ಲಿ ಆರು ತಿಂಗಳೊಳಗೆ ದಾವೆಯನ್ನು ದಾಖಲು ಮಾಡದಿದ್ದರೆ ಸರ್ಕಾರವು ಜವಾಬ್ದಾರಿಯಲ್ಲ ಎಂದು ನಮೂದಿಸಲಾಗಿತ್ತು. ಇಂತಹಾ ಕರಾರು ವರ್ಗ ೨೮ ಕ್ಕೆ ವಿರುದ್ಧವಲ್ಲ. ಇಂತಹ ಶರತ್ತುಗಳು ಹಕ್ಕುಗಳನ್ನು ನಿರ್ಮೂಲನಗೊಳಿಸುತ್ತವೆ. ಇವು ವ್ಯಾಜ್ಯವನ್ನು ತಡೆಗಟ್ಟುವಂತಹಾ ಷರತ್ತುಗಳಲ್ಲ. (P. N. Malla Vs. Union AIR 1962 J & K 15) (Pearl Insurance Co. Vs Atma Ram AIR 1960 Punj 236)

ಇಂತಹದೇ ಮೇಲಿಂದ ಮೇಲೆ ಬರುವಂತಹ ವ್ಯವಹಾರಗಳ ವ್ಯಾಪಾರ

ಸಂಬಂಧದ ಒಂದು ಪತ್ರ ಅಥವಾ ಖರೀದಿ ಪಟ್ಟಿಯು ''ಮುಂಬಯಿ ಮತ್ತು ಮದ್ರಾಸ್ ನ್ಯಾಯಾಲಯ ಅಧಿಕಾರ ವ್ಯಾಪ್ತಿಗೆ ಅಧೀನವಾಗಿ ಮಾತ್ರ'' ಎಂಬ ಮುದ್ರಿತ ಅನುಬಂಧವನ್ನೊಳಗೊಂಡಿರುವುದಕ್ಕೆ ಸಂಬಂಧಿಸಿರುತ್ತದೆ. ಅಂತಹಾ ಪರಿಬಂಧಕ ಖಂಡಗಳ ಮಾನ್ಯತೆಯನ್ನು ಕರಾರು ಕಾಯಿದೆಯ ವರ್ಗ ೨೮ ಮತ್ತು ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ನಿರ್ದಿಷ್ಟಪಡಿಸುವ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ಉಲ್ಲೇಖದೊಡನೆ ತಿಳಿಯುವುದು ಅವಶ್ಯಕ.

ಸಿವಿಲ್ ಪ್ರಕ್ರಿಯಾ ಸಂಹಿತೆಯ ವರ್ಗ ೧೫ ರಿಂದ ೨೦ ಸಾಮಾನ್ಯವಾಗಿ ಈ ರೀತಿ ಹೇಳುತ್ತದೆ. ದಾವೆಯ ವಸ್ತು ವಿಷಯವು ಸ್ಥಿರ ಸ್ವತ್ತು ಆಗಿದ್ದಿರಬಹುದು. ಯಾವ ನ್ಯಾಯಾಲಯ ವ್ಯಾಪ್ತಿಯಲ್ಲಿ ಸ್ವತ್ತು ಇರುವುದೋ ಅಂತಹಾ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲು ಮಾಡತಕ್ಕದ್ದು. ಬೇರೆ ವಿಷಯಗಳ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ವರ್ಗ ೨೦ ರ ಪ್ರಕಾರ ದಾವೆಯನ್ನು ಸಾಧಾರಣವಾಗಿ ಪ್ರತಿವಾದಿಯು ಖಾಯಂ ಆಗಿ ಎಲ್ಲಿ ವಾಸಿಸುತ್ತಾನೆಯೋ ಅಥವಾ ವ್ಯವಹಾರವನ್ನು ನಡೆಸುತ್ತಾನೋ ಅಥವಾ ಗಳಿಕೆಗಾಗಿ ಕೆಲಸವನ್ನು ಮಾಡುತ್ತಾನೆಯೋ ಅಲ್ಲಿ ಹೂಡಬಹುದೆಂದು ನಿರ್ದಿಷ್ಟಪಡಿಸುತ್ತದೆ. ಆದ್ದರಿಂದ ವಾದಿಯ ವಾಸಸ್ಥಾನವನ್ನು ಗಣನೆಗೆ ತೆಗೆದುಕೊಳ್ಳುವುದು ಅಸಂಬದ್ಧ. ಕರಾರಿಗೆ ಸಂಬಂಧಿಸಿದ ವ್ಯಾಜ್ಯ ಕಾರಣ ಉಂಟಾಗುವ ಸಂಬಂಧದಲ್ಲಿ ಅಂದರೆ ಉದಾಹರಣೆಗೆ ನೆರವೇರಿಕೆ ಸ್ಥಳ, ಕರಾರನ್ನು ಮಾಡಿಕೊಂಡ ಸ್ಥಳ ಮತ್ತು ಹಣ ಸಂದಾಯ ಮಾಡಬೇಕಾದ ಸ್ಥಳ ಇನ್ನೂ ಮುಂತಾದವು. ಇವೆಲ್ಲವೂ ವ್ಯಾಜ್ಯ ಕಾನೂನಿನಿಂದ ಉಂಟಾಗುವ ಸ್ಥಳಗಳಾಗಿದ್ದು ವರ್ಗ ೨೦ರ ಉಪಖಂಡ (ಸಿ)ಯು ಒಂದು ಪಕ್ಷಕ್ಕೆ ವ್ಯಾಜ್ಯ ಕಾರಣದ ಸ್ವಲ್ಪ ಭಾಗವು ಎಲ್ಲಿ ಉದ್ಭವಿಸುತ್ತದೆಯೋ ಆ ಸ್ಥಳದಲ್ಲಿ ಕೂಡ ದಾವೆಯನ್ನು ಹೂಡಲು ಸಾಧ್ಯಗೊಳಿಸುತ್ತದೆ.

ಆದ್ದರಿಂದ, ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಕಾನೂನು ನಿರ್ಧರಿಸುತ್ತದೆ. ಈ ಅಧಿಕಾರ ವ್ಯಾಪ್ತಿಯನ್ನು ಪಕ್ಷಗಳ ಒಪ್ಪಂದದ ಮೇಲೆ ನಿರ್ಧರಿಸಲಾಗುವುದಿಲ್ಲ.

ಈಗ ನಾವು ವರ್ಗ ೨೮ ನ್ನು ಪುನಃ ಪರಿಶೀಲಿಸಬಹುದು. ಸಿವಿಲ್ ಪ್ರಕ್ರಿಯಾ ಸಂಹಿತೆಯು ಅಧಿಕಾರ ವ್ಯಾಪ್ತಿಯನ್ನು ಗೊತ್ತುಪಡಿಸಿರುತ್ತದೆ. ಬರೀ ಮುದ್ರೆ ಒತ್ತಿ ಯಾವುದೋ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳುವ ಯಾವುದೇ ಕಾಯಿದೆಯೂ ಮಾನ್ಯವಲ್ಲ. ಸರ್ವೋಚ್ಚ ನ್ಯಾಯಾಲಯದ ಮುಖ್ಯವಾದ ನಿರ್ಣಯ ಹುಕಮ್‌ಸಿಂಗ್ ವಿರುದ್ಧ ಗ್ಯಾಮನ್ಸ್ (ಇಂಡಿಯಾ) ಲಿಮಿಟೆಡ್ (Hukumsingh Vs. Gammons (INDIA) Ltd., AIR (1971) SC 740) ಅದರ ಪ್ರಕಾರ ''ಒಪ್ಪಂದಕ್ಕೆ ಸೇರಿದ ಪಕ್ಷಗಳು ನ್ಯಾಯಾಲಯದ ಅಧಿಕಾರ

ವ್ಯಾಪ್ತಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಬರದೆ ಇದ್ದರೆ ಅಲ್ಲಿ ಕಾನೂನು ಜಾರಿಗೊಳಿಸಲು ಅವಕಾಶ ಕೊಡುವುದಿಲ್ಲ. ಆದರೆ ಎಲ್ಲಿ ಎರಡು ಅಥವಾ ಇನ್ನೂ ಹೆಚ್ಚು ನ್ಯಾಯಾಲಯಗಳ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಧಿಕಾರ ವ್ಯಾಪ್ತಿಯ ಕೆಳಗೆ ದಾವೆಯನ್ನು ಹೂಡಬಹುದಾಗಿದ್ದಲ್ಲಿ ಎರಡೂ ಪಕ್ಷಗಳು ತಮ್ಮಲ್ಲಿ ವಿವಾದ ಬಂದರೆ ಯಾವುದೇ ಒಂದು ನ್ಯಾಯಾಲಯದಲ್ಲಿ ಮಾತ್ರ ವಿವಾದ ಹೂಡಬೇಕು ಎಂಬ ಒಪ್ಪಂದವನ್ನು ಮಾಡಿಕೊಂಡಿದ್ದರೆ, ಅಂತಹಾ ಒಪ್ಪಂದಗಳು ಕರಾರು ಅಧಿನಿಯಮದ ವರ್ಗ ೨೮ ರಲ್ಲಿ ತದ್ವಿರುದ್ಧವಾಗುವುದಿಲ್ಲ ಎಂದು ಗಮನಿಸಲಾಯಿತು.

ಶಾಸನವು ನ್ಯಾಯಿಕ ವ್ಯವಹರಣೆಗಳು ತಮ್ಮದೇ ಆದ ಸ್ವಂತ ಇತಿಮಿತಿಗಳನ್ನು ಹೊಂದಿರುವುದನ್ನು ಗುರುತಿಸುತ್ತವೆ. ಆದ್ದರಿಂದ ಪಕ್ಷಗಳು ತಮ್ಮ ವಿವಾದಗಳನ್ನು **ಮಧ್ಯಸ್ಥಿಕೆಗೆ** (Arbitration) ಒಪ್ಪಿಸಲು ಆಯ್ಕೆ ಮಾಡಿದರೆ ಮತ್ತು ನ್ಯಾಯಾಲಯಗಳನ್ನು ತಮ್ಮ ಅಧಿಕಾರ ವ್ಯಾಪ್ತಿಯ ಬಗ್ಗೆ ಒಂದು ವಿವಾದಾಂಶದ ವಿಚಾರಣಾ ಯೋಗ್ಯತೆಯನ್ನು ಕಸಿದುಕೊಂಡರೆ ಆಗ ಅದನ್ನು ಸಮಂಜಸ ಒಪ್ಪಂದವೆಂದು ಪರ್ಯಾಲೋಚಿಸುತ್ತದೆ. ಭಾರತದ ಮಧ್ಯಸ್ಥಿಕೆ ಅಧಿನಿಯಮ ೧೯೪೦ (Arbitration Act 1940) ಯು ಮಧ್ಯಸ್ಥಿಕೆ ವ್ಯವಹರಣೆಗಳನ್ನು ಅನುಸರಿಸಲು ಮತ್ತು ಆ ತೀರ್ಪನ್ನು ಜಾರಿಗೊಳಿಸಲು ಸಾಕಷ್ಟು ಉಪಬಂಧಗಳನ್ನು ಒಳಗೊಂಡಿದೆ. ವರ್ಗ ೨೮ ರ ಮೊದಲನೆ ಆಕ್ಷೇಪಣೆಯು ಅಂತಹಾ ಮಧ್ಯಸ್ಥಿಕೆ ಖಂಡಗಳನ್ನು ಮಾನ್ಯ ಗೊಳಿಸುತ್ತದೆ ಮತ್ತು ಎರಡನೆಯ ಆಕ್ಷೇಪಣೆಯು ಅಸ್ತಿತ್ವದಲ್ಲಿರುವ ವಿವಾದಗಳ ಬಗ್ಗೆ ಮಧ್ಯಸ್ಥಿಕೆಗೆ ಒಪ್ಪಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಇದು ನ್ಯಾಯ ವಿತರಣೆ ವ್ಯವಸ್ಥೆಯಲ್ಲಿ ಒಂದು ಮುಖ್ಯ ಮಾರ್ಪಾಡು.

೪. ಅನಿಶ್ಚಿತ ಒಪ್ಪಂದಗಳು :

ಕರಾರಿನ ನಿಬಂಧನೆಗಳು ಸ್ಪಷ್ಟವಾಗಿಲ್ಲದೇ ಇದ್ದ ಪಕ್ಷದಲ್ಲಿ ಕರಾರನ್ನು ಜಾರಿಗೊಳಿಸಲಾಗುವುದಿಲ್ಲ ಎಂಬುದು ಸ್ಪಷ್ಟ. ಆದರೆ ವರ್ಗ ೨೯ ನಿಶ್ಚಿತತೆಯನ್ನು ಸಂದರ್ಭದ ಉಲ್ಲೇಖದಿಂದ ಮತ್ತು ಪಕ್ಷಗಳ ಉದ್ದೇಶವನ್ನು ಮನಸ್ಸಿನಲ್ಲಿಟ್ಟು ಕೊಂಡು ನಿರ್ಧರಿಸಬಹುದು ಎಂದು ಹೇಳಿದೆ.

೫. ಪಣ ಒಡ್ಡುವ ಒಪ್ಪಂದ :

ಪಣ ಒಡ್ಡುವ ವ್ಯವಹರಣೆಯ ಅತ್ಯಾವಶ್ಯಕಗಳೇನೆಂದರೆ ಎರಡೂ ಪಕ್ಷಗಳು ತಮ್ಮ ಕೈಮೀರಿ ಯಾವುದಾದರೂ ಒಂದು ಅನಿಶ್ಚಿತ ಘಟನೆ ಸಂಭವಿಸುವುದು. ಅಥವಾ ಸಂಭವಿಸದೇ ಇರುವುದು, ಇದರಿಂದ ಎರಡೂ ಪಕ್ಷಗಳಿಗೆ ಪರಸ್ಪರ ಲಾಭ ಅಥವಾ ನಷ್ಟದ ಆಕಸ್ಮಿಕಕ್ಕೆ ಒಪ್ಪಂದ ಮಾಡಿಕೊಂಡಿರಬೇಕು. ಅಂತಹಾ ಒಪ್ಪಂದಗಳು

(ಜೂಜುಗಳು) ಕಾನೂನಿನಲ್ಲಿ ಶೂನ್ಯ ಸರ್ವೋಚ್ಚ ನ್ಯಾಯಾಲಯವು ಗೇರುಲಾಲ್ ಪರೇಕ್ ವಿರುದ್ಧ ಮಹದೇವ್‌ದಾಸ್ (Gherulal Parekh Vs. Mahadev Das AIR 1959 SC 781) ನಲ್ಲಿ ಇಂತಹ ಒಪ್ಪಂದ ಶೂನ್ಯ ಮತ್ತು ಜಾರಿಗೊಳಿಸಲಾಗದೇ ಇದ್ದರೂ ಸಹ ಅದು ಸಂಪೂರ್ಣವಾಗಿ ಕಾನೂನು ನಿಷೇಧಿಸಿಲ್ಲ. ಬೇರೆ ಪಕ್ಷಗಳು ಇನ್ನೇನಾದರೂ ವ್ಯವಹಾರಗಳಲ್ಲಿ ಒಳಗೊಂಡಿದ್ದರೆ ಅವರು ತಾವು ಸಂದಾಯ ಮಾಡಿದ ಹಣವನ್ನು ವಸೂಲು ಮಾಡುವ ಹಕ್ಕುಳ್ಳವರಾಗಿರುತ್ತಾರೆ. ಆದ್ದರಿಂದ, ಜೂಜು ಸಾಲವನ್ನು ತೀರಿಸಲು ಕೊಟ್ಟ ಸಾಲ ಅಥವಾ ಜೂಜು ವ್ಯವಹಾರದಿಂದ ಉಂಟಾದ ನಷ್ಟಗಳನ್ನು ತುಂಬಿಕೊಡುವಂತೆ ಹೂಡಿದ ದಾವೆಯು ಕಾನೂನಿನಲ್ಲಿ ಊರ್ಜಿತ ಯೋಗ್ಯ ಎಂಬುದನ್ನು ಗಮನಿಸುವುದು ಕುತೂಹಲಕಾರಿಯಾಗಿದೆ.

ಕರ್ನಾಟಕ ಉಚ್ಚ ನ್ಯಾಯಾಲಯದ ಒಂದು ವಿಸ್ಮಯಕಾರಿ ತೀರ್ಪು ಹೀಗಿದೆ. ಜಿ.ಎಸ್. ಅನಂತಸ್ವಾಮಿ ಅಯ್ಯರ್ ಮತ್ತು ಇತರರು ವಿರುದ್ಧ ಕರ್ನಾಟಕ ಸರ್ಕಾರ (G.S.Anantha Swamy Iyer & others Vs. Govt. of Karnataka 1982 KLJ 243). ಸರ್ವೋಚ್ಚ ನ್ಯಾಯಾಲಯದ ಮೊಕದ್ದಮೆ ಸ್ಟೇಟ್ ಆಫ್ ಆಂಧ್ರ ಪ್ರದೇಶ ವಿರುದ್ಧ ಸತ್ಯನಾರಾಯಣ (State of Andhra Pradesh Vs. Satyanarayana AIR 1968 SC 825). ಇದರ ತೀರ್ಪನ್ನು ಅನುಸರಿಸಿಕೊಂಡು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಿದಾಯುತ್ತುಲ್ಲ ಅವರು ರೆಮ್ಮಿ (Cards game) ಆಟವು ಪಣವಡ್ಡುವ ಕರಾರಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದ್ದನ್ನು ಅನುಸರಿಸಿದರು. ಬೇರೆ ತರಹ ಕಾರ್ಡು ಆಟವು (3 Card Flush) ಮುಂತಾದವು ಜೂಜಿರಬಹುದು. ಆದರೆ ರೆಮ್ಮಿಯು ಜೂಜು ಅಲ್ಲ, ಕುಶಲತೆಯ ಆಟ ಎಂದು ನಿರ್ಧರಿಸಿದರು.

****

ಭಾಗ - ೧೫

ಅನ್ವಯಿಕ ಅಥವಾ ಸದೃಶ ಕರಾರು

(Quasi - Contracts)

ಭಾರತದ ಕರಾರು ಅಧಿನಿಯಮದ ಉಪಬಂಧಗಳನ್ನು ನಾವು ವಿಶ್ಲೇಷಿಸು ವಾಗ, ಇವು ಬರೀ ಕರಾರಿನ ಮೊಕದ್ದಮೆಗಳನ್ನಷ್ಟೇ ಒಳಗೊಂಡಿಲ್ಲ; ಆದರೆ ಕರಾರಿಗೆ ಹೋಲುವಂತಹ ಹಲವು ರೀತಿಯ ಉಪಬಂಧಗಳನ್ನೂ ಸಹ ಹೊಂದಿವೆ ಎಂಬುದನ್ನು ಅರಿಯುತ್ತೇವೆ. ಕರಾರು ಕಾಯಿದೆಯ ವರ್ಗ ೬೮ ರಿಂದ ೭೨ ರವರೆಗೆ ಈ ಉಪಬಂಧಗಳನ್ನು ನಾವು ನೋಡಬಹುದು. ನಾವು ಮೊದಲೇ ಗಮನಿಸಿರುವಂತೆ ಅಪ್ರಾಪ್ತ ವಯಸ್ಕ ಅಥವಾ ಮನೋವಿಕಲತೆ ಹೊಂದಿರವವನು ಕರಾರು ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರುವುದಿಲ್ಲ. ಆದರೆ ಅಂಥವರಿಗೆ ಅವಶ್ಯಕ ವಸ್ತುಗಳನ್ನು ಒದಗಿಸಿದಾಗ ಅದನ್ನು ಒದಗಿಸಿದ ವ್ಯಕ್ತಿಯು ದಾವೆ ಹೂಡಲು ಹಕ್ಕುಳ್ಳವನಾಗಿರುತ್ತಾನೆ. ಅವನು ಅಂತಹಾ ಅಸಮರ್ಥ ವ್ಯಕ್ತಿಯ ಸ್ವತ್ತಿನಿಂದ ನಷ್ಟವನ್ನು ವಸೂಲು ಮಾಡಬಹುದು. ಏಕೆಂದರೆ ಈ ವ್ಯವಹಾರವನ್ನು ಅಸಮರ್ಥತೆಯ ಕಾರಣದಿಂದಾಗಿ ಮಾಡಿದ ಕರಾರೆಂದು ಹೇಳಲಾಗುವುದಿಲ್ಲ. ಈ ಕಲ್ಪನೆಗೆ "ಸದೃಶ ಕರಾರು" (Quasi - Contracts) ಎಂಬ ಹೊಸ ಪದವನ್ನು ಸಂಯೋಜಿಸಲಾಗಿದೆ. ಇಂತಹದೇ ಇನ್ನೊಂದು ಸನ್ನಿವೇಶವೆಂದರೆ, ಬಾಡಿಗೆದಾರನು ಸರ್ಕಾರಕ್ಕೆ ಅಥವಾ ಪೌರಸಭಾ ನಿಗಮಕ್ಕೆ ಸ್ವತ್ತಿನ ಸುಂಕವನ್ನು ಸಂದಾಯ ಮಾಡಿದಾಗ, ಆ ಹಣವನ್ನು ಅವನು ಭೂ ಮಾಲೀಕನಿಂದ ವಸೂಲು ಮಾಡುವ ಹಕ್ಕುಳ್ಳವನಾಗಿರುತ್ತಾನೆ. ಆದರೆ ಇನ್ನೊಬ್ಬ ಮನುಷ್ಯನು ಕಾನೂನಿನ ಪ್ರಕಾರ ಸಂದಾಯ ಮಾಡಲು ಬದ್ಧವಾಗಿರುವ ಮೊತ್ತವನ್ನಷ್ಟೇ ಸಂದಾಯ ಮಾಡಬೇಕು. ಹಣ ಸಂದಾಯ ಮಾಡುವ ವ್ಯಕ್ತಿಯು ನಿರ್ದಿಷ್ಟ ಹಿತಾಸಕ್ತಿಯನ್ನು ಹೊಂದಿರಬೇಕು. ಮೇಲಿನ ವಿವರಣೆಯಲ್ಲಿ ಬಾಡಿಗೆದಾರನು ಕಾನೂನಿನ ದೃಷ್ಟಿಯಲ್ಲಿ ಅಗತ್ಯ ಹಿತಾಸಕ್ತಿಯುಳ್ಳವನು ಹಾಗೂ ಭೂ ಮಾಲೀಕನ ಕರ್ತವ್ಯ ಲೋಪವು ಬಾಡಿಗೆದಾರನನ್ನು ಕಷ್ಟಕ್ಕೆ ಗುರಿ ಮಾಡಬಹುದು. ಆದರೆ ಬಾಡಿಗೆದಾರನು ಭೂ ಮಾಲೀಕನು ಕೊಡಬೇಕಾಗಿದ್ದ ಆದಾಯ ತೆರಿಗೆಯನ್ನು ಸಂದಾಯ ಮಾಡಿದರೆ ಆ ತೆರಿಗೆಯನ್ನು ಭೂ ಮಾಲೀಕನೇ ಸಂದಾಯ ಮಾಡಲು ಬದ್ಧನಾಗಿರುವುದರಿಂದ ಬಾಡಿಗೆದಾರನಿಗೆ ಅದನ್ನು ವಸೂಲು ಮಾಡುವ ಹಕ್ಕಿಲ್ಲ. ಏಕೆಂದರೆ ಈ ವಿಷಯ ದಲ್ಲಿ ಬಾಡಿಗೆದಾರನಿಗೆ ಕಾನೂನಿನ ಪ್ರಕಾರ ಯಾವುದೇ ಹಿತಾಸಕ್ತಿ ಇರುವುದಿಲ್ಲ. ಗೋವಿಂದರಾಂ ವಿರುದ್ಧ ಗೊಂಡಾಲ್ ರಾಜ್ಯ (Govindram Gordhandas Vs. State of Gondal, AIR 1950 PC 77, 99 IA 156)

ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನಿಗೆ ಕಾನೂನು ಸಮ್ಮತವಾಗಿ ಏನಾದರೂ ಮಾಡಿದರೆ ಅಥವಾ ಉದ್ದೇಶವಿಲ್ಲದಿದ್ದರೂ ಸಹ ಏನಾದರೂ ಪುಕ್ಕಟೆಯಾಗಲ್ಲದೆ ಕೊಟ್ಟರೆ ಆಗ ಇನ್ನೊಬ್ಬ ಮನುಷ್ಯನು ಇವನಿಗೆ ಅದರ ಮೌಲ್ಯವನ್ನು ಕೊಡಲು ಬದ್ಧನಾಗಿರುತ್ತಾನೆ. ಒಬ್ಬ ವ್ಯಾಪಾರಿಯು ಬೇರೆ ಕಡೆಗೆ ಒಪ್ಪಿಸಬೇಕಾಗಿದ್ದ ತನ್ನ ಸರಕುಗಳನ್ನು ತಪ್ಪು ಗ್ರಹಿಕೆಯಿಂದ ಇನ್ನೊಬ್ಬ ವ್ಯಕ್ತಿಯ ಮನೆಯಲ್ಲಿ ಇಟ್ಟಿದ್ದರೆ ಸರಕನ್ನು ಉಪಯೋಗಿಸುತ್ತಿರುವ ವ್ಯಕ್ತಿಯು ತನಗೆ ಆ ಸರಕಿನ ಬಗ್ಗೆ ಜವಾಬ್ದಾರಿ ಇಲ್ಲ ಎಂಬ ವಾದವನ್ನು ಸ್ಥಾಪಿಸಲಾಗುವುದಿಲ್ಲ. ಹಾಗೆಯೇ ಸ್ವಯಿಚ್ಛೆಯಿಂದ ಸೇವೆಯನ್ನು ಸಲ್ಲಿಸಿದ್ದಕ್ಕೂ ಸಹ ಕೋರಿಕೆ ಇಲ್ಲದಿದ್ದರೂ ಹಣ ಸಂದಾಯ ಮಾಡಲೇಬೇಕು. ಸರ್ವೋಚ್ಚ ನ್ಯಾಯಾಲಯದ ದೃಷ್ಟಾಂತ ಪ್ರಕರಣವು, ಸ್ಟೇಟ್ ಆಫ್ ವೆಸ್ಟ್ ಬೆಂಗಾಲ್ ವಿರುದ್ಧ ಬಿ.ಕೆ. ಮಂಡಲ್ ಆಂಡ್ ಸನ್ಸ್ (State of West Bengal Vs. B.K. Mondal & Sons. AIR 1962 SC 779). ಈ ಮೊಕದ್ದಮೆಯಲ್ಲಿ ವೆಸ್ಟ ಬೆಂಗಾಲ್ ರಾಜ್ಯದ ಅಧಿಕಾರಿಯೊಬ್ಬನ ಕೋರಿಕೆಯಂತೆ ಕಟ್ಟಡಗಳನ್ನು ನಿರ್ಮಿಸಲಾಯಿತು. ಆದರೆ ಕರಾರಿಲ್ಲದಿರುವುದರಿಂದಲೂ ಮತ್ತು ಸರ್ಕಾರದೊಡನೆ ಅಥವಾ ಸರ್ಕಾರದ ಪರವಾಗಿ ಮಾಡಿಕೊಳ್ಳುವ ಕರಾರು ಕಾನೂನು ಗೊತ್ತುಪಡಿಸಿದ ಅತ್ಯಾವಶ್ಯಕ ಔಪಚಾರಿಕತೆಗಳನ್ನು ಹೊಂದಿಲ್ಲ ಎಂಬ ಆಧಾರದ ಮೇಲೆ ಹಣ ಸಂದಾಯವನ್ನು ತಡೆಹಿಡಿಯಲಾಯಿತು. ನ್ಯಾಯಾಲಯವು ರಾಜ್ಯವು ವಾದಿಯ ಸೇವೆಗಳ ಪ್ರಯೋಜನವನ್ನು ಉಪಭೋಗಿಸಿದೆ ಮತ್ತು ಕರಾರಿಗೆ ಸಂಬಂಧಿಸಿದ ಪ್ರಕ್ರಿಯಾ ನಿಯಂತ್ರಣಗಳು ಒಪ್ಪಂದಕ್ಕೆ ಅಡ್ಡಬರುವುದಿಲ್ಲ. ಏಕೆಂದರೆ ಈ ಸನ್ನಿವೇಶವು ಸದೃಶ ಕರಾರಾಗಿ ಪರಿಣಾಮಗೊಳ್ಳುತ್ತದೆ. ಅನ್ಯಾಯಗಳಿಕೆ (Unjust Enrichment) ಪ್ರತಿಬಂಧನಾ ಸಿದ್ಧಾಂತವನ್ನು ಲಾರ್ಡ್ ಮಾನ್ಸ್‌ಫೀಲ್ಡ್‌ರು, ಮೋಸಸ್ ವಿರುದ್ಧ ಮಾಕ್‌ಫರ್ಲಾನ್ (Moses Vs. Macferlan (1760) 2 Burr 1005) ಮೊಕದ್ದಮೆಯಲ್ಲಿ ಇದನ್ನು ಮೊದಲು ರೂಪಿಸಿದರು. ಅದನ್ನು ಸರ್ವೋಚ್ಚ ನ್ಯಾಯಾಲಯವು ಭಾರತ ಸರ್ಕಾರದ ವಿರುದ್ಧ ನೇರವಾಗಿ ಅನ್ವಯಿಸಿತು. ಇದನ್ನು ಬಹಳ ದಿಟ್ಟ ನ್ಯಾಯಿಕ ಚುರುಕುತನ ಅಥವಾ ಸಾಹಸಕಾರ್ಯ ಎಂದು ಪರ್ಯಾಲೋಚಿಸಲಾಗಿದೆ.

ಸೇವೆಗಳನ್ನು ಸಲ್ಲಿಸಿದ ಪಕ್ಷಕ್ಕೆ ಕರಾರು ಇಲ್ಲದಿದ್ದರೂ ಸಹ ಹಣ ಸಂದಾಯ ಮಾಡುವುದು ರಾಜ್ಯದ ಹೊಣೆಯಾಗಿದೆ, ಎಂಬುದನ್ನು ನ್ಯಾಯಾಲಯವು ಪಿ. ಡಿ. ಸಿಧ್ವ ವಿರುದ್ಧ ಮುನಿಸಿಪಲ್ ಕಾರ್ಪೋರೇಷನ್ ಆಫ್ ಪೂನಾ (P.D.Sidhwa Vs. Municipal Corporation of Puna AIR 1970 SC 1201) ಸಲ್ಲಿ ಪುನಃ ಅನ್ವಯಿಸಿ ನಿರ್ಧರಿಸಿತು.

ನಷ್ಟ ವಸ್ತುಗಳನ್ನು (bailec LOST PROPERTY) ಕಂಡವನು ಅವುಗಳನ್ನು ಯುಕ್ತ ರಕ್ಷಣೆ ಮಾಡಬೇಕೆಂದು ನಿರೀಕ್ಷಿಸಲಾಗಿದ್ದು ಅವನು ಸರಕನ್ನು ಸರಕುರಕ್ಷಕನ

ತರಹ ಕಾಪಾಡುವ ಹೊಣೆ ಹೊಂದಿರುತ್ತಾನೆ. ಆದ್ದರಿಂದ ಅವನು ಸರಕಿನ ವಿಷಯದಲ್ಲಿ ನಿರ್ಲಕ್ಷ್ಯ ಹೊಂದಿದ್ದರೆ ಅದಕ್ಕೆ ತಾನೇ ಹೊಣೆಯಾಗುತ್ತಾನೆ. ಈಗಾಗಲೇ ಗಮನಿಸಿರುವಂತೆ ತಪ್ಪುಗ್ರಹಿಕೆ ಅಥವಾ ಬಲಾತ್ಕಾರದಿಂದ ಮಾಡಿಕೊಂಡ ಕರಾರು ಕಾನೂನಿನ ದೃಷ್ಟಿಯಿಂದ ಶೂನ್ಯಕರಣೀಯ. ಕಾನೂನು ಈಗ ವರ್ಗ ೭೨ ರಲ್ಲಿ ಅಂತಹ ಕರಾರುಗಳಲ್ಲಿಯೂ ಸಹ ಹಣ ಸಂದಾಯ ಮಾಡಿದ್ದರೆ ಅಥವಾ ಸ್ವತ್ತನ್ನು ಕೊಟ್ಟಿದ್ದರೆ ಅದನ್ನು ಹಿಂತಿರುಗಿಸಬೇಕು ಎಂಬುದಾಗಿ ಹೇಳಿದೆ.

ತಪ್ಪುಗ್ರಹಿಕೆಯ ಮೇಲೆ ಸಂದಾಯ ಮಾಡಿದ ಹಣದ ವಸೂಲಾತಿಯ ಬಗ್ಗೆ ಹೆಚ್ಚಿನ ವಿವಾದ ಉಂಟಾಗಿದೆ. ಏಕೆಂದರೆ ನಾವು ಮೊದಲೇ ಗಮನಿಸಿರುವಂತೆ ಕಾನೂನಿನ ತಪ್ಪು ಗ್ರಹಿಕೆಯನ್ನು ಕ್ಷಮಿಸಲಾಗುವುದಿಲ್ಲ. ಒಬ್ಬ ಮನುಷ್ಯನು ತಪ್ಪಿನಿಂದಾಗಿ ಮಾರಾಟ ತೆರಿಗೆ ಅಥವಾ ಇತರ ತೆರಿಗೆಯನ್ನು ಸಂದಾಯ ಮಾಡಿದ್ದರೆ ಅದನ್ನು ಹಿಂದರಿಗಿಸುವಂತೆ ಅವನು ದಾವೆ ದಾಖಲ್ಮಾಡಲು ಅನುಮತಿ ಇದೆಯೇ ? ಆಂಗ್ಲೋ ಸಾಕ್ಸನ್ ನ್ಯಾಯಶಾಸ್ತ್ರ ಪದ್ಧತಿಯನ್ನು ನಿರ್ವಹಿಸುತ್ತಿರುವ, ಅಂದರೆ ಇಂಗ್ಲೀಷ್ ಅಮೇರಿಕ ಮತ್ತು ರಾಷ್ಟ್ರ ಸಮುದಾಯದ ನ್ಯಾಯಾಲಯಗಳು ಅಂತಹಾ ಕೋರಿಕೆಗಳಿಗೆ ಮನ್ನಣೆ ಕೊಡುವುದಿಲ್ಲ. ಆದರೆ ಪ್ರೀವೀ ಕೌನ್ಸಿಲ್‌ನ ನ್ಯಾಯಿಕ ಸಮಿತಿಯ ಶ್ರೀ ಶಿಬಾ ಪ್ರಸಾದ್‌ಸಿಂಗ್ ವಿರುದ್ಧ ಮಹಾರಾಜ ಶ್ರೀಶಚಂದ್ರ ನಂದಿ (Sri Shiba Prasad Vs. Maharaja Srish Chandra AIR 1949 PC 297 ; 76 I A 44 pc) ನಲ್ಲಿ ವರ್ಗ ೭೨ ರ ಕೆಳಗೆ ಅದು ಸಂಗತಿ ತಪ್ಪುಗ್ರಹಿಕೆಯಾಗಿರಲಿ ಅಥವಾ ಕಾನೂನಿನ ತಪ್ಪುಗ್ರಹಿಕೆಯಾಗಲೀ ಅದು ಅಪ್ರಧಾನ. ಕಾನೂನಿನ ಪ್ರಕಾರ ಯಾವುದು ಸಂದಾಯ ಮಾಡಬೇಕಿಲ್ಲವೋ ಅದನ್ನು ತಪ್ಪಾಗಿ ಸಂದಾಯ ಮಾಡಿದರೆ, ಆ ಹಣವನ್ನು ಸಂದಾಯ ಮಾಡಿದವನು ವಸೂಲಿ ಮಾಡಬಹುದು ಎಂದು ಘೋಷಿಸಿತು. ಭಾರತದ ಸರ್ವೋಚ್ಛ ನ್ಯಾಯಾಲಯವು ಸೇಲ್ಸ್ ಟ್ಯಾಕ್ಸ್, ಆಫೀಸರ್ ಬನಾರಸ್ ವಿರುದ್ಧ ಕನ್ಹಯ್ಯಲಾಲ್ (Sales Tax Officer Banaras Vs. Kanhaiya Lal Mukund Lal Saraf AIR 1959 SC 135) ನಲ್ಲಿ ಇದೇ ಮೊಕದ್ದಮೆಯ ತೀರ್ಪನ್ನು ಅನುಸರಿಸಿ, ಮಾರಾಟ ತೆರಿಗೆ ವಿಧಿಸಿರುವುದು ಕಾನೂನುಬಾಹಿರ ಆಗದ್ದರಿಂದ ಅದನ್ನು ವಸೂಲು ಮಾಡುವುದಕ್ಕೆ ಅನುಮತಿ ಕೊಟ್ಟಿತು. ಕಾನೂನಿನ ಬೆಳವಣಿಗೆಯ ವಿಶಿಷ್ಟ ರೂಪರೇಖೆಗಳನ್ನು ಇಲ್ಲಿ ಗುರ್ತಿಸಬಹುದು (Any Tax Payment by mistake should be refunded).

****

ಭಾಗ - ೧೬

ಸಂದರ್ಭೋಚಿತ ಕರಾರುಗಳು ಮತ್ತು ಜಂಟಿ ವಾಗ್ದಾನಗಳು

ಕರಾರು ಅಧಿನಿಯಮದ ವರ್ಗ ೩೦ ರಿಂದ ೩೬ ಕೆಲವು ವಿಶೇಷ ಸಂದರ್ಭ ಗಳನ್ನು ಅವಲಂಬಿಸಿದೆ. ಇದು ಕರಾರಿನ ನೆರವೇರಿಕೆಯ ಸಂಭವಿಸುವಿಕೆ ಅಥವಾ ಅನ್ಯಥಾ ಅಪ್ರಧಾನ ಘಟನೆಯ ಸಂಭಸುವಿಕೆಯ ಮೇಲೆ ಅವಲಂಬಿತವಾಗಿದ್ದು ಇದಕ್ಕೆ ಬಹಳ ಅತ್ಯುತ್ತಮ ಉದಾಹರಣೆ ಎಂದರೆ ವಿಮಾ ಕರಾರು. ಚಂದುಲಾಲ್ ಹರಜೀವನದಾಸ್ ವಿರುದ್ಧ ಕಮೀಷನರ್ ಆಫ್ ಇನ್‌ಕಂಟ್ಯಾಕ್ಸ್ (Chandulal Harjivandas Vs. Commissioner of Income Tax AIR 1967 Sc 816. 818). ಒಂದು ಘಟನೆ ಅಥವಾ ಆಕಸ್ಮಿಕತೆಯು ಅಸಾಧ್ಯವಾದರೆ ಆಗ ಕರಾರು ಶೂನ್ಯವಾಗುತ್ತದೆ ಎಂದು ವರ್ಗ ೪೨ ಹೇಳುತ್ತದೆ. ಒಬ್ಬನು ಒಂದು ಘಟನೆಯನ್ನು ಅಸಾಧ್ಯವಾಗುವ ಸ್ಥಿತಿಗೆ ತಂದಾಗಲೂ ಸಹ ಶೂನ್ಯವಾಗುತ್ತದೆ.

ಜಂಟಿ ವಾಗ್ದಾನಗಳು

ಸಾಮಾನ್ಯವಾಗಿ ಮರಣಹೊಂದಿದ ಜಂಟಿ ವಾಗ್ದಾನಕಾರನ ವಾರಸುದಾರರ ಹೊಣೆಗಾರಿಕೆಯು ಏನು ? ಎಂಬ ಪ್ರಶ್ನೆಯು ಉಂಟಾಗುತ್ತದೆ. ವರ್ಗ ೪೨ ರ ಪ್ರಕಾರ ಅಂತಹ ವಾಗ್ದಾನಕಾರನ ಮರಣದ ನಂತರ ವಾರಸುದಾರರು ಜಂಟಿಯಾಗಿ ವಾಗ್ದಾನವನ್ನು (ಬೇರೆ ಷರತ್ತು ಇಲ್ಲದೆ ಇದ್ದರೆ) ಪೂರೈಸಬೇಕು. ವಾಗ್ದಾನ ಪಡೆದವನ ದೃಷ್ಟಿಯಿಂದ ಜಂಟಿ ವಾಗ್ದಾನವನ್ನು ಯಾರಾದರೂ ಒಬ್ಬ ಜಂಟಿ ವಾಗ್ದಾನಕಾರನ ಮೇಲೆ ಸಂಪೂರ್ಣ ವಾಗ್ದಾನವನ್ನು ಜಾರಿಗೊಳಿಸಬಹುದು (ವರ್ಗ ೪೩). ರಾಂ ಶಂಕರ್ ವಿರುದ್ಧ ಶ್ಯಾಮಲತಾ (Ram Shankar Vs. Shyamalatha AIR 1970 SC 716). ಮುಕುಂದ್ ದಾಸ್ ವಿರುದ್ಧ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ (Mukund Das Vs. State Bank of Hyderabad AIR 1971 SC 449) ನೋಡಿ. ಮೇಲಿನ ಪ್ರಸ್ತಾಪಕ್ಕೆ ಅನುಗುಣವಾಗಿ ಒಬ್ಬ ಜಂಟಿ ವಾಗ್ದಾನಕಾರನು ವರ್ಗ ೪೩ ರ ಪ್ರಕಾರ ಬೇರೆ ವಾಗ್ದಾನಕಾರರಿಂದ ಸಂಪೂರ್ಣ ವಾಗ್ದಾನವನ್ನು ನೆರವೇರಿಸಬೇಕಾದಾಗ, ಅವನು ಆ ವಾಗ್ದಾನಕಾರರಿಂದ ಸಹಾಯ (Contribution) ಕೇಳಬಹುದು. ಅದೇ ವರ್ಗವನ್ನು ಇನ್ನೂ ಹೆಚ್ಚು ವಿಸ್ತರಿಸಲಾಗಿದ್ದು ಯಾರಾದರೂ ಒಬ್ಬನು ವಂತಿಗೆ ನೀಡಲು ಅಸಮರ್ಥನಾಗಿದ್ದರೆ, ಮಿಕ್ಕ ಎಲ್ಲಾ ವ್ಯಕ್ತಿಗಳೂ ಸಂಪೂರ್ಣ ಹೊರೆಯನ್ನು ಸಮವಾಗಿ ಹಂಚಿಕೊಳ್ಳಬೇಕು. ವರ್ಗ ೪೪ ರಂತೆ

ಒಬ್ಬ ಜಂಟಿ ವಾಗ್ದಾನಕಾರರಲ್ಲಿ ಒಬ್ಬನ ಬಿಡುಗಡೆಯು ಇತರರ ಹೊಣೆಯನ್ನು ವಿಮೋಚನೆ ಮಾಡುವದಿಲ್ಲ. ವರ್ಗ ೪೫ ರ ಪ್ರಕಾರ ಜಂಟಿ ವಾಗ್ದಾನ ಪಡೆದವರ ಬಗ್ಗೆಯೂ ಇದೇ ನಿಯಮ ಅನ್ವಯಿಕವಾಗುತ್ತದೆ.

ಸಂದಾಯಗಳ ವಿನಿಯೋಜನೆ

(Appropriation of Payments)

ವಾಸ್ತವಿಕವಾಗಿ ಪ್ರಾಯೋಗಿಕ ಮಹತ್ವವಿರುವ ಸಂದರ್ಭ ಉಂಟಾಗುವುದು ಯಾವಾಗ ಎಂದರೆ ಒಬ್ಬ ಮನುಷ್ಯನು ಬೇರೆ ಒಬ್ಬನಿಗೆ ಹಲವಾರು ರೀತಿಯ ಸಾಲಗಳಿಂದ ಋಣಿಯಾಗಿರುತ್ತಾನೆ. ಅವನು ಸಾಲವನ್ನು ಸಂದಾಯ ಮಾಡಿದಾಗ ಸಾಮಾನ್ಯವಾಗಿ ಪಕ್ಷಗಳ ಉದ್ದೇಶದಂತೆ ಸಾಲವನ್ನು ತೀರುವಳಿ ಮಾಡಲಾಗುತ್ತದೆ. ಅದು ಸ್ಪಷ್ಟವಾಗಿಲ್ಲದಿದ್ದರೆ ವರ್ಗಗಳು ೫೯ ರಿಂದ ೬೧ ಅನ್ವಯಿಕವಾಗುತ್ತದೆ. (Ramshankar Vs. Shyamalatha AIR 1970 SC 716, Mukund Das Vs. State Bank of Hyderbad AIR 1971 SC 449).

ಕಾನೂನು ಋಣಿಯ ಪರವಾಗಿ ವಾಲಿರುತ್ತದೆ ಮತ್ತು ವರ್ಗ ೫೯ ರ ಪ್ರಕಾರ ಅವನು ಋಣಿಯ (debtor) ಲೇಣಿದಾರನಿಗೆ ಸಂದಾಯ ಮಾಡಿದ ಹಣವನ್ನು ಅವನ ಆಯ್ಕೆಯ ಯಾವುದಾದರೂ ಅಗತ್ಯವಿರುವ ಸಾಲಕ್ಕೆ ಜಮಾ ಮಾಡಿಕೊಳ್ಳುವಂತೆ ಕೇಳುವ ವಿಶೇಷಾಧಿಕಾರ ಹೊಂದಿರುತ್ತಾನೆ. ಋಣಿಯು ಆಯ್ಕೆಯನ್ನು ಸೂಚಿಸದಿದ್ದರೆ ಆಗ ವರ್ಗ ೬೦ ರಂತೆ ಲೇಣೇದಾರನ ಆಯ್ಕೆಯಂತೆ ಜಮಾ ಮಾಡುವ ಅವಕಾಶ ಕೊಡುತ್ತದೆ. ಅಂತಹ ಸಂದರ್ಭದಲ್ಲಿ ಲೇಣಿದಾರನಿಗೆ (Creditor) ಕೆಲವು ಅನುಕೂಲತೆಗಳು ಆಗಬಹುದು. ಕಮಲೇಶ್ವರಿ ವಿರುದ್ಧ ಗಂಗಾಧರ್ (Kamaleshwari Vs. Gangadhar AIR 1940. PAT 52). ಇಲ್ಲಿ ಲೇಣಿದಾರನ ಕಾಲಮೀರಿದ ಸಾಲದ ಸಂದಾಯಕ್ಕೆ ವಿನಿಯೋಗಿಸುವ ಹಕ್ಕು, ಸಾಲಗಾರನ ಆಯ್ಕೆಯ ಗೈರು ಹಾಜರಿಯಲ್ಲಿ ಮನ್ನಣೆ ಪಡೆಯಿತು. ಸಂದಾಯದ ಹೊಂದಾಣಿಕೆಯ ಪ್ರಶ್ನೆಯು ಯಾವಾಗ ಕರಾರಿನ ಕೆಲವು ಪಕ್ಷಗಳು ಅಥವಾ ಇಬ್ಬರೂ ಗತಿಸಿದ್ದರೆ ಅಥವಾ ಇದರ ಪರವಾಗಿ ಯಾವುದೇ ಸೂಚನೆ ದೊರೆಯದೇ ಇದ್ದಾಗ ಉತ್ಕಟವಾಗಿ ಉದ್ಭವಿಸುತ್ತದೆ. ಅಂತಹ ಸನ್ನಿವೇಶಗಳಲ್ಲಿ ವರ್ಗ ೬೧ ರ ಪ್ರಕಾರ, ಸಂದಾಯವು ಕಾಲಕ್ರಮಾನುಸಾರವಾಗಿ ಮಾಡಿದ ಸಾಲಕ್ಕೆ ಅನ್ವಯಿಕವಾಗಿ ರುತ್ತದೆ. ಸಾಲಗಳು ಒಂದೇ ರೀತಿಯದಾದರೆ ಆಗ ಸಂದಾಯವು ಪ್ರತಿಯೊಂದು ವಿಮೋಚನೆಗೂ ಪ್ರಮಾಣಾನುಸಾರವಾಗಿ ಅನ್ವಯಿಕ ವಾಗುತ್ತದೆ ಎಂದು ಸೂಚಿಸುತ್ತದೆ. ಇದು ಉಪಯುಕ್ತ ಸೂತ್ರ.

ಹಕ್ಕುಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆ

(Transfer of Rights and Liabilities)

ಕರಾರಿನ ಸಾಮಾನ್ಯ ತತ್ವವು ಏನೆಂದರೆ ಹಕ್ಕುಗಳು, ಕರಾರು ವೈಯಕ್ತಿಕ ಸ್ವಭಾವದ್ದಾಗಿಲ್ಲದಿದ್ದರೆ ಅಥವಾ ಯಾವುದೇ ಕಾನೂನಿನಿಂದ ಹಸ್ತಾಂತರಣೀಯವಲ್ಲ ಎಂದು ಪರಿಗಣಿಸಿದ್ದರೆ, ಪಕ್ಷಗಳ ಒಪ್ಪಂದವಿಲ್ಲದೆ ಸಾಮಾನ್ಯವಾಗಿ ಹಸ್ತಾಂತರಣ ಮಾಡಲು ಸಾಧ್ಯವಿಲ್ಲ. ಕರಾರಿನಲ್ಲಿ ಹಕ್ಕಿನ ಹಸ್ತಾಂತರಣ ವಹಿಸಿಕೊಡುವಿಕೆಯನ್ನು ನಷ್ಟ ಪರಿಹಾರದ ಕೋರಿಕೆಯ ಹಸ್ತಾಂತರಣದಿಂದ ಬೇರ್ಪಡಿಸಬಹುದು. ಬರೀ ಹಾನಿ ಪರಿಹಾರಕ್ಕೆ ದಾವೆ ಹೂಡುವ ಹಕ್ಕು ಕಾನೂನಿನಲ್ಲಿ ನಿಷೇಧಿತ. ಕರಾರನ್ನು ಹಸ್ತಾಂತರಣ ಮಾಡುವಿಕೆಯು ಇಂಗಿತವಾಗಿ ಪ್ರತಿಷೇಧಿತವೇ ಅಥವಾ ಅಲ್ಲವೇ ? ಎಂಬ ಪ್ರಶ್ನೆಯನ್ನು ಸರ್ವೋಚ್ಚ ನ್ಯಾಯಾಲಯವು ಕರ್ಧಾ ಕಂಪೆನಿ ಲಿಮಿಟೆಡ್ ವಿರುದ್ಧ ರೇಮನ್ ಮತ್ತು ಕಂಪೆನಿ ಲಿಮಿಟೆಡ್ (Khardeh Co. Ltd., Vs. Rayman and Co. Ltd. AIR 1962 SC 1810) ಮೊಕದ್ದಮೆಯಲ್ಲಿ ತೀರ್ಮಾನಿಸಿದಂತೆ ಪ್ರತಿಯೊಂದು ಮೊಕದ್ದಮೆಯ ಸಂಗತಿ ಮತ್ತು ಸ್ಥಿತಿವಂತಿಕೆಗಳಿಂದ ಮಾತ್ರ ತೀರ್ಮಾನಿಸಲಾಗುತ್ತದೆ. ಕರಾರಿನಲ್ಲಿ ಕರ್ತವ್ಯಗಳ ಮತ್ತು ಹೊಣೆಗಾರಿಕೆಗಳ ಹಸ್ತಾಂತರಣವು ವಾಗ್ದಾನ ಪಡೆದವನ ಸಹಮತಿಯಿಲ್ಲದೆ ಹಸ್ತಾಂತರಣ ಮಾಡಲಾಗದು. ಎಂಬುದನ್ನು ತಿಳಿಯಬಹುದು. ಅದರ ವಿಭಿನ್ನತೆಯ ಒಂದು ಅಂಶವನ್ನು ಇಲ್ಲಿ ತಿಳಿದುಕೊಳ್ಳಬೇಕು. ಹೊಣೆಗಾರಿಕೆಯನ್ನು ವರ್ಗಾವಣೆ ಮಾಡಲಾಗದಿದ್ದರೂ, ವಾಗ್ದಾನಕಾರನು ಬೇರೆಯವರ ಮೂಲಕ ವಾಗ್ದಾನವನ್ನು ನೆರವೇರಿಸಿಕೊಳ್ಳಬಹುದು ಮತ್ತು ಸರಕುಗಳ ವರ್ಗಾವಣೆ ಮುಂತಾದ ಕರಾರುಗಳಲ್ಲಿ ಇದನ್ನು ಬೇರೆಯವರಿಂದ ಪರಿಣಾಮಕಾರಿಯಾಗಿ ಸಲ್ಲಿಸಿಕೊಳ್ಳಬಹುದು. ಕಾನೂನು ಹೊಣೆಗಾರಿಕೆಯು ಯಾವಾಗಲೂ ವಾಗ್ದಾನ ಕಾರನ ಮೇಲೆ ಕಟ್ಟಿ ಹಾಕಿದ್ದರೂ ಕೂಡ, ಮೇಲೆ ಕರ್ಧಾ ಕಂಪನಿ ಲಿಮಿಟೆಡ್ ಮೊಕದ್ದಮೆಯಲ್ಲಿ ತಿಳಿಸಿರುವಂತೆ ನಡೆದುಕೊಳ್ಳಬಹುದು.

ಇತರ ಶಾಸನಬದ್ಧ ಅಗತ್ಯಗಳು

ಕರಾರು ಅಧಿನಿಯಮದ ಎಲ್ಲಾ ಉಪಬಂಧಗಳನ್ನು ಪೂರೈಸಿದರೂ ಮತ್ತು ಸಂಪೂರ್ಣವಾಗಿ ಪಕ್ವ ಎಂದು ಕಂಡರೂ ಅದರ ಜಾರಿಗೊಳಿಸುವಿಕೆಯು ನ್ಯಾಯಾಲಯದ ವಿವೇಚನೆಯ ವಿಷಯವಾಗಿದೆ. ಏಕೆಂದರೆ ಕಾನೂನು ನ್ಯಾಯಾಲಯಗಳು ನ್ಯಾಯನಿರ್ವಹಣೆಯ ಸಾಧನಗಳೂ ಆಗಿವೆ. ಇದಕ್ಕೆ ನಿರ್ದಿಷ್ಟ ಪರಿಹಾರ ಅಧಿನಿಯಮದ (Specific Relief Act) ವರ್ಗ ೨೦ ರಲ್ಲಿ ಶಾಸನಬದ್ಧ ಮನ್ನಣೆಯನ್ನು ಕೊಡಲಾಗಿದೆ. ಕರಾರು ನೆರವೇರಿಸುವಿಕೆಯನ್ನು ಜಾರಿಗೆ ತರುವುದಕ್ಕೆ ಅಧಿಕಾರ ವ್ಯಾಪ್ತಿಯು ಯಾವಾಗಲೂ ವಿವೇಚನಾತ್ಮಕ ಮತ್ತು ನ್ಯಾಯಾಲಯಗಳು

ಕಾನೂನು ಬದ್ಧವಾಗಿದ್ದರೂ ಸಹ ಅದನ್ನು ಅನುದಾನ ಮಾಡಲು ಬದ್ಧಗೊಂಡಿರುವುದಿಲ್ಲ. ಇದಕ್ಕೆ ಪರಿಹಾರೋಪಾಯಗಳು ಎಂದರೆ, ಹಾನಿ ಪರಿಹಾರ ಕೋರಿಕೆ. ಭಾಗಶಃ ಜಾರಿಗೊಳಿಸಿದ ಮೊಕದ್ದಮೆಯಲ್ಲಿ ನಷ್ಟ ಪರಿಹಾರ ಕೋರಿಕೆ ಹಕ್ಕು ಮತ್ತು ನಿರ್ಬಂಧಕಾಜ್ಞೆಯ ಆದೇಶವನ್ನು ಪಡೆಯುವ ಹಕ್ಕು; ಅಂತೆಯೇ ಕಲುಷಿತ ಎಂದು ಘೋಷಿಸಿದ ಶೂನ್ಯ ಅಥವಾ ಶೂನ್ಯಕರಣೀಯ ಕರಾರು ಎಂದು ಹೇಳುವ ಹಕ್ಕು ಎಲ್ಲವನ್ನೂ ನಿರ್ದಿಷ್ಟ ಪರಿಹಾರ ಅಧಿನಿಯಮದಲ್ಲಿ ಒದಗಿಸಲಾಗಿದೆ.

ಒಂದು ಹಸ್ತಾಂತರ ವಹಿಸಿಕೊಡುವಿಕೆಯನ್ನು ಯಾವಾಗಲೂ ಇನ್ನೊಂದು ಪತ್ರದಿಂದ ವರ್ಗಾಯಿಸುವ ಅಗತ್ಯವಿದೆ. ಆದರೆ ಇದಕ್ಕೆ ಹುಂಡಿ, ಚೆಕ್ ಮುಂತಾದ ಪತ್ರಗಳು, ಭಿನ್ನವಾದವು. ಇದರಲ್ಲಿ ಬರೀ ಹಸ್ತಾಂತರ ಅಥವಾ ಹಿಂಬರಹವೇ ಸಾಕು. ಹಸ್ತಾಂತರಣ ಪತ್ರವು ಸಾಮಾನ್ಯವಾಗಿ ವಸ್ತು ವಿಷಯದ ಮೌಲ್ಯದ ಶೇಕಡಾ ೩ ರಷ್ಟು ಸ್ಟಾಂಪು ಸುಂಕವನ್ನು ಹೊಂದಿ ಮೂವತ್ತು ರೂಪಾಯಿಯ ಗರಿಷ್ಠ ಸುಂಕ ಒಳಗೊಂಡಿರುತ್ತದೆ. ಹಸ್ತಾಂತರಣವು ಮುಖ್ತಾರನಾಮೆಯೂ ಒಂದೇ ಅಲ್ಲ. ಹಸ್ತಾಂತರಣಕ್ಕೆ ಪ್ರತಿಫಲದ ಅವಶ್ಯಕತೆ ಇದೆ ಮತ್ತು ಅದರ ಗೈರುಹಾಜರಿಯಲ್ಲಿ ಇದು ದಾನದಂತೆ ಪ್ರವರ್ತಿಸಿದ ಹೊರತು ಶೂನ್ಯವಾಗುತ್ತದೆ. ಹಸ್ತಾಂತರಣವು ಯಾವಾಗಲೂ ಮೂಲ ಪಕ್ಷಗಳ ನಡುವೆ ಅಸ್ತಿತ್ವದಲ್ಲಿದ್ದ ಎಲ್ಲಾ ಸಮನ್ಯಾಯ ಗಳನ್ನೂ ಒಳಪಟ್ಟಿದ್ದಾಗಿರುತ್ತದೆ. ಒಬ್ಬ ಪ್ರಾಮಾಣಿಕ ವರ್ಗವಣೆಧಾರಕನು ಯಾವುದೇ ದೋಷವನ್ನೂ ತಿಳಿಯದೆ ಇರುವುದರಿಂದ ಸ್ಪಷ್ಟ ಸ್ವಾಮ್ಯವನ್ನು ಪಡೆಯುತ್ತಾನೆ ಎಂಬುದನ್ನು ಗಮನಿಸಬೇಕು. (A Bona-fide transferee without notice of any defect gets a clear titile)

****

ಭಾಗ - ೧೭

ಕರಾರಿನ ವಿಮೋಚನೆ

ಕರಾರಿನಿಂದ ಸೃಷ್ಟಿಸಲ್ಪಟ್ಟ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಪಕ್ಷಗಳ ಕಾರ್ಯದಿಂದಾಗಲೀ ಅಥವಾ ಕಾನೂನಿನ ಪ್ರವರ್ತನೆಯಿಂದಾಗಿ ರದ್ದುಗೊಳಿಸುವ ತನಕ ಅಸ್ತಿತ್ವದಲ್ಲಿರುತ್ತದೆ. ಆದ್ದರಿಂದ ಈ ವಿಷಯವನ್ನು ಐದು ಶೀರ್ಷಿಕೆಗಳಲ್ಲಿ ಗಮನಿಸಬೇಕು.

೧. ಕಾಲಪರಿಮಿತಿಯ ಪ್ರತಿಷೇದದಿಂದ, ನಿಷೇದದಿಂದ, (ತಡೆಯಿಂದ)

೨. ನೆರವೇರಿಕೆಯಿಂದ

೩. ಕರಾರು ನೆರವೇರಿಕೆಯ ಅಸಾಧ್ಯತೆಯಿಂದ

೪. ಒಪ್ಪಂದದಿಂದ

೫. ಉಲ್ಲಂಘನೆಯಿಂದ.

೧. ಕಾಲಪರಿಮಿತಿಯ ಪ್ರತಿಷೇಧದಿಂದ :

ಮನುಷ್ಯನೇ ಮರಣಕ್ಕೆ ಅಧೀನನಾಗಿರುವುದರಿಂದ ಅವನ ಹಕ್ಕುಗಳು ಮತ್ತು ಕರ್ತವ್ಯಗಳು ಅಮರವಾಗಿರುವುದಿಲ್ಲ (ನಶ್ವರ). ಈ ಆಧಾರದ ಮೇಲೆ ಕಾಲ ಪರಿಮಿತಿ ಕಾನೂನು ವಿವಿಧ ಬಗೆಯ ಹಕ್ಕುಗಳ ಆಯುಷ್ಯವನ್ನು ನಿಯಮಿಸುತ್ತದೆ. ಕಾಲಪರಿಮಿತಿಯ ಅವಧಿಯು ಮುಕ್ತಾಯವಾದ ನಂತರ, ಆ ಹಕ್ಕುಗಳನ್ನು ಜಾರಿಗೊಳಿಸಲಾಗುವುದಿಲ್ಲ. ಕಾಲಪರಿಮಿತಿಯ 'ಪ್ರಾರಂಭದ ಹಂತವನ್ನು' ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅವಶ್ಯಕ. ದಾವೆಯನ್ನು ದಾಖಲು ಮಾಡುವ ಅಥವಾ ಕರ್ತವ್ಯವನ್ನು ಜಾರಿಗೊಳಿಸುವಂತೆ ಕೋರುವ ವ್ಯಾಜ್ಯದ ಕುರುಹೇ ಕಾಲಪರಿಮಿತಿಯ ದಿನಾಂಕದ ಪ್ರಾರಂಭದ ಹಂತವಾಗಿದೆ. ಉಪಕರಣದ ತಾರೀಖು ಅಷ್ಟು ಪ್ರಾಮುಖ್ಯವಲ್ಲ. ಪ್ರಾಮಿಸರಿ ನೋಟಿನಲ್ಲಿ ಕಾಲಪರಿಮಿತಿಯ ಪ್ರಾರಂಭದ ಹಂತವು ಉಪಕರಣದ ದಿನಾಂಕವೇ ಆಗಿರುತ್ತದೆ. ಉದಾಹರಣೆ ತೆಗೆದುಕೊಂಡರೆ, ಒಬ್ಬನು ಸಾಲವನ್ನು ಏಳು ವರ್ಷಗಳಲ್ಲಿ ತೀರಿಸಲು ಅಥವಾ ಸಂದಾಯ ಮಾಡಲು ವಾಗ್ದಾನ ಮಾಡಿದ್ದರೆ, ಕಾಲಪರಿಮಿತಿಯ ಪ್ರಾರಂಭವು ಒಪ್ಪಂದದ ಏಳು ವರ್ಷಗಳ ನಂತರ ಪ್ರಾರಂಭವಾಗುತ್ತದೆ.

ಪಕ್ಷಗಳು ಒಪ್ಪಿಗೆಯಿಂದ ಕರಾರನ್ನು ಪುನರುಜ್ಜೀವನಗೊಳಿಸುವ ಸ್ವಾತಂತ್ರ್ಯ ಹೊಂದಿರುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು ಸಂಗತವಾಗಿದೆ. ಏಕೆಂದರೆ ಆ ಸಿದ್ಧಾಂತವು ನೆರವೇರಿಕೆಗೆ ಗೊತ್ತುಪಡಿಸಿದ್ದ ಕಾಲಪರಿಮಿತಿಯು ಮುಕ್ತಾಯವಾಗುವ

ದರೊಳಗೆ ವಾಗ್ದಾನಕಾರನು ಒಂದು ಲಿಖಿತ ಅಂಗೀಕಾರವನ್ನು ಕೊಟ್ಟರೆ ಕಾಲಪರಿಮಿತಿಯ ಹೊಸ ಹಂತವು ಪ್ರಾರಂಭಿಸುತ್ತದೆ. ಈ ಅಂಗೀಕಾರವು ದಸ್ತಾವೇಜಿನ ಮೇಲೆ ಹಿಂಬರಹವಾಗಿರಬಹುದು ಅಥವಾ ಬೇರೆ ರೀತಿಯ ಲಿಖಿತ ಸಂಪರ್ಕವಾಗಿರಬಹುದು. ಕಾಲಪರಿಮಿತಿ ಕಾನೂನು, ಕಾಲ ಪರಿಮಿತಿಯ ಮುಕ್ತಾಯ ದೊಳಗೆ ಮಾತ್ರ ಹಕ್ಕುಗಳು ಜೀವಂತ ಎಂಬುದನ್ನು ಸ್ಪಷ್ಟಪಡಿಸುತ್ತದೆ.

೨. **ನೇರವೇರಿಕೆಯಿಂದ :**

ಕರಾರಿನಲ್ಲಿ ಕರ್ತವ್ಯಗಳನ್ನು ನೆರವೇರಿಸುವ ಬಾಧ್ಯತೆಯು ಇನ್ನೊಂದು ಪಕ್ಷದವರು ತ್ಯಜಿಸುವವರೆಗೆ ಅಸ್ತಿತ್ವದಲ್ಲಿರುತ್ತದೆ. ಪಕ್ಷಗಳು ಅವರವರ ವಾಗ್ದಾನಗಳನ್ನು ನೆರವೇರಿಸಲು ವರ್ಗ ೩೭ ರ ಪ್ರಕಾರ ಅವರೇ ಸಿದ್ಧರಾಗಿರುವ ಬಗ್ಗೆ ಪ್ರಸ್ತಾಪ ಮಾಡಬೇಕು. ಇದನ್ನು ಸಾಮಾನ್ಯವಾಗಿ ನೆರವೇರುವಿಕೆಯ ''ಟೆಂಡರ್'' (ಸಿದ್ಧತೆ) ಎಂದು ಕರೆಯುತ್ತಾರೆ. ಇದನ್ನು ತಳ್ಳಿ ಹಾಕಿದರೆ ಪಕ್ಷಗಳು ನೆರವೇರಿಸುವುದರ ಮೂಲಕ ಮನ್ನಣೆ ಪಡೆಯುವರು. ವರ್ಗ ೩೮ ರಂತೆ ಒಂದು ಸಿಂಧುವಾದ ಸಿದ್ಧತೆಯ ಅಂಶಗಳು ಪರತ್ತಿಲ್ಲದ್ದಾಗಿರಬೇಕು ಮತ್ತು ನಿಗದಿಮಾಡಿದ ವೇಳೆ ಮತ್ತು ಸ್ಥಳಕ್ಕೆ ಅನುಗುಣವಾಗಿರಬೇಕು. ಇನ್ನೊಂದು ಪಕ್ಷಕ್ಕೆ ವಾಗ್ದಾನಕಾರನು ಸಿದ್ಧವಾಗಿ ಮತ್ತು ಇಷ್ಟಪಟ್ಟಿದ್ದವನಾಗಿದ್ದಾನೆ ಎಂದು ತಿಳಿದುಕೊಳ್ಳಲು ಯುಕ್ತ ಅವಕಾಶ ಕೊಡಬೇಕೆಂದನ್ನು ನಿರ್ದಿಷ್ಟಪಡಿಸುತ್ತದೆ. ಹಲವಾರು ಜಂಟಿ ವಾಗ್ದಾನಕಾರರುಗಳಲ್ಲಿ ಯಾರಾದರೂ ಒಬ್ಬನಿಗೆ ಮಾಡಿದ ಪ್ರಸ್ತಾಪವು ಸಿಂಧುವಾದ ಪ್ರಸ್ತಾಪ.

ಆದ್ದರಿಂದ ಒಬ್ಬ ಖರೀದಿಕಾರನು ಕರಾರಿಗೆ ತಾನು ಸಿದ್ಧನಾಗಿದ್ದೇನೆಂದು ಹೇಳಿದಾಗ ಅವನು ಪೂರ್ತಿ ಮೊತ್ತ ನೀಡಬೇಕು ಮತ್ತು ಏನಾದರೂ ಕಡಿಮೆಯಾದರೆ ಅದು ಅಶಕ್ತ ಟೆಂಡರ್ (Invalid Tender) ಆಗುತ್ತದೆ. ಬ್ಯಾಂಕ್ ಆಫ್ ಮೈಸೂರು ವಿರುದ್ಧ ಬಿ. ಡಿ. ನಾಯ್ಡು (Bank of Mysore Vs. B. D. Naidu AIR 1954 MYS 168) ನೋಡಿ.

ಕರಾರಿನ ಸ್ವಭಾವವು ಏನೆಂದರೆ, ಪಕ್ಷಗಳು ತಾವೇ ವೈಯಕ್ತಿಕವಾಗಿ ನೆರವೇರಿಸುವವೆಂದು ಇಚ್ಛಿಸಿದ ಹೊರತು, ವಾಗ್ದಾನಕಾರನು ಸೂಕ್ತ ವ್ಯಕ್ತಿಗಳಿಂದ ಅಥವಾ ಪ್ರತಿನಿಧಿಗಳಿಂದ ಕರಾರಿನ ನೆರವೇರಿಕೆಯನ್ನು ಪೂರೈಸಬಹುದು. (ವರ್ಗ ೪೦) (ಸಾಮಾನ್ಯವಾಗಿ ಕೌಶಲ ಮತ್ತು ತಾಂತ್ರಿಕ ತಿಳುವಳಿಕೆಯನ್ನು ಒಳಗೊಂಡಿರುವ ಪ್ರಕರಣಗಳಲ್ಲಿ). ಕರಾರಿನಲ್ಲಿ ಬೇರೆ ಉದ್ದೇಶ ಮಾಡಿರದೆ ಇದ್ದರೆ ಕರಾರಿನ ಮೇಲಿನ ಬಾಧ್ಯತೆಯು ವಾಗ್ದಾನಕಾರನ ಮರಣದ ಸಂದರ್ಭದಲ್ಲಿ ಅವನ ಪ್ರತಿನಿಧಿಗಳ ಮೇಲೆ ಪ್ರಾಪ್ತವಾಗುತ್ತದೆ. ಆದ್ದರಿಂದ ವೈಯಕ್ತಿಕ ನೆರವೇರಿಕೆಯನ್ನು ನಿರೀಕ್ಷಿಸು ವಂತಹ ಸಂದರ್ಭಗಳಲ್ಲಿ ಪಕ್ಷದವನ ಮರಣವು ಕರಾರನ್ನು ಕೊನೆಗೊಳಿಸುತ್ತದೆ.

ಕರಾರಿಗೆ ಭಾಗಿಯಾಗಿರುವುದು ಎಂಬ ಪರಿಕಲ್ಪನೆಯು ಇಂಗ್ಲೀಷ ಕಾನೂನಿಗೆ ಕಠಿಣವಾಗಿ ಅಂಟಿಕೊಂಡಿರುವುದರಿಂದ ಇಂಗ್ಲೆಂಡಿನಲ್ಲಿ ಮೂರನೇ ಪಕ್ಷವು ನೆರವೇರಿಸಿದ ಕರಾರು ಮೂರನೇ ಪಕ್ಷವನ್ನು ನಿರ್ದಿಷ್ಟವಾಗಿ ಅಧಿಕೃತಗೊಳಿಸದ ಹೊರತು ಪರಿಗಣಿಸಲಾಗುವುದಿಲ್ಲ. ಆದಾಗ್ಯೂ, ಭಾರತದ ಸರ್ವೋಚ್ಚ ನ್ಯಾಯಾಲಯವು ಕಪೂರ್‌ಚೆಂದ್ ವಿರುದ್ಧ ಮೀರ್ ನವಾಬ್ (Kapur chand Vs Mir Nawab AIR 1963 SC 250) ನಲ್ಲಿ ವರ್ಗ ೪೧ ರ ಪ್ರಕಾರ, ಒಬ್ಬ ಮನುಷ್ಯನು ಮೂರನೇ ಪಕ್ಷದಿಂದ ಕರಾರಿನ ನೆರವೇರಿಕೆಯನ್ನು ಅಂಗೀಕಾರ ಮಾಡಿದರೆ ಆಗ ಅದು ಕರಾರನ್ನು ಸಾಕಷ್ಟು ವಿಮೋಚನೆಗೊಳಿಸುತ್ತದೆ ಎಂದು ತೀರ್ಮಾನಿಸಿತು.

ನೆರವೇರಿಕೆಯ ಸ್ಥಳ ಮತ್ತು ಸಮಯ

ಕೆಲವು ಸಮಯದಲ್ಲಿ ಪಕ್ಷಗಳು ವಿವರಗಳನ್ನು ನಿರ್ದಿಷ್ಟಪಡಿಸುವುದನ್ನು ಬಿಟ್ಟುಬಿಡಬಹುದು. ಇಲ್ಲಿ ನಾವು ಕಾನೂನಿನ ಉಪಬಂಧಗಳನ್ನು ತಿಳಿದುಕೊಳ್ಳ ಬಹುದು. ಸಮಯ ಮತ್ತು ಸ್ಥಳವನ್ನು ನಮೂದಿಸದೇ ಇದ್ದ ಪಕ್ಷದಲ್ಲಿ ವಾಗ್ದಾನಕಾರನು ಇನ್ನೊಂದು ಪಕ್ಷಕ್ಕೆ ವಾಗ್ದಾನವನ್ನು ನೆರವೇರಿಸಲು ಒಂದು ಯುಕ್ತ ಸ್ಥಳವನ್ನು ಗೊತ್ತು ಮಾಡುವಂತೆ ಕೇಳುವುದು ಅವನ ಕರ್ತವ್ಯವಾಗಿರುತ್ತದೆ. ಆ ಸ್ಥಳದಲ್ಲಿ ವಾಗ್ದಾನವನ್ನು ನೆರವೇರಿಸುವಂತೆ, ಅಧಿನಿಯಮದ ವರ್ಗ ೪೯ ರ ಪ್ರಕಾರ ವಾಗ್ದಾನಕಾರನು ಕೇಳಿಕೊಳ್ಳಬೇಕು. ನೆರವೇರಿಕೆಗೆ ವೇಳೆಯನ್ನು ಗೊತ್ತು ಪಡಿಸ ದಿದ್ದರೆ ಮತ್ತು ಅದನ್ನು ವಾಗ್ದಾನ ಪಡೆದವನ ತಿಳಿವಳಿಕೆಯಿಲ್ಲದೆ ಮಾಡಬೇಕಾದರೆ, ವರ್ಗ ೪೬ ರ ಪ್ರಕಾರ ಈ ಕೆಲಸವನ್ನು ಯುಕ್ತ ಕಾಲದೊಳಗೆ ನೆರವೇರಿಸಬೇಕು. ಒಂದು ವಾಗ್ದಾನವನ್ನು ಒಂದು ನಿರ್ದಿಷ್ಟ ದಿನ ನೆರವೇರಿಸಬೇಕಾದರೆ ಮತ್ತು ವಾಗ್ದಾನಕಾರನು ವಾಗ್ದಾನಪಡೆದವನ ತಿಳುವಳಿಕೆಯಿಲ್ಲದೆ ನೆರವೇರಿಸಲು ಇಚ್ಛಿಸದಿದ್ದರೆ ಯುಕ್ತ ಸ್ಥಳ ಮತ್ತು ಸಮಯವನ್ನು ವ್ಯವಹಾರದ ಸಾಮಾನ್ಯ ವೇಳೆಯೊಳಗೆ ನಿಗದಿ ಪಡಿಸುವುದು ವಾಗ್ದಾನ ಪಡೆದವನ ಕರ್ತವ್ಯವಾಗಿದೆ. ವರ್ಗ ೫೦ ರಂತೆ ವಾಗ್ದಾನ ನೆರವೇರಿಕೆಯನ್ನು ಯಾವುದೇ ರೀತಿಯಲ್ಲಿ ಅಥವಾ ಯಾವುದೇ ಸಮಯದಲ್ಲಿ ವಾಗ್ದಾನ ಪಡೆದವನ ಅಪೇಕ್ಷೆಯಂತೆ ಅಥವಾ ಅವನಿಂದ ಅನುಮೋದಿತವಾದಂತೆ ಮಾಡಬಹುದು ಎಂದು ಹೇಳುತ್ತದೆ.

ಸ್ಥಿರ ಸ್ವತ್ತು, ಸಾಲ ಮುಂತಾದವುಗಳಿಗೆ ಸಂಬಂಧಿಸಿದ ಕರಾರುಗಳಲ್ಲಿ ಕರಾರು ನೆರವೇರಿಕೆಯ ಸಮಯವು ಅನೇಕ ಸಲ ಬಹುಮುಖ್ಯ. ಕರಾರು ಕಾಯಿದೆಯ ವರ್ಗ ೫೫ ಬಹಳ ಮುಖ್ಯವಾದ ವರ್ಗವಾಗಿದೆ. ಮೊದಲನೇ ಭಾಗವು, ಸಮಯವು ಕರಾರಿನ ಮುಖ್ಯಾಂಶವಾಗಿದ್ದಲ್ಲಿ ಸಮಯವನ್ನು ಸರಿಯಾಗಿ ಇಟ್ಟುಕೊಳ್ಳುವುದರಲ್ಲಿ ವಿಫಲ

ವಾದರೆ ವಾಗ್ದಾನ ಪಡೆದವನ ಆಯ್ಕೆಯ ಮೇಲೆ ಕರಾರು ಶೂನ್ಯಕರಣೀ ಯವಾಗುತ್ತದೆ. ಅಂತಹ ಸಮಯವನ್ನು ಅತ್ಯಾವಶ್ಯಕವೆಂದು ಪರ್ಯಾಲೋಚಿಸದಿದ್ದರೆ ವಿಳಂಬ ಮಾಡಿದವನಿಂದ ವಾಗ್ದಾನ ಪಡೆದವನು ನಷ್ಟ ಪರಿಹಾರ ಪಡೆಯಲು ಹಕ್ಕುಳ್ಳವ ನಾಗುತ್ತಾನೆ. ವಾಗ್ದಾನ ಪಡೆದವನು ನಿರ್ದಿಷ್ಟಪಡಿಸಿದ ಸಮಯದ ನಂತರವೂ ಕರಾರಿನ ನೆರವೇರಿಕೆಗೆ ಅನುಮೋದಿಸಿದರೆ, ವಿಳಂಬದಿಂದ ಉಂಟಾದ ನಷ್ಟಕ್ಕೆ ಅವನು ನಷ್ಟ ಪರಿಹಾರವನ್ನು, ಪ್ರತಿಭಟನೆಯಿಂದ ಅಂಗೀಕಾರವನ್ನು ವ್ಯಕ್ತಪಡಿಸದ ಹೊರತು ನಷ್ಟ ಪರಿಹಾರವನ್ನು ಕೇಳಲಾಗುವುದಿಲ್ಲ.

ಕರಾರನ್ನು ನೆರವೇರಿಸುವುದಕ್ಕೆ ನಿಗದಿಪಡಿಸಿದ ಸಮಯವನ್ನು ಅತ್ಯಾವಶ್ಯಕ. ನಿಬಂಧನೆ ಎಂದು ಪರಿಗಣಿಸಲಾಗಿದ್ದರೆ, ಆ ಪರಿಣಾಮಕ್ಕೆ ಪಕ್ಷಗಳೇ ವ್ಯಕ್ತವಾಗಿ ಒಪ್ಪಿದ್ದರೆ ಅಥವಾ ವಿಳಂಬವು ನಷ್ಟವನ್ನು ಉಂಟುಮಾಡಿದರೆ ಅಥವಾ ಕರಾರಿನ ಸ್ವಭಾವವೇ ಅಂತಹಾ ರಚನೆಯನ್ನು ಅಗತ್ಯಪಡಿಸಿದರೆ ಆಗ ನ್ಯಾಯ ಅಧಿಕಾರಿಗಳ ತೀರ್ಪು ಸಮಯವೇ ಅತ್ಯಾವಶ್ಯಕ ಎಂಬುದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ, ಪಕ್ಷದ ಕೋರಿಕೆಯಂತೆ ಕಾಲವನ್ನು ವಿಸ್ತರಿಸಿದರೆ, ವಿಸ್ತರಿಸಿದ ಕಾಲವನ್ನು ಆಜ್ಞಾಪಕ ಎಂದು ಪರಿಗಣಸಲಾಗುತ್ತದೆ. ಓರಿಸ್ಸಾ ಟೆಕ್ಸಟೈಲ್ ಮಿಲ್ಸ್ ವಿರುದ್ಧ ಗಣೇಶದಾಸ್ (Orissa Textile Mills Vs. Ganesh das AIR 1961 Pat 107) ಮಹಾಬೀರ್ ಪ್ರಸಾದ್ ವಿರುದ್ಧ ದುರ್ಗಾದತ್ (Mahabir Prasad Vs. Durga Dutt, AIR (1961) SC 990) ನೋಡಿ. ಸರ್ವೋಚ್ಚ ನ್ಯಾಯಾಲಯವು ಚೈನಾ ಕಾಟನ್ ಎಕ್ಸ್‌ಪೋರ್ಟರ್ಸ್ ವಿರುದ್ಧ ಬಿ. ಆರ್. ಶ್ರೀ ಮಿಲ್ಸ್ (China Cotton Exporters Vs. B. R. C. Mills AIR 1961 SC 1295) ನಲ್ಲಿ ವಾಣಿಜ್ಯ ಕರಾರುಗಳಲ್ಲಿ ಸಾಧಾರಣವಾಗಿ ಕಾಲವೇ ಕರಾರಿನ ಮುಖ್ಯಾಂಶವೆಂದು ತೀರ್ಮಾನಿಸ ಲಾಯಿತು.

ಮೇಲೆ ಹೇಳಿದ ತತ್ವದಿಂದ ಹೊರತಾದ ನಿಯಮವನ್ನು ಒಂದು ಕರಾರು ಅಥವಾ ಸ್ಥಿರಸ್ವತ್ತಿನ ಮಾರಾಟದ ಸಂಬಂಧದಲ್ಲಿ ತಿಳಿಯಬಹುದು. ಪಕ್ಷಗಳಿಂದ ಕಾಲವೇ ಮುಖ್ಯಾಂಶ ಎಂಬ ನಿರ್ದಿಷ್ಟ ನಮೂನೆಯ ಗೈರುಹಾಜರಿಯಲ್ಲಿ ನ್ಯಾಯಾಲಯಗಳು ಕಾಲವು ಅತ್ಯಾವಶ್ಯಕ ಎಂಬುದನ್ನು ಪರಿಗಣಿಸದೆ ಮುಂದುವರಿಯುತ್ತದೆ. ಕರ್ತವ್ಯಲೋಪವಾದಾಗಲೂ ಸಹ ದಂಡ ವಿಧಿಸುವ ಖಂಡದಲ್ಲಿ ಕಾಲವನ್ನು ಕರಾರಿನ ಮುಖ್ಯಾಂಶವೆಂದು ಮಾಡಬೇಕೆಂಬ ಉದ್ದೇಶವನ್ನು ಸಮರ್ಥಿ ಸುವುದಿಲ್ಲ ಎಂದು ತೀರ್ಮಾನಿಸಲಾಯಿತು. ಗೋಮತಿನಾಯಗಂ ಪಿಳ್ಳೈ ವಿರುದ್ಧ ಪಳನಿ ಸ್ವಾಮಿ ನಾಡರ್ (Gomathinayagam Pillai Vs. Palani Swami Nadar AIR 1967 SC 868) Chandarani Vs. Kamalnath AIR (1993) SC 1743 ನೋಡಿರಿ.

ಸ್ಥಿರ ಸ್ವತ್ತುಗಳ ಗುತ್ತಿಗೆ ಮತ್ತು ನವೀಕರಣ ಖಂಡಗಳ ವಿಷಯದಲ್ಲಿ ವಿಭಿನ್ನತೆ ತಳೆದಿರುವುದನ್ನು ಗಮನಿಸಬೇಕಾಗಿದೆ. ಅಂತಹ ಖಂಡಗಳು ಸರ್ವೋಚ್ಚ ನ್ಯಾಯಾಲಯದ ಪ್ರಕಾರ, ಕಾಲ್ಟೆಕ್ಸ್ (ಇಂಡಿಯಾ) ಲಿಮಿಟೆಡ್ ವಿರುದ್ಧ ಭಗವಾನ್ ದೇವಿ ಮರೋಡಿಯಾ (Caltex (India) Ltd., Vs. Bhagwan Devi Marodia, AIR 1969 SC 405) ನಲ್ಲಿ ವಿಶೇಷಾಧಿಕಾರ ಅಥವಾ ಸ್ವಾತಂತ್ರ್ಯವು ಹಕ್ಕಿನ ತರಹವೇ ಅಲ್ಲ. ಏಕೆಂದರೆ ಒಬ್ಬ ವ್ಯಕ್ತಿಯಲ್ಲಿ ಹಕ್ಕಿನ ಹಾಜರಾತಿಯು ಇನ್ನೊಬ್ಬ ವ್ಯಕ್ತಿಯಲ್ಲಿ ಕರ್ತವ್ಯದ ಹೊಣೆಯನ್ನು ಒಳಗೊಂಡಿರುತ್ತದೆ. ಎಂದು ಅಭಿಪ್ರಾಯ ಪಟ್ಟಿತು.

ಪರಸ್ಪರ ವಾಗ್ದಾನಗಳು

ಅನೇಕ ಕರಾರುಗಳು, ವಾಗ್ದಾನಗಳ ಸರಕುಗಳ ಮಾರಾಟದ ಕರಾರಿನಂತೆ ವಿನಿಮಯವನ್ನು ಒಳಗೊಂಡಿರುತ್ತದೆ. ವರ್ಗ ೫೧ ರ ಪ್ರಕಾರ, ವಾಗ್ದಾನಗಳನ್ನು ಏಕಕಾಲದಲ್ಲಿ ನೆರವೇರಿಸಬೇಕಾದರೆ, ಇನ್ನೊಂದು ಪಕ್ಷವು ತನ್ನ ಭಾಗವನ್ನು ನೆರವೇರಿಸಲು ಸಿದ್ಧವಾಗಿ ಮತ್ತು ಇಷ್ಟಪಟ್ಟಿರಬೇಕೆಂದು ಹೇಳುತ್ತದೆ. ಕೆಲವು ಸಲ ನೆರವೇರಿಕೆಯ ಕ್ರಮವು ಸ್ವತಃ ಸಿದ್ಧವಾಗಿರಬೇಕು. ಉದಾಹರಣೆಗೆ, ಒಂದು ಕಟ್ಟಡ ನಿರ್ಮಾಣ ಕರಾರಿನಂತೆ ಒಂದು ಪಕ್ಷವು ಜಾಗವನ್ನು ತೆರವು ಮಾಡಬೇಕಾಗುತ್ತದೆ. ಆದ್ದರಿಂದ ವರ್ಗ ೫೨ ರ ಪ್ರಕಾರ, ಎಲ್ಲಿ ಪರಸ್ಪರ ವಾಗ್ದಾನದ ನೆರವೇರಿಕೆಯ ಕ್ರಮವನ್ನು ಕರಾರು ವ್ಯಕ್ತವಾಗಿ ಗೊತ್ತುಪಡಿಸಿದೆಯೋ, ಅದೇ ಕ್ರಮದಲ್ಲಿ ಕರಾರನ್ನು ನೆರವೇರಿಸಬೇಕು ಮತ್ತು ಎಲ್ಲಿ ಕ್ರಮವನ್ನು ಕರಾರಿನಲ್ಲಿ ವ್ಯಕ್ತವಾಗಿ ಗೊತ್ತು ಪಡಿಸಿಲ್ಲವೋ, ಆಗ ಕರಾರನ್ನು ವ್ಯವಹಾರದ ಅಗತ್ಯತೆಯ ಪ್ರಕಾರ ನೆರವೇರಿಸ ಬೇಕಾಗುತ್ತದೆ.

ನೆರವೇರಿಕೆಯ ಬಗ್ಗೆ ವಿವಾದವು ಹಲವಾರು ಆಕಾರಗಳನ್ನು ಹೊಂದಬಹುದು. ಈ ಉಪಬಂಧಗಳ ಮಹತ್ವವನ್ನು ವಿವೇಚಿಸುವುದಕ್ಕೋಸ್ಕರ ಕೆಲವು ಮೊಕದ್ದಮೆ ಗಳನ್ನು ತಿಳಿದುಕೊಳ್ಳಬೇಕಾಗಿದೆ. ಹಷ್ಮನ್ ವಿರುದ್ಧ ಲಖನೌ ಇಂಪ್ರೂವ್‌ಮೆಂಟ್ ಟ್ರಸ್ಟ್ (Hashman Vs. Lucknow Improvement Trust (1927) 101 IC 847) ನಲ್ಲಿ ಒಬ್ಬ ವ್ಯಕ್ತಿಯು ಪುರಸಭಾ ಭೂಮಿಯನ್ನು ಗುತ್ತಿಗೆಗೆ ಪಡೆದನು. ಅವನು ಆ ಭೂಮಿಯನ್ನು ನೆಲಮಟ್ಟ ಮಾಡಿದ್ದಕ್ಕಾಗಿ ಸ್ವಲ್ಪ ಹಣವನ್ನು ನೆಲಮಟ್ಟ ಮಾಡವ ಖರ್ಚು 'ಎಂದು ಸಂದಾಯ ಮಾಡಬೇಕಾಗಿತ್ತು. ಹಣವನ್ನು ನೆಲ ಮಟ್ಟ ಮಾಡುವುದಕ್ಕೆ ಮೊದಲು ಕೊಡಬೇಕೆ ಅಥವಾ ಆಮೇಲೆ ಕೊಡಬೇಕೆ ಎಂಬುದರ ಬಗ್ಗೆ ಒಪ್ಪಂದವು ಮೌನವಾಗಿತ್ತು. ನ್ಯಾಯಾಲಯದ ದೃಷ್ಟಿಯಲ್ಲಿ ವ್ಯಕ್ತ ಷರತ್ತಿನ ಗೈರುಹಾಜರಿಯಲ್ಲಿ ಕೆಲಸಕ್ಕೆ ಮುಂಗಡವಾಗಿ ಹಣ ಸಂದಾಯ ಮಾಡಬೇಕಿಲ್ಲ ಎಂದು ಹೇಳಿತು.

ವರ್ಗ ೫೩ ಪ್ರಕಾರ, ಪರಸ್ಪರ ವಾಗ್ದಾನಗಳ ಬಗ್ಗೆ ಒಂದು ಪಕ್ಷವು ಇನ್ನೊಂದು ಪಕ್ಷ ತನ್ನ ಭಾಗವನ್ನು ನೆರವೇರಿಸುವುದನ್ನು ತಡೆಗಟ್ಟುವುದು ಅಥವಾ ಅಡ್ಡಿ ಉಂಟುಮಾಡಿದರೆ ಕರಾರು ಶೂನ್ಯಕರಣೀಯವಾಗುತ್ತದೆ. ಕಲ್ಲಿದ್ದಲು ಗಣಿ ಹರಾಜು ಖರೀದಿಕಾರನು ತನ್ನ ಗಣಿ ಕೆಲಸ ಮಾಡಲು ಅನುಮತಿಯನ್ನು ಕೇಳಿದಾಗ ಅಧಿಕಾರಿಗಳು ನಿರಾಕರಿಸಿ, ಪರಿಬಂಧಗಳನ್ನು ತಂದರು. ಠೇವಣಿ ಮರುಪಾವತಿಯನ್ನೂ ನಿರಾಕರಿಸಿದಾಗ ಸರ್ವೋಚ್ಚ ನ್ಯಾಯಾಲಯವು ಅವನ ಕೇಳಿಕೆಯನ್ನು ಪುರಸ್ಕರಿಸಿತು. ಹರ್‌ಪ್ರಸಾದ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ (Har Prasad Vs. Union of India AIR (1973) SC 2380). ನೋಡಿ.

೩. ನೆರವೇರಿಕೆಯ ಅಸಾಧ್ಯತೆ :

ವರ್ಗ ೫೬ ರ ಪ್ರಕಾರ, ಒಂದು ಕೃತ್ಯವನ್ನು ನಿರ್ವಹಿಸಲು ಕರಾರನ್ನು ಮಾಡಿಕೊಂಡ ಮೇಲೆ ಅಂತಹ ಕಾರ್ಯದ ನೆರವೇರಿಕೆಯು ಅಸಾಧ್ಯವಾದರೆ ಅಥವಾ ಯಾವುದೋ ಘಟನೆಯ ಕಾರಣದಿಂದ ವಾಗ್ದಾನಕಾರನು ಅದನ್ನು ನೆರವೇರಿಸಲು ಅಸಾಧ್ಯವಾದರೆ ಆಗ ಆ ಕರಾರು ಕಾನೂನುಬಾಹಿರವಾಗುತ್ತದೆ ಅಥವಾ ಯಾವಾಗ ಒಂದು ಕಾರ್ಯದ ನೆರವೇರಿಕೆಯು ಅಸಾಧ್ಯ ಅಥವಾ ಕಾನೂನುಬಾಹಿರ ವಾಗುತ್ತದೋ ಆಗಲೂ ಆ ಕರಾರುಶೂನ್ಯವಾಗುತ್ತದೆ. ಇದನ್ನು ''ವಿಫಲತಾ ಸಿದ್ಧಾಂತ'' (Doctrine of Frustration) ಎಂದು ಕರೆಯಲಾಗುತ್ತದೆ. ಆದರೆ ಇದು ಸ್ವಯಂ ಪ್ರೇರೇಪಿತವಾಗಿರಬಾರದು. ಅಧಿಕ ಹಾನಿ, ಅನಿರೀಕ್ಷಿತ ಕಷ್ಟ ಅಥವಾ ಭಾರವು ಉಂಟಾಗುವುದರಿಂದ ನೆರವೇರಿಕೆ ಅಸಾಧ್ಯವಾಗುತ್ತದೆ ಎಂದು ತಿಳಿದುಕೊಳ್ಳಬೇಕು. ಪ್ರೀವಿ ಕೌನ್ಸಿಲ್ ಹರ್ನಂಡರಾಯ್ ಫುಲ್ಚಂದ್ ವಿರುದ್ಧ ಪ್ರಗ್ದಾಸ್ (Harnandrai Fulchand Vs. Pragadas AIR (1923) PC 54) ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯವು ಗಂಗಾ ಸರನ್ ವಿರುದ್ಧ ರಾಂ ಚರನ್, ರಾಂ ಗೋಪಾಲ್ (Ganga Saran Vs. Ram Charan, Ram Gopal AIR (1952) SC 9) ನಲ್ಲಿ ಕರಾರಿನ ನೆರವೇರಿಕೆಯು ಹೆಚ್ಚು ಕಠಿಣ ಅಥವಾ ಹೆಚ್ಚು ಬೆಲೆಯುಳ್ಳದ್ದಾಗಬಹುದು. ಆದರೆ ಕರಾರಿನ ಮೂಲಭೂತ ಬದಲಾವಣೆಯ ಸನ್ನಿವೇಶಗಳಲ್ಲಿ ಕರಾರುಗಳು ವಿಫಲಗೊಳ್ಳಬಾರದು. ಸತ್ಯಬ್ರತ ವಿರುದ್ಧ ಮುಗ್ನೀರಾಂ (Satyabrata Ghose Vs. Mugneeram Bangur & Co. AIR 1954 SC 44) ನಲ್ಲಿ ತೋರಿದ ಮಾರ್ಗವು ಪ್ರದೀಪಕವಾಗಿದೆ.

'ಅಸಾಧ್ಯ' ಎಂಬ ಪದವನ್ನು ಇಲ್ಲಿ ಶಾರೀರಕ ಅಥವಾ ಅಕ್ಷರಶಃ ಅಸಾಧ್ಯ ಎಂಬ ಅರ್ಥದಲ್ಲಿ ಉಪಯೋಗಿಸಿಲ್ಲ ಎಂಬುದು ಸ್ಪಷ್ಟ. ಒಂದು ಕಾರ್ಯದ ನೆರವೇರಿಕೆಯು ಅಕ್ಷರಶಃ ಅಸಾಧ್ಯವಾಗಿಲ್ಲದಿರಬಹುದು. ಆದರೆ ಅದು ಕಾರ್ಯ ಸಾಧ್ಯವಲ್ಲದೆ

ಇರಬಹುದು. ವಸ್ತುವಿನ ದೃಷ್ಟಿಯಿಂದ ಮತ್ತು ಪಕ್ಷಗಳು ಹೊಂದಿದ್ದ ದೃಷ್ಟಿಯಿಂದ ಇದು ಅಪ್ರಯೋಜಕವಾಗಿರಬಹುದು. ಒಂದು ಅನಿರೀಕ್ಷಿತ ಘಟನೆ ಅಥವಾ ಪರಿಸ್ಥಿತಿಯ ಬದಲಾವಣೆಯು ಪಕ್ಷಗಳ ವ್ಯಾಪಾರದ ಅಡಿಪಾಯವನ್ನೇ ಸಂಪೂರ್ಣವಾಗಿ ಬುಡಮೇಲು ಮಾಡಿರಬಹುದು. ಆಗ ವಾಗ್ದಾನಕಾರನು ತಾನು ನೆರವೇರಿಸುತ್ತೇನೆಂದು ಮಾಡಿದ ವಾಗ್ದಾನವನ್ನು ನೆರವೇರಿಸಲು ಅಸಾಧ್ಯವಾಗುತ್ತದೆ ಎಂದು ಹೇಳಬಹುದು. ಈ ಬಗ್ಗೆ ಸಿದ್ಧಾಂತದ ಅನ್ವಯ ಯೋಗ್ಯತೆಯ ಪ್ರಕರಣವನ್ನು ಇಂಗ್ಲೆಂಡಿನ ಪ್ರಧಾನ ನ್ಯಾಯಾಲಯವಾದ ಹೌಸ್ ಆಫ್ ಲಾರ್ಡ್ಸ್‌ನ ದೇವೀಸ್ ಕಂಟ್ರಾಕ್ಟರ್ಸ್ ಲಿಮಿಟೆಡ್ ವಿರುದ್ಧ ಫರೇಹಾಂ ಅರ್ಬನ್ ಡಿಸ್ಟ್ರಿಕ್ಟ್ ಕೌನ್ಸಿಲ್ (Davis Contractors Ltd. Vs. Fareham Urban District Council (1956) 2 All ER 145) ಮೊಕದ್ದಮೆಯಲ್ಲಿ ನೋಡಬಹುದು. ಅದರಲ್ಲಿ ಒಬ್ಬ ಕಂಟ್ರಾಕ್ಟದಾರನು (ಕರಾರುಗಾರ) ಪುರಸಭಾ ಕೌನ್ಸಿಲ್‌ಗೆ ಎಂಟು ತಿಂಗಳೊಳಗೆ ಮನೆಗಳನ್ನು ಕಟ್ಟುವುದಾಗಿ ಕರಾರು ಮಾಡಿಕೊಂಡನು. ಕೆಟ್ಟ ಹವೆ ಮತ್ತು ಕೆಲಸಗಾರರ ಮುಷ್ಕರದಿಂದಾಗಿ ಕೆಲಸ ಮುಗಿಸಲು ಇಪ್ಪತ್ತು ತಿಂಗಳುಗಳಾಯಿತು. ಇದರಿಂದ ವೆಚ್ಚವು ಬಹಳ ಹೆಚ್ಚಾಯಿತು. ಕಂಟ್ರಾಕ್ಟರನು ಮೂಲ ಕರಾರು ವಿಮೋಚನೆಗೊಂಡಿತು ಎಂದು ವಾದಿಸಿದನು. ಅಗತ್ಯ ಪರಿಮಾಣ (Quantum Meruit) ದ ಆಧಾರದ ಮೇಲೆ ಮಾಡಿದ ಕೆಲಸದ ಮೌಲ್ಯಕ್ಕೆ ಅನುಸಾರವಾಗಿ ಹಣ ಕೊಡಬೇಕೆಂದು ಕೇಳಿದನು. ಹೌಸ್ ಆಫ್ ಲಾರ್ಡ್ಸ್ ಇದನ್ನು ಒಪ್ಪಲಿಲ್ಲ. ಲಾರ್ಡ್ ರ‍್ಯಾಡೆಕ್ಲಿಫ್‌ರು ನ್ಯಾಯಾಲಯವು ಕಷ್ಟ ಅಥವಾ ಅನಾನು ಕೂಲತೆ ಅಥವಾ ಸಾಮಗ್ರಿ ನಷ್ಟವನ್ನಷ್ಟೇ ವಿಫಲತೆ ಎಂದು ಕರೆಯಲಾಗುವುದಿಲ್ಲ. ಎರಡೂ ಪಕ್ಷಗಳ ಕರ್ತವ್ಯಲೋಪವಿಲ್ಲದೆ ಹೊಣೆಗಾರಿಕೆಯಲ್ಲಿ ಮಹತ್ವದ ಬದಲಾವಣೆ ಇರಬೇಕು ಮತ್ತು ಪರಿಸ್ಥಿತಿಯ ಆಮೂಲಾಗ್ರ ಬದಲಾವಣೆ ಇರಬೇಕು. ಆಗ ವಿಫಲತಾ ಸಿದ್ಧಾಂತವು ಅನ್ವಯವಾಗುತ್ತದೆ ಎಂದು ನಿರ್ಧರಿಸಿತು.

ವಿಫಲತೆಯ ಶೀರ್ಷಿಕೆಗಳು

ಎ) ವಸ್ತುವಿಷಯದ ನಾಶ :

ಯಾವಾಗ ಕರಾರಿನ ವಸ್ತುವಿಷಯವು ಅಸ್ತಿತ್ವದಲ್ಲಿರುವುದು ನಿಂತು ಹೋಗುತ್ತದೆಯೋ ಆಗ ಕರಾರನ್ನು ನೆರವೇರಿಸಲಾಗುವುದಿಲ್ಲ, ಎಂಬುದು ಸ್ಪಷ್ಟವಾಗಿದೆ. ಟೇಲರ್ ವಿರುದ್ಧ ಕಾಲ್ಡ್‌ವೆಲ್ (Taylor Vs. Cald well 122 ER 309) ಇದರ ಒಂದು ಮುಖ್ಯ ಮೊಕದ್ದಮೆಯಾಗಿದೆ. ಅದರಲ್ಲಿ ಒಂದು ಸಂಗೀತ ಸಭಾಂಗಣವನ್ನು ಬಾಡಿಗೆಗೆ ಕೊಡಲು ವಾಗ್ದಾನ ಮಾಡಿದ್ದು ಅದು ಸುಟ್ಟು ಭಸ್ಮವಾದ್ದರಿಂದ ಕರಾರು ವಿಫಲಗೊಂಡಿತು ಎಂದು ನಿರ್ಧರಿಸಿದೆ. ವಿ. ಎಲ್. ನರಸು ವಿರುದ್ಧ ಪಿ. ಎಸ್. ವಿ. ಐಯ್ಯರ್ (V. L. Narasu Vs. P. S. V. Iyer, ILR

1953 Mad 831) ಒಂದು ಚಲನಚಿತ್ರವನ್ನು ಪ್ರದರ್ಶಿಸಲು ನೇಮಿಸಿದ ಚಲನಚಿತ್ರದ ಸಭಾಂಗಣವು ಭಾರಿ ಮಳೆಯಿಂದಾಗಿ ಅದರ ಒಂದು ಗೋಡೆಯು ಬಿದ್ದು ಮೂರು ಜನರನ್ನು ಸಾವಿಗೀಡು ಮಾಡಿದ್ದಕ್ಕಾಗಿ ಕರಾರನ್ನು ವಿಫಲ ಎಂದು ನಿರ್ಧರಿಸಲಾಯಿತು.

ಬಿ) ಪರಿಸ್ಥಿತಿಗಳ ಬದಲಾವಣೆ :

ಅನಿರೀಕ್ಷಿತ ಘಟನೆಗಳು ಸಂಭವಿಸಿ ಕರಾರಿನ ನೆರವೇರಿಕೆಯನ್ನು ಹೇಳಿದ ರೀತಿಯಲ್ಲಿ ಮತ್ತು ಕಾಲದಲ್ಲಿ ಕೈಗೊಳ್ಳುವಿಕೆ ವಿಫಲಗೊಂಡಿತು. ಪುರುಷೋತ್ತಮ ದಾಸ್ ವಿರುದ್ಧ ಬಟಾಲಾ ಮುನಿಸಿಪಲ್ ಕಮಿಟಿ (Parushottam Das Vs. Batala Municipal Committee AIR 1949 EP 301) ನಲ್ಲಿ ಒಬ್ಬ ಕಂಟ್ರಾಕ್ಟರನು ಒಂದು ಜಟಕಾ ನಿಲ್ದಾಣವನ್ನು ಗುತ್ತಿಗೆಗೆ ಪಡೆಯಲು ಹಣದ ಮೊತ್ತ ಸಂದಾಯ ಮಾಡಲು ಮಾತುಕೊಟ್ಟಿದ್ದನು. ಆದರೆ ಮುಷ್ಕರದಿಂದಾಗಿ ಆ ನಿಲ್ದಾಣವನ್ನು ಚಾಲಕರಿಂದ ಬಹಿಷ್ಕರಿಸಲಾಯಿತು ಮತ್ತು ವಾದಿಯು ಪೂರ್ಣ ನಷ್ಟವನ್ನು ಅನುಭವಿಸಿದನು. ಅವನು ಹಣವನ್ನು ವಸೂಲು ದಾವೆ ಹೂಡಿದನು. ಆದರೆ ಮೂಲಭೂತ ಭಾವನೆಯ ವಿಫಲತೆಯಿಂದಾಗಿ ನಿಲ್ದಾಣ ಕರಾರು ಅಪ್ರಯೋಜಕ ವಾಗಿ ರದ್ದಾಯಿತು ಎಂದು ವಾದಿಸಿ ಸಫಲತೆ ಹೊಂದಿದನು.

ಸಿ) ಉದ್ದೇಶಿಸಲಾದ ಘಟನೆಯ ಅಸಂಭವ :

ಕೆಲವು ಸಲ ಕರಾರಿನ ನೆರವೇರಿಕೆಯು ಪೂರ್ಣವಾಗಿ ಸಾಧ್ಯವಾಗಿದ್ದು, ಎರಡೂ ಪಕ್ಷಗಳೂ ಕರಾರಿನ ಮುಖ್ಯ ಅಂಶವೆಂದು ಯೋಚಿಸಿದ ಘಟನೆಯು ಸಂಭವಿಸದೆ ನೆರವೇರಿಕೆಯು ನಾಶವಾಗುತ್ತದೆ. ಇದರಲ್ಲಿ ದೃಷ್ಟಾಂತ ಪ್ರಕರಣವು ಕ್ರೆಲ್ ವಿರುದ್ಧ ಹೆನ್ರಿ (Krell Vs. Henry (1903) 2 KB 740 (1900-3) All ER Rep 20). ಅದರಲ್ಲಿ ಕೆಲವು ಕೊಠಡಿಗಳನ್ನು ಇಂಗ್ಲೆಂಡ್ ರಾಜನ ಪಟ್ಟಾಭಿಷೇಕ ಮೆರವಣಿಗೆ ವೀಕ್ಷಿಸಲು ಬಾಡಿಗೆಗೆ ತೆಗೆದುಕೊಳ್ಳಲಾಗಿತ್ತು. ಆದರೆ ಆ ವರ್ಷ ಮೆರವಣಿಗೆಯನ್ನೇ ರದ್ದು ಮಾಡಲಾಗಿದ್ದರಿಂದ ಕರಾರು ವಿಫಲವಾಯಿತು. ಈ ತರಹ ಸನ್ನಿವೇಶವು ಪೂರ್ತಿ ಬದಲಾದರೆ ಕರಾರಿನ ಅಡಿಪಾಯವು ನಾಶವಾಗುತ್ತದೆ. ಆದ್ದರಿಂದ ನೆರವೇರಿಕೆಯು ಅಸಾಧ್ಯವಾಗುತ್ತದೆ. ಎರಡೂ ಪಕ್ಷಗಳಿಗೂ ಬಾಡಿಗೆ ತೆಗೆದುಕೊಂಡಿದ್ದುದರ ಉದ್ದೇಶ ತಿಳಿದಿತ್ತು. ಆದ್ದರಿಂದ ಪ್ರದರ್ಶನ ರದ್ದಾದ ಮೇಲೆ ಕರಾರು ವಿಫಲವಾಯಿತು ಎಂದು ನ್ಯಾಯಾಲಯವು ನಿರ್ಧರಿಸಿತು.

ಡಿ) ಸರ್ಕಾರದ ಮಧ್ಯಪ್ರವೇಶ :

ಶಾಸನದ ಪ್ರಭಾವದಿಂದ ಅಥವಾ ಕಾರ್ಯಾಂಗ ತೀರ್ಮಾನಗಳಿಂದ ಕರಾರಿನ ನೆರವೇರಿಕೆಗೆ ಅಡ್ಡಿ ಉಂಟಾಗಬಹುದು. ಮಾರಾಟದ ಕರಾರಿನ ವಸ್ತು ವಿಷಯವಾಗಿರ

ಬಹುದಾದಂತಹ ಸ್ವತ್ತಿನ ಸ್ವಾಧೀನ ಸಂದರ್ಭದಲ್ಲಿ ಮಾತ್ರ ಇದು ನಡೆಯುತ್ತದೆ. ಕೆಲವು ವ್ಯವಹಾರಗಳನ್ನು ಬಹಿಷ್ಕರಿಸಬಹುದು ಮತ್ತು ಕರಾರಿನ ಮೇಲೆ ಅದರ ಪ್ರಭಾವವೇನೆಂದರೆ ಪಕ್ಷಗಳನ್ನು ನೆರವೇರಿಕೆಯಿಂದ ಮಾಫಿ ಮಾಡಲಾಗುತ್ತದೆ. ಉದಾಹರಣೆಗೆ : ಬೇಸಾಯದ ಭೂಮಿಯ ಮಾರಾಟವನ್ನು ಭೂ ಸುಧಾರಣಾ ಕಾನೂನು ಪರಿಣಾಮ ಬೀರಬಹುದು ಮತ್ತು ನಗರ ಭೂಮಿಯ ಮಾರಾಟದ ಮೇಲೆ ನಗರ ಭೂ ಪರಮಾವಧಿಯ ಕಾನೂನು ಪರಿಣಾಮ ಬೀರಬಹುದು. ಮಾನಸಿಂಗ್ ವಿರುದ್ಧ ಕಜನ್‌ಸಿಂಗ್ (Man Singh Vs. Khazan Singh AIR 1961 Raj 277) ನಲ್ಲಿ ಮರಗಳ ಮಾರಾಟದ ಕರಾರು; ಸರ್ಕಾರಿ ಮರಗಳ ಉರುಳಿಸುವಿಕೆಯನ್ನು ನಿಷೇಧಿಸಿದಾಗ, ಕರಾರು ವಿಫಲ ಹೊಂದಿತು. ಭೂತಲಿಂಗ ಏಜೆನ್ಸೀಸ್ ವಿರುದ್ಧ ವಿ. ಟಿ. ಸಿ. ಪೆರಿಯಾಸ್ವಾಮಿ ನಾಡಾರ್ (Boothalinga Agencies Vs. V. T. C. Peria Swamy Nadar AIR 1969 SC 110) ನಲ್ಲಿ ಆಮದು ಮಾಡಿಕೊಂಡ ಚಿಕೋರಿ ಮಾರಾಟವನ್ನು ವಿಫಲ ಎಂದು ಸರ್ವೋಚ್ಚ ನ್ಯಾಯಾಲಯವು ನಿರ್ಧರಿಸಿತು. ಏಕೆಂದರೆ ಸರ್ಕಾರವು ಆಮದು ಮಾಡಿಕೊಂಡ ಸರಕುಗಳ ಮಾರಾಟವನ್ನು ಸರಕು ಪಡೆಯುವುದಕ್ಕೆ ಮುಂಚೆಯೇ ಬಹಿಷ್ಕರಿಸಿತ್ತು.

ಇ) ಯುದ್ಧದ ಮಧ್ಯ ಪ್ರವೇಶ :

ಸಾರ್ವಜನಿಕ ನೀತಿಯ ಪ್ರಶ್ನೆಯೊಂದೇ ಅಲ್ಲದೆ ಎರಡು ದೇಶಗಳ ನಡುವೆ ಯುದ್ಧದ ಘೋಷಣೆ ಪರಿಣಾಮವಾಗಿ ಕರಾರು ಮಾಡಿಕೊಂಡಿರುವ ಸರಕುಗಳ ವರ್ಗಾವಣೆಗೆ ಮತ್ತು ಆ ಸರಕಿನ ಸರಬರಾಜಿನ ವಿಷಯದಲ್ಲಿ ತೊಂದರೆ ಉಂಟಾಗಬಹುದು. ಸಾಮಾನ್ಯವಾಗಿ ಇಂತಹಾ ಸನ್ನಿವೇಶಗಳನ್ನು ಪಕ್ಷಗಳು ವ್ಯವಹಾರ ಮಾಡಿಕೊಳ್ಳುವಾಗ ನಿರೀಕ್ಷಿಸಿರುವುದಿಲ್ಲ.

ಎಫ್) ಒಬ್ಬ ಪಕ್ಷಕಾರನ ಮರಣ ಅಥವಾ ಅಸಮರ್ಥತೆ :

ನಾವು ಮೇಲೆ ವೀಕ್ಷಿಸಿದಂತೆ ಕರಾರನ್ನು ಒಂದು ಪಕ್ಷವು ವೈಯಕ್ತಿಕವಾಗಿ ನೆರವೇರಿಸಬೇಕಾಗಿದ್ದರೆ, ಆ ಪಕ್ಷದ ಮರಣ ಅಥವಾ ಅಸಮರ್ಥತೆಯ ಆಧಾರದ ಮೇಲೆ ಕಾನೂನು ವಿಫಲತೆ ಎಂದು ಆ ಕರಾರಿನ ನೆರವೇರಿಕೆಯನ್ನು ಬಿಟ್ಟುಬಿಡ ಬಹುದು.

ವಿಫಲತಾ ಸಿದ್ಧಾಂತದ ಅನ್ವಯಿಕೆಯು ಅದನ್ನು ಸ್ಥಿರ ಸ್ವತ್ತಿನ ಬಾಡಿಗೆಯ ಸಂಬಂಧದಲ್ಲಿ ಬಳಸಲು ಬಯಸಿದಾಗ ಪರಿಮಿತಿ ಹೊಂದುತ್ತದೆ. ಸರ್ವೋಚ್ಚ ನ್ಯಾಯಾಲಯವು ಧ್ರುವ ದೇವ್ ಚಂದ್ ವಿರುದ್ಧ ರಾಜ ಹರ್ಮೊಹಿಂದರ್ ಸಿಂಗ್ (Raja Dhruv Dev Chand Vs. Raja Harmohinder Singh and another, AIR (1968) SC 1024) ನಲ್ಲಿ ಕರಾರು ಕಾಯಿದೆಯ ವರ್ಗ ೫೬ ವಿಫಲತೆಯ ವಿಷಯದಲ್ಲಿ

ವಹಿವಾಟು ಮಾಡುತ್ತಿದ್ದು, ಗೇಣಿಯ ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ ಎಂದು ತೀರ್ಮಾನಿಸಿದ್ದನ್ನು ನಾವು ಗಮನಿಸಬಹುದು. ಸುಶೀಲಾ ದೇವಿ ವಿರುದ್ಧ ಹರಿಸಿಂಗ್ (Sushila Devi Vs. Hari Singh AIR (1971) SC 1956) ನಲ್ಲಿ ಬರಹ ಅಥವಾ ನೋಂದಾಯಿತವಿಲ್ಲದೆ ಬರೀ ಒಂದು ಒಪ್ಪಂದ ಮಾತ್ರವೇ ಇದ್ದರೆ, ವಿಫಲತಾ ಸಿದ್ಧಾಂತಕ್ಕೆ ಮೊರೆಹೋಗಬಹುದು ಎಂದು ಅಭಿಪ್ರಾಯಪಟ್ಟಿದೆ.

ಕರಾರಿನ ವಿಫಲತೆಯ ಮೇಲೆ ಹಕ್ಕುಗಳ ಹೊಂದಾಣಿಕೆಯನ್ನು ಕರಾರು ಕಾಯಿದೆಯ ವರ್ಗ ೬೫ ಆವರಿಸಿದೆ. ಏಕೆಂದರೆ ಯಾವಾಗಲೂ ಪ್ರಯೋಜನ ಪಡೆದುಕೊಂಡದ್ದನ್ನು ವಾಪಸು ಮಾಡಬೇಕು.

೪. ಒಪ್ಪಂದದಿಂದ ವಿಮೋಚನೆ :

ಒಂದು ಕರಾರನ್ನು ಮಾರ್ಪಾಟು ಮಾಡಬಹುದು. ಒಂದು ಪಕ್ಷವು ಅಸ್ತಿತ್ವದಲ್ಲಿರುವ ಕರಾರನ್ನು ಬದಲಿಸಿ ಹೊಸ ಕರಾರನ್ನು ಮಾಡಿಕೊಳ್ಳಬಹುದು. ಇದನ್ನು ನವೀಕರಣ ಎಂದು ಕರೆಯುತ್ತಾರೆ. ಇದು ಪಕ್ಷಗಳ ಬದಲಾವಣೆಯನ್ನು ಒಳಗೊಂಡಿರಬಹುದು ಮತ್ತು ವಾಗ್ದಾನಕಾರನ ಸಮ್ಮತಿಯಿಂದ ಬದಲಾವಣೆ ಮಾಡಬಹುದು. ಇದು ಕರಾರಿನ ನಮೂನೆಯ ಬದಲಾವಣೆಯನ್ನು ಒಳಗೊಂಡಿರಬಹುದು. ಅಂದರೆ ಅಡಮಾನವು ಪ್ರೋನೋಟಾಗಿ ಅಥವಾ ಬಂಧ ಪತ್ರ ಅಥವಾ ಒಂದು ಸಾಲವು ಸ್ವತ್ತಿನ ಮಾರಾಟ ಮಾಡಿದ ಹಾಗೆ ಬದಲಾವಣೆ ಹೊಂದಬಹುದು.

ವರ್ಗ ೬೩ ರಲ್ಲಿ ಪಕ್ಷಕ್ಕೆ ನೆರವೇರಿಕೆಯನ್ನು ನಡೆಸಲು ಅಥವಾ ನೆರವೇರಿಕೆಗೆ ಬದಲಾಗಿ ಬೇರೆ ಏನನ್ನಾದರೂ ಅಂಗೀಕರಿಸಲು ಅವಕಾಶ ಕೊಟ್ಟಿದೆ. ಇದಾದ ನಂತರ ಅವನು ಕರಾರನ್ನು ಪೂರ್ತಿಗೊಳಿಸಲಿಲ್ಲ ಎಂದು ದೂರು ಮಾಡಬಾರದು. ಕಪೂರ್‌ಚಂದರ್ ವಿರುದ್ಧ ಮೀರ್ ನವಾಬ್ (Kapur Chand Godha Vs. Mir Nawab Himayat Ali Khan Azanjah AIR 1963 SC 250) ಪ್ರಕರಣದಲ್ಲಿ ಹೈದರಾಬಾದ್ ಸರ್ಕಾರವು ವಾದಿಗಳಿಗೆ ೨೭ ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಸರ್ಕಾರ ಬದಲಾದ ನಂತರ, ಲೇಣೇದಾರ (Creditor)(ಸಾಲಿಗ)ನಿಗೆ ೨೦ ಲಕ್ಷವನ್ನು ಒಂದು ಸಾಲವನ್ನು ತೀರಿಸಲು ನೇಮಿಸಿದ ಕಮೀಟಿಯ ಮೂಲಕ ನೀಡಲಾಯಿತು. ಆ ಸಾಲವನ್ನು ಲೇಣೇದಾರನು ಅಂಗೀಕಾರ ಮಾಡಿದನು. ಲೇಣೇದಾರನು ನಂತರ ದಾವೆ ಹೂಡಿದನು; ಆದರೆ ಸರ್ವೋಚ್ಚ ನ್ಯಾಯಾಲಯವು ೨೦ ಲಕ್ಷ ರೂಪಾಯಿಯ ಅಂಗೀಕಾರವು, (ವರ್ಗ ೬೩ ರಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ.) ಲೇಣೇದಾರನು ಪೂರ್ಣ ಸಮಾಧಾನದಿಂದ ಹಣವನ್ನು ಸ್ವೀಕರಿಸಿದ್ದು, ಅವನಿಗೆ ದಾವೆ ಹೂಡಲು ಸಾಮರ್ಥ್ಯವಿಲ್ಲವೆಂದಿತು. ನ್ಯಾಯಾಲಯವು ವರ್ಗ ೪೧ ನ್ನೂ ಅವಲಂಬಿಸಿ ಅದರ ಪ್ರಕಾರ ವಾಗ್ದಾನ ಪಡೆದನು. ಮೂರನೇ ಪಕ್ಷದಿಂದ

ನೆರವೇರಿಕೆಯನ್ನು ಅಂಗೀಕರಿಸಿದ ನಂತರ ವಾಗ್ದಾನಕಾರನ ವಿರುದ್ಧ ದಾವೆ ಹೂಡಲು ಅರ್ಹತೆ ಹೊಂದಿರುವುದಿಲ್ಲ ಎಂದು ಹೇಳಿತು. ಒಂದು ಪಕ್ಷವು ಕರಾರಿನ ನೆರವೇರಿಕೆಯನ್ನು ಸಂಪೂರ್ಣವಾಗಿ ಅಥವಾ ಅದು ವಿಮೋಚನೆ ಹೊಂದುವುದಾರೆ ನೆರವೇರಿಕೆಯನ್ನು ಬಿಟ್ಟುಬಿಡಬಹುದು ಅಥವಾ ಅದರ ನೆರವೇರಿಕೆಯನ್ನು ಮುಂದಕ್ಕೆ ಹಾಕಬಹುದು. ಪಕ್ಷವು ತನ್ನ ಸ್ವಂತ ಪ್ರಯೋಜನಕ್ಕೋಸ್ಕರ ಸಮಯವನ್ನು ಏಕಪಕ್ಷೀಯವಾಗಿ ವಿಸ್ತರಿಸಲಾಗುವುದಿಲ್ಲ. ಇನ್ನೊಂದು ಪಕ್ಷವು ನೆರವೇರಿಕೆ ಸಮಯ ಮುಂದಕ್ಕೆ ಹಾಕುವುದರಿಂದ ಬಾಧಿತಗೊಂಡರೆ ಆ ಪಕ್ಷದ ಸಮ್ಮತಿಯು ಅತ್ಯಾವಶ್ಯಕ ಎಂದು ಕೇಶವಲಾಲ್ ಪಟೇಲ್ ವಿರುದ್ಧ ಲಾಲ್‌ಭಾಯಿ (Keshavalal Lallubhai Patel Vs. Lalbhai Trikumalal Mills AIR 1958 SC 512) ನಲ್ಲಿ ಸರ್ವೋಚ್ಛ ನ್ಯಾಯಾಲಯ ನಿರ್ಧರಿಸಿತು.

ನವೀಕರಣ ಎಂಬ ಪರಿಕಲ್ಪನೆಯು ಏನೆಂದರೆ, ಅದರಲ್ಲಿ ಹೊಣೆಗಾರಿಕೆಗೆ ಹೊಸ ರೂಪವನ್ನು ಕೊಡಲಾಗಿದೆ. ಆದರೆ ಮೂಲ ಕರಾರನ್ನು ಉಲ್ಲಂಘನೆ ಮಾಡಿದ ಮೇಲೆ ಪಕ್ಷವು ಮಾಮೂಲಿ ಕಾನೂನು ಪರಿಹಾರೋಪಾಯದ ಬದಲಾಗಿ ಕರಾರು ಮೊತ್ತಕ್ಕಿಂತ ಕಡಿಮೆಯನ್ನು ಅಂಗೀಕರಿಸಬೇಕಾಗುತ್ತದೆ ಮತ್ತು ಇದನ್ನು ಒಡಂಬಡಿಕೆ ಮತ್ತು ಸಮಾಧಾನ ಪರಿಕಲ್ಪನೆ ಎಂದು ಕರೆಯಲಾಗಿದೆ. (Concept of Accord and Satisfaction). ಬದಲಿ ನೆರವೇರಿಕೆಯನ್ನು ಅಂಗೀಕಾರ ಮಾಡುವುದರಿಂದ ಸಂಪೂರ್ಣವಾಗಿ ಅವನು ತನ್ನ ಹಕ್ಕುಗಳ ಪರಿತ್ಯಾಗ ಅಥವಾ ವಿಸರ್ಜನೆ ಮಾಡಿದಂತಾಗುತ್ತದೆ ಮತ್ತು ಮುಂಚಿನ ಹಕ್ಕುಗಳು ಅಂತ್ಯಗೊಳ್ಳುತ್ತವೆ. ಆದರೆ ಹೊಸ ಕರಾರು ನೋಂದಣಿಯ ಅಭಾವದಿಂದ ಜಾರಿಗೊಳಿಸಲಾಗದಿದ್ದರೆ ಮೂಲ ಹಕ್ಕು ಜಾರಿಗೊಳಿಸಬೇಕು. ಯೂನಿಯನ್ ಬ್ಯಾಂಕ ಆಫ್ ಇಂಡಿಯಾ ವಿರುದ್ಧ ಕಿಶೋರೀಲಾಲ್ ಗುಪ್ತ (Union Bank of India Vs. Kishori Lal Gupta & Bros AIR 1953 cal 642) ನೋಡಿ.

ಒಂದು ಕರಾರು ಬರಹದಲ್ಲಿದ್ದಾಗ ಅದನ್ನು ಅಮೂಲ್ಯ (Sacro Sanct) ಎಂದು ಪರಿಗಣಿಸಲಾಗುತ್ತದೆ ಮತ್ತು ಆ ಕರಾರನ್ನು 'ಏಕಪಕ್ಷೀಯವಾಗಿ ಬದಲಾಯಿಸಿ ಕೆಡಿಸಿದರೆ ದಸ್ತಾವೇಜನ್ನು ರದ್ದುಮಾಡಿದಂತೆ' ಎಂದು ತಿಳಿಯ ಬಹುದು. ಮುಖ್ಯ ಬದಲಾವಣೆಯು ಏನೆಂದರೆ ಹಕ್ಕುಗಳು, ಹೊಣೆಗಾರಿಕೆಗಳು ಅಥವಾ ಪಕ್ಷಗಳ ಕಾನೂನು ಸಮ್ಮತ, ಅಂತಸ್ತನ್ನು ಮಾರ್ಪಾಟು ಮಾಡುವುದು. ಇದನ್ನು ಪ್ರೀವೀ ಕೌನ್ಸಿಲ್ ನಾತೂಲಾಲ್ ವಿರುದ್ಧ ಗೊಮ್ತಿಕೌರ್ (Nathulal Vs. Gomtikaur (1940) 67 IA 318 PC) ನಲ್ಲಿ ಗಮನಿಸಿದೆ.

೫. **ಉಲ್ಲಂಘನೆಯಿಂದ ವಿಮೋಚನೆ :**

ಒಂದು ಪಕ್ಷವು ತನ್ನ ಯಾವುದೇ ಕಾರ್ಯ ಅಥವಾ ನಡತೆಯಿಂದ, ಕರಾರಿನಲ್ಲಿ ಕರ್ತವ್ಯವನ್ನು ನೆರವೇರಿಸಲು ಅಸಾಧ್ಯವಾದರೆ ಅಥವಾ ಅವನ ನಿರಾಕರಣೆಯಿಂದ ಕರಾರು ನೆರವೇರದಿದ್ದರೆ ಕರಾರಿನ ಉಲ್ಲಂಘನೆಯಾಗುತ್ತದೆ. ಇದರಿಂದ ಇನ್ನೊಂದು ಪಕ್ಷವು ತನ್ನ ಪಾಲಿನ ನಿಬಂಧನೆಗಳ ನೆರವೇರಿಕೆಯಿಂದ ಮಾಫಿ ಹೊಂದುತ್ತದೆ. ಇದರಿಂದ ಬಾಧಿತ ಪಕ್ಷ ಅಥವಾ ನಷ್ಟ ಹೊಂದಿದವನು ಅವನ ಆಯ್ಕೆಯಂತೆ, ದಾವೆ ಹೂಡಲು ಹಕ್ಕುಳ್ಳವನಾಗಿರುತ್ತಾನೆ. ಅವನು ನೆರವೇರಿಕೆಗೆ ಗೊತ್ತುಪಡಿಸಿದ ಸಮಯದವರೆಗೆ ಕಾಯಬಹುದು ಅಥವಾ ನಿರಾಕರಣೆಯಾದ ಕೂಡಲೇ ದಾವೆ ಹೂಡಬಹುದು. ಒಬ್ಬ ಮನುಷ್ಯನು ಆರು ತಿಂಗಳೊಳಗೆ ತನ್ನ ಸ್ವತ್ತನ್ನು ಮಾರಲು ಒಪ್ಪಿದ್ದರೆ ಮತ್ತು ಈ ಒಪ್ಪಂದವಾದ ಒಂದು ತಿಂಗಳೊಳಗೆ ಅದನ್ನು ಮಾರಲು ನಿರಾಕರಿಸಿದರೆ ಅಥವಾ ಬೇರೆಯವರಿಗೆ ಮಾರಾಟ ಮಾಡಿದರೆ, ಇಂತಹ ಸನ್ನಿವೇಶವನ್ನು ಸಾಮಾನ್ಯವಾಗಿ **ನಿರೀಕ್ಷಿತ ಉಲ್ಲಂಘನೆ** (Anticipatory breach) ಎಂದು ಕರೆಯಲಾಗಿದೆ. ಇದರಿಂದ ಪ್ರತಿವಾದಿಗೆ ಅವನ ಕರ್ತವ್ಯ ಎಂದರೆ ಹಣವನ್ನು ಕೊಡುವ ಶಕ್ತಿ ಅಥವಾ ಸಿದ್ಧತೆ ತೋರಿಸಬೇಕಾಗಿಲ್ಲ. ಇದರಿಂದ ಕೆಲವು ಆಕಸ್ಮಿಕ ತೊಂದರೆಗಳು ಉಂಟಾಗಬಹುದು. ಬಾಧಿತ ಪಕ್ಷವು ನಿರಾಕರಣೆಯ ಮೇಲೆ ಕೂಡಲೇ ಕೆಲಸ ಮಾಡದಿದ್ದರೆ ಮತ್ತು ಕರಾರನ್ನು ಜೀವಂತವಾಗಿಟ್ಟುಕೊಂಡಿದ್ದರೆ, ನಿರಾಕರಣೆ ಮಾಡಿದ ಪಕ್ಷದ ಕರ್ತವ್ಯ ನೆರವೇರಿಕೆಗೆ ಪ್ರಸ್ತಾಪ ಮಾಡಲು ಇನ್ನೂ ಅವಕಾಶ ಬರುತ್ತದೆ. ಕರಾರು ತೆರವಾಗಿದ್ದರೆ ಅದು ಬೇರೆ ಕಾರಣದಿಂದ ವಿಫಲತೆ ಹೊಂದಬಹುದು ಅಥವಾ ಯಾವುದಾದರೂ ಘಟನೆಯು ಕರಾರನ್ನು ವಿಮೋಚನೆಗೊಳಿಸಿದರೆ, ಮೊದಲು ನಿರಾಕರಣೆ ಮಾಡಿದ ಪಕ್ಷವು ಅದರ ಫಲವನ್ನು ಪಡೆಯಬಹುದು. ಏಕೆಂದರೆ ಇನ್ನೊಂದು ಪಕ್ಷವು ನಿರಾಕರಣೆಯ ಮೇರೆಗೆ ಕಾರ್ಯ ನಿರ್ವಹಿಸದೆ ಇದ್ದುದರಿಂದ ಮತ್ತು ಕರಾರನ್ನು ಜೀವಂತವಾಗಿಟ್ಟಿದ್ದರಿಂದ ನಿರಾಕರಣೆ ಮಾಡಿದ ಪಕ್ಷಕ್ಕೆ ಅನುಕೂಲವಾಗುತ್ತದೆ.

ಇಂಗ್ಲೀಷ್ ಕಾನೂನಿನ ಒಂದು ತೀರ್ಪಿನ ಪ್ರಕರಣವು ಅವೆರಿ ವಿರುದ್ಧ ಬೌಡೆನ್ (Avery Vs. Bowden 119 ER 647) ಇದರಲ್ಲಿ ಇದ್ದ ಕರಾರು ಹಡಗಿನಿಂದ ಸರಕು ಸಾಗಣಿಕೆಗೆ ಸಂಬಂಧಪಟ್ಟಿತ್ತು. ವಾದಿಯು ನಿಗದಿತ ದಿನಾಂಕದಂದು ಬಂದು ತಾನು ಸರಕು ಸಾಗಾಣಿಕೆಗೆ ಸಿದ್ಧವಾಗಿರುವುದನ್ನು ವ್ಯಕ್ತಪಡಿಸಿದಾಗ ಪ್ರತಿವಾದಿಯು ತನ್ನ ಬಳಿ ಸರಕುಗಳಿಲ್ಲ ಎಂದು ಹೇಳಿದನು. ಅದರ ಪರಿಣಾಮ ಕರಾರಿನ ಉಲ್ಲಂಘನೆ. ವಾದಿಯು ಸರಕು ಸಿಗಬಹುದೆಂಬ ಆಸೆಯಿಂದ ಅಲ್ಲೇ ಕಾಯುತ್ತಿದ್ದನು ಮತ್ತು ಕರಾರನ್ನು ಅಂತ್ಯಗೊಳಿಸಲಿಲ್ಲ. ಆದರೆ ಮುಕ್ತಾಯದ ಅವಧಿಯೊಳಗೆ ಯುದ್ಧವು ಪ್ರಾರಂಭವಾಯಿತು, ಕರಾರು ನೆರವೇರಿಕೆಯು ಕಾನೂನು ಬಾಹಿರ ಮತ್ತು

ಅಸಾಧ್ಯವಾಯಿತು. ವಾದಿಯು ಕರಾರು ಉಲ್ಲಂಘನೆಗಾಗಿ ದಾವೆಯನ್ನು ದಾಖಲು ಮಾಡಿದಾಗ ನ್ಯಾಯಾಲಯವು ವಾದಿಯ ನಿರಾಕರಣೆಯನ್ನು ಗಣನೆಗೆ ತೆಗೆದುಕೊಳ್ಳದ್ದರಿಂದ ಉಲ್ಲಂಘನೆ ಉಂಟಾಗಲಿಲ್ಲ. ಅಂದರೆ, ಆ ಕರಾರು ವಿಫಲ ಗೊಂಡಿದೆ ಎಂದು ಹೇಳಿತು.

ಒಂದು ಕುತೂಹಲಕಾರಿಯಾದ ಕಾನೂನಿನ ಪ್ರಸ್ತಾಪವು ಯಾವುದೆಂದರೆ ಸಮಯದ ಉಲ್ಲಂಘನೆಯಿಂದ ಉಂಟಾದ ಹಾನಿಯನ್ನು ನಿರ್ಧರಿಸುವಾಗ ಯಾವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು. ನಿರೀಕ್ಷಿತ ಉಲ್ಲಂಘನೆಯನ್ನು ಅಂಗೀಕರಿಸಿದರೆ ಆಗ ಸಂಬಂಧಪಟ್ಟ ಸಮಯದ ಪ್ರಶ್ನೆಯು ನಿರಾಕರಣೆಯ ದಿನಾಂಕವಾಗುತ್ತದೆ. ಆದರೆ ವಾಗ್ದಾನ ಪಡೆದವನು ವಾಗ್ದಾನದ ದಿನದವರೆಗೆ ಕರಾರನ್ನು ಜೀವಂತವಾಗಿಟ್ಟುಕೊಂಡಿದ್ದರೆ, ಅವನು ನಿರಾಕರಣೆಯ ತಾರೀಖಿನಲ್ಲಾದ ನಷ್ಟವನ್ನು ಕೇಳಬಹುದೇ ಅಥವಾ ಪ್ರಾರಂಭದಲ್ಲಿ ನಿಗದಿಪಡಿಸಿದ ದಿನಾಂಕದ ದರಗಳ ಮೇಲೆ ಪರಿಹಾರ ಕೇಳಬಹುದೆ ? ಇಂಗ್ಲೆಂಡಿನ ನ್ಯಾಯಾಲಯಗಳ ಅಭಿಪ್ರಾಯವೇನೆಂದರೆ, ಒಂದು ಪಕ್ಷದ ನಿರಾಕರಣೆಯಿಂದ ಕರಾರು ವಿಮೋಚನೆ ಗೊಳ್ಳುವುದಿಲ್ಲ ಮತ್ತು ಉಲ್ಲಂಘನೆಯು ಹಾನಿಯ ನೆರವೇರಿಕೆಗೆ ಗೊತ್ತುಪಡಿಸಿದ ಸಮಯದಲ್ಲಿ ಆದ ನಷ್ಟವನ್ನು ನಿರ್ಧರಿಸಲಾಗುತ್ತದೆ. ವಾಗ್ದಾನ ಪಡೆದವನು ಮಾರುಕಟ್ಟೆ ದರದ ಏರಿಳಿತಗಳ ಗಂಡಾಂತರವನ್ನು ಅದೇ ಕಾಲದಲ್ಲಿ ಎದುರಿಸಬೇಕು. ಇದರಂತೆ ತೀರ್ಮಾನವಾದ ದಾವೆ ಯಾವುದೆಂದರೆ, ವೈಟ್ ಮತ್ತು ಕಾರ್ಟರ್ (ಕೌನ್ಸಿಲ್ಸ್) ಲಿಮಿಟೆಡ್ ವಿರುದ್ಧ ಮೆಕ್‌ಗ್ರೆಗಾರ್ (White and Carter (Councils) Ltd., Vs. Mc. Gregor (1962) AC 413) ನೋಡಿರಿ. ಭಾರತದ ಕರಾರು ಅಧಿನಿಯಮದ ವರ್ಗ ೩೯ ರಲ್ಲಿ ಹೀಗೆ ಹೇಳಿದೆ :

''ಕರಾರಿನ ಒಂದು ಪಕ್ಷವು ನೆರವೇರಿಕೆಯನ್ನು ನಿರಾಕರಿಸಿದರೆ ಅಥವಾ ಅವನ ವಾಗ್ದಾನ ಸಂಪೂರ್ಣವಾಗಿ ನೆರವೇರಿಸಲು ಅಸಮರ್ಥತೆ ಹೊಂದಿದರೆ, ವಾಗ್ದಾನ ಪಡೆದವನು ಮಾತಿನಿಂದಾಗಲೀ ಅಥವಾ ನಡುವಳಿಕೆಯಿಂದಾಗಲೀ ಕರಾರಿನ ಮುಂದುವರಿಕೆಯಲ್ಲಿ ತನ್ನ ಮೌನ ಸಮ್ಮತಿಯನ್ನು ತಿಳಿಸದೆ ಇದ್ದರೆ ಕರಾರನ್ನು ಕೂಡಲೇ ಕೊನೆಗಾಣಿಸಬಹುದು. ಆಗ ಇನ್ನೊಂದು ಪಕ್ಷದ ಕರ್ತವ್ಯಗಳ ವಿಮೋಚನೆಯಾಗುತ್ತದೆ''.

****

ಭಾಗ - ೧೮

ಕರಾರು ಉಲ್ಲಂಘನೆಗೆ ಪರಿಹಾರಗಳು

ಅ) ನಿರ್ದಿಷ್ಟ ಪಾಲನೆ :

ಒಂದು ಪಕ್ಷವು ಕರಾರಿನ ನಿಬಂಧನೆಗಳ ನಿರ್ದಿಷ್ಟ ಪ್ರವರ್ತನೆಗೆ ಹಕ್ಕುಳ್ಳದ್ದಾಗಿದ್ದರೂ ನ್ಯಾಯಾಲಯವು ಅದರ ಪಾಲನೆಗೆ ಅವಕಾಶ ಕೊಡುವ ಅಥವಾ ಕೊಡದೇ ಇರುವ ಸ್ವಾತಂತ್ರ್ಯ ಹೊಂದಿದೆ. ಈ ಸ್ವಾತಂತ್ರ್ಯವನ್ನು ನ್ಯಾಯಿಕ ಸ್ವಾತಂತ್ರ್ಯ ಎಂದು ಗಮನಿಸಬಹುದು. ಇದನ್ನು ಸಂಗತಿ ಮತ್ತು ಪರಿಸ್ಥಿತಿಗಳಿಂದ ಸಮರ್ಥಿಸಬಹುದು. ಒಬ್ಬ ವ್ಯಕ್ತಿಯು ಸ್ವತ್ತನ್ನು ಮಾರಲು ಒಪ್ಪಿಕೊಂಡರೆ ಮತ್ತು ಅದರ ಒಪ್ಪಂದವನ್ನು ಉಲ್ಲಂಘಿಸಿ, ಮೂರನೇ ಪಕ್ಷಕ್ಕೆ ಹೆಚ್ಚು ಬೆಲೆಗೆ ಮಾರಿದರೆ, ವಾಗ್ದಾನ ಪಡೆದವನು ಕರಾರಿನ ನೆರವೇರಿಕೆಗೆ ಮತ್ತು ತನಗೇ ಮಾರಬೇಕೆಂದು ಒತ್ತಾಯಪಡಿಸುವ ಹಕ್ಕುಳ್ಳವನಾಗಿರುತ್ತಾನೆ. ಖರೀದಿದಾರನ ವಿರುದ್ಧವೂ ಸಹ ಕರಾರನ್ನು ಜಾರಿಗೊಳಿಸಲು ಒತ್ತಾಯಿಸಬಹುದು. ಏಕೆಂದರೆ, ಆ ವ್ಯಕ್ತಿಯು ಮಾರಾಟಗಾರನು ಬದ್ಧನಾಗಿದ್ದ ಎಲ್ಲಾ ಬಾಧ್ಯತೆಗಳಿಗೂ ಅಧೀನನಾಗಿರುತ್ತಾನೆ. ಅಂತಹ ಸಂದರ್ಭಗಳಲ್ಲಿ ಮಾರಾಟದ ಒಪ್ಪಂದದ ಕರಾರಿನ ನೋಂದಣಿಯು ಅಗತ್ಯ. ಏಕೆಂದರೆ ಮೂರನೇ ಪಕ್ಷಕ್ಕೆ ನ್ಯಾಯಸಮ್ಮತತೆಯ ತಿಳುವಳಿಕೆಯು ಬರುವಂತೆ ಮಾಡುವುದು ಅವಶ್ಯಕವಾಗಿದೆ. ಅಂತೆಯೇ ಸ್ವತ್ತಿನ ವರ್ಗಾವಣೆ ಕಾಯಿದೆಯಲ್ಲಿ ನೋಂದಾಣಿಕೆಯೇ ಸಂಬಂಧಪಟ್ಟವರಿಗೆಲ್ಲಾ ಸೂಚನೆಯಾಗುತ್ತದೆ. ವಾಗ್ದಾನ ಪಡೆದವನು ಅಂತಹ ಸಮಯದಲ್ಲಿ ಹಾನಿಗೆ ಮಾತ್ರ ದಾವೆ ಹೂಡಬಹುದು. ಆದರೆ ನಿರ್ದಿಷ್ಟ ಪಾಲನೆಯ ನೆರವೇರಿಕೆಯನ್ನು ಜಾರಿಗೊಳಿಸಲು ಅಸಮರ್ಥನಾದರೆ ಅಥವಾ ವಿಫಲತೆ ಹೊಂದಿದರೆ ಅವನು ಹಾನಿಗಾಗಿ ಎರಡನೇ ಅಥವಾ ಬೇರೆ ದಾವೆ ಹೂಡಲು ಅವಕಾಶವಿಲ್ಲ. ಕೇವಲ ಸ್ಥಿರ ಸ್ವತ್ತುಗಳ ಮಾರಾಟದ ಒಪ್ಪಂದ ಕರಾರು ಇನ್ನೊಂದು ಪಕ್ಷಕ್ಕೆ ಹಿತಾಸಕ್ತಿಯನ್ನು ಸೃಷ್ಟಿಸುವುದಿಲ್ಲ. ಅಥವಾ ಹಿತಾಸಕ್ತಿಯನ್ನು ವರ್ಗಾವಣೆ ಮಾಡುವುದಿಲ್ಲ. ಇದರಿಂದ ಭಾರತದ ನೋಂದಣಿ ವರ್ಗ ೧೭ ರ ಪ್ರಕಾರ , ಅಂತಹ ದಸ್ತಾವೇಜನ್ನು ಕಡ್ಡಾಯವಾಗಿ ನೋಂದಾಯಿಸಬೇಕಾಗಿಲ್ಲ. ಆದರೆ ಅಂತಹ ನೋಂದಣಿಕೆಯು ಅಪೇಕ್ಷಣೀಯ. ಏಕೆಂದರೆ ನೋಂದಣಿಯು ಇತರರಿಗೆ ತಿಳುವಳಿಕೆಯಾಗಿ ಪ್ರವರ್ತಿಸುತ್ತದೆ ಎಂಬುದನ್ನು ಆಗಲೇ ನೋಡಿದ್ದೇವೆ.

ಹಾನಿ ಪರಿಹಾರದ ಸ್ವಭಾವ ಮತ್ತು ಪ್ರಮಾಣ

ಕರಾರು ಉಲ್ಲಂಘನೆಯಾದರೆ ಬಾಧಿತ ಪಕ್ಷವು ಉಲ್ಲಂಘನೆಯಿಂದುಂಟಾದ

ನಷ್ಟಹಾನಿಗೆ ಪರಿಹಾರವನ್ನು ಪಡೆಯುವ ಹಕ್ಕನ್ನು ಪಡೆದಿರುತ್ತದೆ. ಈ ನಷ್ಟ ಅಥವಾ ಹಾನಿಯನ್ನು ಪಕ್ಷಗಳಿಗೆ ಉಲ್ಲಂಘನೆಯಿಂದುಂಟಾದ ಪ್ರಮಾಣ ಅಥವಾ ಪಕ್ಷಗಳು ಮಾಡಿಕೊಂಡಿದ್ದ ಒಪ್ಪಂದದ ಮೇಲೆ ನಿರ್ಧರಿಸಲಾಗುತ್ತದೆ. ಆದುದರಿಂದ ಯಾವುದೇ ಗೊತ್ತಿಲ್ಲದ ಅಥವಾ ಅಪ್ರತ್ಯಕ್ಷ ಹಾನಿಗೆ ಪರಿಹಾರ ನೀಡಲಾಗುವುದಿಲ್ಲ (ವರ್ಗ ೧೭). ಆ ಸಂದರ್ಭದಲ್ಲಿ ಕೆಳಕಂಡ ಕಾನೂನಿನ ಸಿದ್ಧಾಂತಗಳು ಉಂಟಾಗುತ್ತವೆ.

ಅ) ಹಾನಿ ಪರಿಹಾರವನ್ನು ಕೊಡುವ ಉದ್ದೇಶವೇನೆಂದರೆ, ನಷ್ಟ ಉಂಟಾದ ಪಕ್ಷವನ್ನು ಹಣದಿಂದ ಸಹಾಯ ಮಾಡಬಹುದಾದಷ್ಟನ್ನು ಮಾಡಿ ಅವನ ಹಕ್ಕುಗಳನ್ನು ಗಮನಿಸಿ, ಅವನನ್ನು ಕರಾರು ನೆರವೇರಿಕೆಯಿಂದ ಯಾವ ಸ್ಥಿತಿಯಲ್ಲಿ ಇರುತ್ತಿದ್ದನೋ ಅದೇ ಸ್ಥಿತಿಗೇ ತರಬೇಕು ಎಂಬುದು. ಆದ್ದರಿಂದ ಇದರ ಸ್ವಭಾವ ದಂಡನೀಯವಲ್ಲ ಎಂಬುದು ಸ್ಪಷ್ಟ. ವರ್ಗ ೭೩ ಒಂದು ಮುಖ್ಯವಾದ ವಿವರಣೆಯನ್ನು ಈ ರೀತಿ ಹೇಳುತ್ತದೆ : ಅಂದರೆ ನಷ್ಟವನ್ನು ಲೆಕ್ಕ ಹಾಕುವಾಗ ಅನಾನುಕೂಲತೆಯನ್ನು ಪರಿಹಾರ ನೀಡುವಾಗ ಅಸ್ತಿತ್ವದಲ್ಲಿದ್ದ ವಿಷಯವನ್ನು ಗಣನೆಗೆ ತೆಗೆದುಕೊಳ್ಳಬೇಕು. ದಾವೆ ಹೂಡುವ ವ್ಯಕ್ತಿಗೆ ನಷ್ಟವನ್ನು ಆದಷ್ಟು ಮಟ್ಟಿಗೆ ಕನಿಷ್ಟಗೊಳಿಸುವ ಕರ್ತವ್ಯವಿದೆ.

ಆ) ಉಲ್ಲಂಘನೆ ಉಂಟಾಗಿದ್ದರೂ ಸಹ ಒಂದು ಪಕ್ಷವು ಎಲ್ಲಾ ಪರಿಣಾಮಗಳಿಗೂ, ಅವು ತರ್ಕಬದ್ಧವಾಗಿದ್ದರೂ ಸಹ ಹೊಣೆಯಲ್ಲ. ನೇರ ಸಂಬಂಧವು ಕಂಡುಬರದೇ ಇದ್ದರೆ ಹೊಣೆಯನ್ನು ವ್ಯಾಪ್ತಿಗೊಳಿಸಲಾಗುವುದಿಲ್ಲ. ಇದರ ದೃಷ್ಟಾಂತ ಪ್ರಕರಣವು ಹಾಡ್ಲೀ ವಿರುದ್ಧ ಬಾಕ್ಸಂಡೇಲ್ (Hadley Vs. Baxendale (1854) 9 Exch. 341). ಇದರಲ್ಲಿ ಯಂತ್ರಸಾಮಗ್ರಿಯ ಒಂದು ಭಾಗ ಪ್ರತಿವಾದಿಗೆ ಒಪ್ಪಿಸಲಾಗಿತ್ತು. ಅವನು ಅದನ್ನು ಬೇರೆ ತಯಾರಕರ ಹತ್ತಿರ ತೆಗೆದುಕೊಂಡು ಹೋಗಿ ಅದೇ ಮಾದರಿಯ ಇನ್ನೊಂದು ಹೊಸ ಭಾಗವನ್ನು ತಯಾರಿಸಬೇಕಾಗಿತ್ತು. ವಾದಿಯು ಕೆಲಸವು ತ್ವರಿತವೆಂದು ಹೇಳಿದ್ದರೂ ಸಹ ವಾಹನದ ವಿಳಂಬದಿಂದ ಅದರ ಸಾರಿಗೆ ಮತ್ತು ಒಪ್ಪಿಸುವಿಕೆಯು ನಿಧಾನವಾಯಿತು. ಅಂದರೆ ಪ್ರತಿವಾದಿಯಿಂದ ವಿಳಂಬವಾಯಿತು ಮತ್ತು ವಾದಿಯ ಕಾರ್ಖಾನೆಯು ಕೆಲಸವಿಲ್ಲದೆ ಇರಬೇಕಾಯಿತು. ಪ್ರತಿವಾದಿಯು ಸರಿಯಾಗಿ ನಡೆದುಕೊಂಡಿದ್ದರೆ ಕಾರ್ಖಾನೆಗಳಿಸಬಹುದಾಗಿದ್ದಂತಹ ಲಾಭವು ಬರದೆ ಇದ್ದುದರಿಂದ ವಾದಿಯು ಅವನ ಮೇಲೆ ದಾವೆ ಹೂಡಿದನು. ಇದರಲ್ಲಿ ರೂಪಿತಗೊಂಡ ತತ್ವವೇನೆಂದರೆ ಪಕ್ಷಗಳು ತಮ್ಮ ಯೋಗ್ಯತೆಗೆ ಮೀರದ ಮೊದಲೇ ಊಹಿಸಬಹುದಾದ ಎಲ್ಲಾ ಪರಿಣಾಮಗಳಿಗೆ ಮಾತ್ರ ಹೊಣೆಯಾಗಿವೆ. ಸ್ವಾಭಾವಿಕವಾಗಿ ಉಂಟಾಗುವ ತಮ್ಮ ಅಂದಾಜಿಗೆ ಒಳಪಟ್ಟ ಎಲ್ಲಾ ಸಾಮಾನ್ಯ ಹಾನಿಗೂ ನಷ್ಟ ಪರಿಹಾರವನ್ನು ಪಕ್ಷವು ಭರ್ತಿ ಮಾಡಬೇಕಾಗುತ್ತದೆ. ಪಕ್ಷದ

ತಿಳುವಳಿಕೆಗೆ ಬರದ ಅಸಾಮಾನ್ಯ ಪರಿಸ್ಥಿತಿ ಗಳಿದ್ದರೆ ವಿಶೇಷ ನಷ್ಟಕ್ಕೋಸ್ಕರ ವಿಶೇಷ ಹಾನಿ ಪರಿಹಾರ ಕೊಡಲಾಗುವುದಿಲ್ಲ. ಇದಕ್ಕೆ ಕಾರಣ, ಪಕ್ಷಗಳು ವಿಶೇಷ ನಷ್ಟ ಕೊಡಬೇಕೆಂಬ ಆಲೋಚನೆಯಲ್ಲಿ ಕರಾರು ಮಾಡಿಕೊಂಡಿರುವುದಿಲ್ಲ. ಆದ್ದರಿಂದ ವಿಶೇಷ ಹಾನಿಯ ಕೋರಿಕೆಯನ್ನು ನ್ಯಾಯಾಲಯವು ಪುರಸ್ಕರಿಸಲಿಲ್ಲ. ವಿಕ್ಟೋರಿಯಾ ಲಾಂಡ್ರಿ (ವಿಂಡ್ಸರ್)ಲಿಮಿಟೆಡ್ ಮತ್ತು ನ್ಯೂಮನ್ ಇಂಡಸ್ಟ್ರೀಸ್ ಲಿಮಿಟೆಡ್ (Victoria Laundry Windsor Ltd., Vs. Newman Industries Ltd., (1949)2 KB 528) ಮತ್ತು ಹೌಸ್ ಆಫ್ ಲಾರ್ಡ್ಸನ ಕೌಫಾಸ್ ವಿರುದ್ಧ ಅರ್ನಿಕೋವ್ ಲಿಮಿಟೆಡ್ (Koufas Vs. Oarnikow Ltd., (The Heron II) (1969) 1 AC 350) ಮೊಕದ್ದಮೆಗಳಲ್ಲೂ ಇದೇ ತತ್ವವನ್ನು ಬಳಸಲಾಯಿತು.

ಒಬ್ಬ ವ್ಯಕ್ತಿಯು ತನ್ನ ಸ್ಕೂಟರನ್ನು ಒಂದು ಟಯರಿನ ರಿಪೇರಿ ಮಾಡುವುದಕ್ಕಾಗಿ ನಿಗದಿತ ಸಮಯದೊಳಗೆ ಮಾಡಿಸಿಕೊಡಲು ಇನ್ನೊಬ್ಬನಿಗೆ ವಹಿಸಿ ಕೊಟ್ಟಿರಬಹುದು. ಅವನು ಅದರಲ್ಲಿ ಮದ್ರಾಸಿಗೆ ಒಂದು ಸಂದರ್ಶನಕ್ಕಾಗಿ ಪ್ರಯಾಣ ಮಾಡುವ ಆಶೆ ಇಟ್ಟುಕೊಂಡಿರಬಹುದು. ಆದರೆ ತನ್ನ ಗಾಡಿ ಸಿಗದ ಕಾರಣ ಒಂದು ಟ್ಯಾಕ್ಸಿಯನ್ನು ಬಾಡಿಗೆಗೆ ತೆಗೆದುಕೊಂಡು ಮದ್ರಾಸಿಗೆ ಹೋಗಿ ನಂತರ ಅವನು ಸ್ಕೂಟರ್ ದುರಸ್ತಿ ಮಾಡುವವನ ಮೇಲೆ ಟ್ಯಾಕ್ಸಿಯ ಬಾಡಿಗೆ ಖರ್ಚನ್ನು ಹೊರಿಸಲು ಪ್ರಯತ್ನಿಸಿದರೆ ಅದು ಫಲಿಸುವುದಿಲ್ಲ. ಆದರೆ ಅವನು ಇನ್ನೊಂದು ಪಕ್ಷದವನ ಗಮನವನ್ನು ನಿರ್ದಿಷ್ಟವಾಗಿ ಸೆಳೆದಿದ್ದರೆ, ಅಂದರೆ ಅವನಿಗೆ ತಾನು ಮದರಾಸಿಗೆ ಹೋಗುವ ಮೊದಲೇ ಸ್ಕೂಟರಬೇಕು, ಇಲ್ಲದಿದ್ದರೆ ಮದರಾಸಿಗೆ ಹೋಗಿ ಬರುವ ಖರ್ಚು ನೀನೇ ಕೊಡಬೇಕು ಎಂದು ಹೇಳಿದ್ದರೆ, ಆಗ ಖರ್ಚನ್ನು ಹೊರಿಸಬಹುದು. ಅದು ಕರಾರಿನ ಭಾಗವಾದ ಹೊರತು ಪಕ್ಷಗಳ ಆಲೋಚನೆಯಲ್ಲಿ ಅದು ಇಲ್ಲದೇ ಇದ್ದುದರಿಂದ ಆ ರೀತಿ ಮಾಡಲಾಗುವುದಿಲ್ಲ. ಕೆಲವು ಪ್ರಖ್ಯಾತ ಮೊಕದ್ದಮೆಗಳನ್ನು ಈ ಸಂಬಂಧದಲ್ಲಿ ಗಮನಿಸಬಹುದು. ಮದ್ರಾಸ್ ರೈಲ್ವೇ ಕಂಪನಿ ವಿರುದ್ಧ ಗೋವಿಂದಾರಾಂ (Madras Railway Co., Vs. Govinda Ram (1898) 21 Mad 172) ಒಂದು ರೈಲ್ವೇ ಕಂಪನಿಯು ಒಬ್ಬ ದರ್ಜಿಗೆ ಹೊಲಿಗೆ ಯಂತ್ರ ಮತ್ತು ಹಬ್ಬದ ಕಾಲಕ್ಕೆ ಹೊಲಿಯಲು ಕೆಲವು ಬಟ್ಟೆಗಳನ್ನು ಒಂದು ಜಾಗಕ್ಕೆ ಕಳುಹಿಸಬೇಕಾಗಿತ್ತು. ರೈಲ್ವೇ ಕಂಪನಿಯು ಹೊಲಿಗೆ ಯಂತ್ರ ಮತ್ತು ಬಟ್ಟೆಯನ್ನು ಸರಿಯಾದ ಸಮಯಕ್ಕೆ ಸಾಗಿಸಲು ಸಾಧ್ಯವಾಗಲಿಲ್ಲ: ಅದರಿಂದ ದರ್ಜಿಗೆ ನಷ್ಟವಾಯಿತು. ಆದರೂ ಸಹ ದರ್ಜಿಯು ತನ್ನ "ನಿರೀಕ್ಷಿತ ಲಾಭವನ್ನು" ಕೇಳಲು ಅವಕಾಶ ಕೊಡಲಿಲ್ಲ. ಅದೇ ಪ್ರಕಾರ ಪಟಾಕಿಗಳನ್ನು ಸಾಗಿಸುವುದಕ್ಕೆ ವಿಳಂಬ ವಾದುದರಿಂದ ಉಂಟಾದ ನಷ್ಟಕ್ಕೆ ರೈಲ್ವೇ ಕಂಪನಿಯನ್ನು ಗುರಿ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಫಜಲ್ ಇಲಾಹಿ ವಿರುದ್ಧ ಈಸ್ಟ್ ಇಂಡಿಯನ್

ರೈಲ್ವೇ ಕಂಪನಿ (Fazal Illahi Vs. East Indian Railway Co., (1922) ILR 43 All 623) ಈ ಮೊಕದ್ದಮೆಯೂ ಒಂದು ಉದಾಹರಣೆಯಾಗಿದೆ.

ಹಾನಿ ಪರಿಹಾರಗಳ ಪ್ರಮಾಣ

ಹಲವಾರು ಸಂದರ್ಭಗಳಲ್ಲಿ ಕರಾರು ಉಲ್ಲಂಘನೆಯಾಗಿದ್ದರೂ ಸಹ ವಾದಿಗೆ ಯಾವುದೇ ತರಹದ ನಷ್ಟವು ಸಂಭವಿಸದೇ ಇರಬಹುದು. ಸಾಮಾನ್ಯವಾಗಿ ಹಾನಿಗಳ ಪರಿಹಾರದ ಪರಿಮಾಣವು ಯಾವುವೆಂದರೆ ಸ್ವತ್ತಿನ ಮಾರಾಟ ಅಥವಾ ಖರೀದಿಯ ಕರಾರಿಗೆ ಒಪ್ಪಿದ ದರ ಮತ್ತು ಮಾರುಕಟ್ಟೆ ದರ ಇವುಗಳ ನಡುವಿನ ವ್ಯತ್ಯಾಸ. ಒಂದು ಪಕ್ಷವು ವಾಸ್ತವಿಕವಾಗಿ ಯಾವುದೇ ನಷ್ಟವನ್ನು ಅನುಭವಿಸಿಲ್ಲದಿರಬಹುದು ಮತ್ತು ಅಂತಹ ಸಂದರ್ಭಗಳಲ್ಲಿ ನ್ಯಾಯಾಲಯವು ಹಕ್ಕಿನ ಮನ್ನಣೆಗಾಗಿ ನಾಮಕಾವಸ್ಥೆ ಹಾನಿ ಪರಿಹಾರವನ್ನು ಹೂಡಬಹುದು. ಚಾರ್ಟರ್ ವಿರುದ್ಧ ಸುಲ್ಲಿವಾನ್ (Charter Vs. Sullivan (1957) 1 All ER 809) ನಲ್ಲಿ ಒಬ್ಬ ಮೋಟಾರ್ ಕಾರಿನ ವ್ಯಾಪಾರಿಯು, ಕರಾರಿನಲ್ಲಿ ಒಪ್ಪಿಕೊಂಡಂತೆ ಕಾರನ್ನು ಖರೀದಿಸಲು ನಿರಾಕರಿಸಿದ್ದಕ್ಕಾಗಿ ಗಿರಾಕಿಯ ವಿರುದ್ಧ ಮೊಕದ್ದಮೆ ಹೂಡಿದನು. ಮೊಕದ್ದಮೆಯಲ್ಲಿ ಅದೇ ಕಾರನ್ನು ಮತ್ತು ಇನ್ನೂ ಹಲವಾರು ಕಾರುಗಳನ್ನು ವ್ಯಾಪಾರಿಯು ಕೂಡಲೇ ಮಾರಾಟ ಮಾಡಿದ್ದನೆಂದು ಸ್ಥಾಪಿಸಲಾಯಿತು. ಆದ್ದರಿಂದ ನ್ಯಾಯಾಲಯವು ಕಾರನ್ನು ಗಿರಾಕಿಯು ಕೊಳ್ಳದೇ ಇರುವುದರಿಂದ ಮಾರಾಟಗಾರನಿಗೆ ಯಾವುದೇ ನಷ್ಟವಾಗಿಲ್ಲ ಎಂದು ನಿರ್ಧರಿಸಿ, ಬರೀ ೪೦ ಶಿಲ್ಲಿಂಗ್‌ಗಳ ನಾಮಕಾವಾಸ್ಥೆ ಹಾನಿ ಪರಿಹಾರ ಕೊಡಿಸಿತು. ಅಂಗ್ಲಿಯಾ ಟೆಲಿವಿಷನ್ ಲಿಮಿಟೆಡ್ ವಿರುದ್ಧ ರೀಡ್ (Anglia Television Ltd., Vs. Reed (1971) 3 All ER 690) ಇದರಲ್ಲಿ ಕರಾರು ಉಲ್ಲಂಘನೆಯಾದರೆ ಕರಾರಿಗೆ ಮುಂಚೆ ಮಾಡಿದ ವೆಚ್ಚಗಳನ್ನೂ ಸಹ ಪಕ್ಷಗಳ ಅನುದಾನದಂತೆ ವಸೂಲಿ ಮಾಡಬಹುದು ಎಂದು ನಿರ್ಧರಿಸಲಾಯಿತು.

ಮಾನಸಿಕ ನೋವು ಮತ್ತು ಯಾತನೆಗೆ ಹಾನಿ ಪರಿಹಾರ

ಕರಾರಿನ ಉಲ್ಲಂಘನೆಯಿಂದ ಮಾನಸಿಕ ನೋವು ಮತ್ತು ಯಾತನೆ ಉಂಟಾಗಬಹುದು. ನ್ಯಾಯಾಲಯಗಳ ಸಾಮಾನ್ಯ ಸ್ವಭಾವವೆಂದರೆ, ಹಾನಿ ಪರಿಹಾರವು ಸಾಮಾನ್ಯವಾಗಿ ದಂಡನೀಯವಲ್ಲದಿದ್ದರೂ ಬೇಕಂತಲೇ ಅಥವಾ ಎಚ್ಚರಗೇಡಿಯಾಗಿ ಅಥವಾ ಇನ್ನೊಂದು ಪಕ್ಷವು ಯಾತನೆ ಅಥವಾ ಅಪಮಾನ ಅನುಭವಿಸುತ್ತದೆಂದು ತಿಳಿದೂ ಕರಾರನ್ನು ಉಲ್ಲಂಘನೆ ಮಾಡಿದರೆ ಆಗ ನ್ಯಾಯಾ ಲಯವು ಹಾನಿ ಪರಿಹಾರವನ್ನು ವಿಧಿಸಲು ಹಿಂದು ಮುಂದು ನೋಡುವುದಿಲ್ಲ. ಇದು ನೂತನ ಪ್ರವೃತ್ತಿ.

ಡೀಸೆನ್ ವಿರುದ್ಧ ಸಾಮ್ಸನ್ (Diesen Vs. Samson (1971) SLT 49).

ಇದರಲ್ಲಿ ವಿವಾಹದ ಚಿತ್ರಗಳನ್ನು ತೆಗೆಯಲು ನೇಮಿಸಿದ ಛಾಯಾಚಿತ್ರ ತೆಗೆಯಬೇಕಾದವನು ಬರಲಿಲ್ಲ. ಅವನು ಚಿತ್ರ ತೆಗೆಯಲು ಬರದೇ ಕರಾರಿನ ಉಲ್ಲಂಘನೆ ಮಾಡಿದನು. ಅದರಿಂದ ವಧುವಿಗೆ ತನ್ನ ಮದುವೆಯ ಛಾಯಾ ಚಿತ್ರಗಳು ಇಲ್ಲದಂತಾಯಿತು. ಅವಳು ತನ್ನ ಭಾವನೆಗಳ ನಷ್ಟಕ್ಕಾಗಿ ದಾವೆ ಹೂಡಿದಳು. ಜಾರ್ವೀಸ್ ವಿರುದ್ಧ ಸ್ವಾನ್ ಟೂರ್ಸ್ ಲಿಮಿಟೆಡ್ (Jarvis Vs. Swans Tours Ltd., (1973) 1 AII ER 71) ನಲ್ಲಿ ಒಂದು ಪ್ರವಾಸಿ ಏಜೆನ್ಸಿಯು ನಿಗದಿತ ಪ್ರವಾಸದಲ್ಲಿ ಹಲವು ಸೌಲಭ್ಯ ಮತ್ತು ಮನರಂಜನೆಯನ್ನು ವಾಗ್ದಾನ ಮಾಡಿತ್ತು. ಈ ವಾಗ್ದಾನದ ನೆರವೇರಿಕೆಯಲ್ಲಿ ನಿರಾಶೆಗೊಳಿಸಿದ್ದಕ್ಕಾಗಿ ದಾವೆ ಹೂಡಲಾಯಿತು. ನ್ಯಾಯಾಲಯವು ನಿರಾಶೆಯಿಂದ ಉಂಟಾದ ಮಾನಸಿಕ ಯಾತನೆಯ ಹಾನಿ ಪರಿಹಾರ ನೀಡಲು ಯೋಗ್ಯ ಮೊಕದ್ದಮೆಯಾಗಿದೆ ಎಂದು ಗಮನಿಸಿ ಹಾನಿ ಪರಿಹಾರ ನೀಡಲು ಆದೇಶಿಸಿತು.

ಹಾನಿ ಪರಿಹಾರವನ್ನು ಉಪಶಮನ ಮಾಡುವ ಕರ್ತವ್ಯ

ವರ್ಗ ೭೩ ರ ಪ್ರಕಾರ, ಬಾಧಿತ ಪಕ್ಷವು ಉಲ್ಲಂಘನೆಯಿಂದ ಉಂಟಾದ ನಷ್ಟವನ್ನು ಕಡಿಮೆ ಮಾಡಲು ಯುಕ್ತ ಪ್ರಯತ್ನಗಳನ್ನು ಅನುಸರಿಸಿ ಅಂತಿಮ ಕೋರಿಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ಆದ್ದರಿಂದ ವಾದಿಯ ವರ್ತನೆಯು, ಕರಾರಿನ ಉಲ್ಲಂಘನೆಯ ನಂತರ ಬಹಳ ಮಹತ್ವದ ವಿಷಯವಾಗಿದೆ. ಪ್ರೀವಿ ಕೌನ್ಸಿಲ್‌ನ ಎ. ಜಮಾಲ್ ವಿರುದ್ಧ ಮೂಲ ದಾವೂದ್ ಸನ್ಸ್ ಅಂಡ್ ಕಂಪನಿ (Jamal, Vs. Moola Dawood Sons & Co., ILR (1916) 43 Cal 493) ನ ಮೊಕದ್ದಮೆಯು ಮಾರ್ಗದರ್ಶಕವಾಗಿದೆ. ಕಾನೂನಿನ ಮುಂಬರುವ ಲಾರ್ಡ್ ರೆನ್ಬರಿ (Lord Ranbury)ಯ ಹೇಳಿಕೆ ಬಹಳ ಶ್ರೇಷ್ಠವಾಗಿದೆ.

"ಹಾನಿ ಪರಿಹಾರಕ್ಕೆ ದಾವೆ ಹೂಡುವ ವಾದಿಯು ಉಲ್ಲಂಘನೆ ಯಿಂದುಂಟಾದ ನಷ್ಟ ಕಡಿಮೆ ಮಾಡಲು ಎಲ್ಲಾ ಸಮಂಜಸ ಕ್ರಮಗಳನ್ನೂ ತೆಗೆದುಕೊಳ್ಳುವ ಕರ್ತವ್ಯ ಹೊಂದಿರುತ್ತಾನೆ ಮತ್ತು ಅವನದೇ ನಿರ್ಲಕ್ಷ್ಯದಿಂದ ಉಂಟಾದ ಹಾನಿಯಿಂದ ಅವನಿಗೆ ಸಲ್ಲತಕ್ಕ ಮೊತ್ತವನ್ನು ಕೊಡಲಾಗುವುದಿಲ್ಲ ಎಂಬ ಕಾನೂನು ಹೆಸರುವಾಸಿಯಾಗಿದೆ. ಆದರೆ ನಿಶ್ಚಿತಪಡಿಸಿಕೊಳ್ಳಬೇಕಾದ ನಷ್ಟವು ಉಲ್ಲಂಘನೆ ಮಾಡಿದ ದಿನಾಂಕದ ನಷ್ಟ . ಆ ದಿನಾಂಕದಂದು ವಾದಿಯು ನಷ್ಟವನ್ನು ಕಡಿಮೆ ಮಾಡಲು ಏನಾದರೂ ಮಾಡಬಹುದು ಅಥವಾ ಮಾಡಿದರೆ ಪ್ರತಿವಾದಿಯು ಅದರ ಪ್ರಯೋಜನ ಪಡೆಯುವುದಕ್ಕೆ ಹಕ್ಕುಳ್ಳವನಾಗಿರುತ್ತಾನೆ".

ಭಾರತದ ಸರ್ವೋಚ್ಚ ನ್ಯಾಯಾಲಯವು ಎಸ್.ಎಸ್.ಶೆಟ್ಟಿ ವಿರುದ್ಧ ಭಾರತ್ ನಿಧಿ ಲಿಮಿಟೆಡ್ (S.S.Shetty Vs. Bharat Nidhi Ltd., (AIR 1958 SC 12)

ಸಲ್ಲಿ ಈ ರೀತಿ ಹೇಳಿದೆ. ಈ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಹಾನಿ ಪರಿಹಾರವನ್ನು ಕಡಿಮೆ ಮಾಡುವ ಕರ್ತವ್ಯದ ವಿಚಾರವನ್ನು ಚರ್ಚಿಸಲು ಸಂದರ್ಭ ಒದಗಿ ಬಂತು. ಈ ಮೊಕದ್ದಮೆಯು ಒಬ್ಬ ನೌಕರನನ್ನು ಕೆಲಸದಿಂದ ವಜಾ ಮಾಡಿದ್ದಕ್ಕಾಗಿ ಹೂಡಿದ ಮೊಕದ್ದಮೆ. ಆ ಮೊಕದ್ದಮೆಯಲ್ಲಿ ನೌಕರನನ್ನು ಒಂದು ನಿರ್ದಿಷ್ಟ ಅವಧಿಗೆ ಗೊತ್ತು ಮಾಡಲಾಗಿದ್ದರೂ ಅವನನ್ನು ಕೆಲಸದಿಂದ ತೆಗೆದುಹಾಕಲಾಯಿತು. ಉಳಿದಿರುವ ಅವಧಿಗೆ ಸಂಬಳವನ್ನು ಕೇಳಿ ನೌಕರನು ದಾವೆಯನ್ನು ಹೂಡಿದನು. ವಾದಿಯು ಬೇರೊಂದು ನೌಕರಿಯನ್ನು ಹುಡುಕುವುದಕ್ಕೆ ಯಾವುದೇ ತೀವ್ರ ಪ್ರಯತ್ನ ಮಾಡಲಿಲ್ಲವೆಂದು ಯಜಮಾನನು ವಾದಿಸಿದನು. ಆಗಿನ ನ್ಯಾಯಮೂರ್ತಿ ಭಗವತಿಯವರು "ವಾದಿಯ ಮೇಲೆ ಹೊಸ ಮತ್ತು ಅಸಾಧಾರಣ ಕರ್ತವ್ಯಗಳನ್ನು ಪಾಲಿಸಲು ಒತ್ತಾಯಪಡಿಸಬಾರದು ಮತ್ತು ನಷ್ಟ ಉಪಶಮನ ಮಾಡಬೇಕೆಂಬ ಕರ್ತವ್ಯವನ್ನು ಕಾರ್ಯರೂಪಕ್ಕೆ ತರುವುದಕ್ಕೋಸ್ಕರ ಬೇರೆ ಯಾವುದಾದರೂ ಕೆಲಸವನ್ನು ತೆಗೆದುಕೊಳ್ಳಲೇಬೇಕೆಂದು ಅವನನ್ನು ಒತ್ತಾಯಿಸಬಾರದು ಎಂದು ಹೇಳಿದರು. ಒಬ್ಬ ನೌಕರನನ್ನು ಅವನ ಅಂತಸ್ತಿಗಿಂತ ಕಡಿಮೆಯಾಗಿರುವ ಅಥವಾ ಬೇರೆ ಜಾಗದಲ್ಲಿ ಕೆಲಸ ಮಾಡುವ ಅಥವಾ ಬೇರೆ ತರಹದ ಕೆಲಸವನ್ನು ಅಂಗೀಕರಿಸುವಂತೆ ಒತ್ತಾಯಿಸಬಾರದು ಎಂದು ಅಧಿಕಾರ ಯುಕ್ತವಾಗಿ ಹೇಳಿದರು. ವಾದಿಯು ಬೇಗನೆ ಆಕಸ್ಮಿಕವಾಗಿ ಅಂಥದೇ ಕೆಲಸವನ್ನು ದೊರಕಿಸಿಕೊಂಡನೆಂದು ತೋರಿಸುವ ಭಾರ ಮಾತ್ರ ಪ್ರತಿವಾದಿಯದಾಗಿ ರುತ್ತದೆ" ಎಂದು ತೀರ್ಮಾನಿಸಿದರು.

ದಂಡ ಮತ್ತು ನಿಗದಿತ ಹಾನಿ ಪರಿಹಾರ

ಒಂದು ಕರಾರಿನಲ್ಲಿ ಪಕ್ಷಗಳು ಕರಾರು ಉಲ್ಲಂಘನೆಯಾದರೆ ಆಗ ಒಂದು ನಿರ್ದಿಷ್ಟ ಹಣದ ಮೊತ್ತವನ್ನು ಸಂದಾಯ ಮಾಡಬೇಕು ಎಂದು ನಮೂದಿಸುವುದು ಸರ್ವೇ ಸಾಮಾನ್ಯವಾಗಿದೆ. ಹೀಗೆ ನಿಗದಿ ಮಾಡಿದ ಮೊತ್ತವು ಉಲ್ಲಂಘನೆಯಿಂದ ಉಂಟಾದ ನಿಜವಾದ ಹಾನಿ ಮಾತ್ರವಾದರೆ ಇದನ್ನು ನಿಗದಿತ ಹಾನಿ ಪರಿಹಾರ ಎನ್ನುತ್ತಾರೆ. ನಿಗದಿತ ಹಾನಿಗೆ ಕೊಡಬೇಕಾದ ಮೊತ್ತಕ್ಕಿಂತ ಕಡಿಮೆ ಹಾನಿ ಪರಿಹಾರ ಸಂದಾಯ ಮಾಡಬೇಕಾದರೂ ಇದನ್ನು ನಿಗದಿತ ಹಾನಿ ಪರಿಹಾರ ಎನ್ನುತ್ತಾರೆ. ಕರ್ತವ್ಯಲೋಪವಾದರೆ ಬಹಳ ಹೆಚ್ಚಿನ ಬಡ್ಡಿಯನ್ನು ಸಂದಾಯ ಮಾಡಬೇಕಾ ದಂತಹ ಒಪ್ಪಂದಗಳಲ್ಲಿ ಈ ಮೊತ್ತವನ್ನು ದಂಡ ಎಂದು ಪರಿಗಣಿಸಬಹುದು. ಇದನ್ನು ವರ್ಗ ೭೪ ರಲ್ಲಿ ಕೊಡಲಾಗಿದೆ. ಕರಾರಿನಲ್ಲಿ ಕರಾರು ಉಲ್ಲಂಘನೆಯಾದಾಗ ಒಂದು ಮೊತ್ತವನ್ನು ಕೊಡಬೇಕು ಎಂದು ನಮೂದಿಸಿದ್ದರೂ ಸಹ, ಇನ್ನೊಂದು ಪಕ್ಷವು ಬರೀ ಯುಕ್ತ ನಷ್ಟಪರಿಹಾರಕ್ಕೆ ಮಾತ್ರ ಹಕ್ಕುಳ್ಳವನಾಗಿರುತ್ತಾನೆ. ಹಾಗೆಯೇ ದಂಡನೀಯ ಖಂಡಗಳನ್ನು (Forfeiture Clauses) ಸರ್ಕಾರಕ್ಕೆ ಒಂದು ಕರ್ತವ್ಯದ ನೆರವೇರಿಕೆಗೆಂದು

ಕೊಟ್ಟ ಬಂಧಪತ್ರವನ್ನು ಬಿಟ್ಟು ಬೇರೆ ಎಲ್ಲಕ್ಕೂ, ಅನ್ವಯಿಸುತ್ತದೆ. ಕಾರಣ ಇದರಲ್ಲಿ ಜಾಮೂನಿನ ತರಹ ಜನರ ಹಿತಾಸಕ್ತಿ ಮತ್ತು ಜನರ ಕರ್ತವ್ಯಗಳನ್ನು ಒಳಗೊಂಡಿರುತ್ತದೆ. ಇಂತಹುದನ್ನು ದಂಡ ಎಂದು ಪರಿಗಣಿಸಲಾಗುತ್ತದೆ. ಈ ವಿಷಯವನ್ನು ಕಾನೂನು ವಿವರವಾಗಿ ಡನ್‌ಲಪ್ ನ್ಯೂಮಾಟಿಕ್ ಟೈರ್ ಕಂಪನಿ ಲಿಮಿಟೆಡ್ ವಿರುದ್ಧ ನ್ಯೂ ಗ್ಯಾರೇಜ್ ಅಂಡ್ ಮೋಟಾರ್ ಕಂಪನಿ ಲಿಮಿಟೆಡ್ (Dunlop Neumatic Tyre Co., Ltd., Vs. New Garage and Motor Co., Ltd., (1915) AC 79, 86-87) ನಲ್ಲಿ ಚರ್ಚಿಸಿದೆ. ಆ ಮೊಕದ್ದಮೆಯಲ್ಲಿ ಟೈರನ್ನು ತಯಾರಿಸುವ ಒಂದು ಕಂಪನಿಯು ಪಟ್ಟಿಯಲ್ಲಿ ಸೂಚಿಸಿರುವಂತಹ ಬೆಲೆಗಿಂತ ಕಡಿಮೆ ಬೆಲೆಗೆ ಟಯರನ್ನು ಮಾರಾಟ ಮಾಡಬಾರದೆಂದು, ಹಾಗೆ ಮಾಡಿದರೆ ತಪ್ಪಾಗಿ ಮಾರಿದ ಪ್ರತೀ ಟಯರಿಗೂ ಐದು ಪೌಂಡ್ ಹಾನಿ ಪರಿಹಾರ ಸಂದಾಯ ಮಾಡಬೇಕಾಗುತ್ತದೆ ಎಂದೂ ಒಪ್ಪಂದ ಮಾಡಿಕೊಂಡಿತ್ತು. ಕರಾರು ಮಾಡಿಕೊಂಡ ವ್ಯಾಪಾರಿಯು ಕರಾರನ್ನು ಉಲ್ಲಂಘನೆ ಮಾಡಿದನು. ಅನುಭವಿಸಿದ ನಷ್ಟವು ನಿಜವಾದ ನಷ್ಟ ಪರಿಹಾರವೇ ? ಎಂಬ ಪ್ರಶ್ನೆ ಉದ್ಭವಿಸಿತು. ಹೌಸ್ ಆಫ್ ಲಾರ್ಡ್ಸ್ ನ್ಯಾಯಾಲಯವು ಇದನ್ನು ನಿಗದಿತ ಹಾನಿ ಪರಿಹಾರ ಎಂದು ನಿರ್ಧರಿಸಿತು. ಆದ್ದರಿಂದ ನಷ್ಟದ ನಿಜವಾದ ಹಣವನ್ನು ಮಾತ್ರ ವಸೂಲು ಮಾಡಬಹುದು ಎಂದು ಹೇಳಿತು.

ಮೊಕದ್ದಮೆಯ ವಿಷಯಗಳನ್ನು ಮುಂಬರುವ ತೀರ್ಪುಗಳಲ್ಲಿ ನೋಡೋಣ.

ಅ) ವ್ಯವಹಾರದ ಸ್ವಭಾವವನ್ನು ಜಾಗರೂಕತೆಯಿಂದ ಪರೀಕ್ಷಿಸಿ, ನಿಗದಿ ಮಾಡಿದ್ದ ಮೊತ್ತವು ಉಲ್ಲಂಘನೆಗಾಗಿ ಸಂದಾಯ ಮಾಡಬೇಕಾದ ಹಣವು ನಿಗದಿತ ಹಾನಿ ಪರಿಹಾರವೇ ? ದಂಡವಾಗುತ್ತದೆಯೇ ? ಅಥವಾ ದಂಡನೆಯ ಪ್ರತೀಕವೇ ? ಎಂಬುದನ್ನು ಕಂಡು ಹಿಡಿಯಬೇಕು. ಅಂತಹ ಮೊತ್ತವನ್ನು ಸುಮ್ಮನೇ ವಸೂಲು ಮಾಡಲಾಗುವದಿಲ್ಲ. ಪಕ್ಷಗಳು ಹಾನಿ ಪರಿಹಾರಕ್ಕೆ ಬೆಲೆ ಅಥವಾ ಪ್ರಮಾಣವನ್ನು ಕಂಡುಹಿಡಿಯಲು ಅಂದಾಜು ಲೆಕ್ಕ ಮಾಡಿದರೆ ಅದು ಸಮಂಜಸವಾಗುತ್ತದೆ.

ಆ) ನಿರ್ದಿಷ್ಟ ಪಡಿಸಿದ ಮೊತ್ತವು ನಷ್ಟಕ್ಕೆ ಹೋಲಿಸಿದಾಗ ಅತಿ ಹೆಚ್ಚು ವೆಚ್ಚದ್ದಾಗಿದ್ದರೆ ಆಗ ಅದನ್ನು ದಂಡವೆಂದು ಪರಿಗಣಿಸಬಹುದು. ಅದೇ ತರಹ ಒಂದು ನಿರ್ದಿಷ್ಟ ಮೊತ್ತವನ್ನು ಸಂದಾಯ ಮಾಡಲು ತಪ್ಪಿ ಅದು ಹೆಚ್ಚಿನ ಮೊತ್ತದ ಸಂದಾಯವನ್ನು ಒಳಗೊಂಡರೆ ಆಗಲೂ ಅದು ದಂಡವಾಗುತ್ತದೆ. ಕಂತು ಖರೀದಿ ವ್ಯವಹಾರಗಳು ಅನೇಕ ಸಲ ಈ ರೀತಿ ವಿಭಿನ್ನತೆಯ ಮೇಲೆ ತೀರ್ಮಾನವನ್ನು ಒಳಗೊಂಡಿರುತ್ತದೆ. ಲಂಡನ್ ಟ್ರಸ್ಟ ಕಂಪನಿ ಲಿಮಿಟೆಡ್ ವಿರುದ್ಧ ಹುರೆಲ್ (Landon Trust Co., Ltd., Vs. Hurrel, (1955) I, ALL ER 839) ಮೊಕದ್ದಮೆಯಲ್ಲಿ ಕರ್ತವ್ಯಲೋಪವು ಉಂಟಾದರೆ ಮೂಲಬೆಲೆಯ ಮುಕ್ಕಾಲು

ಭಾಗದಷ್ಟು ಸಂದಾಯವನ್ನು ಒಳಗೊಂಡಿತ್ತು. ನ್ಯಾಯಮೂರ್ತಿ ಡೆನ್ನಿಂಗ್‌ರವರು ಈ ಹಣವನ್ನು ದಂಡ ಎಂದು ಪರಿಗಣಿಸಿದರು. ಬ್ರಿಡ್ಜ್ ವಿರುದ್ಧ ಕ್ಯಾಂಬೆಲ್ ಡಿಸ್ಕೌಂಟ್ ಕಂಪನಿ ಲಿಮಿಟೆಡ್ (Bridge Vs. Cambell Discount Co., Ltd., (1962) AC 600) ಹೌಸ್ ಆಫ್ ಲಾರ್ಡ್ಸ್ ಉಲ್ಲಂಘನೆಯಾದಾಗ ಮಾರಾಟ ಬೆಲೆಯ ¾ ರಷ್ಟನ್ನು ಸಂದಾಯ ಮಾಡಬೇಕೆಂದು ಮಾಡಿಕೊಂಡ ಒಪ್ಪಂದದಲ್ಲಿ ಆ ಮೊತ್ತವನ್ನು ಸಹ ದಂಡವೆಂದು ತೀರ್ಮಾನಿಸುತ್ತದೆ ಎಂದು ನಿರ್ಧರಿಸಿತು.

ಉಲ್ಲಂಘನೆಗಾಗಿ ದೂರು ಮಾಡುತ್ತಿರುವ ಪಕ್ಷವು ಕರಾರಿನಲ್ಲಿ ನಿಯಮಿಸಿದುದಕ್ಕಿಂತ ಹೆಚ್ಚು ಹಣವನ್ನು ಕೇಳಬಾರದು ಎಂಬುದನ್ನು ವರ್ಗ ೭೪ ರಲ್ಲಿ ವಿವರಿಸಲಾಗಿದೆ. ನ್ಯಾಯಾಲಯವು ಈ ಮೊತ್ತವನ್ನು ಹೆಚ್ಚು ಮಾಡಲಾಗುವುದಿಲ್ಲ. ಆದರೆ ನ್ಯಾಯಾಲಯವು ಯುಕ್ತ ಎಂದು ತೋರಿದಷ್ಟು ಮೊತ್ತವನ್ನು ಕಡಿಮೆ ಮಾಡಬಹುದು. ಆದ್ದರಿಂದ ಇಂಗ್ಲೀಷ್ ನ್ಯಾಯಾಲಯಗಳು ಪ್ರತಿಯೊಂದು ಮೊಕದ್ದಮೆಯಲ್ಲೂ ಗೊತ್ತುಪಡಿಸಿದ ಹಾನಿ ಪರಿಹಾರವು ದಂಡವೇ ಅಥವಾ ಅಲ್ಲವೇ ಎಂದು ಕಂಡು ಹಿಡಿಯುವ ಕಾರ್ಯ ಭಾರವನ್ನು ತಾನೇ ವಹಿಸಿಕೊಂಡಿದೆ. ಇಂಗ್ಲೀಷ್ ನ್ಯಾಯಾಲಯಗಳು ಈ ಮೊತ್ತವನ್ನು ಸಂಪೂರ್ಣವಾಗಿ ಸ್ವೀಕರಿಸಬೇಕು ಅಥವಾ ಸಂಪೂರ್ಣವಾಗಿ ತಿರಸ್ಕರಿಸಬೇಕು. ಆದರೆ ಭಾರತದ ನ್ಯಾಯಾಲಯಗಳು ಮೊತ್ತವನ್ನು ಪೂರ್ಣವಾಗಿ ತಿರಸ್ಕರಿಸಬೇಕಾಗಿಲ್ಲ. ನ್ಯಾಯಾಲಯವು ಆ ಮೊತ್ತವನ್ನು ಸ್ವೀಕರಿಸಬಹುದು ಅಥವಾ ಎಷ್ಟು ಸರಿ ಎನಿಸುತ್ತದೋ ಆ ಮೊತ್ತಕ್ಕೆ ದಂಡವನ್ನು ಕಡಿಮೆ ಮಾಡಬಹುದು.

ಭಾರತದ ಸರ್ವೋಚ್ಚ ನ್ಯಾಯಾಲಯವು ಫಾತೆ ಚಂದ್ ವಿರುದ್ಧ ಬಾಲಕಿಶನ್ ದಾಸ್ (Fateh Chand Vs. Balkishan Das AIR (1963) SC 1405) ಮೊಕದ್ದಮೆಯಲ್ಲಿ "ಕರಾರಿನ ನಿಬಂಧನೆಗಳ ಪರಿಶೀಲನೆಯಲ್ಲಿ ಠೇವಣಿ ಮಾಡಿದ ಮೊತ್ತವನ್ನು ಕಳೆದುಕೊಂಡಾಗ ದಂಡಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಎಷ್ಟು ಯುಕ್ತ ಎಂದು ಯೋಚಿಸುತ್ತದೆಯೋ ಅಷ್ಟು ದಂಡ ಹೇರಬಹುದು. ಆದರೆ ಕರಾರಿನ ಉಲ್ಲಂಘನೆಯಿಂದಾಗಿ ಅವನು ನಷ್ಟ ಹೊಂದಿದ ಹಣವು ಕರಾರಿನಲ್ಲಿ ನಿಗದಿಪಡಿಸಲಾದ ಮೊತ್ತವನ್ನು ಮೀರಿರಬಾರದು" ಎಂದು ತೀರ್ಮಾನಿಸಿತು.

ಮಾರಾಟದ ವ್ಯವಹಾರಗಳಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು ಖರೀದಿದಾರನಿಂದ ಸಂದಾಯ ಮಾಡಲಾಗಿದ್ದು, ಅಂತಹ ಸಂದಾಯವು ಠೇವಣಿಯೇ ಅಥವಾ ಮುಂಗಡ ಹಣವೇ ಎಂಬ ಸಮಸ್ಯೆಯು ಅನೇಕ ಸಲ ಉಂಟಾಗುತ್ತದೆ.

ಮೌಲಾ ಬಕ್ಸ್ ವಿರುದ್ಧ ಯುನಿಯನ್ ಆಫ್ ಇಂಡಿಯಾ (Maula Bux Vs. Union of India AIR (1970) SC 1955) ನಲ್ಲಿ ವಾದಿಯು ಮಿಲಿಟರಿ ಭೋಜನ ಶಾಲೆಗೆ ಒಂದು ವರ್ಷ ಆಲೂಗಡ್ಡೆ, ಮೊಟ್ಟೆ, ಮೀನು ಮುಂತಾದ ಸಾಮಗ್ರಿಗಳನ್ನು ಸರಬರಾಜು ಮಾಡಲು ಕರಾರು ಮಾಡಿಕೊಂಡು ಕರಾರಿನ ಯುಕ್ತ ನಿರ್ವಹಣೆಗಾಗಿ ೧೮,೫೦೦,೦೦ ರೂಪಾಯಿಗಳನ್ನು ಠೇವಣಿ ಇಟ್ಟನು. ವಾದಿಯು ಸತತವಾಗಿ ತಪ್ಪು ಮಾಡಿ, ಕರಾರಿನ ಯುಕ್ತ ನಿರ್ವಹಣೆ ನಡೆಸಲು ವಿಫಲವಾದ್ದರಿಂದ ಕರಾರನ್ನು ರದ್ದುಗೊಳಿಸಲಾಯಿತು ಮತ್ತು ಹಣವನ್ನು ಹಿಡಿದುಕೊಳ್ಳಲಾಯಿತು. ನ್ಯಾಯಾಲಯವು ವರ್ಗ ೭೪ ರ ಪ್ರಕಾರ, ಕರಾರಿನ ಯುಕ್ತ ನಿರ್ವಹಣೆಗಾಗಿ ಇಟ್ಟ ಠೇವಣಿ ಮೊತ್ತವು ದಂಡವಾಗುವುದಿಲ್ಲ ಎಂದು ತೀರ್ಮಾನಿಸಿತು. ಈ ಮೊಕದ್ದಮೆಯಲ್ಲಿ ನ್ಯಾಯಾಲಯವು ಈ ಮೊತ್ತವು ಹಾನಿ ಪರಿಹಾರದ ನಿಜವಾದ ನಷ್ಟವನ್ನು ಹಣಕಾಸಿನ ಮೂಲಕ ತೋರಿಸಲು ಅಸಾಧ್ಯವಾಗಿರುವುದರಿಂದ ಪಕ್ಷವು ನಿಗದಿ ಪಡಿಸಿದ ಮೌಲ್ಯವನ್ನು ನಷ್ಟ ಪರಿಹಾರದ ಯುಕ್ತ ಅಳತೆಯೆಂದು ಪರಿಗಣಿಸಬಹುದು. ಆದರೆ ನಷ್ಟವನ್ನು ಹಣದ ರೂಪದಲ್ಲಿ ನಿಗದಿಪಡಿಸಬಹುದಾಗಿದ್ದರೆ ನಷ್ಟ ಪರಿಹಾರವನ್ನು ಕೇಳುವ ಪಕ್ಷವು ಅನುಭವಿಸಿದ ನಷ್ಟವನ್ನು ರುಜುವಾತು ಪಡಿಸಬೇಕು ಎಂದು ಹೇಳಿ ಇಲ್ಲಿ ಹಿಡಿದುಕೊಂಡಿದ್ದ ಹಣವನ್ನು ಹಿಂದಿರುಗಿಸಲು ಆದೇಶಿಸಿತು.

ಯುನಿಯನ್ ಆಫ್ ಇಂಡಿಯಾ ವಿರುದ್ಧ ರಾಂಪುರ್ ಡಿಸ್ಟಿಲರಿ ಆ್ಯಂಡ್ ಕೆಮಿಕಲ್ ಕಂಪನಿ (Union of India Vs. Rampur Distillery and Chemical Co., AIR (1973) SC 1098) ಇದರಲ್ಲಿ ಮದ್ಯವನ್ನು ಸರಬರಾಜು ಮಾಡಲು ಕರಾರು ಮಾಡಿಕೊಳ್ಳಲಾಯಿತು. ಕರಾರಿನ ವಿಫಲತೆಗಾಗಿ ಠೇವಣಿಯನ್ನು ಮುಟ್ಟುಗೋಲು ಹಾಕಲಾಯಿತು. ನ್ಯಾಯಾಲಯವು ಮೊಕದ್ದಮೆಯು ಸ್ಥಾಪಿಸಿದ ಸಾಕ್ಷ್ಯದ ಆಧಾರದ ಮೇಲೆ ಕರಾರಿನ ಉಲ್ಲಂಘನೆಯು ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟವನ್ನು ಉಂಟುಮಾಡಿಲ್ಲದ್ದರಿಂದ ಠೇವಣಿ ಹಿಡಿದುಕೊಂಡಿರುವುದು ಸರಿಯಲ್ಲ ಎಂದು ನಿರ್ಧರಿಸಿತು.

ಮೌಲಾ ಬಕ್ಸನ ಮೊಕದ್ದಮೆಯ ನಂತರ ಶ್ರೀ ಹನುಮಾನ ಕಾಟನ್ ಮಿಲ್ಸ್ ವಿರುದ್ಧ ಟಾಟಾ ಏರ್ ಕ್ರಾಫ್ಟ್ ಲಿಮಿಟೆಡ್ (Shree Hanuman Cotton Mills Vs. Tata Air Craft Ltd., AIR (1970) SC 1986). ಈ ರೀತಿ ಇದೆ.

ಈ ಮೊಕದ್ದಮೆಯಲ್ಲಿ ಠೇವಣಿಯನ್ನು ಮುಂಗಡಹಣ ಎಂದು ಉದ್ದೇಶಿಸಲಾಗಿತ್ತು. ಖರೀದಿದಾರನ ವಿಫಲತೆ ಅಥವಾ ತಪ್ಪಿನಿಂದಾಗಿ ಕರಾರಿನ ಉಲ್ಲಂಘನೆಯಾದರೆ ಈ ಬೆಲೆಯನ್ನು ಮಾರುವವನು ಮುಟ್ಟುಗೋಲು ಹಾಕಬಹುದು ಎಂದು ನಿರ್ಧರಿಸಿತ್ತು. ಕೊಳ್ಳುವವನ ತಪ್ಪಿನಿಂದಾಗಿ ಕರಾರು

ಉಲ್ಲಂಘನೆಯಾಯಿತು. ಮಾರಾಟಗಾರನು ರೇವಣಿಯನ್ನು ತಾನೇ ತೆಗೆದುಕೊಂಡನು. ರೇವಣಿ ಹಿಂದಕ್ಕೆ ಪಡೆಯಲು ಹಾಕಿದ ದಾವೆಗೆ ನ್ಯಾಯಾಲಯವು ರೇವಣಿಯು ಮಾರಾಟ ಬೆಲೆಯ ಒಂದು ಭಾಗವಾಗಿದ್ದು, ಮಾರಾಟಗಾರನು ಅದನ್ನು ತೆಗೆದು ಕೊಳ್ಳಬಹುದು ಎಂದು ತೀರ್ಮಾನಿಸಿತು.

****

ಭಾಗ - ೧೯

ನಷ್ಟಭರ್ತಿ ಮತ್ತು ಖಾತರಿಯ ಕರಾರುಗಳು

(Contract of Indemnity and Guarantee)

ಭಾರತದ ಕರಾರು ಕಾಯಿದೆಯ ವರ್ಗ ೧೨೪ ರ ನಿಬಂಧನೆಗಳಲ್ಲಿ ನಷ್ಟಭರ್ತಿ ಕರಾರನ್ನು ಈ ರೀತಿ ವಿವರಿಸಲಾಗಿದೆ. ಒಂದು ಪಕ್ಷವು ಇನ್ನೊಂದು ಪಕ್ಷಕ್ಕೆ ತನ್ನಿಂದ ಅಥವಾ ಬೇರೆ ವ್ಯಕ್ತಿಯಿಂದ ಉಂಟಾದ ನಷ್ಟವನ್ನು ಭರ್ತಿ ಮಾಡಲು ವಾಗ್ದಾನ ಮಾಡುವುದನ್ನು ನಷ್ಟಭರ್ತಿ ಕರಾರು ಎನ್ನುತ್ತಾರೆ. ಈ ಕರಾರು ವಿಮಾ ಕರಾರಿಗಿಂತ ಬೇರೆಯಾಗಿದೆ. ಏಕೆಂದರೆ ವಿಮಾ ಕರಾರು ಒಂದು ರೀತಿಯ ಆಕಸ್ಮಿಕ ಸಂಭವಕ್ಕೊಳಪಟ್ಟ ಕರಾರಾಗಿದ್ದು ಏನಾದರೂ ದುರ್ಘಟನೆ ಸಂಭವಿಸಿ ದಾಗ ಮಾತ್ರ ಪರಿಣಾಮಕಾರಿ ಯಾಗುತ್ತದೆ. ಒಬ್ಬ ಯಜಮಾನ ಮತ್ತು ಸೇವಕನ ನಡುವೆ ಮತ್ತು ಒಬ್ಬ ಯಜಮಾನ ಮತ್ತು ಏಜೆಂಟನ ನಡುವೆ ಸಂಬಂಧಗಳು ಸ್ಥಾಪಿಸಲಾದಾಗ ಈ ರೀತಿ ನಷ್ಟಭರ್ತಿ ಒಪ್ಪಿಗೆ ಉದ್ಭವಿಸುತ್ತದೆ. ಸಾಮಾನ್ಯವಾಗಿ ಅಪರಾಧಗಳಿಂದ ಉದ್ಭವಿಸಿದ ನಷ್ಟಗಳಿಗೆ ಕರಾರಿಲ್ಲದೇ ಸ್ವತಂತ್ರವಾಗಿ ಇದು ಉದ್ಭವಿಸುತ್ತದೆ. ಒಬ್ಬ ಮನುಷ್ಯನು (ಅಕ್ರಮ ಕೃತ್ಯ) ತನ್ನ ಉಪದ್ರವ, ನಿರ್ಲಕ್ಷ್ಯ ಮುಂತಾದವುಗಳಿಂದ ಉದ್ಭವಿಸಿದ ಅಕ್ರಮ ಕೃತ್ಯಗಳಿಗೆ ಇನ್ನೊಬ್ಬ ಮನುಷ್ಯನಿಗೆ ಹಾನಿ ಪರಿಹಾರ ನೀಡಬೇಕಾಗುತ್ತದೆ. ನಷ್ಟಭರ್ತಿ ಕರಾರು ಬಾಯಿಮಾತಿನದಾಗಿರಬಹುದು, ಲಿಖಿತ, ವ್ಯಕ್ತ ಅಥವಾ ಇಂಗಿತದ್ದಾಗಿರಬಹುದು. ನೌಕರಿ ಕೊಡಿಸಿದಾಗ ಸೇವಕನನ್ನು ತಂದಿಟ್ಟವರು ಸಾಮಾನ್ಯವಾಗಿ ಈ ರೀತಿಯಾಗಿ ಜವಾಬ್ದಾರಿ ವಹಿಸುತ್ತಾರೆ.

ಇದಕ್ಕೆ ಸಂಬಂಧಪಟ್ಟ ಇನ್ನೊಂದು ವರ್ಗವು ವರ್ಗ ೧೨೫. ಅದು ಹೊಣೆಗಾರಿಕೆಯ ವ್ಯಾಪ್ತಿಯನ್ನು ಸೂಚಿಸುತ್ತದೆ. ಈ ವರ್ಗವು ನಷ್ಟಭರ್ತಿಧಾರಕನು ದಾವೆ ಹೂಡಿದರೆ ಹಾನಿ ಪರಿಹಾರವನ್ನು ವಸೂಲು ಮಾಡಬಹುದು ಮತ್ತು ಅವನು ನಷ್ಟಭರ್ತಿಯ ನಿಬಂಧನೆಗಳ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸಿದ್ದರೆ, ಅವನಿಗೆ ಉಂಟಾದ ಖರ್ಚುಗಳನ್ನು ಸಹ ವಸೂಲು ಮಾಡಬಹುದು ಎಂದು ಸೂಚಿಸುತ್ತದೆ. ಆದರೆ ಇಲ್ಲಿ ಗಮನಿಸಬಹುದಾದ ಅತಿಮುಖ್ಯ ಅಂಶವೇನೆಂದರೆ, ನಷ್ಟಭರ್ತಿ ಮಾಡುವವನ ಹೊಣೆಗಾರಿಕೆಯು ಇನ್ನೊಂದು ಪಕ್ಷವು ವಾಸ್ತವಿಕವಾಗಿ ನಷ್ಟವನ್ನು ಅನುಭವಿಸಿದ ನಂತರ ಮಾತ್ರ ಉಂಟಾಗುತ್ತದೆಯೇ ಎಂದು. ಗಜಾನನ ವಿರುದ್ಧ ಮೋರೇಶ್ವರ ಮದನ್ (Gajanan Moreshwar Vs. Moreshwar Madan AIR BOM 302) ನಲ್ಲಿ ಮುಂಬಯಿ ಉಚ್ಚನ್ಯಾಯಾಲಯವು ನಷ್ಟಭರ್ತಿಯು ಇನ್ನೊಂದು ಪಕ್ಷವು ವಾಸ್ತವಿಕವಾಗಿ ನಷ್ಟವನ್ನು ಅನುಭವಿಸಬೇಕಾಗಿಲ್ಲ ಮತ್ತು ಹಣ ಸಂದಾಯ ಮಾಡಲು

ಅಥವಾ ಅವನು ಖಾತರಿ ಮಾಡಿದ ಮೊಬಲಗನ್ನು ಭರ್ತಿ ಮಾಡುವಂತಹ ಸನ್ನಿವೇಶದಲ್ಲಿ ಶಕ್ತನಾಗುವಂತೆ ಹಕ್ಕನ್ನು ಹೊಂದಿರುವವನಾಗುತ್ತಾನೆ ಎಂದು ನಿರ್ಧರಿಸಿತು. ಅಂತಹದೇ ಅಭಿಪ್ರಾಯವನ್ನು ಇತರ ಉಚ್ಚನ್ಯಾಯಾಲಯಗಳೂ ತೆಗೆದುಕೊಂಡಿತು. ಆದರ್ರಿಂದ ಹೊರಬಂದ ತತ್ವಗಳೇನೆಂದರೆ, ನಷ್ಟಭರ್ತಿಧಾರಕನು ನಷ್ಟ ಹೊಂದಿರುವವನ ಹಣ ಭರ್ತಿ ಮಾಡುವ ಸ್ಥಿತಿಯಲ್ಲಿ ಇರುವ ಜವಾಬ್ದಾರಿ ಹೊಂದಿರುತ್ತಾನೆ ಎಂದು.

ಒಂದು ಖಾತರಿ ಅಥವಾ ಜಾಮೀನಿನ ಕರಾರುಯುಕ್ತವಾಗಿ ಮುಖ್ಯವಾದ ಬಾಂಧವ್ಯವಾಗಿದ್ದು ಇದನ್ನು ನಾವು ಸಾಲಗಳ ವಿಷಯದಲ್ಲಿ ಮೇಲಿಂದ ಮೇಲೆ ಗಮನಿಸುತ್ತೇವೆ. ಕಾಯಿದೆಯ ವರ್ಗ ೧೨೬ ರಂತೆ ಇದೊಂದು ಮೂರನೇ ಪಕ್ಷದವನ ಕರ್ತವ್ಯಲೋಪದ ಸಂದರ್ಭದಲ್ಲಿ ಹೊಣೆಗಾರಿಕೆಯನ್ನು ವಿಮೋಚನೆ ಗೊಳಿಸಲು ಅಥವಾ ವಾಗ್ದಾನವನ್ನು ನೆರವೇರಿಸಲು ಮಾಡಿದ ಕರಾರು ಎಂದು ಹೇಳುತ್ತದೆ. ಇದರ ಅತ್ಯಾವಶ್ಯಕ ವಿಶೇಷಗಳು ಏನೆಂದರೆ, ಮೂರು ಪಕ್ಷಗಳ ಹಾಜರಾತಿ ಎಂದರೆ ಲೇಣಿದಾರ, (ಸಾಲ ಕೊಡುವವ) ಪ್ರಧಾನ ಋಣಿ ಮತ್ತು ಜಾಮೀನುದಾರ. ಆದುದರಿಂದ ಇದೊಂದು ಮೂರು ಪಕ್ಷಗಳ ಒಪ್ಪಂದವಾಗಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್ ವಿರುದ್ಧ ಶ್ರೀ ವಿಕ್ರಂ ಕಾಟನ್ ಮಿಲ್ಸ್ (Punjab National Bank Vs. Vikram Cotton Mills AIR (1970) SC 1973) ಒಬ್ಬ ಜಾಮೀನುದಾರ ಅವನೊಬ್ಬ ಸ್ವಯಂ ಸೇವಕ ಎಂಬ ಆಧಾರದ ಮೇಲೆ ತನ್ನ ರಿಯಾಯಿತಿಗಾಗಿ ಅಹವಾಲನ್ನು ಕೇಳಲಾಗುವುದಿಲ್ಲ, ಅವನಿಗೆ ಯಾವುದೇ ಪ್ರತಿಫಲವಿರುವುದಿಲ್ಲ. ಏಕೆಂದರೆ ವರ್ಗ ೧೨೭ ರ ಪ್ರಕಾರ, ಸಾಲ ಮಾಡಿದವನ (ಋಣಿ, Debtor) ಪ್ರಯೋಜನಕ್ಕಾಗಿ ಸಾಲಕೊಟ್ಟವನು ಮಾಡಿದ ಯಾವುದೇ ಕಾರ್ಯ ಅಥವಾ ಯಾವುದೇ ವಾಗ್ದಾನವು ಜಾಮೀನುದಾರರಿಗೆ ಸಾಕಷ್ಟು ಪ್ರತಿಫಲವಾಗಬಹುದು ಎಂದು ಹೇಳುತ್ತದೆ. ಆದಾಗ್ಯೂ ವರ್ಗ ೧೨೭ ರ ವಿವರಣೆ 'ಸಿ' ಯು ಇದೊಂದು ಸಮಕಾಲೀನ ವ್ಯವಹಾರವಾಗಿರಬೇಕೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಏಕೆಂದರೆ ಆ ವಿವರಣೆಯಲ್ಲಿ ಒಬ್ಬ ಮಾರಾಟಗಾರನು ಒಬ್ಬ ಖರೀದಿದಾರನಿಗೆ ಸರಕನ್ನು ಸಾಲವಾಗಿ ಮಾರಾಟ ಮಾಡುತ್ತಾನೆ. ತದನಂತರ, ಖರೀದಿದಾರನ ಕರ್ತವ್ಯ ಲೋಪದಲ್ಲಿ ಬೇರೊಬ್ಬ ಮನುಷ್ಯನು ಆ ಮೊತ್ತವನ್ನು ಸಂದಾಯ ಮಾಡಲು ಒಪ್ಪುತ್ತಾನೆ. ಈ ಒಪ್ಪಂದವನ್ನು ಶೂನ್ಯ ಎಂದು ಹೇಳಲಾಗಿದೆ.

ಸಾಲ ಕೊಟ್ಟವನು ಋಣ, ಸಾಲ ಮುಂತಾದವುಗಳ ಬಗ್ಗೆ ಎಲ್ಲಾ ವಿವರಗಳನ್ನು ಬಹಿರಂಗಪಡಿಸಬೇಕಾದ ಕರ್ತವ್ಯವನ್ನು ಹೊಂದಿರುತ್ತಾನೆ. ವರ್ಗ ೧೪೩ ರ ಪ್ರಕಾರ ಲೇಣೀದಾರರು ಜಾಮೀನು ಪಡೆದುಕೊಂಡ ಮುಖ್ಯ ಸನ್ನಿವೇಶಗಳ ಬಗ್ಗೆ ಮೌನವಾಗಿ

ಇದ್ದು ಬಿಟ್ಟರೆ ಆಗ ಪರಿಸ್ಥಿತಿಗಳು ಕರಾರನ್ನು ಅಸಿಂಧು ಗೊಳಿಸುತ್ತವೆ. ಲಂಡನ್ ಜನರಲ್ ಆಮ್ನಿ ಬಸ್ ಕಂಪನಿ ವಿರುದ್ಧ ಹೊಲ್ಲೋವೇ (London General Omnibus Co., Vs. Holloway (1912) 2 KB 72) ಇದರಲ್ಲಿ ಜಾಮೀನುದಾರನು ಒಬ್ಬ ನೌಕರನ ನಂಬಿಕೆಯ ಖಾತರಿಗಾಗಿ ಜಾಮೀನು ಕೊಟ್ಟನು. ಆದರೆ ಯಜಮಾನನು ಅದೇ ನೌಕರನನ್ನು ಅಪ್ರಾಮಾಣಿಕತೆಗೆ ಹಿಂದೆ ಕೆಲಸದಿಂದ ತೆಗೆದು ಹಾಕಿದ್ದನು. ಆ ವಿಷಯವನ್ನು ಅವನು ಜಾಮೀನುದಾರನಿಗೆ ಬಹಿರಂಗಪಡಿಸಲಿಲ್ಲ. ನ್ಯಾಯಾಲಯವು ಜಾಮೀನು ಅಸಿಂಧು ಎಂದು ನಿರ್ಧರಿಸಿತು. ನಾವು ಈಗಾಗಲೇ ಗಮನಿಸಿರುವಂತೆ ಭಾರತದ ಕರಾರು ಕಾಯಿದೆಯು ಸಾಮಾನ್ಯವಾಗಿ ಕರಾರು ಒಂದು ನಿರ್ದಿಷ್ಟ ನಮೂನೆಯಲ್ಲಿರಬೇಕೆಂದು ಒತ್ತಾಯ ಪಡಿಸುವುದಿಲ್ಲ. ವರ್ಗ ೧೨೬ ವ್ಯಕ್ತವಾಗಿ ಖಾತರಿಯ ಕರಾರು ಬಾಯಿ ಮಾತಿನದಾಗಿರಬಹುದು ಎಂದು ಹೇಳುತ್ತದೆ. ಇಂಗ್ಲೀಷ್ ಕಾನೂನಿನಲ್ಲಿ ಇಂತಹ ಜಾಮೀನು ಅಥವಾ ಖಾತ್ರಿ ಕರಾರು ಲಿಖಿತವಾಗಿದ್ದು, ಜಾಮೀನುದಾರನು ಸಹಿ ಹಾಕಿರಬೇಕೆಂದು ಹೇಳಿದೆ.

ಜಾಮೀನುದಾರನ ಹೊಣೆಗಾರಿಕೆ

ಅ) ಸಾಮಾನ್ಯ ಮನುಷ್ಯನ ಅನಿಸಿಕೆ ಏನೆಂದರೆ, ಒಬ್ಬ ಜಾಮೀನುದಾರನನ್ನು ಪ್ರಧಾನ ಋಣಿಯ ವಿರುದ್ಧ ಎಲ್ಲಾ ಕ್ರಮೋಪಾಯಗಳೂ ವಿಫಲಗೊಂಡ ಮೇಲೆ ಮಾತ್ರ ಹಣ ಸಂದಾಯ ಮಾಡಲು ಕರೆಯಲಾಗುವುದು ಎಂದು. ಈ ಅನಿಸಿಕೆಗೆ ವಿರುದ್ಧವಾಗಿ ವರ್ಗ ೧೨೮ ಜಾಮೀನುದಾರನ ಹೊಣೆಯು, ಬೇರೆ ಏನೂ ಷರತ್ತು ವಿನಾಯಿತಿಗಾಗಿ ನಿರ್ದಿಷ್ಟಪಡಿಸಿದ ಹೊರತು ಪ್ರಧಾನ ಋಣಿಯ ಜೊತೆಗೇ ಸಹವ್ಯಾಪ್ತವಾಗಿರುತ್ತದೆ ಎಂದು ಘೋಷಿಸುತ್ತದೆ. ಅಂದರೆ ಸಂಪೂರ್ಣ ಹೊಣೆ ಗಾರಿಕೆಯ ಸಂಬಂಧದಲ್ಲಿ ಅದು ಸಹವ್ಯಾಪ್ತವಾಗಿರುತ್ತದೆ ಎಂದು ತಿಳಿಯಬೇಕು. ಇದು ಋಣಿಯ ಕರ್ತವ್ಯಲೋಪ ಸಂಭವಿಸಿದ ಕೂಡಲೇ ಉಂಟಾಗುತ್ತದೆ. ಏನೇ ಇದ್ದರೂ ಬ್ಯಾಂಕ್ ಆಫ್ ಬಿಹಾರ್ ವಿರುದ್ಧ ದಾಮೋದರ್ ಪ್ರಸಾದ್ (Bank of Bihar Ltd., Vs. Damodar Prasad AIR (1969) SC 297) ನಲ್ಲಿ ಈ ರೀತಿ ನಿರ್ಧರಿಸಲಾಯಿತು. ಬ್ಯಾಂಕು ಋಣಿಯ ವಿರುದ್ಧ ಎಲ್ಲಾ ಕ್ರಮೋಪಾಯಗಳೂ ವಿಫಲಗೊಂಡ ಮೇಲೆ ಜಾಮೀನುದಾರನು ಹೊಣೆಯಾಗುತ್ತಾನೆ ಎಂದು ವಾದ ಮಾಡಲಾಯಿತು. ಸರ್ವೋಚ್ಚ ನ್ಯಾಯಾಲಯವು ಕೆಳಗಿನ ಎರಡು ನ್ಯಾಯಾಲಯಗಳ ಸಮವರ್ತಿ ನಿರ್ಣಯವನ್ನು ತಳ್ಳಿಹಾಕಿ, ಪ್ರಧಾನ ಋಣಿಯ ಹಣಕಾಸು ಅನುಕೂಲತೆ ಇಲ್ಲಿ ಬರುವುದಿಲ್ಲ. ತನ್ನ ಜಾಮೀನಿನ ವಿರುದ್ಧ ಕ್ರಮೋಪಾಯವನ್ನು ಮುಂದಕ್ಕೆ ಹಾಕುವಂತೆ ಕೇಳಿಕೊಂಡ ಖಾತರಿಯ ಗುರಿ ವಿಫಲಗೊಳ್ಳುವುದು ಎಂದು ಅಭಿಪ್ರಾಯ ಪಟ್ಟರು. ಋಣಿಯಂತೆ ಜಾಮೀನುದಾರನೂ ಸಮಭಾಗಿ.

ಜಾಮೀನು ಕೊಟ್ಟವನನ್ನು ಸಾಲಗಾರನ ಜೊತೆ ಸಮಾನಗೊಳಿಸಿದರೂ ಸಹ ಅವನನ್ನು ಸ್ವಲ್ಪ ಮಟ್ಟಿಗೆ "ರಿಯಾಯಿತ್ತಿ ಋಣಿ" ಎಂದು ಪರ್ಯಾಲೋಚಿಸ ಲಾಗುತ್ತದೆ. ವರ್ಗ ೧೩೩ ರ ಕೆಳಗೆ ಕರಾರು ನಿಬಂಧನೆಗಳಲ್ಲಿ ಜಾಮೀನುದಾರನ ಸಮ್ಮತಿ ಇಲ್ಲದೆ ಯಾವುದೇ ವ್ಯತ್ಯಾಸ ಮಾಡಿದರೂ ಮುಂದಿನ ವ್ಯವಹಾರಗಳಲ್ಲಿ ಜಾಮೀನುದಾರ ವಿಮೋಚನೆ ಹೊಂದುತ್ತಾನೆ. ಜಾಮೀನುದಾರನು ಸಾಮಾನ್ಯವಾಗಿ ಸ್ವಯಂಸೇವಕ ಮತ್ತು ಅವನು ಯಾವುದೇ ಪ್ರಯೋಜನವನ್ನು ಸ್ವೀಕರಿಸುವುದಿಲ್ಲ ಎಂಬುದು ಸಾಮಾನ್ಯ ವೇದ್ಯವಾಗಿದೆ. ಆದ್ದರಿಂದ ಅವನ ಹೊಣೆಯನ್ನು ಸರಿಯಾಗಿ ವಿವರಿಸಬೇಕು ಮತ್ತು ಸೀಮಿತಗೊಳಿಸಬೇಕು. ಇದನ್ನು ಬ್ಲೆಸ್ಟ್ ವಿರುದ್ಧ ಬ್ರೌನ್ (Blest Vs. Brown (1862), 45 ER 1225) ನಿಯಮ ಎಂದು ಕರೆಯಲಾಗಿದೆ. ಇದನ್ನು ನಮ್ಮ ಸರ್ವೋಚ್ಚ ನ್ಯಾಯಾಲಯದ ಅನುಮೋದನೆಯ ಮೇರೆಗೆ ಎಂ. ಎಸ್. ಅನಿರುಧಾನ್ ವಿರುದ್ಧ ತಾಮ್ಕೋಸ್ ಬ್ಯಾಂಕ್ ಲಿಮಿಟೆಡ್ (M. S. Anirudhan Vs. Thomco's Bank Ltd., AIR 1963 SC 746) ಮೊಕದ್ದಮೆಯಲ್ಲಿ ಉಲ್ಲೇಖಿಸಲಾಯಿತು. ಆ ಮೊಕದ್ದಮೆಯ ವಿಷಯಗಳ ಮೇಲೆ ಜಾಮೀನುದಾರನ ಸಮ್ಮತಿ ಇಲ್ಲದ ವ್ಯತ್ಯಾಸ ಎಂದರೆ, ಅದು ಗಂಭೀರ ರೂಪದ್ದಾಗಿರಬೇಕು ಎಂದು ನಿರ್ಧರಿಸಲಾಯಿತು. ಈ ತತ್ವವನ್ನು ೧೩೪ ನೇ ವರ್ಗದಲ್ಲಿ ಮತ್ತಷ್ಟು ವಿಸ್ತರಿಸಲಾಗಿದೆ. ಲೇಣೇದಾರ ಮತ್ತು ಸಾಲಗಾರನ ನಡುವೆ ಯಾವುದೇ ಕರಾರು ಪ್ರಧಾನ ಋಣಿಯನ್ನು ವಿಮೋಚಿಸಿ ಅಥವಾ ಅದೇ ಪರಿಣಾಮವಿರುವ ಯಾವುದೇ ಕಾರ್ಯ ಅಥವಾ ವಿಲೋಪ ಉಂಟಾದಾಗ ಜಾಮೀನುದಾರನು ವಿಮೋಚನೆ ಹೊಂದುತ್ತಾನೆ. ವರ್ಗ ೧೩೫ ರಂತೆ ಲೇಣೇದಾರನು ಜಾಮೀನುದಾರನ ಸಮ್ಮತಿ ಇಲ್ಲದೇ ಪ್ರಧಾನ ಋಣಿಯ ವಿರುದ್ಧ ದಾವೆ ಹೂಡದಂತೆ ಒಪ್ಪಿಕೊಂಡು ರಾಜಿ ಮಾಡಿಕೊಂಡರೆ ಮತ್ತು ಸಾಲ ಹಿಂದಕ್ಕೆ ಕೊಡಲು ಹೆಚ್ಚಿನ ಸಮಯವನ್ನು ಕೊಟ್ಟರೆ, ಆಗಲೂ ಸಹ ಜಾಮೀನುದಾರನನ್ನು ವಿಮೋಚನೆ ಮಾಡಿದಂತೆ ಆಗುತ್ತದೆ. ಜಾಮೀನುದಾರನ ತಲೆಯ ಮೇಲೆ ಕತ್ತಿಯು ಅವನು ನಿರೀಕ್ಷಿಸಿದ್ದಕ್ಕಿಂತ ಜಾಸ್ತಿ ಸಮಯ ತೂಗಾಡದೇ ಇರಲಿ ಎಂಬುದೇ ಇದರ ಉದ್ದೇಶ.

ವರ್ಗ ೧೩೯ ರ ಪ್ರಕಾರ ಲೇಣೇದಾರನು ಜಾಮೀನುದಾರನ ಹಿತಾಸಕ್ತಿಗೆ ಹಾನಿಯಾಗುವ ಯಾವುದೇ ಕಾರ್ಯವನ್ನು ಮಾಡಿದರೆ ಅಥವಾ ಜಾಮೀನುದಾರನನ್ನು ಪ್ರಧಾನ ಋಣಿಯಿಂದ ರಕ್ಷಿಸಲು ಅವಶ್ಯಕವಾದ ಕ್ರಮೋಪಾಯವನ್ನು ಮಾಡದೇ ಬಿಟ್ಟರೆ, ಅಲ್ಲಿಯೂ ಹೊಣೆಗಾರಿಕೆಯ ವಿಮೋಚನೆಯುಂಟಾಗುತ್ತದೆ. ಎಂದು ವಿವರಿಸುತ್ತದೆ. ಲೇಣೇದಾರನು ಒತ್ತೆ ಇಟ್ಟ ವಸ್ತುವನ್ನು ಜಾಮಿನುದಾರನಿಗೆ ಗೊತ್ತಿಲ್ಲದೇ ಹಿಂತಿರುಗಿಸಿದರೆ ಅಥವಾ ವಿವೇಕದಿಂದ ವರ್ತಿಸುವುದನ್ನು ತಪ್ಪಿದರೆ ಅಥವಾ ಯಾವುದೇ ಕರ್ತವ್ಯಲೋಪವು ಉಂಟಾದರೆ ಆಗ ಜಾಮಿನುದಾರನ ವಿಮೋಚನೆ ಉಂಟಾಗುತ್ತದೆ.

ವರ್ಗ ೧೩೭ ರಲ್ಲಿ ಲೇಣೇದಾರನ ಬರೀ ದಾವೆ ಹೂಡಬೇಕೆಂಬ ಯೋಚನೆಯು ಜಾಮೀನುದಾರನನ್ನು ವಿಮೋಚನೆಗೊಳಿಸುವುದಿಲ್ಲ ಎಂಬುದನ್ನು ಸಹ ತಿಳಿದುಕೊಳ್ಳಬೇಕು.

ಜಾಮಿನುದಾರನ ಹಕ್ಕುಗಳು

ನಾವು ಈಗಾಗಲೇ ಗಮನಿಸಿರುವಂತೆ ಜಾಮಿನುದಾರನು ತನಗೋಸ್ಕರ ಯಾವುದೇ ಪ್ರಯೋಜನವನ್ನು ಹೊಂದುವುದಿಲ್ಲ ಮತ್ತು ಅವನು ಸ್ನೇಹ ಅಥವಾ ನಂಟಿನ ಸಂಬಂಧದಿಂದ ಅಥವಾ ಇನ್ನಿತರ ಪರಿಸ್ಥಿತಿಗಳಿಂದ ಈ ಕಾರ್ಯವನ್ನು ಕೈಗೊಳ್ಳುತ್ತಾನೆ. ನಾವು ಈಗಾಗಲೇ ತಿಳಿದುರುವಂತೆ ಅವನು ಸ್ವಲ್ಪಮಟ್ಟಿಗೆ ಸಾಲಗಾರನಂತೇ ಆಗಿರುತ್ತಾನೆ. ಆದ್ದರಿಂದ ವರ್ಗ ೧೪೦ ಮತ್ತು ೧೪೫ ಪ್ರಧಾನ ಋಣಿಯ ವಿರುದ್ಧ ಜಾಮೀನುದಾರನಿಗೆ ಎರಡು ಮುಖ್ಯವಾದ ಹಕ್ಕುಗಳನ್ನು ನೀಡಿದೆ. ಪಕ್ಷಗಳು ನಿರ್ದಿಷ್ಟವಾದ ಒಪ್ಪಿಗೆಯನ್ನು ಕೊಟ್ಟಿಲ್ಲದೇ ಇದ್ದರೂ ಸಾಲಗಾರನಿಂದ ಜಾಮೀನುದಾರನಿಗೆ ನಷ್ಟಭರ್ತಿ ಮಾಡುವ ವಾಗ್ದಾನವು ಸ್ವಯಂಚಾಲಿತ ಅಥವಾ ಇಂಗಿತವಾಗಿ ಇದ್ದೇ ಇರುತ್ತದೆ. ಯಾವಾಗ ಜಾಮೀನುದಾರನು ಹೊಣೆಯನ್ನು ವಿಮೋಚನೆಗೊಳಿಸುತ್ತಾನೋ, ಅವನು ಲೇಣೇದಾರನ ಸ್ಥಾನಕ್ಕೆ ಪ್ರತ್ಯಾಸೀನ ನಾಗುತ್ತಾನೆ ಮತ್ತು ಪ್ರಧಾನ ಋಣಿಯ ವಿರುದ್ಧ ಲೇಣೇದಾರನಿಗೆ ಇರುವ ಎಲ್ಲಾ ಹಕ್ಕುಗಳನ್ನೂ ಹೊಂದುತ್ತಾನೆ. ಲೇಣೇದಾರನ ಅನುಮತಿ ಇಲ್ಲದೆ ಸಾಲಗಾರನ ವಿರುದ್ಧ ದಾವೆ ಹೂಡಲು ಶಕ್ತಗೊಳಿಸುತ್ತದೆ. ಈ ಹಕ್ಕಿನ ಹಸ್ತಾಂತರಣ ವಹಿಸಿಕೊಡುವಿಕೆಯು ಕಾನೂನಿನ ಪ್ರವರ್ತನೆಯಿಂದಾಗಿ ಮಾತ್ರ ಅಲ್ಲದೆ ಸ್ವಾಭಾವಿಕ ನ್ಯಾಯದಿಂದಲೂ ಆಗುತ್ತದೆ. ಅಮೃತಲಾಲ್ ವಿರುದ್ಧ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ (Amritlal Vs. State Bank of Travancore AIR 1968 SC 1432) ನೋಡಿರಿ.

ಜಾಮೀನಿದಾರನು ಲೇಣೇದಾರನ ವಿರುದ್ಧ ಎಷ್ಟು ಮುಖ್ಯವಾದ ಹಕ್ಕುಗಳನ್ನು ಹೊಂದಿರುತ್ತಾನೆ. ಅಂದರೆ ವರ್ಗ ೧೪೧ ರ ಪ್ರಕಾರ ಲೇಣೇದಾರನು ಋಣಿಯ ವಸ್ತುಗಳ ಪ್ರಯೋಜನವನ್ನು ಪಡೆಯುವ ಹಾಗೆ ಜಾಮೀನುದಾರನೂ ಸಹ ಅವನಿಗೆ ಗೊತ್ತಿರಲಿ ಅಥವಾ ಗೊತ್ತಿರದೇ ಇರಲಿ ಯಾವುದೇ ಅಡುವಿಟ್ಟ ಅಥವಾ ಇತರ ವಸ್ತುಗಳ ಪ್ರಯೋಜನ ಪಡೆದುಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ. ಜಾಮೀನುದಾರನ ಹೊಣೆಗಾರಿಕೆಯು ಬಹಳ ಮುಖ್ಯ ಏಕೆಂದರೆ ಅಂದರೆ ಲೇಣೇದಾರನು ಜಾಮೀನುದಾರನ ಸಮ್ಮತಿಯಿಲ್ಲದೆ ವಸ್ತುವನ್ನು ಕಳೆದುಕೊಂಡರೆ ಅಥವಾ ಬಿಟ್ಟುಕೊಟ್ಟರೆ ಜಾಮೀನುದಾರನು ಅಷ್ಟು ಮೌಲ್ಯಕ್ಕೆ ವಿಮೋಚನೆ ಹೊಂದುತ್ತಾನೆ. ಈ ಉಪಬಂಧದ ವ್ಯಾಪ್ತಿಯನ್ನು ಜಾಮೀನುದಾರನ ಪರವಾಗಿ ಸರ್ವೋಚ್ಚ ನ್ಯಾಯಾಲಯವು ಸ್ಟೇಟ್

ಆಫ್ ಮಧ್ಯಪ್ರದೇಶ ವಿರುದ್ಧ ಕಾಳೂರಾಂ (State of Madhya Pradesh Vs. Kaluram AIR 1967 SC 1105) ಮೊಕದ್ದಮೆಯಲ್ಲಿ ಬಹಳ ವಿಸ್ತಾರವಾಗಿ ಹೇಳಿದೆ. ಇಲ್ಲಿ ಒಬ್ಬ ಮನುಷ್ಯನು ರಾಜ್ಯದಿಂದ ಒಂದು ನಿಗದಿತ ಬೆಲೆಗೆ ಮರವನ್ನು ನಾಲ್ಕು ಸಮ ಕಂತುಗಳಲ್ಲಿ ಹಣ ಸಂದಾಯ ಮಾಡುವುದಾಗಿ ಖರೀದಿ ಮಾಡಿದ್ದನು. ಅವನು ಕರ್ತವ್ಯಲೋಪ ಮಾಡಿದರೆ ರಾಜ್ಯವು ಮರ ಕೊಡುವುದನ್ನು ನಿಲ್ಲಿಸಿ ಉಳಿದ ಮರವನ್ನು ಮಾರಿ ಹಣ ತೆಗೆದುಕೊಳ್ಳಬಹುದು. ಎಂದು ಕರಾರಿನಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ರಾಜ್ಯ ಸರ್ಕಾರವು ಅವನು ಹಣಕಟ್ಟದೆ ಕರ್ತವ್ಯಲೋಪ ಮಾಡಿದ್ದರೂ ಸಹ ಅವನಿಗೆ ಮರ ತೆಗೆಯಲು ಪುರಸ್ಕರಿಸಿತು. ಜಾಮೀನುದಾರನ ವಿರುದ್ಧ ನಷ್ಟದ ವಸೂಲಿಗಾಗಿ ದಾವೆ ಹೂಡಿದರು. ಇದಕ್ಕೆ ಜಾಮೀನುದಾರನು ಹೊಣೆಯಲ್ಲ ಎಂದು ನ್ಯಾಯಾಲಯವು ನಿರ್ಧರಿಸಿತು. ಏಕೆಂದರೆ, ರಾಜ್ಯವು ಋಣಿಯ ಕರ್ತವ್ಯಲೋಪವಾದ ಕೂಡಲೇ ಮರ ತೆಗೆಯುವಿಕೆಯನ್ನು ನಿಲ್ಲಿಸಬೇಕಾಗಿತ್ತು. ಅದು ನಿರ್ಲಕ್ಷ್ಯದಿಂದಾಗಿ ಹಿಡಿತವನ್ನು ಕಳೆದುಕೊಂಡಿದ್ದು ವರ್ಗ ೧೪೧ ನ್ನು ಉಲ್ಲಂಘಿಸಿದ್ದರಿಂದ ಜಾಮೀನುದಾರನನ್ನು ವಿಮೋಚಿಸಲಾಯಿತು.

ನಾವು ಮೊದಲೇ ಗಮನಿಸಿರುವಂತೆ ಹೊಣೆಗಾರಿಕೆಯು ಒಪ್ಪಿಕೊಂಡ ಪರಿಮಾಣದ ಬಗ್ಗೆಯೂ ಕೂಡ ಸಹವ್ಯಾಪ್ತ. ಆದರೆ ಎಲ್ಲಿ ಸಾಲಗಾರನ ಹೊಣೆಗಾರಿಕೆಯನ್ನು ವಿಶೇಷ ಶಾಸನದ ಉಪಬಂಧಗಳ ಮೇರೆಗೆ ಕಡಿಮೆ ಮಾಡಲಾಗುವುದೋ ಆಗ ಈ ನಿಯಮದ ಅನ್ವಯಿಕತೆಯ ಬಗ್ಗೆ ಸಮಸ್ಯೆಗಳು ಬಂದಿವೆ. ಋಣ ಪರಿಹಾರ ಕಾಯಿದೆಯ ಪ್ರಕಾರ ಅದರಲ್ಲೂ ಬೇಸಾಯ ಋಣಗಳ ಬಗ್ಗೆ ಬಡ್ಡಿಯು ಮಿತಿಮೀರಿದಾಗ ದರ ಕಡಿಮೆ ಮಾಡುವುದಕ್ಕೆ ಅನುಮತಿ ಕೊಡಲಾಗಿದೆ. ಅಂತಹಾ ಸನ್ನಿವೇಶಗಳಲ್ಲಿ ನ್ಯಾಯಿಕ ಅಭಿಪ್ರಾಯದ ಬಗ್ಗೆ ಘರ್ಷಣೆ ಇತ್ತು. ಕೇರಳದ ನ್ಯಾಯಮೂರ್ತಿ ಗೋಪಾಲನ್ ನಂಬಿಯಾರ್‌ರವರು ಅಯಪ್ಪುನ್ನಿಮಣಿ ವಿರುದ್ಧ ದೇವಸ್ಸಿ (Ayupunni Mani Vs. Devassy AIR 1966 Ker. 203) ಮೊಕದ್ದಮೆಯಲ್ಲಿ ಒಂದು ಸ್ಮರಣೀಯ ವಿವರಣೆ ನೀಡಿದ್ದಾರೆ. ಕರಾರಿನ ಪ್ರಾರಂಭದಲ್ಲಿ ಜಾಮೀನುದಾರನು ಸಂಪೂರ್ಣ ಸಾಲವನ್ನು ಮರು ಸಂದಾಯ ಮಾಡಲು ಖಾತರಿ ಕೊಟ್ಟಿದುದರಿಂದಾಗಿ ಅವನು ಸಂಪೂರ್ಣ ಹಣವನ್ನು ಸಂದಾಯ ಮಾಡಲು ಬದ್ಧನಾಗಿರುತ್ತಾನೆ ಎಂಬ ವಾದವನ್ನು ಅವರು ತಿರಸ್ಕರಿಸಿದರು. ಶಾಸನ ಕಡಿತವು ಜಾಮೀನುದಾರನ ಹೊಣೆಗಾರಿಕೆಯನ್ನು ನಿರ್ಮೂಲ ಮಾಡುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ ಬಂದಿತು. ಪ್ರಾಜ್ಞ ನ್ಯಾಯಾಧೀಶರ ತರ್ಕವೇನೆಂದರೆ, ಶಾಸನದ ಉಪಬಂಧಗಳನ್ನು ಸಾಲಗಾರನಿಗೆ ಪ್ರಯೋಜನವಾಗುವಂತೆ ಉದ್ಧರಿಸಬೇಕು ಇಲ್ಲದಿದ್ದರೆ ಲೇಣೇದಾರನು ಅನುಮತಿಸಲಾದ ಮೊತ್ತವನ್ನು ಸಾಲಗಾರನಿಂದ ವಸೂಲು

ಮಾಡುತ್ತಾನೆ ಮತ್ತು ಬಾಕಿಯನ್ನು ಜಾಮೀನುದಾರರಿಂದ ವಸೂಲು ಮಾಡುತ್ತಾನೆ. ವರ್ಗ ೧೪೫.ರ ಪ್ರಕಾರ ಜಾಮೀನುದಾರನು ಋಣಿಯಿಂದ ಹಣವನ್ನು ಹಿಂದಕ್ಕೆ ಪಡೆಯುವ ಹಕ್ಕುಳ್ಳವನಾಗಿರುತ್ತಾನೆ. ಸಾಲಗಾರನನ್ನು ಶಾಸನದ ಪ್ರಯೋಜನದಿಂದ ಇಲ್ಲಿ ಸಂಪೂರ್ಣವಾಗಿ ಅಲ್ಲಗಳೆಯ ಲಾಗಿದೆ. ಇದಕ್ಕೆ ಅನುಮತಿಸಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಮದ್ರಾಸ್ ಉಚ್ಚತಮ ನ್ಯಾಯಾಲಯದ ಪೂರ್ಣ ನ್ಯಾಯಾಪೀಠವು ಸುಬ್ರಾಮಿಯ ಚೆಟ್ಟಿಯಾರ್ ವಿರುದ್ಧ ಎಂ. ಪಿ. ನಾರಾಯಣ ಸ್ವಾಮಿ (Subramia Chettiar Vs. M. P. Narayana Swami Gounder AIR 1951 MAD 48) ಮೊಕದ್ದಮೆಯಲ್ಲಿ ಅದೇ ನಿರ್ಣಯಕ್ಕೆ ಬಂದಿತು.

ಜಾಮೀನುದಾರನು ಇತರ ಜಾಮೀನುದಾರರ ವಿರುದ್ಧ ಕೆಲವು ಮುಖ್ಯ ಹಕ್ಕುಗಳನ್ನು ಹೊಂದಿರುತ್ತಾರೆ. ಲೇಣೇದಾರನು ತನ್ನ ಇಚ್ಛಾನುಸಾರವಾಗಿ ಯಾವುದಾದರೂ ಸಹ ಜಾಮೀನುದಾರನನ್ನು ಬಿಡುಗಡೆ ಮಾಡಿದರೆ, ಅದರಿಂದಾಗಿ ಬೇರೆ ಜಾಮೀನುದಾರರ ವಿಮೋಚನೆಯಾಗುವುದಿಲ್ಲ. ಆದರೆ ಬಿಡುಗಡೆಯಾದ ಜಾಮೀನುದಾರನು ಕರ್ತವ್ಯಲೋಪ ಉಂಟಾದಾಗ ಬೇರೆಯವರಿಗೆ ಹಣ ಕೊಡಬೇಕಾದಾಗ ತನ್ನ ಸಹ ಜಾಮೀನುದಾರರಿಗೆ ಮೊದಲಿನಂತೆಯೇ ಹೊಣೆಯಾಗಿ ಇರುತ್ತಾನೆ. ಶ್ರೀಚಂದ್ ವಿರುದ್ಧ ಜಗದೀಶ್ (Sri.Chand Vs. Jagadesh Prasad Kishan Chand AIR 1966 SC 1427) ನೋಡಿರಿ. ಅದರಲ್ಲಿ ಒಂದೇ ಸಾಲಕ್ಕೆ ಹಲವಾರು ಜಾಮೀನುದಾರರಿದ್ದು, ಪ್ರತಿಯೊಬ್ಬರೂ ಅವರು ಜಾಮೀನು ಕೊಡಲು ಒಪ್ಪಿಕೊಂಡಷ್ಟು ಮೊತ್ತವನ್ನು ಕೊಡಲು ಹೊಣೆಯಾಗಿರುತ್ತಾರೆಯೇ ಹೊರತು ದಾಮಾಷಾ ಪ್ರಕಾರವಲ್ಲ (not retebly). ಜಾಮೀನುದಾರರು ಹಣ ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಬೇರೆ ಖಾತರಿದಾರರ ಬಗ್ಗೆ ತಿಳುವಳಿಕೆ ಇಲ್ಲದಿದ್ದರೂ ಸಹ ಇರುತ್ತದೆ. ಖಾತರಿಯ ನಿರಾಕರಣೆ ಸಾಧ್ಯವಿಲ್ಲ. ಆದರೆ ಭಾವೀ ವ್ಯವಹಾರಗಳ ಬಗ್ಗೆ ಜಾಮೀನುದಾರನ ಮರಣವು ನಿವರ್ತವಾಗಿ ಪ್ರವರ್ತಿಸುತ್ತದೆ. ಮತ್ತು ಇನ್ನೂ ಹೆಚ್ಚಾಗಿ, ಆಗಲೇ ಇರುವ ಖಾತ್ರಿಯನ್ನು ಲೇಣೆದಾರನಿಗೆ ನೋಟೀಸು ಕೊಡುವುದರ ಮೂಲಕ ಮುಂಬರುವ ಭಾವೀ ವ್ಯವಹಾರಗಳಿಂದ ರದ್ದುಗೊಳಿಸಬಹುದು. ಕರಾರಿನ ವಿಭಿನ್ನತೆಯಿಂದ ಅಥವಾ ಲೇಣೇದಾರನ ಲೋಪ ಅಥವಾ ವಿಲೋಪಮಾಡುವಿಕೆಯಿಂದ ಜಾಮೀನುದಾರನು ವಿಮೋಚನೆಗೊಳ್ಳುವ ಪ್ರಶ್ನೆಯನ್ನು ಆಗಲೇ ಗಮನಿಸಿದ್ದೇವೆ.

****

ಭಾಗ -೨೦

ಸರಕು ರಕ್ಷಣೆಯ ಕರಾರು

(Law of Bailment)

ಸರಕು ರಕ್ಷಣೆ (Bailment) ಮತ್ತು ಆಪಾದಿತ ವ್ಯಕ್ತಿಗೆ ಜಾಮೀನು (Bail) ಕೊಡುವುದು- ಇವೆರಡರ ನಡುವೆ ಇರುವ ವ್ಯತ್ಯಾಸವನ್ನು ನಾವು ಇಲ್ಲಿ ಗಮನಿಸೋಣ. ಸರಕುಗಳನ್ನು ಒಪ್ಪಿಸಿಕೊಡುವ (Bailment) ಸಂದರ್ಭದಲ್ಲಿ ಅಥವಾ ಒಂದು ಕರಾರಿನ ಮೇರೆಗೆ ಬೇರೊಬ್ಬ ವ್ಯಕ್ತಿಗೆ ಚರ ಸ್ವತ್ತುಗಳನ್ನು ಕೆಲ ಸಮಯದ ನಂತರ ವರ್ಗಾವಣೆ ಮಾಡುವುದಕ್ಕೆ ಒಪ್ಪಿಗೆ ಕೊಡುವುದು. ಉದ್ದೇಶ ನೆರವೇರಿದ ಮೇಲೆ ಸರಕನ್ನು ಹಿಂತಿರುಗಿಸುವುದಕ್ಕೆ ಸರಕು ರಕ್ಷಣೆ (Bailment) ಎನ್ನುತ್ತೇವೆ. ಅಂದರೆ ನಾವು ಯಾವುದೇ ವಸ್ತುವನ್ನು ದುರಸ್ತಿಗಾಗಿ ಕೊಡುವುದು ಅಥವಾ ಒಂದು ವಾಹನವನ್ನು ಬೇರೊಬ್ಬರ ವಶದಲ್ಲಿ ಬಿಡುವುದು ಅಥವಾ ಯಾವುದೇ ಉಡುಪನ್ನು ಶುಚಿಕಾರನ (ಧೋಬಿ) ಹತ್ತಿರ ಬಿಡುವುದು ಮುಂತಾದವು ಇದಕ್ಕೆ ಸೇರಿದೆ. ಇಂತಹ ಹಲವಾರು ಸಂದರ್ಭಗಳಲ್ಲಿ ಸ್ಪಷ್ಟ ಕರಾರೇ ಇಲ್ಲದಿರಬಹುದು, ಇದ್ದರೂ ಕ್ರಮವಾದ ಹಕ್ಕು ಮತ್ತು ಕರ್ತವ್ಯಗಳನ್ನು ನಮೂದಿಸದೆ ಅಥವಾ ಒಳಗೊಂಡಿಲ್ಲದೇ ಇರಬಹುದು. ಕರಾರು ಕಾಯಿದೆಯ ೧೪೮ ರಿಂದ ೧೭೧ ವರ್ಗಗಳು ಸರಕು ಇಡುವವನ ಮತ್ತು ಸರಕು ರಕ್ಷಕನ ಸಾಮಾನ್ಯ ಹಕ್ಕು ಮತ್ತು ಹೊಣೆಗಳನ್ನು ನಿರೂಪಿಸುತ್ತವೆ. ಹಿಂದೆ ಸರಕು ರಕ್ಷಕನ ಹೊಣೆಗಾರಿಕೆಯು ಕರಾರಿಲ್ಲದೇ ಇದ್ದರೂ ಸ್ವತಂತ್ರವಾಗಿಯೇ ಉದ್ಭವಿಸುತ್ತದೆಯೇ ಎಂಬ ವಿಷಯದಲ್ಲಿ ಗಣನೀಯ ಭಿನ್ನಾಭಿಪ್ರಾಯವಿತ್ತು. ಆದರೆ ಸರ್ವೋಚ್ಚ ನ್ಯಾಯಾಲಯವು ಸ್ಟೇಟ್ ಆಫ್ ಗುಜರಾತ್ ವಿರುದ್ಧ ಮೆಮನ್ ಮೊಹಮ್ಮದ್ (State of Gujarat Vs. Memon Mohd., AIR (1967) SC 1885) ಮೊಕದ್ದಮೆಯಲ್ಲಿ ಈ ರೀತಿ ಹೇಳಿದೆ. ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡ ಸಾಮಗ್ರಿಗಳು ಸರ್ಕಾರದ ಕೈಯಲ್ಲಿ ಸರಕು ರಕ್ಷಣೆ ಮಾಡಲಾದ ವಸ್ತುಗಳಂತೆಯೇ ಇರುತ್ತವೆ. ಅದರ ಸುರಕ್ಷತೆಯ ಬಗ್ಗೆ ಹೊಣೆ ಇದ್ದೇ ಇರುತ್ತದೆ. ಸರಕು ರಕ್ಷಣೆ ಕರಾರಿನ ಸಾರವೇನೆಂದರೆ ಸರಕಿನ ಸ್ವಾಧೀನವನ್ನು ಒಪ್ಪಿಸುವುದು ಮತ್ತು ಸರಕು ರಕ್ಷಕನು ಅದನ್ನು ಹಿಂತಿರುಗಿಸುವುದು. ಬ್ಯಾಂಕರನ ಹತ್ತಿರ ಇಟ್ಟ ಹಣವು ಸರಕು ರಕ್ಷಣೆಯ ಕರಾರಲ್ಲ. ದೇವೇಂದ್ರ ವಿರುದ್ಧ ಗುಲಾಬ್‌ಸಿಂಗ್)Devendra Kumar Vs. Chaudhary Gulab Singh, ILR 1946 Nag 210)

ಆಪಾದಿತ ವ್ಯಕ್ತಿಗೆ ಜಾಮೀನು ಅಥವಾ ಇನ್ನಾವುದೇ ಆಧಾರ ಇಟ್ಟು, ಅವನನ್ನು ಸ್ವಲ್ಪಕಾಲ ಬಿಡುಗಡೆ ಮಾಡುವುದನ್ನು (ಬೈಲ್ Bail) ಜಾಮೀನು ಎಂದು ಕರೆಯುತ್ತಾರೆ.

ಸರಕನ್ನು ಇಡುವವನ ಕರ್ತವ್ಯಗಳು

(Duties of a Bailor)

ಸರಕು ರಕ್ಷಣೆ, ಅದರ ಸ್ವಾಧೀನ, ವರ್ಗಾವಣೆ ಉಚಿತ ಅಥವಾ ಅಯಾಚಿತವಾಗಿದ್ದರೆ, ಆಗ ಸರಕಿನ ಬಗ್ಗೆ ತಿಳಿದಿರುವ ಲೋಪದೋಷಗಳನ್ನು ಬಹಿರಂಗಪಡಿಸುವುದೊಂದೇ ಹೊಣೆಯಾಗಿರುತ್ತದೆ. ಉದಾಹರಣೆಗೆ, ಒಂದು ವಾಹನವನ್ನು ಸ್ನೇಹಿತನಿಗೆ ಯಾವುದೇ ಬಾಡಿಗೆ ಇಲ್ಲದೆ ಎರವಲು ಮಾಡಿಕೊಟ್ಟರೆ ಕೊಡುವವನು ಬ್ರೇಕ್ ಸರಿಯಾಗಿ ಕೆಲಸ ಮಾಡಿತ್ತಿದೆಯೇ ಇಲ್ಲವೇ ಎಂಬುದನ್ನು ತಿಳಿದಿದ್ದರೆ ಬಹಿರಂಗಪಡಿಸಬೇಕು. ಇದನ್ನು ವರ್ಗ ೧೫೦ ರಲ್ಲಿ ವಿವರಿಸಲಾಗಿದೆ. ಅದರ ಪ್ರಕಾರ ರಕ್ಷಣೆಗಿಟ್ಟ ವಸ್ತುವು ಗಣನೀಯವಾಗಿ ದೋಷಯುಕ್ತವಾಗಿರದೆ ಸರಕು ರಕ್ಷಕನನ್ನು ಹೆಚ್ಚಿನ ಗಂಡಾಂತರಕ್ಕೆ ಗುರಿಪಡಿಸದಂತಿರಬೇಕು.

ಸರಕು ರಕ್ಷಣೆಯು ಸಂಭಾವನೆ ಅಥವಾ ಹಣ ಒಳಗೊಂಡಿದ್ದರೆ ರಕ್ಷಣೆಗಿಡುವವನ ಜವಾಬ್ದಾರಿಯು ಹೆಚ್ಚು. ಸರಕು ರಕ್ಷಕನು ಸರಕಿನಿಂದಾಗಿ ಯಾವುದೇ ಹಾನಿಯನ್ನು ಅನುಭವಿಸಿದರೆ ಅಥವಾ ಪಡೆದ ಉದ್ದೇಶ ಭಂಗವಾದರೆ ಸರಕು ಇಟ್ಟವನು ಯಾವಾಗಲೂ ಆ ನಷ್ಟವನ್ನು ತುಂಬಿಕೊಡುವ ಜವಾಬ್ದಾರಿ ಹೊಂದಿರುತ್ತಾನೆ.

ಸರಕನ್ನು ರಕ್ಷಣೆಗೆ ಪಡೆದಿರುವವನ ಕರ್ತವ್ಯಗಳು

(Duties of a Bailee)

ವರ್ಗ ೧೫೧ ರ ಪ್ರಕಾರ, ಸರಕು ರಕ್ಷಕನ ಪ್ರಥಮ ಕರ್ತವ್ಯವೆಂದರೆ, ಅವನು ರಕ್ಷಣೆಗಾಗಿ ಇಟ್ಟ ಸರಕನ್ನು ಒಬ್ಬ ವಿವೇಕವುಳ್ಳ ವ್ಯಕ್ತಿಯು ತನ್ನ ಸ್ವಂತ ಸರಕುಗಳನ್ನು ಹೇಗೆ ರಕ್ಷಿಸುತ್ತಾನೆಯೋ ಹಾಗೆ ಜಾಗರೂಕತೆಯಿಂದ ಕಾಪಾಡಬೇಕು. ವಸ್ತುವಿನ ವಿಚಾರದಲ್ಲಿ ಅಗತ್ಯಪಡಿಸಲಾದ ರಕ್ಷಣೆಯ ಮಟ್ಟದಲ್ಲಿ ಏನಾದರೂ ಕೊರತೆ ಇದ್ದರೆ, ಅವನು ಅದಕ್ಕೆ ಜವಾಬ್ದಾರನಾಗುತ್ತಾನೆ. ಆದರೆ ಅವನ ಹೊಣೆಗಾರಿಕೆಯು ವಿಮಾಕರ್ತನ ಹೊಣೆಗಾರಿಕೆಯ ತರಹವಲ್ಲ. ವರ್ಗ ೧೫೨ ರ ಪ್ರಕಾರ ತಾನು ಯುಕ್ತ ಜಾಗರೂಕತೆಯನ್ನು ವಹಿಸಿರುವುದಾಗಿ ರುಜುವಾತು ಪಡಿಸುವುದು ಸರಕು ರಕ್ಷಕನ ಕರ್ತವ್ಯವಾಗಿರುತ್ತದೆ.

ಸರಕು ರಕ್ಷಕನು ಸರಕಿನಿಂದ ಅನಧಿಕೃತ ಪ್ರಯೋಜನವನ್ನು ಪಡೆದುಕೊಂಡು ಅದರಿಂದ ಯಾವುದೇ ನಷ್ಟಉಂಟಾದರೆ ಸರಕು ರಕ್ಷಕನೇ ಸಂಪೂರ್ಣವಾಗಿ ಜವಾಬ್ದಾರನಾಗುತ್ತಾನೆ. ಈ ತರಹ ಕಾರ್ಯವು ವರ್ಗ ೧೫೩ ಮತ್ತು ೧೫೪ ರ ಪ್ರಕಾರ, ಸರಕು ರಕ್ಷಣೆಯು ಕೊನೆಯಾಗುವುದಕ್ಕೆ ಕಾರಣವಾಗುತ್ತದೆ. ಸರಕುಗಳ ಅನಧಿಕೃತ

ಮಿಶ್ರಣವು ಕೆಲವು ವೇಳೆ ತೊಂದರೆಯನ್ನು ಉಂಟು ಮಾಡುವ ಸಂಭವವಿರುತ್ತದೆ. (ವರ್ಗ ೧೫೫ ಮತ್ತು ೧೫೬).

ಸರಕು ರಕ್ಷಣೆಯ ಕರಾರಿನ ಅತಿ ಮುಖ್ಯವಾದ ಅಂಶವೆಂದರೆ, ನಿಗದಿಸಿದ್ದಂತೆ ಸರಕನ್ನು ತ್ವರಿತವಾಗಿ ವಾಪಸ್ಸು ಮಾಡುವುದು ಮತ್ತು ವಾಪಸ್ಸು ಮಾಡುವುದರಲ್ಲಿ ವಿಫಲವಾದರೆ ಸರಕು ರಕ್ಷಕನನ್ನು ಸಂಪೂರ್ಣ ಜವಾಬ್ದಾರನನ್ನಾಗಿ ಮಾಡುವುದು. ಇದರಲ್ಲಿ ಮುಖ್ಯವಾದ ಮೊಕದ್ದಮೆಯು ಷಾ ಮತ್ತು ಕಂಪನಿ ವಿರುದ್ಧ ಸಿಮ್ಮನ್ಸ್ ಅಂಡ್ ಸನ್ಸ್ (Shaw and Co., Vs. Symmans & Sons, (1917) 1, KB 799) ಮೊಕದ್ದಮೆಯಲ್ಲಿ ವಾದಿಯು ಪುಸ್ತಕಗಳನ್ನು ಬೈಂಡ್ ಮಾಡಿದ ನಂತರ ಹಿಂದಿರುಗಿಸುವ ಕೆಲಸವನ್ನು ಇನ್ನೊಬ್ಬನಿಗೆ ವಹಿಸಿಕೊಟ್ಟಿದ್ದನು, ಬೆಂಕಿ ಅಪಘಾತದಲ್ಲಿ ಎಲ್ಲಾ ಪುಸ್ತಕಗಳೂ ಭಸ್ಮವಾಗಿ ಹೋದವು. ಈ ಅಪಘಾತಕ್ಕೆ ಸರಕು ರಕ್ಷಕನು ಸಾಮಾನ್ಯವಾಗಿ ಹೊಣೆಗಾರನಲ್ಲದಿದ್ದರೂ ಸಹ ಅವನು ನಿರ್ದಿಷ್ಟ ಪಡಿಸಿದ ಸಮಯದೊಳಗೆ ಪುಸ್ತಕವನ್ನು ಹಿಂದಿರುಗಿಸದೆ ಇದ್ದುದ್ದರಿಂದ ಅವನ ವಶ ಅನಧಿಕೃತವಾಗಿ ಮತ್ತು ಅಪಘಾತವು ಪುಸ್ತಕಗಳನ್ನು ಹಿಂತಿರುಗಿಸಲು ಗೊತ್ತು ಪಡಿಸಿದ ಸಮಯದ ನಂತರ ಉಂಟಾದುದರಿಂದ ಅವನನ್ನು ಪೂರ್ಣ ಹೊಣೆ ಗಾರನೆಂದು ತೀರ್ಮಾನಿಸಲಾಯಿತು. ಸರಕು ರಕ್ಷಕನು ಸರಕನ್ನು ಹಿಂತಿರುಗಿಸಲು ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದು ಮತ್ತು ತಾನೇ ಸ್ವಾಮ್ಯವನ್ನು ಹೊಂದಿರುವನೆಂದು ಹೇಳಲಾಗುವುದಿಲ್ಲ. ಯಾವುದಾದರೂ ವ್ಯಕ್ತಿಗೆ ಇನ್ನೊಬ್ಬರು ಕಳೆದುಕೊಂಡ ಸರಕು ಸಿಕ್ಕಿದರೆ ಅವನು ಸರಕು ರಕ್ಷಕನ ಬಾಧ್ಯತೆಯನ್ನು ಹೊಂದಿರುತ್ತಾನೆ ಮತ್ತು ಅವನನ್ನು ಸರಕು ರಕ್ಷಕನೆಂದೇ ಪರಿಗಣಿಸಲಾಗುವುದು. ಸಾಮಾನ್ಯವಾಗಿ ಅವನು ತೊಂದರೆ ವೆಚ್ಚ ನಷ್ಟ ಪರಿಹಾರಕ್ಕಾಗಿ ದಾವೆ ಹೂಡಲು ಅವಕಾಶವಿರುವುದಿಲ್ಲ. ಆದರೆ ಅವನು ವಸ್ತುವಿನ ಮೇಲೆ ಧಾರಣಾಧಿಕಾರ (Lien) ಹೊಂದಿರುತ್ತಾನೆ.

ಸರಕು ರಕ್ಷಕನ ಹಕ್ಕುಗಳು

(Rights of a Bailee)

ವರ್ಗ ೧೭೦ ಮತ್ತು ೧೭೧ ರಲ್ಲಿ ಸರಕು ರಕ್ಷಕನಿಗೆ ಕೊಟ್ಟಿರುವ ಅತಿ ಮುಖ್ಯವಾದ ಹಕ್ಕುಗಳನ್ನು ವಿವರಿಸಲಾಗಿದೆ. ಸರಕು ರಕ್ಷಕನು ಕೆಲವು ಅಧಿಕಾರಗಳನ್ನು ಹೊಂದಿರುತ್ತಾನೆ. ಅದು ಸರಕು ರಕ್ಷಕನಿಗೆ ಕೊಡಬೇಕಾದ ಬಾಕಿಯನ್ನೆಲ್ಲಾ ಕೊಡುವ ತನಕ ತನಗೆ ವಹಿಸಿದ ಸರಕುಗಳನ್ನು ಉಳಿಸಿಕೊಳ್ಳುವ ಅಥವಾ ತಡೆಹಿಡಿಯುವ (Lien) ನಿರ್ದಿಷ್ಟ ಅಧಿಕಾರವನ್ನು ವರ್ಗ ೧೭೦ ರಲ್ಲಿ ಹೇಳಲಾಗಿದೆ. ಸರಕು ರಕ್ಷಕನು ಸರಕುಗಳ ಬಗ್ಗೆ (ಒಡವೆ ಮಾಡುವವನಿಗೆ ಮತ್ತು ದರ್ಜಿಗೆ ಕೊಟ್ಟ ಸಾಮಗ್ರಿಯ ತರಹ) ಸ್ವಲ್ಪ ಕೆಲಸ ಅಥವಾ ಕುಶಲತೆ ಅಥವಾ ದುಡಿಮೆಯನ್ನು ಕೈಗೊಂಡಿದ್ದರೆ ಆಗ ವಿಶೇಷ ತಡೆ

ಅಧಿಕಾರ ಉದ್ಭವಿಸುತ್ತದೆ. ಇದು ನೌಕರ ವರ್ಗವನ್ನು ರಕ್ಷಿಸುವುದಕ್ಕೋಸ್ಕರ ಮಾಡಿರುವ ಉಪಬಂಧವಾಗಿದ್ದು ಅವರು ಮಜೂರಿ ವಸೂಲು ಮಾಡುವುದಕ್ಕೋಸ್ಕರ ದಾವೆ ಹೂಡಬೇಕಾದ ಪರಿಸ್ಥಿತಿ ಎದುರಿಸದಿರಲೆಂದು ಮಾಡಲಾಗಿದೆ.

ಆದರೆ ಘರ್ಷಣೆ ಉಂಟಾದರೆ ಇನ್ನೊಂದು ಪಕ್ಷವು ದಾವೆ ಹೂಡುವುದಕ್ಕೆ ಅವಕಾಶ ಕೊಡಲಾಗಿದೆ. ಮಾಲೀಕನ ವಿರುದ್ಧವೂ ಹಣ ಸಂದಾಯವಾಗುವವರೆಗೆ ಸರಕನ್ನು ತಡೆಹಿಡಿಯುವ ಈ ಹಕ್ಕು ಬಹಳ ಪ್ರಾಮುಖ್ಯವಾದದ್ದು. ಸಾಮಾನ್ಯವಾದ ಲೆಕ್ಕಗಳ ಬಾಕಿ ಅಥವಾ ನಿರ್ದಿಷ್ಟವಾಗಿ ಬಾಕಿ ಇರುವ ಮೊತ್ತಗಳಿಗೆ ರಕ್ಷಣೆಗೆ ಇಟ್ಟ ಸರಕುಗಳ ವಿಷಯದಲ್ಲಿ ತಡೆ ಅಧಿಕಾರವು ಬ್ಯಾಂಕರ್ ಅಥವಾ ದಲ್ಲಾಳಿಗೆ ದೊರೆಯುತ್ತದೆ. ಏಕೆಂದರೆ ಅವನು ಮಾರಾಟ ಮಾಡುವ ಏಜೆಂಟ್ ಆಗಿರುತ್ತಾನೆ. ವರ್ಗ ೧೭೧ ರ ಪ್ರಕಾರ ಅಧಿಕಾರವು ಹಡಗು ಕಟ್ಟೆ, ಯಜಮಾನ, ನ್ಯಾಯವಾದಿಗಳು ಮತ್ತು ಸಮುದ್ರ ವಿಮೆಯ ವಿಮಾ ದಲ್ಲಾಳಿಗಳಿಗೂ ದೊರೆಯುತ್ತದೆ. ಇದು ಬಹಳ ಮುಖ್ಯವಾದ ಹಕ್ಕು ಎಂಬುದನ್ನು ಗಮನಿಸಬೇಕು. ಈ ವರ್ಗದ ವ್ಯಕ್ತಿಗಳು ಬಾಕಿಯನ್ನು ವಸೂಲು ಮಾಡಲು ಕಾನೂನು ಹೆಚ್ಚಿನ ರಕ್ಷಣೆಯನ್ನು ನೀಡಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

****

ಭಾಗ - ೨೧

ಗಿರವಿ

(ಅಡವು, ಒತ್ತೆ, Pledge)

ಸರಕು ರಕ್ಷಣೆಯ ಕರಾರಿನ ವಿಶೇಷ ಬಗೆಯು 'ಅಡವು' ಅಥವಾ 'ಗಿರವಿ'. ಅದರಲ್ಲಿ ಲೇಣೇದಾರನಿಂದ ಸಾಲ ತೆಗೆದುಕೊಳ್ಳಲು ಅಥವಾ ಒಂದು ಕರಾರನ್ನು ಮುಂದುವರಿಸಲು ಮಾಡಿದ ವಾಗ್ದಾನದ ನೆರವೇರಿಕೆಗಾಗಿ ಸರಕನ್ನು ಲೇಣೆದಾರನಿಗೆ ಕೊಡಲಾಗುತ್ತದೆ. ಸ್ವಾಧೀನ ಒಪ್ಪಿಸುವಿಕೆಯ ವಿಷಯದಲ್ಲಿ ಬಹಳ ವಿವಾದ ಉಂಟಾಗಿದೆ. ಏಕೆಂದರೆ ಸರಕುಗಳನ್ನು ವಾಸ್ತವಿಕ ವರ್ಗಾವಣೆ ಮಾಡಿರುವುದಿಲ್ಲ. ಆದರೆ ಒಂದು ಸಾಂಕೇತೀಕ ವರ್ಗಾವಣೆ ಮಾಡಿರಬಹುದು. ಉದಾಹರಣೆಗೆ, ಸರಕುಗಳನ್ನು ಸಂಗ್ರಹಿಸಿದ ಉಗ್ರಾಣದ ಬೀಗದ ಕೈ ಒಪ್ಪಿಸುವುದು ಮುಂತಾದವು.

ಸರಕುಗಳನ್ನು ಸಾಗಿಸಲು ವಾಹನಕ್ಕೆ ಒಪ್ಪಿಸಿದಾಗ ಕೊಟ್ಟ ರಸೀದಿ ಮತ್ತು ಅಂತಹ ರಸೀದಿಯನ್ನು ಒಪ್ಪಿಸುವಿಕೆಯು, ಅಡುವು ಆಗಿ ಮಾರ್ಪಾಡಾಗುವುದೇ ಎಂಬ ಪ್ರಶ್ನೆಗೆ ಉತ್ತರವನ್ನು ನ್ಯಾಯಿಕ ಅಧಿಕಾರವು ವಿವರಿಸುತ್ತದೆ. ರೈಲ್ವೆಯವರು ರೈಲ್ವೆ ರಸೀದಿ ಎಂಬುದನ್ನು ಕೊಡುವುದನ್ನು ನಾವು ಇಲ್ಲಿ ಸ್ಮರಿಸಬಹುದು ಮತ್ತು ಇದು ಸಾಮಾನ್ಯವಾಗಿ ಮೂರನೇ ಪಕ್ಷದ ಪರವಾಗಿ ಹಿಂಬರಹ ಮಾಡಲಾಗಿದ್ದರೆ, ಅವನು ಸರಕುಗಳನ್ನು ವಸೂಲು ಮಾಡುವ ಸಾಧ್ಯತೆಯನ್ನು ಕೊಡುತ್ತದೆ. ಕೆನರಾ ಇಂಡಸ್ಟ್ರಿಯಲ್ ಅ್ಯಂಡ್ ಬ್ಯಾಂಕಿಂಗ್ ಸಿಂಡಿಕೇಟ್ ವಿರುದ್ಧ ರಾಮಚಂದ್ರ (C. I. & B. Syndicate Vs. Ram Chandra, AIR 1968 MYS 133) ಮೊಕದ್ದಮೆಯಲ್ಲಿ ಸಾರ್ವಜನಿಕ ವಾಹನ ಸಂಸ್ಥೆಯು ಕೊಟ್ಟ ಸರಕು ಪಟ್ಟಿಯು ಸ್ವಾಮ್ಯ ದಸ್ತಾವೇಜಲ್ಲ (Document of Title) ಮತ್ತು ಅಂತಹಾ ದಸ್ತಾವೇಜಿನ ವರ್ಗಾವಣೆಯು ಸರಕುಗಳ ವರ್ಗಾವಣೆಯಾಗಿ ಪರಿಣಾಮ ಹೊಂದುವುದಿಲ್ಲ ಎಂದು ತೀರ್ಪು ಕೊಡಲಾಯಿತು.

ಭಾರತದ ಸರ್ವೋಚ್ಚ ನ್ಯಾಯಾಲಯ ಮೋರ್ವಿಮರ್ಕೆಂಟೈಲ್ ಬ್ಯಾಂಕ್ ವಿರುದ್ಧ ಯುನಿಯನ್ ಆಫ್ ಇಂಡಿಯಾ (Morvi merchantile Bank Vs. Union of India AIR 1965 SC 1954) ತೀರ್ಪಿನಲ್ಲಿ ಈ ಅಂಶವನ್ನು ಪರ್ಯಾಲೋಚಿಸುವ ಸಂದರ್ಭ ಒದಗಿತ್ತು. ಅದರಲ್ಲಿ ರೈಲ್ವೆ ರಸೀದಿಯನ್ನು ಮುಂಗಡ ಹಣ ಪಡೆದುಕೊಂಡ ನಂತರ, ಲೇಣೇದಾರ ಬ್ಯಾಂಕ್‌ನ ಪರವಾಗಿ ಹಿಂಬರಹ ವರ್ಗಾವಣೆ ಮಾಡಲಾಗಿತ್ತು. ಸಾಗಣೆಯಲ್ಲಿ ಸರಕುಗಳು ಕಳೆದು ಹೋಯಿತು ಮತ್ತು ಬ್ಯಾಂಕು ರೈಲ್ವೆ ವಿರುದ್ಧ ದಾವೆ ಹೂಡಿತು. ನ್ಯಾಯಾಲಯದ ಬಹುಮಂದಿ ನ್ಯಾಯಮೂರ್ತಿ ಗಳು ರೈಲ್ವೇ ರಸೀದಿ ಕೊಡುವಿಕೆಯು ಸರಕುಗಳ ಒಪ್ಪಿಸುವಿಕೆಯಂತೆಯೇ ಫಲಿಸುತ್ತದೆ ಎಂದಿದ್ದಾರೆ. ಆದ್ದರಿಂದ

ಅದು ಒಂದು ಮಾನ್ಯ ಅಡುವಾಗಿ ಮಾರ್ಪಾಡಾಗುತ್ತದೆ ಎಂದು ನಿರ್ಧರಿಸಿ ಬ್ಯಾಂಕಿಗೆ ದಾವೆ ಹೂಡಲು ಹಕ್ಕನ್ನು ಕೊಟ್ಟಿತು. ನ್ಯಾಯಾಲಯವು ಬ್ಯಾಂಕಿಗೆ ಬರೀ ಮುಂಗಡ ಹಣವನ್ನಷ್ಟೇ ಅಲ್ಲದೆ ಸರಕುಗಳ ಪೂರ್ತಿ ಬೆಲೆಯನ್ನು ಮಾಲೀಕನಂತೆಯೇ ಪೂರ್ಣವಾಗಿ ವಸೂಲು ಮಾಡಲು ಅವಕಾಶ ಕೊಟ್ಟಿತು. ನ್ಯಾಯಾಲಯವು "ಒಂದು ಅಡುವು ಸರಕು ರಕ್ಷಣೆಯಾಗಿದ್ದು ಸಾಲವನ್ನು ಸಂದಾಯ ಮಾಡಲು ಅವಶ್ಯಕ ಜಾಮೀನಾಗಿರುತ್ತದೆ. ಅಡುವಿನ ವಸ್ತುವಿನ ಹರಣ ಅಥವಾ ಹಾನಿ ಉಂಟಾದಾಗ ಅಡುವಿನ ಒಡೆಯನಿಗೆ ಯಾವ ಕ್ರಮೋಪಾಯವಿರುವುದೋ ಅದೇ ಕ್ರಮೋಪಾಯಗಳು ಅಡುವು ಇಡಿಸಿಕೊಂಡವನಿಗೂ ಇರುತ್ತದೆ ಎಂದು ಅಭಿಪ್ರಾಯಪಟ್ಟಿತು.

ಮೇಲೆ ಹೇಳಿರುವುದು ಸ್ವಾಧೀನವನ್ನು ಒಪ್ಪಿಸುವಿಕೆಯ ವಾಸ್ತವಿಕತೆಯಲ್ಲದೆ ಭಾವಿಕ ಪ್ರಕರಣವಾಗಿದೆ. ಆದರೆ ಸ್ವಾಧೀನ ಒಪ್ಪಿಸುವಿಕೆಯು ಅವಶ್ಯಕವಾಗಿ ಅಡುವಾಗಿ ರೂಪಿತಗೊಳ್ಳುತ್ತದೆ ಮತ್ತು ಇರುವ ಸರಕುಗಳ ಮೇಲೆ ಆಜ್ಞೆಯನ್ನು ಸೃಷ್ಟಿಸುತ್ತದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ರೆವಿನ್ಯೂ ಅಥಾರಿಟಿ ವಿರುದ್ಧ ಸುದರ್ಶನಮ್ (Revenue Authority Vs. Sudarshanam Pictures AIR 1968 MAD 319) ಮೊಕದ್ದಮೆಯಲ್ಲಿ ಈ ರೀತಿ ನಿರ್ಧರಿಸಲಾಯಿತು. ಒಬ್ಬ ಚಲನಚಿತ್ರ ನಿರ್ಮಾಪಕನು ಮುಂಬರುವ ಚಲನಚಿತ್ರದ ಮುದ್ರಣಗಳನ್ನು ಹಣ ಕೊಟ್ಟವನಿಗೆ ಕೊಡುವುದಾಗಿ ಮಾಡಿಕೊಂಡ ಒಪ್ಪಂದವು ಅಡುವನ್ನು ಸೃಷ್ಟಿಸುವುದಿಲ್ಲ. ಏಕೆಂದರೆ ಅದು ಯಾವುದೇ ಹಾಲಿ ಇರತಕ್ಕ ಮಾಲಿನ ಸ್ವಾಧೀನದ ವರ್ಗಾವಣೆಯನ್ನು ಒಳಗೊಂಡಿಲ್ಲ. ಆದರೆ ಸ್ವಾಮ್ಯದ ದಸ್ತಾವೇಜಿನ ವರ್ಗಾವಣೆ ಯಿರುವ ಎಲ್ಲಾ ಸಂದರ್ಭಗಳಲ್ಲಿಯೂ ಒಬ್ಬ ಮನುಷ್ಯನಿಗೆ ಸರಕುಗಳ ಸ್ವಾದೀನ ಪಡಿಸಿಕೊಳ್ಳಲು ಸಾಧ್ಯವಾಗುತ್ತದೆಯೇ? ಅದು ಕಾನೂನಿನ ದೃಷ್ಟಿಯಲ್ಲಿ ಸರಕುಗಳ ಭಾವೀ ವರ್ಗಾವಣೆಯಾಗಿ ಪರಿಣಾಮ ಹೊಂದುತ್ತದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ಸರಕುಗಳನ್ನು ಬರೀ ಒಡೆಯನು ಮಾತ್ರ ಅಡುವು ಇಡಬೇಕಾಗಿಲ್ಲ. ಆದರೆ ಅಂತಹ ಅಧಿಕಾರದಿಂದ ಇತರ ವ್ಯಕ್ತಿಗಳೂ ಸಹ, ಅಂದರೆ ಏಜೆಂಟ್ ಮುಂತಾದವರೂ ಅಡುವು ಇಡಬಹುದು.

ಅಡುವಿನ ಮುಖ್ಯವಾದ ಬಗೆಯನ್ನು ಭಾರತದ ಕರಾರು ಕಾಯಿದೆಯ ವರ್ಗ ೧೭೮ ರಲ್ಲಿ ವಿವರಿಸಲಾಗಿದೆ. ಕಾನೂನಿನ ಸಾಧಾರಣ ತತ್ವವಾದ "**ಹೊಂದಿಲ್ಲದವನು ಯಾರಿಗೂ ಕೊಡಲಾರ**" (Nemo-dat-quad-non-habet) ಎಂಬ ಸೂತ್ರದಲ್ಲಿ ವ್ಯಕ್ತಪಡಿಸಲಾಗಿದೆ. ಇದರ ಅರ್ಥ ಏನೆಂದರೆ, ಯಾವುದೇ ಮನುಷ್ಯನು ತನ್ನಲ್ಲಿ ಇಲ್ಲದೇ ಇರುವ ಸ್ವಾಮ್ಯವನ್ನು ಹಸ್ತಾಂತರಿಸಲಾಗುವುದಿಲ್ಲ ಎಂದು. ಆದರೆ ವಾಣಿಜ್ಯ ಏಜೆಂಟನ ಅಡವುಗಳು ವರ್ಗ ೧೭೮ ರಲ್ಲಿ ವಿಶೇಷ ಸ್ಥಾನ ಪಡೆದಿವೆ. ಒಬ್ಬ ಒಡೆಯನು ಸರಕುಗಳನ್ನು ಅಥವಾ ಸರಕುಗಳ ಸ್ವಾಮ್ಯದ ದಸ್ತಾವೇಜನ್ನು ಸಮ್ಮತಿಯಿಂದ ವರ್ಗಾವಣೆ

ಮಾಡಿದ್ದರೆ ಏಜೆಂಟನು ತನ್ನ ಕಾರ್ಯ ನಿರ್ವಹಿಸುವಾಗ ಮಾಡಿದ ಯಾವುದೇ ಅಡುವು ಕಾನೂನುಮಾನ್ಯವಾಗಿರುತ್ತದೆ. (ಗಿರಿವಿ ಇಟ್ಟು ಕೊಂಡವನಿಗೆ ಅಧಿಕಾರದ ಕೊರತೆ ಇದೆ ಎಂಬ ವಿಚಾರ ಗೊತ್ತಿರದ ಹೊರತು) ಭಾರತದ ಸರಕುಗಳ ಮಾರಾಟ ವಿಷಯದ ಸೂಚನೆ ಇದ್ದ ಹೊರತು ಈ ಕಾಯಿದೆಯಂತೆ ವಾಣಿಜ್ಯ ಏಜೆಂಟಿನ ಹಕ್ಕನ್ನು ಇನ್ನೂ ಹೆಚ್ಚು ವಿಸ್ತರಿಸಿದ್ದು, ಅವನು ಒಡೆಯನಿಂದ ಕೊಡಲ್ಪಟ್ಟ ಅಧಿಕಾರವನ್ನು ಮೀರಿ ಮಾರಾಟ ಮಾಡಿದರೂ ಸಹ, ಖರೀದಿದಾರನಿಗೆ ಸಂಪೂರ್ಣ ಸ್ವಾಮ್ಯವನ್ನು ಹಸ್ತಾಂತರಿಸುತ್ತದೆ ಎಂದು ಘೋಷಿಸಲಾಗಿದೆ. ಕಾನೂನಿನ ಉದ್ದೇಶವೇನೆಂದರೆ ವಾಣಿಜ್ಯ ಏಜೆಂಟರುಗಳಿಂದ ಖರೀದಿ ಮಾಡುವ ವ್ಯಕ್ತಿಗಳನ್ನು ರಕ್ಷಿಸುವುದು. ಸ್ವಂತ ವಾಹನವನ್ನು ಹೊಂದಿರುವ ಒಬ್ಬ ವ್ಯಕ್ತಿಯು ತನ್ನ ವಾಹನವನ್ನು ಪ್ರದರ್ಶನಕ್ಕಾಗಿ ಅಥವಾ ತಾನು ಸೂಚಿಸಿದ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಬಾರದೆಂದು ಒಬ್ಬ ವಾಣಿಜ್ಯ ಏಜೆಂಟನಿಗೆ ಹೇಳಿದ್ದು ಆದರೂ ಮಾಲಿನ ವಶ ಅಥವಾ ಸುಪರ್ದು ಹಸ್ತಾಂತರಿಸಿದಾಗ ವಾಣಿಜ್ಯ ಏಜೆಂಟ್ ಅದನ್ನು ಮಾರಾಟ ಮಾಡಿದರೆ, ಆಗಲೂ ಸಹ ಏಜೆಂಟನು ಖರೀದಿದಾರನಿಗೆ ಸ್ಪಷ್ಟ ಸ್ವಾಮ್ಯವನ್ನು ಹಸ್ತಾಂತರಿಸುತ್ತಾನೆ ಮತ್ತು ಅದೇ ಪ್ರಕಾರ ಅಡುವೂ ಸಹ ಸಮಂಜಸವಾಗಿರುತ್ತದೆ.

ಅಡುವಿನ ಸ್ವಭಾವ

(Nature of Pledge)

ಲಲ್ಲನ್ ಪ್ರಸಾದ್ ವಿರುದ್ಧ ರಹಮತ್ ಅಲಿ (Lallan Prasad Vs. Rahmat Alli AIR (1967) SC 1325) ನಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ಒಂದು ಗಿರಿವಿ ಅಥವಾ ಅಡುವು, ಸರಳ ಧಾರಣಾಧಿಕಾರ ಮತ್ತು ಅಡಮಾನದ ನಡುವೆ ಮಧ್ಯವರ್ತಿಯಾಗಿದೆ ಎಂಬುದನ್ನು ಗಮನಿಸಿತು. ಗಿರಿವಿ ಇಟ್ಟುಕೊಂಡವನು ಒಡೆಯನ ಸಾಮಾನ್ಯ ಸ್ವತ್ತಿನ ಸರಕುಗಳಲ್ಲಿ ವಿಶೇಷ ಸ್ವತ್ತನ್ನು (Special Property) ಪಡೆಯುತ್ತಾನೆ. ಅದು ಅವನ ಸಾಲದ ತೀರಿಕೆಗೆ ಸಹಾಯವಾಗುತ್ತದೆ. ಸರಕುಗಳ ಸಾಮಾನ್ಯ ಸ್ವಾಮಿತ್ವವು ಗಿರಿವಿ ಇಟ್ಟವನ ಹತ್ತಿರ ಇರುತ್ತದೆ ಮತ್ತು ಸಾಲ ತೀರಿಸಿದ ನಂತರ ಸ್ವಾಮ್ಯ ಅವನಿಗೆ ಹಿಂದಕ್ಕೆ ಬರುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯ ತರುವಾಯದ ಮೊಕದ್ದಮೆಯಾದ ಬ್ಯಾಂಕ್ ಆಫ್ ಬಿಹಾರ್ ವಿರುದ್ಧ ಸ್ಟೇಟ್ ಆಫ್ ಬಿಹಾರ್ (Bank of Bihar Vs. State of Bihar AIR (1971) SC 1210) ನಲ್ಲಿ ಹಕ್ಕುಗಳ ಸ್ವಭಾವವನ್ನು ಮುಂಬರುವ ಪದಗಳಲ್ಲಿ ವಿಸ್ತಾರವಾಗಿ ಹೇಳಿದೆ. ಈ ವಿಶೇಷ ಸ್ವತ್ತು ಅಥವಾ ಹಿತಾಸಕ್ತಿಯ ಧಾರಣಾಧಿಕಾರ ಹೊಂದಿರುವವನ ಸ್ವಾಧೀನವನ್ನು ಬಂಧನದ ಹಕ್ಕಿನಿಂದ ವಿಭಿನ್ನಗೊಳಿಸಬೇಕು. ಅದನ್ನು ವರ್ಗಾವಣೆ

ಮಾಡಬಹುದು. ಅಂದರೆ ಗಿರವಿ ಇಟ್ಟುಕೊಂಡವನು ಸರಕುಗಳಲ್ಲಿರುವ ಅವನ ವಿಶೇಷ ಸ್ವತ್ತು ಅಥವಾ ಹಿತಾಸಕ್ತಿಯನ್ನು ಒಪ್ಪಿಸಬಹುದು ಅಥವಾ ಅಡುವು ಇಡಬಹುದು. ಅಂದರೆ ವರ್ಗಾವಣೆ ಮಾಡಬಹುದು. "ಸರಕುಗಳ ಗಿರಿವಿ ಇಟ್ಟವನ ವಿರುದ್ಧ ತೀರ್ಪನ್ನು ಪಡೆದಿದ್ದರೆ ಮತ್ತು ಅದರ ಮೇಲೆ ನಿರ್ವಹಣೆಯನ್ನು ಗಿರಿವಿ ಇಟ್ಟುಕೊಂಡವನ ಬಾಕಿಯನ್ನು ತೀರಿಸದ ಹೊರತು, ಗಿರವಿ ಇಟ್ಟ ಸರಕುಗಳನ್ನು ಹರಾಜು ಮಾಡಲಾಗದು. ಗಿರವಿ ಇಟ್ಟವನ ದಿವಾಳಿತನದಲ್ಲಿ ಅಡುವಿಟ್ಟ ವಸ್ತುಗಳ ಬಗ್ಗೆ ಗಿರವಿ ಇಟ್ಟುಕೊಂಡವನು ಅಧಿಕಾರ ಪಡೆಯುತ್ತಾನೆ".

ವರ್ಗ ೧೭೫ ರ ಪ್ರಕಾರ, ಗಿರವಿ (ಒತ್ತೆ) ಇಡಿಸಿಕೊಂಡವನು ಸರಕನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಏನಾದರೂ ವೆಚ್ಚವನ್ನು ಮಾಡಿದರೆ, ಗಿರವಿ ಇಟ್ಟವನಿಂದ ಅದನ್ನು ವಸೂಲು ಮಾಡಲು ಅನುಮತಿ ಕೊಡಲಾಗುತ್ತದೆ. ಆದರೆ ಆ ವೆಚ್ಚಕ್ಕೋಸ್ಕರ ಗಿರವಿ ಇಟ್ಟುಕೊಂಡ ಸರಕನ್ನು ಇಟ್ಟುಕೊಳ್ಳಲು ಗಿರವಿ ಇಟ್ಟುಕೊಂಡವನಿಗೆ ಯಾವುದೇ ಹಕ್ಕು ಇರುವುದಿಲ್ಲ. ಅವನು ಆ ವೆಚ್ಚದ ಹಣವನ್ನು ವಸೂಲು ಮಾಡಲು ದಾವೆ ಹೂಡಬಹುದು. ಒಬ್ಬ ಲೇಣೇದಾರನು ಒತ್ತೆಯ ಮೇಲೆ ನೀಡಿದ ಮುಂಗಡ ಹಣದ ವಸೂಲಾತಿಗಾಗಿ ಅವನಿಗೆ ವರ್ಗ ೧೭೬ ರಲ್ಲಿ ಒಂದು ಬಹಳ ಸರಳವಾದ ಕ್ರಮೋಪಾಯ ಒದಗಿಸಲಾಗಿದೆ. ಅದರಲ್ಲಿ ಅವನು ಒತ್ತೆ ಇಡಿಸಿಕೊಂಡ ವಸ್ತುವನ್ನು ಗಿರವಿ ಇಟ್ಟವನಿಗೆ ಮಾರಾಟದ ಯುಕ್ತ ಸೂಚನೆಯನ್ನು ಕೊಟ್ಟು ಮಾರಬಹುದು. ಅವನು ದಾವೆಯನ್ನೂ ಹೂಡಬಹುದು ಮತ್ತು ಸರಕುಗಳನ್ನು ಪಾರ್ಶ್ವಿಕ ಭದ್ರತೆಯಾಗಿ ಇಟ್ಟುಕೊಳ್ಳಬಹುದು. ಆದರೆ ಈಗ ನ್ಯಾಯಿಕ ವ್ಯವಹರಣೆಯ ವಿಳಂಬಕಾರಿ ಎಂದು ಪ್ರಚಲಿತವಾಗಿರುವ ದೃಷ್ಟಿಯಿಂದ ಗಿರವಿ ಇಟ್ಟವನು ಸ್ವಂತವಾಗಿ ಮಾರಾಟ ಮಾಡಲು ಇಷ್ಟಪಡುತ್ತಾನೆ. ಕಾನೂನು ಅಗತ್ಯಪಡಿಸುವದೇನೆಂದರೆ, ಸಾಲಗಾರನಿಗೆ "ಯುಕ್ತ ತಿಳಿವಳಿಕೆ" ಕೊಡತಕ್ಕದ್ದು. ಅಂದರೆ ಮಾರಾಟದ ಸಮಯ ಮತ್ತು ತಾರೀಖು ತಿಳಿಸಬೇಕು. ಅಲ್ಲವೇ ? ಇದು ಜಟಿಲವಾದ ಪ್ರಶ್ನೆಯಾಗೇ ಉಳಿದಿದೆ.

ಒಬ್ಬ ಲೇಣೇದಾರನು ದಾವೆ ಹೂಡಲು ಆಯ್ಕೆ ಮಾಡಿದರೆ, ಅವನು ಕಾನೂನಿನ ಪ್ರಕಾರ ಒತ್ತೆ ಇಟ್ಟ ಸರಕುಗಳನ್ನು ಹಿಂದಕ್ಕೆ ಕೊಡಲು ಹೊಣೆಯಾಗಿರುತ್ತಾನೆ ಮತ್ತು ಲಲ್ಲನ್ ಪ್ರಸಾದ್ ಮೊಕದ್ದಮೆಯಲ್ಲಿ (ಮೇಲೆ ವಿವರಿಸಿದೆ ಪುಟ ೧೬೭) ಲೇಣೇದಾರನು ಒತ್ತೆ ಇಟ್ಟ ಸರಕುಗಳನ್ನು ಹಾಜರುಪಡಿಸಲು ಅಶಕ್ತನಾಗಿದ್ದರಿಂದ ದಾವೆ ಹೂಡಲಾಗಲಿಲ್ಲ. ಗಿರವಿ ಇಟ್ಟವನು ಒಪ್ಪಂದ ಮಾಡಿಕೊಂಡ ಕಾಲದ ನಂತರವೂ, ವರ್ಗ ೧೭೭ರ ಪ್ರಕಾರ, ಲೇಣೇದಾರನು ವಾಸ್ತವಿಕವಾಗಿ ಸರಕನ್ನು ಮಾರಾಟ ಮಾಡುವವರೆಗೂ, ಸರಕಿನ ಬಿಡುಗಡೆ ಅಥವಾ ವಿಮೋಚನಾ ಹಕ್ಕನ್ನು ಹೊಂದಿರುತ್ತಾನೆ.

ಮತ್ತು ಅವನು ತನ್ನ ತಪ್ಪಿನಿಂದ ಲೇಣೇದಾರನಿಗೆ ಉದ್ಭವಿಸಿದ ಖರ್ಚುಗಳನ್ನು ಹೆಚ್ಚಾಗಿ ಕೊಡಬೇಕಾಗುವುದೊಂದೇ ಹೊಣೆಯಾಗುತ್ತದೆ. ಜಸವಂತ್ ರಾಯ್ ವಿರುದ್ಧ ಸ್ಟೇಟ್ ಆಫ್ ಬಾಂಬೆ (Jaswantrai Manilal Akhaney Vs. State of Bambay AIR (1956) SC 575).

****

ಭಾಗ - ೨೨

ನಿಯೋಗದ ಕಾನೂನು

(Law of Agency)

ಆಧುನಿಕ ಜೀವನದ ಜಟಿಲತೆಯು ಮಾನವನಿಗೆ ತನ್ನ ವೈಯಕ್ತಿಕ ವ್ಯವಹಾರಗಳನ್ನು ಖುದ್ದಾಗಿ ನಿರ್ವಹಿಸಲು ಕೇವಲ ಸ್ವಲ್ಪ ಸಮಯವನ್ನು ಮಾತ್ರ ಕೊಟ್ಟಿದೆ. ಆದ್ದರಿಂದ ಕಾನೂನು, ಮನುಷ್ಯನ ಎಲ್ಲಾ ವ್ಯವಹಾರಗಳನ್ನು ಪರಿಣಾಮ ಕಾರಿಯಾಗಿ ನಿರ್ವಸುವುದಕ್ಕಾಗಿ ಪ್ರತಿನಿಧಿಯ (ಏಜೆಂಟ್) ನೇಮಕವನ್ನು ಸಾಧ್ಯಗೊಳಿಸುತ್ತದೆ. ಏಜೆಂಟನ ನೇಮಕಕ್ಕೆ ಕರಾರು ಅಧಿನಿಯಮವು ಯಾವುದೇ ನಮೂನೆಯನ್ನು ಗೊತ್ತುಪಡಿಸಿಲ್ಲ ಆದರೆ ಬೇರೆ ಕಾನೂನುಗಳು ಏನು ಹೇಳುತ್ತವೆ ಎಂಬುದನ್ನು ನಾವು ಗಮನಿಸಬೇಕು. ದಾವೆ ಅಥವಾ ನ್ಯಾಯಿಕ ವ್ಯವಹರಣೆಯಲ್ಲಿ ಪಕ್ಷವು ಹಾಜರಾಗಲು ಸಾಧ್ಯವಾಗದಿದ್ದರೆ, ಒಬ್ಬ ಮನ್ನಣೆ ಪಡೆದ ಏಜೆಂಟನು ಅವನಿಂದ ಮುಖ್ತ್ಯಾರ ನಾಮೆ (Power of Attorney) ಪಡೆದು ಪರಿಣಾಮ ಕಾರಿಯಾಗಿ ಅವನ ವ್ಯವಹಾರದಲ್ಲಿ ಪ್ರತಿನಿಧಿಸಬಹುದು. ಭಾರತದ ನೋಂದಣಿ ಕಾಯಿದೆಯ ಪ್ರಕಾರ, ಒಬ್ಬ ಯಜಮಾನನು ತನ್ನ ದಸ್ತಾವೇಜನ್ನು ನೋಂದಣಿಕೆಗೆ ಕೊಟ್ಟು ಅದರ ನಿರ್ವಹಣೆಯನ್ನು ನೋಡಿಕೊಳ್ಳಲು ಒಬ್ಬ ಏಜೆಂಟನನ್ನು ನೇಮಕ ಮಾಡಲು ಇಚ್ಛಿಸಿದರೆ ಆ ನೇಮಕಾತಿಯು ಕಾಯಿದೆಯ ಪ್ರಕಾರ ಅಧಿ ಪ್ರಮಾಣಿಸಿರಬೇಕು (ವರ್ಗ ೩೩ ರಿಂದ ೩೫). ಆದ್ದರಿಂದ ಇದೊಂದು ಲಿಖಿತ ಪತ್ರವಾಗಿರಬೇಕು. ಯಜಮಾನನ ಆಶ್ವಾಸನೆ ನೋಂದಣಿ ಅಧಿಕಾರಿಯ (Registrar of Assurances) ಸಮ್ಮುಖದಲ್ಲಿ ಹಾಜರಾಗಬೇಕು ಮತ್ತು ಆ ಪತ್ರವನ್ನು ಕಾರ್ಯಗತಗೊಳಿಸಬೇಕು. ಸಾಮಾನ್ಯವಾಗಿ ಏಜೆಂಟಿಗೆ ಕೊಟ್ಟ ಅಧಿಕಾರವು ಲಿಖಿತದಲ್ಲಿ ಇದ್ದರೆ ಅದನ್ನು ಮುಖ್ತ್ಯಾರುನಾಮೆ (Power of Attorney) ಎಂದು ಕರೆಯಲಾಗುತ್ತದೆ.

ಏಜೆನ್ಸಿಯ ಕಾನೂನಿನಿಂದ ಸಂಭವಿಸುವ ಅತಿ ಮುಖ್ಯವಾದ ಪರಿಕಲ್ಪನೆಯು ಹೀಗಿದೆ : ಏಜೆಂಟನು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸುತ್ತಿದ್ದರೆ, ಅವನು ಯಜಮಾನ ಮತ್ತು ಮೂರನೇ ಪಕ್ಷದವನ ನಡುವೆ ಬದ್ಧವಾದ ಕರಾರನ್ನು ಅಸ್ತಿತ್ವಕ್ಕೆ ತರುತ್ತಾನೆ. ಇದಕ್ಕೆ ಏಜೆಂಟನು ವೈಯಕ್ತಿಕವಾಗಿ ಹೊಣೆಯಾಗಿರುವುದಿಲ್ಲ ಮತ್ತು ಅವನು ಏಜೆಂಟ್ ಆಗಿ ಮಾಡಿದ ಕರಾರನ್ನು ತಾನೇ ಜಾರಿಗೊಳಿಸಲಾಗು ವುದಿಲ್ಲ. ಇದನ್ನು ವರ್ಗ ೨೩೦ ರಲ್ಲಿ ವಿವರಿಸಿದೆ. ಇದರಲ್ಲಿ ಮೂರು ವಿನಾಯಿತಿಗಳು ಇವೆ : ಮೊದಲನೆಯದಾಗಿ, ಒಬ್ಬ ಏಜೆಂಟನು ಅಂತಹಾ ಕರಾರಿಗೆ ವೈಯಕ್ತಿಕವಾಗಿ

ಬದ್ಧನಾಗಿರಬಹುದು. ಒಬ್ಬ ಏಜೆಂಟನು ವಿದೇಶಿ ಯಜಮಾನನಿಗೆ ಕಾರ್ಯ ನಿರ್ವಹಿಸುವ ಸಂದರ್ಭಗಳೂ ಇವೆ. ಇಂಗ್ಲೆಂಡಿನ ಒಂದು ಕಂಪನಿಯು ಭಾರತದಲ್ಲಿ ವ್ಯವಹಾರ ನಡೆಸುತ್ತಿದ್ದರೆ ಆಗ ಅದು ಒಂದು ವಿದೇಶಿ ಕಂಪನಿ ಆಗಿರುತ್ತದೆ. ಆಗ ಭಾರತದಲ್ಲಿರುವ ಆ ಕಂಪವಿಯ ಪ್ರತಿನಿಧಿಯೇ ಹೊಣೆಗಾರನಾಗುತ್ತಾನೆ. ರಾಧಾಕೃಷ್ಣ ವಿರುದ್ಧ ತಾಯೆಬಲ್ಲಿ (Radhakrishna Vs. Tayeballi AIR 1962 SC 538) ನೋಡಿ.

ಎರಡನೆಯ ಸಂದರ್ಭವು ಏನೆಂದರೆ, ಯಜಮಾನ ಯಾರು ಎಂದು ಬಹಿರಂಗಪಡಿಸಿಲ್ಲದ ಅಥವಾ ತಿಳಿಸದ ಸಂದರ್ಭ. ಒಬ್ಬ ಏಜೆಂಟನು ತನ್ನ "ಯಜಮಾನನನ್ನು ಬಹಿರಂಗ ಪಡಿಸದೆ ಕರಾರು ಮಾಡಿಕೊಂಡರೆ, ಕರಾರಿಗೆ ಏಜಂಟನು ಪಕ್ಷವಾಗಿರುವುದರಿಂದ ಅವನೇ ಅಂದರೆ ಏಜೆಂಟನೇ ವೈಯಕ್ತಿಕವಾಗಿ ಹೊಣೆಗಾರನಾಗುತ್ತಾನೆ"

ಮೂರನೆಯದು, ಯಜಮಾನನನ್ನು ಬಹಿರಂಗ ಪಡಿಸಿದರೂ ಸಹ ಅವನ ವಿರುದ್ಧ ದಾವೆ ಹೂಡಲಾಗದ ಅಂದರೆ ಉನ್ಮುಕ್ತಿ (Immunity) ಹೊಂದಿರುವ ವ್ಯಕ್ತಿಗಳ ವಿರುದ್ಧ ವಿವಾದ. ಇಲ್ಲಿ ಯಜಮಾನನಾದವನು ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿಲ್ಲದಿರುವುದರಿಂದ ಏಜೆಂಟನೇ ಜವಾಬ್ದಾರಿ ವಹಿಸಬೇಕಾ ಗುತ್ತದೆ.

ನಿಯೋಗದ ಕರಾರಿನ ಅತ್ಯಾವಶ್ಯಕಗಳು

ಕರಾರು ಮಾಡಿಕೊಳ್ಳುವ ಸಾಮರ್ಥ್ಯವಿರುವವರು ಮಾತ್ರ ಏಜೆಂಟನನ್ನು ನೇಮಕ ಮಾಡಿಕೊಳ್ಳಬಹುದು. ಒಬ್ಬ ಅಪ್ರಾಪ್ತವಯಸ್ಕನೂ (Minor) ಸಹ ಕಾನೂನು ರೀತ್ಯಾ ಏಜೆಂಟಿನ ತರಹ ಕಾರ್ಯ ಮಾಡಬಹುದು. ವರ್ಗ ೧೮೪ ರಲ್ಲಿ ಇರುವಂತೆ ಈ ಕಾನೂನಿನ ಪ್ರಕಾರ, ಏಜೆಂಟನಿಗೆ ಯಾವುದೇ ವೈಯಕ್ತಿಕ ಜವಾಬ್ದಾರಿ ಇರುವುದಿಲ್ಲ. ಕಾನೂನಿನಲ್ಲಿ ಏಜೆನ್ಸಿಯನ್ನು ಸೃಷ್ಟಿಸಲು ಯಾವುದೇ ಪ್ರತಿಫಲದ ಅವಶ್ಯಕತೆ ಇಲ್ಲ. ಈ ಬಾಂಧವ್ಯವು ಯಜಮಾನ ಮತ್ತು ನೌಕರನ ನಡುವಿನ ಬಾಂಧವ್ಯಕ್ಕಿಂತ ಭಿನ್ನವಾಗಿದೆ. ಈ ವಿಭಿನ್ನತೆಯನ್ನು ಸರ್ವೋಚ್ಚ ನ್ಯಾಯಾಲಯವು ಲಕ್ಷ್ಮೀನಾರಾಯಣ್ ವಿರುದ್ಧ ಹೈದರಾಬಾದ್ ಗವರ್ನಮೆಂಟ್ (Lakshmi narayan Ram Gopal & Sons Vs. Hyderabad Govt. AIR 1954 SC 364) ನಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ.

ಅ) ಒಬ್ಬ ಏಜೆಂಟನು ತನ್ನ ಯಜಮಾನನ ಪರವಾಗಿ ಕೆಲಸ ಮಾಡಿ ಯಜಮಾನ ಮತ್ತು ಮೂರನೇ ಪಕ್ಷದವರಿಗೆ ಯುಕ್ತ ಕರಾರನ್ನು ಮಾಡಿಕೊಡ ಬಹುದು. ಆದರೆ ಒಬ್ಬ ನೌಕರನಿಗೆ ಮೂರನೇ ಪಕ್ಷದವರೊಡನೆ ಕರಾರು ಸಂಬಂಧವನ್ನು ತರುವ ಹಕ್ಕು ಅಥವಾ ಅಧಿಕಾರವಿಲ್ಲ.

ಆ) ನೌಕರನು ಯಜಮಾನನ ನೇರ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಪ್ರಕಾರ ಕೆಲಸ ಮಾಡುತ್ತಾನೆ. ಅವನು ಯಜಮಾನನು ಕೊಟ್ಟ ಆದೇಶಗಳನ್ನು ಪಾಲಿಸಲು ಬದ್ಧನಾಗಿರುತ್ತಾನೆ. ಆದರೆ ಏಜೆಂಟನು ಆ ತರಹ ಅಧೀನನಾಗಿರುವುದಿಲ್ಲ. ನ್ಯಾಯಮೂರ್ತಿ ಬ್ರಾಮ್ವೆಲ್ (Bramwell) ಅವರು ಆರ್. ವಿರುದ್ಧ ವಾಕರ್‌ನಲ್ಲಿ (R. Vs. Walker 31 LT (OS) 137) ಈ ರೀತಿ ಹೇಳಿದ್ದಾರೆ. ಒಬ್ಬ ಯಜಮಾನನು ಏಜೆಂಟನಿಗೆ ಯಾವ ಕೆಲಸ ಮಾಡಬೇಕೆಂದು ಆದೇಶಿಸುವ ಹಕ್ಕನ್ನು ಮಾತ್ರ ಹೊಂದಿರುತ್ತಾನೆ. ಆದರೆ ಯಜಮಾನನು ನೌಕರನಿಗೆ ಯಾವ ಕೆಲಸ ಮಾಡಬೇಕೆಂದು ಆದೇಶಿಸುವ ಹಕ್ಕಿನ ಜೊತೆಗೆ ಅದನ್ನು ಯಾವ ರೀತಿಯಲ್ಲಿ ಮಾಡಬೇಕು ಎಂದು ಹೇಳುವ ಹಕ್ಕನ್ನೂ ಸಹ ಹೊಂದಿರುತ್ತಾನೆ ಎಂದು ಹೇಳಿದ್ದಾರೆ.

ಇ) ಒಬ್ಬ ನೌಕರನಿಗೆ ಮಜೂರಿ ಅಥವಾ ಸಂಬಳವನ್ನು ಕೊಡಲಾಗುತ್ತದೆ. ಆದರೆ ಏಜೆಂಟನ ಬಗ್ಗೆ ನಾವು ಆಗಲೇ ಗಮನಿಸಿರುವಂತೆ ಪ್ರತಿಫಲದ ಅವಶ್ಯಕತೆ ಇಲ್ಲ. ಆದರೆ ವರ್ಗ ೨೧೯ ರ ಪ್ರಕಾರ, ಏಜೆಂಟನು ಯಾವುದೇ ಒಪ್ಪಂದದ ಗೈರು ಹಾಜರಿಯಲ್ಲಿಯೂ ಸಹ ಪರಿಶ್ರಮ ಧನಕ್ಕೆ (Commission, reward) ಹಕ್ಕುಳ್ಳವನಾಗಿರುತ್ತಾನೆ.

ಈ) ಒಬ್ಬ ಏಜೆಂಟನು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಕೆಲಸ ಮಾಡುವಾಗ ಯಾವುದಾದರೂ ತಪ್ಪು ಮಾಡಿದರೆ ಆಗ ಯಜಮಾನನು ಹೊಣೆಯಾಗುತ್ತಾನೆ. ಒಬ್ಬ ನೌಕರನು ಯಜಮಾನನ ಹತ್ತಿರ ಕೆಲಸ ಮಾಡುತ್ತಿರುವಾಗ ಯಾವುದೇ ತಪ್ಪು ಮಾಡಿದರೂ ಯಜಮಾನನು ಹೊಣೆಯಾಗಿರುತ್ತಾನೆ (Vicarious Liability).

ಉ) ಒಬ್ಬ ಸೇವಕನನ್ನು ಸಾಮಾನ್ಯವಾಗಿ ಒಬ್ಬ ಯಜಮಾನನು ನೇಮಿಸಿಕೊಂಡಿರುತ್ತಾನೆ. ಆದರೆ, ಒಬ್ಬ ಏಜೆಂಟನು ಏಕಕಾಲದಲ್ಲಿ ಹಲವಾರು ಯಜಮಾನರುಗಳಿಗಾಗಿ ಕೆಲಸ ಮಾಡುತ್ತಿರಬಹುದು. ಕೇದುಲ್ ಸಹಕಾರಿ ಜಿನ್ನಿಂಗ್ ಆ್ಯಂಡ್ ಪ್ರೆಸ್ಸಿಂಗ್ ಸೊಸೈಟಿ ವಿರುದ್ಧ ಸ್ಟೇಟ್ ಆಫ್ ಗುಜರಾತ್ (Khedul Sahakari Ginning & Pressing Society Vs. State of Gujarat AIR (1972) SC 1786) ಮೊಕದ್ದಮೆಯನ್ನು ಇಲ್ಲಿ ಗಮನಿಸಬಹುದು.

ನಿಯೋಗದ ರಚನೆ

ಕಾನೂನಿನಲ್ಲಿ ಏಜೆನ್ಸಿಯ ಕರಾರಿಗೆ ಯಾವುದೇ ನಿರ್ದಿಷ್ಟ ನಮೂನೆಯನ್ನು ನಿಯಮಿಸಿಲ್ಲವೆಂಬುದನ್ನು ನಾವು ಮುಂಚೆಯೇ ಗಮನಿಸಿದ್ದರೂ ಸಹ ಅನೇಕ ವಿಧದಲ್ಲಿ ಈ ಬಾಂಧವ್ಯಗಳನ್ನು ನಿರೂಪಿಸಬಹುದು.

ಆ ರೀತಿಯ ಬಾಂಧವ್ಯಗಳನ್ನು ಗಮನಿಸೋಣ.

(ಅ) ವ್ಯಕ್ತ ನೇಮಕಾತಿಯಿಂದ : ಕರಾರು ಮಾಡಿಕೊಳ್ಳಲು ಅರ್ಹನಾದ ಮತ್ತು ಸ್ವಸ್ಥಚಿತ್ತನಾದ ವ್ಯಕ್ತಿಯು ಏಜೆಂಟನ್ನು ನೇಮಕ ಮಾಡಿಕೊಳ್ಳಬಹುದು. ಇದು ಯಜಮಾನನು ಏಜೆಂಟಿಗೆ ಕೊಡಬಹುದಾದ ಅಧಿಕಾರವನ್ನು ಸೂಚಿಸುತ್ತದೆ ಮತ್ತು ಯಾವ ವಿಷಯದಲ್ಲಿ ಏಜೆಂಟನು ಯಜಮಾನನಿಗೋಸ್ಕರ ಕಾರ್ಯ ಮಾಡಬೇಕು ಎಂಬುದನ್ನು ಸ್ಪಷ್ಟೀಕರಿಸುವುದು. ಅಂತಹ ಅಧಿಕಾರವು ಲಿಖಿತದಲ್ಲಿರಬಹುದು ಅಥವಾ ಬೇರೆ ಶಾಸನಗಳ ಅಗತ್ಯತೆಯ ಬಗ್ಗೆ ನಾವು ಮೊದಲೇ ಗಮನಿಸಿದಂತೆ ಬಾಯಿಮಾತಿನದೂ ಸಹ ಆಗಿರಬಹುದು.

(ಆ) ಇಂಗಿತವಾದ ನಿಯೋಗ : ಇದರಲ್ಲಿ ಎರಡು ಪಕ್ಷಗಳ ನಡುವಿನ ಸಂಬಂಧವು ಹೇಗಿರುತ್ತದೆ ಎಂದರೆ ಒಂದು ಪಕ್ಷವು ಇನ್ನೊಂದು ಪಕ್ಷಕ್ಕೆ ಏಜೆಂಟಿನ ತರಹ ಕಾರ್ಯ ಮಾಡಲು ಮತ್ತು ಇನ್ನೊಂದು ಪಕ್ಷವನ್ನು ಬದ್ಧಗೊಳಿಸುವ ಇಂಗಿತ (Implied) ಅಧಿಕಾರವನ್ನು ಹೊಂದಿರುವಂತಹ ವಿಷಯಗಳಾಗಿದೆ. ಅತಿ ಸಾಮಾನ್ಯವಾದ ಸಂದರ್ಭ ಯಾವುದೆಂದರೆ ಇಂಗಿತ ಅಧಿಕಾರದಲ್ಲಿ ಪತ್ನಿಯು ಮಾಡಿದ ಖರೀದಿಗಳ ಬಗ್ಗೆ ಪತಿಯನ್ನು ಬದ್ಧಗೊಳಿಸುವುದನ್ನು ಸ್ಪಷ್ಟಪಡಿಸುವುದಕ್ಕೆ ಸಾಕಷ್ಟು ಅಧಿಕಾರವಿದೆ. ಆದರೆ ಎರಡು ನಿರ್ಬಂಧಗಳನ್ನು ಗಮನಿಸಬೇಕಾಗಿದೆ. ಮೊದಲನೆಯದಾಗಿ, ಅವರಿಬ್ಬರೂ ಒಂದು ಗೃಹಕೃತ್ಯದ ಸ್ಥಾಪನೆಯಲ್ಲಿ ಜೊತೆ ಯಾಗಿ ವಾಸಮಾಡುತ್ತಿರಬೇಕು. ಡೆಬೆನ್ಹಾಮ್ ವಿರುದ್ಧ ಮೆಲ್ಲನ್‌ನಲ್ಲಿ (Debenham Vs. Mellon 1880 AC 24) ಗಂಡ-ಹೆಂಡತಿಯರು ಹೋಟೆಲ್ ನಲ್ಲಿ ವಾಸ ಮಾಡುತ್ತಿದ್ದುದರಿಂದ ಗೃಹಕೃತ್ಯವು ಅಸ್ತಿತ್ವದಲ್ಲಿಲ್ಲ ಎಂದು ತೀರ್ಮಾನಿಸಲಾಯಿತು. ಎರಡನೆಯದಾಗಿ, ಅವಳ ಅಧಿಕಾರವು ಗೃಹಕೃತ್ಯದ ಅಗತ್ಯಗಳಿಗೆ ಮಾತ್ರ ಪರಿಮಿತಿಗೊಂಡಿದೆಯೇ ಹೊರತು ಭೋಗದ ವಸ್ತುಗಳಿಗಲ್ಲ. ಕಾನೂನಿನ ಈ ಸ್ಥಿತಿಯನ್ನು ಇಂಗ್ಲೆಂಡಿನ ಸಾಮಾನ್ಯ ಕಾನೂನು ತತ್ವಗಳಿಂದ ಪಡೆದಿದ್ದೇವೆ. ಆದರೆ ಯುನೈಟೆಡ್ ಕಿಂಗ್‌ಡಂನಲ್ಲಿ ಮೆಟ್ರಿಮೋನಿಯಲ್ ಪ್ರೊಸೀಡಿಂಗ್ಸ್ ಆ್ಯಕ್ಟ್ ೧೯೭೦ ಯಲ್ಲಿ ಪತ್ನಿಗೆ ಅಧಿಕಾರ ಕೊಡುವ ತತ್ವಗಳನ್ನು ಈ ರೀತಿ ಮಾಡಲಾಗಿದೆ. ಅವಳು ತನ್ನ ಗಂಡನ ಹೆಸರಿನಲ್ಲಿ ಅಡುವು ಮಾಡಿ ಜಮಾ ಅಥವಾ ಹಣ ಸಾಲ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ. ಭಾರತದಲ್ಲಿ ಅಂತಹ ಕಾನೂನನ್ನು ನಾವು ಇನ್ನೂ ಗಮನಿಸಿಲ್ಲ ಮತ್ತು ಆಮದು ಮಾಡಿಕೊಂಡಿಲ್ಲ.

ಇಂಗಿತ ಏಜೆನ್ಸಿಯಲ್ಲಿ ಒಬ್ಬ ನಿರ್ದಿಷ್ಟ ವ್ಯಕ್ತಿಯು ತನ್ನ ನಡವಳಿಕೆಗಳಿಂದ ಇನ್ನೊಬ್ಬ ವ್ಯಕ್ತಿಯನ್ನು ತನ್ನ ಏಜೆಂಟನಾಗಿ ತೋರಿಸಿಕೊಂಡಾಗಲೂ ಸಹ ಉದ್ಭವಿಸುತ್ತದೆ ಮತ್ತು ವಿಬಂಧದ ತತ್ವಗಳ ಪ್ರಕಾರ, (ಭಾರತದ ಸಾಕ್ಷ್ಯ ಕಾಯಿದೆ ವರ್ಗ ೧೧೫) ಎಜೆಂಟ ಮತ್ತು ಯಜಮಾನನ ಬಾಂಧವ್ಯವು ಇಬ್ಬರ ನಡವಳಿಕೆಗಳ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ.

(ಇ) ಅವಶ್ಯಕತೆಯ ನಿಯೋಗ (ಏಜೆನ್ಸಿ) : ಈ ಬಗೆಯ ನಿಯೋಗದ ಐತಿಹಾಸಿಕ ಮೂಲವನ್ನು ಸಮುದ್ರ ಕಾನೂನಿನಿಂದ (Maritime Law) ಪಡೆಯಲಾಗಿದೆ. ಸಮುದ್ರಯಾನವು ಯಾವಾಗಲೂ ಸಮಸ್ಯೆ ಮತ್ತು ತುರ್ತು ಪರಿಸ್ಥಿತಿಗಳನ್ನು ಒಡ್ಡುತ್ತದೆ. ಅಂತಹಾ ಸಮಯದಲ್ಲಿ ಹಡಗಿನ ಯಜಮಾನನು ಸರಕುಗಳನ್ನು ವಿಲೇವಾರಿ ಮಾಡುವ ಇಂಗಿತ ಅಧಿಕಾರವನ್ನು ಹೊಂದಿದ್ದು, ಈ ಅಧಿಕಾರವು ಒಡೆಯನನ್ನು ಬದ್ಧಗೊಳಿಸುತ್ತದೆ. ತತ್ವದ ಅನ್ವಯಿಕತೆಯನ್ನು ಈಗ ವಿಸ್ತರಿಸಲಾಗಿದೆ. ಸಿಮ್ಸ್ ಅಂಡ್ ಕಂಪನಿ ವಿರುದ್ಧ ಮಿಡ್ಲಾಂಡ್ ರೈಲ್ವೆ (Sims and Co., Vs. Midland Rly. Co., (1913) IKB 103) ನಲ್ಲಿ ಕಾಣಬಹುದು. ಈ ಮೊಕದ್ದಮೆಯಲ್ಲಿ ರೈಲ್ವೆಗೆ ಬೆಣ್ಣೆಯನ್ನು ರವಾನಿಸಲು ಕೊಡಲಾಗಿತ್ತು. ಮುಷ್ಕರದಿಂದಾಗಿ ಬೆಣ್ಣೆಯ ಸಾಗಣೆಯು ವಿಳಂಬವಾಯಿತು. ಬೆಣ್ಣೆಯು ಹಾಳಾ ಗುವ ವಸ್ತುವಾದುದರಿಂದ ರೈಲ್ವೆ ಕಂಪನಿಯು ಅದನ್ನು ಮಾರಾಟ ಮಾಡಿತು ಮತ್ತು ರೈಲ್ವೆ ಕಂಪನಿಯ ಅವಶ್ಯಕತೆಯ ನಿಯೋಗದಂತೆ ಕಾರ್ಯವನ್ನು ನಿರ್ವಹಿಸಿದುದು ಸಮರ್ಥನೀಯ ಎಂದು ನಿರ್ಧರಿಲಾಯಿತು. ವ್ಯಕ್ತ ಅಧಿಕಾರವಿಲ್ಲದೇ ಇನ್ನೊಬ್ಬರ ಸರಕುಗಳನ್ನು ಅವಶ್ಯಕತೆಗೆ ತಕ್ಕಂತೆ ವಿಸ್ತರಿಸಲು ಕಾನೂನು ಬಹಳ ಹಿಂಜರಿಯುತ್ತಿದೆ ಮತ್ತು ಯಾವುದೇ ಉತ್ಸುಕತೆಯನ್ನೂ ತೋರಿಸುತ್ತಿಲ್ಲ ಎಂದು (P.G. Lord Goddard Sachs Vs. Milkos (1948) 2 KB 23)ಇಂಗ್ಲೀಷ್ ನ್ಯಾಯಾಲಯಗಳು ಈಚೆಗೆ ಉಚ್ಛರಿಸಿವೆ.

(ಈ) ತರುವಾಯದ ಅನುಸಮರ್ಥನೆಯ ನಿಯೋಗ : ಈ ಸಿದ್ಧಾಂತವನ್ನು ವರ್ಗ ೧೯೬ ರಲ್ಲಿ ವಿವರಿಸಲಾಗಿದೆ. ಅದರಲ್ಲಿ ಒಬ್ಬ ಮನುಷ್ಯನು ಅಂದರೆ ಏಜೆಂಟನು ಇನ್ನೊಬ್ಬನ ಅಂದರೆ ಯಜಮಾನನ ಪರವಾಗಿ ತಿಳುವಳಿಕೆ ಅಥವಾ ಅಧಿಕಾರವಿಲ್ಲದೆ ಯಾವುದೇ ಕಾರ್ಯವನ್ನು ಮಾಡಿದ್ದರೂ ಸಹ ಯಜಮಾನನು ಆ ಕಾರ್ಯವನ್ನು ಅನುಮೋದಿಸಬಹುದು. ಯಜಮಾನನ್ನು ಆ ಕಾರ್ಯವನ್ನು ಅನುಮೋದಿಸಿದರೆ ಅವನ ಅನುಮತಿಯಿಂದಲೇ ಕಾರ್ಯ ನೆರವೇರಿಸಿದಂತಹ ಪರಿಣಾಮಗಳು ಆಗುತ್ತವೆ. ಅಂತಹ ಅನುಸಮರ್ಥತೆಯು ವ್ಯಕ್ತ ಅಥವಾ ಇಂಗಿತವಾಗಿರಬಹುದು ಎಂದು ವರ್ಗ ೧೯೭ ಘೋಷಿಸುತ್ತದೆ.

ಕಾರ್ಯನಿರ್ವಹಣೆಯ ಪ್ರಶ್ನೆಯು ಬಂದಾಗ ಅನುಮೋದನೆ ಮಾಡಿದ ಇನ್ನೊಬ್ಬ ವ್ಯಕ್ತಿಯ ಪರವಾಗಿ ಕಾರ್ಯ ಮಾಡಲಾಗಿದೆ ಎಂಬುದನ್ನು ವ್ಯಕ್ತವಾಗಿ ತೋರಿಸಬೇಕು. ಆದ್ದರಿಂದ ಒಬ್ಬ ವ್ಯಕ್ತಿಯು ತನ್ನ ಯಜಮಾನನ ವಿಷಯ ತಿಳಿಸದೆ ತನಗಾಗಿಯೇ ಕಾರ್ಯ ನಿರ್ವಹಿಸಿದರೆ ಅದನ್ನು ಅನುಸಮರ್ಥತೆಯ ಸಿದ್ಧಾಂತದ ಪ್ರಕಾರ ಇನ್ನೊಬ್ಬನು ಅಂಗೀಕರಿಸಲಾಗುವುದಿಲ್ಲ. ಇದನ್ನು ಕೈಗ್ಲೀ ಮಾಕ್ಸ್ಟೆಡ್ ಆ್ಯಂಡ್ ಕಂಪನಿ ವಿರುದ್ಧ ಡೂರಾಂಟ್ (Keighley, maxxted & Co., Vs. Durant (1901)

AC 250) ನಲ್ಲಿ ಎತ್ತಿಹಿಡಿಯಲಾಗಿದೆ. ಅದರಲ್ಲಿ ಒಬ್ಬ ಎಜೆಂಟನು ಯಜಮಾನನು ತನ್ನ ಕಾರ್ಯವನ್ನು ಅಂಗೀಕರಿಸುತ್ತಾನೆಂದು ನಂಬಿ ಕೊಂಡು ತನ್ನದೇ ಹೆಸರಿನಲ್ಲಿ ಕರಾರು ಮಾಡಿಕೊಂಡನು. ಲಾರ್ಡ್ ಮುಕ್ನಾಟನ್ ಮತ್ತು ಲಾರ್ಡ್ ಜೇಮ್ಸ್‌ರು ಕರಾರಿನ ಕಾನೂನು ಕಲ್ಪನೆಯು ಹೀಗಿದೆ, ಎಂದು ಹೇಳಿದರು. ಇದರಲ್ಲಿ ಇನ್ನೊಬ್ಬ ವ್ಯಕ್ತಿಯೊಡನೆ ಏಜೆಂಟನು ಯಜಮಾನನಿಂದ ಅನುಮೋದನೆ ಅಥವಾ ಅನುಸಮರ್ಥನೆಯನ್ನು ಪಡೆಯುವನೆಂಬ ಭರವಸೆಯಿಂದ ಮಾಡಿದ ಕೆಲಸವು ಕಾರ್ಯಾಚರಣೆಗೆ ಬರುವುದಿಲ್ಲ. ಈ ನಿಯಮವು ಒಬ್ಬ ಮನುಷ್ಯನು ಇನ್ನೊಬ್ಬನ ಪರವಾಗಿ ಮಾಡಿದ ಕಾರ್ಯವನ್ನು ಆ ಬೇರೆ ಮನುಷ್ಯನು ಅಂಗೀಕರಿಸಿದರೆ ಆಗ ಮಾತ್ರ ಅದು ಕಾರ್ಯಾಚರಣೆಗೆ ಬರುತ್ತದೆ. ಅನುಮೋದನೆಗೆ ಯಾವಾಗಲೂ ಮೂಲ ಕರಾರು ಮಾಡಿಕೊಂಡ ಸಮಯ ಮತ್ತು ದಿನಾಂಕದ ಪೂರ್ವಾನ್ವಯ ಪರಿಣಾಮವಿದೆ ಮತ್ತು ಅಂತಹಾ ದಿನದಂದು ಸ್ಥಿರೀಕರಣ ಮಾಡುವ ವ್ಯಕ್ತಿಯು ಅಪ್ರಾಪ್ತವಯಸ್ಕ ಮುಂತಾದ ಅಸಮರ್ಥತೆಯಲ್ಲಿದ್ದರೆ, ಆಗ ಸ್ಥಿರೀಕರಣ ಮಾಡಲಾಗುವುದಿಲ್ಲ. ಸ್ಥಿರೀಕರಣವು ವರ್ಗ ೧೯೮ ಮತ್ತು ೧೯೯ ರಲ್ಲಿ ಹೇಳಿರುವಂತೆ ವ್ಯವಹಾರವು ಸಂಪೂರ್ಣ ತಿಳುವಳಿಕೆಯಿಂದ ಮುಂದು ವರಿಯಬೇಕು. ಇದು ಭಾಗಶಃ ಸ್ಥಿರೀಕರಣ ಮತ್ತು ಭಾಗಶಃ ತಿರಸ್ಕರಣೆ ಯಾಗುವುದಕ್ಕೆ ಅವಕಾಶವಿಲ್ಲ. ಅನುಮೋದನೆಯು ಯುಕ್ತಕಾಲದೊಳಗೆ ಮುಂದುವರೆಯಬೇಕು ಎಂದು ಒತ್ತಾಯ ಪಡಿಸುವುದು ಸಮಂಜಸವಾಗಿದೆ. ಬರೀ ಕಾನೂನು ಬದ್ಧಕಾರ್ಯವನ್ನು ಮಾತ್ರ ಸ್ಥಿರೀಕರಣಗೊಳಿಸಬಹುದು (ವರ್ಗ ೨೦೦) ಮೂರನೆ ಪಕ್ಷವನ್ನು ಗಂಡಾಂತರ ಅಥವಾ ಹಾನಿಗೆ ಒಳಪಡಿಸುವಂತಹ ಯಾವುದೇ ಕಾರ್ಯವನ್ನು ಸ್ಥಿರೀಕರಿಸಲಾಗುವುದಿಲ್ಲ. ಉದಾಹರಣೆಗೆ, ಮೂರನೇ ಪಕ್ಷದವನಿಂದ ಗೇಣಿಯ ಕೊನೆಗೊಳಿ ಸುವಿಕೆಯ ಬಗ್ಗೆ ಬಂದ ನೋಟೀಸನ್ನು ಭೂ ಮಾಲೀಕನು ಸ್ಥಿರೀಕರಣ ಮಾಡಲಾಗುವುದಿಲ್ಲ.

ಪ್ರತಿನಿಧಿತ್ವದ ಬಗೆಗಳು

ವಿವಿಧ ರೀತಿಯ ಪ್ರತಿನಿಧಿಗಳನ್ನು ವಿವರಿಸಲು ಬಹಳ ವಿಸ್ತಾರವಾದ ಪದಗಳನ್ನು ಅನೇಕ ಸಲ ಉಪಯೋಗಿಸಲಾಗಿದೆ. ಅದು ನ್ಯಾಯವಾದಿಯಿಂದ ಹಿಡಿದು ದಲ್ಲಾಳಿಯವರೆಗೆ ಎಲ್ಲಾ ವ್ಯಕ್ತಿತ್ವಗಳನ್ನು ಒಳಗೊಂಡಿದೆ. ಮಾರಾಟ ಮಾಡಲು ವಸ್ತುವನ್ನು ಕೊಟ್ಟ ಪ್ರತಿನಿಧಿಯನ್ನು ಸೂಚಿಸಲು "ದಲ್ಲಾಳಿ" (ಏಜಂಟ್) ಎಂಬ ಸಾಮಾನ್ಯ ಪದವನ್ನು ಉಪಯೋಗಿಸಲಾಗಿದೆ. ಒಬ್ಬ ಬ್ರೋಕರನು ಸಾಮಾನ್ಯವಾಗಿ ವ್ಯವಹರಿಸುವ ಅಧಿಕಾರವನ್ನು ಕೊಟ್ಟಿರುವ ಪ್ರತಿನಿಧಿಯಾಗಿದ್ದು, ಅವನಿಗೆ ಸರಕುಗಳ ಸ್ವಾಧೀನತೆ ಅಥವಾ ಸ್ವತ್ತುಗಳ ವರ್ಗಾವಣೆಯನ್ನು ಮಾಡಿರುವುದಿಲ್ಲ. ಒಬ್ಬ ಭರವಸೆ ಕೊಡುವ ಏಜೆಂಟನು (Del-Credere) ಮೂರನೇ ಪಕ್ಷದವನು ಕರಾರು ನೆರವೇರಿಕೆಯನ್ನು ವಿಫಲಗೊಳಿಸಿದಾಗ ತಾನು ಯಜಮಾನನಿಗೆ ಹಣ ಕೊಡಲು

ಹೊಣೆಯಾಗಿರುತ್ತಾನೆ (DEL-CREDERE). ಇದನ್ನು "ಖಾತರಿಗೆ ಹೆಚ್ಚಿನ ಕಮೀಷನ್ನು" ಎಂದು ಕರೆಲಾಗಿದ್ದು, ಭರವಸೆ ದಲ್ಲಾಳಿ ಎಂದು ಕರೆಯಲಾಗಿದೆ. ಅಲಹಾಬಾದ್ ಉಚ್ಚತಮ ನ್ಯಾಯಾಲಯವು ಚಂಪಾರಾಂ ವಿರುದ್ಧ ತುಳಸೀರಾಂ (Champa Ram Vs. Tulsi Ram (1927) 26 All LJ 81) ನಲ್ಲಿ ಈ ರೀತಿ ವರ್ಣಿಸಿದೆ.

ಒಬ್ಬ ಭರವಸೆ ಕೊಡುವ ಏಜೆಂಟನು ಯಜಮಾನನ ಬಗ್ಗೆ ಎರಡು ಹೊಣೆಗಳನ್ನು ಹೊಂದಿರುತ್ತಾನೆ. ಮೊದಲನೆಯದಾಗಿ, ಅವನ ಕಾನೂನು ಸಮ್ಮತ ವ್ಯಕ್ತಿತ್ವವು ಅವನು ವ್ಯವಹರಿಸುವ ಪಕ್ಷಗಳು ಯಾವುದೇ ರೀತಿಯ ದಿವಾಳಿತನ ಅಥವಾ ಅದಕ್ಕೆ ಸಮನಾದ ಕಾರಣದಿಂದ ಕರ್ತವ್ಯಲೋಪ ಮಾಡಿದಷ್ಟು ಮಟ್ಟಿಗೆ, ಭಾಗಶಃ ವಿಮಾಕರ್ತನ ಮತ್ತು ಭಾಗಶಃ ಜಾಮೀನುದಾರದ್ದಾಗಿರುತ್ತದೆ. ಅವನ ಹೊಣೆಯು ಮಾರುಕಟ್ಟೆಯಲ್ಲಿ ಯಾವುದೇ ಮುಗ್ಗಟ್ಟಿನ ಕಾರಣದಿಂದಾಗಿ ಲಾಭ ಉಂಟಾದರೂ ಸಹ, ಯಜಮಾನನಿಗೆ ಜವಾಬ್ದಾರನಾಗುವ ಮಟ್ಟಿಗೆ ಹೋಗುವುದಿಲ್ಲ.

ಅನುಕ್ರಮ ಹಕ್ಕುಗಳು ಮತ್ತು ಕರ್ತವ್ಯಗಳು

ಏಜೆಂಟನು ಕೆಲಸ ಸರಿಯಾಗಿ ನಿರ್ವಹಿಸದಿದ್ದರೆ ಯಜಮಾನನು ವೈಯಕ್ತಿಕ ವಾಗಿ ಜವಾಬ್ದಾರನಾಗುತ್ತಾನೆ. ೧೯೪೪ ರಲ್ಲಿ ಮುಂಬಯಿಯ ಬಂದರಿನಲ್ಲಿ ಎಸ್.ಎಸ್. ಫೋರ್ಟ್ ಸ್ಟಿಕೈನ್ (S.S.Fort Stikine) ಎಂಬ ಹೆಸರಿನ ಹಡಗಿನಲ್ಲಿ ದೊಡ್ಡ ಸ್ಫೋಟವಾಯಿತು. ಪ್ರತಿನಿಧಿಯು ಆ ಸಮಯದಲ್ಲಿ ಸರಕುಗಳನ್ನು ಖರೀದಿಸಿದ್ದು, ಅದನ್ನು ಸಂಗ್ರಹಿಸಿದ್ದನು. ಅವನು ವಿಮೆಯ ವೆಚ್ಚವನ್ನು ತೆಗೆದುಕೊಂಡಿದ್ದರೂ ಸಹ ವಿಮೆಯನ್ನು ಮಾಡಿಸಲು ವಿಫಲಗೊಂಡಿದ್ದನು. ಸ್ಫೋಟವು ಸರಕು ನಾಶ ಮಾಡಿದುದಕ್ಕಾಗಿ ಪ್ರತಿನಿಧಿಯು ಯಜಮಾನನ ನಷ್ಟ ಪರಿಹಾರ ಮಾಡಬೇಕೆಂದು ತೀರ್ಮಾನಿಸಲಾಯಿತು. ಕಾನಿಯಾ ಎಂಬ ಮುಖ್ಯ ನ್ಯಾಯಮೂರ್ತಿಯವರು ಪನ್ನಾಲಾಲ್ ಜಾನಕೀದಾಸ್ ವಿರುದ್ಧ ಮೋಹನ್‌ಲಾಲ್ (Pannalal Janakidas Vs. Mohanlal AIR 1951 SC 144)ನಲ್ಲಿ ಏಜೆಂಟನು ವಿಮಾ ಮಾಡದೇ ಇದ್ದುದರಿಂದ ಸರಕುಗಳ ಹಾನಿಗೆ ಅವನೇ ಕಾರಣನಾಗಿರುತ್ತಾನೆ. ಆದ್ದರಿಂದ ಯಜಮಾನನಿಗೆ ನಷ್ಟ ಪರಿಹಾರ ಮಾಡುವುದು ಅವನ ಹೊಣೆಯಾಗಿರುತ್ತದೆ ಎಂದು ತೀರ್ಪನ್ನು ಕೊಟ್ಟರು.

ಆಜ್ಞೆಯ ಗೈರು ಹಾಜರಿಯಲ್ಲಿ ಪ್ರತಿನಿಧಿಯು ಆಚರಣೆಯಲ್ಲಿರುವ ರೂಢಿಗಳನ್ನು ಅನುಸರಿಸಬೇಕು. ಏಜೆಂಟನು ಏಜೆನ್ಸಿಯ ವ್ಯವಹಾರವನ್ನು ನಿರೀಕ್ಷಿತ ಕೌಶಲದಿಂದ ನಡೆಸಲು ಬದ್ಧನಾಗಿರುತ್ತಾನೆ. ಇದನ್ನು ವರ್ಗ ೨೧೧ ಮತ್ತು ೨೧೨ ರಲ್ಲಿ ವಿವರಿಸಲಾಗಿದೆ. ಅವನು ಹಾಗೆ ಮಾಡದಿದ್ದರೆ ತನ್ನ ಹೊಣೆಗಾರಿಕೆಯ ಕೊರತೆ ಮತ್ತು

ನಿರ್ಲಕ್ಷ್ಯತೆಗೆ ಕಾರಣನಾಗುತ್ತಾನೆ. ಒಬ್ಬ ಪ್ರತಿನಿಧಿಯು ನಂಬಿಕೆ ಪಡೆದಿರುವವನಾದ್ದರಿಂದ ಅವನು ತನ್ನ ಹಿತಾಸಕ್ತಿಯು ಘರ್ಷಣೆಯಾಗದಂತಹ ರೀತಿಯಲ್ಲಿ ವರ್ತಿಸಬೇಕೆಂದು ನಿರೀಕ್ಷಿಸಲಾಗಿದೆ. ಅವನಿಗೆ ಯಾವುದೇ ವೈಯಕ್ತಿಕ ಅಥವಾ ರಹಸ್ಯ ಲಾಭವನ್ನು ಅನುಮತಿಸಿಲ್ಲ. ಸೇನಾ ಅಧಿಕಾರಿಯು ಬ್ರಿಟೀಷ್ ಸಾರ್ವಭೌಮದ ಪ್ರತಿನಿಧಿಯಾಗಿರುವುದರಿಂದ ಅವನು ಲಂಚ ತೆಗೆದುಕೊಂಡಿದ್ದಕ್ಕೆ ಅವನು ವಸೂಲು ಮಾಡಿದ ಲಂಚದ ಮೊತ್ತವನ್ನು ಹಿಂದಕ್ಕೆ ಕೊಡುವಂತೆ ಆದೇಶಿಸಲಾಯಿತು. ರೀಡಿಂಗ್ ವಿರುದ್ಧ ದಿ. ಕಿಂಗ್ (Reading Vs. The King 1951 AC 507) ನೋಡಿರಿ.

ವರ್ಗ ೨೧೯ ರ ಪ್ರಕಾರ, ಒಬ್ಬ ಏಜೆಂಟನು ಯಾವುದೇ ಒಪ್ಪಂದವಿಲ್ಲದಿದ್ದರೂ ತನ್ನ ಸೇವೆಗಳಿಂದ ವ್ಯವಹಾರವನ್ನು ಮಾಡಿದ್ದರೆ, ಪರಿಶ್ರಮಧನವನ್ನು ಕೇಳುವ ಹಕ್ಕನ್ನು ಪಡೆದಿರುತ್ತಾನೆ. ಲುಕ್ಸಾರ್ ಲಿಮಿಟೆಡ್ ವಿರುದ್ಧ ಕೂಪರ್ (Luxor (East Borne) Ltd., Vs. Cooper (1941) AC 108) ಇದರಲ್ಲಿ ಒಬ್ಬ ಪ್ರತಿನಿಧಿಗೆ ಸ್ವತ್ತಿನ ಮಾರಾಟಕ್ಕೆ ಕಮೀಷನ್ ಕೊಡುವುದಾಗಿ ವಾಗ್ದಾನ ಮಾಡಿದ್ದು, ಪ್ರತಿನಿಧಿಯು ಗಿರಾಕಿಯನ್ನು ಪರಿಚಯ ಮಾಡಿಸಿದರೂ ಸಹ ಮಾರಾಟವನ್ನು ಯಜಮಾನನು ತಿರಸ್ಕಾರ ಮಾಡಿದನು. ಏಜೆಂಟನಿಗೆ ಅನುಕೂಲವಾಗುವ ಯಾವುದೇ ವ್ಯವಹಾರವನ್ನು ಒಡೆಯನು ತಿರಸ್ಕರಿಸಲು ಅಡ್ಡಿ ಇಲ್ಲದಿರುವುದರಿಂದ ಯಜಮಾನನು ಏಜೆಂಟಿಗೆ ಯಾವುದೇ ಪರಿಶ್ರಮಧನವನ್ನು ಕೊಡ ಬೇಕಾಗಿಲ್ಲ ಎಂದು ನ್ಯಾಯಾಲಯ ನಿರ್ಧರಿಸಿತು. ಏಜೆಂಟನು ಯಜಮಾನನಿಂದ ಹಣ ಪಡೆಯುವವರೆಗೆ ಯಜಮಾನನ ಹಣವನ್ನು ತನ್ನ ಹತ್ತಿರವೇ ಇಟ್ಟುಕೊಳ್ಳುವ ಹಕ್ಕನ್ನು ಪಡೆದಿರುತ್ತಾನೆ (ವರ್ಗ ೨೧೭). ಏಜೆಂಟನು ಯಜಮಾನನ ಪತ್ರಗಳು ಮತ್ತು ಸ್ವತ್ತುಗಳನ್ನು ತಾನೇ ಇಟ್ಟುಕೊಳ್ಳುವ ಅಧಿಕಾರ (ಧಾರಣಾಧಿಕಾರ, Lien) ಹೊಂದಿರುತ್ತಾನೆ (ವರ್ಗ ೨೨೧). ಧಾರಣಾಧಿಕಾರವು ಏಜೆಂಟನಿಗೆ ಕಾನೂನು ರೀತ್ಯಾ ಹಣವನ್ನು ಪಡೆಯುವ ಹಕ್ಕಿದ್ದರೆ ಮಾತ್ರ ಅದು ಅವನಿಗೆ ಲಭ್ಯವಾಗುತ್ತದೆ. ಯಜಮಾನನು ಏಜೆಂಟನಿಗೆ ತನ್ನ ಪ್ರತಿನಿಧಿ ಎಂದು ಅವನ ಕೈಗೆ ಪತ್ರಗಳನ್ನು ಕೊಟ್ಟಿದ್ದರೆ ಮತ್ತು ಏಜೆಂಟನು ಸ್ವತ್ತಿನ ಧಾರಣಾಧಿಕಾರವನ್ನು ಹೊಂದಿದ್ದರೆ ಮಾತ್ರ ಇದು ಸಾಧ್ಯವಾಗುತ್ತದೆ. ವರ್ಗ ೨೨೨ ಮತ್ತು ೨೨೩ರ ಪ್ರಕಾರ ಏಜೆಂಟನು ತನ್ನ ಅಧಿಕಾರದ ವ್ಯಾಪ್ತಿಯೊಳಗೆ ಕಾರ್ಯ ಮಾಡುತ್ತಿರುವಾಗ ಯಾವುದೇ ನಷ್ಟಕ್ಕೆ ಗುರಿಯಾದರೆ, ನಷ್ಟಭರ್ತಿಯನ್ನು ಹೊಂದುವ ಹಕ್ಕನ್ನು ಏಜೆಂಟನಿಗೆ ಕೊಡಲಾಗಿದೆ.

ಅಧಿಕಾರದ ಪ್ರತ್ಯಾಯೋಜನೆ

"ಪ್ರತ್ಯಾಯೋಜನ ಅಧಿಕಾರವನ್ನು ಮತ್ತೆ ಪ್ರತ್ಯಾಯೋಜಿಸಲಾಗದು" (Delegatus non Potest Delegare) ಎಂಬ ತತ್ವವನ್ನು ಇಲ್ಲಿ ವ್ಯಕ್ತಪಡಿ ಸಲಾಗಿದೆ. ಕಾರ್ಯದ ಸ್ವಭಾವ ಅಥವಾ ವ್ಯಾಪಾರದ ರೂಢಿಯು ಅನುಮತಿಸಿದ ಹೊರತು, ಅಧಿಕಾರ

ವಹಿಸಿಕೊಡುವುದನ್ನು (ಪ್ರತ್ಯಾಯೋಜನೆ) ಅನುಮತಿಸ ಲಾಗುವುದಿಲ್ಲ. ಮಾರಾಟ ಮಾಡುವ ಏಜೆಂಟನು ಹರಾಜು ಮಾಡುವವನನ್ನು ನೇಮಿಸಬಹುದು ಮತ್ತು ರೂಢಿಗತವಾಗಿ ವಾಸ್ತುಶಿಲ್ಪಿಗಳು ಸಮೀಕ್ಷಕರನ್ನು ನೇಮಿಸುತ್ತಾರೆ. ಒಂದು ಕಾರ್ಯದಲ್ಲಿ ಯಾವುದೇ ಕೌಶಲತೆಯ ಅಗತ್ಯವಿಲ್ಲದೆ, ಅದು ಕೇವಲ ಲಿಪಿ ಕಾರ್ಯವಾಗಿದ್ದರೆ, ಆಗ ಕೆಲಸವನ್ನು ಇನ್ನೊಬ್ಬನಿಗೆ ವರ್ಗಾಯಿಸಬಹುದು. ಅನೇಕ ಸಲ ಒಬ್ಬ ಏಜೆಂಟನು ತನಗೋಸ್ಕರ ಕಾರ್ಯ ನಿರ್ವಹಿಸಲು ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡುವ ಅಧಿಕಾರವಿದ್ದರೆ ಆ ಇನ್ನೊಬ್ಬ ವ್ಯಕ್ತಿಯು ಬದಲಾಗಿ ಸೇರಿದ ಏಜೆಂಟನಾಗುತ್ತಾನೆಯೇ ಹೊರತು ಉಪಏಜೆಂಟನಾಗುವುದಿಲ್ಲ ಮತ್ತು ಈ ಬದಲಿ ಏಜೆಂಟನು ಯಜಮಾನನಿಗೆ ನೇರವಾಗಿ ಜವಾಬ್ದಾರನಾಗಿರುತ್ತಾನೆ. ಉಪಏಜೆಂಟನು ಮಾಡಿದ ಕರಾರುಗಳು, ಏಜೆಂಟಿನ ಕರಾರು ಹೇಗೆ ಪ್ರಭಾವ ಬೀರುತ್ತದೋ ಹಾಗೆಯೇ ಯಜಮಾನನ ಮೇಲೆ ಪ್ರಭಾವ ಬೀರುತ್ತದೆ. ಆದರೆ, ಉಪಏಜೆಂಟನು ಏಜೆಂಟನಿಗೆ ಮಾತ್ರ ಉತ್ತರಿಸ ಬೇಕಾಗುತ್ತದೆಯೇ ಹೊರತು ಯಜಮಾನನಿಗಲ್ಲ. ಸುಮ್ಮನ್‌ಸಿಂಗ್ ವಿರುದ್ಧ ಎನ್.ಸಿ. ಬ್ಯಾಂಕ್ ಆಫ್ ನ್ಯೂಯಾರ್ಕ್ (Summan Singh Vs. National City Bank of Newyork AIR 1952 PUNJ 172); ಕ್ಯಾಲಿಕೋ ಪ್ರಿಂಟರ್ಸ್ ಅಸೋಸಿಯೇಷನ್ ವಿರುದ್ಧ ಬಾರ್ಕ್ಲೇಸ್ ಬ್ಯಾಂಕ್ (Calico Printers Asociation Vs. Barclays Bank (1931) 145 LT 51). ನೋಡಿರಿ. ಯಜಮಾನನಿಗೆ ಏಜೆಂಟನು ಮಾತ್ರ ಜವಾಬ್ದಾರನಾಗುತ್ತಾನೆ. ಏಕೆಂದರೆ ಯಜ ಮಾನ ಮತ್ತು ಉಪಏಜೆಂಟನ ನಡುವೆ ಯಾವುದೇ ಕರಾರು ನಡೆದಿರುವುದಿಲ್ಲ.

ಯಜಮಾನನ ಹೊಣೆಗಾರಿಕೆ

ನಾವು ಮೊದಲೇ ಗಮನಿಸಿರುವ ಹಾಗೆ ಏಜೆಂಟನು ಯಜಮಾನ ಮತ್ತು ಮೂರನೇ ಪಕ್ಷದವರ ನಡುವೆ ಸಮಂಜಸವಾದ ಮತ್ತು ಜಾರಿಗೊಳ್ಳಬಹು ದಾದಂತಹ ಕರಾರನ್ನು ಮಾಡಿಕೊಡುತ್ತಾನೆ. ಏಜೆಂಟನು ಆ ಕರಾರನ್ನು ವೈಯಕ್ತಿಕ ವಾಗಿ ಜಾರಿಗೊಳಿಸುವ ಹಕ್ಕನ್ನು ಹೊಂದಿರುವುದಿಲ್ಲ. ಆದ್ದರಿಂದ ಏಜೆಂಟನು ರಸಾಯನ ಶಾಸ್ತ್ರದಲ್ಲಿ ಉಪಯೋಗಿಸುವ ಶಬ್ದದ ಪ್ರಕಾರ, ಪರಿವರ್ತನ ಪ್ರಚೋದಕ (Catalytic agent) ಎಂದು ವಿವರಿಸಬಹುದು. ಇದರಲ್ಲಿ ವರ್ಗ ೨೩೭ ಘೋಷಿಸುವಂತೆ ಏಜೆಂಟನು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಮಾಡಿದ ಎಲ್ಲಾ ಕಾರ್ಯಗಳಿಗೂ ಯಜಮಾನನು ಬದ್ಧನಾಗಿರುತ್ತಾನೆ ಮತ್ತು ಜವಾಬ್ದಾರಿಯುಳ್ಳವ ನಾಗಿರುತ್ತಾನೆ. ಲಾಯ್ಡ್ ವಿರುದ್ಧ ಗ್ರೇಸ್ ಸ್ಮಿತ್ ಮತ್ತು ಕಂಪನಿ (Lloyd Vs. Grace Smith & Co. (1912) AC 716). ಇದರಲ್ಲಿ ಗುಮಾಸ್ತನು ವೃತ್ತಿ ಸಲಹೆಗಾಗಿ ಬಂದ ಒಬ್ಬ ವಿಧವೆಯನ್ನು ವಂಚಿಸಿದ್ದರಿಂದ ಸಂಸ್ಥೆ ಅವಳಿಗೆ ನಷ್ಟ ಪರಿಹಾರ ಮಾಡುವ ಹೊಣೆ ಹೊಂದಿದ್ದು ಹೊಣೆಯಾಗಿದೆ ಎಂದು ನಿರ್ಧರಿಸಲಾಯಿತು.

ಏಜೆನ್ಸಿಯ ಮುಕ್ತಾಯ

ಒಬ್ಬ ಏಜೆಂಟ್ ಮತ್ತು ಯಜಮಾನನ ಸಂಬಂಧವು ಯಾವ ಯಾವ ವೇಳೆಯಲ್ಲಿ ಮುಕ್ತಾಯಗೊಳ್ಳುತ್ತದೆ ಎಂಬುದನ್ನು ಈಗ ತಿಳಿದುಕೊಳ್ಳೋಣ. ವರ್ಗ ೨೦೧ ರ ಪ್ರಕಾರ, ಯಜಮಾನ ಮತ್ತು ಏಜೆಂಟನ ಸಂಬಂಧವು ಕೆಳಗೆ ಹೇಳಿದ ಸಂದರ್ಭಗಳಲ್ಲಿ ಮುಕ್ತಾಯವಾಗುತ್ತದೆ.

1. **ನಿವರ್ತತೆಯಿಂದ :** ಯಜಮಾನನು ಏಜೆಂಟನ ಅಧಿಕಾರವನ್ನು ನಿವರ್ತಿಸಿದರೆ ಆಗ ಏಜೆನ್ಸಿಯೂ ಮುಕ್ತಾಯಗೊಳ್ಳುತ್ತದೆ.

2. **ಏಜೆಂಟನಿಂದ ಪರಿತ್ಯಾಗ :** ಏಜೆಂಟನು ತನ್ನ ಅಧಿಕಾರವನ್ನು ಬಿಟ್ಟು ಬಿಟ್ಟರೆ (ಪರಿತ್ಯಾಗ) (renounce), ಮಾಡಿದರೆ ಆಗ ಏಜೆನ್ಸಿಯು ಮುಕ್ತಾಯ ಗೊಳ್ಳುತ್ತದೆ.

3. **ಕೆಲಸ ಮುಕ್ತಾಯವಾದಾಗ :** ಒಂದು ನಿರ್ದಿಷ್ಟ ಕೆಲಸಕ್ಕೆಂದು ಏಜೆಂಟನನ್ನು ನೇಮಕ ಮಾಡಿಕೊಂಡಿದ್ದರೆ, ಆ ಕೆಲಸ ಮುಕ್ತಾಯವಾದಾಗ ಏಜೆನ್ಸಿಯು ತಾನೇ ತಾನಾಗಿ ಮುಕ್ತಾಯಗೊಳ್ಳುತ್ತದೆ.

4. **ಸಾವು ಅಥವಾ ಮನೋವಿಕಲತೆ :** ಏಜೆಂಟನ ಅಥವಾ ಯಜಮಾನನ ಮರಣ ಅಥವಾ ಮನೋವಿಕಲತೆಯಿಂದ ಏಜೆನ್ಸಿಯು ಸಮಾಪ್ತಿಯಾಗುತ್ತದೆ.

5. **ಯಜಮಾನನ ದಿವಾಳಿತನ :** ಯಜಮಾನನು ದಿವಾಳಿಯಾಗಿದ್ದಾನೆಂದು ನ್ಯಾಯಾಲಯ ತೀರ್ಪು ಕೊಟ್ಟರೆ ಆಗ ಏಜೆನ್ಸಿಯ ಕರಾರು ಮುಕ್ತಾಯವಾಗುತ್ತದೆ.

6. **ಕಾಲದ ಮುಕ್ತಾಯದಿಂದ :** ಒಬ್ಬ ಏಜೆಂಟನನ್ನು ಒಂದು ನಿಗದಿತ ಸಮಯಕ್ಕೆ ಗೊತ್ತು ಮಾಡಿಕೊಂಡಿದ್ದರೆ, ಆ ಸಮಯಕ್ಕೆ ಏಜೆನ್ಸಿಯ ಉದ್ದೇಶ ನೆರವೇರಿಕೆಯಾಗಿರಲೀ, ಇಲ್ಲದಿರಲೀ, ಏಜೆನ್ಸಿಯು ಮುಕ್ತಾಯಗೊಳ್ಳುತ್ತದೆ.

ವರ್ಗ ೨೧೦ ಏಜೆಂಟನ ಅಧಿಕಾರ ಮುಕ್ತಾಯವಾದಾಗ ಉಪ ಏಜೆಂಟನ ಅಧಿಕಾರ ಮುಕ್ತಾಯವಾದಂತೆ, ಎಂದು ವಿವರಿಸುತ್ತದೆ.

****

ಭಾಗ -೨೩

ವಿನಿಮಯ ಅಥವಾ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ (೧೮೮೧)

(Negotiable Instruments Act 1881)

ಆಧುನಿಕ ಸಮಾಜದಲ್ಲಿ ಹಣಕಾಸಿನ ವ್ಯವಹಾರಗಳು ಸಾಮಾನ್ಯ. ಆದರೆ ಹಣದ ಬಳಕೆ ಅಪರೂಪ. ಹಣವನ್ನು ಅಥವಾ ಒಂದು ನಿರ್ದಿಷ್ಟ ಮೊಬಲಗನ್ನು ಪ್ರತಿನಿಧಿಸುವ ದಾಖಲೆ ಪತ್ರಗಳ ವಹಿವಾಟೇ ಜಾಸ್ತಿ. ಈಗಿನ ಸಮಾಜದಲ್ಲಿ ಯೂನಿಟ್, ವಿಕಾಸ ಪತ್ರ ಮುಂತಾದ ಪತ್ರಗಳು ಹುಟ್ಟಿಕೊಂಡಿವೆ. ಆಧರೆ ಈ ಹಿಂದಿನಿಂದಲೂ ಹಣ ಮತ್ತು ನಾಣ್ಯಗಳಿಗೆ ಬದಲು ಅವುಗಳನ್ನು ಪ್ರತಿನಿಧಿಸುವ ದಾಖಲೆ ಪತ್ರಗಳಲ್ಲಿ ವಿಶೇಷವಾಗಿ ವಿನಿಮಯ ಪತ್ರಗಳ ಪಾತ್ರ ಮಹತ್ವ ಉಳ್ಳದ್ದು. ಆದ್ದರಿಂದ ವಿನಿಮಯ ಪತ್ರಗಳು ಬಹಳಹಿಂದೆಯೇ ಅಂದರೆ ೧೮೮೧ ರಲ್ಲೇ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಕಾನೂನು ಇತ್ತು. ಇದರಲ್ಲಿ ಋಣಭಾರದ ಮತ್ತು ಸಾಲವನ್ನು ಅಥವಾ ಹಣ ಬಾಕಿಯಾಗಿರತಕ್ಕಂತಹ ಅಂಶಗಳನ್ನು ಒಪ್ಪಿಕೊಂಡ ದಾಖಲೆ ಪತ್ರಗಳು ನಿರ್ದಿಷ್ಟವಾದ ಮತ್ತು ವ್ಯವಸ್ಥಿತ ರೀತಿಯಲ್ಲಿ ಇರಬೇಕು.

ಒಬ್ಬ ವ್ಯಕ್ತಿಯು ಸಾಲವನ್ನು ಪಡೆಯುವಾಗ ತನ್ನ ಸ್ಥಿರ ಸ್ವತ್ತನ್ನು ಈಡುಮಾಡಿಕೊಡುವುದು ಹಿಂದಿನಿಂದಲೂ ಬಂದ ರೂಢಿ. ಇದಕ್ಕೆ ಅಡಮಾನ (mortgage) ಎನ್ನುತ್ತಾರೆ. ಆದರೆ ಆ ಸ್ವತ್ತನ್ನು ಖರೀದಿಸಬಹುದಾದ ವ್ಯಕ್ತಿಯ ಹಕ್ಕುಗಳ ಸಂರಕ್ಷಣೆಗಾಗಿ ಭಾರತೀಯ ನೋಂದಣಿ ಕಾಯಿದೆ ಮತ್ತು ಭಾರತೀಯ ಸ್ವತ್ತು ವರ್ಗಾವಣೆ ಕಾಯಿದೆಗಳು ನಿರ್ದಿಷ್ಟವಾದ ಕ್ರಮವನ್ನು ಸೂಚಿಸಿವೆ. ಅದರಂತೆ ಪ್ರತಿಯೊಂದು ಪತ್ರವು ಇಬ್ಬರು ಸಾಕ್ಷಿಗಳನ್ನು ಹೊಂದಿರಬೇಕು ಮತ್ತು ನೋಂದಣಿಯಾಗಿರಬೇಕು. ಇದಲ್ಲದೇ ಬರೀ ಆಧಾರ ಪತ್ರವಾದರೆ ಶೇಕಡಾ ೫ ರಂತೆ ಶುಲ್ಕವನ್ನು ಮತ್ತು ಭೋಗ್ಯ ಪತ್ರವಾದರೆ ಖರೀದಿಯಂತೆ ಶೇಕಡಾ ೧೨ ರಷ್ಟು ಶುಲ್ಕವನ್ನು ಹೊಂದಿರತಕ್ಕ ಪತ್ರವಾಗಿರಬೇಕು. ಈ ಬಗ್ಗೆಯ ತೊಂದರೆಗಳಿಂದಾಗಿ ಮತ್ತೊಂದು ಬಗೆಯ ಅಡಮಾನ ಕ್ರಮ ಸ್ವತ್ತಿನ ವರ್ಗಾವಣೆ ಕಾನೂನು ವರ್ಗ ೫೮ ರಲ್ಲಿ ವಿವರಿಸಲಾಗಿದೆ. ಅದರಲ್ಲಿ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಬ್ಯಾಂಕು ಗಳಲ್ಲದೇ ಖಾಸಗಿ ಜನರು ಸಹ ಒಂದು ಸ್ವತ್ತಿನ ಮೂಲ ಪತ್ರಗಳನ್ನು ಮಾತ್ರ ಅಡಮಾನ ವಿಟ್ಟುಕೊಂಡು ಸಾಲ ಕೊಡಬಹುದು. ಅಂತಹ ಹಕ್ಕು ಪತ್ರಗಳನ್ನು ಇಡುವುದೇ (Deposit of title deeds) ಅಡಮಾನವಾಗುತ್ತದೆ.

ಮೇಲ್ಕಂಡಂತಹ ಸ್ವತ್ತನ್ನು ಈಡು ಮಾಡದೇ, ಬರೀ ಹಣ ಸಾಲ ಕೊಟ್ಟಲ್ಲಿ ಬಾಂಡ್ ಅಥವಾ ಬಂಧಪತ್ರವನ್ನು ನೋಂದಣಿಯಿಲ್ಲದೇ ಪಡೆಯಬಹುದು. ಆದರೆ ಅದಕ್ಕೂ ಶೇಕಡಾ ೫ ರಂತೆ ಶುಲ್ಕ ಕೊಡಬೇಕು. ಈ ರೀತಿ ನಿರ್ಬಂಧಗಳು ವರ್ತಕರನ್ನು ಬೇರೆ ವಿಧಾನಗಳನ್ನು ಹುಡುಕುವ ಪ್ರಯತ್ನ ಮಾಡುವಂತೆ ಪ್ರಚೋದಿಸಿತು. ಉದಾ: ಒಂದು ಲೇಣೆ ದೇಣೆ ವ್ಯವಹಾರದಲ್ಲಿ ಪದೇ ಪದೇ ಹಣವನ್ನು ಸಾಲವಾಗಿ ಪಡೆದು ಮತ್ತು ಸ್ವಲ್ಪ ಅವಧಿಯಲ್ಲೇ ಅದನ್ನು ಹಿಂದಿರುಗಿಸಬಹುದಾದ ಸಂದರ್ಭಗಳಲ್ಲಿ ಪದೇ ಪದೇ ಶುಲ್ಕವನ್ನು ಕೊಡುವುದನ್ನು ನಿವಾರಿಸಲು ಚೆಕ್, ಪ್ರಾಮಿಸರಿ ನೋಟ್ ಮುಂತಾದ ವಿನಿಮಯ ಪತ್ರಗಳು ಬಳಕೆಗೆ ಬಂದವು. ಇದರ ಪ್ರಕಾರ ಒಂದು ಪತ್ರವು ಪ್ರತಿನಿಧಿಸುವ ಹಣವು ವಿನಿಮಯವಾಗುವುದಕ್ಕೆ ಅವಕಾಶಕೊಟ್ಟು, ಅದನ್ನು ಒಂದು ಕೈಯಿಂದ ಇನ್ನೊಂದು ಕೈಯಿಗೆ ಕೇವಲ ಹಿಂಬರಹದ ಷರಾದಿಂದ ಬದಲಾಯಿಸ ಬಹುದು; ಮತ್ತು ಈ ಪತ್ರಗಳ ನಿಗದಿತ ಶುಲ್ಕ ಅತ್ಯಲ್ಪ.

ಕಾನೂನು ಕೂಡ ಈ ರೀತಿ ವ್ಯವಹಾರಗಳಿಗೆ ಗಮನ ಕೊಟ್ಟು ವಿಶೇಷ ಸೌಲಭ್ಯಗಳನ್ನು ಕಲ್ಪಿಸಿದೆ. ಅದರಂತೆ ಹಣ ಕೊಡುವವನು ಮತ್ತು ಪಡೆಯುವವನು ಇವರ ಮಧ್ಯೆ ಏನೇ ಬೇರೆ ಒಪ್ಪಂದ ಅಥವಾ ಪೂರ್ವ ಕರಾರು ಇರಲಿ, ಆ ಸಂದರ್ಭಗಳಲ್ಲಿ ಬರೆಸಿದ ವಿನಿಮಯ ಪತ್ರ ಕ್ರಮವಾಗಿ ಬೇರೆಯವನ ಕೈಗೆ ಹಸ್ತಾಂತರವಾದಾಗ ಅವರಿಗೆ ಮೊದಲಿನ ಷರತ್ತುಗಳ ಅಥವಾ ಒಪ್ಪಂದಗಳ ಬಾಧಕ ವಿಲ್ಲದೇ ಆ ಪತ್ರದಲ್ಲಿ ನಮೂದಿಸಿದ ಹಣಕ್ಕೆ ಪೂರ್ಣ ಹಕ್ಕುದಾರನಾಗುತ್ತಾನೆ. (Holder in due course). ವಿಷಯವನ್ನು ಮುಂದೆ ವಿಶದವಾಗಿ ಚರ್ಚಿಸಲಾಗಿದೆ.

ವಿನಿಮಯ ಪತ್ರವು ಒಂದು ಲಿಖಿತ ದಾಖಲೆ. ಒಬ್ಬ ನಿರ್ದಿಷ್ಟ ಮನುಷ್ಯನು ಹಣ ಸಂದಾಯ ಮಾಡಲು ಒಪ್ಪಿಕೊಂಡು, ಕೇಳಿದ ಕೂಡಲೇ ಅಥವಾ ಒಂದು ನಿರ್ದಿಷ್ಟ ಕಾಲದ ನಂತರ, ಒಂದು ನಿರ್ದಿಷ್ಟವಾದಂತಹ ಮೊಬಲಗನ್ನು ಕೊಡುವುದು ಅಥವಾ ಇನ್ನೊಬ್ಬ ಮನುಷ್ಯನಿಗೆ ನಿರ್ದಿಷ್ಟವಾದ ಮೊಬಲಗನ್ನು ಯಾರ ಹೆಸರಿನಲ್ಲಿ ಪತ್ರವನ್ನು ಕೊಟ್ಟಿರುತ್ತದೆಯೋ ಅವರಿಗೆ ಕೊಡುವಂತೆ ಆದೇಶ ಕೊಡುವುದು ಇದರ ವೈಶಿಷ್ಟ್ಯ. ಈ ಅಧಿನಿಯಮವು ವಚನ ಪತ್ರ (Promissory Note) ವಿನಿಮಯ ಪತ್ರ (Bill of Exchange) ಮತ್ತು ಚೆಕ್ಕು (Cheque) ಎಂಬ ಮೂರು ತರಹದ ಸಾಧನಗಳನ್ನು ಒಳಗೊಂಡಿದೆ. ಈ ಎಲ್ಲಾ ಸಲಕರಣೆಗಳಲ್ಲಿ ಒಂದು ನಿರ್ದಿಷ್ಟ ಮೊಬಲಗನ್ನು ಕೊಡತಕ್ಕದ್ದು ಮತ್ತು ಅದು ಪರಿಮಿತ ಮತ್ತು ಅದರ ಮೇಲೆ ಬಹಳ ಸಣ್ಣ ಮೊತ್ತದ ಸ್ಟ್ಯಾಂಪ್ (ಡ್ಯೂಟಿಯನ್ನು) ಸುಂಕವನ್ನು ಕೊಡಬೇಕಾಗುತ್ತದೆ. (ಚೆಕ್ಕುಗಳನ್ನು ಬಿಟ್ಟು, ಏಕೆಂದರೆ ಚೆಕ್ಕುಗಳು ವಿನಾಯಿತಿ ಹೊಂದಿದೆ) ಮತ್ತು ಅದರ

ಒಳಗಿರುವ ವಿಷಯವನ್ನು ಅನೌಪಚಾರಿಕವಾಗಿ ವರ್ಗಾವಣೆಯನ್ನು ಮಾಡುವ ಸೌಲಭ್ಯ ಹೊಂದಿರುತ್ತದೆ.

ಸಾಮಾನ್ಯ ಕಾನೂನಿನ ನಿಬಂಧನೆಯ ಮೇಲೆ ಒಂದು ದಾಖಲೆಯು ಬರೀ ಹಣಕಾಸಿನ ವ್ಯವಹಾರಕ್ಕಾಗಿ ಮಾತ್ರ ಮಾಡಿದರೆ ಅದನ್ನು ಬಂಧಪತ್ರ (Bond) ಎಂದು ವರ್ಗೀಕರಣ ಮಾಡಲಾಗುತ್ತದೆ. ಅದಕ್ಕೆ ಮೌಲ್ಯಾನುಸಾರ (Ad-valorem) ಸ್ಟಾಂಪ್ ಸುಂಕ ಹಾಕಲಾಗುತ್ತದೆ. ಸ್ಟಾಂಪು ಸುಂಕ ಕಟ್ಟದೇ ಇದ್ದರೆ ಸುಂಕದ ಹತ್ತರಷ್ಟು ದಂಡವನ್ನು ವಸೂಲು ಮಾಡಲು ಇತರೆ ವಿಧಾನಗಳನ್ನು ಕೈಗೊಳ್ಳ ಬಹುದು.

ಸಾಲ ವ್ಯವಹಾರವು ಸರಳ ಅಡಮಾನವಾದರೆ (Simple Mortgage) ಅದಕ್ಕೆ ಮೌಲ್ಯಾನುಸಾರ ಸ್ಟಾಂಪ್ ಸುಂಕವನ್ನು ಹಾಕಬೇಕು. ಅದು ಲಿಖಿತ ನೋಂದಾಯಿಸಿದ ದಾಖಲೆಯಾಗಿರಬೇಕು. ಅದು ಭೋಗ್ಯದ ಅಡಮಾನವಾಗಿದ್ದರೆ, ಮೇಲೆ ಹೇಳಿದ ತರಹವೇ ನೋಂದಾಯಿಸಬೇಕು. ಆದರೆ ಅದಕ್ಕೆ ಶೇಕಡಾವಾರು ಸ್ಟಾಂಪ್ ಶುಲ್ಕ ಹಾಕಬೇಕು.

ವಾಣಿಜ್ಯ ವ್ಯವಹಾರಗಳಲ್ಲಿ ಸಾಲ ತೆಗೆದುಕೊಂಡ ಮೊಬಲಗು ಬಹಳ ಜಾಸ್ತಿ ಇರಬಹುದು. ಆದರೆ ಸ್ವಲ್ಪ ಸಮಯದಲ್ಲೇ ವ್ಯಾಪಾರಿಯು ವಸ್ತುಗಳನ್ನು ಬೇಗನೆ ವಿಲೇವಾರಿ ಮಾಡಿ, ಸಾಲವನ್ನು ಹಿಂದಿರುಗಿಸಬಹುದು. ಏಕೆಂದರೆ, ಇನ್ನೊಂದು ರವಾನಿಕೆಯ ಸರಕು ವಸ್ತುಗಳು ಬಂದಾಗ ಅದನ್ನು ಬಿಡುಗಡೆ ಮಾಡಲು ಸಾಲಕ್ಕಾಗಿ ಆಶ್ರಯಿಸಬೇಕಾಗುತ್ತದೆ. ಆದ್ದರಿಂದ ವಾಣಿಜ್ಯ ಸಮುದಾಯವು ಅಂತಹ ಲೇಣೆ ದೇಣೆಗಳಲ್ಲಿ ವಾಣಿಜ್ಯ ಅಭ್ಯಾಸ ಮತ್ತು ಆಚರಣೆಯಲ್ಲಿ ಸುಲಭ ಸರಳ ದಾಖಲೆ ಯನ್ನು ನಿರ್ಮಿಸಿಕೊಂಡಿದೆ. ಅಷ್ಟೇ ಅಲ್ಲದೆ, ದಾಖಲೆಯ ಒಳಾಂಶವನ್ನು ಇನ್ನೊಬ್ಬ ಮನುಷ್ಯನಿಗೆ ಕೊಡುವುದರ ಮೂಲಕ ಅಥವಾ ಹಿಂಬರಹ (endorsement) ಮಾಡುವುದರ ಮೂಲಕ ವರ್ಗಾವಣೆ ಮಾಡಬಹುದು ಮತ್ತು ಬಂಧಪತ್ರ ಮುಚ್ಚಳಿಕೆ ಅಥವಾ ಅಡಮಾನವಾದಲ್ಲಿ ಹಣವನ್ನು ವಸೂಲು ಮಾಡುವ ಹಕ್ಕನ್ನು ಹಸ್ತಾಂತರಣ ಪತ್ರ (Deed of Assignment) ದ ಮೂಲಕ ಮಾತ್ರ ವರ್ಗಾಯಿಸಬಹುದು. ಮತ್ತು ಈ ವರ್ಗಾವಣೆಯು ವರ್ಗಾವಣೆ ಮಾಡುವವನನ್ನು ಮೂಲಪಕ್ಷಕಾರರ ನಡುವೆ ಇದ್ದ ನ್ಯಾಯಸಮ್ಮತ ಹಕ್ಕನ್ನು ಬದ್ಧಗೊಳಿಸುವಂತೆ ಪ್ರವರ್ತಿಸುತ್ತದೆ. ಇಂತಹ ವಿಷಯದಲ್ಲಿ ಒಳಾಂಶಗಳ ವರ್ಗಾವಣೆಯು ತನ್ನಷ್ಟಕ್ಕೆ ತಾನೇ ಪ್ರತ್ಯೇಕವಾಗಿ ಪರಿಮಿತಗೊಂಡಿ ರುತ್ತದೆ. ಇದು ಪ್ರಾಮಿಸರಿ ಅಥವಾ ಇತರ ವಿನಿಮಯ ಪತ್ರದ ಉಪಯುಕ್ತತೆಯನ್ನು ತೋರಿಸುತ್ತದೆ.

ಕಾನೂನು ವಾಣಿಜ್ಯ ಆಚರಣೆಯ ವಿಷಯವನ್ನು ಎತ್ತಿ ಹಿಡಿದರೆ ಮತ್ತು ಇಂಗ್ಲೆಂಡಿನಲ್ಲಿ ವ್ಯಾಪಾರಿ ಕಾನೂನು (Law Merchant) ಎಂಬ ಹೆಸರನ್ನು ಹೊಂದಿದೆ

ಮತ್ತು ಕಾನೂನು ವಾಣಿಜ್ಯ ಅಭ್ಯಾಸಕ್ಕೆ ವಶವಾಗಿದೆ ಎಂದು ಹೇಳ ಬಹುದು. ಈ ದಾಖಲೆಗಳ ಒಡಂಬಡಿಕೆಯ ಮನ್ನಣೆಯು ಪರಕ್ರಾಮ್ಯ ಪತ್ರಗಳ ಅಧಿನಿಯಮದಲ್ಲಿ ನಿಯಮಿತಗೊಂಡಿದೆ.

ವಚನಪತ್ರವು ಲಿಖಿತ ಪತ್ರವಾಗಿದ್ದು, ಪತ್ರ ಮಾಡಿದವನ ಸಹಿ ಹೊಂದಿರುತ್ತದೆ ಮತ್ತು ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಅಥವಾ ಅವನ ಆದೇಶಕ್ಕೆ ಅಥವಾ ಆ ಪತ್ರದ ಧಾರಕನಿಗೆ ಒಂದು ನಿಶ್ಚಿತವಾದ ಹಣದ ಮೊಬಲಗನ್ನು ಸಂದಾಯ ಮಾಡುವ ಬಗ್ಗೆ ಅದರ ನಿರ್ಮಾಪಕನಿಂದ ಷರತ್ತು ಬಾಹಿರವಾಗಿ ಕೊಡಲಾದ ವಚನದ ಹಸ್ತಾಕ್ಷರದಿಂದ ಕೂಡಿಕೊಂಡಿರುವ ಒಂದು ಪತ್ರವಾಗಿರುತ್ತದೆ. ದಾಖಲೆಯು ಅದರಲ್ಲಿ ಹೆಸರಿರುವವನಿಗೆ ಮಾತ್ರ ಹೊಣೆಯನ್ನು ಸೃಷ್ಟಿಸಿದ್ದರೆ ಅದು ಪರಕ್ರಾಮ್ಯವಲ್ಲ. ಆದರೆ ಪತ್ರವನ್ನು ತಂದಿರುವವನಿಗೆ ಸಂದಾಯ ಮಾಡುವಂತಿದ್ದರೆ ಅಥವಾ ಸ್ವೀಕರ್ತ (Payee ಹಣ ಪಡೆಯುವವನು) ನಿಂದ ನೇಮಿಸಲ್ಪಟ್ಟವನಿಗೆ ಸಂದಾಯ ಮಾಡುವಂತಿದ್ದರೆ, ಆಗ ಇದು ಸರಿಯಾದ ವಚನ ಪತ್ರವಾಗುತ್ತದೆ. ಪರಕ್ರಾಮ್ಯದ ಲಾಭವನ್ನು ಹೊಂದಿ ಅಂದರೆ, ಅದರ ಒಳಾಂಶ ವನ್ನು ಯಾರಾದರೂ ವರ್ಗಾವಣೆದಾರನಿಂದ ಸಂಗ್ರಹಿಸಬಹುದು. ಆ ಪತ್ರವನ್ನು ಸುಮ್ಮನೆ ತೆಗೆದುಕೊಂಡು ಅಥವಾ ಹಿಂಬರಹ (Endorsenment) ವರ್ಗಾವಣೆಯನ್ನು ಪಡೆದುಕೊಂಡು, ಆ ಪತ್ರದ ಮೇಲೆಯೇ ಅಥವಾ ಪತ್ರದ ಮೇಲೆ ಸಾಕಷ್ಟು ಜಾಗವಿಲ್ಲದಿದ್ದರೆ, ಅದರ ಮೇಲೆ ಒಂದು ಚೀಟಿ ಅಂಟಿಸುವುದರ ಮೂಲಕ ಮಾಡಬಹುದು. ಅದನ್ನು ಅಲಾಂಜೆ (Allonge) ಎಂದು ಕರೆಯುತ್ತಾರೆ. (Vide Sec. 15).

ಚೆಕ್ಕಿನ ವಿಷಯದಲ್ಲಿ ಧನಾದೇಶಕ (Drawee) ಅಂದರೆ ಚೆಕ್ಕನ್ನು ಬರೆಯುವವನು (ಪತ್ರವನ್ನು ಮಾಡುವವ) ಧನಾಧೀಶ ಅಂದರೆ ಬ್ಯಾಂಕಿಗೆ, ಅವನ ಖಾತೆಯಿಂದ ಒಂದು ನಿಶ್ಚಿತ ಮೊಬಲಗನ್ನು ಅದರಲ್ಲಿ ನೇಮಕವಾಗಿರುವವನ ಹೆಸರಿಗೆ ಅಥವಾ ಚೆಕ್ಕನ್ನು ಹೊಂದಿರುವವನಿಗೆ ಕೊಡುವಂತೆ ಆದೇಶ ಕೊಡುತ್ತಾನೆ.

ವಿನಿಮಯ ಪತ್ರದಲ್ಲಿ, ಅಂದರೆ ಚೆಕ್ಕುಗಳ ವಿಷಯದಲ್ಲಿ ಅದರಲ್ಲಿ ಒಬ್ಬ ನಿಶ್ಚಿತ ವ್ಯಕ್ತಿಗೆ, ಅಥವಾ ಆ ಸಂಲೇಖದ ಧಾರಕನಿಗೆ ಅಥವಾ ಆದೇಶದ ಮೇರೆಗೆ ಒಂದು ನಿಶ್ಚಿತವಾದ ಹಣದ ಮೊಬಲಗುಗಳನ್ನು ಮಾತ್ರ ಸಂದಾಯ ಮಾಡುವಂತೆ ಒಬ್ಬ ವ್ಯಕ್ತಿಗೆ ಆದೇಶಿಸುವ ಒಂದು ಷರತ್ತು, ಇರದ ಆದೇಶದಿಂದ ಕೂಡಿರುವ ಲಿಖಿತ ಸಂಲೇಖವಾಗಿದ್ದು, ಅದು ಅದರ ನಿರ್ಮಾಪಕನ ಹಸ್ತಾಕ್ಷರ ಹೊಂದಿರುತ್ತದೆ. ಭಾರತದಲ್ಲಿ ದೇಶೀಯ ವಿನಿಮಯ ಪತ್ರದ ಧನಾದೇಶಿಕನು ಪತ್ರವನ್ನು ಗೌರವಿಸಬಹುದು ಅಥವಾ ನಿರಾಕರಿಸಲೂಬಹುದು. ಆಗ ಸ್ವೀಕರ್ತ ಅಥವಾ ಪತ್ರವನ್ನು ಹೊಂದಿರುವವನಿಗೆ ಪರಿಹಾರೋಪಾಯವು ಇರುವುದು ಧನಾದೇಶಕನ ಮೇಲೆ ಮಾತ್ರ.

ಏಕೆಂದರೆ, ವಿನಿಮಯ ಪತ್ರದ ಮುಖ್ಯಾಂಶವೇ ಧನಾದೇಶಿಕನ ಅಂಗೀಕಾರ. ವಿನಿಮಯ ಪತ್ರವು ಧನಾದೇಶನಿಗೆ ಹೊಣೆಯನ್ನು ಅಂಗೀಕರಿಸಿದ ಮೇಲೆ ಅಂಗೀಕರ್ತ ಎಂದು ಕರೆಯಲ್ಪಟ್ಟು, ವಿನಿಮಯ ಪತ್ರವನ್ನು ನೋಡಿದ ತಕ್ಷಣ ಅಥವಾ ಅದನ್ನು ನೋಡಿದ ಸ್ವಲ್ಪ ಸಮಯದ ನಂತರ ಹಣ ಕೊಡುವಂತೆ ಆದೇಶ ಕೊಡುವುದು. ಆದ್ದರಿಂದ ಹಣ ಪಡೆಯುವವನು, ಅಂಗೀಕಾರಕ್ಕೆ ದಾಖಲೆಯನ್ನು ಅಗತ್ಯವಾಗಿ ಸಲ್ಲಿಸಬೇಕು. ಇದನ್ನು ಉಪಸ್ಥಾಪನೆ (Presentment) ಎಂದು ಕರೆಯುತ್ತಾರೆ. ಮಾಗಣೆ ಮಾಡಿದ ಮೇಲೆ ಸಂದಾಯವಾಗಬೇಕಾದ ಪ್ರೋನೋಟು ಇದರಿಂದ ವಿನಾಯಿತಿ ಹೊಂದಿದೆ.

ಪರಕ್ರಾಮ್ಯ ಪತ್ರಗಳ ಮುಖ್ಯಾಂಶ

ಪ್ರೋನೋಟ್ ಮತ್ತು ವಿನಿಮಯಪತ್ರಕ್ಕೆ ನಾಮಕಾವಸ್ಥೆ ಸ್ಟಾಂಪು ಸುಂಕ ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಹಸ್ತಾಂತರಣ ಮಾಡುವುದರ ಮೂಲಕ ಪತ್ರ ಇಲ್ಲದೇ ಮುಕ್ತವಾಗಿ ಮತ್ತು ಅನೌಪಚಾರಿಕವಾಗಿ ಇದನ್ನು ವರ್ಗಾಯಿಸಬಹುದು. ಧನಾದೇಶಕ (Drawee) ಮತ್ತು ಸ್ವೀಕರ್ತನ (Payee) ನಡುವೆ ಇರುವ ನ್ಯಾಯಸಮ್ಮತ ಹಕ್ಕು ವರ್ಗಾವಣೆ ಧಾರಕನನ್ನು ಅವನು ಸಮ್ಯಕ ಅನುಕ್ರಮಧಾರಕನಾಗಿದ್ದರೆ ಬಾಧಿಸುವುದಿಲ್ಲ. ಏಕೆಂದರೆ, ವರ್ಗ ೯ ರ ಪ್ರಕಾರ ವರ್ಗಾವಣೆ ಧಾರಕನು ಧಾರಕ ಅಥವಾ ಆದೇಶಗಾರ ಅಥವಾ ಹಿಂಬರಹದಾರನಿಗೆ ಸಂದಾಯವಾಗಬೇಕಾದ ಪತ್ರವನ್ನು ಪಡೆದುಕೊಂಡಿದ್ದರೆ, ಹಣವು ಸಂದಾಯ ವಾಗುವುದಕ್ಕೆ ಮುಂಚೆಯೇ ಪ್ರತಿಫಲಕ್ಕಾಗಿ ಮತ್ತು ವರ್ಗಾವಣೆಕಾರನ ಸ್ವಾಮ್ಯದಲ್ಲಿ ದೋಷವಿರುವಿಕೆಯನ್ನು ನಂಬಲು ಸಾಕಷ್ಟು ಕಾರಣಗಳು ಇಲ್ಲದಿದ್ದರೆ, ಅವನನ್ನು ಪ್ರಾಮಾಣಿಕ ಧಾರಕ ಎಂದು ಕಾನೂನು ಸಂರಕ್ಷಿಸುತ್ತದೆ (Holder in due Course).

ಅಂತಹ ಧಾರಕನಿಗೆ ಹೆಚ್ಚು ಲಾಭವನ್ನು ಕೊಟ್ಟಿರುವುದನ್ನು ಅಧಿನಿಯಮದ ವರ್ಗ ೧೧೮ ರಲ್ಲಿ ನಮೂದಿಸಲಾಗಿದೆ. ಈ ಎಲ್ಲಾ ವ್ಯವಹರಣೆಗಳಲ್ಲಿ ನ್ಯಾಯಾಲಯವು ಇಂತಹ ಎಲ್ಲಾ ಪತ್ರಗಳನ್ನೂ ಪ್ರತಿಫಲಕ್ಕೋಸ್ಕರ (Consideration) ಮಾಡಿ ಮತ್ತು ಬರೆಯಲಾಗಿದ್ದು, ಫಲಿತಾಂಶಕ್ಕಾಗಿ ಅಂತಹ ದಾಖಲೆ ಯನ್ನು ಹಾಜರುಪಡಿಸಿದ ಮೇಲೆ, ಪತ್ರ ಹೊಂದಿರುವವನು ಪ್ರತಿಫಲವನ್ನು ವಾಸ್ತವಿಕವಾಗಿ ಸಂದಾಯ ಮಾಡಿರುವುದಾಗಿ ಮತ್ತೆ ರುಜುವಾತು ಪಡಿಸಬೇಕಾಗಿಲ್ಲ ಎಂದು ಸೂಚಿಸುತ್ತದೆ ಮತ್ತು ಬೇರೆ ಪಕ್ಷಕ್ಕೆ ಮನದಟ್ಟು ಮಾಡುವ ರುಜುವಾತಿನ ಖಂಡನೆಗೆ ಒಳಪಟ್ಟು, ಅವನು ಪೂರ್ತಿ ಪ್ರತಿಫಲ ಸಂದಾಯ ಮಾಡಿದ್ದಾನೆಂದು ಭಾವಿಸಲ್ಪಡುತ್ತದೆ. ಎರಡನೆ ಪೂರ್ವ ಭಾವನೆಯು ಎಲ್ಲಾ ಅಂಗೀಕಾರ, ಹಿಂಬರಹ, ಪರಕ್ರಾಮ್ಯವನ್ನು ಸರಿಯಾಗಿ ಮತ್ತು ಪ್ರತಿಫಲಕ್ಕಾಗಿ ಮಾಡಿದೆ, ಅಂದರೆ ಪ್ರತಿ ಹೆಜ್ಜೆಗೂ ಹಿಂದಿನ ಧಾರಕನಿಗೆ ವರ್ಗಾವಣೆ ಮಾಡಲು ಹಣ ಸಂದಾಯ ಮಾಡಿದೆ ಅಥವಾ ಬೇರೆ ಯಾವುದಾದರೂ ಲಾಭ ಅಥವಾ ಪ್ರತಿಫಲವನ್ನು ಪಡೆಯಲು

ಪ್ರೋತ್ಸಾಹಿಸಿದೆ. ಪತ್ರದ ತಾರೀಖು, ನಿಜವಾದ ತಾರೀಖು ಮತ್ತು ಕಳೆದ ದಾಖಲೆಯನ್ನು ಕ್ರಮಬದ್ಧವಾಗಿ ಸ್ಟಾಂಪ್ ಮಾಡಲಾಗಿದೆ ಎಂದು ಮತ್ತಷ್ಟು ಹೆಚ್ಚಾಗಿ ಪೂರ್ವಭಾವನೆ ಮಾಡಲಾಗಿದೆ. ಇನ್ನೂ ಹೆಚ್ಚಿನ ಪೂರ್ವ ಭಾವನೆಗಳು ಏನೆಂದರೆ, ವಿನಿಮಯ ಪತ್ರದ ವಿಷಯದಲ್ಲಿ ಯುಕ್ತಕಾಲದಲ್ಲಿ ಮತ್ತು ವಾಯಿದೆಗೆ ಮುಂಚೆ ಅಂಗೀಕರಿಸಿ ಮತ್ತು ಪರಿಕ್ರಾಮ್ಯದ ಎಲ್ಲಾ ವರ್ಗಾವಣೆಯು ವಾಯಿದೆಗೆ ಮುಂಚೆಯೇ ಮತ್ತು ಅದರ ಹಿಂಬರಹಗಳು ಆದೇಶದಂತೆ ಮಾಡಿರುವ ಹಾಗೆ ಕಾಣಿಸಿಕೊಳ್ಳುತ್ತವೆ. ಕೊನೆಯ ಮುಖ್ಯವಾದ ಪುನರ್ಭಾವನೆಯ ಪತ್ರವನ್ನು ಹೊಂದಿರು ವವನು ಅಂದರೆ ಯಾವುದೇ ಮನುಷ್ಯನು ತನ್ನ ಸ್ವಂತ ಹೆಸರಿನಲ್ಲಿ ಹೊಂದುವುದಕ್ಕೆ ಅರ್ಹನಾಗಿರುವನೋ ಅಥವಾ ಬಾಕಿ ಇರುವ ಹಣವನ್ನು ಅದರ ಆಧಾರದ ಮೇಲೆ ವಸೂಲು ಮಾಡುವವನೇ ಸಮ್ಯಕ್ ಅನುಕ್ರಮ ಧಾರಕ (Holder in due Course). ಅಂದರೆ, ಯಾವುದಾದರೂ ಸಾಧ್ಯವಾದ ದೋಷದ ಪ್ರತಿಫಲದ ಅಭಾವ ಅಥವಾ ತಿಳುವಳಿಕೆಯ ಭಾರವನ್ನು ಅವನ ಮೇಲೆ ಹೊರಿಸಲಾಗುವುದಿಲ್ಲ ಮತ್ತು ಯಾವಾಗಲೂ ಅದನ್ನು ನಿರೂಪಣೆ ಮಾಡುವುದು ಬೇರೆ ಪಕ್ಷದ ಮೇಲೆ ಬೀಳುತ್ತದೆ.

ಆದ್ದರಿಂದ ಅಧಿನಿಯಮವು ಪಕ್ಷಗಳಿಗೆ ನಾಮಕಾವಾಸ್ಥೆ ಸ್ಟಾಂಪ್ ಸುಂಕವನ್ನು ಹಾಕಿ ಸ್ವೀಕರ್ತನಿಗೆ ಅಥವಾ ಅವನ ವರ್ಗಾವಣೆ ಪಡೆದವನಿಗೆ ಕಾರ್ಯಗತ ಗೊಳಿಸುವ ಹಕ್ಕನ್ನು ಸೃಷ್ಟಿಸಿದೆ. ಪ್ರತ್ಯೇಕ ಹಸ್ತಾಂತರಣ ಪತ್ರದ ಅವಶ್ಯಕತೆ ಇಲ್ಲದೇ ಹಣವನ್ನು ವಸೂಲು ಮಾಡುವುದು ಮತ್ತು ಪ್ರತಿಫಲ ಕೊರತೆ ಅಥವಾ ಸ್ವಾಮ್ಯ ಕೊರತೆ ಬಗ್ಗೆ ಸಿವಿಲ್ ವ್ಯವಹರಣೆಯ ವಿಷಯದಲ್ಲಿ ಸಾಮಾನ್ಯ ಪರಿವಾದವಿಲ್ಲ ದಂತೆ ಮಾಡುವ ಗುರಿಯಿಟ್ಟುಕೊಂಡಿದೆ. ಆದರೆ ಭಾರತದ ರಿಸರ್ವ್ ಬ್ಯಾಂಕಿನ ಅಧಿನಿಯಮದ ಮೇಲೆ ಚಲಾವಣೆಯಲ್ಲಿರುವ ನೋಟನ್ನು ಸರ್ಕಾರವೇ ಹೊರಡಿಸಬೇಕು ಮತ್ತು ಹಣ ಪಡೆ ಯುವವನು ನಿರ್ದಿಷ್ಟ ಮನುಷ್ಯನಲ್ಲ ಎಂಬುದನ್ನು ಗಮನದಲ್ಲಿಡಬೇಕು.

ವಚನಪತ್ರ ಮತ್ತು ವಿನಿಮಯಪತ್ರ ಇವುಗಳ ವ್ಯತ್ಯಾಸ

(Distinction between Promissory Note and Bill of Exchange)

೧. ವಚನ ಪತ್ರದಲ್ಲಿ, ನಿರ್ಮಾಪಕನು ಪತ್ರದಲ್ಲಿ ನೇಮಿಸಿರುವ ಮನುಷ್ಯನಿಗೆ ಅಥವಾ ಅವನ ವರ್ಗಾವಣೆ ಧಾರಕನಿಗೆ ಹಣ ಸಂದಾಯ ಮಾಡಲು ಜವಾಬ್ದಾರಿ ವಹಿಸುತ್ತಾನೆ. ಆದರೆ ವಿನಿಮಯ ಪತ್ರದಲ್ಲಿ ನಿರ್ಮಾಪಕನು ಧನಾದೇಶಕನೆಂಬ ಇನ್ನೊಬ್ಬ ಮನುಷ್ಯನಿಗೆ ಸ್ವೀಕರ್ತ ಅಥವಾ ಅವನ ಆದೇಶಿಕ ಅಥವಾ ಧಾರಕನಿಗೆ ಹಣ ಸಂದಾಯ ಮಾಡಲು ಸೂಚಿಸುತ್ತಾನೆ.

೨. ವಚನಪತ್ರದಲ್ಲಿ ನಿರ್ಮಾಪಕನೇ ಬಾಧ್ಯತೆಯ ಹಣ ಸಂದಾಯ ಮಾಡಲು ಹೊಣೆಯಾಗಿರುತ್ತಾನೆ. ಆದರೆ ಹಿಂಬರಹ ಹಸ್ತಾಂತರ ವಹಿಸಿಕೊಡುವಿಕೆಯಲ್ಲಿ

ಹಿಂಬರಹಕಾರನು ಎರಡೂ ಪಕ್ಷದವರನ್ನೂ ಹೊಣೆ ಮಾಡಬಹುದು. ವಿನಿಮಯ ಪತ್ರದಲ್ಲಿ ಧನಾದೇಶಕನು ಸ್ವೀಕರ್ತನಿಗೆ ಅವನು ಪತ್ರವನ್ನು ಅಂಗೀಕಾರ ಮಾಡಿಕೊಳ್ಳುವವರೆಗೆ ಉತ್ತರಿಸಬೇಕಾಗಿಲ್ಲ ಮತ್ತು ಅಂಗೀಕಾರವನ್ನು ಪತ್ರದ ಮೇಲೆಯೇ ಸೂಚಿಸಬೇಕು ಮತ್ತು ಧನಾದೇಶದ ಹಸ್ತಾಕ್ಷರವಿರಬೇಕು. ಧನಾದೇಶಕನು ಧನಾದೇಶನಿಗೆ ನಷ್ಟಪರಿಹಾರ ಮಾಡುವ ಒಂದೇ ಹೊಣೆಯನ್ನು ಹೊಂದಿರುತ್ತಾನೆ. ಅದೂ ನಷ್ಟ ಪರಿಹಾರ ಸೂಚನೆ ವರ್ಗ ೩೦ ರ ಪ್ರಕಾರ ಒದಗಿಸಿದರೆ ಮಾತ್ರ. ಚೆಕ್ಕಿನ (cheque) ವಿಷಯದಲ್ಲಿ ಧನಾದೇಶಿತ ಅಂದರೆ ಬ್ಯಾಂಕ್, ಧನಾದೇಶಕನ ನಷ್ಟಪರಿಹಾರ ಮಾಡಬೇಕು ಅಂದರೆ ಖಾತೆ ಹೊಂದಿರು ವವನು ಸಾಕಷ್ಟು ಹಣಕಾಸು ದೊರಕಿದ್ದರೆ ಮತ್ತು ಚೆಕ್ಕು ಸರಿಯಾಗಿ ಮನ್ನಣೆ ಪಡೆದಿದ್ದರೆ ಧನಾದೇಶಿತನು ಖಾತೆ ಹೊಂದಿರು ವವನಿಗೆ ನಷ್ಟಪರಿಹಾರ ಕೊಡಬೇಕಾಗುತ್ತದೆ.

೩. ವಿನಿಮಯಪತ್ರದ ಅಂಗೀಕಾರವು ಧನಾದೇಶಿತನಿಂದ ಅಥವಾ ಮನ್ನಣೆಗೆ ಅಂಗೀಕಾರವಾಗಿರುವವನು ಯಾರಾದರೂ ಹೊಣೆಯನ್ನು ತೀರಿಸಲು ಸ್ವಇಚ್ಛಾ ಪೂರಕವಾಗಿ, ಧನಾದೇಶನ ಅಥವಾ ಹಿಂಬರಹಗಾರನ ಗೌರವಕ್ಕಾಗಿ ಮಾಡಬಹುದು. ವರ್ಗ ೭ ರ ಪ್ರಕಾರ ಅಧಿಕ ಮತ್ತು ಪರ್ಯಾಯವಾದ ಅವಶ್ಯ ಸಂದರ್ಭದ ಧನಾದೇಶಿತನಿರಬೇಕು.

೪. ವಚನಪತ್ರವು ಎರಡು ಪಕ್ಷಗಳನ್ನು ಮಾತ್ರ ಹೊಂದಿರುತ್ತದೆ. ಆದರೆ, ಹಸ್ತಾಂತರಣ ವಹಿಸಿಕೊಡುವಿಕೆಯಿಂದ ಮೂರನೆಯ ಪಕ್ಷವನ್ನು ಸೇರಿಸಿಕೊಳ್ಳ ಬಹುದು. ಆದರೆ ವಿನಿಮಯ ಪತ್ರದಲ್ಲಿ ಯಾವಾಗಲೂ ಮೂರು ಪಕ್ಷಗಳಿರುತ್ತವೆ. ವಚನಪತ್ರವನ್ನು ಅಂಗೀಕಾರಕ್ಕೆ ಸಲ್ಲಿಸಬೇಕಾಗಿಲ್ಲ. ಆದರೆ ವಿನಿಮಯ ಪತ್ರವನ್ನು ಅಂಗೀಕಾರಕ್ಕೆ ಸಲ್ಲಿಸಬೇಕು. ಒಂದು ಪತ್ರವು ಧನಾದೇಶಿತನಿಂದ ನಿರಾಕರಿಸಲ್ಪಟ್ಟರೆ, ಸ್ವೀಕರ್ತನು ನೋಟರಿ ಪಬ್ಲಿಕ್ ಮೂಲಕ ಅದನ್ನು ಟಿಪ್ಪಣಿ ಬರೆಸಬಹುದು. ನೋಟರಿ ಪಬ್ಲಿಕ್‌ಗೆ ಧನಾದೇಶಿತನಿಂದ ಅಂಗೀಕಾರ ಮತ್ತು ಯುಕ್ತ ಕಾಲದಲ್ಲಿ ಸಂದಾಯ ಮಾಡದಿರುವುದನ್ನು ದಾಖಲೆ ಮಾಡಿಕೊಂಡು ಪ್ರತಿಭಟಿಸುವ ಅಧಿಕಾರ ವಿರುತ್ತದೆ. ಒಬ್ಬ ನೋಟರಿ ಪಬ್ಲಿಕನು ಸಾಮಾನ್ಯವಾಗಿ ಹಿರಿಯ ನ್ಯಾಯವಾದಿ ಯಾಗಿದ್ದು, ಅವನನ್ನು ನೋಟರೀಸ್ ಅಧಿನಿಯಮದ ಪ್ರಕಾರ ಭಾರತ ಸರ್ಕಾರವು ನೇಮಿಸಿರುತ್ತದೆ ಮತ್ತು ಅವನಿಗೆ ಪ್ರತಿಜ್ಞೆಯನ್ನು ಮಾಡಿಸುವುದು, ಶಪಥ ಪತ್ರವನ್ನು ಅನುಪ್ರಮಾಣಿಸುವುದು ಅಥವಾ ಮುಖ್ತ್ಯಾರುನಾಮೆ (Power of Attorney) ಮಾಡಿಸುವ ಅಧಿಕಾರವಿದೆ. ಅಧಿನಿಯಮದ ವರ್ಗ ೧೦೦ ರ ಮತ್ತು ೧೦೧ ರ ಪ್ರಕಾರ ಸಂದಾಯ ಮಾಡದಿರುವುದು ಅಥವಾ ಅನಾದರಿಸಿದ್ದನ್ನು ದಾಖಲೆ ಮಾಡುವುದು ಮತ್ತು ಇಂತಹ ದಾಖಲೆಯೇ ಅನಾದರಿಸಿದ್ದಕ್ಕೆ ಮೊದಲು ನೋಟದ ರುಜುವಾತು (ವರ್ಗ ೧೧೯).

೫. ಒಂದು ನಿರ್ದಿಷ್ಟ ಸಮಯದಲ್ಲಿ ಸಂದಾಯ ಮಾಡಬೇಕಾದ ಪರಕ್ರಾಮ್ಯ ಪತ್ರವು ವಾಯಿದೆಯೊಳಗೆ ಬಾಕಿಗಳು ಸಲ್ಲಬೇಕಾಗಿದ್ದು, ವರ್ಗ ೨೨ ರ ಪ್ರಕಾರ ಎರಡು ದಿನ ರಿಯಾಯಿತಿ ನೀಡಲಾಗುವುದು ಮತ್ತು ವಾಯಿದೆ ತೀರುವ ದಿನವು ಸಾರ್ವಜನಿಕ ರಜಾದಿನವಾಗಿದ್ದರೆ ವರ್ಗ ೨೫ ರ ಪ್ರಕಾರ ದಾಖಲೆಯನ್ನು ಮುಂದಿನ ವ್ಯವಹಾರದ ದಿನದಂದು ಬಾಕಿಯಾಗಿರುವ ಹಾಗೆ ಪರ್ಯಾಲೋಚಿಸುತ್ತದೆ. ಒಂದು ಪತ್ರವು ನೋಡಿದ ಕೂಡಲೇ ಸಂದಾಯ ಮಾಡಬೇಕಿದ್ದರೆ ಅದಕ್ಕೆ ಹೆಚ್ಚು ಅವಧಿ ಕೊಡಲಾಗುವುದಿಲ್ಲ.

ವಿನಿಮಯಪತ್ರ ಮತ್ತು ಚೆಕ್ಕು

೧. ಎಲ್ಲಾ ಚೆಕ್ಕುಗಳೂ ವಿನಿಮಯ ಪತ್ರಗಳು, ಆದರೆ ವಿಪರ್ಯಾಯವಲ್ಲ. (Not Vice Versa).

೨. ಪತ್ರವನ್ನು ಅಂಗೀಕಾರಕ್ಕೋಸ್ಕರ ಮತ್ತು ಸಂದಾಯ ಮಾಡಲು ಸಲ್ಲಿಸಬೇಕು. ಮೇಲೆ ಹೇಳಿದ ಹಾಗೆ ಅದಕ್ಕೆ ಹಿಂಬರಹವು ಮತ್ತು ಧನಾದೇಶಿತನ ಹಸ್ತಾಕ್ಷರ ಬೇಕು ಮತ್ತು ಅದೇನಾದರೂ ಅನಾದರಿಸಲ್ಪಟ್ಟರೆ ನೋಟರಿ ಪಬ್ಲಿಕಿನ ಮೂಲಕ ಅದನ್ನು ಟಿಪ್ಪಣಿ ಮತ್ತು ಪ್ರತಿಭಟನೆಯನ್ನು ಗುರುತಿಸಬೇಕು. ಚೆಕ್ಕಿನ ವಿಷಯದಲ್ಲಿ ನಿಗದಿಪಡಿಸಲಾದ ದಿನದಂದು ಅದನ್ನು ಮಂಡಿಸಿದರೆ ಅಷ್ಟೇ ಸಾಕು. ಪತ್ರವನ್ನು ಮಂಡಿಸದೇ ಇದ್ದರೆ ಧನಾದೇಶಕನು ಬಿಡುಗಡೆ ಹೊಂದುವನು ಮತ್ತು ವಿಳಂಬವಾದಲ್ಲಿ ಅದು ಅಂತ್ಯವಾಗುವುದು. ಏಕೆಂದರೆ ವರ್ಗ ೮೩ ರ ಪ್ರಕಾರ ಬಿಲ್ಲುಧಾರಕ ಪತ್ರವನ್ನು ಹೊಂದಿರುವವ (Holder of a Bill) ಧನಾದೇಶಕನಿಗೆ ಸಾರ್ವಜನಿಕ ರಜಾ ದಿನಗಳನ್ನು ಬಿಟ್ಟು ೪೮ ಘಂಟೆಗಳಿಗಿಂತ ಹೆಚ್ಚಾಗಿ ಅದನ್ನು ಅಂಗೀಕಾರ ಮಾಡುವುದಕ್ಕೆ ಒಪ್ಪಿಗೆ ನೀಡಿದರೆ, ಚೆಕ್ಕಿನ ವಿಷಯದಲ್ಲಿ ಮುಂಚಿನ ಪಕ್ಷಗಳು ಬಿಡುಗಡೆ ಹೊಂದುತ್ತವೆ. ಸ್ವೀಕರ್ತನು ಬ್ಯಾಂಕಿನಲ್ಲಿ ಹಣವಿದ್ದಾಗ ಚೆಕ್ಕನ್ನು ಮಂಡಿಸದೆ ಇದ್ದರೆ ಮತ್ತು ಬ್ಯಾಂಕಿನ ಯಾವುದಾದರೂ ತೊಂದರೆಯಿಂದ ಹಣ ಸಂದಾಯ ಮಾಡಲು ಮುಗ್ಗಟ್ಟಾದರೆ ಆಗ ಧನಾದೇಶಕನು ಹೊಣೆಯಿಂದ ಪೂರ್ಣವಾಗಿ ಮುಕ್ತಿ ಹೊಂದುತ್ತಾನೆ. ಅಂತಹ ಚೆಕ್ಕನ್ನು ಹೊಂದಿರುವವನು ಬ್ಯಾಂಕಿನ ವಿರುದ್ಧ ಕ್ರಮ ಕೈಗೊಳ್ಳಬಹುದು. ಸ್ವೀಕರ್ತನು ಬೇಜವಾಬ್ದಾರಿ ಯಾಗಿದ್ದು ಮತ್ತು ಅದನ್ನು ಯುಕ್ತ ಕಾಲದಲ್ಲಿ ಹಣವು ಸಿಗುವಾಗ ಹಣ ಸಂದಾಯ ಮಾಡಲು ಮಂಡಿಸದೆ ಇದ್ದರೆ ಮತ್ತು ಧನಾದೇಶಕನಿಗೆ ಹಾನಿಯುಂಟಾದರೆ ಅವನನ್ನು ಅಷ್ಟರ ಮಟ್ಟಿಗೆ ಮಾತ್ರ ಬಿಡುಗಡೆ ಮಾಡಲಾಗುವುದು. ವರ್ಗ ೮೪ ರ ವಿವರಣೆ (೧) ಯನ್ನು ಗಮನಿಸಬೇಕು.

೩. ವಿನಿಮಯ ಪತ್ರದಲ್ಲಿ ಅವಶ್ಯ ಸಂದರ್ಭದ ಧನಾದೇಶಿಕನು ಇರುತ್ತಾನೆ. ಆದರೆ, ಚೆಕ್ಕಿನಲ್ಲಿ ಪರ್ಯಾಯ ಧನಾದೇಶಿಕನು ಇರುವುದಿಲ್ಲ. ವಿನಿಮಯ ಪತ್ರದಲ್ಲಿ

ಧನಾದೇಶಿಕನು ಅಂಗೀಕರ್ತನಾದಾಗ ಮಾತ್ರ ಹೊಣೆ ಹೊಂದುತ್ತದೆ. ಆದರೆ ಚೆಕ್ಕಿನಲ್ಲಿ ಬ್ಯಾಂಕರನು ಧನಾದೇಶಿಕನ ಹಣವು ಎಷ್ಟು ದಿನ ಅವನಲ್ಲಿ ರುತ್ತದೆಯೋ ಅಲ್ಲಿಯವರೆಗೆ ಮಾತ್ರ ಹೊಣೆ ಹೊಂದಿರುತ್ತಾನೆ. ವಿನಿಮಯ ಪತ್ರಕ್ಕೆ ಸ್ಟಾಂಪ್ ಮಾಡುವ ಅಗತ್ಯವಿದೆ. ಆದರೆ ಚೆಕ್ಕಿಗೆ ಇದು ಅನ್ವಯಿಸುವುದಿಲ್ಲ.

ಸೌಕರ್ಯ ಪತ್ರ
(ಅನುಕೂಲ ಹುಂಡಿ)
(ದರದ ಹುಂಡಿ - Accomodation Bill)

ಒಂದು ಸೌಕರ್ಯದ ಪತ್ರವೆಂದರೆ, ಪಕ್ಷವು ಸಹಾಯ ಮಾಡುವ ದೃಷ್ಟಿಯಿಂದ ಮತ್ತು ಪ್ರತಿಫಲವಿಲ್ಲದೆ ಸ್ವೀಕರಿಸಲ್ಪಟ್ಟ, ಬರೆದ, ಅಂಗೀಕರಿಸಿದ ಅಥವಾ ಹಿಂಬರಹ ಮಾಡಿದ ಪತ್ರವಾಗಿರುತ್ತದೆ. ಧನಾದೇಶಿಕನು ಯಾವುದೇ ಪ್ರತಿಫಲವನ್ನು ಪಡೆದಿರುವುದಿಲ್ಲ. ಆದರೆ ಅವನ ಅಂತಸ್ತು ಅನುಕೂಲ ಮಾಡಿಕೊಟ್ಟ ಪಕ್ಷಕ್ಕೆ ಜಾಮೀನುದಾರನಾಗಿರುತ್ತಾನೆ ಮತ್ತು ಆದ್ದರಿಂದ ವರ್ಗ ೪೩ ರ ವಿನಾಯಿತಿ ೧ ರ ಪ್ರಕಾರ ಇದನ್ನು ಸೌಕರ್ಯಪತ್ರ ಎಂದು ಕರೆಯುತ್ತಾರೆ. ಅನುಕೂಲ ಮಾಡಿಕೊಟ್ಟ ಪಕ್ಷವು ಹೆಸರನ್ನು ಕೊಟ್ಟಿರುವ ಮನುಷ್ಯನ ವಿರುದ್ಧ ದಾವೆಯನ್ನು ಹೂಡಲಾಗುವುದಿಲ್ಲ. ಕಾನೂನು ವಿರುದ್ಧ ಸಾಧನಗಳಿಂದ ಪಡೆದ ಪತ್ರ ಅಥವಾ ಕಾನೂನು ವಿರುದ್ಧ ಪ್ರತಿಫಲ ಸ್ವಾಧೀನದಾರನಿಗೆ ಅಂಕಿತವನ್ನು ಕೊಡುವುದಿಲ್ಲ. ಸೃಷ್ಟನೆ ಮಾಡಿದ ಪತ್ರವು ಪೂರ್ಣವಾಗಿ ಅಸಿಂಧು (Invalid) ಮತ್ತು ಸಮ್ಯಕ ಅನುಕ್ರಮ ಧಾರಕನಿಗೂ ಸಹ ಅಂಕಿತವನ್ನು ಕೊಡಲು ಅಸಮರ್ಥ ಮತ್ತು ಅಂತಹ ಪತ್ರಗಳು ಪೂರ್ಣವಾಗಿ ಮೌಲ್ಯವಿಲ್ಲದ್ದು ಎಂಬುದನ್ನು ಗಮನಿಸಬೇಕು. ಆದಾಗ್ಯೂ ಹಿಂಬರಹವನ್ನು ಸೃಷ್ಟಿಸಿದ್ದರೆ, ಬೇರೆ ಬೇರೆ ಪ್ರತಿಫಲಗಳು ಅನ್ವಯಿಸುತ್ತವೆ. ಒಂದು ಪತ್ರ ಪೂರ್ತಿ ಹಿಂಬರಹ ಮಾಡಿದ್ದಲ್ಲಿ ಆ ಮನುಷ್ಯನ ಹಸ್ತಾಕ್ಷರವು ಅಸಲಿ ಯಾಗಿರಲೇಬೇಕು. ಏಕೆಂದರೆ, ಈ ಹಿಂಬರಹದಿಂದಲೇ ಪತ್ರದ ಅಂಕಿತವನ್ನು ಮಾಡಬಹುದು. ಪತ್ರ ಅಥವಾ ಟಿಪ್ಪಣಿಯು, ಸೃಷ್ಟಿತ ಹಿಂಬರಹದಿಂದ ವರ್ಗಾವಣೆ ಯಾಗಿದ್ದು, ಇದನ್ನು ಕೇಳುವ ಮನುಷ್ಯನು ಮೌಲ್ಯಕ್ಕೆ ಮತ್ತು ಸದ್ಭಾವನೆಯಿಂದ ಸ್ವಾಧೀನಪಡಿಸಿಕೊಂಡಿದ್ದರೂ ಸಹ ಅವನನ್ನು ರಕ್ಷಿಸಲಾಗುವುದಿಲ್ಲ. ವಾಸುದೇವ್ ಮತ್ತು ದಿ ನ್ಯಾಷನಲ್ ಸೇವಿಂಗ್ಸ್ ಬ್ಯಾಂಕ್ ಲಿಮಿಟೆಡ್ ([Vasudev Vs. The National Savings Bank Ltd.,] 54 Vom LR 765). ಒಂದು ವಿಷಯದಲ್ಲಿ ಪತ್ರವು ಖಾಲಿ ಜಾಗ ಬಿಟ್ಟ ಹಿಂಬರಹವಿದ್ದರೆ ಅದನ್ನು ಸರಳವಾಗಿ ಒಪ್ಪಿಸಿ, ವರ್ಗಾವಣೆ ಮಾಡಬಹುದು ಮತ್ತು ಆದ್ದರಿಂದ ಸೃಷ್ಟಿತ ಹಿಂಬರಹವು ಮಹತ್ವವಿಲ್ಲದ್ದಾಗಿರುತ್ತದೆ. ಒಂದು ಪತ್ರವು ಖಾಲಿ ಜಾಗದಲ್ಲಿ ಹಿಂಬರಹ ಮಾಡಿದ್ದರೆ, ಅದರ ಧಾರಕನು ಸೃಷ್ಟಿತ ಹಿಂಬರಹದಿಂದ ಅಂಕಿತವನ್ನು ಪಡೆಯುವುದಿಲ್ಲ ಮತ್ತು ಅವನು

ಸೃಷ್ಟಿತ ಹಿಂಬರಹದ ಮೇಲೆ ಭರವಸೆ ಇಡದೆ ಪತ್ರದ ಯಾವ ಪಕ್ಷದವರ ಮೇಲೆ ಬೇಕಾದರೂ ದಾವೆ ಹೂಡಬಹುದು. ವರ್ಗ ೮೫ ರ ಪ್ರಕಾರ ಒಂದು ಚೆಕ್ಕು ಆದೇಶಕ್ಕೆ ಸಂದಾಯವಾಗಬೇಕಾಗಿದ್ದು, ಹಿಂಬರಹ ಮಾಡಿದೆ ಎಂದು ತೋರಿ ಬಂದಲ್ಲಿ, ಸ್ವೀಕರ್ತನಿಂದ ಅಥವಾ ಅವನ ಪರವಾಗಿ ಬ್ಯಾಂಕ್ ಕಾಲಕ್ರಮದಲ್ಲಿ ಸಂದಾಯ ಮಾಡುವುದರಿಂದ ವಿಮೋಚನೆ ಹೊಂದುತ್ತದೆ. ಈ ವರ್ಗದ ಉದ್ದೇಶವೇನೆಂದರೆ ಬ್ಯಾಂಕರನನ್ನು ನೈಜವಾದ ಅಥವಾ ಅಪ್ಪಟವಾದ ((Genuine ಅಸಲಿ) ಹಿಂಬರಹದ ಅಂದರೆ ಸ್ವೀಕರ್ತನ ತಾತ್ಪರ್ಯವಾಗುವ ರೀತಿಯಲ್ಲಿ ಮಾನ್ಯತೆಯ ಹೊಣೆಯಿಂದ ವಿಮುಕ್ತನನ್ನಾಗಿ ಮಾಡುವುದು. ಧನಾದೇಶಿಕನ ಹಸ್ತಾಕ್ಷರವು ಸೃಷ್ಟಿತವಾಗಿದ್ದರೆ ಈ ವರ್ಗವೂ ಸಹ ಬ್ಯಾಂಕರನಿಗೆ ರಕ್ಷಣೆಯನ್ನು ಕೊಡುವುದಿಲ್ಲ.

ಒಂದು ಚೆಕ್ಕು ರೇಖಿತವಾಗಿರುವಾಗ (Crossed Cheque) ಅದನ್ನು ಕೌಂಟರಿನಲ್ಲಿ ಹಣ ಪಡೆಯುವುದಕ್ಕೆ (ನಗದೀಕರಿಸುವುದಕ್ಕೆ) ಆಗುವುದಿಲ್ಲ. ಅದನ್ನು ಬ್ಯಾಂಕರ್‌ಗೆ ಮಾತ್ರ ಸಂದಾಯ ಮಾಡಬೇಕು ಮತ್ತು ಒಂದು ಪತ್ರವು ರೇಖಿತವಾದ ಮಾತ್ರಕ್ಕೆ ಅದರ ವರ್ಗಾವಣೆ ತಪ್ಪುವುದಿಲ್ಲ. ವರ್ಗ ೧೩೦ ರ ಪ್ರಕಾರ, ಒಬ್ಬ ಮನುಷ್ಯನು "ವರ್ಗಾವಣೀಯವಲ್ಲದ" (Not negotiable) ಎಂಬ ಪದಗಳು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಇರುವ ರೇಖಿತ ಚೆಕ್ಕನ್ನು ಹೊಂದಿದ್ದರೆ, ಅದನ್ನು ಯಾವ ಮನುಷ್ಯನಿಂದ ಚೆಕ್ಕನ್ನು ತೆಗೆದುಕೊಂಡನೋ ಅವನಿಗಿಂತ ಉತ್ತಮ ಸ್ವಾಮ್ಯವನ್ನು ಕೊಡುವ ಸಾಮರ್ಥ್ಯ ಹೊಂದಿರುವುದಿಲ್ಲ ಎಂಬುದನ್ನು ತಿಳಿದು ಕೊಂಡಿರಬೇಕು. ವರ್ಗ ೮೫ ರ ಪ್ರಕಾರ, ಬ್ಯಾಂಕರನು ಕಾಲಕ್ರಮದಲ್ಲಿ ಸಂದಾಯ (Payment in due Course) ಮಾಡಿದರೆ ಅವನಿಗೆ ಸಂರಕ್ಷಣೆಯನ್ನು ಕೊಡಲಾಗುವುದು ಎಂದು ಆಗಲೇ ಗಮನಿಸಿದೆ. ಆದರೆ ೧೨೮ ಮತ್ತು ೧೨೯ ನೇ ವರ್ಗವು ಹೆಚ್ಚಿನ (ಅಳೆಯ) ಪರಿಮಾಣದ ಸಂರಕ್ಷಣೆಯನ್ನು ಕೊಡುತ್ತದೆ. ವರ್ಗ ೧೨೮ ರೇಖಿತ ಚೆಕ್ಕಿಗೆ ಸಂದಾಯ ಮಾಡಿದ ಬ್ಯಾಂಕರ್‌ನನ್ನು ರಕ್ಷಿಸುತ್ತದೆ. ವರ್ಗ ೧೩೧ ಗಿರಾಕಿಯ ಸ್ವಾಮ್ಯವು ದೋಷ ಪೂರ್ಣವಾಗಿ ತಿರುಗಿದರೂ ಸಹ ಪರಿವರ್ತನೆಯಲ್ಲಿ ಅವನು ಹೊಣೆಗಾರನಾಗುವುದಿಲ್ಲ.

ಸಂಕೀರ್ಣ ವಿಷಯಗಳು

(Miscellaneous Matters)

ಈಗಾಗಲೇ ತಿಳಿದಿರುವಂತೆ ವರ್ಗಾವಣೆಯ ಲಿಖಿತವು ಹಲವು ವಿಶೇಷ ಹಕ್ಕುಗಳನ್ನು ತನ್ನೊಡನೆ ನಿರ್ವಹಿಸುತ್ತದೆ. ವರ್ಗ ೨೦ ರ ಪ್ರಕಾರ, ಒಂದು ಸ್ಟಾಂಪ್ ಮಾಡಿದ ಕಾಗದದ ಮೇಲೆ ಸಹಿ ಹಾಕಿ ಅದನ್ನು ಇನ್ನೊಬ್ಬನಿಗೆ ಕೊಟ್ಟರೆ ಮತ್ತು ಆ ಕಾಗದವು ಪೂರ್ಣವಾಗಿ ಅಥವಾ ಭಾಗಶಃ ಖಾಲಿಯಾಗಿದ್ದರೆ, ಅದರ ಮೂಲಕ ಕಾಗದ ಹೊಂದಿರುವವನಿಗೆ ಅದನ್ನು ವರ್ಗಾವಣೆಯ ಪತ್ರವನ್ನು ಮಾಡಲು ಅಥವಾ ಪೂರ್ತಿ

ಮಾಡುವ ಅಧಿಕಾರವನ್ನು ಕೊಡಲಾಗುತ್ತದೆ. ಇದನ್ನು ಅಪೂರ್ಣ ಲಿಖಿತ (Inchoate Instrument) ಪತ್ರ ಎಂದು ಕರೆಯಲಾಗುತ್ತದೆ. ಅದು ಪೂರ್ತಿ ಲಿಖಿತ ಪತ್ರದಷ್ಟೇ ಸಮರ್ಪಕವಾಗಿದೆ. ಏಕೆಂದರೆ, ಧನಾದೇಶಿಕನು ಅದನ್ನು ಪೂರ್ತಿ ಮಾಡಲು ಅವಕಾಶ ಕೊಟ್ಟಿರುತ್ತದೆ. ಆದಾಗ್ಯೂ ಆ ಪತ್ರವನ್ನು ಪೂರ್ತಿ ಬರೆದ ಮೇಲೆ ಯಾವುದೇ ಮುಖ್ಯ ಬದಲಾವಣೆಯು ಅದನ್ನು ಶೂನ್ಯ ಮಾಡಿಬಿಡುತ್ತದೆ. ಮುಖ್ಯ ವ್ಯತ್ಯಾಸಗಳು ಸಾಮಾನ್ಯವಾಗಿ ಕಾಲಪರಿಮಿತಿಯ ಅವಧಿಯೊಳಗೆ ಮಾಡುವುದಕ್ಕೋಸ್ಕರ (Period of Limitation) ತಾರೀಖಿನಲ್ಲಿ ಬದಲಾವಣೆಯಾಗಿರುತ್ತದೆ. ಮುಖ್ಯ ವ್ಯತ್ಯಾಸದ ಇನ್ನೂ ಹಲವು ಉದಾಹರಣೆಗಳು, ಸಂದಾಯವಾಗಬೇಕಾದ ಮೊತ್ತ, ಸಂದಾಯ ಮಾಡಬೇಕಾದ ಸ್ಥಳ, ಬಡ್ಡಿಯ ದರ, ಹೊಸ ಪಕ್ಷಗಳನ್ನು ಸೇರಿಸಿಕೊಳ್ಳುವುದು ಇವೇ ಮುಂತಾದವು. ಈಗಾಗಲೇ ಗಮನಿಸಿರುವಂತೆ ವರ್ಗ ೨೦ ರ ಪ್ರಕಾರ, ಅಪೂರ್ಣ ಪತ್ರದ ಖಾಲಿ ಜಾಗವನ್ನು ಭರ್ತಿ ಮಾಡುವುದು ಮತ್ತು ಚೆಕ್ಕನ್ನು ಕ್ರಾಸ್ ಮಾಡುವುದು (ವ. ೧೨೫) ಮತ್ತು ಖಾಲಿ ಹಿಂಬರಹವನ್ನು ಭರ್ತಿ ಹಿಂಬರಹಕ್ಕೆ ಪರಿವರ್ತಿಸುವುದು (ವ. ೪೯). ಇವು ದಾಖಲೆಯನ್ನು ಶೂನ್ಯ ಮಾಡುವ ಮುಖ್ಯ ವ್ಯತ್ಯಾಸ ಮಾಡುವಷ್ಟು ಪರಿಮಾಣವಾಗುವುದಿಲ್ಲ.

ವಿನಿಮಯಪತ್ರವು ತಕ್ಷಣವೇ ಸಂದಾಯವಾಗಬೇಕಾಗಿದ್ದು ಅದನ್ನು ಧನಾದೇಶಿಕನಿಗೆ ಅಂಗೀಕಾರಕ್ಕಾಗಿ ಸಲ್ಲಿಸಬೇಕು. ಅದನ್ನು ಮಾಡದಿದ್ದರೆ ಧನಾದೇಶಿಕ ಮತ್ತು ಎಲ್ಲಾ ಹಿಂಬರಹಕಾರರೂ ಹೊಣೆಯಿಂದ ವಿಮೋಚಿತರಾಗುತ್ತಾರೆ. ಪತ್ರದ ಧಾರಕನು ನಿರುಪಾಧಿಕ (ಪಕ್ಕಾ Absolute) ಮತ್ತು ಷರತ್ತಿಲ್ಲದ ಅಂಗೀಕಾರಕ್ಕೆ ಹಕ್ಕುಳ್ಳವನಾಗಿರುತ್ತಾನೆ. ಅವನು ಷರತ್ತಿಗೊಳಪಟ್ಟ ಅಂಗೀಕಾರವನ್ನು ಆಯ್ಕೆ ಮಾಡಿದರೆ, ಅವನು ಗಂಡಾಂತರವನ್ನು ತಾನೇ ತಂದು ಕೊಳ್ಳುತ್ತಾನೆ. ಎಲ್ಲಾ ಪಕ್ಷಗಳನ್ನು ರದ್ದುಗೊಳಿಸುತ್ತಾನೆ. ಈ ಕಾನೂನನ್ನು ೧೯೮೮ ರಲ್ಲಿ ಮಾರ್ಪಡಿಸಿ, ಒಂದು ವಿಶೇಷ ಅಂಶವನ್ನು ಸೇರಿಸಲಾಗಿದೆ. ಸಾಲದ ಅಥವಾ ಬಾಕಿ ತೀರುವಳಿಗೆ ಕೊಟ್ಟ ಚೆಕ್ ಹಣವಿಲ್ಲವೆಂದು ಬ್ಯಾಂಕಿನವರು ಹಿಂತಿರುಗಿಸಿದರೆ ಮತ್ತು ಇದಾದ ಮೇಲೆ ಸೂಚನೆ ಕೊಟ್ಟಾಗ್ಯೂ ಹಣ ಸಂದಾಯವಾಗದಿದ್ದರೆ ಅದು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಲ್ಪಡುತ್ತದೆ ಮತ್ತು ಅದು ದಂಡನಾರ್ಹ. ಇಲ್ಲಿ ದುರುದ್ದೇಶದ ರುಜುವಾತು ಅನಗತ್ಯ. ಈ ಮಾರ್ಪಾಡಿಗೆ ಮುಂಚೆ ಒಂದು ಚೆಕ್ ಹಣವಿಲ್ಲದೇ ತಿರಸ್ಕೃತವಾದಲ್ಲಿ ಆ ಬಗ್ಗೆ ಚೆಕ್ಕನ್ನು ಬೇಜವಾಬ್ದಾರಿಯಿಂದ ಮತ್ತು ದುರುದ್ದೇಶದಿಂದ ಕೊಟ್ಟಿದ್ದಲ್ಲೂ ಸಹ ಅದನ್ನು ಒಂದು ಅಪರಾಧ ಎಂದು ರುಜುವಾತು ಮಾಡುವುದಕ್ಕೆ ಬಹಳ ತೊಂದರೆ ಇತ್ತು. ಇದರಿಂದಾಗಿ ಚೆಕ್ಕುಗಳ ದುರುಪಯೋಗ ಬಹಳವಾಗಿ ಈ ಹಾವಳಿಯನ್ನು ತಪ್ಪಿಸಲು ಸರ್ಕಾರವೇ ಮುಂದಾಗಿ ಅಂತಹವರನ್ನು ನ್ಯಾಯಾಲಯಗಳು ಶಿಕ್ಷಿಸಲು

ಅವಕಾಶ ಕಲ್ಪಿಸಲಾಗಿದೆ. ಈ ಶಿಕ್ಷೆ ಒಂದು ವರ್ಷದವರೆಗೂ ಅಥವಾ ತಿರಸ್ಕರಿಸಲ್ಪಟ್ಟ ಚೆಕ್ಕಿನ ಹಣದ ಎರಡರಷ್ಟರವರೆಗೂ ಜುಲ್ಮಾನೆ ಹಾಕಲು ಅವಕಾಶ ಕೊಡಲಾಗಿದೆ. ಆದಾಗ್ಯೂ ಒಂದು ತಿರಸ್ಕೃತವಾದ ಚೆಕ್ಕನ್ನು ನಿಗದಿಪಡಿಸಿದ ವೇಳೆಯೊಳಗೆ ಅಥವಾ ಆರು ತಿಂಗಳ ಒಳಗಾಗಿ ಬ್ಯಾಂಕಿಗೆ ಹಣ ಪಾವತಿಗೆ (Presentment) ಹಾಜರುಪಡಿಸತಕ್ಕದ್ದು ಮತ್ತು ತಿರಸ್ಕೃತವಾದ ನಂತರ ಹದಿನೈದು ದಿವಸಗಳೊಳಗಾಗಿ ಲಿಖಿತ-ತಿಳುವಳಿಕೆ ಕೊಡತಕ್ಕದ್ದು ಮತ್ತು ಆ ತಿಳುವಳಿಕೆ ಕೊಟ್ಟಾಗ್ಯೂ ಹದಿನೈದು ದಿವಸಗಳೊಳಗೆ ಪೂರಾ ಹಣವನ್ನು ಪಾವತಿ ಮಾಡದಿದ್ದಲ್ಲಿ ಅಪರಾಧ ಸಂಪೂರ್ಣವಾಗುತ್ತದೆ.

****

ಏಕಸ್ವಾಮ್ಯಗಳು ಮತ್ತು ಪರಿಬಂಧಕ ವ್ಯಾಪಾರಪದ್ಧತಿ ಕಾಯಿದೆ

(Monopolies & Restrictive Trade Practices Act 1969)

ಏಕಸ್ವಾಮ್ಯಗಳು ಮತ್ತು ಪರಿಬಂಧಕ ವ್ಯಾಪಾರಪದ್ಧತಿ ಕಾಯಿದೆ (ಮುಂದೆ "ಕಾಯಿದೆ" ಎಂದು ಹೇಳಲಾಗಿದೆ) ಸ್ವಾತಂತ್ರ್ಯ ನಂತರದ ಆರ್ಥಿಕ ಶಾಸನ ಯುಗದಲ್ಲಿ ಬಹಳ ಪ್ರಾಮುಖ್ಯತೆ ಹೊಂದಿದೆ. ನಮ್ಮ ಸಂವಿಧಾನದ ಅನುಚ್ಛೇದ 39 (ಬಿ) ದಲ್ಲಿ ಈ ರೀತಿ ಹೇಳಿದೆ, "ಜನಸಮುದಾಯ ಭೌತಿಕ ಸಾಧನಸಂಪತ್ತುಗಳ ಒಡೆತನ ಮತ್ತು ನಿಯಂತ್ರಣವು ಸಾಮೂಹಿಕ ಹಿತಸಾಧನೆಗೆ ಅತ್ಯುತ್ತಮ ರೀತಿಯಲ್ಲಿ ಸಹಾಯಕವಾಗುವಂತೆ ಹಂಚಿಕೆಯಾಗುವುದು" ಮತ್ತು ಅನುಚ್ಛೇದ 39 (ಸಿ)ಯು ಈ ರೀತಿ ನಿರ್ದೇಶನವನ್ನು ದೃಢೀಕರಿಸುತ್ತದೆ, "ಆರ್ಥಿಕ ವ್ಯವಸ್ಥೆಯ ಪ್ರವರ್ತನೆಯು ಸಾಮಾನ್ಯ ಹಿತಸಾಧನೆಗೆ ಬಾಧಕವಾಗುವ ಸಂಪತ್ತು, ಉತ್ಪಾದನಾ ಸಾಧನಗಳು ಕೇಂದ್ರೀಕೃತವಾಗದಂತೆ ಇರುವುದು" ಸಂವಿಧಾನದಲ್ಲಿ ಇರುವ ನಿರ್ದೇಶಕ ತತ್ವಗಳ (Directive Principles) ಒಂದು ಹೇಳಿಕೆ ಏನೆಂದರೆ ಕೈಗಾರಿಕಾ ಬೆಳವಣಿಗೆ ಇರಲೇಬೇಕು. ಆದರೆ ಈ ಬೆಳವಣಿಗೆಯಿಂದಾಗಿ ಆರ್ಥಿಕ ಅಧಿಕಾರದ ಮತ್ತು ಸಂಪತ್ತಿನ ಏಕಾಗ್ರತೆ ಆಗಬಾರದು. ಈ ನಿರ್ದೇಶಕ ತತ್ವಗಳ ಆಧಾರದ ಮೇಲೆ ಈ ಕಾಯಿದೆ (M R T P) ಯನ್ನು ಜಾರಿಗೆ ತರಲಾಯಿತು. ಈ ಕಾಯಿದೆಯ ಮುಖ್ಯವಾದ ವಿಷಯಗಳು ಈ ಕೆಳಕಂಡಂತೆ ಇವೆ :

ಅ) ಆರ್ಥಿಕ ಅಧಿಕಾರದ ಏಕಾಗ್ರತೆಯ ತಡೆಗಟ್ಟುವಿಕೆ.

ಆ) ಏಕಸ್ವಾಮ್ಯವನ್ನು ನಿಯಂತ್ರಿಸುವುದು.

ಇ) ಏಕಸ್ವಾಮ್ಯ ವ್ಯಾಪಾರಪದ್ಧತಿಗಳನ್ನು ನಿಷೇಧಿಸುವುದು.

ಈ) ಪರಿಬಂಧಕ ವ್ಯಾಪಾರ ಕ್ರಮಗಳನ್ನು ನಿಷೇಧಿಸುವುದು.

ಉ) ಅನುಚಿತ (Unfair) ವ್ಯಾಪಾರ ಪದ್ಧತಿಯನ್ನು ನಿಷೇಧಿಸುವುದು.

ಈ ಕಾಯಿದೆಯು ಜಮ್ಮು ಮತ್ತು ಕಾಶ್ಮೀರ ಬಿಟ್ಟು ಭಾರತದ ಬೇರೆ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ.

ಈ ಕಾಯಿದೆಯ ಉಪಬಂಧಗಳು ಈ ಕೆಳಕಂಡ ವ್ಯವಹಾರಿಕ ಅಸ್ತಿತ್ವಗಳನ್ನು ಬಿಟ್ಟು ಭಾರತದ ಬೇರೆಲ್ಲಾ ಅಸ್ತಿತ್ವಗಳಿಗೂ ಅನ್ವಯಿಸುತ್ತದೆ.

ಅ) ಸರ್ಕಾರೀ ಕಂಪನಿಗಳು,

ಆ) ವಿಶೇಷ ಕಾಯಿದೆಗಳ ಪ್ರಕಾರ ಸೃಷ್ಟಿಸಲ್ಪಟ್ಟ ಕಂಪನಿಗಳು,

ಇ) ಕಾರ್ಮಿಕ ಸಂಘಗಳು,

ಈ) ಸಹಕಾರೀ ಸಂಘಗಳು,

ಉ) ಆರ್ಥಿಕ ಸಂಸ್ಥೆಗಳು.

ಈ ಮೇಲ್ಕಂಡ ವಿವರಗಳಿಂದ ಈ ಕಾಯಿದೆಯ ಸಂಬಂಧಗಳು ಸರಕಾರಿ ವಲಯದ ಉದ್ಯಮಗಳಿಗೆ ಅನ್ವಯಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ವ್ಯಾಖ್ಯೆಗಳು : ಈ ಕಾಯಿದೆಯ ವರ್ಗಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಕೆಳಕಂಡ ವ್ಯಾಖ್ಯೆಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು.

೧. **ಪ್ರಧಾನ ಉದ್ಯಮ** : ಈ ಕಾಯಿದೆಯ ಉಪಬಂಧಗಳು ಪ್ರಧಾನ ಉದ್ಯಮಗಳಿಗೆ ಅನ್ವಯಿಸುತ್ತವೆ. ಉದ್ಯಮಗಳು ಕೈಗಾರಿಕಾ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯಿದೆಯನ್ನು ಒಳಗೊಂಡಿರಬಹುದು. ಅಂತಹ ಉದ್ಯಮಗಳು ಸರಕುಗಳ ತಯಾರಿಕೆಗೆ ಲೈಸನ್ಸ್‌ನ್ನು ಪಡೆದಿರಬೇಕು. ಈ ಲೈಸನ್ಸು ಪಡೆದಿರುವ ತಯಾರಿಕೆಯ ದೇಶದ ಸ್ಥಾಪಿತ ಸಾಮರ್ಥ್ಯದ ನಾಲ್ಕನೇ ಒಂದು ಭಾಗ ಅಥವಾ ಹೆಚ್ಚು ಆಗಿದ್ದಲ್ಲಿ ಈ ಉದ್ಯಮ ಪ್ರಧಾನಉದ್ಯಮ ಎನ್ನಿಸಿಕೊಳ್ಳುವುದು ಅಥವಾ ಇಂತಹ ಉದ್ಯಮ ದೇಶದಲ್ಲಿ ತಯಾರಾಗುವ, ಒದಗಿಸಲ್ಪಡುವ ಇಲ್ಲವೆ ಹಂಚಿಸಲ್ಪಡುವ ಸಾಮಾನುಗಳ ನಾಲ್ಕನೇ ಒಂದು ಭಾಗ ನಿಯಂತ್ರಿಸಲು ಆದು ಪ್ರಧಾನ ಉದ್ಯಮ ಆಗುವುದು.

ಕೆಲವು ಉದ್ಯಮಗಳು ಕೈಗಾರಿಕಾ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯಿದೆಯನ್ನು ಒಳಪಟ್ಟಿರುವುದಿಲ್ಲ. ಅಂತಹಾ ಉದ್ಯಮ ದೇಶದಲ್ಲಿ ತಯಾರಾಗುವ, ಒದಗಿಸುವ ಮತ್ತು ಹಂಚಲ್ಪಡುವ ಸರಕುಗಳ ನಾಲ್ಕನೇ ಒಂದು ಭಾಗವನ್ನು ನಿಯಂತ್ರಿಸಲು ಪ್ರಧಾನಉದ್ಯಮ ಆಗುವುದು. ಅದೇ ಪ್ರಕಾರ, ದೇಶದಲ್ಲಿ ಒದಗಿಸಲ್ಪಡುವ ಸೇವೆಗಳಲ್ಲಿ ನಾಲ್ಕನೇ ಒಂದು ಭಾಗ ಒದಗಿಸಿದರೆ ಅಥವಾ ನಿಯಂತ್ರಿಸಿದರೆ ಅಂತಹ ಉದ್ಯಮವು ಪ್ರಧಾನಉದ್ಯಮ ಅನ್ನಿಸಿಕೊಳ್ಳುವುದು.

ಈ ನಾಲ್ಕನೇ ಒಂದು ಭಾಗ ನಿಯಂತ್ರಣವನ್ನು ಲೆಕ್ಕ ಹಾಕಲು ಪ್ರಧಾನ ಉದ್ಯಮ ಮತ್ತು ಪರಸ್ಪರ ಸಂಬಂಧಿಸಿದ ಉದ್ಯಮಗಳನ್ನು ಸೇರಿಸಲಾಗುವುದು.

ವರ್ಗ 2 (ಜಿ) ಪರಸ್ಪರ ಸಂಬಂಧಿಸಿದ ಉದ್ಯಮಗಳ ವ್ಯಾಖ್ಯೆಯನ್ನು ಸೂಚಿಸುತ್ತದೆ. ಉದ್ಯಮಗಳು ಒಂದರೊಡನೆ ಇನ್ನೊಂದು ಯಾವಾಗ ಪರಸ್ಪರ ಸಂಬಂಧಿತ ವಾಗುವುದೆಂದರೆ :

(ಅ) ಒಂದು ಉದ್ಯಮ ಇನ್ನೊಂದು ಉದ್ಯಮದ ಮೇಲೆ ತನ್ನ ಒಡೆತನವನ್ನು ಸ್ಥಾಪಿಸಿದರೆ ಅಥವಾ ನಿಯಂತ್ರಿಸಿದರೆ,

(ಆ) ಉದ್ಯಮಗಳನ್ನು ಫರ್ಮುಗಳು ನಡೆಸುತ್ತಿದ್ದಲ್ಲಿ ಈ ಫರ್ಮುಗಳಲ್ಲಿ ಒಂದು ಅಥವಾ ಹೆಚ್ಚು ಸಾಮಾನ್ಯ ಪಾರ್ಟನರ್‌ಗಳು ಇದ್ದ ಪಕ್ಷದಲ್ಲಿ,

(ಇ) ಈ ಉದ್ಯಮಗಳನ್ನು ಕಂಪನಿಗಳು ನಡೆಸುತ್ತಿದ್ದು ಒಂದು ಕಂಪನಿಯು ಇನ್ನೊಂದು ಕಂಪನಿಯ ವ್ಯವಸ್ಥಾಪಿತ ಕಂಪನಿಯಾಗಿದ್ದರೆ ಅಥವಾ ಒಂದು ಕಂಪನಿಯು ಇನ್ನೊಂದು ಕಂಪನಿಯನ್ನು ನಿಯಂತ್ರಿಸಿದ ಪಕ್ಷದಲ್ಲಿ,

ಈ ತರಹದ ನಿಯಂತ್ರಣವು ಯಾವುದೇ ಮಾದರಿಯಲ್ಲಾದರೂ ಆಗಿರಬಹುದು. ಅದು ವ್ಯವಸ್ಥಾಪನೆ, ಕಾರ್ಯನಿರ್ವಹಣೆ, ಷೇರು ಹೊಂದುವುದರ ಅಥವಾ ನಿರ್ದೇಶಕರ ಮೂಲಕ ಆಗಿರಬಹುದು.

ಒಂದು ಕಂಪನಿಯ ನಾಲ್ಕನೇ ಒಂದು ಭಾಗದ ಷೇರು ಹೊಂದಿರುವವರು ಮತ್ತೊಂದು ಕಂಪನಿಯ ನಾಲ್ಕನೇ ಒಂದು ಭಾಗ ಷೇರುಗಳನ್ನು ಕೊಂಡಿದ್ದರೆ ಅಥವಾ ಎರಡು ಕಂಪನಿಯಲ್ಲೂ ಒಬ್ಬರೇ ವ್ಯವಸ್ಥಾಪಕ ನಿರ್ದೇಶಕರು ಇಲ್ಲವೇ ವ್ಯವಸ್ಥಾಪಕರು ಆಗಿದ್ದರೂ ಸಹ,

(ಈ) ಇದೇ ಮಾದರಿ ಎರಡು ಉದ್ಯಮಗಳು ಇನ್ನು ಯಾವ ತರಹ ಹೊಂದಾಣಿಕೆ ಇದ್ದರೂ (ಸಹ ವ್ಯವಸ್ಥಾಪನೆ, ಸಹ ಒಡೆತನ, ಸಹ ನಿಯಂತ್ರಣ ಇತ್ಯಾದಿ) ಅವು ಪರಸ್ಪರ ಸಂಬಂಧಿಸಿದ ಉದ್ಯಮಗಳು ಆಗುತ್ತವೆ.

ಈ ತರಹ ಕಂಪನಿಗಳೂ, ವ್ಯಕ್ತಿಗಳೂ, ಹಿಂದೂ ಅವಿಭಾಜ್ಯ ಕುಟುಂಬಗಳು, ಜೊತೆಗೂಡಿದ ವ್ಯಕ್ತಿಗಳು, ನ್ಯಾಸಗಳು ಮತ್ತು ಧರ್ಮದರ್ಶಿಗಳು ಪ್ರಧಾನ ಉದ್ಯಮಗಳು ಆಗಬಹುದು.

ಏಕಸ್ವಾಮ್ಯದ ವ್ಯಾಪಾರ ಪದ್ಧತಿ (Monopolistic Trade Practice):

ಇವು ಯಾವ ತರಹ ವ್ಯಾಪಾರ ಪದ್ಧತಿ ಎಂದರೆ ದೇಶದ ಆರ್ಥಿಕ ಸ್ಥಿತಿಯನ್ನು ಕೆಡಿಸಬಲ್ಲದು. ಈ ತರಹ ವ್ಯಾಪಾರ ಪದ್ಧತಿಯ ಉದಾಹರಣೆಗಳು ಈ ರೀತಿ ಇವೆ:

೧. ದೇಶದಲ್ಲಿ ಉಪಯೋಗಿಸುವ ಸರಕುಗಳು ಮತ್ತು ಸೇವೆಗಳ ಬೆಲೆಯನ್ನು ಅನುಚಿತವಾಗಿ ಇಲ್ಲವೆ ಕಾರಣವಿಲ್ಲದ ಮಟ್ಟದಲ್ಲಿ ಪರಿಮಿತಿಗೊಳಿಸುವುದು ಅಥವಾ ಸರಕುಗಳ ಉತ್ಪಾದನೆ ಸರಬರಾಜನ್ನು ಮಿತಗೊಳಿಸಿ ಅಥವಾ ಕಡಿಮೆ ಮಾಡಿ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ನಿಯಂತ್ರಿಸುವುದು.

೨. ಸಾಮಾನುಗಳು ಮತ್ತು ಸೇವೆಗಳ ಉತ್ಪಾದನೆ ಮತ್ತು ಸರಬರಾಜಲ್ಲಿ ಸ್ಪರ್ಧೆಯನ್ನು ಕಡಿಮೆ ಮಾಡುವುದು ಅಥವಾ ತಡೆಗಟ್ಟುವುದು.

೩. ದೇಶದ ತಾಂತ್ರಿಕ ಅಭಿವೃದ್ಧಿಯನ್ನು ತಡೆಗಟ್ಟುವುದು ಇಲ್ಲವೇ ಸಾಮಾನುಗಳ ಗುಣಮಟ್ಟವನ್ನು ಕಡಿಮೆ ಮಾಡುವುದು.

೪. ಸಾಮಾನು ಉತ್ಪಾದನಾ ಖರ್ಚನ್ನು ಅನುಚಿತವಾಗಿ ಜಾಸ್ತಿ ಮಾಡುವುದು.

೫. ಇದೇ ತರಹ ಸಾಮಾನುಗಳು ಮತ್ತು ಸೇವೆಗಳ ಬೆಲೆಗಳನ್ನು ಅನುಚಿತ ವಾಗಿ ಜಾಸ್ತಿ ಮಾಡುವುದು.

೬. ಮಾರಾಟದಲ್ಲಿ ಲಾಭವನ್ನು ಅನುಚಿತವಾಗಿ ಜಾಸ್ತಿ ಮಾಡಿ ಗಿರಾಕಿ ಗಳನ್ನು ಮೋಸ ಮಾಡುವುದು.

೭. ಅನುಚಿತ ಅಥವಾ ವಂಚನೆಯ ಪದ್ಧತಿಯನ್ನು ಅವಲಂಭಿಸಿ ಗಿರಾಕಿ ಗಳನ್ನು ಮೋಸಪಡಿಸುವುದು.

ಈ ತರಹದ ಏಕಸ್ವಾಮ್ಯದ ವ್ಯಾಪಾರ ಪದ್ಧತಿಯನ್ನು ಈ ಕಾಯಿದೆಯ ಮೂಲಕ ತಡೆಗಟ್ಟಲು ಪ್ರಯತ್ನಿಸಲಾಗಿದೆ.

ಪರಿಬಂಧಕ ವ್ಯಾಪಾರ ಕ್ರಮ :

ಈ ತರಹ ವ್ಯಾಪಾರ ಕ್ರಮವನ್ನು ಈ ಕಾಯಿದೆಯು ನಿಯಂತ್ರಣಪಡಿಸಿದೆ. ಪರಿಬಂಧಕ ವ್ಯಾಪಾರ ಕ್ರಮದಿಂದ ಈ ಕೆಳಕಂಡ ಆರ್ಥಿಕ ಹಾನಿಯು ಜರುಗಬಹುದು :

೧. ಉತ್ಪಾದನೆ ಹಾಳಾಗಬಹುದು.

೨. ಗಿರಾಕಿಗಳ ಮೇಲೆ ಅನುಚಿತವಾದ ಖರ್ಚು, ವೆಚ್ಚ ಹೊರಿಸ ಲಾಗುವುದು.

ಅನುಚಿತ ಅಥವಾ ವಂಚನೆಯ ವ್ಯಾಪಾರ ಪದ್ಧತಿಗಳು :

ಈ ತರಹ ಅನುಚಿತ ಅಥವಾ ವಂಚನೆಯ ವ್ಯಾಪಾರ ಪದ್ಧತಿಗಳನ್ನು ನಮ್ಮ ದೇಶದಲ್ಲಿ ಬೇಕಾದಷ್ಟು ಕಡೆ ನೋಡಬಹುದು. ಆದ್ದರಿಂದ ೧೯೮೪ ನೆಯ ಇಸವಿಯಲ್ಲಿ ಈ ಕಾಯಿದೆಯನ್ನು ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿಯ ವಿವರಣೆಯನ್ನು ಮುಂದೆ ವಿವರಿಸಲಾಗಿದೆ :

ಈ ಕೆಳಗೆ ಪ್ರಧಾನ ಉದ್ಯಮಗಳಿಗೆ ಅನ್ವಯಿಸುವಂತಹ ಉಪಬಂಧಗಳ ಸಾರಾಂಶವನ್ನು ಕೊಟ್ಟಿರುತ್ತದೆ.

ಅ) ಪ್ರಧಾನಉದ್ಯಮ ಹೊಸ ಉದ್ಯಮವನ್ನು ಆರಂಭಿಸಲು ಅಥವಾ ಇರುವ ಉದ್ಯಮವನ್ನು ವಿಸ್ತರಿಸಲು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಲೇಬೇಕು. ಆದರೆ ಈ ಪ್ರಧಾನ ಉದ್ಯಮ ಹೊಸ ಉದ್ಯಮವನ್ನು ಸಾಮಾನುಗಳನ್ನು ರಫ್ತು ಮಾಡಲು ಅಥವಾ ಮುಕ್ತವ್ಯಾಪಾರ ವಲಯ (Free Trade Zone)ದಲ್ಲಿ ಉದ್ಯಮವನ್ನು ಸ್ಥಾಪನೆ ಮಾಡಲು ಕೇಂದ್ರ ಸರ್ಕಾರವು ವಿನಾಯಿತಿ ಕೊಡಬಹುದು. ಇದೇ ತರಹ ಕೇಂದ್ರ ಸರ್ಕಾರವು ಇನ್ನೂ ಯಾವುದೇ ಕಾರಣಕ್ಕಾಗಿಯೂ ದೇಶದ ಹಿತಕ್ಕಾಗಿ ಪ್ರಧಾನಉದ್ಯಮವನ್ನು ವಿಸ್ತರಿಸಲು ಅನುಮತಿ ನೀಡಬಹುದು.

ಬ) ಯಾವುದೇ ಪ್ರಧಾನ ಉದ್ಯಮವು ವಿಲೀನ ಯೋಜನೆಯಲ್ಲಿ ಪಾಲ್ಗೊಂಡರೆ, ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಲೇಬೇಕು.

ಕ) ಎಲ್ಲಾ ಪ್ರಧಾನ ಉದ್ಯಮಗಳು ಕೇಂದ್ರ ಸರ್ಕಾರದೊಡನೆ ದಾಖಲು ಆಗಬೇಕು.

ಡ) ಏಕಸ್ವಾಮ್ಯದ ಮತ್ತು ಪರಿಬಂಧಕ ವ್ಯಾಪಾರ ಕ್ರಮ ಪದ್ಧತಿ ಕಾಯಿದೆಯ (MRTP) ಆಯೋಗದ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ಸಾರ್ವಜನಿಕ ಹಿತಕ್ಕಾಗಿ ಪ್ರಧಾನಉದ್ಯಮವನ್ನು ವಿಭಾಗ ಮಾಡಲು ಆದೇಶ ನೀಡಬಹುದು. ಇದೇ ತರಹ ಪ್ರಧಾನ ಉದ್ಯಮದ ವಿಭಜನೆ ಮತ್ತು ಪರಸ್ಪರ ಸಂಬಂಧ ಮುರಿಯಲು ಆದೇಶ ನೀಡಬಹುದು.

ಪ) ೧೯೮೫ ನೇ ಇಸವಿ ತನಕ ಪ್ರಧಾನ ಉದ್ಯಮಗಳಲ್ಲಿ ಷೇರನ್ನು ವರ್ಗಾಯಿಸಲು ಕಂಪನಿ ಕಾಯಿದೆಯ ಒಳಪಟ್ಟು ನಡೆಸಲು ಅನುಮತಿ ಇತ್ತು. ಆದರೆ ೧೯೮೫ ನೇ ಇಸವಿಯಿಂದ ಈ ನಿಯಮಗಳನ್ನು (MRTP) ಈ ಕಾಯಿದೆಯಲ್ಲಿ ಏಕೀಕರಣ ಪಡಿಸಲಾಯಿತು. ಕೇಂದ್ರ ಸರ್ಕಾರವು ಸಾರ್ವಜನಿಕ ಹಿತಕ್ಕಾಗಿ ಈ ತರಹ ವರ್ಗಾವಣೆಗಳನ್ನು ನಿಯಂತ್ರಿಸಬಹುದು.

ಫ) ಪ್ರಧಾನಉದ್ಯಮಗಳು ಒಪ್ಪಂದ ಮಾಡಿಕೊಂಡಾಗ, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಕ್ರಮದ (MRTP) ಆಯೋಗದ ಹತ್ತಿರ ದಾಖಲು ಮಾಡತಕ್ಕದ್ದು. ಈ ಆಯೋಗವು ಏನಾದರೂ ಏಕಸ್ವಾಮ್ಯದ ವ್ಯಾಪಾರ ಪದ್ಧತಿ ಅಥವಾ ಅನುಚಿತ ಪದ್ಧತಿಗಳು ಇದ್ದಲ್ಲಿ ಈ ಆಯೋಗವು ತನಿಖೆ ನಡೆಸ ಬಹುದು.

ಬ) ವರ್ಷಕ್ಕೆ ಒಂದು ಬಾರಿ ಈ ಆಯೋಗವು ಒಂದು ವರದಿಯನ್ನು ಸಂಸತ್ತಿಗೆ (Parliament) ಒಪ್ಪಿಸಬೇಕು.

ಭ) ಈ ಆಯೋಗದ ತನಿಖೆ ಕೆಲಸವು ಮತ್ತು ಆದೇಶಗಳು ಕೇಂದ್ರ

ಸರ್ಕಾರವನ್ನು ಬದ್ಧಗೊಳಿಸುವುದಿಲ್ಲ. ಆದರೆ ಇತರೆ ಜನರು ಈ ಆದೇಶಗಳನ್ನು ಅನುಸರಿಸಲೇಬೇಕು. ಜೊತೆಗೆ ಆಯೋಗವು ಸೂಕ್ತ ಮೊಕದ್ದಮೆಗಳಲ್ಲಿ ಹಾನಿ ಪರಿಹಾರ ನೀಡಬಹುದು.

ಮ) ಆಯೋಗದ ಪರವಾಗಿ ತನಿಖೆ ನಡೆಸಲು ಕೇಂದ್ರ ಸರ್ಕಾರವು ಒಬ್ಬರು ಪ್ರಧಾನ ನಿರ್ದೇಶಕರನ್ನು ನೇಮಿಸಿದೆ.

ಅನುಚಿತ ಅಥವಾ ವಂಚನೆಯ ವ್ಯಾಪಾರ ಪದ್ಧತಿಗಳು ಮತ್ತು ಇದರ ತನಿಖೆ

ಮೇಲ್ಕಂಡಂತೆ ೧೯೮೪ ನೇ ಇಸವಿಯಿಂದ ಅನುಚಿತ ಅಥವಾ ವಂಚನೆಯ ವ್ಯಾಪಾರ ಪದ್ಧತಿಗಳ ತನಿಖೆಗಾಗಿ ಈ ಕಾಯಿದೆಯನ್ನು ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿಯು ಸಾಚಾರ್ ಕಮೀಟಿ (Sachar Commitee) ಹೇಳಿಕೆ ಮೇರೆಗೆ ಮಾಡಲಾಯಿತು. ಬ್ರಿಟನ್ ಮತ್ತು ಅಮೇರಿಕಾದಲ್ಲಿ (United States) ಈ ತರಹ ಅನುಚಿತ ಅಥವಾ ವಂಚನೆಯ ವ್ಯಾಪಾರ ಪದ್ಧತಿಯನ್ನು ತಡೆಗಟ್ಟಲು ಕಾಯಿದೆಗಳು ಉಂಟು. ಈಗ ಏಕಸ್ವಾಮ್ಯ ಮತ್ತು ಪ್ರತಿಬಂಧಕ ವ್ಯಾಪಾರಕ್ರಮ ಕಾಯಿದೆ ಮೂಲಕ ಗ್ರಾಹಕರಿಗೆ ಸಂರಕ್ಷಣೆ ದೊರೆಯುವುದು.

ಮಾರಾಟದ ಮೂಲಭೂತ ನಿಯಮ ಏನೆಂದರೆ (Caveat Emptor) ಅಂದರೆ "ಕೊಳ್ಳುವವನೇ ಎಚ್ಚರಿಕೆ" ವಹಿಸಬೇಕು. ಆದರೆ ಬೇಕಾದಷ್ಟು ದೇಶಗಳಲ್ಲಿ ವಂಚನೆ ಮತ್ತು ವಂಚಿತ ವ್ಯಾಪಾರ ಪದ್ಧತಿಗಳನ್ನು ತಡೆಗಟ್ಟಲಾಗಿದೆ.

ಈ ತರಹ ಪದ್ಧತಿಗಳ ಉದಾಹರಣೆಗಳು ಹೀಗಿವೆ :

೧. ಸಾಮಾನುಗಳ ಗುಣಮಟ್ಟ ಅಥವಾ ರಚನೆ, ಶೈಲಿ, ಶ್ರೇಣಿ, ಸಮ್ಮಿಶ್ರಣ, ರೀತಿ ಅಥವಾ ಮಾದರಿ ಯಾವುದೇ ರೀತಿಯಾಗಿ ಇದೆ ಎಂದು ಸುಳ್ಳು ವಿವರಣೆ ಕೊಡುವುದು.

೨. ಪುನರ್‌ನಿರ್ಮಿತ, ಇನ್ನೊಬ್ಬನು ಉಪಯೋಗಿಸಿದ ಹೊಸದಾಗಿ ರೂಪಿಸಿ ನವೀಕರಿಸಿದ ಅಥವಾ ಪುನಃ ಜೋಡಿಸಿದ್ದ ಸಾಮಾನುಗಳನ್ನು ಸುಳ್ಳಾಗಿ ಹೊಸದೆಂದು ಹೇಳುವುದು.

೩. ಯಾವುದೇ ಸರಕುಗಳು ಅಥವಾ ಸೇವೆಗಳು ಸರ್ಕಾರದ ಅನುಮತಿ ಅಥವಾ ಪುರಸ್ಕೃತವಾಗಿದೆಯೆಂದು ಸುಳ್ಳು ಹೇಳಿಕೆ ಕೊಡುವುದು.

೪. ಯಾವುದೇ ಸರಕುಗಳು ಅಥವಾ ಸೇವೆಗಳ ಉಪಯುಕ್ತತೆ ವಿಷಯದ ಸುಳ್ಳು ಹೇಳಿಕೆ ಕೊಡುವುದು.

೫. ಯಾವುದೇ ಸರಕು ಅಥವಾ ಸಾಮಾನುಗಳ ವಿಷಯದ, ಸುಳ್ಳು ಭರವಸೆ ಕೊಡುವುದು.

೬. ಸರಕುಗಳು ಮತ್ತು ಸೇವೆಗಳ ವಿಷಯ ಅಥವಾ ಅದರ ಬೆಲೆಗೆ ಸಂಬಂಧಿಸಿದ ಸುಳ್ಳು ಸುದ್ದಿಯನ್ನು ಹರಡುವುದು ಅಥವಾ ಬೇರೆ ಮಾರಾಟಗಾರರ ಸರಕುಗಳು ಅಥವಾ ಸೇವೆಗಳ ವಿಷಯದ ತಿರಸ್ಕೃತ ಹೇಳಿಕೆ ಕೊಡುವುದು.

ಈ ಹೇಳಿಕೆಯು ಯಾವುದೇ ಕಾಗದಪತ್ರಗಳಲ್ಲಿ ಇರಲೇಬೇಕಾಗಿಲ್ಲ. ಸಾಮಾನುಗಳು ಎಲ್ಲಿ ಪ್ರದರ್ಶಿಸಲಾಗುವುದೋ ಅಲ್ಲಿ ಅಥವಾ ಸಾಮಾನಿನ ರಟ್ಟು ಅಥವಾ ಪೆಟ್ಟಿಗೆ ಮೇಲೆ ಬರೆದಿರಬಹುದು. ಇದೇ ತರಹ ಯಾವ ಮೂಲಕವಾದರೂ ಗಿರಾಕಿಗಳಿಗೆ ಈ ಹೇಳಿಕೆಗಳು ತಲುಪಿದ್ದ ಪಕ್ಷದಲ್ಲಿ ಇದು ಅನುಚಿತ ವ್ಯಾಪಾರ ಪದ್ಧತಿಯೆನಿಸಿಕೊಳ್ಳುವುದು.

ಇದೇ ರೀತಿ ಯಾವುದೇ ಸರಕುಗಳು ಅಥವಾ ಸೇವೆಗಳನ್ನು ಚೌಕಾಶಿ ಬೆಲೆಯಲ್ಲಿ ಕೊಡುವುದಾಗಿ ಸುಳ್ಳು ಭರವಸೆ ನೀಡಿದ್ದಲ್ಲಿ ಅದು ವಂಚನೆಯ ವ್ಯಾಪಾರ ಪದ್ಧತಿಯಾಗುವುದು.

ಯಾವುದೇ ಮಾರಾಟಗಾರನು ದಾನ ಅಥವಾ ಬಹುಮಾನ ಯಾವುದೇ ಸರಕುಗಳ ಜೊತೆ ಕೊಡುತ್ತೇನೆಂದು ಸುಳ್ಳು ಹೇಳಿಕೆ ಕೊಟ್ಟಲ್ಲಿ ಇದು ವಂಚನೆ ಯಾಗುವುದು.

ಸ್ಪರ್ಧೆಗಳು ಅಥವಾ ಲಾಟರಿ ಅಥವಾ ಆಕಸ್ಮಿಕ ಕೌಶಲ್ಯದ ಆಟ ನಡೆಸಿ ಮಾರಾಟಗಾರನು ತನ್ನ ಸರಕುಗಳನ್ನು ಮಾರಿದರೆ ಇದು ಅನುಚಿತ ವ್ಯಾಪಾರ ಪದ್ಧತಿಯಾಗುವುದು.

ಸಾಮಾನುಗಳನ್ನು ದಾಸ್ತಾನು ಮಾಡಿ ಅಥವಾ ಕೂಡಿಟ್ಟು ಅಥವಾ ನಾಶ ಮಾಡಿ ಅದರ ಬೆಲೆಯನ್ನು ಜಾಸ್ತಿ ಮಾಡಿದ ಪಕ್ಷದಲ್ಲಿ ಇದೂ ವಂಚನೆಯ ವ್ಯಾಪಾರ ಪದ್ಧತಿಯಾಗುವುದು.

ನಾವುಗಳು ಈ ತರಹ ವಂಚನೆಯ ವ್ಯಾಪಾರ ಪದ್ಧತಿಗಳನ್ನು ದಿನಪತ್ರಿಕೆಗಳಲ್ಲಿ ಕಾಣುತ್ತಲೇ ಇರುತ್ತೇವೆ. ಬಹುಮಾನ ವಿತರಣೆ, ಸ್ಪರ್ಧೆಗಳು, ಲಾಟರಿ ಈ ತರಹ ವಂಚನೆಗಳು ಯಾವತ್ತೂ ನಡೆಯುತ್ತಲೇ ಇರುತ್ತವೆ. ಜೊತೆಗೆ ಚೌಕಾಶಿ ಬೆಲೆಯಲ್ಲಿ ಮಾರಾಟಗಳು ಬೇಕಾದಷ್ಟು ಇರುತ್ತವೆ. ಬಹುಮಾನ ಕೊಡುವುದಕ್ಕೆ ಮುಂಚೆ ಬೆಲೆಯನ್ನು ಜಾಸ್ತಿ ಮಾಡಿ ಬಹುಮಾನದ ಖರ್ಚನ್ನು ಬೆಲೆಯಲ್ಲೇ ಸೇರಿಸಲಾಗುತ್ತದೆ. ಈ ಬೆಲೆಯು ಚೌಕಾಶಿ ಬೆಲೆ ಅಥವಾ ಸಾಮಾನ್ಯ ಬೆಲೆಗಳಿಗಿಂತ ಜಾಸ್ತಿ ಇರುತ್ತದೆ.

ಈ ರೀತಿ ವಂಚನೆಯ ವ್ಯಾಪಾರ ಪದ್ಧತಿಗಳನ್ನು ಏಕಸ್ವಾಮ್ಯ ಮತ್ತು ಪ್ರತಿಬಂಧಕ ವ್ಯಾಪಾರ ಕ್ರಮದ (MRTP) ಆಯೋಗವು ತನಿಖೆ ಮಾಡಬಲ್ಲದು. ಈ ತನಿಖೆಗೆ ಪ್ರಧಾನಉದ್ಯಮ ಮಾತ್ರವಲ್ಲ, ಎಲ್ಲಾ ಮಾರಾಟಗಾರರು ಒಳ ಗೊಂಡಿರುತ್ತಾರೆ.

ವಂಚನೆಯ ಅಥವಾ ಅನುಚಿತ ವ್ಯಾಪಾರ ಪದ್ಧತಿಗಳ ವಿಷಯ ದೂರು ಬಂದಲ್ಲಿ ಅಥವಾ ಸರ್ಕಾರವು ಈ ದೂರು ಕೊಟ್ಟಲ್ಲಿ ಅಥವಾ ಆ ನಿರ್ದೇಶಕರು ದೂರು ಕೊಟ್ಟಲ್ಲಿ ಅಥವಾ ಮನ್ನಣೆ ಪಡೆದ ಗ್ರಾಹಕಕೂಟವು ದೂರು ಕೊಟ್ಟಲ್ಲಿ ಈ ವಿಷಯ ತನಿಖೆ ಮಾಡಲು ಈ ಆಯೋಗಕ್ಕೆ ನ್ಯಾಯಾಲಯಕ್ಕೆ ಇರುವ ಎಲ್ಲ ಅಧಿಕಾರವು ಇರುವುದು. ಪ್ರಧಾನಉದ್ಯಮಗಳು ೧೦೦ ಕೋಟಿಗಿಂತ ಜಾಸ್ತಿಯಾಗಿ ಹೊಂದಿದ್ದಲ್ಲಿ ಆಯೋಗಕ್ಕೆ ಒಳಪಟ್ಟಿರುತ್ತವೆ. ಈ ತರಹ ಉದ್ಯಮಗಳು ಜಾಸ್ತಿ ಯಿಲ್ಲ. ಆದ್ದರಿಂದ ಈ ಆಯೋಗವು ಮಾಡುವ ಅನುಚಿತ ಅಥವಾ ವಂಚನೆಯ ಪದ್ಧತಿ ತನಿಖೆ ಬಹಳಷ್ಟು ಪ್ರಾಮುಖ್ಯತೆ ಗಳಿಸಿದೆ. ಆದರೆ ಆಯೋಗವು ಒಂದೇ ಈ ಕೆಲಸವನ್ನು ಮಾಡಲಾಗುವುದಿಲ್ಲ. ಜೊತೆಗೆ ಈ ಆಯೋಗದ ಸಿಬ್ಬಂದಿಯು ಜಾಸ್ತಿ ಮೊಕದ್ದಮೆಯನ್ನು ತನಿಖೆ ಮಾಡಲು ಸಾಧ್ಯವಿರುವುದಿಲ್ಲ. ಈ ಕಾರಣಕ್ಕೆ ಕೇಂದ್ರ ಸರ್ಕಾರವು ಗ್ರಾಹಕರನ್ನು ಕಾಪಾಡಲು ಮತ್ತೊಂದು ಕಾಯಿದೆಯನ್ನು ಜಾರಿಗೆ ತಂದಿದೆ.

****

ಭಾಗ - ೨೫

ಬಳಕೆದಾರರ (ಗ್ರಾಹಕರ) ಸಂರಕ್ಷಣಾ ಕಾಯಿದೆ ೧೯೮೬

(The Consumer Protection Act of 1986)

ಈ ೨೦ ನೇ ಶತಮಾನದಲ್ಲಿ ಸರಕುಗಳ ಉತ್ಪಾದನೆ ಮತ್ತು ಮಾರಾಟ ಬಹಳ ಜಾಸ್ತಿಯಾಗಿದೆ. ಇದೇ ಕಾರಣವಾಗಿ ಗ್ರಾಹಕರ ಸಂಖ್ಯೆಯು ಜಾಸ್ತಿಯಾಗಿ ಬಳಕೆ ದಾರರಿಗೆ ಅಥವಾ ಗ್ರಾಹಕರಿಗೆ ಸಾಮಾನುಗಳ ಮಾನ್ಯತೆ ಮತ್ತು ಗುಣಮಟ್ಟ ಸರಿಯಾಗಿ ಇರಬೇಕು. ಇದಕ್ಕಾಗಿ ಸರ್ಕಾರವು ಆಸಕ್ತಿ ವಹಿಸಿ ಗ್ರಾಹಕರಿಗೆ ಸರಿಯಾದ ಸಾಮಗ್ರಿಗಳು ಮತ್ತು ಸೇವೆಗಳು ದೊರೆಯುವಂತೆ ಮಾಡುವುದು ಅದರ ಹೊಣೆ ಗಾರಿಕೆಯಾಗಿದೆ.

ಈ ಕಾರಣಕ್ಕಾಗಿ ೧೯೪೭ ನೇ ಇಸವಿಯಲ್ಲೇ ಆಗ ಇದ್ದ ಬ್ರಿಟಿಷ್ ಸರ್ಕಾರವು ಇಂಡಿಯನ್ ಸ್ಟ್ಯಾಂಡರ್ಡ್ಸ್ ಇನ್‌ಸ್ಟಿಟ್ಯೂಷನ್ (Indian Standards Institution (ISI)) ಅಂದರೆ " ಭಾರತ ಮಾನಕಗಳ ಸಂಸ್ಥೆ"ಯನ್ನು ಸ್ಥಾಪಿಸಿತು. ಈ ಸಂಸ್ಥೆಯ ಕೆಲಸವೇನೆಂದರೆ ಸಾಮಾನುಗಳ ಮತ್ತು ಸರಕುಗಳ ಗುಣಮಟ್ಟವನ್ನು ನಿಯಂತ್ರಿಸುವುದು.

೧೯೫೨ ನೇ ಇಸವಿಯಲ್ಲಿ ಈ ಸಂಸ್ಥೆಯು ಕಾನೂನಿನ ಪ್ರಕಾರ ಲೈಸನ್ಸ್ ಗಳು ಮತ್ತು ಅನುಮತಿಗಳನ್ನು ನೀಡಲು ಅರ್ಹತೆ ಪಡೆಯಿತು. ಈ ಸಂಸ್ಥೆಯು ಉದ್ಯಮಗಳಿಗೆ ISI ಚಿನ್ಹೆಯನ್ನು ಮತ್ತು ಲೈಸನ್ಸ್ ಅನ್ನು ನೀಡುವ ಹಕ್ಕನ್ನು ಪಡಿದಿರುತ್ತದೆ. ಸರಕುಗಳ ಗುಣಮಟ್ಟವನ್ನು ಪರೀಕ್ಷಿಸಿದ ಮೇಲೆ, ಈ ಚಿನ್ಹೆ ಮತ್ತು ಲೈಸನ್ಸ್ ಅನ್ನು ನೀಡಲಾಗುತ್ತದೆ. ಗುಣಮಟ್ಟವು ಸರಿಯಾಗಿಲ್ಲದೇ ಇದ್ದ ಪಕ್ಷದಲ್ಲಿ ಮುಂಚೆ ನೀಡಿದ್ದ ಈ ಚಿನ್ಹೆಯನ್ನು ವಾಪಸ್ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತದೆ.

ಯಾವ ಸಾಮಾನು ಸರಂಜಾಮುಗಳನ್ನು ದೇಶದ ಹೊರಗೆ ರಫ್ತು ಮಾಡಲಾಗುವುದೋ ಇಂತಹ ಸಾಮಾನು ಸರಂಜಾಮುಗಳ ಗುಣಮಟ್ಟವನ್ನು ಕಾನೂನು ಪ್ರಕಾರ ಪರೀಕ್ಷಿಸಲು ಸರ್ಕಾರವು ಸಿಬ್ಬಂದಿಯನ್ನು ನೇಮಿಸಿದೆ. ಆದರೆ ದೇಶದ ಒಳಗೆ ಮಾರಾಟವಾಗುವ ಸಾಮಗ್ರಿಗಳು ಮತ್ತು ಸೇವೆಗಳ ಗುಣಮಟ್ಟವನ್ನು ಪರೀಕ್ಷಿಸಲು ಸರಿಯಾದ ಸಿಬ್ಬಂದಿಯು ಇರಲಿಲ್ಲ. ಆದ್ದರಿಂದ ಬಳಕೆದಾರರ ಮತ್ತು ಗ್ರಾಹಕರ ಸಂರಕ್ಷಣಾ ಕಾಯಿದೆ ೧೯೮೬ ನ್ನು ಜಾರಿಗೆ ತರಲಾಯಿತು. ಇದಕ್ಕೆ ಸಂಬಂಧ ಪಟ್ಟ ನಿಯಮಗಳನ್ನು ೧೯೮೭ ನೇ ಇಸವಿಯಲ್ಲಿ ಜಾರಿಗೆ ತರಲಾಯಿತು.

ಮೊದಲನೆಯದಾಗಿ, ಈ ಕಾಯಿದೆಯಲ್ಲಿ ಸರಕುಗಳು ಮತ್ತು ಸೇವೆಗಳ ಕೊರತೆ ಎಂದರೇನು ಎಂಬುದನ್ನು ನಿಯಂತ್ರಿಸಲಾಗಿದೆ. ಈ ಸರಕುಗಳ ಮತ್ತು ಸೇವೆಗಳ ಗುಣಮಟ್ಟ ಸರಿಯಾಗಿಲ್ಲದೇ ಇದ್ದ ಪಕ್ಷದಲ್ಲಿ ಗ್ರಾಹಕರು ಈ ಕಾಯಿದೆಯ ಪ್ರಕಾರ ಮಾರಾಟ ಮಾಡಿದವರೂ ಮತ್ತು ಉತ್ಪಾದನೆ ಮಾಡಿದವರ ಮೇಲೆ ಕ್ರಮ ಕೈಗೊಳ್ಳಬಹುದು.

ಸಾಮಾನ್ಯವಾಗಿ ಗ್ರಾಹಕ ಮತ್ತು ಮಾರಾಟಗಾರನ ಮಧ್ಯೆ ಕರಾರು ಇರುವುದು. ಆದರೆ ಕರಾರು ಇಲ್ಲದಿದ್ದ ಪಕ್ಷದಲ್ಲೂ ಈ ಕಾಯಿದೆಯ ಅಧಿನಿಯಮಗಳು ಅನ್ವಯಿಸುವುದು.

ಈ ಕಾಯಿದೆಯ ಎರಡನೆ ಮತ್ತು ಮೂರನೇ ಭಾಗಗಳಲ್ಲಿ ದೂರು ಕೊಡುವ ಪ್ರಕ್ರಿಯೆ ಮತ್ತು ಅದನ್ನು ತನಿಖೆ ಮಾಡುವ ಕ್ರಮ, ಮತ್ತಿತರ ವಿಷಯಗಳು ಇರುವುದು.

ಈ ಗ್ರಾಹಕ ಸಂರಕ್ಷಣೆಯು ೨೦ ನೇ ಶತಮಾನದ ಶಾಸನರಚನೆಯಿಂದ ಮಾತ್ರ ಹೊರಬಂದಿರುವುದಿಲ್ಲ. ಪ್ರಾಚೀನ ರೋಮನ್ನರ ಕಾಲದಲ್ಲಿಯೂ ಸಹ ಗ್ರಾಹಕರಿಗೆ ಸಂರಕ್ಷಣೆ ಕೊಡಲಾಗುತ್ತಿತ್ತು. ಮಧ್ಯಯುಗದಲ್ಲಿ ಸ್ಥಾಪಿತ ಗ್ರಾಹಕ ಮಟ್ಟವು ಬಹಳ ಮಟ್ಟಿಗೆ ಪ್ರಾಮುಖ್ಯತೆ ಪಡೆದಿದ್ದು, ಕಳಪೆ ಸಾಮಾನು ಮಾರಿದ ವ್ಯಾಪಾರಿಯನ್ನು ಒಂದು ತಟ್ಟಿಯ ಮೇಲೆ ಕೂಡಿಸಿ ಅವನ ಸಾಮಾನನ್ನು ಕತ್ತಿಗೆ ಕಟ್ಟಿ ಊರೆಲ್ಲಾ ಮೆರವಣಿಗೆ ಮಾಡುತ್ತಿದ್ದ ಸಂಗತಿಗಳು ಇವೆ. ಕೌಟಿಲ್ಯನ ಕಾಲದಲ್ಲಿಯೂ ಸಹ ಗ್ರಾಹಕರಿಗೆ ರಕ್ಷಣೆ ನೀಡಿದ ಸಂಗತಿಗಳು ಕಂಡು ಬರುತ್ತವೆ.

ಗ್ರಾಹಕ ರಕ್ಷಣೆ ಎಂಬ ಪರಿಕಲ್ಪನೆಯು ಉತ್ಪಾದಕರ ಪ್ರಪಂಚದಲ್ಲಿ ಕೊಳ್ಳುವವರಿಗೆ ಉಂಟಾಗುವ ತೊಂದರೆಗಳ ಮೇಲೆ ಅವಲಂಬಿತವಾಗಿದೆ.

ಈ ಸನ್ನಿವೇಶದಲ್ಲಿ ಗ್ರಾಹಕ ಎಂದರೆ ಯಾರು ? ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಇದಕ್ಕೆ ಉತ್ತರ ಎಲ್ಲರೂ ಗ್ರಾಹಕರೇ. ಅಂದರೆ ಸಾಮಾನು ಕೊಳ್ಳುವವರು, ಬಸ್ಸಿನಲ್ಲಿ, ಕಾರಿನಲ್ಲಿ, ಏರೋಪ್ಲೇನಿನಲ್ಲಿ ಓಡಾಡುವವರು, ಗ್ಯಾಸ್ ಕನೆಕ್ಷನ್ ತೆಗೆದುಕೊಳ್ಳುವವರು, ಹೋಟೇಲಿನಲ್ಲಿ ರೂಮು ಬಾಡಿಗೆಗೆ ಪಡೆಯುವವರು, ವಿದ್ಯುಚ್ಛಕ್ತಿಗೆ, ನೀರಿಗೆ, ಟೆಲಿಫೋನ್‌ಗೆ ಹಣ ಕಟ್ಟುವವರು, ಮನೆ ಬಾಡಿಗೆಗೆ ತೆಗೆದುಕೊಳ್ಳುವವರು, ಹಲ್ಲುಗಳನ್ನು ಕೀಳಿಸಿಕೊಳ್ಳುವವರು ಅಥವಾ ಹಲ್ಲಿನ ಹಳ್ಳಗಳನ್ನು ತುಂಬಿಸಿಕೊಳ್ಳುವವರು, ವೈದ್ಯರು, ವಕೀಲರು ಮತ್ತು ವಾಸ್ತುಶಿಲ್ಪಿಯ ಹತ್ತಿರ ಹೋಗುವವರು ಮತ್ತು ಸರಕುಗಳನ್ನು ಕೊಳ್ಳುವವರು ಮತ್ತು ಸೇವೆಗಳನ್ನು ಪಡೆಯುವವರು ಇವರೆಲ್ಲಾ ಗ್ರಾಹಕರೇ.

ಪ್ರಪಂಚದಲ್ಲೆಲ್ಲಾ ಈ ಕೆಳಕಂಡ ಹಲವು ಗ್ರಾಹಕರ ಹಕ್ಕುಗಳನ್ನು ಗುರುತಿಸಲಾಗಿದೆ. ಅವು ಯಾವುವೆಂದರೆ :

೧) ಸುರಕ್ಷತೆಯ ಹಕ್ಕು,

೨) ಆಯ್ಕೆಯ ಹಕ್ಕು,

೩) ಜಾಹಿರಾತಿನ ಸತ್ಯಾಸತ್ಯತೆಯ ಬಗ್ಗೆ ತಿಳಿದುಕೊಳ್ಳುವ ಹಕ್ಕು,

೪) ಗುರುತುಪಟ್ಟಿ ಮತ್ತು ಪ್ಯಾಕಿಂಗ್ ಬಗ್ಗೆ ತಿಳಿದುಕೊಳ್ಳುವ ಹಕ್ಕು,

೫) ನ್ಯಾಯಸಮ್ಮತ ಕರಾರು ಹಕ್ಕು,

೬) ಕ್ಲೇಮು ಮತ್ತು ರಕ್ಷಣೆಯ ಹಕ್ಕು,

೭) ಸರಕಿನ ಗುಣಮಟ್ಟದ ಬಗ್ಗೆ ತಿಳಿದುಕೊಳ್ಳುವ ಹಕ್ಕು,

೮) ಪರಿಹಾರ ಪಡೆಯುವ ಹಕ್ಕು ಮತ್ತು

೯) ಪ್ರಾತಿನಿಧ್ಯದ ಹಕ್ಕು.

ಗ್ರಾಹಕರ ಪ್ರಜಾಪ್ರಭುತ್ವವನ್ನು ಮತ್ತು ಮೂಲಭೂತ ಹಕ್ಕುಗಳನ್ನು ಖಚಿತ ಪಡಿಸಲು ಸರಕಾರವು ತನ್ನ ತತ್ವಗಳನ್ನು ಬದಲಾಯಿಸುವುದು ಅವಶ್ಯಕವಾಗಿದೆ. ಇದರಿಂದ ಬಡತನದ ರೇಖೆಯ ಕೆಳಗೆ ಇರುವ ಭಾರತದ ಅರ್ಧದಷ್ಟು ಜನ ಸಂಖ್ಯೆಯ ಜೀವನವು ಸುಗಮಗೊಳ್ಳುತ್ತದೆ. ಕಲಬೆರಕೆ, ಕೆಟ್ಟ ಸಾಮಾನುಗಳ ಉತ್ಪಾದನೆ ಇನ್ನೂ ಮುಂತಾದ ಗ್ರಾಹಕರ ಹಲ್ಲೆಯನ್ನು ತಪ್ಪಿಸಲು ಸರಕಾರವು ಕಟ್ಟುನಿಟ್ಟಾದ ಮತ್ತು ಬಲವಾದ ಕಾನೂನುಗಳನ್ನು ತರಬೇಕು. ಇದನ್ನು ಉಲ್ಲಂಘಿಸಿದವರನ್ನು ಶಿಕ್ಷಿಸಿ, ಗ್ರಾಹಕರಿಗೆ ಸಾಕಷ್ಟು ರಕ್ಷಣೆ ಕೊಡಬೇಕು.

ಆದರೆ ಭಾರತದಲ್ಲಿ ಗ್ರಾಹಕರು ವೇಗವಾದ ಮತ್ತು ಸರಿಯಾದ ಪರಿಹಾರದ ಅಭಾವದಿಂದ ಬಹಳ ಸಮಸ್ಯೆಗಳನ್ನು ಎದುರಿಸುತ್ತಾರೆ. ಗ್ರಾಹಕರ ಸಮಸ್ಯೆ, ಅದರ ವ್ಯಾಪ್ತಿ ಮತ್ತು ಸಂಕಟಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಮಾರುಕಟ್ಟೆಯಲ್ಲಿ ಮಾರುವವರ ಅಹಂಕಾರದ ವರ್ತನೆಯಿಂದಲೂ, ವಸ್ತುವಿನ ಲಭ್ಯದ ಅಭಾವದಿಂದಲೂ ಮತ್ತು ಸಾಮಾನುಗಳನ್ನು ದಾಸ್ತಾನು ಮಾಡುವುದ ರಿಂದಲೂ, ಗ್ರಾಹಕರು ಸದಾ ಅಪವಾದ ಮತ್ತು ಹತಾಶೆಯನ್ನು ಅನುಭವಿಸುತ್ತಾರೆ. ಗ್ರಾಹಕರಿಗೆ ವಸ್ತುಗಳ ಸರಿಯಾದ ವಿವರಣೆ, ಉಪಯೋಗ ತಿಳಿಸುವುದಿಲ್ಲ. ಮಾರಾಟಗಾರರ ನಿರಾಕರಣೆ, ಮೋಸ ಮತ್ತು ವಂಚನೆಯು ಮಾರುಕಟ್ಟೆಯಲ್ಲಿ ಪ್ರಾರಂಭವಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ಗ್ರಾಹಕನು ತನ್ನ ಹಕ್ಕುಗಳನ್ನು ಅಭಿವ್ಯಕ್ತಪಡಿಸಲು ಒತ್ತಿಹೇಳಲು (to express) ಅಥವಾ ತನ್ನ ಅಸಮಾಧಾನಕ್ಕೆ ಪರಿಹಾರವನ್ನು ಕೇಳಲು ಅಶಕ್ತನಾಗುತ್ತಾನೆ. ಯಾವುದಾದರೂ ಒಂದು ದೋಷಪೂರ್ಣ ವಸ್ತುವನ್ನು ಕಂಡರೆ ಮತ್ತು ಅದಕ್ಕೇನಾದರೂ ರಿಪೇರಿ ಆಗತ್ಯವಿದ್ದರೆ,

ಗ್ರಾಹಕನು ಮಾರುವವನ ಸದ್ಭಾವನೆ, ಪ್ರಮಾಣಿಕತೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅವನ ದಯೆಯ ಮೇಲೆ ಅವಲಂಬಿತನಾಗಬೇಕಾಗುತ್ತದೆ. ಮಾರುವವನು ದುರುದ್ದೇಶದಿಂದ ಕೂಡಿಲ್ಲದಿದ್ದರೆ ಮಾತ್ರ ಅಶಕ್ತ ಗ್ರಾಹಕನಿಗೆ ಏನಾದರೂ ಪರಿಹಾರ ದೊರೆಯಬಹುದು. ಗ್ರಾಹಕ ಸಂರಕ್ಷಣೆಯಲ್ಲಿ ಬಹಳ ಮುಖ್ಯವಾದ ತತ್ವವು ಗ್ರಾಹಕನಿಗೆ ತಾನು ಕೊಳ್ಳುತ್ತಿರುವ ವಸ್ತುವಿನ ಬಗ್ಗೆ ಮಾರಾಟಗಾರನು ಸಂಪೂರ್ಣ ತಿಳುವಳಿಕೆ ಕೊಡುವುದು.

ಅಮೇರಿಕಾ ದೇಶವು ಬಹಳ ಮುಂದುವರಿದ "ಗ್ರಾಹಕ ಸಮಾಜದ ದೇಶ" ಎಂದು ಹೇಳಿಕೊಂಡಿದೆ. ಅಲ್ಲಿನ ಮಾರುಕಟ್ಟೆಯಲ್ಲಿ ಬಹಳ ಉನ್ನತ ದರ್ಜೆಯ ಸ್ಪರ್ಧೆಯು ಇದ್ದು ಅದು ಗ್ರಾಹಕರ ಹಿತಾಸಕ್ತಿಯನ್ನು ರಕ್ಷಿಸುವ ಬಹಳ ದೊಡ್ಡ ದೇಶ ಎನಿಸಿಕೊಂಡಿದೆ. 'ಅಲ್ಲಿ ಗ್ರಾಹಕನೇ ಸಾರ್ವಭೌಮ ಎಂದು ಭಾವಿಸಲಾಗಿದೆ'. ಗ್ರಾಹಕರಿಗೆ ಇರುವ ಬಹಳಷ್ಟು ಆಯ್ಕೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿ ಕೊಡಲು ಜಾಹಿರಾತು ಅನಿವಾರ್ಯವಾಗಿದೆ. ಗ್ರಾಹಕರು ತನಗೆ ಬೇಕಾದ್ದನ್ನು ತೆಗೆದುಕೊಳ್ಳಲು ನಿರೀಕ್ಷಣೆ ಮಾಡಬಹುದು. ಅದೇ ಅಲ್ಲದೇ ಒಂದು ಸಾಮಾನಿಗೂ ಇನ್ನೊಂದು ಸಾಮಾನಿಗೂ ಇರುವ ವ್ಯತ್ಯಾಸವನ್ನು ಸಹ ಬಹಿರಂಗವಾಗಿ ವಿವರಿಸ ಲಾಗುತ್ತದೆ. ಗ್ರಾಹಕನು ತಾನು ಕೊಂಡ ವಸ್ತುವಿನಲ್ಲಿ ಏನಾದರೂ ದೋಷವಿದ್ದರೆ ಆ ವಸ್ತುವನ್ನು ಹಿಂತಿರುಗಿಸಬಹುದು. ಭಾರತವು ಇಂತಹ ವಿಷಯದಲ್ಲಿ ಇನ್ನೂ ಮುಂದುವರಿದಿಲ್ಲ.

ಗ್ರಾಹಕರು ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳುವಂತೆ ಮಾಡಲು ಸರಕಾರವು ಸಾಕಷ್ಟು ಮಾಧ್ಯಮಗಳನ್ನು ಸ್ಥಾಪಿಸಿ ಜನರಿಗೆ ಅರಿವು ಮೂಡುವಂತೆ ಮಾಡಬೇಕು.ರೇಡಿಯೋ ಮತ್ತು ದೂರದರ್ಶನದಲ್ಲಿ ಜನರಿಗೆ ತಕ್ಕ ಮಾಹಿತಿಯನ್ನು ಪ್ರಸಾರ ಮಾಡಬೇಕು. ಸರಕಾರವು ತಮ್ಮ ನೀತಿ ಮತ್ತು ತತ್ವಗಳನ್ನು ಜನರ ಮುಂದಿಡಬೇಕು. ಗ್ರಾಹಕ ಕಾಯಿದೆಯ ಬಗ್ಗೆ ತಿಳಿವಳಿಕೆ ಮತ್ತು ಹಕ್ಕುಗಳನ್ನು ಜನರಿಗೆ ಮನವರಿಕೆಯಾಗುವಂತೆ ಮಾಡಬೇಕು. ಜೀವನ ಮಟ್ಟವನ್ನು ಸುಧಾರಿಸುವ ಬಹಳಷ್ಟು ಕಾರ್ಯಕ್ರಮಗಳಾದ ಆರೋಗ್ಯರಕ್ಷಣೆ, ಪರಿಸರ ಸಂರಕ್ಷಣೆ ಮತ್ತು ಕುಟುಂಬಯೋಜನೆ ಬಗ್ಗೆ ತಿಳಿಸಿ ಕೊಡಬೇಕು. ಇದರ ಜೊತೆಗೆ ಆರೋಗ್ಯಕ್ಕೆ ಪೋಷಣೆ ನೀಡುವ ಆಹಾರ ಬಳಕೆ, ವಯಸ್ಕರ ಶಿಕ್ಷಣ, ಶುಚಿಯಾದ ನೀರು ಮತ್ತು ಗಾಳಿಯ ಉಪಯೋಗ ಮತ್ತು ಕಲಬೆರಕೆ, ತೂಕದಲ್ಲಿ ತಪ್ಪು ಮಾಡುವಿಕೆ. ಬಹಳಷ್ಟು ಬೆಲೆ ಮತ್ತು ಮಾರು ಕಟ್ಟೆಯಲ್ಲಿ ನಡೆಯುವ ಇನ್ನಿತರ ವಂಚನೆಗಳು, ಗ್ರಾಹಕರನ್ನು ಶೋಷಿಸುವ ಮಾರಾಟಗಾರರ ವಿರುದ್ಧ ತಕ್ಕ ಕ್ರಮ ಕೈಗೊಳ್ಳುವಂತೆ ಸಣ್ಣ ಮತ್ತು ಮಾಧ್ಯಮ ಪತ್ರಿಕೆಗಳು ಜನರಿಗೆ ಅರಿವು ಉಂಟು ಮಾಡಿಕೊಡಬೇಕು.

ಭಾರತದಂತಹ ದೇಶದಲ್ಲಿ ಭದ್ರವಾದ ಗ್ರಾಹಕ ಚಳುವಳಿಯನ್ನು ಪ್ರಾರಂಭಿಸಿ ಮಾರುವವರ ಸಾರ್ವಭೌಮತ್ವವನ್ನು ಅಳಿಸಿಹಾಕಿ ಗ್ರಾಹಕರ ಸಾರ್ವಭೌತ್ವವನ್ನು ಸ್ಥಾಪಿಸಬೇಕಾಗಿದೆ. ಇದಕ್ಕಾಗಿ ಬಹಳಷ್ಟು ಸಂಶೋಧನೆ ಅಗತ್ಯವಾಗಿದ್ದು ಜನರು ಒಂದು ಪ್ರಳಯವನ್ನೇ ತರಬೇಕಾಗುತ್ತದೆ. ಗ್ರಾಥಕ ಚಳುವಳಿಯನ್ನು ಮುಂದು ವರಿಸಲು ಮತ್ತು ಗ್ರಾಹಕರ ದೂರುಗಳನ್ನು ಗಣನೆಗೆ ತೆಗೆದುಕೊಳ್ಳಲು ಸರಕಾರವು ಸಿದ್ಧವಾಗಿದೆ. ಈ ದಿಶೆಯಲ್ಲಿ ಗ್ರಾಹಕ ಸಂರಕ್ಷಣಾ ಕಾಯಿದೆಯು ಒಂದು ಸರಿಯಾದ ಹಾದಿ ಆಗಿದೆ. ಇದರಿಂದ ಸರ್ಕಾರ, ಗ್ರಾಹಕ ಸಂಸ್ಥೆಗಳು ಮತ್ತು ಗ್ರಾಹಕರು ಮಾರು ಕಟ್ಟೆಯಲ್ಲಿ ಗ್ರಾಹಕರಿಗೆ ಮಾರಾಟಗಾರರಿಂದ ಉಂಟಾಗುವ ತೊಂದರೆಗಳನ್ನು ಬಗೆಹರಿಸಲು ಕಾಯಿದೆಯ ಅಧಿಕಾರವ್ಯಾಪ್ತಿಯನ್ನು ತಿಳಿದುಕೊಂಡು ಅದಕ್ಕೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವಂತೆ ಮಾಡಬಹುದು. ಇದರಿಂದಲಾದರೂ ಗ್ರಾಹಕರು ತಮಗಾದ ಶೋಷಣೆಯ ವಿರುದ್ಧ ಪ್ರತಿಭಟಿಸಿ ಚಳುವಳಿ ನಡೆಸಬಹುದು. ಇದರಿಂದ ನಮ್ಮ ರಾಜ್ಯಕ್ಕೂ, ರಾಷ್ಟ್ರಕ್ಕೂ ಮತ್ತು ಮಧ್ಯಮ ವರ್ಗದ ಜನರಿಗೂ ಬಹಳ ಉಪಯೋಗವಾಗುತ್ತದೆ.

ನಮ್ಮ ಗ್ರಾಹಕ ಸಂರಕ್ಷಣಾ ವೇದಿಕೆಯು ಮೂರು ಹಂತದಲ್ಲಿ ಕೆಲಸ ಮಾಡುತ್ತಿದೆ. ಜಿಲ್ಲಾಮಟ್ಟ, ರಾಜ್ಯಮಟ್ಟ ಮತ್ತು ರಾಷ್ಟ್ರ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದು, ಅದರ ವ್ಯಾಪ್ತಿಯು ವಾದಿಯ ಮೊತ್ತದ ಕೋರಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ಈ ದೂರುಗಳನ್ನು ಕೊಡುವವರು ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದು, ಗ್ರಾಹಕನು ಸರಕನ್ನು ಕೊಂಡಿರಬೇಕು ಅಥವಾ ಸೇವೆಯನ್ನು ಪಡೆದಿರಬೇಕು. ಎರಡನೆಯದು, ಅದಕ್ಕೆ ಹಣ ಸಂದಾಯ ಮಾಡಿರಬೇಕು. ಉಚಿತ ಸೇವೆ ಅಥವಾ ಸರಕಿನಲ್ಲಿ ಉಂಟಾದ ತೊಂದರೆಗಳಿಗೆ ಈ ಕಾಯಿದೆಯು ಅನ್ವಯಿಸುವುದಿಲ್ಲ. ಆದರಿಂದ ಸರಕನ್ನು ಕೊಂಡಾಗ ಅಥವಾ ಸೇವೆಯನ್ನು ಪಡೆದಾಗ ರಶೀದಿಯನ್ನು ಪಡೆಯುವುದು ಬಹಳ ಮುಖ್ಯವಾಗಿದೆ. ಬಹಳ ಸಲ ಗ್ರಾಹಕರು ಮಾರಾಟಕರ ಉಳಿಯುವುದೆಂಬ ಆಸೆಯಿಂದ ರಶೀದಿಯನ್ನು ತೆಗೆದುಕೊಳ್ಳುವುದೇ ಇಲ್ಲ. ಇದರಿಂದ ಅವರು ತಮ್ಮ ಸರಕು ಅಥವಾ ಸೇವೆಯಲ್ಲಿ ದೋಷ ಕಂಡುಬಂದಾಗ ದಾವೆಹೂಡಲು ಅಥವಾ ದೂರು ಕೊಡಲು ಅಸಮರ್ಥರಾಗಿ ಅಷ್ಟು ಮೊತ್ತವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರಿಂದ ಅವರಿಗೂ ನಷ್ಟ ಮತ್ತು ಸರಕಾರಕ್ಕೆ ಸಲ್ಲಬೇಕಾದ ಕರ (Tax) ಸಿಗದೆ ರಾಷ್ಟ್ರಕ್ಕೂ ನಷ್ಟ. ಆದರಿಂದ ದೂರು ಸಲ್ಲಿಸಬೇಕಾದರೆ ಒಂದು ವ್ಯವಹಾರವು ನಡೆದಿರಬೇಕು ಮತ್ತು ಅದಕ್ಕೆ ಹಣ ಸಂದಾಯವಾಗಿರಬೇಕು. ಇವೆರಡು ಬಹಳ ಮುಖ್ಯವಾದ ಅಂಶಗಳು.

****

ಭಾಗ - ೨೬

ಭಾರತದ ಸರಕುಗಳ ಮಾರಾಟ ಕಾಯಿದೆ

(Sale of Goods Act)

ಜನಗಳು ಕರಾರು ಮಾಡಿಕೊಂಡಿದ್ದಲ್ಲಿ ಕರಾರು ಕಾಯಿದೆಯ ಚೌಕಟ್ಟಿನೊಳಗೆ ಬರುತ್ತಾರೆ. ಈ ಕಾಯಿದೆ ಕರಾರು ಮಾಡಿಕೊಳ್ಳಲು ಯೋಗ್ಯತೆ, ಅರ್ಹತೆ, ಸಮ್ಮತಿಯ ಸ್ವಭಾವ, ಪರಸ್ಪರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ನಿರೂಪಿಸುತ್ತದೆ.

ಸ್ಥಿರಸ್ವತ್ತಿನ ಬಗ್ಗೆ ಕರಾರು ಆದ ಪಕ್ಷದಲ್ಲಿ ಕರಾರು ಕಾನೂನಿನಲ್ಲಿ ಜೊತೆಗೆ ಬೇರೆ ಅಧಿನಿಯಮಗಳು-ಅನ್ವಯಿಸುವುದು. ಈ ತರಹ ಕರಾರುಗಳು ಮಾರಾಟಕ್ಕೆ ಸಂಬಂಧಿಸದೆ, ಗೇಣಿಗಳು, ಅಡಮಾನಗಳಿಗೆ ಸಂಬಂಧಿಸಿರಬಹುದು. ಈ ತರಹ ಸ್ಥಿರಸ್ವತ್ತಿನ ವಿಷಯದಲ್ಲಿ ಕರಾರು ಮಾಡಿಕೊಂಡರೆ, ಸ್ವತ್ತಿನ ವರ್ಗಾವಣೆ ಕಾನೂನು ಅಥವಾ ಕಾಯಿದೆ ಅನ್ವಯಿಸುವುದು. ಜೊತೆಗೆ ಈ ತರಹ ಕರಾರುಗಳು ನೋಂದಾಯಿತ ಲಿಖಿತಪತ್ರದ ಮೂಲಕವೇ ಆಗಬೇಕು. ಜೊತೆಗೆ ಇಂತಹ ಪತ್ರಕ್ಕೆ ಎರಡು ಸಾಕ್ಷಿದಾರರು ಸಹಿ ಹಾಕಬೇಕು. ಸ್ಥಿರಸ್ವತ್ತಿಗೆ ಸಂಬಂಧಿಸಿದ ಕರಾರುಗಳು ಈ ತರಹ ನೋಂದಾಯಿತ ಲಿಖಿತಪತ್ರವೇ ಆಗಿರಬೇಕು ಇಲ್ಲದೇ ಇದ್ದ ಪಕ್ಷದಲ್ಲಿ ನ್ಯಾಯಾಲಯದಲ್ಲಿ ಈ ಪತ್ರವನ್ನು ಸಾಕ್ಷಿಗೆ ಅಂಗೀಕರಿಸಲಾಗುವುದಿಲ್ಲ. ಅಷ್ಟೆ ಅಲ್ಲ, ಸ್ವತ್ತು ಪಡೆದವರಿಗೆ ಹಕ್ಕು ಬರುವುದಿಲ್ಲ.

ಈ ತರಹ ನೋಂದಾಯಿತ ಲಿಖಿತಪತ್ರದ ಉಪಯೋಗವೇನೆಂದರೆ, ಈ ದಾಸ್ತಾವೇಜು ಉಪನೋಂದಣಿಕಾರರ ಕಛೇರಿಯಲ್ಲಿ ನೋಂದಾಯಿತವಾದುದರಿಂದ ಯಾರೇ ಆದರೂ ಈ ಪತ್ರದ ಪ್ರತಿ ಪಡೆಯಬಹುದು. ಈ ತರಹ ಯಾರಾದರೂ ಸ್ಥಿರ ಸ್ವತ್ತಿನ ಹಕ್ಕುದಾರರನ್ನು ಕಂಡುಹಿಡಿಯಬಹುದು. ಇದಕ್ಕೋಸ್ಕರ ರಾಜ್ಯ ಸರ್ಕಾರವು ಈ ತರಹ ಪತ್ರದ ಮೇಲೆ ಸ್ಟ್ಯಾಂಪು ಸುಂಕವನ್ನು ವಿಧಿಸುತ್ತದೆ.

ಜೊತೆಗೆ ವಿದೇಶಿ ಜನರೊಡನೆ ಕರಾರು ಮಾಡಿಕೊಂಡಲ್ಲಿ ವಿದೇಶಿ ವಿನಿಮಯ ವಿನಿಯಮ ಕಾಯಿದೆ ಅನ್ವಯಿಸುವುದು (FERA). ಈ ಕಾಯಿದೆಗನುಸಾರವಾಗಿ ಸ್ಥಿರ ಸ್ವತ್ತುಗಳನ್ನು ವಿದೇಶಿ ಜನರಿಗೆ ವರ್ಗಾವಣೆ ಮಾಡಬೇಕಾದರೆ ಕೇಂದ್ರ ಸರ್ಕಾರ ಅಥವಾ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಅನುಮತಿ ಪಡೆಯಲೇಬೇಕು.

ಚರ ಸ್ವತ್ತುಗಳ ವರ್ಗಾವಣೆ ಮಾಡಬೇಕಾದರೆ ನೋಂದಾಯಿತ ಲಿಖಿತ ಪತ್ರವು ಬೇಕಿಲ್ಲ. ಆದ್ದರಿಂದ ಇಂತಹ ಕರಾರುಗಳ ನಿಯಂತ್ರಣ ಮಾಡಲು ಭಾರತದ ಸರಕುಗಳ ಮಾರಾಟ ಕಾಯಿದೆಯನ್ನು ೧೯೩೦ ನೇ ಇಸವಿಯಲ್ಲಿ ಜಾರಿಗೆ

ತರಲಾಯಿತು. ಅದಕ್ಕಿಂತ ಮುಂಚೆ ಈ ವರ್ಗಗಳು ಕರಾರು ಕಾಯಿದೆಯಲ್ಲೇ ಇದ್ದವು.

ಸರಕುಗಳು ಎಂದರೇನು ?

ಸರಕುಗಳು ಎಂದರೆ ಚರ ಸ್ವತ್ತು ಅಂದರೆ ಹಣಕಾಸು ಮತ್ತು ಕ್ರಮಾರ್ಹ ಕ್ಲೇಮು (Actionable Claim)ಗಳು ಸರಕುಗಳು ಅಲ್ಲ. ಸ್ಟಾಕುಗಳು ಮತ್ತು ಶೇರುಗಳು, ಬೆಳೆಗಳು ಇವೆಲ್ಲ ಚರ ಸ್ವತ್ತುಗಳು. ಚರ ಸ್ವತ್ತುಗಳನ್ನು ವರ್ಗಾವಣೆ ಮಾಡಲು ಲಿಖಿತಪತ್ರವು ಇರಬೇಕಾಗಿಲ್ಲ. ಈಗಿರುವ ಸರಕುಗಳು ಅಥವಾ ಮುಂದೆ ಉತ್ಪಾದನೆ ಮಾಡುವ ಸರಕುಗಳನ್ನು ಮಾರಾಟ ಮಾಡಬಹುದು.

ಆದರೆ ಮಾರಾಟವು ಮುಗಿದ ಕೂಡಲೆ ಎಲ್ಲಾ ಹಕ್ಕುಗಳು ಗ್ರಾಹಕನಿಗೆ ಹೋಗುತ್ತದೆ. ಇದರ ಜೊತೆಗೆ ಹಾನಿ ಸಂಭವವು ಗ್ರಾಹಕನಿಗೆ ಹೋಗುವುದು. ಗ್ರಾಹಕ ಯಾವುದಾದರೂ ಸರಕನ್ನು ಕೊಂಡುಕೊಂಡು ಅದರ ಬೆಲೆಯನ್ನು ಮುಂದೆ ಕೊಡಬೇಕಾಗಿದ್ದಲ್ಲಿ ಆ ಸರಕುಗಳ ಹಾನಿ ಆದರೆ ಅದರ ಪರಿಹಾರ ಗ್ರಾಹಕನಿಗೆ ಸೇರಿದ್ದು. ಮಾರಾಟ ಆದ ಮೇಲೆ ಈ ಸರಕುಗಳು ಸುಟ್ಟು ಹೋದಲ್ಲಿ ಗ್ರಾಹಕನು ಆ ಸರಕುಗಳಿಗೆ ಬೆಲೆ ಕೊಡಲೇಬೇಕಾಗುವುದು.

ಸಾಮಾನ್ಯವಾಗಿ ಮಾರಾಟಗಾರನು ಗ್ರಾಹಕನಿಗೆ ತನ್ನಲ್ಲಿ ಹೊಂದಿರುವುದಕ್ಕಿಂತ ಜಾಸ್ತಿ ಹಕ್ಕನ್ನು ಕೊಡುವುದು ಸಾಧ್ಯವಿಲ್ಲ. ಆದರೆ ಬೇರೊಬ್ಬ ಮಾರಾಟಗಾರನ ಒಪ್ಪಿಗೆ ಪಡೆದು ಸರಕುಗಳ ಸ್ವಾಧೀನ ಪಡೆದಿದ್ದಲ್ಲಿ ಅಂಥವನು ಮಾರಾಟಗಾರನ ಹಕ್ಕನ್ನು ಗ್ರಾಹಕನಿಗೆ ಕೊಡಬಹುದು.

ಮಾರಾಟಗಾರನಿಗೆ ಸರಕುಗಳ ಬೆಲೆ ಪಾವತಿ ಆಗದೇ ಇದ್ದ ಪಕ್ಷದಲ್ಲಿ, ಅವನು ಸರಕುಗಳನ್ನು ಗ್ರಾಹಕನಿಗೆ ತಲುಪುವ ಮುಂಚೆ ನಿಲ್ಲಿಸಿ ತಾನು ವಶಪಡಿಸಿಕೊಳ್ಳಬಹುದು. ಗ್ರಾಹಕ ದಿವಾಳಿಯಾದ ಪಕ್ಷದಲ್ಲಿ ಮಾರಾಟಗಾರನು ಈ ರೀತಿ ಮಾಡಬಹುದು.

ಹರಾಜಿನ ಮೂಲಕ ಮಾರಾಟ ಮಾಡಿದ ಪಕ್ಷದಲ್ಲಿ, ಖರೀದಿದಾರನು ಬೆಲೆಯನ್ನು ಕೂಗಬೇಕು. ಒಂದು ಬಾರಿ ಈ ಬೆಲೆಯನ್ನು ಒಪ್ಪಿದ ಮೇಲೆ ಕರಾರು ಆಗುವುದು. ಹರಾಜಿನಲ್ಲಿ ಸರಕುಗಳ ಒಡೆಯನು ಕೂಗಬಾರದು. ಆದರೆ ಒಡೆಯನು ಅನುಮತಿ ಪಡೆದ ಪಕ್ಷದಲ್ಲಿ ಹರಾಜಿನಲ್ಲಿ ತಾನೂ ಕೂಗಬಹುದು. ಹರಾಜಿನಲ್ಲಿ ಮೀಸಲು (Reserve Price) ಬೆಲೆಯನ್ನು ನಿಗದಿಪಡಿಸಬಹುದು.

ಸರಕುಗಳು ಮಾರಾಟವಾದಲ್ಲಿ ಅದರ ಹಕ್ಕುಗಳು ಮತ್ತು ಹಾನಿ ಸಂಭವ ಎರಡೂ ಮಾರಾಟ ಮಾಡುವವನಿಂದ ಗ್ರಾಹಕನಿಗೆ ಇಬ್ಬರೂ ನಿಶ್ಚಯಪಡಿಸಿದ ಸಮಯಕ್ಕೆ ವರ್ಗಾವಣೆ ಆಗುವುದು. ಸಾಮಾನ್ಯವಾಗಿ ಸರಕುಗಳು ನಿರ್ದಿಷ್ಟ ಅಥವಾ

ಖಚಿತವಾದ ಪಕ್ಷದಲ್ಲಿ, ಮಾರಾಟವಾದ ತಕ್ಷಣವೇ ಹಕ್ಕುಗಳು ಮಾರಾಟಗಾರನಿಂದ ಗ್ರಾಹಕನಿಗೆ ವರ್ಗಾವಣೆಯಾಗುವುದು. ಬೆಲೆ ಕೊಡುವ ಸಮಯ ಅಥವಾ ಸಾಮಾನುಗಳು ಸರಕುಗಳನ್ನು ಗ್ರಾಹಕನಿಗೆ ಕೊಡುವ ಸಮಯ ಮುಂದೂಡ ಲಾಗಿದ್ದರೂ ಹಕ್ಕು ಮಾತ್ರ ವರ್ಗಾವಣೆಯಾಗುವುದು.

ಸರಕುಗಳನ್ನು ತೂಕ ಅಥವಾ ಅಳತೆಯೇನಾದರೂ ಮಾಡಬೇಕಾಗಿದ್ದಲ್ಲಿ, ಹಕ್ಕುಗಳು ಆದರ ನಂತರ ವರ್ಗಾವಣೆಯಾಗುವುದು.

ಕರಾರಿನ ಪ್ರಕಾರ, ಸರಕುಗಳನ್ನು ವಾಹಕನ (Carrier) ಮೂಲಕ ತಲುಪಿಸ ಬೇಕಾದಲ್ಲಿ ಈ ರೀತಿ ಸರಕುಗಳನ್ನು ವಾಹಕನಿಗೆ ಕೊಟ್ಟ ತಕ್ಷಣವೇ ಹಕ್ಕುಗಳು ಗ್ರಾಹಕನಿಗೆ ಬದಲಾಯಿಸುವುದು. ಆದರೆ ಮಾರಾಟ ಮಾಡುವವನು ಸರಕುಗಳ ಮೇಲಿನ ಹಕ್ಕನ್ನು ತನ್ನ ವಶದಲ್ಲಿಟ್ಟುಕೊಂಡಿದ್ದರೆ, ಈ ಹಕ್ಕು ಬದಲಾವಣೆ ಆಗುವುದಿಲ್ಲ. ಉದಾಹರಣೆಗೆ, ಮಾರಾಟ ಮಾಡುವವನ ಹೆಸರಲ್ಲೇ ಸರಕು ಇದ್ದರೆ ಹಕ್ಕು ಗ್ರಾಹಕನಿಗೆ ಹೋಗುವುದಿಲ್ಲ.

ಈ ತರಹ ಕರಾರುಗಳಲ್ಲಿ ಮಾರಾಟಗಾರನು ಭರವಸೆಗಳು ಮತ್ತು ಷರತ್ತುಗಳನ್ನು ಒಪ್ಪಿ ಮಾರಾಟ ಮಾಡಿರುವನು. ಷರತ್ತುಗಳ ಉಲ್ಲಂಘನೆಯಾದ ಪಕ್ಷದಲ್ಲಿ ಕರಾರು ಅಥವಾ ಒಪ್ಪಂದವು ಶೂನ್ಯವಾಗುವುದು. ಬರೀ ಭರವಸೆಯಿದ್ದ ಪಕ್ಷದಲ್ಲಿ, ಇದನ್ನು ಉಲ್ಲಂಘಿಸಲ್ಪಟ್ಟರೆ. ಕರಾರು ಶೂನ್ಯವಾಗುವುದಿಲ್ಲ ಆದರೆ ನಷ್ಟವಾದ ಹಣವನ್ನು ಮಾರಾಟ ಮಾಡಿದವನು ಪಾವತಿ ಮಾಡತಕ್ಕದ್ದು.

ಸರಕುಗಳ ಮಾರಾಟ ಕಾನೂನಿನ ಪ್ರಕಾರ, ಕೊಳ್ಳುವವನೇ ಎಚ್ಚರಿಕೆ ವಹಿಸಬೇಕು. ಆದರೆ ಮಾರಾಟ ಮಾಡುವವನು ಸರಕುಗಳ ಹಕ್ಕನ್ನು ಇಟ್ಟು ಕೊಂಡಿರಬೇಕು. ಸರಕುಗಳು ಪೂರ್ವಾಧಿರಹಿತವಾಗಿರಬೇಕು. (Unencumbered) ಸರಕುಗಳನ್ನು ಗ್ರಾಹಕನ ಸ್ವಾಧೀನಕ್ಕೆ ಮಾರಾಟ ಮಾಡುವವನು ಕೊಡತಕ್ಕದ್ದು.

ಸರಕುಗಳು ಮಾದರಿ ಮೂಲಕ ಮಾರಾಟಕ್ಕೆ ಇಟ್ಟ ಪಕ್ಷದಲ್ಲಿ ಗ್ರಾಹಕನಿಗೆ ಕೊಡುವ ಸರಕು ಒಟ್ಟು ಅಥವಾ ರಾಶಿ ಮಾದರಿ ತರಹವೇ ಇರಬೇಕು.

ಮಾರಾಟ ಮಾಡಲ್ಪಟ್ಟ ಸರಕುಗಳು ಮಾರಾಟ ಯೋಗ್ಯ ಗುಣಮಟ್ಟದ್ದಾಗಿರ ಬೇಕು ಮತ್ತು ರೂಢಿಗತ ಖಾತರಿಯುಳ್ಳವಾಗಿರಬೇಕು ಮತ್ತು ಗ್ರಾಹಕ ಮಾರಾಟ ಮಾಡುವವನ ತೀರ್ಪಿನ ಮೇಲೆ ಇಲ್ಲವೇ ಅವನ ಭರವಸೆಯ ಮೇಲೆ ಸರಕುಗಳನ್ನು ಕೊಂಡಿದ್ದ ಪಕ್ಷದಲ್ಲಿ ಈ ಸರಕುಗಳು ಸರಿಯಾದ ರೀತಿ ಇರಬೇಕು. ಸರಕುಗಳು ಕಾಣದೇ ಇದ್ದ ಅಥವಾ ಗೂಢವಾದ ದೋಷಗಳನ್ನು ಹೊಂದಿರಬಾರದು.

ಸ್ಥಿರಸ್ವತ್ತುಗಳ ಬಗ್ಗೆ ಕರಾರು ಇದ್ದ ಪಕ್ಷದಲ್ಲಿ, ಕಾಲಾವಕಾಶವು ಷರತ್ತು ಆಗಿರುವುದಿಲ್ಲ. ಆದರೆ ಚರ ಸ್ವತ್ತುಗಳ ಮಾರಾಟ ಮಾಡಿದ ಪಕ್ಷದಲ್ಲಿ ಸರಕುಗಳ ಸ್ವಾಧೀನವನ್ನು ಗ್ರಾಹಕನಿಗೆ ಒಪ್ಪಿಸುವ ಸಮಯ ಷರತ್ತು ಆಗಿರುತ್ತದೆ. ಆದರೆ ಬೇರೆ ಸಮಯಗಳೂ ಷರತ್ತುಗಳಾಗಿರುವುದಿಲ್ಲ. (1961 Supreme Court 990 Mahavir Prasad Vs. Durgadatta).

ಕಂತು ಖರೀದಿ ಒಪ್ಪಂದ

(Hire Purchase Agreement)

ಈಗಿನ ಕಾಲದಲ್ಲಿ ಕಂತಿನಲ್ಲಿ ಸಾಮಾನುಗಳನ್ನು ಖರೀದಿ ಮಾಡುವುದು ಸರ್ವೇಸಾಧಾರಣವಾಗಿದೆ. ಈ ತರಹ ಒಪ್ಪಂದಗಳು, ಕರಾರುಗಳು, ಬಸ್ಸುಗಳು, ಟ್ರಕ್ಕುಗಳು, ಟ್ರ್ಯಾಕ್ಟರ್‌ಗಳು ಎಲ್ಲಾದಕ್ಕೂ ಅನ್ವಯಿಸುವುದು.

ಆದರೆ ಇಂತಹ ಕರಾರಿನಲ್ಲಿ ಬಾಡಿಗೆಗೆ ಕೊಡುವವನು ಯಾವುತ್ತೂ ಅನುಕೂಲ ಸ್ಥಿತಿಯಲ್ಲಿರುತ್ತಾನೆ. ಒಂದೇ ಒಂದು ಕಂತನ್ನು ತಪ್ಪಿಸಿದಲ್ಲಿ ಎಷ್ಟೋ ಸಾರಿ ಬಾಡಿಗೆಗೆ ತೆಗೆಕೊಂಡಿರುವವನು ಸರಕಿನ ಸ್ವಾಧೀನವನ್ನು ಕಳೆದುಕೊಳ್ಳಬಹುದು. ಆದ್ದರಿಂದ ೧೯೭೨ನೇ ಇಸವಿಯಲ್ಲಿ ಕಂತು ಖರೀದಿ ಕಾಯಿದೆಯನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿತು. ಪೂರ್ತಿಯಾಗಿ ಈ ಕಾಯಿದೆಯು ೧೯೮೯ ನೇ ಇಸವಿಯಲ್ಲಿ ಜಾರಿಗೆ ಬಂದಿತು. ಈ ಕಾಯಿದೆಯ ಪ್ರಕಾರ ಎಲ್ಲಾ ಕಂತು ಖರೀದಿ ಒಪ್ಪಂದಗಳು ಬರವಣಿಗೆಯಲ್ಲೇ ಇರತಕ್ಕದ್ದು. ಈ ಕಾಯಿದೆಯನ್ನು ಬಾಡಿಗೆಗೆ ತೆಗೆದು ಕೊಂಡಿರುವವನ ರಕ್ಷಣೆಗಾಗಿ ಜಾರಿಗೆ ತರಲಾಯಿತು. ಆದ್ದರಿಂದ ಬಾಡಿಗೆಗೆ ಕೊಟ್ಟ ಸರಕುಗಳ ಗುಣಮಟ್ಟ, ಯೋಗ್ಯತೆ, ಸೂಕ್ತತೆ ಮತ್ತು ಸ್ವಾಧೀನದ ಬಗ್ಗೆ ಬಾಡಿಗೆಗೆ ಕೊಡುವವನು ಖಾತರಿ ಕೊಡತಕ್ಕದ್ದು. ಬಾಡಿಗೆ ತೆಗೆಕೊಂಡವನು ತನ್ನ ಹಕ್ಕನ್ನು ಬೇರೆಯವರಿಗೆ ಒಪ್ಪಿಸಬಹುದು ಇಲ್ಲ ವಹಿಸಬಹುದು. ಒಬ್ಬನೇ ಒಡೆಯನ ಜೊತೆ ಒಂದಕ್ಕಿಂತ ಜಾಸ್ತಿ ಒಪ್ಪಂದ ಇದ್ದ ಪಕ್ಷದಲ್ಲಿ ಬಾಡಿಗೆಗೆ ತೆಗೆದುಕೊಂಡವನು ಪಾವತಿ ಮಾಡಿದ ಹಣವನ್ನು ವಿನಿಯೋಜನೆ ಮಾಡುವುದಕ್ಕೆ ಹಕ್ಕು ಇರುತ್ತದೆ. ಕಂತುಗಳ ಹಣವನ್ನು ಮೊದಲೇ ಪಾವತಿ ಮಾಡಿದ ಪಕ್ಷದಲ್ಲಿ ಬಾಡಿಗೆಗೆ ತೆಗೆದುಕೊಂಡಿರು ವವನಿಗೆ ಶಾಸನಬದ್ಧವಾಗಿ ಬೆಲೆ ಕಮ್ಮಿಯಾಗುವುದು.

ಒಂದೋ ಎರಡೋ ಕಂತನ್ನು ಕಟ್ಟದೇ ಇದ್ದ ಪಕ್ಷದಲ್ಲಿ ಒಡೆಯನು ಕರಾರನ್ನು ರದ್ದು ಮಾಡಲಾಗುವುದಿಲ್ಲ.

ಈ ತರಹ ಈ ಕಾಯಿದೆಯು ಬಾಡಿಗೆ ತೆಗೆದುಕೊಂಡವನ ಸಂರಕ್ಷಣೆ ಮಾಡುವುದು. ಎಲ್ಲಾ ಕಂತುಗಳನ್ನು ಕಟ್ಟದೇ ಇದ್ದರೂ ಬಾಡಿಗೆ ತೆಗೆದುಕೊಂಡವನು

ತನ್ನ ಹೊಣೆಗಾರಿಕೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಕಾಯಿದೆಯ ವರ್ಗ ೭(೪) ಶಾಸನಬದ್ಧ ಚಾರ್ಜನ್ನು ವ್ಯಾಖ್ಯಾನಿಸಿದೆ. ಇದು ವರ್ಷಕ್ಕೆ ಶೇಕಡಾ ೩೦, ಈ ಕೆಳಕಂಡ ಸೂತ್ರದ ಪ್ರಕಾರ ಇರುತ್ತದೆ.

$$SC = \frac{NC \times R \times T}{100}$$

ಅಂದರೆ

S.C. = ಶಾಸನಬದ್ಧ ಕಂತು ಖರೀದಿ ಚಾರ್ಜು
(Statutory hire purchase Charge)

N.C. = ನಿವ್ವಳ ನಗದು ಬೆಲೆ (Net Cash Price)

R = ದರ (Rate)

T = ಕಾಲ (Time) ಒಪ್ಪಂದದ ತಾರೀಖು ಮತ್ತು ಕೊನೆಯ ಕಂತು ಯಾವಾಗ ಸಲ್ಲಬೇಕೋ ಅದರ ನಡುವೆ ಮುಕ್ತಾಯವಾಗುವ ವರ್ಷ ಅಥವಾ ವರ್ಷದ ಕಾಲ.

ಇದರ ಪ್ರಕಾರ, ಬಾಡಿಗೆಗೆ ತೆಗೆದುಕೊಂಡವನು ಶಾಸನಬದ್ಧ ರೀತಿಯನ್ನು ಉಪಯೋಗಿಸಿ, ನಿಗಧಿಪಡಿಸಿದ ವೇಳೆಗೆ ಮುಂಚೆಯೇ ಬೆಲೆಯನ್ನು ಕೊಟ್ಟು, ತನ್ನ ಹೊಣೆಗಾರಿಕೆಯನ್ನು ಕಡಿಮೆ ಮಾಡಿಕೊಂಡು ಸಾಮಾನನ್ನು ಕೊಳ್ಳಬಹುದು.

ಬಾಡಿಗೆಗೆ ತೆಗೆದುಕೊಂಡವನು ಸಾಕಷ್ಟು ಹಣವನ್ನು ಪಾವತಿ ಮಾಡಿದಲ್ಲಿ ೧೨ ದಿನದ ಸೂಚನೆ ಕೊಟ್ಟು, ಯಾವುದೇ ದಂಡವಿಲ್ಲದೆ ಕರಾರನ್ನು ಕೊನೆಗಾಣಿಸಬಹುದು.

ಸಾಮಾನ್ಯ ಕರ್ತವ್ಯಲೋಪವಾದ ಪಕ್ಷದಲ್ಲಿ, ಬಾಡಿಗೆ ತೆಗೆದುಕೊಂಡವನು ಸಾಕಷ್ಟು ಹಣ ಪಾವತಿ ಮಾಡಿದ್ದರೆ, ಬಾಡಿಗೆಗೆ ಕೊಟ್ಟ ಸಾಮಾನನ್ನು ಬಾಡಿಗೆ ಕೊಟ್ಟವನು ವಶಪಡಿಸಿಕೊಳ್ಳಲಾಗುವುದಿಲ್ಲ. ಈ ಶಾಸನಬದ್ಧ ಹಣವು ಎಷ್ಟೆಂದು ಲೆಕ್ಕ ಮಾಡಲು ಒಂದು ಸೂತ್ರವನ್ನು ಕಾಯಿದೆಯಲ್ಲೇ ಕೊಟ್ಟಿರುತ್ತದೆ.

ಇಷ್ಟರ ಮೇಲೆ, ಬಾಡಿಗೆಗೆ ತೆಗೆದುಕೊಂಡವನು ಸಲ್ಲಬೇಕಾದ ಹಣವನ್ನು ಯಾವಾಗ ಪಾವತಿ ಮಾಡಿದರೂ ಬಾಡಿಗೆಗೆ ಕೊಟ್ಟವನು ಸಾಮಾನನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ.

ಬಾಡಿಗೆಗೆ ತೆಗೆದುಕೊಂಡವನು ಸಾಮಾನನ್ನು ಸರಿಯಾದ ರೀತಿಯಲ್ಲಿ ಕಾಪಾಡಬೇಕು. ಆ ಸಾಮಾನಿಗೆ ಯಾವುದೇ ಹಾನಿ ಉಂಟಾದರೂ ಆದರ ಒಡೆಯನಿಗೆ ವರದಿ ಒಪ್ಪಿಸಬೇಕು. ಈ ಕಾಯಿದೆಯು ಬಾಡಿಗೆಗೆ ತೆಗೆದು ಕೊಂಡವನಿಗೆ ಬಹಳಷ್ಟು ಸಂರಕ್ಷಣೆಯನ್ನು ಒದಗಿಸಿದೆ. ಈ ಸಂರಕ್ಷಣೆಯು ಹಿಂದೆ ಇರಲಿಲ್ಲ. ಸಾಮಾನಿನ ಒಡೆಯನಿಗೆ ಒಡೆತನದ ಶಕ್ತಿ ಹೆಚ್ಚಾಗಿರುತ್ತದೆ. ಆದ್ದರಿಂದ ಬಾಡಿಗೆಗೆ ತೆಗೆದುಕೊಂಡವನ ಸಂರಕ್ಷಣೆ ಅಗತ್ಯ.

******** **

ಭಾಗ-೨೭

ವಿದೇಶೀ ವಿನಿಮಯ ವಿನಿಯಮ (ನಿಯಂತ್ರಣ) ಕಾಯಿದೆ - ೧೯೪೭

(Foreign Exchange Regulation Act - 1947)

ವಿದೇಶೀ ವಿನಿಮಯ ವಿನಿಯಮ ಕಾಯಿದೆಯನ್ನು (ಫಾರೆನ್ ಎಕ್ಸ್ಚೇಂಜ್ ರೆಗ್ಯೂಲೇಷನ್ ಆ್ಯಕ್ಟ್) ೧೯೪೭ ರಲ್ಲಿ ಜಾರಿಗೆ ತರಲಾಯಿತು. ಇದರ ಮುಖ್ಯ ಉದ್ದೇಶ ಏನೆಂದರೆ, ಹಲವು ತರಹದ ಹಣ ಸಂದಾಯ ನಿಯಂತ್ರಣ, ವಿದೇಶೀ ವಿನಿಮಯ ರಕ್ಷಾಪತ್ರ ವ್ಯವಹಾರ, ವಿದೇಶೀ ವಿನಿಮಯವನ್ನು ಹಾನಿ ಮಾಡುವ ಪರೋಕ್ಷ ವ್ಯವಹಾರಗಳ ನಿಯಂತ್ರಣ, ಕರೆನ್ಸಿ ಮತ್ತು ಬೆಳ್ಳಿ ಬಂಗಾರದ ಆಮದು ಮತ್ತು ರಫ್ತು ಇವುಗಳನ್ನು ನಿಯಂತ್ರಣ ಮಾಡುವುದು, ದೇಶದ ಆರ್ಥಿಕ ಅಭಿವೃದ್ಧಿಯ ಹಿತಾಸಕ್ತಿಗಾಗಿ ಸರಿಯಾದ ವಿನಿಮಯದ ಉಪಯೋಗ ಮುಂತಾದವು.

ಈ ಕಾಯಿದೆಯು ಶಾಸನದ ಪುಸ್ತಕದಲ್ಲಿ ಇಪ್ಪತ್ತು ವರ್ಷಗಳಿಂದ ಇದ್ದರೂ ಸಹ, ಈ ವಿಷಯದಲ್ಲಿ ಬಹಳಷ್ಟು ತೀರ್ಪುಗಳು ಇಲ್ಲ. ಹೀಗೆ ಏಕೆಂದರೆ, ಸರ್ಕಾರವು ವಿದೇಶೀ ವಿನಿಮಯ ಅಪರಾಧಿಗಳ ವಿರುದ್ಧ ಈಚೆಗೆ ಭರದಿಂದ ಕ್ರಮ ಕೈಗೊಳ್ಳಲು ಆರಂಭಿಸಿದೆ. ಆದರೆ ೧೯೬೪ ರಿಂದ ಈ ಕಾಯಿದೆಯ ಹಲವಾರು ವರ್ಗಗಳನ್ನು ಸಡಿಲಗೊಳಿಸಲಾಗಿದೆ. ಈಚೆಗೆ ಎಷ್ಟು ಸಂಶಯವುಳ್ಳ ವ್ಯವಹಾರಗಳು ಈ ಕಾಯಿದೆಯನ್ನು ಉಲ್ಲಂಘಿಸುತ್ತವೆ? ಎಂಬುದನ್ನು ಕೆಲವು ವರ್ಷಗಳಿಂದ ನ್ಯಾಯಾಲಯಗಳು ತೀರ್ಮಾನಿಸುತ್ತಿವೆ. ಇಂತಹ ತೀರ್ಪುಗಳಿಗೆ ಕಾಯುವುದು ಮತ್ತು ಶಾಸನದಲ್ಲಿ ಉಪಯೋಗಿಸಿದ ಪದಗಳ ನ್ಯಾಯಿಕ ಅರ್ಥವಿವರಣೆಯನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕ.

ಈ ಕಾಯಿದೆಯ ಮೂಲ ಉದ್ದೇಶವೇನೆಂದರೆ ಭಾರತೀಯ ರಿಜರ್ವ್ ಬ್ಯಾಂಕಿನ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ವಿದೇಶೀ ವಿನಿಮಯ ವ್ಯವಹಾರಗಳು ಸರಿಯಾಗಿ ನಡೆಯುತ್ತವೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಈ ಕಾಯಿದೆಯು ಭಾರತದ ಎಲ್ಲಾ ಪ್ರಜೆಗಳಿಗೂ ಅಂದರೆ ಭಾರತದಲ್ಲಿ ವಾಸಿಸುವ

ಅಥವಾ ವಿದೇಶದಲ್ಲಿ ವಾಸಿಸುತ್ತಿರುವ, ಭಾರತದ ಎಲ್ಲಾ ಕಂಪನಿಗಳು ಮತ್ತು ನಿಗಮಗಳು (ಬಾಡಿ ಕಾರ್ಪೊರೇಟ್ ನೋಂದಾಯಿಸಿರುವುದು ಭಾರತದಲ್ಲಿ ನಿಗಮಿತವಾಗಿರುವ) ಮತ್ತು ಅನ್ಯದೇಶದಲ್ಲಿರುವ ಇದರ ಶಾಖೆಗಳಿಗೂ ಅನ್ವಯವಾಗುತ್ತದೆ. ಈ ಕಾಯಿದೆಯು ವಿದೇಶೀ ಪ್ರಜೆಗಳು: ಭಾರತದಲ್ಲಿ ವ್ಯವಹಾರ ನಡೆಸುತ್ತಿರುವ ಅಥವಾ ಭಾರತದಲ್ಲೇ ಇರುವ ವಿದೇಶಿ ಕಂಪನಿಗಳು ಖಾಯಂ ಆಗಿ ಆಗಲೀ ಅಥವಾ ಸ್ವಲ್ಪ ದಿನಕ್ಕೇ ಆಗಲೀ ಇರುವ ಕಂಪನಿಗಳಿಗೂ ಅನ್ವಯಿಸುತ್ತದೆ. ವಿದೇಶೀ ಪ್ರಯಾಣಿಕರಿಗೂ ಸಹ ಈ ಕಾಯಿದೆ ಅನ್ವಯಿಸುತ್ತದೆ. ಈ ಕಾಯಿದೆಯು ಒಬ್ಬ ವ್ಯಕ್ತಿಯ (ರೆಸಿಡೆನ್ಸಿಯಲ್ ಸ್ಟೇಟಸ್) ವಾಸಸ್ಥಳದ ಸ್ಥಾನಮಾನದ ಪ್ರಕಾರ ಅನ್ವಯಿಕವಾಗುತ್ತದೆ. ವರ್ಗ ೨ (ಅ) ಭಾರತದಲ್ಲಿ ವಾಸವಾಗಿರುವವರು ಎಂದರೆ ಯಾರು ? ಎಂಬುದನ್ನು ವಿವರಿಸುತ್ತದೆ.

"ವ್ಯಕ್ತಿಯು ಭಾರತದಲ್ಲಿ ನಿವಾಸಿ" ಎಂದರೆ ಕೆಳಗೆ ಹೇಳಿರುವ ಮೂರು ಅಂಶಗಳಲ್ಲಿ ಯಾವುದನ್ನಾದರೂ ಪೂರೈಸಿದರೆ, ಆಗ ಅವನು ಭಾರತದಲ್ಲಿ ನಿವಾಸಿ ಎಂದು ಹೇಳಬಹುದು.

(i) ಅವನು ೨೫ ನೇ ಮಾರ್ಚ್ ೧೯೭೪ ರ ನಂತರ ಭಾರತದಲ್ಲಿ ವಾಸ ಮಾಡುತ್ತಿರಬೇಕು. ಆದರೆ, ಅವನು ಭಾರತದ ಹೊರಗೆ ಹೋಗಿದ್ದರೆ ಅಥವಾ ವಿದೇಶದಲ್ಲಿ ವಾಸ ಮಾಡಿದ್ದರೆ, ಅಂತಹ ಸಮಯದಲ್ಲಿ ಅಂದರೆ

ಅ) ವಿದೇಶದಲ್ಲಿ ಕೆಲಸ ತೆಗೆದುಕೊಳ್ಳಲು ಅಥವಾ

ಆ) ವಿದೇಶದಲ್ಲಿ ಯಾವುದಾದರೂ ವ್ಯವಹಾರ ಅಥವಾ ವೃತ್ತಿ ನಡೆಸಲು ಅಥವಾ

ಇ) ಬೇರೆ ಯಾವುದೇ ಉದ್ದೇಶಕ್ಕಾಗಿ ವಿದೇಶಕ್ಕೆ ಹೋಗಿದ್ದರೆ, ಅಂತಹಾ ಸಮಯದಲ್ಲಿ ಅವನು ಯಾವ ಉದ್ದೇಶಕ್ಕಾಗಿ ಅನಿಶ್ಚಿತ ಸಮಯ ಭಾರತದಿಂದ ಹೊರಗಿರುವುದನ್ನು ಸೂಚಿಸಿದರೆ, ಅಂತಹಾ ಅವಧಿಯಲ್ಲಿ ಅವನು ಭಾರತದಲ್ಲಿ ನಿವಾಸಿಯಾಗಿರುವುದಿಲ್ಲ.

(ii) ಭಾರತ ನಿವಾಸಿಯು ಮೇಲೆ ಹೇಳಿದ ಉಪಖಂಡ ೧ ರ (ಅ) ಮತ್ತು

(ಇ) ನಂತೆ ಯಾವುದೇ ಸಂದರ್ಭದಲ್ಲಿ ಭಾರತದ ನಿವಾಸಿಯಾಗಿ ನಿಂತು ಹೋಗಿದ್ದರೆ, ನಂತರ ಅವನು ಭಾರತಕ್ಕೆ ಹಿಂದಿರುಗಿದರೆ ಅಥವಾ ವಾಸ ಮಾಡಲು ಇಚ್ಛಿಸಿದರೆ ಆ ಸಮಯದಲ್ಲಿ ಅವನು

(ಅ) ಭಾರತದಲ್ಲಿ ಯಾವುದೇ ಕೆಲಸವನ್ನು ಮಾಡಲು ಅಥವಾ ಕೆಲಸ ತೆಗೆದುಕೊಳ್ಳಲು ಅಥವಾ

(ಆ) ಭಾರತದಲ್ಲಿ ಯಾವುದಾದರೂ ವ್ಯವಹಾರ ಅಥವಾ ವೃತ್ತಿ ನಡೆಸಲು,

(ಇ) ಬೇರೆ ಇತರ ಯಾವುದಾದರೂ ಉದ್ದೇಶಕ್ಕಾಗಿ ಮತ್ತು ಈ ಅನಿಶ್ಚಿತ ಅವಧಿಯಲ್ಲಿ ಭಾರತದಲ್ಲಿ ವಾಸಮಾಡುವ ಉದ್ದೇಶವನ್ನು ಸೂಚಿಸುವ ಸನ್ನಿವೇಶಗಳಲ್ಲಿ, ಭಾರತದ ನಿವಾಸಿಯಾಗುತ್ತಾನೆ.

(iii) ಭಾರತದ ಪ್ರಜೆಯು ೨೫ ನೇ ಮಾರ್ಚ್ ೧೯೭೪ ರ ನಂತರ ಭಾರತದಲ್ಲಿ ವಾಸವೇ ಮಾಡಿಲ್ಲದಿದ್ದರೆ, ಅಂತಹಾ ವ್ಯಕ್ತಿಯು ಭಾರತಕ್ಕೆ ಬಂದರೆ ಅಥವಾ ಕೆಳಗೆ ಹೇಳಿದ ಯಾವುದೇ ಉದ್ದೇಶಕ್ಕಾಗಿ ಭಾರತದಲ್ಲಿ ವಾಸ ಮಾಡಿದರೆ ಅವನು ಭಾರತದ ನಿವಾಸಿ ಎಂದು ಪರಿಗಣಿಸಲಾಗುತ್ತದೆ.

(ಅ) ಭಾರತದಲ್ಲಿ ಕೆಲಸಕ್ಕಾಗಿ ಅಥವಾ ಕೆಲಸ ತೆಗೆದುಕೊಳ್ಳಲು,

(ಆ) ಭಾರತದಲ್ಲಿ ವ್ಯವಹಾರ ಅಥವಾ ವೃತ್ತಿ ನಡೆಸಲು,

(ಇ) ಭಾರತದಲ್ಲಿ ವಾಸವಾಗಿರುವ ತನ್ನ ಹೆಂಡತಿ ಅಥವಾ ಗಂಡನ ಜೊತೆಗೆ ವಾಸ ಮಾಡಲು,

(ಈ) ಮೇಲೆ ಹೇಳಿದ (ಅ) (ಆ) (ಇ) ಉದ್ದೇಶಗಳನ್ನು ಬಿಟ್ಟು ಬೇರೆ ಯಾವುದೇ ಉದ್ದೇಶಕ್ಕಾಗಿ, ಅದಲ್ಲದೆ ಅವನು ಭಾರತಕ್ಕೆ ಹಿಂತಿರುಗಿ ಅಥವಾ ಭಾರತದಲ್ಲಿ ಅನಿಶ್ಚಿತ ಅವಧಿಯವರೆಗೆ ವಾಸಿಸಲು ತನ್ನ ಉದ್ದೇಶವನ್ನು ಸೂಚಿಸಿದರೆ ಆಗಲೂಸಹ ಭಾರತದ ನಿವಾಸಿಯಾಗುತ್ತಾನೆ.

ವಿದೇಶೀ ರಾಷ್ಟ್ರೀಯ :

ವಿದೇಶೀ ರಾಷ್ಟ್ರೀಯನು ಕೆಳಗೆ ಕೊಟ್ಟಿರುವ ಯಾವುದೇ ಉದ್ದೇಶಕ್ಕಾಗಿ ಭಾರತಕ್ಕೆ ಬಂದರೆ ಅಥವಾ ಭಾರತದಲ್ಲಿ ವಾಸಿಸಿದರೆ ಆಗ ಅವನನ್ನು ಭಾರತದ

ನಿವಾಸಿ ಎಂದು ಪರಿಗಣಿಸಲಾಗುತ್ತದೆ.

(ಅ) ಭಾರತದಲ್ಲಿ ಕೆಲಸ ಮಾಡಲು ಅಥವಾ ಕೆಲಸ ತೆಗೆದು ಕೊಳ್ಳಲು,

(ಆ) ಭಾರತದಲ್ಲಿ ವೃತ್ತಿ ಅಥವಾ ವ್ಯವಹಾರ ನಡೆಸಲು,

(ಇ) ಭಾರತದಲ್ಲಿ ವಾಸವಾಗಿರುವ ತನ್ನ ಗಂಡ - ಹೆಂಡತಿ ಜೊತೆ ವಾಸಮಾಡಲು ಬಂದರೆ,

(ಈ) ಮೇಲೆ ವಿವರಿಸಿರುವ (ಅ) (ಆ) (ಇ) ಇವುಗಳನ್ನು ಬಿಟ್ಟು ಬೇರೆ ಯಾವುದೇ ಉದ್ದೇಶಕ್ಕಾಗಿ ಬಂದರೆ, ಅವನು ಅನಿಶ್ಚಿತ ಅವಧಿಯವರೆಗೆ ಭಾರತಕ್ಕೆ ಬಂದ ಅಥವಾ ವಾಸಿಸುವ ಉದ್ದೇಶವನ್ನು ಸೂಚಿಸಿದ್ದರೆ-

ಮೇಲೆ ಅ, ಆ, ಇ ಮತ್ತು ಈ ನಲ್ಲಿ ಹೇಳಿದ ಕಾರಣಗಳಲ್ಲಿ ಭಾರತ ನಿವಾಸಿ ಎಂದು ಕರೆಯಲಾಗುತ್ತದೆ. ಅಂತಹ ವ್ಯಕ್ತಿಯು ವಿದೇಶದಲ್ಲಿ ವಾಸವಾಗಿರುವ ಅವಧಿಯಲ್ಲಿ ಅವನನ್ನು ಭಾರತದಲ್ಲಿ ಅನಿವಾಸಿ ಎಂದು ಭಾವಿಸಲಾಗುತ್ತದೆ (ನಾನ್ ರೆಸಿಡೆಂಟ್).

ಭಾರತದ ಹೊರಗೆ ವಾಸವಾಗಿರುವ ವ್ಯಕ್ತಿ :

ಭಾರತದಲ್ಲಿ ವಾಸಿಸದೆ ಇರುವ ವ್ಯಕ್ತಿಯನ್ನು ಭಾರತದ ಹೊರಗೆ ವಾಸಿಸುತ್ತಿರುವ ವ್ಯಕ್ತಿ ಎಂದು ಭಾವಿಸಲಾಗುತ್ತದೆ.

ಭಾರತದಲ್ಲಿ ವಾಸವಾಗಿರುವ ವ್ಯಕ್ತಿ ಎಂಬ ಪದಕ್ಕೆ ಅರ್ಥವನ್ನು ನಿಷ್ಕೃಷ್ಟ ಪದಗಳಲ್ಲಿ ವ್ಯಾಖ್ಯಾನಿಸಿಲ್ಲ ಎಂಬುದನ್ನು ತಿಳಿಯಬಹುದು.

ಒಬ್ಬ ವ್ಯಕ್ತಿಯು ಭಾರತದಲ್ಲಿ ವಾಸವಾಗಿದ್ದಾನೆಯೇ ಅಥವಾ ವಿದೇಶದಲ್ಲಿ ವಾಸವಾಗಿದ್ದಾನೆಯೇ ಎಂಬುದನ್ನು ನಿರ್ಧರಿಸಲು ವ್ಯಕ್ತಿಯ ವಾಸದ ಉದ್ದೇಶವು ಅತಿ ಮುಖ್ಯವಾದುದು. ಈ ವ್ಯಾಖ್ಯಾನವನ್ನು ಆದಾಯ ತೆರಿಗೆ ಕಾಯಿದೆಯ ೬ ನೇ ವರ್ಗಕ್ಕೆ ಹೋಲಿಸಿದರೆ "ನಿವಾಸಿ" ಎಂಬ ಪದಕ್ಕೆ ನಿಷ್ಕೃಷ್ಟವಾದ ಅರ್ಥ ಸಿಗುತ್ತದೆ. ಒಬ್ಬ ಮನುಷ್ಯನ ನಿವಾಸವು ಅವನು ಭಾರತದಲ್ಲಿ ಎಷ್ಟು ದಿನಗಳು ವಾಸಿಸುತ್ತಾನೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ಕೆಲವಾರು ಸಂದರ್ಭಗಳಲ್ಲಿ ವಿದೇಶೀ ವಿನಿಮಯ ವಿನಿಯಮ ಕಾಯಿದೆಯು ಭಾರತದ ಹೊರಗೆ ವಾಸವಾಗಿರುವ ವಿದೇಶೀ ರಾಷ್ಟ್ರೀಯರಿಗೆ ಅನ್ವಯಿಕವಾಗುತ್ತದೆ.

ಉದಾ: (ಅ) ಒಬ್ಬ ವಿದೇಶೀ ರಾಷ್ಟ್ರೀಯನು ಭಾರತಕ್ಕೆ ಪ್ರವಾಸ ಬಂದರೆ ಅವನು ಭಾರತದಲ್ಲಿ ತನ್ನ ಪ್ರವಾಸದ ಖರ್ಚು ಮತ್ತು ವೆಚ್ಚವನ್ನು ವಿದೇಶೀ ವಿನಿಮಯದಲ್ಲಿ ಮಾಡುವುದು ಅವನ ಕರ್ತವ್ಯ (ವರ್ಗ ೧೫).

(ಆ) ಭಾರತದಲ್ಲಿ ವಿದೇಶೀ ರಾಷ್ಟ್ರೀಯನು ವ್ಯವಹಾರ ಮಾಡಲು ಕೆಲಸ ತೆಗೆದುಕೊಳ್ಳುವುದು ಮುಂತಾದುವಕ್ಕೆ ಭಾರತದ ರಿಜರ್ವ್‌ಬ್ಯಾಂಕಿನಿಂದ ಮುಂಚೆಯೇ ಅಪ್ಪಣೆ ಪಡೆದಿರಬೇಕು (ವರ್ಗ ೩೦).

(ಇ) ಭಾರತದ ರಿಜರ್ವ್ ಬ್ಯಾಂಕಿನ ಅನುಮತಿ ಇಲ್ಲದೆ ವಿದೇಶೀ ರಾಷ್ಟ್ರೀಯರು ಭಾರತದಲ್ಲಿ ಯಾವುದೇ ಸ್ಥಿರ ಆಸ್ತಿಯನ್ನು ಹೊಂದುವುದಕ್ಕೆ ಪರಿಬಂಧಕಗಳಿವೆ (ವರ್ಗ ೩೧).

ಹಣ ಬದಲಾಯಿಸುವವ :

ವಿದೇಶೀ ಕರೆನ್ಸಿಯಲ್ಲಿ ನಿಗದಿ ಪಡಿಸಿದ ಅವಧಿಯಲ್ಲಿ ವ್ಯವಹಾರ ಮಾಡಲು ಅಧಿಕೃತಗೊಳಿಸಿರುವ ವ್ಯಕ್ತಿ [ವರ್ಗ ೨ (ಎಂ)].

ಅಧಿಕೃತ ವ್ಯಾಪಾರಿ :

ವಿದೇಶೀ ವಿನಿಮಯದಲ್ಲಿ ವ್ಯವಹಾರ ಮಾಡಲು ಆ ಅವಧಿಯಲ್ಲಿ ನೇಮಿಸಿರುವ ವ್ಯಾಪಾರಿ (೨ ಎಚ್).

ಕರೆನ್ಸಿ :

ಇದು ಚಲಾವಣೆಯಲ್ಲಿರುವ ನೋಟುಗಳು, ನಾಣ್ಯ, ಬ್ಯಾಂಕ್ ನೋಟುಗಳು, ಅಂಚೆ ನೋಟುಗಳು, ಅಂಚೆಯ ಆದೇಶ (ಪೋಸ್ಟಲ್ ಆರ್ಡರ್‍ಸ್), ಪ್ರಯಾಣಿಕರ ಚೆಕ್ಕುಗಳು (ಟ್ರಾವಲರ್‍ಸ್ ಚೆಕ್ಸ್), ಹಣದ ಆದೇಶ (ಮನಿ ಆರ್ಡರ್‍ಸ್), ಚೆಕ್ಕುಗಳು, ಕರಡುಗಳು (ಡ್ರಾಫ್ಟ್ಸ್), ಸಾಲದ ಪತ್ರ (ಲೆಟರ್ ಆಫ್ ಕ್ರೆಡಿಟ್), ವಿನಿಮಯ ಪತ್ರ (ಬಿಲ್ ಆಫ್ ಎಕ್ಸ್ಚೇಂಜ್), ಪ್ರಾಮಿಸರಿ ನೋಟುಗಳನ್ನು ಒಳಗೊಂಡಿದೆ.

ವಿದೇಶೀ ಕರೆನ್ಸಿ :

ಭಾರತದ ಕರೆನ್ಸಿಯನ್ನು ಬಿಟ್ಟು, ಬೇರೆ ಯಾವುದಾದರೂ ಕರೆನ್ಸಿ.

ವಿದೇಶೀ ವಿನಿಮಯ :

ವಿದೇಶೀ ಕರೆನ್ಸಿಯು (ಅ) ಎಲ್ಲಾ ಠೇವಣಿಗಳು ವಿದೇಶೀ ಕರೆನ್ಸಿಯಲ್ಲಿ ಸಂದಾಯ ಮಾಡಬೇಕಾದ ಸಾಲ ಮತ್ತು ಬಾಕಿ ಮತ್ತು ಬೇರೆ ಕರಡು (ಡ್ರಾಫ್ಟ್ಸ್) ಪ್ರಯಾಣಿಕರ ಚೆಕ್ಕುಗಳು, ಸಾಲದ ಪತ್ರಗಳು ಮತ್ತು ವಿನಿಮಯ ಪತ್ರ ಭಾರತದ ಕರೆನ್ಸಿಯಲ್ಲಿ ಇದ್ದು ವಿದೇಶೀ ಕರೆನ್ಸಿಯಲ್ಲಿ ಸಂದಾಯ ಮಾಡುವುದು.

(ಆ) ಧನಾದೇಶಿತನಿಂದ ಅಥವಾ ಧಾರಕನ ಆಯ್ಕೆಯ ಪ್ರಕಾರ, ಭಾರತದ ಕರೆನ್ಸಿ ಅಥವಾ ವಿದೇಶೀ ಕರೆನ್ಸಿ ಅಥವಾ ಭಾಗಶಃ ಒಂದು ಮತ್ತು ಭಾಗಶಃ ಇನ್ನೊಂದು ಕರೆನ್ಸಿಯಲ್ಲಿ ಸಂದಾಯ ಮಾಡಬೇಕಾಗಿರುವ ಯಾವುದೇ ಪತ್ರ ಇದನ್ನು ಒಳಗೊಂಡಿರುತ್ತದೆ ವರ್ಗ ೨ (ಎಚ್).

ಸೆಕ್ಯೂರಿಟಿ :

ಸೆಕ್ಯೂರಿಟಿ ಎಂದರೆ ಷೇರುಗಳು, ಸ್ಟಾಕುಗಳು, ಸಾರ್ವಜನಿಕ ಋಣ ಕಾಯಿದೆಯ ೧೯೪೪ (೧೮ ಆಫ್ ೧೯೪೪) ಪ್ರಕಾರ, ಡಿಬೆಂಚರು ಸ್ಟಾಕುಗಳು, ಸರ್ಕಾರದ ಸೆಕ್ಯುರಿಟಿಗಳು, ಪ್ರಮಾಣಪತ್ರ ಸೆಕ್ಯೂರಿಟಿ ಅಥವಾ ಠೇವಣಿಗಳಿಗೆ ಸಂಬಂಧಿಸಿದ ಠೇವಣಿ ರಸೀದಿ ಮತ್ತು ಸೆಕ್ಯೂರಿಟಿಗೆ ಸ್ವಾಮ್ಯವನ್ನು ಒಳಗೊಂಡ ಪ್ರಮಾಣ ಪತ್ರ, ಯೂನಿಟ್ ಟ್ರಸ್ಟಿನ ಘಟಕ ಅಥವಾ ಉಪಘಟಕಗಳ ಸರ್ಕಾರಿ ಪ್ರಾಮಿಸರಿ ನೋಟನ್ನು ಬಿಟ್ಟು ಬೇರೆ ಪ್ರಾಮಿಸರಿ ನೋಟುಗಳು ಅಥವಾ ವಿನಿಮಯ ಪತ್ರಗಳನ್ನು ಒಳಗೊಂಡಿರುವುದಿಲ್ಲ.

ವಿದೇಶೀ ಸೆಕ್ಯೂರಿಟಿ :

ಭಾರತದಲ್ಲಿ ಅಲ್ಲದೆ ಬೇರೆ ಕಡೆ ಸೃಷ್ಟಿಸಿದ ಅಥವಾ ಕೊಟ್ಟ ಸೆಕ್ಯೂರಿಟಿ, ಅದರ ಮೇಲೆ ಅಸಲು ಅಥವಾ ಬಡ್ಡಿಯನ್ನು ಯಾವುದೇ ವಿದೇಶೀ ಕರೆನ್ಸಿಯಲ್ಲಿ ಭಾರತದಲ್ಲಿ ಬಿಟ್ಟು ಬೇರೆ ಎಲ್ಲಿಯಾದರೂ ಸಂದಾಯ ಮಾಡಬೇಕಾದ ಸೆಕ್ಯೂರಿಟಿ [ವರ್ಗ ೨ '(೧)].

ಚಿನ್ನ :

ಇದು ಕಾನೂನು ಸಮ್ಮತ ಟೆಂಡರು ಇರುವ ಅಥವಾ ಇಲ್ಲದಿರುವ ಚಿನ್ನ, ನಾಣ್ಯದ ರೂಪದಲ್ಲಿರುವ ಚಿನ್ನ ಅಥವಾ ಶುದ್ಧೀಕರಿಸಿದ ಅಥವಾ ಇಲ್ಲದಿರುವ ಚಿನ್ನ, ಬೆಳ್ಳಿಯ ಗಟ್ಟಿ ಅಥವಾ ಫಾಳ ಮತ್ತು ಪೂರ್ತಿ ಅಥವಾ ಹೆಚ್ಚು ಭಾಗ ಚಿನ್ನದಿಂದ ತಯಾರಿಸಲ್ಪಟ್ಟ ಒಡವೆ ಅಥವಾ ವಸ್ತುಗಳನ್ನು ಒಳಗೊಂಡಿರುತ್ತದೆ.

ವಿವರಣೆ :

ಚಿನ್ನವನ್ನು ಪೂರ್ತಿಯಾಗಿ ಅಥವಾ ಚಿನ್ನದ ಅಂಶ ಹೆಚ್ಚಾಗಿರುವುದು ಎಂದು ಭಾವಿಸಿರುವ ಯಾವುದೇ ಆಭರಣದ, ಮೌಲ್ಯವು ರಿಜರ್ವ್ ಬ್ಯಾಂಕ್ ಗೆಜೆಟ್‌ನಲ್ಲಿ ಕಾಲಕಾಲಕ್ಕೆ ಪ್ರಕಟಿಸಿದ ಆಭರಣ ಅಥವಾ ವಸ್ತುವಿನ ಮೌಲ್ಯಕ್ಕಿಂತಾ ಹೆಚ್ಚಿರಬೇಕು (೪೦ ಪರ್ಸೆಂಟ್).

ಬೆಳ್ಳಿ :

ಇದು ಬೆಳ್ಳಿ ಗಟ್ಟಿ ಅಥವಾ ಫಾಳ ಶುದ್ಧಪಡಿಸಿದ ನಂತರ ಯಾವುದೇ ತಯಾರಿಕಾ ಕ್ರಮವನ್ನೊಳಗೊಂಡಿರದ ಬೆಳ್ಳಿಯ ಹಾಳೆಗಳು ಮತ್ತು ತಟ್ಟೆಗಳು ಮತ್ತು ಭಾರತದಲ್ಲಿಯಾಗಲೀ ಅಥವಾ ಬೇರೆ ದೇಶದಲ್ಲಿಯಾಗಲೀ ಕಾನೂನು ಸಮ್ಮತ ಚಲಾವಣೆಯಲ್ಲದ, ಚಾಲ್ತಿಯಲ್ಲಿರದ ಬೆಳ್ಳಿ ನಾಣ್ಯ ಮತ್ತು ಪೂರ್ತಿಯಾಗಿ ಅಥವಾ ಮುಖ್ಯವಾಗಿ ಬೆಳ್ಳಿಯಿಂದ ಮಾಡಿರುವ ವಸ್ತು ಅಥವಾ ಆಭರಣವನ್ನು ಒಳಗೊಂಡಿದೆ [ವರ್ಗ ೨ (ವಿ)].

ಭಾರತೀಯ ಸೀಮಾ ಸುಂಕ ಸಮುದ್ರ ಭಾಗ

(ಇಂಡಿಯನ್ ಕಸ್ಟಂಸ್ ವಾಟರ್ಸ್)

ಭಾರತದ ಸಮುದ್ರ ತೀರದಿಂದ ಯುಕ್ತ ಮೂಲ ರೇಖೆಯಿಂದ ಹನ್ನೆರಡು ನಾವಿಕ ಮೈಲುಗಳನ್ನು ಮತ್ತು ಉಪಸಾಗರ, ಕೊಲ್ಲಿ, ಬಂದರು, ಕೊರಕಲು ಮತ್ತು ಉಬ್ಬರವಿಳಿತದ ನದಿಗಳನ್ನು ಒಳಗೊಂಡಿದೆ.

ಒಡೆಯ :

ಯಾವುದೇ ವಿಷಯದಲ್ಲಿ ಒಬ್ಬ ಮನುಷ್ಯನು ತನ್ನಲ್ಲಿರುವ ವಸ್ತುವನ್ನು ಮಾರಲು ಅಥವಾ ವರ್ಗಾವಣೆ ಮಾಡಲು ವಸ್ತುವನ್ನು ತನ್ನ ಅಭಿರಕ್ಷೆಯಲ್ಲಿ

ಇಟ್ಟುಕೊಳ್ಳಲು ಅಥವಾ ಸ್ವೀಕರಿಸಲು ಅರ್ಹತೆ ಉಳ್ಳವನನ್ನು ಆ ವಸ್ತುವಿನ ಒಡೆಯ ಎಂದು ಕರೆಯಬಹುದು. ಇದರಲ್ಲಿ ನ್ಯಾಸಧಾರಿಯೂ ಸಹ ಒಬ್ಬನಾಗಿರುತ್ತಾನೆ.

ಆಡಳಿತ ಸ್ಥಾಪನೆ :

ಸಾಮಾನ್ಯವಾಗಿ ವಿದೇಶೀ ವಿನಿಮಯ ಕಾಯಿದೆಯ ಆಡಳಿತವನ್ನು ರಿಜರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರವು ಕೈಗೊಂಡಿದೆ. ಆದರೆ, ಈ ಕಾಯಿದೆಯ ಉಪಬಂಧಗಳನ್ನು ಕೇಂದ್ರ ಹಣಕಾಸು ಮಂತ್ರಾಲಯದ ಮೇರೆಗೆ ವಿದೇಶೀ ವಿನಿಮಯದ ಕಾರ್ಯಾಚರಣೆ ನಿರ್ದೇಶಕ ಅಧಿಕಾರಿಗಳು ಜಾರಿಗೊಳಿಸುತ್ತಾರೆ. ಈ ಕಾರ್ಯಾಚರಣೆ ನಿರ್ದೇಶನವು ನಿರ್ದೇಶಕರು, ವಿಶೇಷ ನಿರ್ದೇಶಕರು ಇಂತಹ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ಈ ಅಧಿಕಾರಿಗಳಿಗೆ ನ್ಯಾಯ ನಿರ್ಣಯ ಮಾಡುವ ಅಧಿಕಾರ ಇರುತ್ತದೆ. ಪ್ರತಿಯೊಬ್ಬ ಅಧಿಕಾರಿಯ ಅಧಿಕಾರ ಮಟ್ಟವು ಅವನ ಮೌಲ್ಯಾಧಾರದ ಅಧಿಕಾರ ವ್ಯಾಪ್ತಿಯನ್ನು ನಿರ್ಣಯಿಸುತ್ತದೆ.

ಸಹಾಯಕ ನಿರ್ದೇಶಕರು ರೂ. ೨೫,೦೦೦.೦೦ ಗಳ ವರೆಗೆ,

ಉಪನಿರ್ದೇಶಕರು ರೂ. ೨೫,೦೦೦.೦೦ ರಿಂದ ೧,೦೦,೦೦೦.೦೦ ದವರೆಗೆ,

ಅಡಿಷನಲ್ ನಿರ್ದೇಶಕರು ರೂ. ೧, ೦೦,೦೦೧.೦೦ ರಿಂದ ೫,೦೦,೦೦೦.೦೦,

ವಿಶೇಷ ನಿರ್ದೇಶಕರು : ನಿರ್ದೇಶಕರಿಗೆ ಯಾವುದೇ ಪರಿಮಿತಿ ಇರುವುದಿಲ್ಲ.

ಈ ಕಾಯಿದೆಯ ಹಲವು ಉಪಬಂಧಗಳ ಆಡಳಿತವನ್ನು ಸೀಮಾ ಸುಂಕ ಇಲಾಖೆಯು (ಕಸ್ಟಂಸ್ ಡಿಪಾರ್ಟ್‌ಮೆಂಟ್) ನಡೆಸುತ್ತದೆ. ಉದಾ : ವರ್ಗ ೧೩ ಕರೆನ್ಸಿ ಮತ್ತು ಬೆಳ್ಳಿ ಬಂಗಾರದ ಆಮದು - ರಫ್ತು ಇದಕ್ಕೆ ಸಂಬಂಧಿಸಿದ್ದು, ವರ್ಗ ೧೮ (೧) ಎ ನಿಯಮಿಸಿದ ಘೋಷಣೆಗಳನ್ನು ಮಾಡದೆ ಸರಕುಗಳ ರಫ್ತುಗಳ ಪ್ರತಿಬಂಧನೆಗೆ ಸಂಬಂಧಿಸಿದ್ದು, ವರ್ಗ ೧೯ (೧) ಎ ಭಾರತದ ರಿಜರ್ವ್ ಬ್ಯಾಂಕಿನ ಅನುಮತಿ ಇಲ್ಲದೆ ವಿದೇಶಕ್ಕೆ ಯಾವುದೇ ಸೆಕ್ಯೂರಿಟಿಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸುತ್ತದೆ.

ವರ್ಗ ೫೦ ರ ಪ್ರಕಾರ ಗರಿಷ್ಟ ದಂಡವು ಅಪರಾಧಕ್ಕೆ ನಿಯಮಿಸಿದ ಮೊಬಲಗಿನ ಐದರಷ್ಟು ಅಥವಾ ಐದು ಸಾವಿರ ರೂಪಾಯಿಯಾಗಿದ್ದು, ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ವಿಧಿಸಲಾಗುತ್ತಿದೆ. ದಂಡ ವಿಧಿಸಿದ ಆದೇಶದ

ಮೇಲೆ ಅಪೀಲು ಮಂಡಳಿಗೆ ಅಪೀಲನ್ನು ಹಾಕಬಹುದು. ಅಪೀಲು ಮಂಡಳಿಯ ಆದೇಶದ ಮೇಲೆ ಕಾನೂನು ವಿಷಯದಲ್ಲಿ ಮಾತ್ರ ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಬಹುದು. ವರ್ಗ ೫೦ ರ ಪ್ರಕಾರ ಈ ಕಾಯಿದೆ ಉಲ್ಲಂಘಿಸಿದ ಅಪರಾಧಿಗಳನ್ನು ಪ್ರಾಸಿಕ್ಯೂಟ್ ಮಾಡಬಹುದು.

ಹಣವನ್ನು ಬದಲಾಯಿಸುವವ ಮತ್ತು ಅಧಿಕೃತ ವ್ಯಾಪಾರಿ (ಮನಿ ಚೇಂಜರ್ ಆ್ಯಂಡ್ ಆಥರೈಸ್ಡ್ ಡೀಲರ್)

ಭಾರತದ ರಿಜರ್ವ್ ಬ್ಯಾಂಕು ಈ ಕಾಯಿದೆಯ ವರ್ಗ ೬ ಮತ್ತು ೭ ರ ಆಧಾರದ ಮೇಲೆ ಹಣ ಬದಲಾಯಿಸುವವ ಮತ್ತು ಅಧಿಕೃತ ವ್ಯಾಪಾರಿಯನ್ನು ನೇಮಕ ಮಾಡಬಹುದು. ಅಧಿಕೃತ ವ್ಯಾಪಾರಿಯಾಗುವುದಕ್ಕೆ ಬ್ಯಾಂಕುಗಳು ಮಾತ್ರ ಅರ್ಹ. ಅಧಿಕೃತ ವ್ಯಾಪಾರಿಗಳು ವಿದೇಶೀ ಕರೆನ್ಸಿಯನ್ನು ಬದಲಾಯಿಸಿ ಅದರ ಬದಲು ರೂಪಾಯಿಯನ್ನು ಕೊಡುವ ಶಕ್ತಿ ಹೊಂದಿರುತ್ತಾರೆ. ಈ ಹಕ್ಕು ಹಣ ಬದಲಾಯಿಸುವವರಿಗೂ ಇರುತ್ತದೆ. ಅಧಿಕೃತ ವ್ಯಾಪಾರಿ ಮಾತ್ರ ರೂಪಾಯಿ ತೆಗೆದುಕೊಂಡು ವಿದೇಶೀ ಕರೆನ್ಸಿಯನ್ನು ಕೊಡುವ ಅರ್ಹತೆ ಹೊಂದಿರುತ್ತಾನೆ. ಈ ಹಕ್ಕು ಹಣ ಬದಲಾಯಿಸುವವನಿಗೆ ಇರುವುದಿಲ್ಲ.

ಮೇಲೆ ಹೇಳಿದ ಈ ಇಬ್ಬರು ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದ ಮೇರೆಗೆ ತಮ್ಮ ಕಾರ್ಯಗಳನ್ನು ನಡೆಸಬೇಕು. ಈ ಆದೇಶಗಳನ್ನು ಉಲ್ಲಂಘಿಸಿದಲ್ಲಿ ಇವರ ಹಕ್ಕನ್ನು ಹಿಂತೆಗೆದುಕೊಳ್ಳಲಾಗುವುದು.

ವಿದೇಶೀ ವಿನಿಮಯದ ವ್ಯವಹಾರದ ಮೇಲೆ ಪರಿಬಂಧಗಳು (ರೆಸ್ಟ್ರಿಕ್ಷನ್ಸ್ ಆನ್ ಡೀಲಿಂಗ್ ವಿತ್ ಫಾರಿನ್ ಎಕ್ಸ್ಚೇಂಜ್)

ಈ ಕಾಯಿದೆಯಲ್ಲಿ ಬಹಳಷ್ಟು ಪರಿಬಂಧಗಳು ಇವೆ. ಈ ಪರಿಬಂಧಕಗಳ ಉದ್ದೇಶ ಏನೆಂದರೆ ದೇಶಕ್ಕೆ ಅತ್ಯಮೂಲ್ಯವಾಗಿರುವ ವಿದೇಶೀ ವಿನಿಮಯವು ನಷ್ಟವಾಗಕೂಡದು ಎಂಬುದು. ರಿಜರ್ವ್ ಬ್ಯಾಂಕು ಅಥವಾ ಕೇಂದ್ರ ಸರ್ಕಾರದ ಅನುಮತಿ ಪಡೆಯದೆ ಈ ಪರಿಬಂಧಕ ಚಟುವಟಿಕೆಗಳನ್ನು ಕೈಗೊಳ್ಳಬಾರದು.

ಕೇಂದ್ರ ಸರಕಾರ ಅಥವಾ ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದ ಮೇಲೆ ಅಪೀಲು ಇರುವುದಿಲ್ಲ. ಇದಕ್ಕೆ ಒಂದೇ ಪರ್ಯಾಯ (ಆಲ್ಟರ್‌ನೇಟೀವ್)

ಏನೆಂದರೆ, ಸಂವಿಧಾನದ ಅನುಚ್ಛೇದ ೨೨೬ ಮತ್ತು ೨೨೭ ರ ಮೇಲೆ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಬಹುದು.

ಭಾರತದ ಪ್ರಜೆಯು ವಿದೇಶೀಯರೊಡನೆ ಅಥವಾ ವಿದೇಶದಲ್ಲಿ ವಾಸ ಮಾಡುತ್ತಿರುವವರೊಡನೆ ಯಾವುದಾದರೂ ವ್ಯವಹಾರ ನಡೆಸಿ ಅಥವಾ ಒಪ್ಪಂದ ಮಾಡಿಕೊಂಡು, ಈ ವ್ಯವಹಾರ ಅಥವಾ ಒಪ್ಪಂದದಲ್ಲಿ ಗಳಿಸಿದ ಮೊತ್ತವನ್ನು ರಿಜರ್ವ್ ಬ್ಯಾಂಕಿಗೆ ತಿಳಿಯದ ಹಾಗೆ ವಿದೇಶದಲ್ಲೇ ಉಪಯೋಗಿ ಸಿದರೆ ಅಥವಾ ಉಳಿತಾಯ ಮಾಡಿದರೆ, ಆಗ ಭಾರತಕ್ಕೆ ನಷ್ಟ ಉಂಟಾಗುತ್ತದೆ. ಇಂತಹ ಕಾರ್ಯ ಚಟುವಟಿಕೆಗಳನ್ನು ತಡೆಗಟ್ಟಲು ಈ ಕಾಯಿದೆಯು ಹಲವಾರು ನಿಯಮಗಳನ್ನು ಮಾಡಿದೆ.

ಮೇಲೆ ಹೇಳಿದಂತಹ ಕಾರ್ಯಗಳನ್ನು ಭಾರತೀಯ ರಿಜರ್ವ್ ಬ್ಯಾಂಕು ಅಥವಾ ಕೇಂದ್ರ ಸರ್ಕಾರದ ಅನುಮತಿ ಪಡೆಯದೆ ಮಾಡಬಾರದೆಂದು ಈ ಕಾಯಿದೆಯು ಸ್ಪಷ್ಟಪಡಿಸಿದೆ.

ಅದರ ಕೆಲವು ಉದಾಹರಣೆಗಳು ಹೀಗಿವೆ: ಇವುಗಳ ಉಲ್ಲಂಘನೆ ದಂಡನೀಯ.

(ಅ) ವಿದೇಶೀ ವಿನಿಮಯವನ್ನು ಕೊಳ್ಳುವುದು, ಮಾರುವುದು ಅಥವಾ ಯಾವುದೇ ತರಹದ ವರ್ಗಾವಣೆ ಮಾಡುವುದು ವರ್ಗ ೮ (೧),

(ಆ) ಭಾರತೀಯ ರಿಜರ್ವ್ ಬ್ಯಾಂಕು ಅನುಮತಿ ಪತ್ರ ನೀಡುವಾಗ ಹಲವು ಷರತ್ತುಗಳನ್ನು ಹಾಕಬಹುದು. ಈ ಷರತ್ತುಗಳನ್ನು ಬದಲಾಯಿಸಬೇಕಾದಲ್ಲಿ

(ಇ) ವಿದೇಶೀ ಕರೆನ್ಸಿಯನ್ನು ಸ್ವದೇಶೀ ಕರೆನ್ಸಿಗೆ ಅಥವಾ ಸ್ವದೇಶೀ ಕರೆನ್ಸಿಯನ್ನು ವಿದೇಶೀ ಕರೆನ್ಸಿಗೆ ರಿಜರ್ವ್ ಬ್ಯಾಂಕ್ ನಿಗದಿಪಡಿಸಿದ ದರಕ್ಕೆ ಬದಲಾಗಿ ಹೆಚ್ಚು ಅಥವಾ ಕಡಿಮೆ ಮಾಡುವುದು ವರ್ಗ ೮ (೨),

(ಈ) ರಿಜರ್ವ್ ಬ್ಯಾಂಕು ಬಿಡುಗಡೆ ಮಾಡಿದ ವಿದೇಶೀ ವಿನಿಮಯವನ್ನು ದುರುಪಯೋಗಪಡಿಸಿಕೊಳ್ಳುವುದು, ವರ್ಗ ೮ (೩),

(ಉ) ಭಾರತದ ನಿವಾಸಿಯು ವಿದೇಶೀ ನಿವಾಸಿಗೆ ಪರವಾನಗಿ ಇಲ್ಲದೇ ಹಣ ಪಾವತಿ ಮಾಡುವುದು ವರ್ಗ ೯ (೧) (ಎ),

(ಊ) ವಿದೇಶೀ ನಿವಾಸಿಯಿಂದ ಅಧಿಕೃತ ವ್ಯಾಪಾರಿಯ ಮೂಲಕವಲ್ಲದೆ ನೇರವಾಗಿ ಹಣ ಪಡೆಯುವುದು, ವರ್ಗ ೯ (೧) (ಬಿ)

(ಋ) ವಿದೇಶೀ ನಿವಾಸಿಯ ಪರವಾಗಿ ಅವನಿಗೆ ಸಂಬಂಧಿಸಿದ ಯಾರಿಗಾದರೂ ಭಾರತದಲ್ಲಿ ಹಣ ಕೊಡುವುದು ಅಥವಾ ವಿದೇಶೀ ನಿವಾಸಿಯ ಹೆಸರಿಗೆ ಭಾರತದಲ್ಲಿ ಹಣವನ್ನು ಜಮಾ ಮಾಡುವುದು ವರ್ಗ ೯ (೧) (ಸಿ).

(ೠ) ಸ್ವದೇಶೀ ನಿವಾಸಿ ವಿದೇಶದಲ್ಲಿ ಯಾವುದಾದರೂ ಆಸ್ತಿ ಕೊಳ್ಳುವುದು ಅಥವಾ ಹೊರದೇಶದಲ್ಲಿರುವ ಆಸ್ತಿಯನ್ನು ಮಾರುವುದು ವರ್ಗ ೯ (೧) (ಎಫ್) ಮತ್ತು (೧೧)

(ಎ) ಭಾರತದ ನಿವಾಸಿಯು ತನಗೆ ಸೇರಬೇಕಾದ ವಿದೇಶೀ ವಿನಿಮಯವನ್ನು ರಿಜರ್ವ್ ಬ್ಯಾಂಕಿನ ಅನುಮತಿ ಇಲ್ಲದೇ ಉಪಯೋಗಿಸಿಕೊಳ್ಳುವುದು ವರ್ಗ (೧೪)

(ಏ) ವಿದೇಶೀ ನಿವಾಸಿಯು ಭಾರತಕ್ಕೆ ಬಂದಾಗ ವಿದೇಶೀ ಕರೆನ್ಸಿಯಲ್ಲಿ ಹಣವನ್ನು ಖರ್ಚು ಮಾಡಬೇಕು ಮತ್ತು ಭಾರತದಲ್ಲಿ ಸಾಲ ಮಾಡಿದರೆ ಆ ಸಾಲವನ್ನು ವಿದೇಶೀ ಕರೆನ್ಸಿಯಲ್ಲೇ ತೀರಿಸಬೇಕು ವರ್ಗ (೧೫)

(ಐ) ಸಾಮಾನುಗಳನ್ನು ರಫ್ತು ಮಾಡಿದರೆ ಆ ಸಾಮಾನಿಗೆ ಬರಬೇಕಾದ ವಿದೇಶೀ ವಿನಿಮಯವು ಸರಿಯಾಗಿ ವಿದೇಶೀ ಕರೆನ್ಸಿಯಲ್ಲಿ ಬರಬೇಕು. ಆ ಹಣವು ಭಾರತಕ್ಕೆ ಬರುವುದು ವಿಳಂಬವಾದರೆ ಅಥವಾ ಬರದೇ ಇದ್ದರೆ, ಅದರ ಕಾರಣವನ್ನು ರಿಜರ್ವ್ ಬ್ಯಾಂಕಿಗೆ ವಿವರಿಸಬೇಕು. ಆಮದು ಮಾಡಿ ಕೊಳ್ಳುವಾಗ ಹೆಚ್ಚು ಹಣ ತೋರಿಸುವುದು, ರಫ್ತು ಮಾಡಿದಾಗ ಕಡಿಮೆ ಹಣ ತೋರಿಸಿ, ವ್ಯತ್ಯಾಸದ ಹಣವನ್ನು ವಿದೇಶದಲ್ಲಿ ರಿಜರ್ವ್ ಬ್ಯಾಂಕು ಅನುಮತಿ ಇಲ್ಲದೆ ಖರ್ಚು ಮಾಡುವುದು ಇಂತಹ ವ್ಯವಹಾರವನ್ನು ತಡೆಗಟ್ಟಲು ವಿವರವಾದ ಪ್ರಕ್ರಿಯೆಗಳಿವೆ. ವರ್ಗ (೧೮)

(ಒ) ಭಾರತದ ನಿವಾಸಿಯು ವಿದೇಶೀ ನಿವಾಸಿಗೆ ದಾನಕೊಡುವುದು ವರ್ಗ(೨೪).

ವಿದೇಶೀ ಕಂಪನಿಗಳು ನಮ್ಮ ದೇಶದಲ್ಲಿ ವ್ಯವಹಾರ ನಡೆಸಬೇಕಾದಲ್ಲಿ ರಿಜರ್ವ್ ಬ್ಯಾಂಕು ಅನುಮತಿ ಪಡೆಯಬೇಕು. ಇತ್ತೀಚೆಗೆ ವಿದೇಶೀ ವಿನಿಮಯ ಕಾನೂನನ್ನು ಬಹಳ ಮಟ್ಟಿಗೆ ಸಡಿಲಗೊಳಿಸಲಾಗಿದೆ. ಕಂಪನಿಯು ರಿಜರ್ವ್

ಬ್ಯಾಂಕ್ ಕಾಯಿದೆಗೆ ಒಳಪಡುತ್ತದೆ.

ವಿದೇಶೀ ವಿನಿಮಯ ವಿನಿಯಮ ಕಾಯಿದೆಯನ್ನು ಉಲ್ಲಂಘಿಸಿದ ಅಪರಾಧಿಗಳನ್ನು "ಕಾಫಿಪೋಸಾ" ಕಾಯಿದೆಯ ಉಪಬಂಧಗಳ ಪ್ರಕಾರ, ದಸ್ತಗಿರಿ ಮಾಡಬಹುದು. ಈ ತರಹ ದಸ್ತಗಿರಿ ಮಾಡಿದ ವ್ಯಕ್ತಿಯ ಆಸ್ತಿಯನ್ನು 'ಸೆಫಮ್ ಫೋಪ'ನ ಉಪಬಂಧಗಳ ಪ್ರಕಾರ ಮುಟ್ಟುಗೋಲು ಮಾಡಬಹುದು (forfeiture).

COFEPOSA = Conservation of Foreign Exchange and Prevention of Smuggling Activities Act.

SAFEMFOPA = Smugglers and foreign Exchange Manipulators Forfeiture of Property Act.

****

ಉಪಸಂಹಾರ

ಕಾನೂನಿನ ಬಗ್ಗೆ ಅನೇಕರಿಗೆ ತಪ್ಪು ತಿಳಿವಳಿಕೆ ಮತ್ತು ತಾತ್ಸಾರ ಸಹಜ. ಇದನ್ನು ಪ್ರತಿಬಿಂಬಿಸುವುದಕ್ಕೆ ಕನ್ನಡದಲ್ಲಿ ಅನೇಕ ಗಾದೆಗಳಿವೆ. ಒಂದು ಹೀಗೆ ಹೇಳುತ್ತದೆ, "ಕೋರ್ಟಿಗೆ ಹೋದರೆ ಗೆದ್ದವನು ಸೋತ, ಸೋತವನು ಸತ್ತ". ಈ ಪ್ರತಿಕ್ರಿಯೆ ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲೂ ಕಂಡು ಬರುತ್ತದೆ. ಉದಾ : ಆಂಗ್ಲ ಭಾಷೆಯಲ್ಲಿ " The Law is an ass" ಕಾನೂನು ಕತ್ತೆಯೇ ಸರಿ ಎಂದು ವಿಶೇಷವಾಗಿ ಹೇಳಲಾಗುತ್ತದೆ. ಆದರೆ, ಅದು ಕಾನೂನು ಸಮಾಜದಲ್ಲಿರತಕ್ಕಂತಹ ಲೋಪದೋಷಗಳನ್ನು ಹೊರಬಲ್ಲ ಕತ್ತೆಗೆ ಸಮಾನ ಎಂದು ಒಂದು ಉದಾರ ಮನೋಭಾವದಿಂದ ಹೇಳಲಾಗಿದೆ ಎಂದು ಯಾರೂ ವಿವೇಚಿಸುವುದಿಲ್ಲ.

ಮುಖ್ಯವಾಗಿ ನ್ಯಾಯ ಸ್ಥಾನದಲ್ಲಿ ಮತ್ತು ನ್ಯಾಯವಿತರಣೆಯ ಸಂದರ್ಭದಲ್ಲಿ ದೂರುಗಳು ಕೇಳಿಬರುತ್ತವೆ. ಅದರಲ್ಲೂ ಮುಖ್ಯವಾಗಿ ವಿಳಂಬವಾದ ಕಾರ್ಯ ವಿಧಾನ ಮತ್ತು ಬಡಬಗ್ಗರಿಗೆ ಎಟುಕದಿರುವುದು. ಆದ್ದರಿಂದ ಸ್ಥೂಲವಾಗಿ ನ್ಯಾಯ ಸ್ಥಾನಗಳು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ನಡೆಸುವ ಕಾರ್ಯ ವಿಧಾನವನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಳ್ಳೋಣ.

ಸಿವಿಲ್ ಮೊಕದ್ದಮೆಗಳಲ್ಲಿ ಮುಖ್ಯ ಅಂಶಗಳೇನೆಂದರೆ, ದಾವೆ ಮತ್ತು ಮೊಕದ್ದಮೆಗಳಿಗೆ ಹಣ ತೆರಬೇಕು ಮತ್ತು ಪ್ರತಿಯೊಂದು ಮೊಕದ್ದಮೆಯನ್ನೂ ನಿಗದಿ ಮಾಡಿದ ಕಾಲದ ಒಳಗೆ ಹಾಕಬೇಕು. ಅವಧಿಯ ನಂತರ ಹಾಕಿದ ದಾವೆಗಳು ಊರ್ಜಿತವಾಗುವುದಿಲ್ಲ ಎಂದು ಅವಧಿ ಪರಿಮಿತಿ ಅಧಿನಿಯಮದಲ್ಲಿ ಹೇಳಿದೆ (Indian Limitation Act). ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ವಾದಿಯು ಹಾಜರುಪಡಿಸುವ ದಾವೆ ಮತ್ತು ಪ್ರತಿವಾದಿಯು ಹಾಕುವಂತಹ ಆಕ್ಷೇಪಣಾ ಪತ್ರ (ಆರ್ಡರ್ VI ರಿಂದ VIII ರವರೆಗಿನ) ನಿಯಮಗಳಿಗೆ ಅನುಗುಣವಾಗಿರಬೇಕು. ವಾದಪತ್ರದಲ್ಲಿಯಾಗಲೀ, ಆಕ್ಷೇಪಣಾ ಪತ್ರದಲ್ಲಿ ಆಗಲೀ ಪೂರ್ವ ಇತಿಹಾಸ, ಉಭಯತ್ರರ ಚರಿತ್ರೆ ಮತ್ತು ಹಿಂದಿನ ನಡವಳಿಕೆ ಇವುಗಳ ನಿರೂಪಣೆಗೆ ಅವಕಾಶವಿರುವುದಿಲ್ಲ. ಮುಖ್ಯ ಅಂಶಗಳನ್ನು ಸೂಕ್ಷ್ಮವಾಗಿ ವಿಷದೀಕರಿಸದೆ ಮತ್ತು ಸಾಕ್ಷಿ ಪುರಾವೆಗಳನ್ನು ನಮೂದಿಸದೆ ಹೇಳತಕ್ಕದ್ದು. ಇದಾದ ನಂತರ ನ್ಯಾಯಾ

ಧೀಶರು ಪರಾಮರ್ಶಿಸಿ, ಎರಡೂ ಪಕ್ಷಗಳಲ್ಲಿ ಕಂಡು ಬರುವ ವಿವಾದದ ಅಂಶಗಳನ್ನು ನಮೂದಿಸುತ್ತಾರೆ. ಅದರಂತೆಯೇ ವಾದಿ ಪ್ರತಿವಾದಿಗಳು ಸಾಕ್ಷ್ಯ ಮತ್ತು ಪುರಾವೆಗಳನ್ನು ಹಾಜರುಪಡಿಸತಕ್ಕದ್ದು. ಇದರಲ್ಲಿ ವಿಳಂಬ ವಾಗುವುದಕ್ಕೆ ಅವಕಾಶ ಏರ್ಪಡುವುದು. ಸಾಕ್ಷಿಗಳು ವಾದಿ ಮತ್ತು ಪ್ರತಿವಾದಿಗಳು ಕೋರಿದರೂ ಸಹ ಹಿಂತೆಗೆಯುವುದು. ಇದರ ಹೊಣೆ ಎಲ್ಲಾ ನಾಗರೀಕರ ಮೇಲೆಯೂ ಇದೆಯೇ ಹೊರತು ನ್ಯಾಯಾಲಯದಿಂದಲ್ಲ. ಉದಾಹರಣೆಗೆ, ಒಂದು ರಸ್ತೆ ಅಪಘಾತದಲ್ಲಿ ಪೋಲೀಸಿನವರು ಅಲ್ಲೇ ನಿಂತು ಅಪಘಾತ ಕಂಡವರ ಹೆಸರು ಕೇಳಿದರೆ ಹಿಂದೆ ಸರಿದು ಹೋಗುವ ಮನೋಭಾವ ನಮ್ಮದು. ನ್ಯಾಯಾಧೀಶರು ತಾವೇ ಖುದ್ದಾಗಿ ಪ್ರತಿಯೊಂದು ಮೊಕದ್ದಮೆಯಲ್ಲೂ ವಿವಾದಕ್ಕೆ ಒಳಪಟ್ಟ ಸ್ಥಳವನ್ನು ಭೇಟಿ ಮಾಡಿ ಮತ್ತು ನ್ಯಾಯಾಲಯದ ಹೊರಗೆಯೇ ಅಕ್ಕಪಕ್ಕದವರನ್ನು ಕೇಳಿ ಮಾಹಿತಿ ಸಂಗ್ರಹಿಸಲು ಅವಕಾಶವಿರುವುದಿಲ್ಲ ಮತ್ತು ಹಾಗೆ ಮಾಡಲೂ ಬಾರದು. ಹೀಗೆ ಮಾಡ ಹೊರಟರೆ ಒಂದೊಂದು ಮೊಕದ್ದಮೆಗೂ ಒಬ್ಬೊಬ್ಬರು ನ್ಯಾಯಾಧೀಶರು ಬೇಕಾಗುತ್ತದೆ.

ಸಾಕ್ಷಿ ಮತ್ತು ಪುರಾವೆಗಳನ್ನು ಇಟ್ಟು, ನ್ಯಾಯಾಸ್ಥಾನದಲ್ಲಿ ಋಜುವಾತು ಮಾಡುವ ಸಂದರ್ಭದಲ್ಲಿ ಭಾರತದ ಸಾಕ್ಷ್ಯ ಅಧಿನಿಯಮವು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಿಗೂ ಅನ್ವಯಿಸುತ್ತದೆ. ಇದರಲ್ಲಿ ಸುಸಂಬದ್ಧತೆಯ ನಿಯಮಗಳಿವೆ. ಅತ್ಯುತ್ತಮ ಕಾನೂನುಗಳಿಗೆ ಇದು ಒಂದು ಉತ್ತಮ ನಿದರ್ಶನ. ನೂರು ವರ್ಷಗಳಿಂದಲೂ ಅತ್ಯಲ್ಪ ಮಾರ್ಪಾಟು ಕಂಡ ಕಾನೂನು ಇದರಲ್ಲಿ ಸಾಕ್ಷಿಯ ವಿಚಾರಣೆ, ಪಾಟಿ ಸವಾಲುಗಳು ಯಾವುದು ಸಾಕ್ಷ್ಯವಾಗುತ್ತದೆ ಮತ್ತು ಯಾವುದು ಇಲ್ಲ ಎಂಬುದನ್ನು ವಿಷದವಾಗಿ ನಮೂದಿಸಲಾಗಿದೆ. ಯಾವುದಾದರೂ ಒಂದು ಅಂಶ ಸ್ವಲ್ಪ ಮಟ್ಟಿಗೆ ಸಂಬಂಧಿಸಿದರೂ ಅದು ಸ್ವೀಕೃತವಾಗುವುದೇ ಇಲ್ಲವೆ ಎಂಬುದು ಮುಖ್ಯ. ಇದರಿಂದ ಅನಾವಶ್ಯಕವಾದ ನೂರಾರು ಬಾಹ್ಯ ಅಂಶಗಳನ್ನು ಹೊರಗಿಟ್ಟು, ಮೂಲ ವಿವಾದವನ್ನು ಕೇಂದ್ರೀಕರಿಸಿ, ಪರಿಗಣಿಸಲು ಅವಕಾಶ ವಾಗುತ್ತದೆ.

ಇದಾದ ನಂತರ ತೀರ್ಪನ್ನು ಕೊಡಬೇಕು. ಹಿಂದೆ ಎರಡು ಸಾವಿರ ವರ್ಷಗಳ ಕೆಳಗೆ ಅರಿಸ್ಟೋಟಲ್ (Aristotle) ಎಂಬ ತತ್ವಜ್ಞಾನಿಯು, ಒಬ್ಬ ನ್ಯಾಯಾಧೀಶನು

ಹೇಗೆ ತೀರ್ಪನ್ನು ಕೊಡಬೇಕು ಎನ್ನುವ ಬಗ್ಗೆ ನಿರೂಪಣೆ ಮಾಡಿದ್ದುದು ಅದನ್ನೇ ಆರ್ಡರ್ XX ಸಿವಿಲ್ ಪ್ರಕ್ರಿಯಾ ಸಂಹಿತೆಯೊಳಗೆ ಸೂಚಿಸಲಾಗಿದೆ. ಕೇವಲ ಒಂದೆರಡು ವಾಕ್ಯಗಳಲ್ಲಿ ಕೊಟ್ಟ ತೀರ್ಮಾನ ತೀರ್ಪೇ ಅಲ್ಲ. ಏಕೆಂದರೆ ಮೇಲ್ಮನವಿ ಸಲ್ಲಿಸಿದರೆ ಕೆಳನ್ಯಾಯಾಲಯ ಯಾವ ರೀತಿ ಈ ತೀರ್ಮಾನಕ್ಕೆ ಬಂದಿತು ಎನ್ನುವುದನ್ನು ಪರಿಗಣಿಸುವ ಅವಕಾಶ ಇರಬೇಕು. ತೀರ್ಪಿನಲ್ಲಿ ವಾದಿ ಪ್ರತಿವಾದಿಗಳ ಹೇಳಿಕೆ, ವಾದಪತ್ರ ಮತ್ತು ಆಕ್ಷೇಪಣಾಪತ್ರಗಳ ಸಾರಾಂಶ ಇವುಗಳನ್ನು ಸ್ಮರಿಸಿ ಮತ್ತು ಹಾಜರುಪಡಿಸದೆ ಸಾಕ್ಷ್ಯ ಮತ್ತು ಪುರಾವೆಗಳನ್ನು ವಿಮರ್ಶಿಸಿ, ಈ ತೀರ್ಮಾನಕ್ಕೆ ಬರುವುದಕ್ಕೆ ಕಾರಣಗಳನ್ನು ನಮೂದಿಸಬೇಕು.

ಪ್ರತಿಯೊಂದು ತೀರ್ಮಾನದ ಮೇಲೂ ಒಂದು ಮೇಲ್ಮನವಿ ಸಲ್ಲಿಸಬಹುದು. ನಮ್ಮ ಹಿಂದಿನ ಕಾನೂನು ಪದ್ಧತಿಯಲ್ಲಿ ಸ್ಮೃತಿಕಾರರು ಹೀಗೆ ಹೇಳಿದ್ದಾರೆ, **"ನ ಏಕಾಕಿ ನಿರ್ಣಯಂ ಕುರ್ಯಾತ್"**. ಅಂದರೆ ಮಾನವನಾದ ಮೇಲೆ ತಪ್ಪು ಮಾಡುವುದು ಸಹಜ. ಆದ್ದರಿಂದ ಮತ್ತೊಬ್ಬರಿಂದ ಪರಿಶೀಲನೆ ಆಗತ್ಯ ಎಂದು. ಇವುಗಳನ್ನೆಲ್ಲಾ ನೋಡಿದರೆ, ಬ್ರಿಟೀಷರ ಆಳ್ವಿಕೆಯಲ್ಲಿ ಅವಸರದ ನಿರ್ಣಯಗಳನ್ನು ನಿರೋಧಿಸಲು ಈ ಪ್ರಕ್ರಿಯೆಗಳಲ್ಲಿ ಕಂಡುಬರುವ ಸೂತ್ರಗಳನ್ನು ಮಾಡಲಾಯಿತು. ಇತ್ತೀಚೆಗೆ 'ಲೋಕ ಅದಾಲತ್' ಮುಂತಾದ ಪ್ರಯೋಗಗಳನ್ನು ಮಾಡಲಾಗುತ್ತಿದೆ. ಆದರೆ ಇವು ಸರ್ವಸಮ್ಮತವಾದ ಮತ್ತು ಶೀಘ್ರವಾದ ನ್ಯಾಯವ್ಯವಸ್ಥೆಗೆ ಬಹುದೂರ.

ಮೇಲೆ ಹೇಳಿದಂತೆ ಪ್ರತಿಯೊಂದು ಮೊಕದ್ದಮೆಗೂ ನ್ಯಾಯಶುಲ್ಕ ಕೊಡಬೇಕು. ಇತ್ತೀಚಿನವರೆಗೂ ಶೇಕಡಾ ೧೦ ರಂತೆ ಕೊಡಬೇಕಾಗುತ್ತಿತ್ತು. ಆದರೆ, ಸರ್ವೋಚ್ಚ ನ್ಯಾಯಾಲಯವು ಅಶ್ವತ್ಥನಾರಾಯಣ ಶೆಟ್ಟಿ ವಿರುದ್ಧ ಸ್ಟೇಟ್ ಆಫ್ ಕರ್ನಾಟಕ (Aswathanarayana Shetty Vs. State of Karnataka AIR 1989 SC 100, 1989, Suppi SCC 696)I ಎಂಬ ಮೊಕದ್ದಮೆಯಲ್ಲಿ ಇದು ಬಹಳ ದುಬಾರಿ ಮತ್ತು ಜನಸಾಮಾನ್ಯನಿಗೆ ಹೊರಲಾಗದ ಭಾರ ಎಂದು ತೀರ್ಮಾನಿಸಿತು. ಆದ್ದರಿಂದ ಈಗ ಮೌಲ್ಯವು ಮೊದಲು ರೂ. ೧೫,೦೦೦ ಒಳಗೆ ಇದ್ದರೆ ಆಗ ಕೇವಲ ಶೇಕಡಾ ೨ ೧/೨ ಮಾತ್ರ ಕೊಡಬೇಕಾಗುವುದು. ೧೫,೦೦೦ ರೂ. ಗಳಿಗಿಂತ ಹೆಚ್ಚಿಗೆ ಕೋರಿದ್ದರೆ ಆಗ ಶೇಕಡ ೭ ೧/೨ ಯಷ್ಟು ಶುಲ್ಕ

ಕೊಡಬೇಕಾಗುತ್ತದೆ. ಇದು ೭೫,೦೦೦ ರೂ. ಗಳವರೆಗೆ ಕೋರಿದ್ದರೆ, ಇದಾದ ನಂತರ ಶೇಕಡಾ ೭ $\frac{1}{2}$ ಮತ್ತು ಇನ್ನೂ ಹೆಚ್ಚು ಕೋರಿಕೆಗೆ ಕ್ರಮವಾಗಿ ಇಳಿಯುತ್ತಾ ಹೋಗುತ್ತದೆ. ಆದರೆ ಸಿವಿಲ್ ಪ್ರಕ್ರಿಯಾ ಸಂಹಿತೆ ಆರ್ಡರ್ XXXIII ಕೋರ್ಟು ಶುಲ್ಕ ಕಟ್ಟಲು ಶಕ್ತಿ ಇಲ್ಲದವರು ತಮ್ಮ ಆಸ್ತಿಪಾಸ್ತಿಗಳ ಬಗ್ಗೆ ವಿವರಣೆ ನೀಡಿ, ದಾವೆ ದಾಖಲು ಮಾಡುವುದಕ್ಕೆ ಅನುಮತಿ ಪಡೆಯಬೇಕು. ಈ ರೀತಿ ಸೂಕ್ಷ್ಮವಾಗಿ ಪರಿಶೀಲಿಸಿದ್ದು, ನ್ಯಾಯವಿತರಣೆಯ ಬಗ್ಗೆ ಇರುವ ದೂರುಗಳಿಗೆ ಕಾರಣ ಕಾನೂನಲ್ಲ, ಆದರೆ ಮಾನವನ ದೌರ್ಬಲ್ಯ. ಅನೇಕ ವೇಳೆ ತೀರ್ಪಿನಲ್ಲಿ ಮೇಲ್ನೋಟಕ್ಕೆ ತಪ್ಪು ಕಂಡರೆ, ಆರ್ಡರ್ XLVII ರ ಪ್ರಕಾರ ಅದೇ ನ್ಯಾಯಸ್ಥಾನ ಪುನರ್ವಿಮರ್ಶಿಸುವಂತೆ ಕೇಳಿಕೊಳ್ಳಬಹುದು.

ಕ್ರಿಮಿನಲ್ ಮೊಕದ್ದಮೆಗಳು

ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿಯು ದೌರ್ಜನ್ಯದಿಂದ ನಡೆದುಕೊಳ್ಳುವ ಸಂದರ್ಭಗಳು ಇರುತ್ತದೆ. ಆ ನಡತೆ ಗಂಭೀರ ಸ್ವರೂಪದ್ದಾದರೆ ಅದನ್ನು ಒಂದು ಅಪರಾಧ ಎಂದು ಪರಿಗಣಿಸಿ, ಸರ್ಕಾರವೇ ಅವನ ಮೇಲೆ ಕಾನೂನಿನ ಕ್ರಮ ಜರುಗಿಸುತ್ತದೆ ಮತ್ತು ನ್ಯಾಯಾಲಯಗಳು ಶಿಕ್ಷೆಯನ್ನು ವಿಧಿಸುತ್ತವೆ. ಆದರೆ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ ರಕ್ಷಣೆ ಇಲ್ಲಿ ಮುಖ್ಯ. ಸರ್ಕಾರಕ್ಕೆ ಹಣ, ಅಧಿಕಾರ ಎಲ್ಲವೂ ಇರುವುದರಿಂದ ವ್ಯಕ್ತಿಸ್ವಾತಂತ್ರ್ಯವನ್ನು ರಕ್ಷಣೆ ಮಾಡಲು ನ್ಯಾಯಾಲಯಗಳು ಒಂದು ಮೂಲಭೂತ ತತ್ವವನ್ನು ರೂಪಿಸಿಕೊಂಡಿವೆ. ಅದೇನೆಂದರೆ, ಒಬ್ಬ ಅಪರಾಧಿಯ ಮೇಲೆ ಅವನ ಅಪರಾಧವನ್ನು ನ್ಯಾಯಾಲಯ ದಲ್ಲಿ ಅನುಮಾನಕ್ಕೆ ಆಸ್ಪದವಿಲ್ಲದಂತೆ ಪೂರ್ಣವಾಗಿ ರುಜುವಾತು ಮಾಡಿದರೆ ಮಾತ್ರ ಅವನು ಶಿಕ್ಷಾರ್ಹ ಇಲ್ಲಿ. ಸಾರ್ವಜನಿಕ ಹಿತಾಸಕ್ತಿ ಹೇಗೆ ರಕ್ಷಣೆಯಾಗುತ್ತದೆ ಎಂಬುವುದಕ್ಕೆ ಸರ್ವೋಚ್ಛ ನ್ಯಾಯಾಲಯದ ಪ್ರತಿಪಾದನೆ (Dictum) ಹೀಗಿದೆ, ೧೯೭೩ ಕಾಳಿರಾಂ ವಿರುದ್ಧ ಸ್ಟೇಟ್ ಆಫ್ ಹಿಮಾಚಲಪ್ರದೇಶ (Kaliram Vs. State of Himachal Pradesh AIR 1973 SC 2773, Khanna J.). ಅನೇಕ ವೇಳೆ ಜನಸಾಮಾನ್ಯರು ನ್ಯಾಯಾಲಯಗಳು ಶಿಕ್ಷೆ ವಿಧಿಸುವುದೇ ಅಪರೂಪ ಎಂದು ಭಾವಿಸುತ್ತಾರೆ. ಇಲ್ಲಿ ಕಾಣಬರುವ ಕೊರತೆ ಸಾಕ್ಷ್ಯ ಮತ್ತು ಪುರಾವೆಗಳ ಸರಿಯಾದ ಸಂಗ್ರಹಣೆ ಇಲ್ಲದಿರುವುದು. ಅನೇಕ ಸಲ ಸಾಕ್ಷಿಗಳು ತಮ್ಮ ಹೇಳಿಕೆಯನ್ನೇ ನಿರಾಕರಿಸುವರು.

ಇದಕ್ಕೆ ಮಾನವ ದೌರ್ಬಲ್ಯಗಳೇ ಹೆಚ್ಚು ಕಾರಣ. ಕರ್ತವ್ಯ ಪ್ರಜ್ಞೆಯಿಂದ ಅಪರಾಧದ ಅನ್ವೇಷಣೆ ಮಾಡುವ ಅಧಿಕಾರಿಗಳೇ ವಿರಳ. ಹಾಗೆ ಮಾಡ ಹೊರಟರೆ ಸಾರ್ವಜನಿಕರಿಂದ ಬರುವ ಸಹಕಾರವು ಅತ್ಯಲ್ಪ.

ಸಿವಿಲ್ ವಿವಾದಗಳ ಇತ್ಯರ್ಥವನ್ನು ಸುಲಭವಾಗಿ ಪರಿಹರಿಸುವ ವಿಧಾನ ವೊಂದಿದೆ. ಭಾರತೀಯ ಮಧ್ಯಸ್ಥ ನಿರ್ಣಾಯ ಅಧಿನಿಯಮದ ಪ್ರಕಾರ, ಒಂದು ಕರಾರು ಅಥವಾ ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿ ಎರಡೂ ಪಕ್ಷಗಳು ತಾವುಗಳು ನ್ಯಾಯಾಲಯಕ್ಕೆ ಹೋಗದೆ ಮಧ್ಯಸ್ಥನ ತೀರ್ಮಾನಕ್ಕೆ ಒಳಪಡುತ್ತೇವೆ ಎಂದು ಒಪ್ಪಂದ ಮಾಡಿಕೊಳ್ಳುವುದು. ಅದು ಮೇಲ್ಕಂಡ ಕಾನೂನಿನಂತೆ ಸರಳ ಮತ್ತು ಶುಲ್ಕ ರಹಿತ. ಆದರೆ ಇದರ ಉಪಯೋಗ ಪಡೆಯುವವರು ಬಹಳ ವಿರಳ.

ಜನಸಾಮಾನ್ಯರಿಗೆ ಕಾನೂನು ಪರಿಚಯ ಮಾಡಿಸುವ ಕರ್ತವ್ಯ ಸರ್ಕಾರದ್ದೇ ಆಗಿದೆ. ಇದಕ್ಕೆ ಸರ್ಕಾರವು ರೇಡಿಯೋ, ದೂರದರ್ಶನ, ದಿನಪತ್ರಿಕೆ, ವಾರಪತ್ರಿಕೆ ಮತ್ತು ಭಿತ್ತಿಪತ್ರಗಳ ಮೂಲಕ ಸರಳವಾಗಿ ಜನರಿಗೆ ತಿಳಿಯುವಂತೆ ಮಾಡಬೇಕು.

****

ಅಧಿನಿಯಮಗಳು

ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿ ಕಾಯಿದೆ ೧೯೬೯	Monopolies and Restrictive Trade Practices Act, 1969
ಕರ್ನಾಟಕ ಸ್ಟ್ಯಾಂಪು ಅಧಿನಿಯಮ, ೧೯೫೭	Karnataka Stamp Act, 1957
ದಂಡ ಪ್ರಕ್ರಿಯಾ ಸಂಹಿತೆ ೧೮೬೦	Indian Penal Code, 1860
ನಿರ್ದಿಷ್ಟ ಪರಿಹಾರ ಅಧಿನಿಯಮ ೧೯೬೩	Specific Relief Act, 1963
ಭಾರತದ ಕರಾರು ಅಧಿನಿಯಮ ೧೮೭೨	Indian Contract Act, 1872
ಭಾರತದ ಉತ್ತರಾಧಿಕಾರ ಅಧಿನಿಯಮ ೧೯೨೫	Indian Succession Act, 1925
ಭಾರತದ ಕಾಲಪರಿಮಿತಿ ಅಧಿನಿಯಮ ೧೯೬೩	Indian Limitation Act, 1963
ಭಾರತದ ನೋಂದಣಿ ಅಧಿನಿಯಮ, ೧೯೦೮	Indian Registration Act, 1908
ಭಾರತದ ಪಾಲುಗಾರಿಕೆ ಅಧಿನಿಯಮ, ೧೯೩೨	Indian Partnership Act, 1932
ಭಾರತದ ಪ್ರಾಪ್ತ ವಯಸ್ಕತೆಯ ಕಾನೂನು	Indian Majority Act
ಭಾರತದ ದಂಡಸಂಹಿತೆ ೧೮೬೦	Indian Penal Code, 1860
ಭಾರತದ ಮಧ್ಯಸ್ಥಿಕೆ ಅಧಿನಿಯಮ ೧೯೯೬	Indian Arbitration Act, 1996
ಭಾರತದ ಮಾನಕಗಳ ಸಂಸ್ಥೆ	Indian Standards Institution
ಭಾರತದ ಸ್ಟ್ಯಾಂಪು ಅಧಿನಿಯಮ ೧೮೯೯	Indian Stamp Act, 1899
ಭಾರತದ ಸಾಕ್ಷ್ಯ ಅಧಿನಿಯಮ ೧೮೭೨	Indian Evidence Act, 1872
ಬಳಕೆದಾರರ (ಗ್ರಾಹಕರ) ಸಂರಕ್ಷಣಾ ಕಾಯಿದೆ, ೧೯೮೬	The Consumer Protection Act, 1986
ಬಾಲ್ಯವಿವಾಹ ನಿಗ್ರಹ ಅಧಿನಿಯಮ	Child Marriage Restraint Act
ವಿದೇಶೀ ವಿನಿಮಯ ಕಾಯಿದೆ, ೧೯೪೭	Foreign Exchange Regulation Act, 1947
ವರ್ಗಾವಣೆಯ ಲಿಖಿತಪತ್ರ ಅಧಿನಿಯಮ, ೧೯೮೧	Negotiable Instruments Act, 1981

ಸರಕುಗಳ ಮಾರಾಟ ಅಧಿನಿಯಮ ೧೯೩೦	Sale of Goods Act, 1930
ಸ್ವತ್ತಿನ ವರ್ಗಾವಣೆ ಅಧಿನಿಯಮ, ೧೮೮೨	Transfer of Property Act, 1882
ಹಿಂದೂ ಅಪ್ರಾಪ್ತ ವಯಸ್ಕರ ಮತ್ತು ಪಾಲಕತ್ವ ಅಧಿನಿಯಮ, ೧೯೫೬	Hindu Minority and Guardianship Act, 1956
ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, ೧೯೫೬	Hindu Adoptions and Maintenance Act, 1956
ಹಿಂದೂ ಉತ್ತರಾಧಿಕಾರ ಅಧಿನಿಯಮ, ೧೯೫೬	Hindu Succession Act, 1956
ಹಿಂದೂ ವಿವಾಹ ಅಧಿನಿಯಮ, ೧೯೭೬	Hindu Marriage Act, 1976.

ವಿಷಯ ಸೂಚಿ

ಪದಕೋಶ

ಅತ್ಯಂತ - Extreme
ಅಧಿಕಾರ - Authority
ಅಧಿಭಾರ - Surcharge
ಅಧಿನಿಯಮ -Act
ಅಧಿನಿಯಮಿತಿ - Enactment
ಅಧಿಪ್ರಮಾಣಿತ - Authenticated
ಅನೈತಿಕ - Immoral
ಅನುಸೂಚಿ - Schedule
ಅಭಿವ್ಯಕ್ತಿ - Expression
ಅಗತ್ಯ ಪರಿಮಾಣ - Quantum Meruit
ಅಸಿಂಧು - Invalid
ಅನುಕೂಲ ಹುಂಡಿ -Accomodation Bill
ಅಧಿಕಾರಾತೀತ - Ultra Vires
ಅನ್ಯಾಯಗಳಿಕೆ -Unjust Enrichment
ಅನ್ವಯಿಸು - Apply
ಅಶಕ್ತ - Invalid
ಅಧಿಕಾರ ವ್ಯಾಪ್ತಿ - Jurisdiction
ಅಧಿಕಾರಗಳು - Authorities
ಅಡಮಾನ - Mortgage
ಅನ್ಯದೇಶೀಯ - Alien, Foreigner
ಅನುಮೋದನೆ - Approval
ಅನುಚಿತ ಅಥವಾ ವಂಚನೆಯ ಪದ್ಧತಿ - Unfair or deceptive practices
ಅರ್ಥಾನ್ವಯ ನಿಯಮ - Rules of Construction
ಅಭಿವೃದ್ಧಿ - Development
ಅಸ್ತಿತ್ವದಲ್ಲಿರು - Exist
ಅವಶ್ಯಕತೆ - Necessity
ಅಡಕವಾಗು - Involve
ಅವಧಿ - Term
ಅವಶ್ಯಕ - Essential
ಅಮೂರ್ತ - Incorporeal
ಅವಲಂಬಿತ ಕರಾರು - Contingent Contract
ಅವನತಿ ಹೊಂದು - Deteriorate
ಅವಿಮುಕ್ತ ದಿವಾಳಿ - Undischarged Insolvent
ಅಹವಾಲು ಹೇಳಿಕೊಳ್ಳುವ ಹಕ್ಕು - Locus Standi
ಅಭಾವ - Lacking

ಅತ್ಯೋಕ್ತಿ - Exaggeration
ಅಲ್ಲಗಳೆ - Deny
ಅಸಮಂಜಸ ಮಟ್ಟ - Unreasonable Level
ಅನುಚಿತ ಪ್ರಭಾವ - Undue Influence
ಅಭಿರಕ್ಷೆ - Custody
ಅಪ್ರತ್ಯಕ್ಷ - Indirect
ಅನ್ವೇಷಿಸು - Investigate
ಅವಕಾಶ ಕೊಡದಿರು (ತಳ್ಳಿಹಾಕು) - Over Rule
ಅಪರಾಧಿಕ - Culpable
ಅಪ್ಪಟ - Genuine
ಆಧಾರ - Source
ಆಧುನಿಕ - Modern
ಆಕಸ್ಮಿಕ ಅಥವಾ ಕೌಶಲ್ಯದ ಆಟ (ಜೂಜಾಟ) - Game of Chance or Skill
ಆರ್ಥಿಕ ಸಂಸ್ಥೆಗಳು - Financial Institutions
ಆದೇಶ - Order
ಆಡಳಿತ Administration
ಆಡಳಿತಾಧಿಕಾರ ಪತ್ರ - Letters of Administration
ಆಡಳಿತಾಧಿಕಾರ - Administrative officer
ಆಡಳಿತ ಕಾನೂನು - Administrative Law
ಆಡಳಿತ ನ್ಯಾಯಾಧಿಕರಣ - Administrative Tribunals
ಆಲೋಚನೆ - Thought
ಆವರಿಸು - Cover
ಆಯೋಗ - Commission
ಆಳು - Govern
ಅಂಗೀಕಾರ - Acceptance
ಅಂತರ್ನಿಹಿತ ಅಧಿಕಾರ - Inherent Power
ಇಡು - Lay
ಇಳಿಸು - Reduce
ಇಂಗಿತ - Implication, Implied
ಉಪಸ್ಥಾಪನೆ - Presentment
ಉಪಪತ್ನಿ - Concubine
ಉಪಾಯ - Device
ಉಪಬಂಧ - Provision
ಉಪಬಂಧಿಸು - Provide
ಉಪಖಂಡಗಳು - Sub - Clauses
ಉಚ್ಚ, ಉನ್ನತ - High
ಉಚ್ಚನ್ಯಾಯಾಲಯ - High Court
ಉದ್ದೇಶಿತ - Intended
ಉದ್ದೇಶಿತಾರ್ಥ - Intendment

ಉತ್ಪನ್ನ - Produce
ಉತ್ಪಾದನಾ ಖರ್ಚು - Cost of Production
ಉತ್ತರಾಧಿಕಾರ, ಉತ್ತರ ವರ್ತನ - Succession
ಉತ್ತರಾಧಿಕಾರದ ಆಸೆ - Spes Successionis
ಉತ್ತರಾಧಿಕಾರ ಪ್ರಮಾಣಪತ್ರ - Succession Certificate
ಉತ್ತರಾಧಿಕಾರಿ, ಉತ್ತರವರ್ತಿ - Successor
ಉಯಿಲು - Will
ಉಯಿಲುದಾರ - Testator.
ಋಣ - Debt
ಋಣಿ - Debtor
ಎತ್ತಲಾದ - Raised
ಏಕರೂಪತೆ - Uniformity
ಏಕರೀತಿಯ ಸಮ್ಮತಿ - Consensus - ad- idem
ಏಕಸ್ವಾಮ್ಯ ವ್ಯಾಪಾರ ಪದ್ಧತಿ - Monopolistic Trade Practice
ಒದಗಿಸು - Supply, Procure
ಒಪ್ಪಂದ - Agreement
ಒಪ್ಪು - Agree
ಒಪ್ಪಿಗೆ - Consent
ಒಪ್ಪಿಸು, ಪ್ರಸ್ತುತಪಡಿಸು - Render
ಒಟ್ಟು ಮೊತ್ತ -Aggregate Amount
ಒಟ್ಟಾಭಿಪ್ರಾಯ - Consensus
ಒಡಂಬಡಿಕೆ - Convention
ಒಡೆತನ - Ownership
ಒತ್ತಿಹೇಳು - Emphasise
ಒಳಾಂಶಗಳು - Contents
ಔರಸತ್ವ - Legitimacy
ಕರಾರು - Contract
ಕರಾರು ಜನ್ಯ ಹಕ್ಕು - Contractual Right
ಕಾರಣ - Reason
ಕಾನೂನು ಪ್ರಶ್ನೆ - Point of Law, Question of Law
ಕಾನೂನು ಮೇರೆಗಿನ ಪರಿಹಾ - ರೋಪಾಯ - Legal Remedy
ಕಾನೂನು ಸಂಘರ್ಷಣೆ - Conflict of Laws
ಕರ್ತವ್ಯ - Duty
ಕಾಯಿದೆ - Act, Regulation
ಕಾನೂನು ವ್ಯವಹರಣೆಗಳು - Legal Proceedings
ಕಾಲಪರಿಮಿತಿ ಅವಧಿ - Period of Limitation
ಕೇಂದ್ರ ಸರಕಾರ - Central Government
ಕೈಗಾರಿಕೆ - Industry

ಕೊಳ್ಳುವವನು ಎಚ್ಚರದಿಂದರಲಿ - Caveat Emptor
ಕಂಡುಹಿಡಿ - Discover
ಕಂತು ಖರೀದಿ - Hire Purchase
ಕ್ರಮಾರ್ಹ ಕ್ಲೇಮು - Actionable Claim
ಖಂಡ - Clause
ಖಾಸಗಿ - Private
ಖರೀದಿದಾರ - Purchaser
ಖಾಸಗಿ ಅಂತರರಾಷ್ಟ್ರೀಯ ಕಾನೂನು - Private International Law
ಖಾತರಿ - Guarantee
ಖಾತರಿದಾರ - Guarantor
ಖಾತರಿ ಕರಾರು - Contract of Guarantee
ಗಡಿ - Range
ಗುಣಮಟ್ಟ - Standard of Quality
ಗೇಣಿ - Lease
ಗುಂಪು - Group
ಗೈರು ಹಾಜರಿ - Absence
ಘರ್ಷಣೆ - Conflict
ಘೋಷಣೆ - Declaration
ಚಲಾಯಿಸು - Exercise
ಚರಸ್ವತ್ತು - Movable Property
ಚೌಕಾಸಿ - Bargain
ಜಾಮೀನುದಾರ - Surety
ಜಾರಿಗೊಳಿಸು - Enforce
ಜೀವನಮಟ್ಟ - Standard of Living
ಜೀವನಾಂಶ - Maintenance
ಠೇವಣಿ - Deposit
ತಡೆಗಟ್ಟು - Prevent
ತತ್ವ - Principle
ತಪ್ಪುಗ್ರಹಿಕೆ - Mistake
ತಪ್ಪು ನಿರೂಪಣೆ - Misrepresentation
ತರುವಾಯದ - Subsequent
ತೀರ್ಪುಜನ್ಯ ಕಾನೂನು - Case Law
ತಿದ್ದುಪಡಿ - Amendment
ತೆರಿಗೆ - Tax
ದತ್ತಕ - Adoption
ದಸ್ತಗಿರಿ - Arrest
ದಸ್ತಾವೇಜು - Document
ದಾಖಲೆ - Record
ದಾಯಾದಿ - Coparcener
ದಾಸ್ತಾನು ಮಾಡುವುದು - Hoarding
ದಾವೆ - Suit
ದಾನ - Gift
ದಿವಾಳಿ - Insolvent
ದಿನನಿತ್ಯದ - Routine
ದುರ್ಲಾಭಕ್ಕಾಗಿ ಸಹಾಯ - Champerty

ಧಾರಕ - Holder
ಧಾರಣಾಧಿಕಾರ - Lien
ಧನಾದೇಶಕ - Drawer
ಧನಾದೇಶಿತ - Drawee
ದುರಸ್ತು ಮಾಡು, ದುರಸ್ತಿ - Repair
ದಂಡ - Penalty
ನಕಾರಾತ್ಮಕ - Nagative
ನಗದು - Cash
ನವೀಕರಿಸು - Renovate
ನವೀನತೆ - Innovation
ನಷ್ಟ - Loss
ನಷ್ಟಭರ್ತಿ - Indemnity
ನಷ್ಟಭರ್ತಿ ಕರಾರು - Contract of Indemnity
ನಾಶ - Destruction
ನಾಸ್ತಿ - Non-est
ನಿಗಮಿತ ನಿಕಾಯ - Body Corporate
ನಿಗಮಿತವಾದ ಕಂಪನಿ - Company Incorporated
ನಿಗದಿತ ಹಾನಿಪರಿಹಾರ - Liquidated Damages
ನಿರ್ಧನಿಕ - Indigent, Pauper
ನಿರ್ದಿಷ್ಟಪಾಲನೆ - Specific Performance
ನಿರ್ದಿಷ್ಟ, ಪರಿಹಾರ - Specific Relief
ನಿಧಿಪತ್ರ ಬಂಡವಾಳ - Stocks
ನಿಬಂಧನೆಗಳು -Terms
ನಿರ್ಬಂಧಕಾಜ್ಞೆ - Injunction
ನಿರುಪಾಧಿಕ - Absolute
ನಿರ್ವಹಣಾ ಬಂಧಪತ್ರ - Administration Bond
ನಿರೀಕ್ಷಿತ ಉಲ್ಲಂಘನೆ - Anticipatory Breach
ನಿರ್ದಿಷ್ಟ - Particular, Specific
ನಿಯಂತ್ರಣ - Control
ನಿರ್ವಾತ - Vaccum
ನಿಯೋಗ - Agency
ನಿಯಮ - Rule
ನಿವರ್ತತೆ - Revocation
ನಿರ್ದೇಶಕ - Director
ನಿರ್ದೇಶಕ ಮಂಡಲಿ - Board of Directors
ನೆರವೇರಿಕೆ - Performance
ನ್ಯಾಯಿಕವಲ್ಲದ - Non-judicial
ನ್ಯಾಯಾಲಯ - Court
ನ್ಯಾಯ ನಿರ್ಣಯ - Adjudication
ನ್ಯಾಯ - Justice
ನ್ಯಾಯಿಕ - Judicial
ನ್ಯಾಸ - Trust
ನ್ಯಾಯಾಧಿಕರಣ - Tribunal
ನೋಂದಣಿ - Registration

ಪಕ್ಷಗಳು - Parties

ಪದ್ಧತಿ - Usage

ಪತ್ತೆಮಾಡು - Discover

ಪರಮವಿಶ್ವಾಸ - Uberrimae Fides

ಪರಂಪರೆ - Tradition

ಪರಿಕಲ್ಪನೆ - Concept

ಪರಿಹಾರ - Solution

ಪರಿವರ್ತನ ಪ್ರಚೋದಕ - Catalytic Agent

ಪಾರಸ್ಪರಿಕ ಸಂಬಂಧವುಳ್ಳ ರಾಜಕ್ಷೇತ್ರ - Reciprocating Territory

ಪಾರ್ಶ್ವಿಕ ಭದ್ರತೆ, ಸಹಭದ್ರತೆ - Collateral Security

ಪಾಲುದಾರ - Partner

ಪಾಲುಗಾರಿಕೆ - Partnership

ಪಿತ್ರಾರ್ಜಿತ - Ancestral

ಪೂರ್ವಭಾವನೆ - Presumption

ಪೂರ್ವನ್ಯಾಯ - Res judicata

ಪ್ರತಿಫಲವಿಲ್ಲದ ಒಪ್ಪಂದ - Agreement without consideration

ಪ್ರಜೆ - Subject

ಪ್ರಗತಿ - Advancement

ಪ್ರದೇಶ - Area

ಪ್ರತಿಪಾದನೆ - Dictum

ಪ್ರಯೋಜನ - Benefit

ಪ್ರತಿನಿಧಿಸು - Represent

ಪ್ರತಿನಿಧಿ - Agent

ಪ್ರಸ್ತಾಪ - Offer

ಪ್ರತಿಫಲ - Consideration

ಪ್ರತಿಕೂಲ ಸ್ವಾಧೀನ - Adverse Possession

ಪ್ರತಿಬಂಧಕ ಹಕ್ಕು - Rights in Personam

ಪ್ರಾಚೀನ - Classical

ಪ್ರಾಧಿಕಾರ, ಅಧಿಕಾರ - Authority

ಪ್ರತ್ಯರ್ಪಣ - Extradition

ಪ್ರದರ್ಶಿಸು - Display

ಪ್ರಧಾನ ಉದ್ಯಮ - Dominant Undertaking

ಪ್ರಧಾನಋಣಿ - Principal Debtor

ಪಂಡಿತ - Scholar

ಬಲಾತ್ಕಾರ - Force, Coercion

ಬಳಕೆದಾರ - Consumer

ಬಳಕೆ - Custom

ಬದ್ಧಗೊಳಿಸು, ಬಂಧನಕಾರಿ - Binding

ಭಾವನೆ - Sentiment

ಬಾಡಿಗೆ ನಿಯಂತ್ರಣಾಧಿಕಾರಿ - Rent Controller

ಬಾಡಿಗೆ - Rent

ಭಾಷಾಂತರ - Interpretation

ಭರವಸೆ - Guarantee

ಬಂಡವಾಳಶಾಹಿ - Capitalist

ಬಾಧಕಪಕ್ಷ - Affected Party

ಭರವಸೆ ಕೊಡುವ ಏಜೆಂಟ್ - Del Credere Agent

ಬಂಧಪತ್ರ - Bond

ಮರಣ - Death Demise

ಮರಣಶಾಸನ ಕರ್ತ - Testrator

ಮಧ್ಯಸ್ಥಿಕೆ - Arbitration

ಮನೋವಿಕಲತೆ - Insanity

ಮನುಷ್ಯ, ಮಾನವ - Human being, man

ಮಾನ್ಯ ಕರಾರು - Valid Contract

ಮಾನವೀಯ ಹಕ್ಕುಗಳ ಘೋಷಣೆ - Declration of Human Rights

ಮಾನನಷ್ಟ, ಮಾನಹಾನಿ - Defamatory. Defamation

ಮೀಸಲು ಬೆಲೆ - Reserve Price

ಮುಂಗಡ - Advance

ಮುಟ್ಟುಗೋಲು - Forfeiture

ಮೂಲಭೂತ ಅಂಶ - Jural Postulates

ಮೂಲ - Origin

ಮೂಲಭೂತ ಉಲ್ಲಂಘನೆಯ ಸಿದ್ಧಾಂತ - Doctrine of Fundamental Breach

ಮುಕ್ತಸಮ್ಮತಿ - Free Consent

ಮುಖ್ತ್ಯಾರುನಾಮೆ - Power of Attorney

ಮುಂಗಡ - Earnest Money

ಮೃತವ್ಯಕ್ತಿ - Deceased Person

ಮೊಕದ್ದಮೆ - Case

ಮೌಲ್ಯ - Value

ಮೌಲ್ಯಾನುಸಾರ - Advalorem

ಮೌನವು ಮೋಸವಲ್ಲ - Silence is not fraud

ಮಂತ್ರಾಲಯ - Ministry

ಸಮ್ಯಕ್ ಅನುಕ್ರಮಧಾರಕ - Holder in due Course

ರಚಿಸು - Create

ರಾಜ್ಯ -State

ರೂಢಿ -Custom

ರೂಢಿಗತ - Customary

ಲೇಣಿದಾರ -Creditor

ವಚನ ಪತ್ರ - Promissory Note

ವರಿಷ್ಠ ನ್ಯಾಯಾಲಯ - Superior Court

ವಕೀಲ - Lawyer, Advocate

ವರ್ಗಾವಣೆ -Transfer

ವರ್ಗಾವಣೀಯ - Transferable

ವರ್ಗಾವಣೆಕಾರ Transferor

ವರ್ಗಾವಣೆ ಪಡೆದವ, ವರ್ಗಾವಣೆಧಾರಕ - Transferee

ವಾಣಿಜ್ಯ - Commerce
ವಾರಸು - Inheritance
ವಾಸ್ತವಿಕ - Actual
ವಾಹನ, ವಾಹಕ - Carrier
ವಾಗ್ದಾನಕಾರ - Promisor
ವಾಗ್ದಾನ ಪಡೆದವನು - Promissee
ವಾಗ್ಮಿತೆ - Eloquent
ವಾದಿಸು - Argue
ವಾದಿ - Plaintiff
ವಿಮೆ - Insurance
ವಿಶಿಷ್ಟ ವಿಶೇಷಾಧಿಕಾರ - Privilege
ವಿನಿಮಯ ಪತ್ರ- Bill of Exchange
ಮಿನಿಮಯ - Exchange
ವಿನಿಮಯ - Regulation
ವಿನಿಯೋಜನೆ - Appropriation
ವಿವಾಹ - Marriage
ವಿವೇಚನೀಯ - Discretionary
ವಿವಾದ - Dispute
ವಿಶಾಲವಾದ, ವಿಸ್ತಾರವಾದ - Elaborate, Wide
ವಿಮೋಚನೆ - Emancipation. Discharge
ವಿಬಂಧ - Estoppel
ವಿದೇಶೀ ವಿನಿಮಯ - Foreign Excahnge
ವಿಲೀನ ಯೋಜನೆ - Scheme of Merger

ವೈಯಕ್ತಿಕ - Personal
ವ್ಯಕ್ತಿಗಳು - Individuals
ವ್ಯವಹಾರ - Transaction
ವ್ಯಾಪಾರ ನಿಗ್ರಹಕ್ಕಾಗಿ ಕಾನೂನು -Contract in restraint of Trade
ವ್ಯವಹಾರಿ, ವ್ಯಾಪಾರಿ - Dealer
ವ್ಯವಸ್ಥಾಪಕ ನಿರ್ದೇಶಕ -Managing Director
ವ್ಯಾಪಾರ ಚಿನ್ಹೆ - Trade Mark
ವ್ಯಾಪಾರಿ ಕಾನೂನು - Law Merchant
ವ್ಯಾಜ್ಯ ಕಾರಣ - Cause of Action
ಶಪಥ ಪತ್ರ - Affidavit
ಶಾಸನ - Legislation, Statute
ಶೂನ್ಯ - Void
ಶೂನ್ಯ ಕರಣೀಯ - Voidable
ಷರತ್ತು - Condition
ಷರತ್ತಿಗೊಳಪಟ್ಟ ಅಂಗೀಕಾರ -Qualified Acceptance
ಷರತ್ತು ಪೂರ್ವಕ ಮಾರಾಟ - Conditional Sale
ಸಹ ಒಡೆತನ - Co-Ownership
ಸಹಾಯಕ - Subsidiary
ಸಮ್ಮಿಲನ - Amalgamation
ಸತ್ಯವನ್ನು ಅಡಗಿಸಿ ಸುಳ್ಳು ನಿರೂಪಣೆ ಮಾಡುವುದು - Suppressio veri. Suggestio Falsi

ಸರಕು ರಕ್ಷಣೆ - Bailment
ಸದೃಶ ಕರಾರು - Quasi-Contracts
ಸಮದೋಷ - Pari Delicto
ಸಮ್ಮತಿ - Consent
ಸರಕುಗಳು ಸಮ್ಮಿಶ್ರಣ - Confusion, mixing of Goods
ಸರ್ವೋಚ್ಚ ನ್ಯಾಯಾಲಯ -Supreme Court
ಸಮೀಕ್ಷೆ - Survey
ಸವೇತನ ರಜಗಳು - Paid Holidays
ಸಹಭಾಗಿ - Co-Parcener
ಸರ್ವಬಂಧಕ ಹಕ್ಕುಗಳು - Rights in Rem
ಸಹಾಯ - Contribution
ಸಮಾಜ ಸಮತಾವಾದಿ ತತ್ವ -Marxism
ಸಾಮಾನ್ಯ - Ordinary
ಸಾಕ್ಷ್ಯ ಅಧಿನಿಯಮ-Evidence Act
ಸಾಮಾನ್ಯ ಕಾನೂನು-Common Law
ಸಾಕ್ಷಿಗಳು - Witnesses
ಸಾರ್ವಜನಿಕ ನೀತಿ - Public Policy
ಸಾರ್ವಭೌಮ - Sovereign
ಸಿದ್ಧಾಂತ - Theory
ಸುಂಕ - Duty
ಸುನಾಮ - Good Will
ಸೇವೆಗಳು - Services
ಸ್ವತ್ತಿನ ಹಕ್ಕುಗಳು - Property Rights
ಸ್ವತ್ತು - Property
ಸ್ಥಿರ ಸ್ವತ್ತು-Immovable Property
ಸ್ವಾತಂತ್ರ್ಯ - Liberty
ಸ್ವಾಧೀನ-Acquisition Possession
ಸ್ವಾಧೀನತೆ - Possession
ಸ್ವಾಧೀನವನ್ನು ಒಪ್ಪಿಸುವುದು - Delivery of Possession
ಸ್ವಾಭಾವಿಕ ನ್ಯಾಯ -Natural Justice
ಸ್ವಾಮಿ ಹೀನತ್ವ - Bona Vacantia
ಸ್ವಾಮ್ಯ ಪತ್ರಗಳ ಠೇವಣಿ - Deposit of Title Deeds
ಸ್ಪರ್ಧೆ - Competition, Contest
ಸ್ವೀಕರ್ತ - Payee
ಸಂಗತಿ - Fact
ಸಂಪ್ರದಾಯ - Convention. Tradition
ಸಂಬಂಧ - Relation
ಸಂದರ್ಭ - Occasion
ಸಂಘದ ನಿಯಮಾವಳಿಗಳು - Articles of Association
ಸಂಘದ ವಿವರಣಾ ಪತ್ರ - Memorandum of Association
ಸಂಯೋಗ - Combination

ಸಂಕೀರ್ಣ ಉಪಬಂಧಗಳು - Miscellaneous Provisons

ಸಂವರ್ಗ - Set

ಸಂವಿಧಾನ - Constitution

ಸಂಪದ - Estate

ಸಂಸ್ಕೃತಿ - Culture

ಸಂಗತಿಯ ಪ್ರಶ್ನೆ - Question of Fact

ಸಂದಾಯಗಳ ವಿನಿಯೋಜನೆ - Appropriation of Payments

ಸುಂಕ - Duty

ಹಸ್ತಾಂತರಣ ಪತ್ರ - Deed of Assignment

ಹಾಜರಪಡಿಸುವುದು - Presentment

ಹಾನಿ -Damage

ಹಾನಿ ಪರಿಹಾರ - Damages

ಹಾಜರಾಗು - Appear

ಹಿತಾಸಕ್ತಿ - Interest

ಹಿಂಬರಹ - Endorsement

ಹಿಂದೂ ಅವಿಭಕ್ತ ಕುಟುಂಬ - Hindu Undivided Family


******

ಮೊಕದ್ದಮೆಗಳ ಪಟ್ಟಿ

****

ಇಂದಿನ ವ್ಯಾವಹಾರಿಕ ಬದುಕಿನಲ್ಲಿ ಕಾನೂನಿಗೆ ವಿಶೇಷ ಮಹತ್ವ ಬಂದಿದೆ. ವ್ಯಕ್ತಿ ಹಾಗೂ ಸಮಾಜದ ಹಿತಕ್ಕಾಗಿಯೇ ಸರ್ಕಾರ ಹಲವಾರು ಕಾನೂನುಗಳನ್ನು ರೂಪಿಸಿ ಚಲಾವಣೆಯಲ್ಲಿ ತಂದಿರುತ್ತದೆ. 'ಕಾನೂನಿನ ನಿಜವಾದ ವಸ್ತುಗಳು, ವ್ಯಕ್ತಿಗಳು'. ಮಗು ದೈಹಿಕವಾಗಿ ಹುಟ್ಟುವುದಕ್ಕೆ ಮುಂಚೆಯೇ ಕಾನೂನು ಅದರ ಅಸ್ತಿತ್ವವನ್ನು ಒಪ್ಪುತ್ತದೆ ಮತ್ತು ನಿಧನದವರೆಗೆ ಅದಕ್ಕೆ ಅನ್ವಯವಾಗುತ್ತದೆ. 'ಕಾನೂನು ಸಮ್ಮತ ವ್ಯಕ್ತಿ ಎಂದರೆ ಹಕ್ಕು ಮತ್ತು ಕರ್ತವ್ಯಗಳನ್ನು ಹೊತ್ತಿರುವ ಒಂದು ಅಸ್ತಿತ್ವ'.

ಕಾನೂನಿನ ಲಾಭ ಪಡೆಯುವ ವ್ಯಕ್ತಿ ಕಾನೂನಿನ ಅರಿವು ಹೊಂದುವುದೂ ಅತ್ಯಗತ್ಯ. ಹಕ್ಕುಗಳು, ಆಸ್ತಿ, ಒಡೆತನ, ವರ್ಗಾವಣೆ, ವಾರಸುದಾರಿಕೆ, ಉಯಿಲು, ಕರಾರು, ಒಪ್ಪಂದ, ದಾವೆ...... ಈ ಮೊದಲಾದ ಹತ್ತಾರು ಕಾನೂನಿನ ವಿಚಾರಗಳ ಬಗ್ಗೆ ಅರಿಯಬೇಕೆನ್ನುವವರಿಗೆ ಈ ಕೃತಿ ಉಪಯುಕ್ತವಾಗುತ್ತದೆ.



ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು